ಧಾರ್ಮಿಕ ಪಠ್ಯಗಳು: ವಸಾಹತು ಸಂದರ್ಭ

(ಭಗವದ್ಗೀತೆಯ ವ್ಯಾಖ್ಯಾನ, ಅನುವಾದಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ(ಪಿಎಚ್.ಡಿ.)
ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಲಕ್ಷ್ಮೀಕಾಂತ್ ಎಸ್. ಬಿ.

ಮಾರ್ಗದರ್ಶಕರು

ಡಾ. ಕೆ. ಸಿ. ಶಿವಾರೆಡ್ಡಿ

ಸಹ ಪ್ರಾಧ್ಯಾಪಕರು

ಭಾಷಾಂತರ ಅಧ್ಯಯನ ವಿಭಾಗ

ಭಾಷಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೭

ಧಾರ್ಮಿಕ ಪಠ್ಯಗಳು: ವಸಾಹತು ಸಂದರ್ಭ

(ಭಗವದ್ಗೀತೆಯ ವ್ಯಾಖ್ಯಾನ, ಅನುವಾದಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಡಾಕ್ಟರ್ ಆಫ್ ಫಿಲಾಸಫಿ(ಪಿಎಚ್.ಡಿ.)
ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಲಕ್ಷ್ಮೀಕಾಂತ್ ಎಸ್. ಬಿ.

ಮಾರ್ಗದರ್ಶಕರು

ಡಾ. ಕೆ. ಸಿ. ಶಿವಾರೆಡ್ಡಿ
ಸಹ ಪ್ರಾಧ್ಯಾಪಕರು

ಭಾಷಾಂತರ ಅಧ್ಯಯನ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೭

ಮಾರ್ಗದರ್ಶಕರ ದೃಢೀಕರಣ ಪತ್ರ

ಲಕ್ಷ್ಮೀಕಾಂತ್ ಎಸ್. ಬಿ. ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **"ಧಾರ್ಮಿಕ ಪಠ್ಯಗಳು: ವಸಾಹತು ಸಂದರ್ಭ"(ಭಗವದ್ಗೀತೆಯ ವ್ಯಾಖ್ಯಾನ, ಅನುವಾದಗಳನ್ನು ಅನುಲಕ್ಷಿಸಿ)** ಎಂಬ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಭಾಷಾಂತರ ಅಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ದಿನಾಂಕ : 13.07.2017
ಸ್ಥಳ : ವಿದ್ಯಾರಣ್ಯ

(ಡಾ. ಕೆ. ಸಿ. ಶಿವಾರೆಡ್ಡಿ)
ಸಹ ಪ್ರಾಧ್ಯಾಪಕರು
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ–೫೮೩ ೨೭೬

ಸಂಶೋಧಕರ ಘೋಷಣಾ ಪತ್ರ

"ಧಾರ್ಮಿಕ ಪಠ್ಯಗಳು: ವಸಾಹತು ಸಂದರ್ಭ"(ಭಗವದ್ಗೀತೆಯ ವ್ಯಾಖ್ಯಾನ, ಅನುವಾದಗಳನ್ನು ಅನುಲಕ್ಷಿಸಿ) ಎಂಬ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ **ಡಾ. ಕೆ. ಸಿ. ಶಿವಾರೆಡ್ಡಿ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ದಿನಾಂಕ : 14.07.2017
ಸ್ಥಳ : **ವಿದ್ಯಾರಣ್ಯ**

(ಲಕ್ಷ್ಮೀಕಾಂತ್ ಎಸ್. ಬಿ.)
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪರಿವಿಡಿ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ಸ್ವರೂಪ

೧.೪. ಅಧ್ಯಯನದ ವೈಧಾನಿಕತೆ

೧.೫. ಅಧ್ಯಯನದ ಪ್ರಸ್ತುತತೆ

ಅಧ್ಯಾಯ: ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ

ಪ್ರವೇಶ

ಭಾರತದಲ್ಲಿ ವಸಾಹತುಶಾಹಿ ಆಡಳಿತ ವ್ಯವಸ್ಥೆಯು ಆಧುನಿಕ ಶಿಕ್ಷಣಪದ್ಧತಿಯನ್ನು ಪ್ರಾರಂಭಿಸಿತು. ಕ್ರೈಸ್ತ ಮಿಶನರಿಗಳು ಧರ್ಮಪ್ರಚಾರ ಕಾರ್ಯಕ್ಕೆಂದು ಆಗಮಿಸಿ, ಇಲ್ಲಿನ ಪ್ರಾಚೀನ ತತ್ವಜ್ಞಾನ, ಪುರಾಣ, ವೇದ-ಉಪನಿಷತ್ತು, ಮೌಖಿಕ ಜ್ಞಾನಪರಂಪರೆ ಮುಂತಾದ ಜ್ಞಾನಶಿಸ್ತುಗಳನ್ನು ತಿರಸ್ಕರಿಸಿ ಹೊಸ ಶಿಕ್ಷಣಕ್ರಮಕ್ಕೆ ಭದ್ರಬುನಾದಿಯನ್ನು ಹಾಕಿದವು. ಹೀಗೆ ಭಾರತಕ್ಕೆ ಆಗಮಿಸಿದ ಮಿಶನರಿಗಳು ಇಂಗ್ಲಿಷ್ ಶಾಲೆಗಳನ್ನು ತೆರೆದು ಆಧುನಿಕ ವಿಜ್ಞಾನ, ಪ್ರಪಂಚ ಪರಿಚಯ, ಇಂಗ್ಲಿಷ್ ವಾಙ್ಮಯ ಮುಂತಾದ ಆಸಕ್ತಿದಾಯಕ ವಿಷಯಗಳ ಬಗೆಗಿನ ಜಗತ್ತೊಂದನ್ನು ಭಾರತೀಯರಿಗೆ ತೆರೆದು ಅವರನ್ನು ಆಕರ್ಷಿಸಲು ಪ್ರಯತ್ನಿಸಿದವು. ಇವು ಪ್ರವಚನ, ಉಪದೇಶ ಮುಂತಾದ ಧಾರ್ಮಿಕ ಕಾರ್ಯಗಳಲ್ಲದೆ ಶಾಲೆ, ಮುದ್ರಣಾಲಯ, ಸಾರ್ವಜನಿಕ ಸಂಪರ್ಕ ಮುಂತಾದ ಕೆಲಸಗಳನ್ನು ನಿರ್ವಹಿಸುತ್ತಿದ್ದವು. ಮಿಶನರಿಗಳು ಕ್ರೈಸ್ತ ಧರ್ಮದ ಪ್ರಚಾರಕ್ಕೆ ಬಹಳಷ್ಟು ಶ್ರಮಿಸಿದವು. ಬೈಬಲ್ ಮತ್ತು ಮತತತ್ವದ ಪುಸ್ತಕಗಳನ್ನು ಅನುವಾದಿಸಿ, ಮುದ್ರಣಯಂತ್ರದ ಸಹಾಯದಿಂದ ಸಾವಿರಾರು ಪ್ರತಿಗಳನ್ನು ಮುದ್ರಿಸಿ, ಧರ್ಮ ಪ್ರಚಾರ ಕಾರ್ಯವನ್ನು ನಡೆಸುತ್ತಿದ್ದವು. ಈ ಎಲ್ಲಾ ಆಧುನಿಕತೆಯ ಪ್ರಭಾವಕ್ಕೆ ಒಳಪಟ್ಟ ಭಾರತೀಯರು ಕ್ರಮೇಣವಾಗಿ ತಮ್ಮ ಜೀವನದ ನೀತಿ, ಮೌಲ್ಯಗಳನ್ನು ಮಾರ್ಪಡಿಸಿಕೊಂಡರು. ಅದರಿಂದ ಅವರಲ್ಲಿ ಸ್ವಾಭಿಮಾನ ಮತ್ತು ಸ್ವತಂತ್ರ ವಿಚಾರ ಸರಣಿಗಳು ಒಡಮೂಡಿದವು. ಇದರ ಪರಿಣಾಮವಾಗಿ ರಾಜಕೀಯ ನಾಯಕರಲ್ಲಿ ಸ್ವಾತಂತ್ರ್ಯ ಆಂದೋಲನದ ಹೊಸ ಸ್ವರೂಪವೊಂದು ಉದಯವಾಯಿತು.

ಭಾರತಕ್ಕೆ ಆಗಮಿಸಿದ ಕ್ರೈಸ್ತ ಮಿಶನರಿಗಳು ಧಾರ್ಮಿಕ ಇಂಗಿತವನ್ನು ಹೊಂದಿ ಕೆಲಸ ನಿರ್ವಹಿಸುತ್ತಿದ್ದವು. ಭಾರತೀಯರ ಮನಸ್ಥಿತಿಗಳನ್ನು ಅರಿತು ಪಾದ್ರಿಗಳು ತಮ್ಮ ಧರ್ಮ ಪ್ರಸಾರದ ಕಾರ್ಯದಲ್ಲಿ ತೊಡಗುತ್ತಿದ್ದರು. ಧಾರ್ಮಿಕ ಮನಸ್ಸನ್ನು, ಅವರ ನಂಬಿಕೆಗಳನ್ನು ಸಡಿಲಿಸುವ ಮೂಲಕ, ಭಾರತೀಯರ ಸಿಂತ ನೆಲೆಯ ಭದ್ರತೆಯನ್ನೇ ಅಲುಗಾಡಿಸುವ ಮೂಲಕ ಅಭದ್ರತೆಯನ್ನು

ಸೃಷ್ಟಿಸುತ್ತಿದ್ದರು. ಹಿಂದೂಧರ್ಮವನ್ನು ಮನಸಾರೆ ತೆಗಳಿ ಜನರನ್ನು ಆ ಧರ್ಮದಿಂದ ವಿಮುಖರನ್ನಾಗಿ ಮಾಡಬಯಸಿ, ಕ್ರೈಸ್ತಧರ್ಮದ ಕಡೆಗೆ ಒಲವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದರು. ಇಂತಹ ಪ್ರಯತ್ನಗಳಲ್ಲಿ ತೊಡಗಿದ್ದ ಪಾದ್ರಿ ಜೀವರತ್ನಯ್ಯನ ಚಿತ್ರಣವನ್ನು ಕುವೆಂಪು ಅವರು ತಮ್ಮ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

"ಭಾರತ ಸಂಸ್ಕೃತಿಯ ಸರ್ವೋತ್ತಮ ಪ್ರತಿನಿಧಿಯೊಬ್ಬನು ವೇದಾಂತ ದರ್ಶನದ ಮೇಲೆ ನಿಂತಿರುವ ಸನಾತನ ಹಿಂದೂಧರ್ಮದ ಸರ್ವೋತ್ಕೃಷ್ಟತೆಯನ್ನು ಅಧಿಕಾರ ವಾಣಿಯಿಂದ ಪ್ರಸಾರ ಮಾಡುತ್ತಿದ್ದಾಗಲೆ, ಅದನ್ನೆಲ್ಲ ಸದ್ದುಗದ್ದಲವಿಲ್ಲದೆ ಮೂದಲಿಸುವಂತೆ, ಯಃಕಶ್ಚಿತ ಪಾದ್ರಿಯೊಬ್ಬನು–ಅದರಲ್ಲಿಯೂ ನೇಟಿವ್‌ಪಾದ್ರಿ–ಘೋರಾರಣ್ಯಮಯವಾದ ಸಹ್ಯಾದ್ರಿ ಶ್ರೇಣಿಯ ಮಲೆನಾಡಿನ ಕೊಂಪೆಯ ಅಜ್ಞ ಬೇಸಾಯಗಾರನೊಬ್ಬನಿಗೆ ಹಿಂದೂಧರ್ಮದ ಅನಾಚಾರ, ಅವಿವೇಕ, ಸಂಕುಚಿತ ಮನೋಭಾವ, ಜಾತಿಮತ ಪಕ್ಷಪಾತ, ಬ್ರಾಹ್ಮಣರ ತಿರಸ್ಕಾರ, ಶೂದ್ರರ ದೈನ್ಯ, ಅಧೋಗತಿ, ಕಲ್ಲು ಮಣ್ಣು, ಮರ ದೆವ್ವಗಳ ಪೂಜೆ, ಇತ್ಯಾದಿಗಳನ್ನೂ–ಯೇಸುಕ್ರಿಸ್ತನ ಮತ್ತು ಕ್ರೈಸ್ತಮತದ ಪರೋಪಕಾರ, ಪರಾನುಕಂಪನ ನೀತಿ, ತ್ಯಾಗ, ಭಕ್ತಿ, ಉದ್ಧಾರಕ ಸಾಮರ್ಥ್ಯ ಇತ್ಯಾದಿಗಳನ್ನೂ ಕುರಿತು ಮನಮುಟ್ಟುವಂತೆ ಉಪದೇಶ ಮಾಡುತ್ತಿದ್ದನು, ಗೌಡನ ಮನೆಯ ಚಾವಡಿಯಲ್ಲಿಯೆ ಕುಳಿತು, ಅವನ ಗದ್ದೆ, ತೋಟ, ಅಂಗಳದ ತೊಳಸಿಕಟ್ಟೆಯ ದೇವರು ಮತ್ತು ಎದುರಿಗೇ ಕಾಣುತ್ತಿದ್ದ ಭೂತದ ಬನ–ಇವುಗಳ ಇದಿರಿನಲ್ಲಿಯೆ!"

ಹೀಗೆ ಕ್ರೈಸ್ತ ಮಿಶನರಿಗಳು ಭಾರತೀಯರಲ್ಲಿ ಕೀಳರಿಮೆಯನ್ನು ಉಂಟುಮಾಡುತ್ತಾ ಹಿಂದೂಗಳ ಆತ್ಮಗೌರವ ಮತ್ತು ಹೆಮ್ಮೆಯನ್ನು ಕುಂದಿಸುವ ಕೆಲಸದಲ್ಲಿ ನಿರತವಾಗಿದ್ದವು. ಮಿಶನರಿಗಳು ಬೈಬಲ್‌ನ ಅಸಂಖ್ಯ ಅನುವಾದ ಕೃತಿಗಳನ್ನು ಜನರಿಗೆ ಪುಕ್ಕಟೆಯಾಗಿ ಹಂಚಿ, ಅವರಿಗೆ ಮತಾಂತರ ಹೊಂದಲು ಅನೇಕ ಆಸೆ–ಆಮಿಷಗಳನ್ನು ನೀಡುತ್ತಿದ್ದವು. ಮಿಶನರಿಗಳ ಈ ಸೆಳೆತಕ್ಕೆ ಭಾರತೀಯರನೇಕರು ಮತಾಂತರ ಹೊಂದುವ ಕ್ರಿಯೆಗೆ ಒಳಗಾಗುತ್ತಿದ್ದರು. ೧೯೨೧ರ ಜನಗಣತಿಯ ಪ್ರಕಾರ ಕ್ರೈಸ್ತ ಮತೀಯರ ಸಂಖ್ಯೆ ಭಾರತದಲ್ಲಿ ೪೭,೫೪,೦೬೪ ಆಗಿದ್ದು, ೧೯೩೧ರ ಜನಗಣತಿಯಲ್ಲಿ ಅವರ ಸಂಖ್ಯೆ ೬೨,೯೬,೭೬೩ಕ್ಕೆ ಏರಿತ್ತು. ಅಂದರೆ ಶೇ. ೩೨.೫ರ ಬೆಳವಣಿಗೆ ದರದಲ್ಲಿ ವೃದ್ಧಿಯಾಗಿರುವುದನ್ನು ಅಂಕಿ ಅಂಶಗಳಿಂದ ತಿಳಿಯಬಹುದಾಗಿದೆ. ಈ ಅಂಕಿ ಅಂಶಗಳಿಂದ ಸ್ವಾತಂತ್ರ್ಯ ಆಂದೋಲನದ ಕಾಲದಲ್ಲಿ ಮಿಶನರಿಗಳು ಕ್ರೈಸ್ತೀಕರಣಕ್ಕಾಗಿ ಶ್ರಮಿಸಿರುವುದನ್ನು ತಿಳಿಯಬಹುದಾಗಿದೆ. ಬ್ರಿಟಿಷರು ಈಸ್ಟ್ ಇಂಡಿಯಾ ಕಂಪನಿಯ ಮೂಲಕ ಇಡೀ ಭಾರತದಲ್ಲಿ ರಾಜಕೀಯ ಅಧಿಕಾರದ ಮೂಲಕ ತಳವೂರಲು ಪ್ರಯತ್ನಿಸುತ್ತಿದ್ದರೆ, ಕ್ರೈಸ್ತ ಮಿಶನರಿಗಳು ತಮ್ಮ ಉಪದೇಶಗಳಿಂದ ಭಾರತದ ಧರ್ಮದ ಮೇಲೆ ಪ್ರಭುತ್ವವನ್ನು ಸಾಧಿಸಲು ಪ್ರಯತ್ನಿಸುತ್ತಿದ್ದವು. ಒಂದು ಕಡೆ ರಾಜಕೀಯ ವಸಾಹತೀಕರಣ ನಡೆಯುತ್ತಿರುವಾಗಲೇ ಮತ್ತೊಂದು ಕಡೆಯಲ್ಲಿ ಮಿಶನರಿಗಳಿಂದ ಹಿಂದೂಧರ್ಮದ ಅಸ್ತಿತ್ವವನ್ನು ಕಳೆಯುವ ಪ್ರಯತ್ನಗಳ ಮೂಲಕ

ಧಾರ್ಮಿಕ ವಸಾಹತೀಕರಣಕ್ಕೆ ಯತ್ನಗಳು ನಡೆಯುತ್ತಿದ್ದವು. ಇಂತಹ ರಾಜಕೀಯ ವಸಾಹತೀಕರಣ ಮತ್ತು ಧಾರ್ಮಿಕ ವಸಾಹತೀಕರಣವನ್ನು ಅರ್ಥೈಸಿಕೊಳ್ಳುವುದು ಈ ಅಧ್ಯಯನದ ಮುಖ್ಯ ಕಾರ್ಯಗಳಲ್ಲೊಂದಾಗಿದೆ.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ನಾಯಕರು ಹಿಂದೂ–ಮುಸ್ಲಿಂ ಐಕ್ಯತೆಗೆ ಶ್ರಮಿಸುತ್ತಿರುವ ಸಂದರ್ಭದಲ್ಲಿ ಹಿಂದೂ–ಕ್ರೈಸ್ತ ಮತಾಂತರ ಪ್ರಕ್ರಿಯೆಯೂ ಕೂಡ ಸಮಸ್ಯೆಯಾಗಿ ಪರಿಣಮಿಸಿತ್ತು. ಹಿಂದೂ–ಮುಸ್ಲಿಂ–ಕ್ರೈಸ್ತರಲ್ಲಿ ಉಂಟಾಗುತ್ತಿದ್ದ ಅನೈಕ್ಯತೆಯಿಂದಾಗಿ ಬ್ರಿಟಿಷ್ ಸಾಮ್ರಾಜ್ಯದ ಎದುರು ಭಾರತದ ರಾಷ್ಟ್ರೀಯವಾದ ಕಳೆಗುಂದುವ ಸ್ಥಿತಿಯಲ್ಲಿತ್ತು. ಅಂತಹ ಅನೈಕ್ಯತೆಯ ಸನ್ನಿವೇಶದಲ್ಲಿ ಹಿಂದೂಗಳು ತಮ್ಮ ಸಂಸ್ಕೃತಿ–ಧರ್ಮಗಳನ್ನು ಕಳೆದುಕೊಳ್ಳದಂತೆ ಹಾಗೂ ಜನರ ನಂಬಿಕೆಯನ್ನು ಪುನಃ ಹಿಂದೂಧರ್ಮದಲ್ಲಿ ಸ್ಥಾಪಿಸಿ, ಐಕ್ಯತೆಯನ್ನು ಸಾಧಿಸುವ ಸಲುವಾಗಿ ಭಾರತದಲ್ಲಿ ಹಿಂದೂ ಪುನಶ್ಚೇತನ ಚಳುವಳಿಗಳು, ಧಾರ್ಮಿಕ–ಸಾಮಾಜಿಕ ಚಳುವಳಿಗಳು ಹುಟ್ಟನ್ನು ಪಡೆದುಕೊಂಡವು. ವಿವಿಧ ಭಾಷೆಯ ಸಾಹಿತ್ಯ ಕೃತಿಗಳು, ಪತ್ರಿಕೆಗಳು ಕೂಡ ರಾಷ್ಟ್ರೀಯತೆಯನ್ನು ಬಿತ್ತುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದವು. ಆ ಸಂದರ್ಭದಲ್ಲಿ ಹಲವಾರು ರಾಜಕೀಯ ನಾಯಕರು, ಸಂತರು ಭಗವದ್ಗೀತೆಯನ್ನು ಮರುವ್ಯಾಖ್ಯಾನಕ್ಕೆ ಒಳಪಡಿಸುತ್ತಾರೆ. ಗಾಂಧಿಯವರು ಗೀತೆಯನ್ನು 'ಗೀತಾಮಾತೆ' ಎಂದು ಕರೆದು ಪೂಜ್ಯಭಾವನೆಯಿಂದ ನೋಡಿದರು. ಅವರು ಗೀತೆಯನ್ನು ಏಕಪಠ್ಯದಿಂದ ಬಿಡುಗಡೆ ಮಾಡಿಸಿ ಧರ್ಮ–ಅಧರ್ಮ, ಒಳಿತು–ಕೆಡಕು ಮುಂತಾದ ಮಾನವ ಜೀವನದ ವಿವಿಧ ವಲಯಗಳಿಗೆ ಅನ್ವಯಿಸಿ ಬಹಳ ವಿಶಾಲವಾದ ಅರ್ಥದಲ್ಲಿ ಪರಿಭಾವಿಸುತ್ತಾರೆ. ಅರವಿಂದರು ಸರ್ವಸಮರ್ಪಣ ಭಾವದಿಂದ ಗೀತೆಯನ್ನು ಕಾಣುತ್ತಾರೆ. ಸ್ವಾಮಿ ವಿವೇಕಾನಂದರು ಮನುಷ್ಯನಿಗೆ ಅಧ್ಯಾತ್ಮ ಜೀವನದ ಚೈತನ್ಯವನ್ನು ತುಂಬುವ ಸಲುವಾಗಿ ಹಾಗೂ ಸರ್ವಧರ್ಮಗಳ ಸಮನ್ವಯಕ್ಕಾಗಿ ಗೀತೆಯನ್ನು ಬದುಕಿಗೆ ಅನ್ವಯಿಸಿ ನೋಡಲು ಪ್ರಯತ್ನಿಸುತ್ತಾರೆ. ಇವರು ವಸಾಹತು ವಿರೋಧಿಶಕ್ತಿಗೆ ಇಂಬನ್ನು ನೀಡುವ ಸಲುವಾಗಿ ಗೀತೆಯನ್ನು ಉನ್ನತೀಕರಿಸುವ ಮೂಲಕ ರಾಷ್ಟ್ರೀಯವಾದದ ಸ್ವರೂಪವನ್ನು, ಧಾರ್ಮಿಕ ಸ್ವರೂಪದ ರಾಷ್ಟ್ರೀಯವಾದವಾಗಿ ಮಾರ್ಪಡಿಸಿಕೊಂಡರೇ ಎಂಬುದನ್ನು ಪರಿಶೀಲಿಸುವ ಆಶಯ ಇಲ್ಲಿದೆ. ಬ್ರಿಟಿಷರ ವಿರುದ್ಧ ಭಾರತೀಯರು ತಮ್ಮ ಹೋರಾಟವನ್ನು ನಡೆಸುತ್ತಿದ್ದರಿಂದ ಈ ಎಲ್ಲಾ ನಾಯಕರಿಗೆ ಭಾರತದ ಅಸ್ಮಿತೆ, ರಾಷ್ಟ್ರೀಯ ಏಕತೆಯ ಪ್ರಶ್ನೆ ಹಾಗೂ ಮತಾಂತರದ ಕಳವಳಗಳು ಎದುರಾಗಿ, ಸ್ವಾತಂತ್ರ್ಯ ಹೋರಾಟಕ್ಕೆ ದಿಕ್ಸೂಚಿ ಎನ್ನುವ ಹಾಗೆ ಬೈಬಲ್‌ಗೆ ಮುಖಾಮುಖಿಯಾಗಿ ಗೀತೆಯನ್ನು ಪರ್ಯಾಯಪಠ್ಯದ ಅಸ್ತ್ರವಾಗಿ ಬಳಸಿದರೇ ಎಂಬುದನ್ನು ಪರಿಶೀಲಿಸಬೇಕಾಗಿದೆ. ಹೀಗೆ ಈ ನನ್ನ ಅಧ್ಯಯನವು 'ಧಾರ್ಮಿಕ ಪಠ್ಯಗಳು: ವಸಾಹತುಶಾಹಿ ಸಂದರ್ಭ'ದ ಪರಿಸರವನ್ನು ಶೋಧಿಸಿಕೊಳ್ಳುವ ಮುಖ್ಯ ಉದ್ದೇಶವನ್ನು ಒಳಗೊಂಡಿದೆ.

೧.೧. ಅಧ್ಯಯನದ ಉದ್ದೇಶ

ಭಾರತದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯು ಬ್ರಿಟಿಷರ ಪ್ರಭುತ್ವದಿಂದ ಬಿಡುಗಡೆ ಪಡೆಯುವ ರಾಜಕೀಯ ಹೋರಾಟ ಮಾತ್ರವಾಗಿರದೆ ಧಾರ್ಮಿಕ–ಸಾಮಾಜಿಕ ಅಸ್ಮಿತೆಯ ಹೋರಾಟವೂ

ಆಗಿತ್ತು. ಇದೇ ಸಂದರ್ಭದಲ್ಲಿ ದೇಶದ ಬಡವರು, ರೈತರು, ದಲಿತರು, ಸ್ತ್ರೀಯರು, ಅಲ್ಪಸಂಖ್ಯಾತರು ಮತ್ತು ಕೂಲಿಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಹೋರಾಟವನ್ನು ನಡೆಸುತ್ತಿದ್ದರು. ಮೇಲುಜಾತಿಯವರ ದಬ್ಬಾಳಿಕೆಯ ವಿರುದ್ಧ ಕೆಳಜಾತಿಗಳವರು ಮತ್ತು ಗಂಡಸರ ಪ್ರಾಬಲ್ಯದ ವಿರುದ್ಧ ಹೆಂಗಸರು ಒಂದು ಸಾಮಾಜಿಕ ಆಂದೋಲನವನ್ನೇ ನಡೆಸುತ್ತಿದ್ದರು. ಇಂತಹ ಬಾಹ್ಯ ಮತ್ತು ಆಂತರಿಕ ಸಂಘರ್ಷದ ಸಂದಿಗ್ಧ ಸನ್ನಿವೇಷದಲ್ಲಿ ಬಾಲಗಂಗಾಧರ ತಿಲಕ್‌ರ ಶ್ರೀಮದ್ಭಗವದ್ಗೀತಾ ರಹಸ್ಯ, ಗಾಂಧಿಯವರ ಅನಾಸಕ್ತಿ ಯೋಗ, ಅರವಿಂದರ ಗೀತಾ ದರ್ಶನ, ವಿವೇಕಾನಂದರ ಗೀತಾ ಪ್ರವಚನ, ವಿನೋಬಾ ಭಾವೆಯವರ ಗೀತಾ ಪ್ರವಚನ ಮೊದಲಾದ ಕೃತಿಗಳು ಗೀತೆಯನ್ನು ಮರುವ್ಯಾಖ್ಯಾನಿಸಿದವು. ಇಂತಹ ಸನ್ನಿವೇಶದಲ್ಲಿ ಗೀತೆಯ ಹಲವು ವ್ಯಾಖ್ಯಾನಗಳ ಹಿನ್ನೆಲೆಗಳನ್ನು ಮತ್ತು ಸ್ವಾತಂತ್ರ್ಯ ಸಂಗ್ರಾಮದ ಸಂಘರ್ಷಯುತ ಪರಿಸರವನ್ನು ಶೋಧಿಸುವುದು ನನ್ನ "ಧಾರ್ಮಿಕ ಪಠ್ಯಗಳು: ವಸಾಹತು ಸಂದರ್ಭ" ಎಂಬ ಈ ಮಹಾಪ್ರಬಂಧದ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಸ್ವಾತಂತ್ರ್ಯ ಆಂದೋಲನದ ಸಂದರ್ಭದಲ್ಲಿ ನಮ್ಮ ರಾಜಕೀಯ ನಾಯಕರ ಹಿನ್ನೆಲೆ, ಅವರ ಮನೋಸ್ಥಿತಿಗಳು, ಅವರ ತಾಳಿದ ನಿಲುವುಗಳ ಹಿಂದಿನ ಸೂಕ್ಷ್ಮತೆಯನ್ನು ಅರಿಯಲು ಈ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ. ಕೃತಿಯೊಂದನ್ನು ಒಂದು ಸಾಂಸ್ಕೃತಿಕ ಸಂದರ್ಭದಲ್ಲಿ ವ್ಯಾಖ್ಯಾನಿಸುತ್ತಿರುವ ವಿವಿಧ ವ್ಯಾಖ್ಯಾನಕಾರರ ಮನೋಲಯಗಳನ್ನು ಗುರುತಿಸುವುದರ ಮೂಲಕ ಕೃತಿಯೊಂದು ಹೇಗೆ ತನ್ನ ಮಹತ್ತನ್ನು ಪಡೆಯುತ್ತದೆ ಎಂಬುದನ್ನು ಪರಿಶೀಲಿಸಲಾಗಿದೆ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಭಿನ್ನ ಪಂಥಗಳಿಗೆ ಸೇರಿದ ನಾಯಕರು, ಸಂತರು, ವ್ಯಾಖ್ಯಾನಿಸಿದ ಗೀತೆಯ ವ್ಯಾಖ್ಯಾನಗಳನ್ನು ಇಲ್ಲಿ ಪರಿಶೀಲಿಸಲಾಗಿದೆ. ಬಾಲಗಂಗಾಧರ ತಿಲಕ್ ಅವರ ಗೀತೆಯ ಕುರಿತ ಆಲೋಚನೆಗಳಿಗೂ, ಗಾಂಧಿ ಮತ್ತು ಇತರರ ವ್ಯಾಖ್ಯಾನಗಳಿಗೂ ಇರುವ ಭಿನ್ನತೆಗಳನ್ನು ಇಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ. ಹಾಗೆಯೇ. ಆ ಸಂದರ್ಭದಲ್ಲಿ ಈ ಎರಡು ವಿಭಿನ್ನ ಪಂಥಗಳು ಬಿಂಬಿಸಿದ ಭಗವದ್ಗೀತೆಯಿಂದ ಉಂಟಾದ ಪರಿಣಾಮಗಳೇನು ಎಂಬುದನ್ನು ಅರಿಯುವ ಪ್ರಯತ್ನವನ್ನು ಈ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ.

ಗೀತೆಗೆ ತಮ್ಮ ತಮ್ಮ ಇಷ್ಟಾನುಸಾರ ಅರ್ಥವನ್ನು ಕಲ್ಪಿಸಿ ಅಸಂಖ್ಯ ವ್ಯಾಖ್ಯಾನಗಳನ್ನು ಭಿನ್ನಪಠ್ಯಗಳೆಂಬಂತೆ ನೀಡಿದ್ದಾರೆ. ಕರ್ಮ, ಜ್ಞಾನ, ಸಾಂಖ್ಯಯೋಗ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮುಂತಾದ ಸಿದ್ಧಾಂತಗಳೇ ಗೀತೆಯ ತಾತ್ಪರ್ಯವೆಂದು ಆಯಾ ಮತದವರು ಪ್ರತಿಪಾದಿಸುತ್ತಿದ್ದಾರೆ. ಹೀಗೆ ಗೀತೆಯು ಆಯಾ ಮತಗಳಿಗೆ ಅನ್ವಯವಾಗುವಂತೆ ಬಳಕೆಯಾಗುತ್ತಿರುವ ಹಿನ್ನೆಲೆಯನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲು ಪ್ರಯತ್ನಿಸಿದ್ದೇನೆ. ಮತ–ಮಾನ್ಯಗಳು ಬಿಂಬಿಸುತ್ತಿರುವ ಗೀತೆಯ ಪಠ್ಯಗಳಿಗೂ, ಸ್ವಾತಂತ್ರ್ಯ ಹೋರಾಟಗಾರರ ಗೀತಾ ವ್ಯಾಖ್ಯಾನದ ಪಠ್ಯಗಳಿಗೂ ಹಾಗೂ ಇತರ ಭಿನ್ನಪಠ್ಯಗಳಿಗೂ, ವ್ಯಾಖ್ಯಾನದ ಮಾದರಿಯಲ್ಲಿರುವ ವ್ಯತ್ಯಾಸಗಳನ್ನು ಕೆಲವು ಮುಖ್ಯವಾದ

ಶ್ಲೋಕಗಳ ಹಿನ್ನೆಲೆಯಲ್ಲಿ ಈ ಅಧ್ಯಯನದಲ್ಲಿ ಚರ್ಚಿಸಿದ್ದೇನೆ. ಬಹುಮುಖ್ಯವಾಗಿ ಗೀತೆಯ ಅನುವಾದಗಳಿಂದ ಕನ್ನಡದ ರಾಜಕೀಯ ಮತ್ತು ಸಾಹಿತ್ಯಿಕ ವಲಯಗಳಲ್ಲಿ ಉಂಟಾದ ಬದಲಾವಣೆಗಳನ್ನು, ಪ್ರಭಾವ ಪ್ರೇರಣೆಗಳನ್ನು ಅಧ್ಯಯನದಲ್ಲಿ ಗುರುತಿಸಿದ್ದೇನೆ.

೧. ವಸಾಹತು ಸಂದರ್ಭದಲ್ಲಿ ಗೀತೆಯು ಹಲವು ವ್ಯಾಖ್ಯಾನಗಳಿಗೆ ಒಳಪಡಲು ಪ್ರಭಾವಿಸಿದ್ದ ಅಂಶಗಳು ಮತ್ತು ಅಂದಿನ ಸಾಂಸ್ಕೃತಿಕ ಸಂದರ್ಭದ ಒತ್ತಡದ ಹಿನ್ನೆಲೆಯ ಕಾರಣಗಳನ್ನು ತಿಳಿಯುವುದು.

೨. ಭಗವದ್ಗೀತೆಯ ವಿವಿಧ ಪಠ್ಯಗಳು ಹಾಗೂ ವಸಾಹತುಶಾಹಿ ಸಂಘರ್ಷ ಪರಿಸರವನ್ನು ಶೋಧಿಸಿಕೊಳ್ಳುವುದು.

೩. ವಸಾಹತು ಸಂದರ್ಭದಲ್ಲಿ ಭಿನ್ನಪಂಥಗಳಿಗೆ ಸೇರಿದ ನಾಯಕರು, ಸಂತರು ಬಿಂಬಿಸಿದ ಗೀತೆಯ ಪರಿಣಾಮಗಳೇನು ಎಂಬುದನ್ನು ಅರಿಯುವುದು.

೪. ಗೀತೆಯ ಹುಟ್ಟಿನ ಬಗೆಗೆ ವ್ಯಕ್ತವಾಗಿರುವ ಈವರೆಗಿನ ಪ್ರಮುಖ ಚರ್ಚೆಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸುವುದು.

೫. ಗೀತೆಯ ಬಗೆಗೆ ಪಾಶ್ಚಾತ್ಯ ಮತ್ತು ಭಾರತೀಯ ವಿದ್ವಾಂಸರು ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ಮುಖಾಮುಖಿಗೊಳಿಸುವುದು.

೬. ವಸಾಹತುಶಾಹಿ ಕಾಲದಲ್ಲಿ ಕ್ರೈಸ್ತ ಮಿಶನರಿಗಳು ನಡೆಸುತ್ತಿದ್ದ ಮತಾಂತರ ಪ್ರಕ್ರಿಯೆಗೆ ಬೈಬಲನ್ನು ಬಳಸುತ್ತಿದ್ದರು. ಹಾಗಾಗಿ ಇಲ್ಲಿನ ಸ್ಥಳೀಯ ಹಿಂದೂ ವಿದ್ವಾಂಸರು ಬೈಬಲ್‌ನಂತಹ ಕೃತಿಗೆ ಎದುರಾಗಿ ಗೀತೆಯಂತಹ ಒಂದು ಪರ್ಯಾಯ ಪಠ್ಯವನ್ನು ಅಸ್ತ್ರವಾಗಿ ಬಳಸಿದರೇ ಎಂಬ ಸಂಗತಿಯನ್ನು ಪರಿಶೀಲಿಸುವುದು.

೭. ವಿವಿಧ ಗೀತಾ ವ್ಯಾಖ್ಯಾನಗಳ ಹಲವು ಶ್ಲೋಕಗಳನ್ನು ತುಲನಾತ್ಮಕವಾಗಿ ನೋಡುತ್ತಲೇ ಅವುಗಳನ್ನು ಪ್ರಾಯೋಗಿಕತೆಗೆ ಒಳಪಡಿಸಿ, ವಿಶ್ಲೇಷಿಸುವ ಮೂಲಕ ವ್ಯತ್ಯಾಸಗಳನ್ನು ತಿಳಿಯುವುದು.

೮. ವಿವಿಧ ಮತಗಳವರು ಗೀತೆಯನ್ನು ವ್ಯಾಖ್ಯಾನ ಮಾಡಿರುವುದರಿಂದ ಅದು ಆಯಾ ಮತಗಳಿಗೆ ಅನ್ವಯವಾಗುವಂತೆ ಬಳಕೆಯಾಗುತ್ತಿದೆಯೇ ಎಂಬುದನ್ನು ಪರಿಶೀಲಿಸುವುದು.

೯. ಗೀತೆಯ ಅನುವಾದಗಳಿಂದ ಕನ್ನಡ ರಾಜಕೀಯ ಮತ್ತು ಸಾಹಿತ್ಯಿಕ ವಲಯಗಳಲ್ಲಿ ಉಂಟಾದ ಬದಲಾವಣೆಗಳನ್ನು, ಪ್ರಭಾವ ಪ್ರೇರಣೆಗಳನ್ನು ಈ ಅಧ್ಯಯನದಲ್ಲಿ ವಿವರಿಸುವುದು.

೧೦. ಗೀತೆಯ ಕನ್ನಡ ಅನುವಾದಗಳಿಂದ ಕನ್ನಡದ ವಿವಿಧ ಸಂವೇದನೆಗಳು ಸ್ವೀಕರಿಸಿದ, ಪ್ರತಿಕ್ರಿಯಿಸಿದ ಹಾಗೂ ಪ್ರತಿಕ್ರಿಯಿಸುತ್ತಿರುವ ಬಗೆಗಳನ್ನು ತಿಳಿಯುವುದು.

೧.೨. ಅಧ್ಯಯನದ ವ್ಯಾಪ್ತಿ

ಭಾರತವು ವಸಾಹತು ಆಳ್ವಿಕೆಗೆ ಒಳಪಟ್ಟಿದ್ದ ಸಂದರ್ಭದಲ್ಲಿ ವಿವಿಧ ಭಾಷೆಗಳಲ್ಲಿ ವ್ಯಾಖ್ಯಾನಗೊಂಡ ಗೀತೆಯ ಕೃತಿಗಳು, ಅನಂತರದಲ್ಲಿ ಕನ್ನಡ ಭಾಷೆಗೂ ಅನುವಾದಗೊಂಡಿವೆ. ಈ ನನ್ನ ಅಧ್ಯಯನವು ಅಂತಹ ಕನ್ನಡ ಭಾಷಾಂತರ ಕೃತಿಗಳನ್ನು ಕೇಂದ್ರವಾಗಿಟ್ಟುಕೊಂಡು ವಸಾಹತು ಸಂದರ್ಭದ ಸಾಂಸ್ಕೃತಿಕ, ರಾಜಕೀಯ ಪರಿಸರವನ್ನು ವಿಶ್ಲೇಷಿಸುವ ವ್ಯಾಪ್ತಿಯನ್ನು ಹೊಂದಿದೆ. ಕರ್ನಾಟಕ ಸಾಂಸ್ಕೃತಿಕ ಪರಿಸರಕ್ಕೆ ಹಾಗೂ ಕನ್ನಡ ಸಾಹಿತ್ಯ ಕೃತಿಗಳಿಗೆ ನೀಡಿದ ಪ್ರಭಾವ ಪ್ರೇರಣೆಗಳನ್ನು ಶೋಧಿಸುವುದು ಈ ಅಧ್ಯಯನದ ವ್ಯಾಪ್ತಿಯಾಗಿದೆ.

ವಸಾಹತು ಸಂದರ್ಭದಲ್ಲಿನ ಮುಖ್ಯ ರಾಜಕೀಯ ನಾಯಕರ ವ್ಯಾಖ್ಯಾನ ಕೃತಿಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ನಡೆಸಿರುವುದರಿಂದ, ಉಳಿದ ವ್ಯಾಖ್ಯಾನಗಳನ್ನು ಗಂಭೀರವಾಗಿ ಪರಿಗಣಿಸಲು ಸಾಧ್ಯವಾಗಿಲ್ಲ. ಹಾಗಾಗಿ ಇದು ಪ್ರಸ್ತುತ ಪ್ರಬಂಧದ ಮಿತಿಯೂ ಆಗಿದೆ ಎಂಬುದನ್ನು ಅರಿತಿದ್ದೇನೆ.

೧.೩. ಅಧ್ಯಯನದ ಸ್ವರೂಪ

ಪ್ರಸ್ತುತ ಮಹಾಪ್ರಬಂಧದ ಅಧ್ಯಯನವನ್ನು ಎಂಟು ಅಧ್ಯಾಯಗಳ ಮೂಲಕ ಕೈಗೊಳ್ಳಲಾಗಿದೆ. ಅದರ ಸ್ವರೂಪವನ್ನು ಕೆಳಗಿನಂತೆ ಚರ್ಚಿಸಲಾಗಿದೆ.

ಅಧ್ಯಾಯ ಒಂದು: 'ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು **ಸ್ವರೂಪ'** ಎಂಬ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಅಧ್ಯಯನಕ್ಕೆ ಗುರುತು ಮಾಡಿಕೊಂಡ ವ್ಯಾಪ್ತಿಯನ್ನು ಸ್ಪಷ್ಟಪಡಿಸಲಾಗಿದೆ. ಜೊತೆಗೆ ಪ್ರಸ್ತುತ ಅಧ್ಯಯನವು ಯಾವ ವೈಧಾನಿಕತೆಯನ್ನು ಅಳವಡಿಸಿಕೊಂಡಿದೆ ಎಂಬುದನ್ನು ವಿವರಿಸಲಾಗಿದೆ.

ಅಧ್ಯಾಯ ಎರಡು: 'ಅಧ್ಯಯನ ಸಮೀಕ್ಷೆ' ಎಂಬ ಈ ಅಧ್ಯಾಯದಲ್ಲಿ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಈವರೆಗೆ ನಡೆದಿರುವ ಅಧ್ಯಯನಗಳ ವಿಮರ್ಶಾತ್ಮಕ ಸಮೀಕ್ಷೆಯನ್ನು ಇಲ್ಲಿ ನೀಡಲಾಗಿದೆ.

ಅಧ್ಯಾಯ ಮೂರು: 'ಧಾರ್ಮಿಕ ಪಠ್ಯಗಳು: ವಸಾಹತುಶಾಹಿ ಪರಿಸರ' ಎಂಬ ಈ ಅಧ್ಯಾಯದಲ್ಲಿ ವಸಾಹತು ಪರಿಸರದಲ್ಲಿ ಧಾರ್ಮಿಕ ಪಠ್ಯಗಳು ರೂಪುಗೊಂಡ ಬಗೆಯನ್ನು ಹಾಗೂ ಧಾರ್ಮಿಕ ಪಠ್ಯದ ಭಾಷಾಂತರ ರಾಜಕಾರಣವನ್ನು ತಿಳಿಯಲು ಪ್ರಯತ್ನಿಸಲಾಗಿದೆ.

ಅಧ್ಯಾಯ ನಾಲ್ಕು: 'ಧಾರ್ಮಿಕ ಪಠ್ಯಗಳು: ವಸಾಹತು ಸಂಘರ್ಷ' ಎಂಬ ಈ ಅಧ್ಯಾಯದಲ್ಲಿ ಧಾರ್ಮಿಕ ವಸಾಹತೀಕರಣದ ಸ್ವರೂಪ, ಧಾರ್ಮಿಕ ವಸಾಹತೀಕರಣಕ್ಕೆ ಭಾರತೀಯರ ಪ್ರತಿಕ್ರಿಯೆಯನ್ನು ಶೋಧಿಸಿಕೊಳ್ಳಲಾಗಿದೆ. ಜೊತೆಗೆ ಗೀತೆಯ ಹುಟ್ಟು ಮತ್ತು ಬೆಳವಣಿಗೆ, ಗೀತೆಯಿಂದಾಗಿ ಭಾರತದಲ್ಲಿ ಆದ ಧಾರ್ಮಿಕ ರಾಷ್ಟ್ರೀಯತ್ವದ ಬೆಳವಣಿಗೆ ಹಾಗೂ ಗೀತೆಯ ಬಗೆಗಿನ ದೇಶಿ ಮತ್ತು ವಿದೇಶಿ ವಿದ್ವಾಂಸರ ಅಭಿಪ್ರಾಯಗಳನ್ನು ವಿವರಿಸಲಾಗಿದೆ.

ಅಧ್ಯಾಯ ಐದು: 'ಗೀತೆಯ ಅನುವಾದ ಪಠ್ಯಗಳ ಪರಿಶೀಲನೆ' ಎಂಬ ಈ ಅಧ್ಯಾಯದಲ್ಲಿ ಗೀತೆಯನ್ನು ಅನುವಾದಿಸಿದ, ವ್ಯಾಖ್ಯಾನಿಸಿದ ಮುಖ್ಯ ಚಿಂತಕರ ಕೃತಿಗಳ ಭಾಷಾಂತರವನ್ನು ಪರಿಶೀಲನೆಗೆ ಒಳಪಡಿಸಿ ಭಾಷಾಂತರದ ಭಿನ್ನತೆಗಳನ್ನು ಚರ್ಚಿಸಲಾಗಿದೆ.

ಅಧ್ಯಾಯ ಆರು: 'ವಸಾಹತು ಸಂದರ್ಭದ ಕನ್ನಡ ಸಾಹಿತ್ಯ: ಪ್ರಭಾವ, ಪ್ರೇರಣೆ, ಅನುಸಂಧಾನ' ಎಂಬ ಈ ಅಧ್ಯಾಯದಲ್ಲಿ ವಸಾಹತು ಕಾಲಘಟ್ಟದಲ್ಲಿ ಬರೆಯುತ್ತಿದ್ದ ಮುಖ್ಯ ಬರಹಗಾರರಾದ , ಕುವೆಂಪು, ಹಾಗೂ ದ.ರಾ.ಬೇಂದ್ರೆ ಅವರ ಸಾಹಿತ್ಯದಲ್ಲಿ ಗೀತೆಯ ಪ್ರಭಾವ, ಪ್ರೇರಣೆ, ಅನುಸಂಧಾನವನ್ನು ಗುರುತಿಸಲಾಗಿದೆ.

ಅಧ್ಯಾಯ ಏಳು: 'ಗೀತೆ: ವಸಾಹತೋತ್ತರ ಸಂದರ್ಭ' ಎಂಬ ಅಧ್ಯಾಯದಲ್ಲಿ ಗೀತೆಯನ್ನು ಸಾಮಾಜಿಕ ನೆಲೆಯಿಂದ ಗ್ರಹಿಸುವ ಪ್ರಯತ್ನ ಮಾಡಲಾಗಿದೆ. ವಸಾಹತೋತ್ತರ ಕಾಲದಲ್ಲಿ ಅನೇಕ ಪ್ರಶ್ನೆಗಳು ಗೀತೆಯ ವಿಷಯದಲ್ಲಿ ಎದುರಾಗಿದ್ದು, ಅವುಗಳಲ್ಲಿ ಜಾತಿ–ವರ್ಣವ್ಯವಸ್ಥೆಯ ಪ್ರತಿಪಾದನೆ; ಸ್ತ್ರೀ, ಶೂದ್ರ ದ್ವೇಷಿಯಾದುದು; ಇದನ್ನು ರಾಷ್ಟ್ರೀಯ ಗ್ರಂಥವಾಗಿಸಬೇಕೆಂಬ ಸರ್ಕಾರದ ಪ್ರಯತ್ನ ಮುಂತಾದ ಅನೇಕ ಚರ್ಚೆಗಳಿಗೆ ಒಳಗಾಗಿದೆ. ಇಂಥ ಚರ್ಚೆಗಳ ಹಿನ್ನೆಲೆಯಿಂದ ಗೀತೆಯನ್ನು ವಿಶ್ಲೇಷಿಸಲಾಗಿದೆ.

ಅಧ್ಯಾಯ ಎಂಟು: 'ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು?'. ಈ ಸಮಾರೋಪ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದ ಫಲಿತಗಳನ್ನು, ಮಿತಿಗಳನ್ನು ಹಾಗೂ ಸಾಧ್ಯತೆಗಳನ್ನು ಹೇಳಲಾಗಿದೆ.

ಅನುಬಂಧದಲ್ಲಿ ಪರಾಮರ್ಶನ ಕೃತಿಗಳು ಮತ್ತು ಲೇಖನಗಳು, ಭಗವದ್ಗೀತೆಯ ಕುರಿತ ಕನ್ನಡ ಕೃತಿಗಳು ಮತ್ತು ಲೇಖನಗಳು, ಭಗವದ್ಗೀತೆ ಕುರಿತ ಆಂಗ್ಲ ಕೃತಿಗಳು ಮತ್ತು ಲೇಖನಗಳು, ಸಂಶೋಧನ ಪ್ರಬಂಧಗಳು ಹಾಗೂ ಗೀತೆಯ ಕುರಿತ ಪಾಶ್ಚಾತ್ಯ ವಿದ್ವಾಂಸರ ಕೆಲವು ಉದ್ಗಾರಗಳನ್ನು ನೀಡಲಾಗಿದೆ.

೧.೪. ಅಧ್ಯಯನದ ವೈಧಾನಿಕತೆ

"ಧಾರ್ಮಿಕ ಪಠ್ಯಗಳು: ವಸಾಹತು ಸಂದರ್ಭ" ಎಂಬ ಈ ಅಧ್ಯಯನವನ್ನು ಸ್ವಾತಂತ್ರ್ಯ ಸಂಗ್ರಾಮದ ಕಾಲಘಟ್ಟದಲ್ಲಿ ಹಲವು ರಾಜಕೀಯ ನಾಯಕರು, ಚಿಂತಕರು ವ್ಯಾಖ್ಯಾನಿಸಿದ ಭಗವದ್ಗೀತೆಯ ಕೃತಿಗಳ ಕನ್ನಡ ಅನುವಾದ ಪಠ್ಯಗಳ ಹಿನ್ನೆಲೆಯಲ್ಲಿ ಕೈಗೊಳ್ಳಲಾಗಿದೆ. ಸ್ವಾತಂತ್ರ್ಯ ಆಂದೋಲನದ ಸಂದರ್ಭದಲ್ಲಿ ವ್ಯಾಖ್ಯಾನಗೊಂಡ ಗೀತೆಯ ಪ್ರಮುಖ ಕೃತಿಗಳನ್ನು ಪಠ್ಯ ಹಾಗೂ ರಾಜಕೀಯ, ಸಾಂಸ್ಕೃತಿಕ ಗ್ರಹಿಕೆಯ ದೃಷ್ಟಿಕೋನದ ಹಿನ್ನೆಲೆಯಲ್ಲಿ ಈ ಅಧ್ಯಯನವನ್ನು ಮಾಡಲಾಗಿದೆ. ಮುಖ್ಯವಾಗಿ ಈ ಅಧ್ಯಯನದ ಕ್ರಮವು ಗೀತೆಯ ವಿವಿಧ ಪಠ್ಯಗಳನ್ನು ಸಂಗ್ರಹಿಸಿಕೊಳ್ಳುವುದು, ವ್ಯಾಖ್ಯಾನಗಳನ್ನು ಬೇರೆ ಬೇರೆ ನೆಲೆಗಳಲ್ಲಿ ವಿಂಗಡಣೆ ಮಾಡಿಕೊಳ್ಳುವುದು,

ಅವುಗಳ ಸಮೀಕ್ಷೆ ನಡೆಸುವುದು ಹಾಗೂ ಈ ಮೊದಲೇ ಹೇಳಿದಂತೆ ಅವುಗಳನ್ನು ಪರಿಶೀಲನೆಗೆ ಒಳಪಡಿಸುವುದರ ಮೂಲಕ ವಿಶ್ಲೇಷಿಸುವುದಾಗಿದೆ. ಒಟ್ಟಿನಲ್ಲಿ ಈ ನನ್ನ ಸಂಶೋಧನೆಯು ಪರಿಚಯಾತ್ಮಕ, ತೌಲನಿಕ ಹಾಗೂ ವಿಶ್ಲೇಷಣಾತ್ಮಕವಾದ ಅಧ್ಯಯನವನ್ನು ಆಧರಿಸಿದ್ದಾಗಿದೆ.

೧.೫. ಅಧ್ಯಯನದ ಪ್ರಸ್ತುತತೆ

ಸಾಮಾನ್ಯವಾಗಿ ಭಗವದ್ಗೀತೆಯನ್ನು ಒಂದು ಧಾರ್ಮಿಕ ಪಠ್ಯವಾಗಿ ನೋಡಲಾಗುತ್ತಿದೆಯೇ ಹೊರತು ಅದನ್ನು ವಿವಿಧ ನೆಲೆಗಳಲ್ಲಿ ಅಧ್ಯಯನ ನಡೆಸುವ ಪ್ರಯತ್ನಗಳಾಗುತ್ತಿಲ್ಲ. ಧರ್ಮದಲ್ಲಿ ಶ್ರೇಷ್ಠ–ಅಧಮ ಎಂಬ ಕಲ್ಪನೆಯೇ ತುಂಬಿರುವುದರಿಂದ ಇಂದು ವಿಶ್ವದಾದ್ಯಂತ ಭಯೋತ್ಪಾದನೆ, ಕೋಮುಗಲಭೆಯಂತಹ ಧಾರ್ಮಿಕ ಸಂಘರ್ಷಗಳು ನಡೆಯುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಗೀತೆಯನ್ನು ನೋಡುವ ವಿವಿಧ ಕ್ರಮಗಳನ್ನು ತಿಳಿಯಬೇಕಾಗುತ್ತದೆ. ಗೀತೆಯ ಚರ್ಚೆ ವಸಾಹತೋತ್ತರ ಕಾಲದಲ್ಲೂ ಮುಂದುವರಿಯುತ್ತಿದ್ದು, ಗೀತೆಯ ಅಸಂಖ್ಯ ವ್ಯಾಖ್ಯಾನಗಳು, ಅನುವಾದಗಳು ಇನ್ನೂ ಪ್ರಕಟಗೊಳ್ಳುತ್ತಲೇ ಇವೆ. ಹಾಗಾಗಿ ಇಂದಿನ ಕಾಲದ ಬಹುಮುಖ್ಯ ಚರ್ಚೆಗಳಿಗೆ ಮುಖಾಮುಖಿಯಾಗಿ ಉತ್ತರವನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ. ಜೊತೆಗೆ ಈ ವಸಾಹತೋತ್ತರ ಕಾಲದಲ್ಲಿ ನಿಂತು ಇಂದಿನ ವಿಮರ್ಶಾಕ್ರಮಗಳ ಮೂಲಕ ವಸಾಹತು ಸಂದರ್ಭದಲ್ಲಿ ಪರಕೀಯರ ಆಕ್ರಮಣದಿಂದ ಉಂಟಾದ ಸಂಸ್ಕೃತಿಯ ಪಲ್ಲಟಗಳನ್ನು ಹಾಗೂ ಗೀತೆಯ ವ್ಯಾಖ್ಯಾನಗಳಿಂದ ಸಮಾಜ ಮತ್ತು ಸಂಸ್ಕೃತಿಯಲ್ಲಾದ ಬದಲಾವಣೆಗಳನ್ನು ಈ ಅಧ್ಯಯನದಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದೇನೆ.

❖❖❖

ಅಧ್ಯಾಯ: ಎರಡು

ಅಧ್ಯಯನ ಸಮೀಕ್ಷೆ

೨.೧. ಸಂಸ್ಕೃತದಿಂದ ಕನ್ನಡಕ್ಕೆ ಬಂದ ಗೀತೆಯ ಅನುವಾದಗಳು

೨.೨. ಗೀತೆಯ ಬಗೆಗಿನ ಅಧ್ಯಯನಗಳು

ಅಧ್ಯಾಯ: ಎರಡು

ಅಧ್ಯಯನ ಸಮೀಕ್ಷೆ

ಭಗವದ್ಗೀತೆ ಎನ್ನುವುದು ಭಗವಂತನಿಂದ ಹೇಳಲ್ಪಟ್ಟ ಉಪದೇಶ ಎಂಬ ನಂಬಿಕೆಯಿದೆ. ಯುದ್ಧಕಾಲದಲ್ಲಿ ಅರ್ಜುನನಿಗೆ ತಲೆದೋರಿದ ಸಂದಿಗ್ಧ ಪರಿಸ್ಥಿತಿಗೆ ಶ್ರೀಕೃಷ್ಣನು ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ ಈ ಗೀತೆಯನ್ನು ಬೋಧಿಸಿದ ಎನ್ನಲಾಗಿದೆ. ಆ ಮೂಲಕ ಅರ್ಜುನನನ್ನು ಧರ್ಮಯುದ್ಧಕ್ಕೆ ಅಣಿಗೊಳಿಸಿದ ಎಂದು ಹೇಳಲಾಗುತ್ತದೆ. ಆದರೆ ಅದು ವಾಸ್ತವವಾಗಿ ನಡೆದಿದೆಯೇ ಎಂಬ ವಿಷಯವಾಗಿ ಹಲವಾರು ದೇಶೀಯ ಮತ್ತು ವಿದೇಶಿ ವಿದ್ವಾಂಸರು ಚರ್ಚೆ ನಡೆಸಿದ್ದಾರೆ. ಅದೇನೇ ಇರಲಿ ಗಾಂಧೀಜಿ ಅವರು ಹೇಳಿದಂತೆ ಭಗವದ್ಗೀತೆ ಒಂದು 'ಮಹಾಧರ್ಮ ಕಾವ್ಯ'ವಾಗಿ ಹೆಚ್ಚು ಜನಪ್ರಿಯತೆಯನ್ನು ಪಡೆದಿದೆ.

ಭಗವದ್ಗೀತೆಯ ಜನಪ್ರಿಯತೆಗೆ ಬಹುಮುಖ್ಯ ಕಾರಣ ಅದರ ಅನುವಾದ ಕಾರ್ಯ. ಆದಿ ಶಂಕರಾಚಾರ್ಯರು ಭಗವದ್ಗೀತೆಗೆ ಭಾಷ್ಯ ಬರೆದಾಗಿನಿಂದ ಗೀತೆಯ ಬಗೆಗೆ ಹೆಚ್ಚು ಆಸಕ್ತಿ ಹುಟ್ಟಲು ಕಾರಣವಾಯಿತು. ನಂತರದಲ್ಲಿ ರಾಮಾನುಜಾಚಾರ್ಯ, ಮಧ್ವಾಚಾರ್ಯರೂ ಗೀತೆಗೆ ಭಾಷ್ಯ, ಟೀಕುಗಳನ್ನು ಬರೆದು ಅವರವರ ಮತಾನುಸಾರ ವ್ಯಾಖ್ಯಾನಗೊಳಿಸಿದರು. ಆಗಿನಿಂದ ರಾಮಾಯಣ, ಮಹಾಭಾರತ, ವೇದ-ಉಪನಿಷತ್ತುಗಳಷ್ಟೇ ಬಹುಮುಖ್ಯ ಗ್ರಂಥವಾಗಿ ಭಗವದ್ಗೀತೆ ಜನಪ್ರಿಯತೆಯನ್ನು ಪಡೆಯುತ್ತಾ ಬಂದಿತು.

ನಂತರದಲ್ಲಿ ಭಾರತದ ಮಧ್ಯಕಾಲೀನ ಚರಿತ್ರೆಯಲ್ಲಿ ಭಗವದ್ಗೀತೆಯ ಪ್ರಾಮುಖ್ಯತೆ, ಜನಪ್ರಿಯತೆ ಮತ್ತು ಅದರ ಪ್ರಸ್ತಾಪ ಅಷ್ಟಾಗಿ ಕಾಣಸಿಗುವುದಿಲ್ಲ. ಗೀತೆಗೆ ಹೆಚ್ಚು ಜನಪ್ರಿಯತೆ ದೊರೆತಿದ್ದು ಬ್ರಿಟಿಷ್ ವಸಾಹತು ಸಂದರ್ಭದಲ್ಲಿ. ಈ ಸಂದರ್ಭದಲ್ಲಿ ಭಾರತಕ್ಕೆ ಆಗಮಿಸಿದ ಕ್ರೈಸ್ತಮಿಶನರಿಗಳು ಧಾರ್ಮಿಕ ಇಂಗಿತವನ್ನು ಹೊಂದಿ ಕೆಲಸ ನಿರ್ವಹಿಸುತ್ತಿದ್ದವು. ಭಾರತೀಯರ ಮನಸ್ಥಿತಿಗಳನ್ನು ಅರಿತು ಪಾದ್ರಿಗಳು ತಮ್ಮ ಧರ್ಮ ಪ್ರಸಾರದ ಕಾರ್ಯದಲ್ಲಿ ತೊಡಗುತ್ತಿದ್ದರು. ಇದಕ್ಕಾಗಿ ಬೈಬಲ್ ಮತ್ತು ಭಾರತದ ಧರ್ಮಗ್ರಂಥಗಳ ಅನುವಾದ ಕಾರ್ಯ ಕೈಗೊಂಡರು. ವಸಾಹತು ಸಂದರ್ಭದಲ್ಲಿ ಬಂದ ಆಡಳಿತಗಾರರೂ ಹಾಗೂ ವಿದ್ವಾಂಸರೂ ಕೂಡ ಹಿಂದೂ ಧರ್ಮಗ್ರಂಥಗಳ ಅದರಲ್ಲೂ ಭಗವದ್ಗೀತೆಯ ಅನುವಾದದ ಕಡೆಗೆ ಗಮನ ಹರಿಸಿದರು. ಅವರಲ್ಲಿ ಚಾರ್ಲ್ಸ್ ವಿಲ್ಕಿನ್ಸ್

೧೭೮೫ರಲ್ಲಿ THE BHAGVAT-GEETA OR DIALOGUES OF KREESHNA AND ARJOONJA ಹೆಸರಿನಲ್ಲಿ ಭಗವದ್ಗೀತೆಯನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದರು. ಇದು ಸಂಸ್ಕೃತದಿಂದ ಯುರೋಪಿನ ಭಾಷೆಗಳಿಗೆ ಅನುವಾದಗೊಂಡ ಮೊದಲ ಕೃತಿಯಾಗಿದೆ. ಈ ಕೃತಿಯು ಫ್ರೆಂಚ್ ಮತ್ತು ಇಂಗ್ಲಿಷ್ ಭಾಷೆಗಳಿಗೆ ಅನುವಾದವಾಗಿದೆ.

ನಂತರದಲ್ಲಿ ಜಾನ್ ಗ್ಯಾರೆಟ್ ಅವರು ೧೮೪೮ರಲ್ಲಿ ಭಗವದ್ಗೀತೆಯ ಅನುವಾದ ಕಾರ್ಯವನ್ನು ಕನ್ನಡ, ಇಂಗ್ಲಿಷ್, ಮತ್ತು ಲ್ಯಾಟಿನ್ ಭಾಷೆಗಳಿಗೆ ಮಾಡಿಸಿದರು. ಇದು ವಾರನ್ ಹೇಸ್ಟಿಂಗ್ಸ್ ಅವರ ಮುನ್ನುಡಿಯೊಡನೆ ಪ್ರಕಟವಾಗಿ ಗ್ಯಾರೆಟ್ ಅವರಿಗೆ ಕೀರ್ತಿಯನ್ನು ತಂದಿತು. ಮುಂದೆ ೧೮೭೦ರಲ್ಲಿ ಈ ಕೃತಿಯ ಕನ್ನಡಾನುವಾದವನ್ನು ಸಂಸ್ಕೃತ ಮೂಲದೊಡನೆ ವೆಸ್ಲಿಯನ್ ಮಿಶನ್‌ನಲ್ಲಿ ಕನ್ನಡ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದ ಶ್ರೀ ಮುನ್ನಿ ಶ್ರೀನಿವಾಸಯ್ಯ ಎಂಬುವರು ಮಾಡಿ ಪ್ರಕಟಿಸಿದ್ದಾರೆ.

ಮುಂದೆ ೧೮೫೫ರಲ್ಲಿ ಜೆ. ಕಾಕ್‌ಬರ್ನ್ ಥಾಮ್ಸನ್ ಎನ್ನುವ ವಿದ್ವಾಂಸರು 'Bhagavad gita- A sancrit philosophical poem' ಎಂದು ಭಗವದ್ಗೀತೆಯನ್ನು ಅನುವಾದಿಸಿದ್ದಾರೆ. ೧೮೯೮ರಲ್ಲಿ 'The secret Books of the East' ಮಾಲಿಕೆಯಲ್ಲಿ ಮ್ಯಾಕ್ಸ್‌ಮುಲ್ಲರ್ ಅವರು ಕೆ.ಟಿ. ತೆಲಾಂಗ್ ಅನುವಾದಿಸಿದ 'Bhagavad Gita' ಕೃತಿಯನ್ನು ಸಂಪಾದಿಸಿದ್ದಾರೆ. ೧೮೮೫ರಲ್ಲಿ ಸರ್ ಎಡ್ವಿನ್ ಆರ್ನಾಲ್ಡ್ ಎನ್ನುವವರು ಭಗವದ್ಗೀತೆಯನ್ನು ಇಂಗ್ಲಿಷ್‌ನಲ್ಲಿ 'The Song of celestial' ಎಂದು ಅನುವಾದಿಸಿದ್ದಾರೆ. ತೆಲಾಂಗ್ ಮತ್ತು ಆರ್ನಾಲ್ಡ್‌ರ ಇವೆರಡೂ ಕೃತಿಗಳು ಪಾಶ್ಚಾತ್ಯ ದೇಶಗಳಲ್ಲಿ ಅತ್ಯಂತ ಜನಪ್ರಿಯ ಕೃತಿಯಾಗಿ ಹೆಸರು ಪಡೆದಿವೆ. ೧೮೯೩ರಲ್ಲಿ ಜಾನ್ ಡೇವಿಸ್ ಎನ್ನುವ ವಿದ್ವಾಂಸರು 'The Bhagavad gita or The sacred Lay' ಎಂದು ಅನುವಾದಿಸಿ, ಮುಂದೆ ಅವರದೇ ಪುಸ್ತಕವನ್ನು ೧೯೧೮ರಲ್ಲಿ 'The Bhagavad gita or The sacred harp' ಎಂದು ಮುದ್ರಿಸಿದ್ದಾರೆ. ಆರ್ನಾಲ್ಡ್ ಮತ್ತು ಡೇವಿಸ್ ಅವರ ಎರಡೂ ಕೃತಿಗಳನ್ನು ಪ್ರಸಿದ್ಧ ಪ್ರಕಾಶನ ಸಂಸ್ಥೆ Kegan paul, ಲಂಡನ್ ಪ್ರಕಾಶಿಸಿದೆ. ೧೯೦೬ರಲ್ಲಿ ಡಬ್ಲ್ಯೂ.ಎಲ್. ವಿಲ್ಮ್‌ಶರ್ಟ್ ಎನ್ನುವವರು ಗೀತೆಯನ್ನು 'The Chief Scripture of India (The Bhagavad gita)'ಎಂದು ಅನುವಾದಿಸಿದ್ದಾರೆ. ಇದೊಂದು ಪ್ರಬಂಧದ ರೂಪದ ಗೀತಾ ಕೃತಿಯಾಗಿದೆ. ಇದನ್ನು Philip wellby ಪ್ರಕಾಶನ ಪ್ರಕಟಿಸಿದೆ. ೧೮೯೦ರಲ್ಲಿ ವಿಲಿಯಂ ಕ್ಯೂ ಜಡ್ಜ್ ಎನ್ನುವ ವಿದ್ವಾಂಸರು 'The Bhagavad-gita' ಎಂದು ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದಾರೆ. ಇದನ್ನು ಲಾಸ್ ಏಂಜಲೀಸ್‌ನ ಥಿಯಾಸೊಫಿಕಲ್ ಕಂಪನಿ ಪ್ರಕಟಿಸಿದೆ. ಇದೇ ಕೃತಿಯನ್ನು ಭಾರತದ ಥಿಯಾಸೊಫಿಕಲ್ ಕಂಪನಿ ೧೮೪೨ರಲ್ಲಿ ಪುನರ್‌ಮುದ್ರಿಸಿದೆ.

ಗೀತೆಗೆ ಅತಿಹೆಚ್ಚು ಜನಪ್ರಿಯತೆ ದೊರೆತದ್ದು ಭಾರತದ ಸ್ವಾತಂತ್ರ್ಯ ಆಂದೋಲನದ ಸಂದರ್ಭದಲ್ಲಿ. ಭಾರತಕ್ಕೆ ಆಗಮಿಸಿದ ವಿದೇಶಿ ಪ್ರವಾಸಿಗರು, ಮಿಶನರಿಗಳು, ಆಡಳಿತಗಾರರು,

ವಿದ್ವಾಂಸರು ಭಾರತದ ಧರ್ಮ ಮತ್ತು ಸಂಸ್ಕೃತಿಯ ಬಗೆಗೆ ಕೆಲವು ಸಂಕಥನಗಳನ್ನು ಸೃಷ್ಟಿಸಿದ್ದರು. ಈ ಸಂಕಥನಗಳಿಂದ ಕ್ರಿಶ್ಚಿಯನ್ ಧರ್ಮದ ಘನತೆಯನ್ನು ಎತ್ತಿ ಹಿಡಿದು ಭಾರತೀಯ ಧರ್ಮಗಳನ್ನು ಕಡೆಗಣಿಸಿದ್ದರು. ಆ ಮೂಲಕ ಭಾರತೀಯರಲ್ಲಿ ಕೀಳರಿಮೆ ಮತ್ತು ಒಡಕನ್ನು ಉಂಟುಮಾಡಿ ಆಡಳಿತವನ್ನು ಸುಗಮವಾಗಿ ನಡೆಸಲು ಪ್ರಯತ್ನಿಸಿದ್ದರು. ಪಾಶ್ಚಾತ್ಯರು ತಮ್ಮ ಪಠ್ಯಗಳ ಮೇಲೆ ಹೇರಿದ ಮೌಲ್ಯಗಳು, ತಾತ್ವಿಕತೆಗಳನ್ನು ಓದಿದ ದೇಶಿ ವಿದ್ವಾಂಸರು ಭಿನ್ನ ಅನುವಾದಗಳನ್ನು ನೀಡಲು ಪ್ರಯತ್ನಿಸಿದರು. ಧಾರ್ಮಿಕ ಸುಧಾರಣೆ ಮತ್ತು ರಾಷ್ಟ್ರೀಯತೆಯ ಕಾರಣವಾಗಿ ಭಾರತೀಯ ವಿದ್ವಾಂಸರು ಹೆಚ್ಚು ಹೆಚ್ಚು ಅನುವಾದ ಕಾರ್ಯಗಳಲ್ಲಿ ತೊಡಗಿದರು. ಈ ಸಂದರ್ಭದಲ್ಲಿ ಭಗವದ್ಗೀತೆ ಹೆಚ್ಚು ಹೆಚ್ಚು ಅನುವಾದಗಳಿಗೆ, ವ್ಯಾಖ್ಯಾನಗಳಿಗೆ ಒಳಗಾಯಿತು. ಭಗವದ್ಗೀತೆಯನ್ನು ಹಿಂದೂ ಧರ್ಮದ ಪ್ರತಿನಿಧಿ ಅಥವಾ ಪವಿತ್ರಗ್ರಂಥ ಎಂದು ಎತ್ತಿ ಹಿಡಿಯುವ ಕಾರ್ಯ ಆರಂಭವಾಯಿತು.

ಭಾರತದ ಸ್ವಾತಂತ್ರ್ಯ ಆಂದೋಲನದಲ್ಲಿ ಪಾಲ್ಗೊಂಡ ಬಹುತೇಕ ರಾಜಕೀಯ ನಾಯಕರು ಭಗವದ್ಗೀತೆಯನ್ನು ವ್ಯಾಖ್ಯಾನಿಸಲು ಪ್ರಯತ್ನಿಸಿದರು. ಅವರಲ್ಲಿ ಅನಿಬೆಸೆಂಟರು ೧೮೯೫ರಲ್ಲಿ ಭಗವದ್ಗೀತೆಯನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದರು. ಇದನ್ನು ಲಂಡನ್ನಿನ ಥಿಯಾಸೊಫಿಕಲ್ ಪಬ್ಲಿಷಿಂಗ್ ಹೌಸ್ ಪ್ರಕಟಿಸಿತು. ಪಾಶ್ಚಾತ್ಯ ವಿದ್ವಾಂಸ ಮ್ಯಾಕ್ಸ್‌ಮುಲ್ಲರ್ ಅವರಂತೆಯೇ ಕಳೆದುಹೋದ ಭವ್ಯ ನಾಗರಿಕತೆಯ ಭಾಗವಾದ ಹಿಂದೂ ಧರ್ಮವನ್ನು ಅರ್ಥ ಮಾಡಿಕೊಳ್ಳುವ ಆಸಕ್ತಿಯಿಂದ ಅನಿಬೆಸೆಂಟ್‌ರು ಭಗವದ್ಗೀತೆಯನ್ನು ಅಭ್ಯಸಿಸಿ ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದಾರೆ. ಇವರ ಅನುವಾದದಲ್ಲಿ ಭಗವದ್ಗೀತೆಯನ್ನು ಪವಿತ್ರವೆಂದು ಭಾವಿಸಿರುವುದನ್ನು ಕಾಣಬಹುದಾಗಿದೆ. ಇವರ ಅನುವಾದ ಕೃತಿಯು ೧೯೪೭ರ ಹೊತ್ತಿಗೆ ಏಳೆಂಟು ಮುದ್ರಣಗಳನ್ನು ಕಂಡು ಜನರ ಮನ್ನಣೆಯನ್ನು ಗಳಿಸಿದ್ದಿತು. ತಮಿಳುನಾಡಿನ ಆಡ್ಯಾರ್ ಎಂಬಲ್ಲಿ ನೆಲೆಸಿ, ಅಲ್ಲಿ ಥಿಯಾಸೊಫಿಕಲ್ ಸೊಸೈಟಿಯ ಮೂಲಕ ಈ ಕೃತಿಯನ್ನು ಮರುಮುದ್ರಣಗೊಳಿಸಿ ಭಾರತೀಯರಲ್ಲಿ ರಾಷ್ಟ್ರೀಯತೆಯನ್ನು ಉದ್ದೀಪನಗೊಳಿಸುವಲ್ಲಿ ಅನಿಬೆಸೆಂಟ್‌ರು ಶ್ರಮಿಸಿದರು.

ನಂತರದಲ್ಲಿ ಗೀತೆಯನ್ನು ಸಂಶೋಧನೆಯ ರೀತಿಯಲ್ಲಿ ಅಭ್ಯಸಿಸಿ ವ್ಯಾಖ್ಯಾನಗೊಳಿಸಿದವರು ಲೋಕಮಾನ್ಯ ಬಾಲಗಂಗಾಧರ ತಿಲಕರು. ಇವರು ೧೯೧೫ರಲ್ಲಿ ಶ್ರೀಮದ್ಭಗವದ್ಗೀತಾ ರಹಸ್ಯ ಅಥವಾ ಕರ್ಮಯೋಗ ಎಂಬ ಹೆಸರಿನಲ್ಲಿ ಭಗವದ್ಗೀತೆಯನ್ನು ಮರಾಠಿ ಭಾಷೆಗೆ ಅನುವಾದಿಸಿ, ಕರ್ಮಯೋಗದ ಮಹತ್ವವನ್ನು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಇವರ ಅನುವಾದ ಭಾರತದಾದ್ಯಂತ ಬಹುದೊಡ್ಡ ಸಂಚಲನವನ್ನೇ ಉಂಟುಮಾಡಿತು. ಬ್ರಿಟಿಷ್ ಪ್ರಭುತ್ವದೆದುರು ಭಾರತದ ಜನಸಾಮಾನ್ಯರನ್ನು ಒಂದುಗೂಡಿಸುವ ಕಾರ್ಯವನ್ನು ಇದು ಸಾಧ್ಯವಾಗಿಸಿತು. ಇವರ ಈ ಕೃತಿ ಎಲ್ಲರ ಪ್ರಶಂಸೆಗೆ ಒಳಪಟ್ಟು ಆಚಾರ್ಯ ಕೃತಿ ಎಂದು ಹೆಸರು ಪಡೆದು ಇಂಗ್ಲಿಷ್, ತಮಿಳು, ತೆಲುಗು, ಹಿಂದಿ, ಗುಜರಾತಿ, ಬಂಗಾಳಿ ಮುಂತಾದ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿತು. ಈ ಕೃತಿಯನ್ನು ಆಲೂರು ವೆಂಕಟರಾವ್ ಮತ್ತು ಕೆರೂರು

ವಾಸುದೇವಾಚಾರ್ಯ ಅವರು ೧೯೧೯ರಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಕೃತಿಯು ೨ ಮುಖ್ಯ ಭಾಗಗಳನ್ನು ಒಳಗೊಂಡಿದೆ. ೧. ಗೀತೆಯ ವಿಚಾರಗಳನ್ನು ತಾತ್ವಿಕವಾಗಿ ಮತ್ತು ತೌಲನಿಕವಾಗಿ ವಿವೇಚಿಸಿರುವುದು ೨. ಗೀತೆಯ ಅನುವಾದ ಭಾಗ. ಮೊದಲ ಭಾಗವನ್ನು ಆಲೂರರು ಅನುವಾದ ಮಾಡಿದ್ದರೆ, ಎರಡನೇ ಭಾಗವಾದ ಗೀತಾ ಶ್ಲೋಕಗಳ ಭಾಷಾಂತರ ಟಿಪ್ಪಣಿಗಳ ಅನುವಾದದ ಕಾರ್ಯವನ್ನು ಕೆರೂರು ವಾಸುದೇವಾಚಾರ್ಯರು ಮಾಡಿದ್ದಾರೆ. ಕನ್ನಡದಲ್ಲಿಯೂ ಈ ಕೃತಿ ಜನಪ್ರಿಯತೆಯನ್ನು ಪಡೆದು ಮೂರು ಮುದ್ರಣಗಳನ್ನು ಕಂಡಿತ್ತು. ಈ ಕೃತಿಯನ್ನು ಸ್ವತಃ ತಿಲಕರೇ ಪ್ರಕಾಶಿಸಿದ್ದಾರೆ.

ಮಹರ್ಷಿ ಅರಬಿಂದೋ ಅವರು ೧೯೧೬ರಿಂದ ೧೯೧೮ರವರೆಗೆ ಆರ್ಯ ಮಾಸಪತ್ರಿಕೆಯಲ್ಲಿ ಗೀತೆಯ ಮೇಲೆ ಪ್ರಬಂಧಗಳನ್ನು ಬರೆದು ಪ್ರಕಟಿಸಿದರು. ಈ ಪ್ರಬಂಧಗಳು ೧೯೨೨ರಲ್ಲಿ 'Essays on Gita' ಎಂದು ೨ ಸಂಪುಟಗಳಲ್ಲಿ ಪ್ರಕಟವಾಗಿವೆ. ಈ ಸಂಪುಟಗಳನ್ನು ಅರಬಿಂದೋ ಆಶ್ರಮ, ಪಾಂಡಿಚೇರಿ ಇವರು ಪ್ರಕಾಶಿಸಿದ್ದಾರೆ. ಇವರ ಗೀತಾ ವಿಚಾರಗಳು 'ಗೀತಾ ಪ್ರಬಂಧಗಳು' ಎಂದು ಕನ್ನಡಕ್ಕೆ ಅನುವಾದವಾಗಿವೆ. ಇವರ ಇದೇ ಕೃತಿ 'ಗೀತಾದರ್ಶನ' ಎಂದು ಕನ್ನಡಕ್ಕೆ ಅನುವಾದಗೊಂಡಿದೆ. ಅಗರಂ ವೆಂಕಟರಾಮ ಪಂಡಿತ, ಎ. ವೆಂಕಟಸುಬ್ಬಯ್ಯ, ಎ. ವೆಂಕಟರಾಂ ೧೯೬೧ರಲ್ಲಿ ಅನುವಾದಿಸಿದ್ದಾರೆ. ಸಾರಸ ವಿಹಾರ, ಮೈಸೂರು ಇವರು ಈ ಕೃತಿಯನ್ನು ಪ್ರಕಾಶಿಸಿದ್ದಾರೆ.

ತಿಲಕರ ನಂತರ ಗೀತೆಯ ಸ್ಥಾನಕ್ಕೆ ಬೇರೊಂದು ಮಹತ್ತನ್ನು ತಂದುಕೊಟ್ಟವರು ಗಾಂಧೀಜಿ ಅವರು. ಗಾಂಧೀಜಿ ಅವರಿಗೆ ಭಗವದ್ಗೀತೆ ಗೀತಾಮಾತೆಯಾಗಿ, ಅನಾಸಕ್ತಿಯೋಗವಾಗಿ ಬಹಳ ಪ್ರಿಯವಾಗಿದ್ದಿತು. ೧೮೮೮-೮೯ರಲ್ಲಿ ಎಡ್ವಿನ್ ಆರ್ನಾಲ್ಡ್‌ರ ಪದ್ಯಾನುವಾದವನ್ನು ಓದಿದ ಗಾಂಧಿ ಅವರಿಗೆ ಗೀತೆಯ ಅಧ್ಯಯನದಲ್ಲಿ ಆಸಕ್ತಿ ಹುಟ್ಟಿತು. ಮುಂದೆ ಅವರು ಲೋಕಮಾನ್ಯ ತಿಲಕರ ಗುಜರಾತಿ ಭಾಷಾಂತರ ಮತ್ತು ಇತರ ಗೀತೆಯ ಅನುವಾದಗಳನ್ನು ಓದಿ ಗೀತೆಯ ಬಗೆಗೆ ಆಳವಾದ ಅಧ್ಯಯನವನ್ನು ಮಾಡತೊಡಗಿದರು. ಅದರ ಫಲವಾಗಿ ೧೯೨೯ರಲ್ಲಿ ತಾವೇ ಗುಜರಾತಿ ಭಾಷಾಂತರವನ್ನು 'ಅನಾಸಕ್ತಿಯೋಗ' ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಗಾಂಧಿ ಅವರು ಗೀತೆಯ ಅರ್ಥವನ್ನು ಅನಾಸಕ್ತಿ ಅಥವಾ ಸ್ವಾರ್ಥರಹಿತ ಕರ್ಮ ಎಂದು ತಿಳಿದಿದ್ದಾರೆ. ಗೀತೆಯನ್ನು ಅವರು ಅಸ್ಪೃಶ್ಯತೆಯೆಂಬ ಮೌಢ್ಯಾಚರಣೆಯನ್ನು ಹೋಗಲಾಡಿಸುವ ಪ್ರಯತ್ನಪೂರ್ವಕ ಗ್ರಂಥವಾಗಿ, ಭಾವೈಕ್ಯತೆಯ ಸಂಕೇತವಾಗಿ, ಆತ್ಮಸಾಕ್ಷಾತ್ಕಾರ ಮತ್ತು ಅದರ ಸಾಧನ ಮಾರ್ಗಗಳೆಂದು, ಅಹಿಂಸೆ ಮತ್ತು ಶಾಂತಿಯ ಸಂಕೇತವೆಂದು ವಿಶಾಲಾರ್ಥದಲ್ಲಿ ಚಿಂತಿಸಿರುವುದರಿಂದ ಅವರ ಈ ಅನುವಾದ ಮತ್ತು ಗೀತೆಯ ಬಗೆಗಿನ ಅವರ ಮಾತುಗಳು, ನಿಲುವುಗಳು ಭಗವದ್ಗೀತೆಯನ್ನು ಮತ್ತಷ್ಟು ಪೂಜ್ಯ ಭಾವನೆಯೆಡೆಗೆ ಕೊಂಡೊಯ್ದುವು. ಅವರ ಈ ಕೃತಿಯು ಜನಪ್ರಿಯತೆಯನ್ನು ಪಡೆದುಕೊಳ್ಳುವುದರೊಂದಿಗೆ ಭಾರತೀಯರಲ್ಲಿ ವಸಾಹತುಶಾಹಿಯ ವಿರುದ್ಧ ರಾಷ್ಟ್ರೀಯ ಏಕತೆಯನ್ನು ಉಂಟುಮಾಡುವಲ್ಲಿ ಬೀಜರೂಪಿಯಾದ ತಳಹದಿಯನ್ನು ನಿರ್ಮಿಸಿಕೊಳ್ಳಲು ಸಹಕಾರಿಯಾಯಿತು.

'ಅನಾಸಕ್ತಿ ಯೋಗ' ಕೃತಿಯು ಇತರ ಭಾರತೀಯ ಭಾಷೆಗಳಿಗೂ ಭಾಷಾಂತರಗೊಂಡಿದೆ. ಅದರಂತೆ ೧೯೩೦ರಲ್ಲಿ ದ.ಕೃ. ಭಾರದ್ವಾಜ ಅವರು ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇದನ್ನು ತುಳಸಿದಾಸ ರಾಮಾಯಣ ಕಾರ್ಯಾಲಯ, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಇದೇ ಕೃತಿಯ ಅನುವಾದವನ್ನು ಸಿದ್ದವನಹಳ್ಳಿ ಕೃಷ್ಣಶರ್ಮ ಅವರು ಸಿದ್ಧಗೊಳಿಸಿ, ೧೯೫೮ ಮತ್ತು ೧೯೬೪ರಲ್ಲಿ ಗಾಂಧಿ ಸ್ಮಾರಕನಿಧಿ, ಬೆಂಗಳೂರು ಇವರ ವತಿಯಿಂದ ಪ್ರಕಾಶಿಸಿದ್ದಾರೆ. ಇದೇ ಕೃತಿಯ ಮತ್ತೊಂದು ಅನುವಾದವೂ ಇದ್ದು ಶ್ರೀ ನಿಟ್ಟೂರು ಶ್ರೀನಿವಾಸರಾವ್ ಮತ್ತು ಅವರ ಧರ್ಮಪತ್ನಿ ಪದ್ಮಮ್ಮ ಅವರು ಲೋಕಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ ಇವರಿಗಾಗಿ ಅನುವಾದಿಸಿದ್ದಾರೆ. ೧೯೯೮ರಲ್ಲಿ ಇದರ ೨ನೇ ಮುದ್ರಣದ ಆವೃತ್ತಿ ಪ್ರಕಟಗೊಂಡಿದೆ.

ಗಾಂಧಿ ಅವರ ಅನುಯಾಯಿಯಾದ ವಿನೋಬಾ ಭಾವೆ ಅವರು ೧೯೩೨ರಲ್ಲಿ ಧುಳೇ ಜೈಲಿನಲ್ಲಿ ಅನೇಕ ಸಂತ ಸೇವಕರಿಗೆ ಗೀತೆಯನ್ನು ಸುಲಭವಾಗಿ ಅರ್ಥೈಸುವ ಸಲುವಾಗಿ ಪ್ರವಚನವನ್ನು ನೀಡಿದರು. ಅದು 'ಗೀತಾ ಪ್ರವಚನ' ಎಂಬ ಹೆಸರಿನಲ್ಲಿ ಮುದ್ರಣಗೊಂಡಿದೆ. ಈ ಕೃತಿಯನ್ನು ಸಿದ್ದವನಹಳ್ಳಿ ಕೃಷ್ಣಶರ್ಮ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಸರ್ವ ಸೇವಾಸಂಘ ಪ್ರಕಾಶನ ಬೆಂಗಳೂರು ಇವರು ಪ್ರಕಾಶಿಸಿದ್ದಾರೆ. ಸುಮಾರು ೧೨ ಭಾಷೆಗಳಿಗೆ ಈ ಕೃತಿಯು ಅನುವಾದಗೊಂಡು ಲಕ್ಷಾಂತರ ಪ್ರತಿಗಳು ಮುದ್ರಣಗೊಂಡಿವೆ. ದಿನಬಳಕೆಯ ಮಾತಿನಲ್ಲಿಯೇ ಗೀತೆಯ ಅರ್ಥವನ್ನು ಈ ಕೃತಿಯಲ್ಲಿ ವಿವರಿಸಿ ಹೇಳಿರುವುದರಿಂದ ಸಾಮಾನ್ಯರಿಗೂ ಗೀತಾರ್ಥ ವಿಚಾರಗಳು ಅರ್ಥವಾಗುತ್ತವೆ.

ಚಕ್ರವರ್ತಿ ರಾಜಗೋಪಾಲಾಚಾರ್ಯ ಅವರು ೧೯೩೦ರಲ್ಲಿ ಭಗವದ್ಗೀತೆಯನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದಾರೆ. ಇವರು ೧೯೫೮ರಲ್ಲಿ ಗೀತೆಯನ್ನು ತಮಿಳಿಗೆ ಭಾಷಾಂತರಿಸಿದರು. ಅವರ ಈ ಭಾಷಾಂತರದಲ್ಲಿ ಕೆಲವು ಟಿಪ್ಪಣಿಗಳನ್ನೂ ಸಹ ನೀಡಿದ್ದಾರೆ. ತಮ್ಮ ಈ ಭಾಷಾಂತರ ಕೃತಿಗೆ 'ಕೈದೀಪ' ಎಂದು ಹೆಸರು ಕೊಟ್ಟಿದ್ದರು. ರಾಜಾಜಿ ಅವರ ಇದೇ ಭಗವದ್ಗೀತೆಯ ಅನುವಾದದ ಕೃತಿಯನ್ನು 'ರಾಜಾಜಿ ಭಗವದ್ಗೀತೆ' ಎಂತಲೇ ಕೆ. ಸಂಪದ್ಗಿರಿರಾವ್ ಅವರು ೧೯೫೮ರಲ್ಲಿ ವ್ಯಾಸ ಪ್ರಕಾಶನ ಸಂಸ್ಥೆ ಬೆಂಗಳೂರು ಇವರಿಗಾಗಿ ಅನುವಾದಿಸಿಕೊಟ್ಟಿದ್ದಾರೆ. ಈ ಕೃತಿ ವ್ಯಾಸ ಪ್ರಕಾಶನದಿಂದಲೇ ನಾಲ್ಕೈದು ಪ್ರಕಟಣೆಗಳನ್ನು ಕಂಡಿದೆ. ಈ ಅನುವಾದ ಕೃತಿಯ ವಿಶೇಷವೆಂದರೆ ಪ್ರತಿಯೊಂದು ಅಧ್ಯಾಯದ ಪ್ರಾರಂಭದಲ್ಲಿ ಹಾಗೂ ಅಧ್ಯಾಯದ ಕೊನೆಯಲ್ಲಿ ಆಯಾ ಅಧ್ಯಾಯದ ಉದ್ದೇಶವನ್ನು ಹಾಗೂ ಆಯಾ ಅಧ್ಯಾಯಗಳ ಸಾರವನ್ನು ಅನುವಾದಕರು ತಮ್ಮ ತಾತ್ವಿಕ ದೃಷ್ಟಿಕೋನದ ಮೂಲಕ ವಿವರಣೆಯನ್ನು ನೀಡಿದ್ದಾರೆ. ಈ ಕೃತಿಗೆ ಶ್ರೀ ಡಿ.ವಿ. ಗುಂಡಪ್ಪ ಅವರು ಮುನ್ನುಡಿಯನ್ನು ಬರೆದಿದ್ದಾರೆ. ಇದರಲ್ಲಿ ಲೇಖಕರು "ಗೀತಾಬೋಧನೆ ಮೂಲಭೂತವಾಗಿ ಧಾರ್ಮಿಕ ಸ್ವರೂಪದಿಂದ ಕೂಡಿದೆ. ಇದು ಹಿಂದೂ ಧರ್ಮದ ಪರಮ ಪವಿತ್ರಗ್ರಂಥ. ಹಿಂದೂಗಳು ಈ ದೃಷ್ಟಿಯಿಂದಲೇ ಇಂದೂ ಗೀತೆಯನ್ನು ನೋಡುತ್ತಿದ್ದಾರೆ.

ಆದರೆ ಈ ದೃಷ್ಟಿಯಿಂದ ಇದು ಆಧುನಿಕ ಭಾರತದ ಪವಿತ್ರಗ್ರಂಥವಾಗದೆ, ಇಂದಿನ ಅಗತ್ಯಗಳಿಗೆ ಹೊಂದುವ ಹೊಸ ನೈತಿಕ ಸಾಮಾಜಿಕ ಮತ್ತು ರಾಜಕೀಯ ಸಂದೇಶವನ್ನು ನೀಡುವ ಪ್ರಮಾಣಗ್ರಂಥವೆಂಬ ದೃಷ್ಟಿಯಿಂದ ಇದು ಪವಿತ್ರಗ್ರಂಥವಾಯಿತು" ಎಂದು ಗೀತೆಯ ಬಗೆಗೆ ಹೇಳಿದ್ದಾರೆ. ಇವರು ಈ ಕೃತಿಯಲ್ಲದೆ ತಮಿಳಿನಲ್ಲಿ ಗೀತೆಯ ಮುಖ್ಯಶ್ಲೋಕಗಳು ಮತ್ತು ಅವುಗಳ ಅನುವಾದವನ್ನೊಳಗೊಂಡ ಮತ್ತೊಂದು ಕೃತಿಯನ್ನು ರಚಿಸಿದ್ದಾರೆ ಎಂದು ತಿಳಿದುಬಂದಿದೆ. ಈ ಕೃತಿಯನ್ನು ೧೯೩೮ರಲ್ಲಿ ಸಂಪದ್ಗಿರಿರಾಯರು 'ಶ್ರೀ ಕೃಷ್ಣನು ತೋರಿದ ದಾರಿ' ಎಂದು ಕನ್ನಡಕ್ಕೆ ಅನುವಾದಿಸಿದ್ದಾರೆ. ಇದನ್ನು ಬೆಂಗಳೂರಿನ ಸತ್ಯಶೋಧನ ಪ್ರಕಟಣ ಮಂದಿರ ಪ್ರಕಾಶಿಸಿದೆ. ರಾಜಾಜಿ ಅವರು ಈ 'ಭಗವದ್ಗೀತಾ' ಕೃತಿಯನ್ನು ವಿಶ್ವವಿದ್ಯಾಲಯಗಳ ಯುವಕ ಯುವತಿಯರನ್ನು ಗಮನದಲ್ಲಿಟ್ಟುಕೊಂಡು ರಚಿಸಿದ್ದಾರೆ. ಜೀವ, ಕರ್ಮ, ದೇವರು ಮತ್ತು ಪ್ರಕೃತಿ, ಯುಕ್ತಕರ್ಮ, ಮನೋನಿಗ್ರಹದ ಅಭ್ಯಾಸ, ಧ್ಯಾನಾಭ್ಯಾಸ, ಆನುವಂಶಿಕ ಪ್ರವೃತ್ತಿಗಳು, ಆಶಾಕಿರಣ, ನಾಸ್ತಿಕ್ಯ, ಧ್ಯೇಯಗಳು-ನಿಯಮಗಳು-ಆಹಾರ, ಆತ್ಮ ಸಮರ್ಪಣೆ ಮತ್ತು ಅನುಗ್ರಹ, ಏಕಾತ್ಮಭಾವ, ಅದ್ವೈತ ಮತ್ತು ಗೀತೆ, ಪರಾಮಾತ್ಮ ದರ್ಶನ ಹೀಗೆ ಗೀತೆಯನ್ನು ಮೇಲಿನ ಅರ್ಥಗಳಿಗೆ ಹೊಂದಿಕೆಯಾಗುವಂತೆ ಸಂಗ್ರಹಿಸಿದ್ದಾರೆ. ಇದರ ಅನುವಾದವನ್ನು ಟಿ.ಎನ್. ಪದ್ಮನಾಭನ್ ಮಾಡಿದ್ದಾರೆ. ೧೯೮೭ರಲ್ಲಿ ಬೆಂಗಳೂರಿನ ಭಾರತೀಯ ವಿದ್ಯಾಭವನ ಈ ಕೃತಿಯನ್ನು ಪ್ರಕಾಶಿಸಿದೆ.

೧೯೪೩ರಲ್ಲಿ ಶ್ರೀಪಾದಕೃಷ್ಣ ಬೆಳವಾಳ್ಕರ್ ಅವರು ಭಗವದ್ಗೀತೆಯನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದು ಈ ಕೃತಿ ಬಹಳ ಚರ್ಚೆಗೆ ಒಳಗಾಗಿ ಜನಪ್ರಿಯತೆಯನ್ನು ಪಡೆದಿದೆ. ಈ ಕೃತಿಯನ್ನು ಬಿಲ್ವಕುಂಜ ಪಬ್ಲಿಷಿಂಗ್ ಹೌಸ್ ಪ್ರಕಾಶಿಸಿದೆ. ಭಾರತದ ಮೊದಲ ರಾಷ್ಟ್ರಪತಿಯಾದ ಡಾ. ಎಸ್. ರಾಧಾಕೃಷ್ಣನ್ ಅವರು ಭಗವದ್ಗೀತೆಯನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದು ಅವರ ಗೀತಾರ್ಥ ವಿಚಾರಗಳು ಆಳವಾದ ಭಾರತೀಯ ತತ್ವಶಾಸ್ತ್ರದ ಅಧ್ಯಯನದಿಂದ ರೂಪುಗೊಂಡಿವೆ ಎನ್ನಬಹುದಾಗಿದೆ. ೧೯೪೮ರಲ್ಲಿ ಪ್ರಕಟವಾದ ಇವರ The Bhagavadgita ಕೃತಿಯನ್ನು ಲಂಡನ್ನಿನ George Allen and Unwill LTD ಪ್ರಕಾಶನ ಸಂಸ್ಥೆ ಪ್ರಕಟಿಸಿದೆ.

ಹೀಗೆ ಇಂಗ್ಲಿಷ್ ಮತ್ತು ಇತರ ಭಾರತೀಯ ಭಾಷೆಗಳಲ್ಲಿ ಭಗವದ್ಗೀತೆಯ ಅನುವಾದಗಳು ಅಸಂಖ್ಯವಾಗಿವೆ. ಇಂಗ್ಲಿಷ್ ಮತ್ತು ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡ ಕೆಲವು ಅತಿ ಮುಖ್ಯ ಅನುವಾದಗಳನ್ನು ಮಾತ್ರ ಇಲ್ಲಿ ಸಂಕ್ಷಿಪ್ತವಾಗಿ ಹೆಸರಿಸಲಾಗಿದೆ. ಈ ಅನುವಾದಗಳಲ್ಲಿ ಹಲವು ಕನ್ನಡ ಭಾಷೆಗೂ ಅನುವಾದಗೊಂಡಿರುವುದನ್ನು ಇಲ್ಲಿ ತಿಳಿಸಲಾಗಿದೆ.

೨.೧. ಸಂಸ್ಕೃತದಿಂದ ಕನ್ನಡಕ್ಕೆ ಬಂದ ಗೀತೆಯ ಅನುವಾದಗಳು

ಕನ್ನಡದಲ್ಲಿ ಪಂಪನಿಂದ-ಮುದ್ದಣ, ಕುವೆಂಪುವಿನಿಂದ-ಇಂದಿನವರೆಗೆ ಒಂದಲ್ಲಾ ಒಂದು ರೀತಿಯಲ್ಲಿ ಭಗವದ್ಗೀತೆಯನ್ನು ಅನುಸಂಧಾನಿಸಿದ್ದಾರೆ. ಈ ಕವಿಗಳೆಲ್ಲರೂ ಭಗವದ್ಗೀತೆಯನ್ನು ತಮ್ಮ ಕಾವ್ಯಗಳಲ್ಲಿ ಹಿಡಿದಿಡಲು ಪ್ರಯತ್ನಿಸಿದ್ದಾರೆ. ಇವೂ ಕೂಡ ಅನುವಾದವೇ ಆಗಿವೆ.

ಇವರು ಗೀತೆಯ ಶ್ಲೋಕಗಳಿಗೆ ಯಥಾವತ್ ಅನುವಾದಗಳ ಬದಲು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವ್ಯಾಖ್ಯಾನಿಸಿರುವುದನ್ನು ಕಾಣಬಹುದಾಗಿದೆ.

ಪಂಪ, ಕುಮಾರವ್ಯಾಸ ಮುಂತಾದವರ ಕೃತಿಗಳಲ್ಲಿ ಗೀತೆಯ ಅರ್ಥವನ್ನು ಆಂಶಿಕವಾಗಿ ಹಿಡಿದಿಟ್ಟಿರುವುದನ್ನು ಕಾಣಬಹುದಾಗಿದೆ. ಇವರ ನಂತರ ನಾಗರಸ ಎನ್ನುವ ಬ್ರಾಹ್ಮಣ ಕವಿ ಕ್ರಿ.ಶ. ಸು.೧೬೫೦ರಲ್ಲಿ ಭಗವದ್ಗೀತೆಯನ್ನು ಸಂಪೂರ್ಣವಾಗಿ ಷಟ್ಪದಿ ಛಂದಸ್ಸಿನಲ್ಲಿ ರಚಿಸಿದ್ದಾನೆ. ಇವನ ಭಗವದ್ಗೀತೆ ಕೃತಿಯಲ್ಲಿ ೧೯ ಅಧ್ಯಾಯಗಳು, ೭೩೭ ಪದ್ಯಗಳು ಇವೆ. ಇವನು ಗೀತೆಯ ಪ್ರತಿ ಶ್ಲೋಕದ ಅರ್ಥವನ್ನು ಒಂದೊಂದು ಷಟ್ಪದಿಯಲ್ಲಿ ವಿವರಿಸಿದ್ದಾನೆ. ಇವನ ನಂತರ ನೈರಕ್ಷರಸುಕುಕ್ಷಿ(ಈತನು ತನ್ನ ಹೆಸರನ್ನು ಸ್ಪಷ್ಟವಾಗಿ ಹೇಳಿಕೊಂಡಿಲ್ಲ. ಕವಿಚರಿತೆಕಾರರು ಈತನ ಹೆಸರನ್ನು ಹೀಗೆ ಊಹಿಸಿದ್ದಾರೆ.) ಎನ್ನುವ ಮಾಧ್ವಕವಿ ಭಾಮಿನೀ ಷಟ್ಪದಿಯಲ್ಲಿ ಭಗವದ್ಗೀತೆಯನ್ನು ಸು.೧೭೫೦ರಲ್ಲಿ ರಚಿಸಿದ್ದಾನೆ. ಇವನು ೧೭ ಸಂಧಿ, ೬೨೯ ಪದ್ಯಗಳಲ್ಲಿ ತನ್ನ ಕೃತಿಯನ್ನು ರಚಿಸಿದ್ದಾನೆ. ಇವನು ಪ್ರತಿ ಶ್ಲೋಕಕ್ಕೂ ಕನ್ನಡ ಷಟ್ಪದಿಗಳನ್ನು ರಚಿಸಿದ್ದಾನೆ. ಈತನು ಮಾಧ್ವಭಾಷ್ಯವನ್ನು ಅನುಸರಿಸಿ ಗೀತಾರ್ಥವನ್ನು ವಿವರಿಸಿದಂತೆ ಕಾಣುತ್ತದೆ ಎಂದು ಕವಿಚರಿತೆಕಾರರು ತಿಳಿಸಿದ್ದಾರೆ.

ಕರ್ನಾಟಕದ ದಾಸ ಪರಂಪರೆಯಲ್ಲೂ ಭಗವದ್ಗೀತೆಯು ಅನುವಾದವಾಗಿರುವುದನ್ನು ಕಾಣಬಹುದಾಗಿದೆ. ೧೮ನೇ ಶತಮಾನದ ಕೊನೆಯ ಭಾಗ ಅಥವಾ ೧೯ನೇ ಶತಮಾನದ ಆದಿಯಲ್ಲಿ ಮೈಸೂರಿನ ಭಾಗದಲ್ಲಿದ್ದ ಕೃಷ್ಣದಾಸ ಎನ್ನುವವರು ಭಾಮಿನೀ ಷಟ್ಪದಿಯಲ್ಲಿ ಭಗವದ್ಗೀತೆಯ ರಚನೆಯನ್ನು ಮಾಡಿದ್ದಾರೆ. ಇವರು ಗೋಪಾಲದಾಸರ ಶಿಷ್ಯರೆಂದು ತಿಳಿದುಬರುತ್ತದೆ. ಗೋಪಾಲದಾಸರ ಮತ್ತೊಬ್ಬ ಶಿಷ್ಯರಾದ ಆನಂದದಾಸರು(೧೯ನೇ ಶತಮಾನದ ಮಧ್ಯಭಾಗ) ಗೀತೆಯನ್ನು ಅನುವಾದಿಸಿದ್ದಾರೆ. ಗೀತೆಯನ್ನು ಹಾಡಿನ ರೂಪಕ್ಕೆ ತರುವ ಆಶಯದಿಂದ ಶರೀರ, ಅಹಂಕಾರ–ಮಮಕಾರ ಮತ್ತು ಭಕ್ತಿ ವೈರಾಗ್ಯ ಎಂಬ ಮೂರು ವಿಭಾಗಗಳನ್ನು ಅಧ್ಯಾತ್ಮ ರೀತಿ ಮಾಡಿಕೊಂಡು ಅದಕ್ಕನುಗುಣವಾಗಿ ಶ್ಲೋಕಗಳನ್ನು ಕವನಿಸಿದ್ದಾರೆ. ಇದೇ ರೀತಿಯಲ್ಲಿ ೧೮೯೦–೧೯೦೧ರ ವೇಳೆಗೆ ಅ.ನ.ಕೃಷ್ಣರಾಯರ ತಂದೆಯವರಾದ ಶ್ರೀ ಅರಕಲಗೂಡು ಕೃಷ್ಣಪ್ಪ (ಶ್ರೀ ಕೃಷ್ಣಯೋಗಿ) ಎಂಬುವವರು ಭಗವದ್ಗೀತೆಯ ತಿರುಳನ್ನು ಹಾಡುಗಳ ಮೂಲಕ ದಾಸರ ಪದಗಳ ಶೈಲಿಯಲ್ಲಿ ಕನ್ನಡಿಸಿದ್ದಾರೆ. 'ಭಗವದ್ಗೀತಾರ್ಥಸಾರ' ಎನ್ನುವ ಇವರ ಕೃತಿಯಲ್ಲಿ ಪ್ರತಿಯೊಂದು ಅಧ್ಯಾಯದ ಪದ್ಯಶಃ ಅನುವಾದವನ್ನು ಮಾಡದೆ ಅಧ್ಯಾಯದ ಮುಖ್ಯಾರ್ಥವನ್ನು ಕಲ್ಯಾಣಿ, ಬಿಲಾರಿ, ಕಾಂಬೋದಿ, ಮಧ್ಯಮಾವತಿ, ಮೋಹನ, ಮುಖಾರಿ, ಆನಂದಭೈರವಿ, ಶಂಕರಾಭರಣ, ಕೇದಾರಗೌಳ, ದೇವಗಾಂಧಾರಿ, ಬೆಹಾಗ್, ತೋಡಿ, ರೇಗುಪ್ತಿ ಮುಂತಾದ ವಿವಿಧ ರಾಗಗಳಲ್ಲಿ ರಚಿಸಿದ್ದಾರೆ. ಇವರು ಈ ಕೃತಿಯಲ್ಲಿ ೩೨೫ ಪದ್ಯಗಳಲ್ಲಿ ಗೀತೆಯನ್ನು ಸಂಗ್ರಹಿಸುವ ಕಾರ್ಯ ಮಾಡಿದ್ದಾರೆ. ಹಸ್ತಪ್ರತಿಯಾಗಿಯೇ ಉಳಿದಿದ್ದ ಈ ಕೃತಿಯನ್ನು ೧೯೫೬ರಲ್ಲಿ

ಅ.ನ.ಕೃಷ್ಣರಾಯರು ಸಂಪಾದಿಸಿದ್ದಾರೆ. ಇದನ್ನು ಸ್ಟ್ಯಾಂಡರ್ಡ್ ಬುಕ್ ಡಿಪೊ ಬೆಂಗಳೂರು ಇವರು ಪ್ರಕಾಶಿಸಿದ್ದಾರೆ.

ತುಪ್ಪಳ ವೆಂಕಟಾಚಾರ್ಯರು ಭಗವದ್ಗೀತೆಯ ವಿಶಿಷ್ಟ ಆವೃತ್ತಿಯೊಂದನ್ನು ಹೊರತಂದಿದ್ದಾರೆ. ಇವರು 'ಶ್ರೀಮದ್ಗೀತಾರ್ಥಸಾರದ' ಎಂಬ ತಮ್ಮ ಕೃತಿಯಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಈ ಮೂರು ಮತಗಳ ಭಾಷಾರ್ಥಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಮೂರು ಸಂಪುಟಗಳಲ್ಲಿ ಕೃತಿಯನ್ನು ಹೊರತಂದಿದ್ದಾರೆ. ಮೊದಲನೇ ಸಂಪುಟವನ್ನು ೧೮೯೮ರಲ್ಲಿ, ಎರಡನೇ ಸಂಪುಟವನ್ನು ೧೯೦೦ರಲ್ಲಿ, ಮೂರನೇ ಸಂಪುಟವನ್ನು ೧೯೦೧ರಲ್ಲಿ ಹೊರತಂದಿದ್ದಾರೆ. ಈ ಕೃತಿಯ ಮೊದಲನೇ ಸಂಪುಟವು ಶ್ರೀ ವಾಣಿವಿಲಾಸ ಮಹಾಸನ್ನಿಧಾನ, ಮೈಸೂರು ಮಹಾರಾಣಿ ಇವರಿಂದ ಪ್ರಕಾಶಿಸಲ್ಪಟ್ಟಿದೆ. ರಾಮಕೃಷ್ಣಸೂರಿ ಎನ್ನುವವರು 'ಶ್ರೀಭಗವದ್ಗೀತಾ' ಎನ್ನುವ ಕೃತಿಯನ್ನು ಕನ್ನಡ ಟೀಕೆಯೊಂದಿಗೆ ರಚಿಸಿದ್ದಾರೆ. ಇದರ ಎರಡನೇ ಮುದ್ರಣವು ೧೮೯೫ರಲ್ಲಿ ಹೊಳಕಲ್ಲು ನರಸಿಂಗರಾವ್ ಮತ್ತು ಮಕ್ಕಳಿಂದ ಪ್ರಕಾಶಿಸಲ್ಪಟ್ಟಿದೆ.

ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿ ಅವರು ೧೯೨೯ರಲ್ಲಿ ಶ್ರೀಶಾಂಕರ ಭಾಷ್ಯ ಸಮೇತವಾದ ಶ್ರೀಮದ್ಭಗವದ್ಗೀತೆ ಎಂಬ ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯು ಯ. ಸುಬ್ರಮಣ್ಯಶರ್ಮ ಅವರಿಂದ ಸಂಸ್ಕರಿಸಿ ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ ಇವರಿಂದ ಪ್ರಕಟವಾಗಿದೆ. ಈ ಕೃತಿಯಲ್ಲಿ ಗೀತಾಭಾಷ್ಯದಲ್ಲಿರುವ ಶಬ್ದಗಳು, ವಾಕ್ಯಗಳ ಪಾಠ ಭೇದಗಳನ್ನು ಆದಷ್ಟು ಶೋಧಿಸುವ ಕಾರ್ಯವನ್ನು ಮಾಡಿದ್ದಾರೆ. ಮದರಾಸಿನ ತೆಲುಗು ಪ್ರತಿ ಮತ್ತು ನೀಲಕಂಠೀಯ, ಬ್ರಹ್ಮಾನಂದಗಿರೀಯ, ಶಂಕರಾನಂದ, ಶ್ರೀಧರ ವ್ಯಾಖ್ಯಾನ ಹಾಗೂ ಆನಂದಗಿರೀಯ ವ್ಯಾಖ್ಯಾನ ಮುಂತಾದ ಕೃತಿಗಳ ಸಹಾಯದಿಂದ ಶೋಧಿಸುವ ಕಾರ್ಯವನ್ನು ಮಾಡಿದ್ದಾರೆ. ಶ್ರೀ ಕೃಷ್ಣಜೋಯಿಸರ ಸಹಾಯವೂ ಈ ಪಾಠಾಂತರಗಳ ನಿರ್ಣಯದಲ್ಲಿ ದೊರೆತಿರುವುದನ್ನು ಸಂಸ್ಕರಣಕಾರರು ಸ್ಮರಿಸಿದ್ದಾರೆ. ಇದೇ ಸಂದರ್ಭದಲ್ಲಿ ಹೆಸರಿಸಬೇಕಾದ ಮತ್ತೊಂದು ಕೃತಿ ಹೊಸಕೆರೆ ಚಿದಂಬರಯ್ಯ ಅವರು ರಚಿಸಿದ 'ಗೀತಾರ್ಥ ಚಂದ್ರಿಕೆ'. ಇದರಲ್ಲಿ ಪ್ರತಿಯೊಂದು ಶ್ಲೋಕದ ಪದಶಃ ಅರ್ಥ ಮತ್ತು ಅಗತ್ಯವಾದ ವಿವರಣೆಯುಳ್ಳ ವ್ಯಾಖ್ಯಾನವಿದೆ. ಇದನ್ನು ಎಸ್.ಎಸ್.ಎನ್. ಬುಕ್ ಡಿಪೊ ಬೆಂಗಳೂರು ಇವರು ೧೯೨೯ರಲ್ಲಿ ಮೊದಲನೇ ಮುದ್ರಣ, ೧೯೫೪ರಲ್ಲಿ ಎರಡನೇ ಮುದ್ರಣವಾಗಿ ಪ್ರಕಾಶಿಸಿದ್ದಾರೆ. ಇವರೇ ಬರೆದ ಮತ್ತೊಂದು ಕೃತಿ 'ಮಕ್ಕಳ ಕೈಗೀತೆ'. ಶೀರ್ಷಿಕೆಯೇ ಹೇಳುವಂತೆ ಇದು ಮಕ್ಕಳಿಗಾಗಿ ರಚಿಸಿದ ಗೀತಾ ಪುಸ್ತಕವಾಗಿದೆ. ಈ ಕಿರುಕೃತಿಯಲ್ಲಿ ಗೀತೆಯ ಪ್ರತಿಯೊಂದು ಅಧ್ಯಾಯಗಳಲ್ಲಿನ ಶ್ಲೋಕಗಳಿಗೆ ಕನ್ನಡದಲ್ಲಿ ಭಾವಾರ್ಥವನ್ನು ನೀಡಿದ್ದಾರೆ. ಇದನ್ನು ಬೆಂಗಳೂರಿನ ಎಸ್.ಎಸ್.ಎನ್. ಬುಕ್ ಡಿಪೊ ಅವರು ಪ್ರಕಾಶಿಸಿದ್ದಾರೆ. ಮುಂದೆ ೧೯೩೦ರಲ್ಲಿ ಪಾಂಡುರಂಗೀ ಕೃಷ್ಣಾಚಾರ್ಯ ಅವರು 'ಶ್ರೀ ಭಗವದ್ಗೀತಾ' ಎನ್ನುವ ಕೃತಿಯನ್ನು ಸಂಪಾದಿಸಿದ್ದಾರೆ. ಈ ಕೃತಿಯು ತಿರುಪತಿ–

ತಿರ್ಚಾನೂರಿನ ಶ್ರೀಮನ್ಮಧ್ವ ಸಿದ್ಧಾಂತಾಭಿವೃದ್ಧಿಕಾರಿಣೀ ಸಭೆಯಿಂದ ಪ್ರಕಾಶಿಸಿದೆ. ಸಭೆಯಿಂದ ಪ್ರಕಾಶಿಸಿದೆ.

೧೯೦೦-೧೯೩೦ರವರೆಗೆ ಕನ್ನಡದಲ್ಲಿ ಭಗವದ್ಗೀತೆಯ ಹಲವು ಅನುವಾದಗಳಾಗಿರುವುದು ತಿಳಿದುಬರುತ್ತದೆ. ಅವುಗಳಲ್ಲಿ ಲಕ್ಷ್ಮೇಶ್ವರ ರಾಮಚಂದ್ರ(ಶಿವಾನಂದ ಸುಬ್ರಮಣ್ಯ) ಅವರು 'ಶ್ರೀಮದ್ ಭಗವದ್ಗೀತಾ ಗೂಢಾರ್ಥ ದೀಪಿಕಾ ಅಥವಾ ರಹಸ್ಯಾರ್ಥಪ್ರಭೋಧಿನೀ'(೧೯೧೩) ಎನ್ನುವ ಕೃತಿಯನ್ನು ಮೈಸೂರಿನ ತಿಮ್ಮಮ್ಮ ಎನ್ನುವವರ ಸಹಾಯದಿಂದ ಪ್ರಕಟಿಸಿದ್ದಾರೆ. ಈ ಕೃತಿಯು ೨ ಸಂಪುಟಗಳಲ್ಲಿದ್ದು, ಕೃತಿಕಾರರು ಮೂಲ ಶ್ಲೋಕಕ್ಕೆ ಪದದ ಅರ್ಥ, ಟೀಕೆ ಹಾಗೂ ವಿವರಣೆಗಳನ್ನು ನೀಡಿದ್ದಾರೆ.

ತತ್ವಜ್ಞಾನಕ್ಕೆ ಸಂಬಂಧಿಸಿದಂತೆ ನರಸಿಂಹ ನಾಯಕ ಅವರ ಭಗವದ್ಗೀತೆಯ ಅನುವಾದ, ಅವರಲ್ಲದೆ ಬಿ. ಶ್ರೀನಿವಾಸಭಟ್ಟ ಅವರ 'ಭಗವದ್ಗೀತಾ ಸುಖಬೋಧಿನಿ'(೧೯೧೮), ವೆಂಕಟೇಶ ತಿರಕೋ ಕುಲಕರ್ಣಿ(ಗಳಗನಾಥ) ಅವರ 'ಗೀತಾವಲೋಕನ', ವಲ್ಲಭ ಮಹಲಿಂಗ ತಟ್ಟಿ ಅವರ 'ಗೀತಾವಲೋಕನ', ಲಿಂಗೇಶಶರ್ಮ ಕುರ್ತಕೋಟಿ ಅವರ 'ಭಗವದ್ಗೀತಾಸಾರವಿಚಾರ' ಮುಂತಾದ ರಚನೆಗಳಿರುವುದು ತಿಳಿದುಬರುತ್ತದೆ. ಧರ್ಮಕ್ಕೆ ಅನ್ವಯಿಸಿದಂತೆ ಅಪ್ಪಯ್ಯ ಕೊರವಂಡ ಅವರು 'ಭಗವದ್ಗೀತೆ'(೧೯೦೫) ರಚಿಸಿದ್ದಾರೆ. ಇದಲ್ಲದೆ ಈ ಕಾಲದಲ್ಲಿ ಕಾವ್ಯ ಪ್ರಕಾರದಲ್ಲಿ ಭಗವದ್ಗೀತೆಯನ್ನು ರಚಿಸಿದವರಿದ್ದಾರೆ. ಅವರಲ್ಲಿ ಮುದ್ದಣ ಕವಿಯು ೧೯೦೦ಕ್ಕೂ ಮುಂಚೆ ಭಾಮಿನೀ ಷಟ್ಪದಿಯಲ್ಲಿ ಭಗವದ್ಗೀತೆಯನ್ನು ಕಾವ್ಯರೂಪದಲ್ಲಿ ರಚಿಸಿದ್ದಾನೆ ಎಂದು ತಿಳಿದುಬರುತ್ತದೆ. ಇದೇ ಕಾಲಮಾನದಲ್ಲಿ ಮುದವರ್ತಿಶೇಷ(೧೭೭೯-೧೮೭೮), ಲಕ್ಷಣ ಬಾಬಣಿ ಪೈ, ಕಣಿಲೆ ಪುಟ್ಟಪ್ಪ ಮುಂತಾದವರು ಭಗವದ್ಗೀತೆಯನ್ನು ಕನ್ನಡದಲ್ಲಿ ಪದ್ಯರೂಪದಲ್ಲಿ ಹಾಡಿದರೆಂದು ಡಾ. ಶ್ರೀನಿವಾಸ ಹಾವನೂರರು ತಮ್ಮ ಕೃತಿಯಲ್ಲಿ ತಿಳಿಸಿದ್ದಾರೆ. ಇವರಲ್ಲದೆ ನರಹರಿ ರಾಮಚಂದ್ರ ಕನಮಡಿ ಅವರು 'ಭಗವದ್ಗೀತೆ'(೧೯೨೨-೨೮), ಸುಬ್ರಮಣ್ಯಶರ್ಮ ಯಲ್ಲಂಬಳಸೆ ಅವರು 'ಗೀತಾಭಾಷ್ಯ' ಎಂಬ ಕೃತಿಗಳನ್ನು ಕಾವ್ಯ ಪ್ರಕಾರದಲ್ಲಿ ರಚಿಸಿದ್ದಾರೆ. ಇದಲ್ಲದೆ ವೈ. ನಾಗೇಶಶಾಸ್ತ್ರಿ ಅವರು 'ಶ್ರೀಮತ್ಕರ್ಣಾಟಕ ಭಗವದ್ಗೀತೆ'(೧೯೩೩) ಎನ್ನುವ ಕೃತಿಯನ್ನು ಕನ್ನಡ ಪದ್ಯಗಳಲ್ಲಿ ರಚಿಸಿದ್ದಾರೆ. ಇವರು ಗೀತೆಯನ್ನು ಕಂದಪದ್ಯಗಳಲ್ಲಿ ಹಾಗೂ ಕೆಲವು ಧೀರ್ಘವಾದ ಶ್ಲೋಕಗಳನ್ನು ವೃತ್ತಗಳಲ್ಲಿ ಪರಿವರ್ತಿಸಿ ರಚಿಸಿದ್ದಾರೆ. ಮೂಲದ ಎರಡೆರಡು ಶ್ಲೋಕಗಳಿಗೆ ಒಂದೊಂದು ಪದ್ಯವಾಗಿಯೂ ಕೆಲವೆಡೆಯಲ್ಲಿ ಪರಿವರ್ತಿಸಿದ್ದಾರೆ. ಇದನ್ನು ಮುಖ್ಯವಾಗಿ ಹೈಸ್ಕೂಲು, ಕಾಲೇಜುಗಳ ಕನ್ನಡ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗಿಡಲು ಅನುಕೂಲವಾಗುವಂತೆ ಸುಲಭಶೈಲಿಯಲ್ಲಿ ರಚಿಸಿದುದಾಗಿದೆ ಎಂದು ಕೃತಿಕಾರರು ಹೇಳಿದ್ದಾರೆ. ಇದನ್ನು ಬಳ್ಳಾರಿಯ ವೈ. ಮಹಾಬಲೇಶ್ವರಪ್ಪ ಅವರು ಪ್ರಕಾಶಿಸಿದ್ದಾರೆ.

ಭಾರತೀ ಸಂಪಂಗಿರಾಮ ಎಂಬುವವರು ೧೯೩೧ರಲ್ಲಿ 'ಶ್ರೀಮದ್ಭಗವದ್ಗೀತಾ' ಎಂಬ ಗೀತಾಕೃತಿಯನ್ನು ಅನುವಾದಿಸಿದ್ದಾರೆ. ಕೃತಿಕಾರರು ತಮ್ಮ ಅನುವಾದದಲ್ಲಿ ಮೂಲಶ್ಲೋಕಗಳಿಗೆ

ಶಂಕರ, ರಾಮಾನುಜ, ಮಧ್ವಾಚಾರ್ಯರ ಭಾಷ್ಯಗಳನ್ನು ನೀಡಿದ್ದಾರೆ. ಬೆಂಗಳೂರಿನ ಶ್ರೀನಿವಾಸಶೆಟ್ಟಿ ಎಂಬುವವರು ಇದನ್ನು ಪ್ರಕಟಿಸಿದ್ದಾರೆ. ೧೯೩೮ರಲ್ಲಿ ಎಂ.ಎಸ್. ಸುಬ್ಬಣ್ಣ ಎಂಬುವವರು 'ಕನ್ನಡ ಭಗವದ್ಗೀತೆ'ಯನ್ನು ಕುಸುಮ ಷಟ್ಪದಿಯಲ್ಲಿ ಬರೆದಿದ್ದಾರೆ. ಈ ಮೊದಲು ಕೆಲವರು ಗೀತೆಯನ್ನು ಭಾಮಿನೀ ಷಟ್ಪದಿಯಲ್ಲಿ ಬರೆದಿದ್ದರು. ಇವರ ತಮ್ಮನವರಾದ ಕಾಲವ ಸುಬ್ಬಣ್ಣ ಅವರು ಈ ಕೃತಿಯನ್ನು ಪ್ರಕಾಶಿಸಿದ್ದಾರೆ.

೧೯೩೯ರಲ್ಲಿ ಚಿದಂಬರ ಎನ್ನುವವರು ಭಗವದ್ಗೀತೆಯನ್ನು 'ನಿಷ್ಕಾಮಕರ್ಮಯೋಗ' ಎನ್ನುವ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಇದನ್ನು ಗುರುಸೇವಾ ಸಮಿತಿ, ಗುಬ್ಬಿ ಇವರು ಪ್ರಕಾಶಿಸಿದ್ದಾರೆ. ಈ ಕೃತಿಯು ಭಗವದ್ಗೀತೆಯ ಪ್ರತಿಪದಾರ್ಥ ಸಹಿತ ಮುದ್ರಿತವಾಗಿದೆ. ಅಷ್ಟೇ ಅಲ್ಲದೆ ಇದು ಪ್ರಶ್ನೋತ್ತರವನ್ನು ಒಳಗೊಂಡಿದೆ. ಪ್ರಶ್ನೋತ್ತರವನ್ನು ಸಂಭಾಷಣೆಯ ರೂಪದಲ್ಲಿ ಬರೆಯಲಾಗಿದೆ. ಹೀಗೆ ಪ್ರಶ್ನೋತ್ತರ, ಪದಶಃ ಅರ್ಥವನ್ನು ಒಳಗೊಂಡಿರುವುದರಿಂದ ಈ ಕೃತಿ ಭಿನ್ನವಾಗಿ ಕಾಣಿಸುತ್ತದೆ. ನಂತರದಲ್ಲಿ ಇದೇ ರೀತಿಯ ಮತ್ತೊಂದು ಕೃತಿಯು ಹೊರಬಂದಿದೆ. ಅದು ಶ್ರೀಮತ್ಸತ್ಯಧ್ಯಾನತೀರ್ಥ ಶ್ರೀಪಾದರು ರಚಿಸಿದ 'ಗೀತಾಸಾರಸಂಗ್ರಹ ಮತ್ತು ಗೀತಾಪ್ರತಿಪದಾರ್ಥ ಚಂದ್ರಿಕಾ'. ಈ ಕೃತಿಯ ಕನ್ನಡ ಅನುವಾದ ಮತ್ತು ಸಂಗ್ರಹದ ಕೆಲಸವನ್ನು ನಿರ್ವಹಿಸಿದವರು ವಿ.ಎನ್.ದೇಶಿಕಾಚಾರ್ಯ ಅವರು. ಇದು ೧೯೪೦ರಲ್ಲಿ ಧಾರವಾಡದ ಮದ್ವರಮಣಾಚಾರ್ಯ ರಾಘವೇಂದ್ರಾಚಾರ್ಯ ಗಲಗಲಿ ಅವರಿಂದ ಪ್ರಕಟಿಸಲ್ಪಟ್ಟಿದೆ. ಮುಂದೆ ೧೯೪೧ರಲ್ಲಿ ಶ್ರೀ ಮಲ್ಲಕ್ಷ್ಮೀಂದ್ರತೀರ್ಥ ಶ್ರೀಪಾದರು 'ಗೀತಾದರ್ಶ' ಕೃತಿಯನ್ನು ರಚಿಸಿದ್ದಾರೆ. ಇದು ೧ರಿಂದ ೬ ಅಧ್ಯಾಯಗಳವರೆಗಿನ ಟೀಕೆಯನ್ನು ಒಳಗೊಂಡಿದೆ.

ಗೀತೆಯ ವಿವಿಧ ಪ್ರಕಾರಗಳಲ್ಲಿ ರಚಿತವಾದ, ಅನುವಾದಿತವಾದ ಕೃತಿಗಳಲ್ಲಿ ವಿಶಿಷ್ಟವಾಗಿರುವ ಮತ್ತೊಂದು ಕೃತಿ 'ಭಗವದ್ಗೀತಾ ಸಾಂಗತ್ಯ'. ಈ ಕೃತಿಯನ್ನು ರಾಮಕೃಷ್ಣಯ್ಯ ಎಂಬುವವರು ಗುಬ್ಬಿಯ ಸೇವಾಸದನ ಗ್ರಂಥಮಾಲೆಗಾಗಿ ರಚಿಸಿಕೊಟ್ಟಿದ್ದಾರೆ. ಇವರು ಗೀತೆಯನ್ನು ಪಾರಾಯಣ ಮಾಡಲು ಅನುಕೂಲವಾಗುವಂತೆ ಕನ್ನಡ ಪದ್ಯಗೀತೆಯಾಗಿ ಸಾಂಗತ್ಯ ಪ್ರಕಾರದಲ್ಲಿ ರಚಿಸಿದ್ದಾರೆ. "ಗೀತೆಯ ಅಭಿಪ್ರಾಯಕ್ಕೆ ಸಾಧ್ಯವಾದಮಟ್ಟಿಗೂ ಲೋಪ ತಾರದಂತೆಯೂ, ಸ್ತ್ರೀಯರೂ ಮತ್ತು ಸತ್ಯಜೀವನದ ಮಾರ್ಗದಲ್ಲಿ ಮನವಿರುವವರೂ ತಮ್ಮ ಕೆಲಸಕಾರ್ಯಗಳಲ್ಲಿ ಉಳಿಯುವ ಅಲ್ಪಾವಕಾಶದಲ್ಲಿ ಪಾರಾಯಣ ಮಾಡಲು ಅನುಕೂಲವಾಗುವಂತೆಯೂ ಪದ್ಯಸಂಖ್ಯೆಯನ್ನು ಕಡಿಮೆ ಮಾಡಿದ್ದೇನೆ" ಎಂದು ಕೃತಿ ರಚನೆಯನ್ನು ಕುರಿತು ಹೇಳಿದ್ದಾರೆ. ನಂತರದಲ್ಲಿ ಸಿ.ಯಂ. ವಿಜಯರಾಘವಾಚಾರ್ಯ ಅವರು 'ಶ್ರೀಮದ್ಭಗವದ್ಗೀತೆಯು' ಎಂಬ ಕೃತಿಯನ್ನು ೩ ಸಂಪುಟಗಳಲ್ಲಿ ಹೊರತಂದಿದ್ದಾರೆ. ೧೯೪೨, ೧೯೪೭, ೧೯೫೦ರಲ್ಲಿ ಈ ಕೃತಿಗಳು ಪ್ರಕಟವಾಗಿವೆ. ಈ ಕೃತಿಗಳಲ್ಲಿ ಮೂಲ ಗೀತೆಯ ಶ್ಲೋಕ, ರಾಮಾನುಜಾರ್ಯರ ಭಾಷ್ಯ ಹಾಗೂ ಶ್ರೀ ಯಾಮುನೇಯ ಗೀತಾರ್ಥಸಾರದ ಸಂಗ್ರಹವಿದೆ. ಮುಂದೆ ಅಧ್ಯಾತ್ಮಶಾಸ್ತ್ರದ ಹಿನ್ನೆಲೆಯಿಂದ ಗೀತೆಯನ್ನು ವಿವರಿಸುವ ಪ್ರಯತ್ನ ಮಾಡಿದವರು ಮಗದಲ ರಾಮಚಂದ್ರ ಅವರು. ಇವರು ೧೯೪೭ರಲ್ಲಿ 'ಶ್ರೀ ಬುದ್ಧಿಯೋಗ

ಅಥವಾ ಗೀತೆಯ 'ಗುಹ್ಯ ಅಧ್ಯಾತ್ಮಶಾಸ್ತ್ರ' ಎನ್ನುವ ಕೃತಿ ರಚಿಸಿದ್ದಾರೆ. ಈ ಕೃತಿಯಲ್ಲಿ ಮೂಲಶ್ಲೋಕಗಳಿಗೆ ಕನ್ನಡದಲ್ಲಿ ಭಾವಾರ್ಥಗಳನ್ನು ಕೊಡುವುದರೊಂದಿಗೆ ಬುದ್ಧಿಯೋಗ ಪರವಾದ ಗೀತಾ ವಿವೇಚನೆಯನ್ನು ಮಾಡಿದ್ದಾರೆ. ಇದೇ ವರ್ಷದಲ್ಲಿ ಅಂದರೆ ೧೯೪೭ರಲ್ಲಿ ಆರ್. ಎನ್. ಸೂರ್ಯನಾರಾಯಣ ಎಂಬುವವರು 'ಶ್ರೀಮದ್ಭಗವದ್ಗೀತಾ' ಎಂಬ ಕೃತಿ ಪ್ರಕಟಿಸಿದ್ದಾರೆ. ಇದರಲ್ಲಿ ೨ ಭಾಗಗಳಿದ್ದು ಮೊದಲ ಭಾಗದಲ್ಲಿ ಮೂಲಗೀತೆಯ ಶ್ಲೋಕಗಳಿದ್ದರೆ, ಎರಡನೇ ಭಾಗದಲ್ಲಿ ಅವುಗಳ ಕನ್ನಡ ಗದ್ಯಾನುವಾದವಿದೆ. ಇದರಲ್ಲಿ ಲೇಖಕರು ವಿಷಯ ವಿಂಗಡಣೆಯ ಕ್ರಮ ಮತ್ತು ಶ್ಲೋಕಗಳ ಸಂಯೋಜನೆಯಲ್ಲಿ ವಿಭಿನ್ನತೆಯನ್ನು ಅನುಸರಿಸಿದ್ದಾರೆ. ಇದನ್ನು ಬ್ರಹ್ಮರ್ಷಿ ಗುರುಕುಲ ಗ್ರಂಥಮಾಲಾ, ಬೆಂಗಳೂರು ಇವರು ಪ್ರಕಾಶಿಸಿದ್ದಾರೆ.

ಕನ್ನಡದ ಕವಿಗಳಲ್ಲಿ ಒಬ್ಬರಾದ ಪು.ತಿ.ನರಸಿಂಹಾಚಾರ್ ಅವರು ಭಗವದ್ಗೀತೆಯನ್ನು ಕನ್ನಡ ಪದ್ಯಾನುವಾದದ ಮೂಲಕ ಅನುವಾದಿಸಿದ್ದಾರೆ. ಇವರು ಭಗವದ್ಗೀತೆಯ ಶ್ಲೋಕಗಳಿಗೆ ಕನ್ನಡದ ಅರ್ಥ ಬರುವಂತೆ ಪದ್ಯಗಳಲ್ಲಿ ಹಿಡಿದಿಡಲು ಶ್ರಮಿಸಿದ್ದಾರೆ. ಇವರ ಈ ಕೃತಿಯು ೧೯೫೧ರಲ್ಲಿ ಡಿ.ವಿ.ಕೆ.ಮೂರ್ತಿ, ಮೈಸೂರು ಇವರಿಂದ ಪ್ರಕಟವಾಗಿದೆ. ಡಿ. ವಾಸುದೇವಾಚಾರ್ಯ ಅವರು ೧೯೫೨ರಲ್ಲಿ 'ಶ್ರೀಮದ್ಭಗವದ್ಗೀತಾ ಭಾವದೀಪ' ಎಂಬ ಕೃತಿ ರಚಿಸಿದ್ದಾರೆ. ಇದರಲ್ಲಿ ಗೀತೆಯ ಶ್ಲೋಕಗಳಿಗೆ ಕನ್ನಡದ ತಾತ್ಪರ್ಯವನ್ನು, ಅದರ ಕೆಳಗೆ ಟಿಪ್ಪಣಿಯಲ್ಲಿ ಶ್ಲೋಕಗಳ ಅರ್ಥ ಔಚಿತ್ಯವನ್ನು ಉದಾಹರಣೆ ಸಹಿತ ವಿವರಿಸಿದ್ದಾರೆ. ಅಲ್ಲಲ್ಲಿ ಹಲವು ಶ್ಲೋಕಗಳಿಗೆ ಆಯಾಯಾ ಭಾಷ್ಯಕಾರರು ಹೇಳಿರುವ ಭಿನ್ನಾರ್ಥಗಳನ್ನು ಸಂಗ್ರಹಿಸಿದ್ದಾರೆ. ಸ್ವಾಮಿ ಅವಿಶಾನಂದರು ಪತ್ರ ರೂಪದಲ್ಲಿ ಗೀತೆಯ ಅರ್ಥವನ್ನು ವಿವರಿಸಿ ಹೇಳಿದ್ದಾರೆ. ಅವುಗಳನ್ನು 'ಗೀತಾಪತ್ರಗಳು' ಎಂದು ಪುಸ್ತಕ ರೂಪದಲ್ಲಿ ೧೯೫೨ರಲ್ಲಿ ರಾಮಕೃಷ್ಣ ಆಶ್ರಮ, ಮೈಸೂರು ಇವರು ಪ್ರಕಟಿಸಿದ್ದಾರೆ. ಈ ಕೃತಿಯ ಅನುವಾದವನ್ನು ಎಂ.ಶೇಷಗಿರಿರಾವ್ ಅವರು ಮಾಡಿದ್ದಾರೆ. ೧೯೫೫ರಲ್ಲಿ ನಾರಾಯಣ ಎನ್ನುವವರು 'ಗೀತೆಯಲ್ಲಿ ಏನಿದೆ?' ಎಂಬ ಗೀತಾ ಅನುವಾದ ಕೃತಿಯನ್ನು ರಚಿಸಿದ್ದಾರೆ. ಇವರು ಗೀತೆಯನ್ನು ಪ್ರತಿ ೬ ಅಧ್ಯಾಯಗಳಿಗೆ ಒಂದೊಂದು ಕಾಂಡಗಳಂತೆ ವಿಭಾಗಿಸಿಕೊಂಡು ೩ ಸಂಪುಟಗಳಾಗಿ ಹೊರತಂದಿದ್ದಾರೆ. ಮುಂದೆ ೧೯೫೬ರಲ್ಲಿ ಎಂ.ಆರ್.ಭಟ್ ಎಂಬುವವರು 'ಶ್ರೀಮದ್ಭಗವದ್ಗೀತಾ' ಎನ್ನುವ ಕೃತಿ ಬರೆದಿದ್ದಾರೆ. ಇದರಲ್ಲಿ ಸಂಸ್ಕೃತ ಶ್ಲೋಕಗಳು ಮತ್ತು ಅವುಗಳ ತಾತ್ಪರ್ಯವಿದೆ. ನಂತರದಲ್ಲಿ ಪು.ತಿ.ನ ಅವರಂತೆ ವಿಭಿನ್ನವಾಗಿ ಕೃತಿರಚನೆ ಮಾಡಲು ಪ್ರಯತ್ನಿಸಿದವರು ಕುಡುತಿನಿ ರಂಗಾಚಾರ್ ಅವರು. ಇವರ ಕೃತಿ 'ರಣರಂಗದಲ್ಲಿ' ೧೯೫೬ರಲ್ಲಿ ಮುದ್ರಣವಾಗಿದೆ. ಇದು ಕನ್ನಡ ಪದ್ಯಾನುರೂಪವಾಗಿದೆ. ಇವರು ಪ್ರತಿ ಶ್ಲೋಕಕ್ಕೂ ನಾಲ್ಕು ನಾಲ್ಕು ಸಾಲುಗಳಲ್ಲಿ ಕನ್ನಡ ಪದ್ಯಾನುವಾದವನ್ನು ನೀಡಿದ್ದಾರೆ. ಇವರಂತೆಯೇ ಎಸ್.ಎನ್. ಕೃಷ್ಣಶಾಸ್ತ್ರಿ ಎಂಬುವವರು ೧೯೫೭ರಲ್ಲಿ ಭಾಮಿನೀ ಷಟ್ಪದಿಯಲ್ಲಿ 'ಶ್ರೀ ಗೀತಾ ಭಾಮಿನೀಷಟ್ಪದಿ' ಎಂಬ ಪದ್ಯಾನುವಾದದ ಕೃತಿ ರಚನೆ ಮಾಡಿದ್ದಾರೆ. ಈ ಕೃತಿಗೆ ಮುನ್ನುಡಿಯನ್ನು ಶ್ರೀ ಆಲೂರ ವೆಂಕಟರಾವ್ ಬರೆದಿದ್ದಾರೆ. ಈ ಕೃತಿಯನ್ನು ದಕ್ಷಿಣ ಕನ್ನಡದ ಜಯ ಮುದ್ರಣ ಪ್ರಕಟಣ

ಸಂಸ್ಥೆ ಪ್ರಕಟಿಸಿದೆ. ಮುಂದೆ ೧೯೫೫ರಲ್ಲಿ ಕೆ.ಎಸ್. ಕೃಷ್ಣ ತಾತಾಚಾರ್ ಅವರು 'ಗೀತಾರ್ಥ ದೀಪಿಕಾ' ಎನ್ನುವ ಗೀತಾನುವಾದ ಕೃತಿ ರಚಿಸಿದ್ದಾರೆ. ಇದರಲ್ಲಿ ಶ್ಲೋಕಗಳಿಗೆ ಕನ್ನಡದಲ್ಲಿ ಭಾವಾರ್ಥ ಮತ್ತು ಹಲವು ಶ್ಲೋಕಗಳಿಗೆ ಟಿಪ್ಪಣಿ ರೂಪದಲ್ಲಿ ವಿವರಣೆಯನ್ನು ನೀಡಿದ್ದಾರೆ. ೧೯೬೩ರಲ್ಲಿ ಕೆ. ವೆಂಕಟರಾಮಯ್ಯ ಅವರು 'ಭಗವದ್ಗೀತಾ ರಹಸ್ಯೋಪದೇಶ' ಕೃತಿ ಬರೆದಿದ್ದಾರೆ. ಇದರಲ್ಲಿ ಶ್ಲೋಕಗಳಿಗೆ ಅರ್ಥಗಳನ್ನು ನೀಡಿದ್ದಾರೆ. ಇದನ್ನು ಶ್ರೀಕಾಂತ ಗ್ರಂಥಮಾಲಾ ಪ್ರಕಟಿಸಿದೆ. ೧೯೬೪ರಲ್ಲಿ ಶ್ರೀ ಲಕ್ಷ್ಮೀನಾರಾಯಣ ಶಾಸ್ತ್ರಿ ಅವರು 'ಗೀತಾ ವಿಜ್ಞಾನ' ಎಂಬ ಪುಸ್ತಕ ಬರೆದಿದ್ದಾರೆ. ಇದರಲ್ಲಿ ಗೀತೆಯನ್ನು ಆಧ್ಯಾತ್ಮಿಕ ಅರ್ಥದ ಹಿನ್ನೆಲೆಯಿಂದ ಅರ್ಥೈಸಿದ್ದಾರೆ. ಇದನ್ನು ಅಧ್ಯಾತ್ಮ ವಿಕಾಸಕೇಂದ್ರ, ಮುಂಬಯಿ ಅವರು ಪ್ರಕಾಶಿಸಿದ್ದಾರೆ.

ಗೀತೆಯನ್ನು ವಿಭಿನ್ನವಾಗಿ ಅನುವಾದಿಸಲು ಪ್ರಯತ್ನಪಟ್ಟ ಮತ್ತೊಬ್ಬರೆಂದರೆ ನಿವೃತ್ತ ಜಿಲ್ಲಾ ಶಿಕ್ಷಣಾಧಿಕಾರಿಗಳಾಗಿದ್ದ ವೆಂಕಟರಾವ್ ರಾಮಚಂದ್ರ ನಾಯಕ. ಇವರು 'ಕನ್ನಡ ಭಗವದ್ಗೀತೆ' ಎನ್ನುವ ಕೃತಿಯನ್ನು ರಚಿಸಿದ್ದಾರೆ. ಸಂಸ್ಕೃತ ಬಾರದ ಕನ್ನಡಿಗರ ಸಲುವಾಗಿ ಗೀತೆಯ ಪದ್ಯಾನುವಾದದ ಕೃತಿಯನ್ನು ಕನ್ನಡದಲ್ಲಿ ರಚಿಸಿದ್ದೇನೆ ಎಂದು ಹೇಳಿದ್ದಾರೆ. ಕೃತಿಯಲ್ಲಿ ೨ ಭಾಗಗಳಿದ್ದು, ಮೊದಲ ಭಾಗದಲ್ಲಿ ಕನ್ನಡ ಪದ್ಯಾನುವಾದವನ್ನು ನೀಡಿದ್ದಾರೆ. ಎರಡನೇ ಭಾಗದಲ್ಲಿ ಕನ್ನಡ ಲಿಪಿಯ ಮೂಲ ಸಂಸ್ಕೃತ ಶ್ಲೋಕಗಳನ್ನು ನೀಡಿದ್ದಾರೆ. ಇದನ್ನು ಕನ್ನಡ ಸಾಹಿತ್ಯ ಸಂಘ, ಕಲಬುರ್ಗಿ ಇವರು ೧೯೬೪ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿಗೆ ವಿ.ಕೃ.ಗೋಕಾಕ್ ಅವರು ಮುನ್ನುಡಿಯನ್ನು ಬರೆದಿದ್ದಾರೆ. ಇದೇ ವರ್ಷದಲ್ಲಿ ಶ್ರೀ ಬಿ.ಎಸ್. ಅನಂತರಾಮಯ್ಯ ಎನ್ನುವವರು ಮಕ್ಕಳಿಗಾಗಿ 'ಶ್ರೀ ಬಾಲಗೀತಾ ಪ್ರಕಾಶಿಕಾ' ಎಂಬ ಕೃತಿ ಬರೆದಿದ್ದಾರೆ. ಈ ಕೃತಿಯ ವಿಶೇಷವೆಂದರೆ ಗೀತೆಯನ್ನು ಗೋವಿನ ಹಾಡಿನ ಮಟ್ಟಿನಲ್ಲಿ ಪದ್ಯರೂಪದಲ್ಲಿ ಕನ್ನಡಕ್ಕೆ ಪರಿವರ್ತಿಸಿರುವುದಾಗಿದೆ. ಇದನ್ನು ನಂಜನಗೂಡಿನ ಶ್ರೀ ಸತ್ಯನಾರಾಯಣ ಪ್ರೆಸ್ ೧೯೬೪ರಲ್ಲಿ ಮುದ್ರಿಸಿದೆ. ೧೯೬೫ರಲ್ಲಿ ಅಮೃತ ಚನ್ನಶಾಮ(ಎ.ಸಿ.ಶಾಮಣ್ಣ) ಅವರು ಬರೆದು ಪ್ರಕಟಿಸಿದ 'ಗೀತಾ ಯೋಗ' ಕೃತಿಯೂ ಇಂಥದ್ದೇ ಪ್ರಯೋಗಶೀಲತೆಯಿಂದ ಕೂಡಿದುದಾಗಿದೆ. ಇದು ಕನ್ನಡದ ಭಗವದ್ಗೀತೆಯಾಗಿದ್ದು ಭೋಗ ಷಟ್ಪದಿಯಲ್ಲಿ ಪದ್ಯರೂಪದಲ್ಲಿ ರಚಿತವಾಗಿದೆ. ಕೃತಿಕಾರರು ಭೋಗಷಟ್ಪದಿಯನ್ನು ಸ್ವಲ್ಪ ಮಾರ್ಪಡಿಸಿ ನಾಲ್ಕು ಸಾಲಾಗಿ, ಪ್ರತಿ ಸಾಲಿಗೂ ಪ್ರಾಸವಿಟ್ಟು ಯೋಗಷಟ್ಪದಿಯನ್ನಾಗಿ ಮಾರ್ಪಡಿಸಿ ಅನುವಾದವನ್ನು ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಕನ್ನಡದ ಮತ್ತೊಬ್ಬ ಹಿರಿಯ ಸಾಹಿತಿ ಡಿ.ವಿ.ಗುಂಡಪ್ಪ(ಡಿ.ವಿ.ಜಿ) ಅವರು ಭಗವದ್ಗೀತೆಯನ್ನು 'ಶ್ರೀಮದ್ಭಗವದ್ಗೀತಾ ತಾತ್ಪರ್ಯ ಅಥವಾ ಜೀವನ ಧರ್ಮಯೋಗ' ಎಂಬ ಹೆಸರಿನಲ್ಲಿ ಭಗವದ್ಗೀತೆಯನ್ನು ವಿಶಿಷ್ಟವಾಗಿ ವ್ಯಾಖ್ಯಾನಿಸಿದ್ದಾರೆ. ಈ ಕೃತಿಯಲ್ಲಿ ಮೊದಲು ಮೂಲಗ್ರಂಥದ ಪ್ರತಿ ಅಧ್ಯಾಯದ ಶ್ಲೋಕಗಳನ್ನು ನೀಡಿ ನಂತರ ಆ ಅಧ್ಯಾಯದ ಸಾರಾಂಶ ಹಾಗೂ ಆ ಅಧ್ಯಾಯಕ್ಕೆ ತಮ್ಮ ವ್ಯಾಖ್ಯಾನವನ್ನು ನೀಡಿದ್ದಾರೆ. ಇವರ ಈ ಕೃತಿಯು ೧೯೬೬ರಲ್ಲಿ ಪ್ರಕಟವಾಗಿ ೧೯೬೭ರಲ್ಲಿ ಕೇಂದ್ರಸಾಹಿತ್ಯ ಅಕಾದೆಮಿ ಪ್ರಶಸ್ತಿಗೆ ಭಾಜನವಾಗಿದೆ.

೧೯೬೮ರಲ್ಲಿ ವಿಶ್ವೇಶ್ವರತೀರ್ಥ ಶ್ರೀಪಾದರು 'ಗೀತಾಸಾರೋದ್ಧಾರ' ಎನ್ನುವ ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯನ್ನು ತಿರುಪತಿ ತಿರುಮಲ ದೇವಸ್ಥಾನ ಸಮಿತಿಯವರು ಪ್ರಕಾಶಿಸಿದ್ದಾರೆ. ಸ್ವಾಮಿ ಆದಿದೇವಾನಂದ ಅವರು 'ಶ್ರೀಮದ್ಭಗವದ್ಗೀತಾ' ಎನ್ನುವ ಗೀತಾ ಅನುವಾದ ಕೃತಿಯನ್ನು ಬರೆದಿದ್ದಾರೆ. ಭದ್ರಗಿರಿ ಅಚ್ಯುತದಾಸರು 'ಗೀತಾರ್ಥ ಚಿಂತನೆ' ಎಂಬ ಕೃತಿ ರಚಿಸಿದ್ದಾರೆ. ಈ ಕೃತಿಯ ದ್ವಿತೀಯ ಮುದ್ರಣವನ್ನು ೧೯೭೬ರಲ್ಲಿ ಭಾರತ ಜ್ಯೋತಿ ಪ್ರಕಾಶನ, ಬೆಂಗಳೂರು ಇವರು ಪ್ರಕಾಶಿಸಿದ್ದಾರೆ. ೧೯೭೭ರಲ್ಲಿ ಕಾ.ವೆಂ. ಶ್ರೀಕಂಠಯ್ಯ ಅವರು 'ಭಗವದ್ಗೀತೆ ಒಂದು ಜೀವನ ಸಂದೇಶ' ಎಂಬ ಪುಸ್ತಕ ಸಂಪಾದಿಸಿದ್ದಾರೆ. ಇದರಲ್ಲಿ ಎರಡು ಭಾಗಗಳಿದ್ದು ಮೊದಲನೆಯದರಲ್ಲಿ ಗೀತೆಯ ಸಾರಸಂಗ್ರಹವಿದ್ದು, ಎರಡನೆಯದರಲ್ಲಿ ಗೀತೆಯ ಮೂಲ ಶ್ಲೋಕ ಮತ್ತು ಅವುಗಳಿಗೆ ಅರ್ಥಗಳನ್ನು ನೀಡಲಾಗಿದೆ. ಇದನ್ನು ಮೈಸೂರಿನ ಮಹಿಳಾ ಸದನ ಪ್ರಕಟಿಸಿದೆ. ಇದೇ ೧೯೭೭ನೇ ವರ್ಷದಲ್ಲಿ ಬಿ. ಶ್ರೀಧರ ಅವರು 'ಮಕ್ಕಳ ಗೀತೆ' ಯನ್ನು ರಚಿಸಿದ್ದಾರೆ. ಈ ಕೃತಿಯಲ್ಲಿ ಮಕ್ಕಳ ಮನಸ್ಸಿಗೆ ಸುಲಭವಾಗಿ ತಿಳಿಯಬಹುದಾದ ಶ್ಲೋಕಗಳನ್ನು ಮಾತ್ರ ಸಂಗ್ರಹಿಸಿ ಅರ್ಥವಿವರಣೆಯನ್ನು ಕನ್ನಡ, ಆಂಗ್ಲ ಭಾಷಾಂತರದೊಡನೆ ಕೊಟ್ಟಿದ್ದಾರೆ. ಇದರಲ್ಲಿ ಸಂಸ್ಕೃತ ಲಿಪಿಯ ಶ್ಲೋಕ ಹಾಗೂ ಕನ್ನಡ ಲಿಪಿಯಲ್ಲಿನ ಶ್ಲೋಕ ಎರಡನ್ನೂ ಮುದ್ರಿಸಿದ್ದಾರೆ. ಶ್ರೀಮತ್ಪರಮಹಂಸ ಬೋಧಾನಂದಭಾರತೀ ಸ್ವಾಮಿ ೧೯೭೩ರಲ್ಲಿ 'ಕನ್ನಡ ಭಗವದ್ಗೀತಾ ಕುಸುಮ ಮಂಜರಿ' ಎಂಬ ಕೃತಿ ರಚಿಸಿದ್ದಾರೆ. ಇವರು ಗೀತೆಯನ್ನು ಪದ್ಯರೂಪದಲ್ಲಿ ಷಟ್ಪದಿ ಛಂದಸ್ಸಿನಲ್ಲಿ ಬರೆದಿದ್ದಾರೆ. ಈ ಕೃತಿಯನ್ನು ಬೆಂಗಳೂರಿನ ಅಭಿನವ ಆಸ್ತಿಕ ಪ್ರಕಾಶನ ಪ್ರಕಾಶಿಸಿದೆ. ಸ್ವಾಮಿ ಶಂಕರಾನಂದ ಅವರು 'ಶ್ರೀಗೀತಾತಾತ್ಪರ್ಯ ಪ್ರದೀಪ' ಎಂಬ ಕೃತಿಯನ್ನು ೧೯೭೯ರಲ್ಲಿ ರಚಿಸಿದ್ದಾರೆ. ಅಜ್ಜಂಪುರದ ಶ್ರೀ ಶಿವಾನಂದಾಶ್ರಮವು ಇದರ ಪ್ರಕಟಣೆಯ ಹೊಣೆಯನ್ನು ಹೊತ್ತು ಪ್ರಕಟಿಸಿದೆ. ಶಂಕರಾಚಾರ್ಯರಂತೆ ರಾಮಾನುಜಾಚಾರ್ಯರೂ ಭಗವದ್ಗೀತೆಯ ಮೇಲೆ ಭಾಷ್ಯವನ್ನು ಬರೆದಿದ್ದಾರೆ. ಇವರ 'ಶ್ರೀಮದ್ಗೀತಾಭಾಷ್ಯ' ಕೃತಿಯ ಕನ್ನಡಾನುವಾದವನ್ನು ಪ್ರೊ. ಎಸ್.ಎಸ್. ರಾಘವಾಚಾರ್ಯ ಅವರು ಶ್ರೀ ಲಕ್ಷ್ಮೀ ಹಯಗ್ರೀವ ಸೇವಾಟ್ರಸ್ಟ್ ಇವರಿಗಾಗಿ ಮಾಡಿಕೊಟ್ಟಿದ್ದಾರೆ. ಈ ಕೃತಿಯು ೧೯೮೭ರಲ್ಲಿ ಮುದ್ರಿತವಾಗಿದೆ. ಇದೇ ರೀತಿಯಲ್ಲಿ ಶ್ರೀ ರಾಘವೇಂದ್ರ ಗುರು ಸಾರ್ವಭೌಮರು ರಚಿಸಿದ 'ಶ್ರೀ ಗೀತಾರ್ಥ ಸಂಗ್ರಹ ಅರ್ಥಾತ್ ಗೀತಾ ವಿವೃತ್ತಿ' ಎನ್ನುವ ಕೃತಿಯ ಕನ್ನಡಾನುವಾದವನ್ನು ೧೯೮೩ರಲ್ಲಿ ಶ್ರೀ ಶಾಮರಾವ ಬಂಡೇರಾವ ಗಜೇಂದ್ರಗಢ ಇವರು ಶಿರೂರು ಪ್ರಕಾಶನ ಇವರಿಗಾಗಿ ಮಾಡಿಕೊಟ್ಟಿದ್ದಾರೆ.

ಮತ್ತೊಬ್ಬ ಸ್ವಾಮೀಜಿಯಾದ ಸ್ವಾಮಿ ಚಿನ್ಮಯಾನಂದರು ಗೀತೆಯನ್ನು 'ಶ್ರೀಮದ್ ಭಗವದ್ಗೀತೆ' ಎನ್ನುವ ಹೆಸರಿನಲ್ಲಿ ವ್ಯಾಖ್ಯಾನಿಸಿದ್ದಾರೆ. ಈ ಕೃತಿಯ ಅನುವಾದ ಕಾರ್ಯವನ್ನು ಬಿ.ಎ. ಸತ್ಯನಾರಾಯಣ ಮತ್ತು ಬ್ರಹ್ಮಶ್ರೀ ಅವರು ಮಾಡಿದ್ದಾರೆ. ಇದು ೧೯೮೩ರಲ್ಲಿ ಪ್ರಕಟವಾಗಿದೆ. ಈ ಕೃತಿಯಲ್ಲಿ ಗೀತೆಯ ಬಗೆಗೆ ಸ್ವಾತಂತ್ರ್ಯ ಹೋರಾಟಗಾರರು, ಅಧ್ಯಾತ್ಮ ಚಿಂತಕರೂ

ರಾಜಕೀಯ ನಾಯಕರೂ ಆದ ಮಹಾತ್ಮ ಗಾಂಧಿ, ಅರವಿಂದ ಘೋಷ್, ಲೋಕಮಾನ್ಯ ತಿಲಕ್, ಡಾ. ಅನಿಬೆಸೆಂಟ್, ಸ್ವಾಮಿ ವಿವೇಕಾನಂದ, ಮದನಮೋಹನ ಮಾಳವೀಯ ಮುಂತಾದವರ ಅಭಿಪ್ರಾಯಗಳನ್ನು ಸಂಕ್ಷಿಪ್ತವಾಗಿ ಸಂಗ್ರಹಿಸಿಕೊಟ್ಟಿದ್ದಾರೆ. ಹಾಗೆಯೇ ಗೀತೆಯ ಸಾರ ಎಂಬ ಹೆಸರಿನಲ್ಲಿ ೧೮ ಅಧ್ಯಾಯಗಳ ಸಾರವನ್ನು ವಿಷಯ ಸೂಚಿಯಾಗಿ ಹಾಗೂ ಗೀತೆಯು ಏನು ಹೇಳುತ್ತದೆ ಎನ್ನುವ ಬಗೆಗೆ ಶ್ಲೋಕಗಳ ಸೂಚಿ ಜೊತೆಗೆ ಓದುಗರಿಗೆ ಉಪಯುಕ್ತವಾಗುವ ಹಾಗೆ ಪುಟಸಂಖ್ಯೆಯನ್ನು ನಮೂದಿಸಿದ್ದಾರೆ. ಇವೆಲ್ಲವೂ ಕೂಡ ಗೀತೆಯ ಅನುವಾದ, ವ್ಯಾಖ್ಯಾನ ಕೃತಿಗಳಾಗಿವೆ.

ಇತ್ತೀಚಿನ ದಿನಗಳಲ್ಲಿಯೂ ಭಗವದ್ಗೀತೆಯ ಬಗೆಗೆ ಅನೇಕರು ಚಿಂತನೆಯನ್ನು ನಡೆಸುತ್ತಲೇ ಬರುತ್ತಿದ್ದಾರೆ. ಈ ಆಸಕ್ತಿಯ ಫಲವಾಗಿ ಅನುವಾದ, ವ್ಯಾಖ್ಯಾನಗಳು ಅಸಂಖ್ಯ ಸಂಖ್ಯೆಯಲ್ಲಿ ಬರುತ್ತಲೇ ಇವೆ. ಅವುಗಳಲ್ಲಿ ಕೆಲವನ್ನು ನೋಡುವುದಾದರೆ –

ಇತ್ತೀಚಿನ ದಿನಗಳಲ್ಲಿಯೂ ಭಗವದ್ಗೀತೆಯ ಬಗೆಗೆ ಅನೇಕರು ಚಿಂತನೆಯನ್ನು ನಡೆಸುತ್ತಲೇ ಬರುತ್ತಿದ್ದಾರೆ. ಈ ಆಸಕ್ತಿಯ ಫಲವಾಗಿ ಅನುವಾದ, ವ್ಯಾಖ್ಯಾನಗಳು ಅಸಂಖ್ಯ ಸಂಖ್ಯೆಯಲ್ಲಿ ಬರುತ್ತಲೇ ಇವೆ. ಅವುಗಳಲ್ಲಿ ಕೆಲವನ್ನು ನೋಡುವುದಾದರೆ –

ವಿಶ್ವೇಶ್ವರ ದೀಕ್ಷಿತ ಅವರ 'ಶ್ರೀಮದ್ ಭಗವತ್ ಕಂನುಡಿ ಕನ್ನಡ ಭಗವದ್ಗೀತೆ'. ಇದನ್ನು ೨೦೦೦ರಲ್ಲಿ ಯು.ಎಸ್.ಎ.ದ ಚಿರಾಗ ಪ್ರಕಾಶನ ಸಂಸ್ಥೆಯು ಪ್ರಕಾಶಿಸಿದೆ. ಲ.ಶರ್ಮ ಅವರು ೨೦೦೨ರಲ್ಲಿ 'ಗೀತಾಮೃತ' ಎನ್ನುವ ಹೆಸರಿನಲ್ಲಿ ಮೂಲ ಭಗವದ್ಗೀತೆ ಮತ್ತು ಸರಳ ಕನ್ನಡ ರೂಪವನ್ನೊಳಗೊಂಡ ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯನ್ನು ಸುಬ್ರಹ್ಮಣ್ಯೇಶ್ವರ ಬುಕ್ ಡಿಪೊ, ಬೆಂಗಳೂರು ಇವರು ೨೦೦೨ರಲ್ಲಿ ಪ್ರಕಾಶಿಸಿದ್ದಾರೆ.

ಸಂತ ಜ್ಞಾನೇಶ್ವರರು(೧೨೭೫–೧೨೯೬) ಭಗವದ್ಗೀತೆಯ ೭೦೦ ಶ್ಲೋಕಗಳನ್ನು ಸು.೯೦೦೦ ಓವಿಗಳಲ್ಲಿ 'ಭಾವಾರ್ಥದೀಪಿಕೆ' ಎಂಬ ಹೆಸರಿನಿಂದ ಮರಾಠಿ ಭಾಷೆಗೆ ಅನುವಾದಿಸಿದ್ದಾರೆ. ಜ್ಞಾನೇಶ್ವರರ ಈ ಗೀತೆಯ ಅನುವಾದ ಬಹಳ ಮಹತ್ವದ್ದಾಗಿದೆ. ಗೀತೆಯಲ್ಲಿ ಸಕಲ ವೇದಗಳ ಸಾರವು ಅಡಗಿರುವುದರಿಂದ ಗೀತೆಯನ್ನು ಎಲ್ಲರಿಗೂ ತಿಳಿಯುವಂತೆ ಮರಾಠಿಯಲ್ಲಿ ಬರೆದರೆ ವೇದಗಳ ಅರ್ಥ ಎಲ್ಲರಿಗೂ ತಿಳಿದಂತಾಗುತ್ತದೆ ಎಂದು ಭಾವಿಸಿ ಅನುವಾದಿಸಿದ್ದಾರೆ. ಗೀತೆಯ ೧ ಶ್ಲೋಕದ ಅನುವಾದವನ್ನು ಕನಿಷ್ಠ ೪ ಓವಿಗಳಲ್ಲಿ ಇವರು ರಚಿಸಿದ್ದಾರೆ. ಇವರ ಈ ಕೃತಿಯನ್ನು 'ಕನ್ನಡ ಜ್ಞಾನೇಶ್ವರಿ' ಎಂಬ ಹೆಸರಿನಿಂದ ರಂ.ಶಾ. ಲೋಕಾಪುರ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಕೃತಿಯನ್ನು ಬೆಳಗಾವಿಯ ನಿಶಾಂತ ಪ್ರಕಾಶನ ೨೦೦೩ರಲ್ಲಿ ಪ್ರಕಟಿಸಿದೆ. ಈ ಕೃತಿಗೆ ಡಾ.ಕೀರ್ತಿನಾಥ ಕುರ್ತಕೋಟಿ ಅವರು ಅರ್ಥಪೂರ್ಣ ಭೂಮಿಕೆಯನ್ನು ಒದಗಿಸಿದ್ದಾರೆ. ಜ್ಞಾನೇಶ್ವರರ ಗೀತೆಯನ್ನೇ 'ಶ್ರೀ ಜ್ಞಾನೇಶ್ವರಿ ಗೀತೆ' ಎಂದು ಅ.ಕೃ.ಕುಲಕರ್ಣಿಯವರು ೧೯೭೬ರಲ್ಲಿಯೇ ಪ್ರಕಟಿಸಿದ್ದಾರೆ.

ಶ್ರೀ ಕೆ.ಪಿ. ರತ್ನಾಕರಭಟ್ಟ ಎಂಬುವವರು ಗೀತೆಯನ್ನು 'ಶ್ರೀ ಗೀತಾಂತರಂಗ' ಎನ್ನುವ ಹೆಸರಿನಿಂದ ಅನುವಾದಿಸಿದ್ದಾರೆ. ಇವರು ಶ್ರೀಮದ್ಭಗವದ್ಗೀತೆಯ ಪದ್ಯಾವತರಣಿಕೆ ಮತ್ತು ಭಾಷ್ಯದೊಂದಿಗೆ ಮೂಲ ಶ್ಲೋಕಕ್ಕೆ ಕನ್ನಡದಲ್ಲಿ ಪದ್ಯ ಹಾಗೂ ವಿವರಣೆ ನೀಡಿದ್ದಾರೆ. ಇವರ ಕೃತಿಯನ್ನು ೨೦೦೪ರಲ್ಲಿ ಶ್ರೀರಾಮ ಸೇವಾ ಪ್ರಕಾಶನ ಸಮಿತಿ, ಚಿಕ್ಕಮಗಳೂರು ಪ್ರಕಟಿಸಿದ್ದಾರೆ.

೨೦೦೫ರಲ್ಲಿ ಎಸ್.ಎಸ್.ದ್ವಾರಕಾನಾಥ್ ಅವರು 'ಶ್ರೀಮದ್‌ಭಗವದ್ಗೀತಾ ಮೌನಧ್ವನಿ' ಎಂಬ ಕೃತಿಯನ್ನು ರಚಿಸಿದ್ದಾರೆ. ಇವರು ಗೀತೆಯ ಶ್ಲೋಕಗಳಿಗೆ ಅವರದೇ ಆದ ಕವನಗಳನ್ನು ರಚಿಸಿದ್ದಾರೆ. ಇದನ್ನು ತನುಮನ ಪ್ರಕಾಶನ, ಮೈಸೂರು ಇವರು ಪ್ರಕಟಿಸಿದ್ದಾರೆ. ಇದೇ ಇಸವಿಯಲ್ಲಿ ತಂ.ಶ್ರೀ.ನ. ಮೂರ್ತಿ ಅವರು ಅನುವಾದಿಸಿರುವ ಜಯದಯಾಲಜೀ ಗೋಯಂದಕ ಅವರ 'ಶ್ರೀಮದ್ಭಗವದ್ಗೀತಾ' ಕೃತಿಯು ಮುದ್ರಣ ಕಂಡಿದೆ. ಇದನ್ನು ಗೋರಕಪುರದ ಗೀತಾಪ್ರೆಸ್‌ನವರು ಪ್ರಕಾಶಿಸಿದ್ದಾರೆ. ಡಾ. ಕೆ. ಲೀಲಾಪ್ರಕಾಶ್ ಎನ್ನುವವರು ಕೂಡ 'ಸಿರಿಗನ್ನಡ ಭಗವದ್ಗೀತಾ' ಎಂಬ ಕೃತಿಯನ್ನು ಭಗವದ್ಗೀತೆಯ ಮೇಲೆ ರಚಿಸಿದ್ದಾರೆ. ಇವರ ಕೃತಿಯನ್ನು ವಿದ್ಯುತ್ ಪ್ರಕಾಶನ, ಮೈಸೂರು ಇವರು ೨೦೦೬ರಲ್ಲಿ ಪ್ರಕಟಿಸಿದ್ದಾರೆ.

'ಶ್ರೀಮದ್ಭಗವದ್ಗೀತಾಸಾರ' ಎಂಬ ಕೃತಿಯನ್ನು ದೇವರಾಯ ಕುಲಕರ್ಣಿ ಅವರು ರಚಿಸಿದ್ದಾರೆ. ಇವರು ಗೀತೆಯ ಅರ್ಥವನ್ನು ಕನ್ನಡದ ಪದ್ಯಗಳಲ್ಲಿ ರಚಿಸಿದ್ದಾರೆ. ಈ ಪದ್ಯಗಳು ದ್ವಿಪದಿ ರಚನೆಯಲ್ಲಿದ್ದು, ಲಾವಣಿಯ ರೂಪದಲ್ಲಿವೆ. ಈ ಪದ್ಯಗಳನ್ನು ರಚಿಸುವಾಗ ಕೃತಿಕಾರರು ಶ್ರೀಶಾಂಕರ ಭಾಷ್ಯ ಮತ್ತು ಶ್ರೀಮಧ್ವಾಚಾರ್ಯರ ಭಾಷ್ಯದ ಶಬ್ದಾರ್ಥಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಿದ್ದೇನೆ ಎಂದು ತಿಳಿಸಿದ್ದಾರೆ. ಸ್ವಾಮಿ ದಯಾನಂದ ಸರಸ್ವತಿ ಅವರು ರಚಿಸಿದ 'ಶ್ರೀಮದ್ಭಗವದ್ಗೀತಾ' ಕೃತಿಯನ್ನು ೨೦೦೯ರಲ್ಲಿ ಸಾಧ್ವಿ ವರದಾ ಚೈತನ್ಯರು ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರ ಕೃತಿಯನ್ನು ಆರ್ಷವಿದ್ಯಾ, ಚೆನ್ನೈ ಇವರು ಪ್ರಕಟಿಸಿದ್ದಾರೆ. ಶಿರಸಿಯ ಶ್ರೀಭಗವತ್ಪಾದ ಪ್ರಕಾಶನದವರು ೨೦೧೧ರಲ್ಲಿ ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿ ಅವರ 'ಗೀತಾಂತರಂಗ' ಎನ್ನುವ ಕೃತಿಯನ್ನು ಪ್ರಕಾಶಿಸಿದ್ದಾರೆ. ಈ ಕೃತಿಯ ಅನೇಕ ಭಾಗಗಳು ಸ್ವಾಮಿ ಅವರು ಯೋಗಮಂದಿರದಲ್ಲಿ ನಡೆಸಿದ ಪ್ರವಚನದ ಬರಹರೂಪವಾಗಿದೆ. ಇದೇ ಬರಹಗಳು ಮುಂದೆ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಗೀತಾಂತರಂಗ ಶೀರ್ಷಿಕೆಯಲ್ಲಿ ಲೇಖನಮಾಲೆಯಾಗಿ ಪ್ರಕಟಗೊಂಡಿವೆ. ಈ ಲೇಖನಗಳೇ ೩ ಸಂಪುಟಗಳ 'ಗೀತಾಂತರಂಗ' ಪುಸ್ತಕದಲ್ಲಿ ಸೇರ್ಪಡೆಗೊಂಡಿವೆ. ಈ ಕೃತಿಯಲ್ಲಿ ವ್ಯಾಖ್ಯಾನಕಾರರು ವೈದಿಕ ಪರಂಪರೆಯ ಆಶಯವನ್ನೂ ಅದ್ವೈತ ತತ್ವಮೀಮಾಂಸೆಯ ಮಹೋನ್ನತಿಯನ್ನೂ ಅಧ್ಯಾತ್ಮ ವಿದ್ಯೆಯ ಸಾರವನ್ನೂ ನೀಡಿದ್ದಾರೆ. ಮುಖ್ಯವಾಗಿ ಭಗವದ್ಗೀತೆಯನ್ನು ಸಿದ್ಧಾಂತದ ದೃಷ್ಟಿಯಿಂದ ನೋಡದೆ ಸಾಧನಾದೃಷ್ಟಿಯಿಂದ ನೋಡಿ ತಮ್ಮ ಪ್ರವಚನದಲ್ಲಿ ನೀಡಿದ್ದಾರೆ.

ಹೀಗೆ ಅಂದಿನಿಂದ ಇಂದಿನವರೆಗೆ ಭಗವದ್ಗೀತೆಯು ಅನುವಾದ, ವ್ಯಾಖ್ಯಾನ, ಚರ್ಚೆ ಮುಂತಾದವುಗಳಿಗೆ ಒಳಗಾಗುತ್ತಲೇ ಇದೆ. ಪ್ರಪಂಚದಲ್ಲಿ ಬೈಬಲ್ ಅನುವಾದದ ಸಂಖ್ಯೆಯ

ನಂತರ ಭಗವದ್ಗೀತೆಯ ಅನುವಾದದ ಸಂಖ್ಯೆಗಳೇ ಹೆಚ್ಚಿವೆ. ಹೀಗೆ ಅನುವಾದಗೊಂಡ ಗೀತೆಯ ಅನುವಾದ ಪ್ರಕಾರಗಳೂ ಕೂಡ ಭಿನ್ನವಾದವುಗಳಾಗಿವೆ. ಗದ್ಯ, ಪದ್ಯ, ಪ್ರಬಂಧ, ಪತ್ರ, ಪ್ರವಚನ, ಸಂದೇಶ, ಧಾರಾವಾಹಿ ಹೀಗೆ ಹತ್ತಾರು ವಿಧಗಳಲ್ಲಿ ಅನುವಾದ ಕಾರ್ಯಗಳು ನಡೆದಿವೆ.

೨.೨. ಗೀತೆಯ ಬಗೆಗಿನ ಅಧ್ಯಯನಗಳು

ಗೀತೆಯ ಬಗೆಗೆ ಕನ್ನಡದಲ್ಲಿ ಅಂತಹ ಮಹತ್ವದ ಅಧ್ಯಯನಗಳು ಈವರೆಗೂ ನಡೆದಿಲ್ಲ. ಅದರಲ್ಲೂ ಗೀತೆಯನ್ನು ವಿಮರ್ಶಾತ್ಮಕವಾಗಿ ಮಂಡಿಸುವ ಅಧ್ಯಯನ ಕೃತಿಗಳು ಹಾಗೂ ಲೇಖನಗಳು ಬಹಳ ವಿರಳ. ಹಾಗೆ ನೋಡಿದರೆ ಹೆಚ್ಚು ಪಾಶ್ಚಾತ್ಯ ವಿದ್ವಾಂಸರೇ ಗೀತೆಯನ್ನು ವಿಮರ್ಶಾತ್ಮಕವಾಗಿ ಗ್ರಹಿಸಲು ಪ್ರಯತ್ನ ಮಾಡಿದ್ದಾರೆ. ಕನ್ನಡದಲ್ಲಿ ಆಂಶಿಕವಾಗಿ ಬಿಡಿ ಬಿಡಿ ಲೇಖನದ ರೂಪದಲ್ಲಿ ಗೀತೆಯನ್ನು ಕುರಿತು ವಿಶ್ಲೇಷಣೆಗಳು ನಡೆದಿರುವುದನ್ನು ಗಮನಿಸ ಬಹುದಾಗಿದೆ. ಅವುಗಳಲ್ಲಿ ಮುಖ್ಯವಾದ ಲೇಖನಗಳು ಭಾಷಾಂತರದ ಮೂಲಕ ಕನ್ನಡಕ್ಕೆ ಬಂದಿವೆ. ಕನ್ನಡದಲ್ಲಿ ಬಂದಿರುವ ಅಂತಹ ಗೀತೆಯ ಅಧ್ಯಯನ ಕುರಿತ ಮುಖ್ಯ ಲೇಖನಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಡಿ.ಡಿ. ಕೊಸಾಂಬಿ ಅವರ 'ಪುರಾಣ ಮತ್ತು ವಾಸ್ತವ'(Myth and Reality) ಎಂಬ ಕೃತಿಯನ್ನು ಟಿ.ಎಸ್.ವೇಣುಗೋಪಾಲ್ ಮತ್ತು ಬಿ.ಎಸ್.ಶೈಲಜ ಅವರು ಕನ್ನಡಕ್ಕೆ ತಂದಿದ್ದಾರೆ. ಕೊಸಾಂಬಿ ಅವರು ಈ ಕೃತಿಯಲ್ಲಿ 'ಗೀತೆ ಇಂದು' ಪ್ರಸ್ತುತವೇ ಅಲ್ಲವೇ?' ಎಂಬ ಪ್ರಶ್ನೆಗೆ ಸ್ಪಷ್ಟೀಕರಣ ಕೊಟ್ಟಿದ್ದಾರೆ. 'ಆಧುನಿಕ ಜೀವನ ನಿಂತಿರುವುದೇ ವಿಜ್ಞಾನ ಮತ್ತು ಸ್ವಾತಂತ್ರ್ಯದ ತಳಹದಿಯ ಮೇಲೆ' ಎನ್ನುವ ಇವರು, ಮನುಷ್ಯನಿಗೆ ಅತಿಮುಖ್ಯವಾಗಿ ವೈಚಾರಿಕ ಅರಿವು ಮತ್ತು ಸ್ವಾತಂತ್ರ್ಯ ಬೇಕು ಎಂದು ಹೇಳುತ್ತಾರೆ. ಉತ್ಪಾದನೆ, ವಿಜ್ಞಾನ ಮತ್ತು ಸ್ವಾತಂತ್ರ್ಯ ಮನುಷ್ಯನನ್ನು ಪ್ರಜ್ಞಾವಂತನನ್ನಾಗಿಸಿ ಅವನ ಜೀವನ ವಿಧಾನವನ್ನು ಬದಲಾಯಿಸಬಲ್ಲದು ಎಂಬುದು ಅವರ ನಿಲುವು. ಇಲ್ಲದೆ ಹೋದರೆ "ಧರ್ಮವು ಕೆಲವು ಪುರಾಣಗಳಿಗೆ ಅಂಧಶ್ರದ್ಧೆಯ ಹೊದಿಕೆ ಹೊದಿಸುತ್ತದೆ. 'ವಿಜ್ಞಾನಕ್ಕೆ ಧರ್ಮ ಬೇಕು' ಎನ್ನುವುದು, ವಿಜ್ಞಾನಿಗಳು ಮತ್ತು ವೈಜ್ಞಾನಿಕ ಅನ್ವೇಷಣೆಗಳನ್ನು ಬಳಸಿಕೊಳ್ಳುವವರು ಸಾಮಾಜಿಕ ನೈತಿಕತೆಯನ್ನು ಬಿಡಬಾರದು ಎನ್ನುವುದು ಕೆಟ್ಟದಾಗಿ ಹೇಳುವ ರೀತಿ ಅಷ್ಟೇ. ಮೂಢನಂಬಿಕೆಗಳ ನಡುವೆ ಅಪ್ಪಚ್ಚಿಯಾಗಿರುವ ನೈತಿಕ ವ್ಯವಸ್ಥೆಗಾಗಿ, ಗೀತೆಯನ್ನಾಗಲೀ ಅಥವಾ ಬೈಬಲ್ಲನ್ನಾಗಲೀ ಕೆದಕಬೇಕಾಗಿಲ್ಲ. ಈ ಗ್ರಂಥಗಳ ಕಲಾತ್ಮಕತೆಯನ್ನು ಇಂದಿಗೂ ಸವಿಯಬಹುದು. ಅದಕ್ಕಿಂತ ಹೆಚ್ಚಿನದೇನೋ ಅದರಲ್ಲಿ ಇದೆ ಎನ್ನುವವರು ಸಾಮಾನ್ಯವಾಗಿ ಉಳಿದವರ ಮನಸ್ಸಿಗೆ ಸಂಕೋಲೆ ತೊಡಿಸುತ್ತಾರೆ ಮತ್ತು ಮಹತ್ತರವಾದ ಏನನ್ನೋ ಸಾಧಿಸುವ ನೆಪದಲ್ಲಿ ಮನುಷ್ಯನ ಪ್ರಗತಿಗೇ ಅಡ್ಡಿಯಾಗುತ್ತಾರೆ. ಮನುಷ್ಯನಿಗೆ ಮೊದಲು ಆಯಾ ಕಾಲದ ಸಮಾಜವು ಸೂಕ್ತವೆಂದು ಭಾವಿಸುವ ಮಟ್ಟದ ಭೌತಿಕ ಅವಶ್ಯಕತೆಗಳಾದರೂ ಸಿಗಬೇಕು. ಆಮೇಲೆ ಅವನಿಗೆ ಆಧ್ಯಾತ್ಮಿಕ ನೆಲೆಯಲ್ಲಿ ಪರಿಣತಿಯನ್ನು

ಸಾಧಿಸುವುದು ಸುಲಭವಾಗುತ್ತದೆ. ಅಂದರೆ, ನಮ್ಮ ಸಮಸ್ಯೆಗೆ ಇರುವ ನಿಜವಾದ ಕಾರಣ ಸಾಮಾಜಿಕವಾದದ್ದು. ಹಾಗಾಗಿ ಸಾಮಾಜಿಕ ಕೆಡುಕಿಗೆ ಇರುವ ಮೂಲಭೂತ ಕಾರಣ ಸ್ಪಷ್ಟ. ಅದಕ್ಕೆ ಪರಿಹಾರವು ಮತಧರ್ಮಶಾಸ್ತ್ರದಲ್ಲಿಲ್ಲ, ಸಮಾಜದಲ್ಲಿದೆ. ಅಂದರೆ, ಯೋಜಿತ ಪ್ರಯೋಗದಿಂದ ಪಡೆದಂತಹ ತಾರ್ಕಿಕ ನಿಲುವುಗಳನ್ನು ಆಧರಿಸಿದ ಆಧುನಿಕ ವಿಜ್ಞಾನವನ್ನು ಸಮಾಜದ ರಚನೆಗೆ ಅನ್ವಯಿಸುವುದರಿಂದ ಮಾತ್ರ ಇದು ಸಾಧ್ಯವಾಗುತ್ತದೆ. ಆಧುನಿಕ ಉತ್ಪಾದನೆಯ ಅಡಿಪಾಯವೇ ವಿಜ್ಞಾನ. ಮಾನವನ ಅವಶ್ಯಕತೆಗಳನ್ನು ಪೂರೈಸಬಲ್ಲ ಇನ್ಯಾವುದೇ ಉತ್ಪಾದನಾ ಸಾಧನವೂ ಸದ್ಯಕ್ಕೆ ಕಾಣುತ್ತಿಲ್ಲ. ಉತ್ಪಾದನಾ ಸಂಬಂಧಗಳು ಅಡ್ಡಿಯಾಗದೇ ಹೋದಲ್ಲಿ, ಪ್ರತಿಯೊಬ್ಬನ ಭೌತಿಕ ಅವಶ್ಯಕತೆಯನ್ನು ಖಂಡಿತವಾಗಿಯೂ ಪೂರೈಸಬಹುದು"[೧] ಎಂದಿದ್ದಾರೆ.

ಈ ವ್ಯವಸ್ಥೆಯ ಸಾಮಾಜಿಕ ಕೆಡುಕಿಗೆ ಪರಿಹಾರವು ಮತಧರ್ಮಶಾಸ್ತ್ರಗಳಲ್ಲಿ ಇಲ್ಲ ಎಂಬುದು ಇವರ ಸ್ಪಷ್ಟವಾದ ನಿಲುವು. ಈ ಮತಧರ್ಮಶಾಸ್ತ್ರ ಹಾಗೂ ಗೀತೆ ಜನರಿಗೆ ಅತ್ಯಗತ್ಯವಾದ ಭೌತಿಕ ಅವಶ್ಯಕತೆಗಳನ್ನು ಪೂರೈಸುವುದಿಲ್ಲ ಎಂಬುದು ಇಲ್ಲಿನ ಪ್ರಧಾನ ಚರ್ಚೆಯಾಗಿದೆ.

"ಭಗವದ್ಗೀತೆಗೆ ನಮಸ್ಕಾರ" ಎಂಬ ಕೃತಿಯಲ್ಲಿ ಅರವಿಂದ ಮಾಲಗತ್ತಿ ಅವರು ತಾತ್ವಿಕವಾದ ಕೆಲವು ಮೂಲಭೂತ ಪ್ರಶ್ನೆಗಳನ್ನು ಎತ್ತಿದ್ದಾರೆ. ಬಹುಮುಖ್ಯವಾಗಿ ಬ್ರಹ್ಮ, ಆತ್ಮ, ಮೋಕ್ಷ ಮತ್ತು ದೇಹ, ವರ್ಣಸಂಕರ, ಜಾತೀಯತೆ, ಅಸ್ಪೃಶ್ಯತೆ, ಅನ್ನಭೇದ ಹಾಗೂ ಮೌಢ್ಯಗಳ ಕುರಿತು ಈ ಕೃತಿಯಲ್ಲಿ ಚರ್ಚಿಸಿದ್ದಾರೆ. ಇಲ್ಲಿನ ಚರ್ಚೆಗೆ ಭಗವದ್ಗೀತೆಯನ್ನೇ ಕೇಂದ್ರವಾಗಿರಿಸಿ ಕೊಂಡಿರುವುದರಿಂದ ಬ್ರಹ್ಮಸೂತ್ರ, ಮನುಸ್ಮೃತಿ ಇಂಥ ಕೃತಿಗಳ ವಿಚಾರಗಳಿಗೆ ಅಷ್ಟಾಗಿ ಆದ್ಯತೆ ಕೊಟ್ಟಿಲ್ಲ. ಸಾಮಾಜಿಕ ಶ್ರೇಣೀಕರಣದ ಈ ಸಮಾಜದಲ್ಲಿ ಭಗವದ್ಗೀತೆ ಪ್ರತಿಪಾದಿಸುವ ಕೆಲವು ಸಾಮಾಜಿಕ ಮತ್ತು ಮಹಿಳಾ ಪ್ರಶ್ನೆಗಳನ್ನು ಈ ಕೃತಿಯಲ್ಲಿ ಹುಡುಕಾಟ ಮಾಡಿದ್ದಾರೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ–ಚಾತುರ್ವರ್ಣ್ಯ ಹಾಗೂ ಜಾತಿಯನ್ನು ಸಮರ್ಥಿಸುವ ಗೀತೆ, ಸ್ತ್ರೀಯರು, ವೈಶ್ಯರು, ಶೂದ್ರರು ಪಾಪಯೋನಿಜರೆ?, ಗುಣಕರ್ಮ ವಿಚಾರ, ಗೀತೆಯ ಮೂಲಕ ಜಾತಿಯ ವಿಷಬೀಜ ಬಿತ್ತುವ ಕೋಮುವಾದಿ ನಿಲುವು, ವರ್ಣಸಂಕರದ ವಿರೋಧಿ ನಿಲುವು–ಇವೇ ಮುಂತಾದ ಗೀತೆ ಮತ್ತು ಸಂಪ್ರದಾಯವಾದಿಗಳ ಧೋರಣೆಗಳನ್ನು ಖಂಡಿಸುತ್ತಾ, ಗೀತೆಯ ವಿಚಾರಗಳ ಚರ್ಚೆಯನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ಅರಿಯುವ ಪ್ರಯತ್ನ ಮಾಡಿದ್ದಾರೆ.

"ವೈದಿಕ ತತ್ವದಲ್ಲಿ ಭೇದನೀತಿಯೇ ಜೀವಾಳವಾಗಿದೆ. ವರ್ಣಭೇದ, ಜಾತಿಭೇದ, ಸ್ತ್ರೀಭೇದ, ಜೀವಭೇದ, ಆತ್ಮಭೇದ, ದೇಹಭೇದ ಎಲ್ಲವನ್ನೂ ಬೇರೆ ಬೇರೆಯಾಗಿ ನೋಡಲಾಗಿದೆ. ಪ್ರತಿಯೊಂದು ಜೀವಿಯು ಪ್ರತ್ಯೇಕವಾಗಿ ಭಿನ್ನವಾಗಿದೆ ಎನ್ನುವ ಕಾರಣಕ್ಕೆ ಸಾಮಾಜಿಕ ಸಂಬಂಧಗಳು ಬೇಡವೆ? ಈ ಕೌಟುಂಬಿಕ ಸಂಬಂಧಗಳಿಗೆ ಅರ್ಥವಿಲ್ಲವೆ? ದೇಶದೊಂದಿಗೆ ಸಂಬಂಧವಿಲ್ಲವೆ? ಒಂದು ಜೀವಿಗೆ ಪ್ರತ್ಯೇಕ ಅಸ್ತಿತ್ವ ಇದೆ ಎಂದ ಮೇಲೆ, ಒಬ್ಬರಿನ್ನೊಬ್ಬರ ಮೇಲೆ ಅವಲಂಬಿಸಿ ಜೀವಿಸುವ, ಬಂಧುತ್ವದ ಪರಿಕಲ್ಪನೆ, ಧರ್ಮದ ಪರಿಕಲ್ಪನೆ ಯಾಕೆ ಬೇಕು? ಎನ್ನುವ ಪ್ರಶ್ನೆ ಏಳುತ್ತದೆ.

ಪ್ರತಿಯೊಂದು ಜೀವ/ಆತ್ಮಕ್ಕೂ ಪ್ರತ್ಯೇಕ ಅಸ್ತಿತ್ವ ಇದೆ ಎನ್ನುವುದು ನಿಜ, ಆದರೆ ಸಮಾಜ ಜೀವಿಯಾದ ಮಾನವನ ಆ ಪ್ರತ್ಯೇಕ ಅಸ್ತಿತ್ವಕ್ಕೆ ಸಮೂಹದೊಂದಿಗಿದ್ದಾಗಲೇ ಬೆಲೆ. ಜೀವ, ಜಡ, ಬ್ರಹ್ಮದ ಭೇದ ವಿಚಾರಗಳನ್ನು ಒಂದು ಹಂತದವರೆಗೆ ತರ್ಕಕ್ಕಾಗಿ ಒಪ್ಪಬಹುದು. ಆದರೆ ಈ ಪ್ರತ್ಯೇಕ ಅಸ್ತಿತ್ವಗಳನ್ನು ಜಾತಿ ವರ್ಣಗಳ ನೆಲೆಯಲ್ಲಿ ಕಟ್ಟಿಹಾಕಿದ್ದು ಎಷ್ಟು ಸರಿ? ಮನುಷ್ಯ ಮೆದುಳಿರುವ ಬುದ್ಧಿವಂತ ಪ್ರಾಣಿ, ಆದರೆ ಒಂದೊಂದು ಸಮೂಹವನ್ನು ಸೃಷ್ಟಿ ಮಾಡಿ, ಇವರೆಲ್ಲ ಒಂದೇ ಮಾದರಿಯ ನರರೆಂದು ಗುಣ-ಸ್ವಭಾವದ ಮೇಲೆ ನಾಲ್ಕು ದೊಡ್ಡಿಗೆ ತುಂಬುವ ಪ್ರಕ್ರಿಯೆ ಎಷ್ಟು ಸರಿ? ಮನುಷ್ಯನ ಗುಣ-ಸ್ವಭಾವಗಳು ಸ್ಥಾಯಿಯಾದವುಗಳೆ? ಅವೇನು ಬ್ಯಾಂಕ್ ಅಲ್ಲಿ ಇಟ್ಟ ಸ್ಥಿರ ಠೇವಣಿಯೆ? ಇದಲ್ಲದೆ 'ಮಡಿವಂತಿಕೆ' ಎಂಬುದು ಭೇದ ನೀತಿಯ ಬ್ರಹ್ಮಾಸ್ತ್ರ. ಕಾಣುವ ಲೋಕದ ಸಮಾಜದಲ್ಲಿ ಮನುಜರನ್ನು ಒಡೆದು ಹಾಕಿದಂತೆ, ಕಾಣದ ಲೋಕದ ಮೋಕ್ಷಕ್ಕೂ ಬೇರೆ ಬೇರೆ ಕಂಪಾರ್ಟ್‌ಮೆಂಟುಗಳು! ಕಂಪಾರ್ಟ್‌ಮೆಂಟಿಗೆ ತಕ್ಕಂತೆ ಟಿಕೆಟ್‌ಗಳ ಬಟಾವಣೆ, ಹೇಳುವುದಕ್ಕೆ ಒಂದು ನೀತಿ ಆಚರಣೆಗೆ ಮತ್ತೊಂದು ನೀತಿ ಸದಾಸಿದ್ಧ! 'ಗುಣಕರ್ಮ ವಿಭಾಗಶಃ' ಎನ್ನುವುದು ಮಾತು ಮಾತ್ರ ಜಾತಿಸಂಕರ ಆಗದಂತೆ ನಿಗಾ ವಹಿಸಿ, ಇರುವ ಜಾತಿ ಹೊಂಡಗಳನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳುವುದು ಒಳನೀತಿಯಾಗಿ ಕಾಣುತ್ತದೆ"[೨] ಎಂಬ ಅಪಾಯಗಳನ್ನು ಸೂಚಿಸುತ್ತಲೇ, ಗೀತೆ ಮತ್ತು ಅದಕ್ಕೆ ಬಂದ ವ್ಯಾಖ್ಯಾನಗಳಲ್ಲಿನ ದ್ವಂದ್ವಾತ್ಮಕ ಅಂಶಗಳನ್ನು ತೀಕ್ಷ್ಣವಾಗಿ ನಿಕಶಕ್ಕೆ ಒಡ್ಡಿದ್ದಾರೆ.

'ಭಗವದ್ಗೀತೆ: ಅಪರಾಧ ಮತ್ತು ಶಿಕ್ಷೆ' ಎಂಬ ಕೃತಿಯಲ್ಲಿ ಆರ್. ಡಿ. ಹೆಗಡೆ ಆಲ್ಮನೆ ಅವರು ಭಗವದ್ಗೀತೆಯ ದಾರ್ಶನಿಕ ಉದ್ದೇಶದಾಚೆಗೆ ಗೀತೆಯಲ್ಲಿ ಅಡಗಿರುವ ಸಾಮಾಜಿಕ ಧಾರ್ಮಿಕ ಮತ್ತು ರಾಜಕೀಯ ಧೋರಣೆಗಳನ್ನು ಕುರಿತು ಅಧ್ಯಯನ ಮಾಡಿದ್ದಾರೆ.

"ಭೌತವಾದದ ದೃಷ್ಟಿಯಿಂದ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಹಿನ್ನೆಲೆಯಲ್ಲಿ ಭಗವದ್ಗೀತೆಯ ಅಧ್ಯಯನ ಮಾಡುವುದು ಈ ಲೇಖನದ ಉದ್ದೇಶವಾಗಿದೆ. ಇಡಿಯಾಗಿ ಗೀತೆಯ ಒತ್ತು ಇರುವುದು ಅನಾಸಕ್ತಿಯಿಂದ ಕೂಡಿದ ಕರ್ಮಯೋಗದ ಮೇಲೆ, ಫಲಾಪೇಕ್ಷೆಯಿಲ್ಲದೆ ಶ್ರಮಿಸುವ ಬದುಕಿನ ಶ್ರಮದ ಮೇಲೆ. ಇದು ಆಧ್ಯಾತ್ಮಿಕ ಪ್ರಮೇಯಗಳನ್ನು ಆನುಷಂಗಿಕವಾಗಿ ಮಾತ್ರ ಉಲ್ಲೇಖಿಸಿರುವುದರಿಂದ ಆಧ್ಯಾತ್ಮಿಕ ಮಿತಿಗೆ ಒಳಪಡದ ಇಲ್ಲಿಯ ಅನಾಸಕ್ತಿಯನ್ನು ವಿಶ್ಲೇಷಿಸುವುದು ಮತ್ತು ನಿಜವನ್ನು ಹೊರಗೆಡಹುವುದು ಸೂಕ್ತವಾದದ್ದು. ಭಗವದ್ಗೀತೆಯ ಚಿಂತನಕ್ರಮವು ಮನುಷ್ಯ ಮತ್ತು ಮಾನವ ಬದುಕನ್ನೇ ಒಳಗೊಂಡಿದ್ದರೂ ಅದರಲ್ಲಿ ಅವನ ಐಹಿಕ ಹಿತಾಸಕ್ತಿಗಳು ಗೌಣವಾಗಿ, ಕ್ಷುದ್ರಗೊಳ್ಳುವ ಕಾರಣ ತಾತ್ವಿಕವಾಗಿ ಅದರ ಜಿಜ್ಞಾಸೆಯ ವಿಷಯ ಮನುಷ್ಯನಲ್ಲ, ಮನುಷ್ಯಕೇಂದ್ರಿತ ಬದುಕಲ್ಲ ಮತ್ತು ದೃಗ್ಗೋಚರ ಜಗತ್ತಲ್ಲ. ಇಲ್ಲಿಯ ವೈಚಾರಿಕ ನಿಲುವಿನಂತೆ, ಮನುಷ್ಯನ ಅಸ್ತಿತ್ವವು ಯಾವುದೋ ಅವ್ಯಕ್ತದ ಅಧೀನದಲ್ಲಿದೆ. ಇದರ ಪ್ರತಿಪಾದನೆಗೆ ಗೀತೆಯ ಅನೇಕ ಭಾವುಕ ನೀತಿಗಳನ್ನು ಸೃಷ್ಟಿಸಿ ತನ್ನ ಸಿದ್ಧಾಂತಗಳ ಅಮೂರ್ತ

ರೂಪದ ಕುರಿತು ಕಲ್ಪನಾತ್ಮಕ ಹೇಳಿಕೆ ಕೊಡುತ್ತ ನಂಬಿಸಲು ಕಸರತ್ತು ಮಾಡುವ ಹಿನ್ನೆಲೆಯಲ್ಲಿ ಒಂದು ಪ್ರಬಲ ಸಂಚು ಗೋಚರಿಸುತ್ತದೆ."[೩] ಅಷ್ಟೇ ಅಲ್ಲ, ಭಗವದ್ಗೀತೆಯ ಮುಖ್ಯ ಗುರಿ ಧರ್ಮಪ್ರಚಾರ ಕೈಗೊಳ್ಳುವುದು ಹಾಗೂ ಅನ್ಯರ ಆಕ್ರಮಣದಿಂದ ಆರ್ಯಭೂಮಿಯನ್ನು ದಕ್ಕಿಸಿಕೊಳ್ಳುವುದೇ ಆಗಿದೆ ಎನ್ನುತ್ತಾರೆ. ಜೊತೆಗೆ ಬೌದ್ಧ ತತ್ವಗಳನ್ನು ನಿಷ್ಕ್ರಿಯಗೊಳಿಸುವುದು ಇದರ ಮುಖ್ಯ ಧ್ಯೇಯವಾಗಿತ್ತು ಎಂಬುದು ಇವರ ಒಟ್ಟಾರೆ ನಿಲುವಾಗಿದೆ.

ಎಲ್.ಎಸ್. ಶೇಷಗಿರಿರಾವ್ ಅವರು 'ಭಗವದ್ಗೀತೆ' ಎನ್ನುವ ಲೇಖನದಲ್ಲಿ ಗೀತೆಯ ಪ್ರಭಾವದ ಬಗೆಗೆ ಚರ್ಚಿಸುತ್ತ, ಜಗತ್ತಿನ ಬರಹಗಾರ ಮತ್ತು ಕವಿಗಳ ಮೇಲೆ ಗೀತೆಯ ಸಂದೇಶಗಳು ಉಂಟುಮಾಡಿರುವ ವಿಸ್ತಾರತೆಯ ಬಗ್ಗೆ ಹೇಳಿದ್ದಾರೆ. ಆದರೆ ಅದರ ಆಂತರ್ಯದಲ್ಲಿರುವ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ವಿರೋಧಾಭಾಸಗಳ ಚರ್ಚೆಗೆ ಹೋಗುವುದಿಲ್ಲ. ಇವರು ಬಹುಮುಖ್ಯವಾಗಿ ಕರ್ಮಸಿದ್ಧಾಂತ ಮತ್ತು ಕೃಷ್ಣನು ಹೇಳಿದ್ದಾನೆ ಎಂದು ನಂಬಿಸಿರುವ ಅಥವಾ ಚಾತುರ್ವರ್ಣ್ಯಗಳನ್ನು ನಾನು ಸೃಷ್ಟಿಸಿದೆ ಎನ್ನುವ ಕೃಷ್ಣನ ಮಾತುಗಳನ್ನು ಬಹಳ ತಪ್ಪಾಗಿ ಅರ್ಥೈಸಿದ್ದಾರೆ ಎನ್ನುತ್ತಾ ಈ ವಾದಗಳ ಬಗೆಗೆ ಪರಿಶೀಲನೆಗೆ ತೊಡಗುತ್ತಾರೆ. "ತಾನು ಚಾತುರ್ವರ್ಣ್ಯಗಳನ್ನು ಸೃಷ್ಟಿಸಿದೆ. ಬ್ರಾಹ್ಮಣನು ತನ್ನ ಹಣೆಯಿಂದ ಮೂಡಿ ಬಂದ ಎಂಬ ಕೃಷ್ಣನ ಮಾತಿಗೆ ಉಗ್ರವಾದ ಟೀಕೆ ಕೇಳಿಬಂದಿದೆ. ಆದರೆ ಕೃಷ್ಣನ ಮಾತಿಗೆ ಇರುವ ಕೆಲವು ಆಯಾಮಗಳನ್ನು ಗಮನಿಸಬೇಕು. ಮೊದಲನೆಯದಾಗಿ, ಕೃಷ್ಣನೇ ನಾಲ್ಕು ವರ್ಣಗಳ ಸ್ವಭಾವಗಳನ್ನು ವರ್ಣಿಸಿದ್ದಾನೆ. ಹದಿನೈದನೆಯ ಅಧ್ಯಾಯದಲ್ಲಿ ಕೃಷ್ಣ ಹೇಳುತ್ತಾನೆ: "ಬ್ರಾಹ್ಮಣನ ಗುಣಗಳು ದೈವಭಕ್ತಿ, ಬ್ರಹ್ಮಚರ್ಯ ಮೊದಲಾದವುಗಳ ರೂಪದಲ್ಲಿ ತಪಸ್ಸು, ಒಳಗೆ-ಹೊರಗೆ ಶುಚಿ, ಮಾತು ಕೃತಿಗಳಲ್ಲಿ ಪ್ರಾಮಾಣಿಕತೆ, ಜ್ಞಾನ, ವಿಜ್ಞಾನ ಮತ್ತು ಧರ್ಮ", ಈ ಗುಣಗಳಿರುವವನ ಹುಟ್ಟು ಏನೇ ಇರಲಿ ಅವನು ಗೌರವಕ್ಕೆ ಯೋಗ್ಯ. ಚತುರ್ವರ್ಣಗಳ ವಿವರಣೆಯಲ್ಲಿ ಕೃಷ್ಣನು ಹುಟ್ಟನ್ನು ಪ್ರಸ್ತಾಪಿಸುವುದೇ ಇಲ್ಲ ಎನ್ನುವುದು ಗಮನಾರ್ಹ. ಶ್ರೀ ರಾಮಕೃಷ್ಣಾಶ್ರಮದ ಶ್ರೀ ಸ್ವಾಮಿ ಸೋಮನಾಥಾನಂದರು ಇದನ್ನು ವಿವರಿಸಿದ್ದಾರೆ. ದೇವರು ನಾಲ್ಕು ವರ್ಣಗಳನ್ನು ಸೃಷ್ಟಿಸಿದ-ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ. ಕೃಷ್ಣನು ತಾನು ಸ್ವಭಾವ ಮತ್ತು ಕರ್ಮಗಳನ್ನಾಧರಿಸಿ ಈ ವಿಭಾಗವನ್ನು ಮಾಡಿರುವೆನೆಂದು ಹೇಳುತ್ತಾನೆ. ಕೃಷ್ಣನು ಚಾತುರ್ವರ್ಣ್ಯಗಳನ್ನು ಕುರಿತು ಮಾತನಾಡುವಾಗ ಅವನು ಭಾರತವನ್ನು ಮಾತ್ರವೇ ಕುರಿತು ಮಾತನಾಡುತ್ತಿಲ್ಲ. ಇಡೀ ಮಾನವಕುಲವನ್ನು ಗಮನದಲ್ಲಿಟ್ಟುಕೊಂಡಿದ್ದಾನೆ. ಯಾವುದೇ ನಾಡಿನ ಮುನ್ನಡೆಗೆ ಈ ನಾಲ್ಕು ಬಗೆಯ ಮನುಷ್ಯರೂ ಬೇಕು. ಪ್ರತಿಯೊಬ್ಬನೂ ತನ್ನ ಪಾಲಿಗೆ ಬಂದ ಕರ್ತವ್ಯವನ್ನು ಪಾಲಿಸಬೇಕು. ಜನರು ತಮ್ಮ ಪಾಲಿಗೆ ವೃತ್ತಿಗಳನ್ನು ಬಿಟ್ಟು ಬೇರೆಯವರಿಗೆ ವಹಿಸಿದ ಕರ್ತವ್ಯಗಳನ್ನು ಎತ್ತಿಕೊಂಡಾಗ ಸಮಾಜದಲ್ಲಿ ಅವ್ಯವಸ್ಥೆ ಮೂಡುತ್ತದೆ. ಇದು ಸ್ವಾಮೀಜಿ ಅವರ ವಿವರಣೆ. ಇದೊಂದು ಜಟಿಲವಾದ ಸಮಸ್ಯೆ. 'ವರ್ಣ'ವನ್ನು 'ಜಾತಿ'ಯೊಂದಿಗೆ ಸಮೀಕರಿಸುವುದು ಭಾರತದಲ್ಲಿ ರೂಢಿಯಾಗಿದೆ. ಆದರೆ ಕೃಷ್ಣನು ಹೇಳುವ ಶ್ಲೋಕವು ಜಾತಿಯನ್ನು ಪ್ರಸ್ತಾಪಿಸುವುದೇ ಇಲ್ಲ."[೪]

ಹೀಗೆ ಹೇಳುವ ಎಲ್.ಎಸ್. ಶೇಷಗಿರಿರಾವ್ ಅವರು 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ ಕರ್ಮ ವಿಭಾಗಶಃ' ಎನ್ನುವ ಶ್ಲೋಕದಲ್ಲಿರುವ ಸಾಮಾಜಿಕ ಶ್ರೇಣೀಕರಣದ ಚರ್ಚೆಯನ್ನು ಅಲ್ಲಗಳೆದು ಕೃಷ್ಣನು ಹೇಳುವ ವಿಭಾಗಗಳು ವರ್ಗ ವಿಭಾಗಗಳಲ್ಲ; ಅಷ್ಟೇ ಅಲ್ಲ. 'ಆ ವಿಭಾಗಗಳು ಮನುಷ್ಯನು ಸೃಷ್ಟಿ ಮಾಡಿದ ವಿಭಾಗಗಳಿಗೆ ಅನ್ವಯಿಸುವುದಿಲ್ಲ' ಎನ್ನುತ್ತಾರೆ. ಇದೇ ಲೇಖನದಲ್ಲಿ 'ಅರ್ಜುನನು ಎಲ್ಲ ಮಾನವರ ಪ್ರತಿನಿಧಿ' ಎನ್ನುವ ಇವರು ಕೃಷ್ಣನು ಬೋಧಿಸುವ ಹಿಂಸೆಯ ಬಗೆಗೆ ಮೌನ ವಹಿಸುತ್ತಾರೆ. ಅಲ್ಲದೆ ಲೇಖನದಲ್ಲಿ ಪಾಶ್ಚಾತ್ಯ ಸಾಹಿತ್ಯದ ಮೇಲೆ ಗೀತೆಯ ಪ್ರಭಾವವನ್ನು ಕುರಿತು ಹೇಳುವ ಇವರು, ಭಗವದ್ಗೀತೆಯ 'ನಿನಗೆ ಕರ್ಮ ಮಾಡಲು ಹಕ್ಕಿದೆ, ಅದರ ಫಲದ ಮೇಲೆ ಹಕ್ಕಿಲ್ಲ'(ಗೀತೆ ೨-೪೭) ಎಂಬ ಶ್ಲೋಕದಿಂದ ಹಲವು ಕೃತಿಗಳು ಪ್ರಭಾವಿತವಾಗಿವೆ ಎನ್ನುತ್ತಾರೆ. ಈ ಸಾಲುಗಳಲ್ಲಿಯೂ ಅಸಮಾನ ಅಂಶಗಳು ಕಾಣುತ್ತಿವೆಯಲ್ಲ ಎಂಬ ಮಾತನ್ನು ಗಂಭೀರವಾಗಿ ಚಿಂತನೆಗೆ ಒಳಗುಮಾಡಿಲ್ಲ. ಇದಕ್ಕೆ ಕಾರಣ ಮಾರ್ಕ್ಸಿಸ್ಟ್ ಚಿಂತಕರ ಸಮರ್ಥನೆಗೂ ಇವರಿಗೂ 'ಬೂರ್ಷ್ವಾ ಮೆಂಟಾಲಿಟಿ'ಯಾಗಿ ಕಂಡಿರಬಹುದೇ? ಎಂಬ ಪ್ರಶ್ನೆ ಎದುರಾಗುತ್ತದೆ.

ಕೆ. ನರಸಿಂಹಶಾಸ್ತ್ರಿ, ತೀರ್ಥಹಳ್ಳಿ ಅವರು 'ಗಾಂಧೀಜಿ ಮತ್ತು ಭಗವದ್ಗೀತೆ' ಎಂಬ ಲೇಖನದಲ್ಲಿ ಗಾಂಧೀಜಿ ಅವರ ಬದುಕು ಮತ್ತು ವ್ಯಕ್ತಿತ್ವದ ಮೇಲೆ ಗೀತೆ ಉಂಟುಮಾಡಿದ ಪ್ರಭಾವದ ಬಗ್ಗೆ ಚರ್ಚಿಸಿದ್ದಾರೆ. ಹಾಗೆಯೇ ಗೀತೆಯಿಂದ ಪ್ರಭಾವಿತರಾದ ಗಾಂಧೀಜಿ ಮುಂದೆ ತಾವೆ ಸರಳವಾಗಿ ಎಲ್ಲರಿಗೂ ಅರ್ಥವಾಗುವ ಹಾಗೆ 'ಅನಾಸಕ್ತಿಯೋಗ'ವೆಂಬ ಹೆಸರಿನಲ್ಲಿ ಗೀತೆಯನ್ನು ಅನುವಾದ ಮಾಡಿದರು.

ಗಾಂಧಿ ಅವರ ದೃಷ್ಟಿಯಲ್ಲಿ 'ಮಹಾಭಾರತದ ಸಂಗತಿ ಚಾರಿತ್ರಿಕವಲ್ಲ' ಪ್ರತಿಯೊಬ್ಬ ವ್ಯಕ್ತಿಯಲ್ಲಿ ಉಂಟಾಗುವ ದ್ವಂದ್ವಗಳೇ ಅರ್ಜುನನಲ್ಲೂ ಉಂಟಾಗಿವೆ ಎಂಬುದು ಗಾಂಧೀಜಿ ನಿಲುವು. ನರಸಿಂಹಶಾಸ್ತ್ರಿಯವರ ಅಭಿಪ್ರಾಯವೂ ಇದನ್ನೇ ಅಭಿವ್ಯಕ್ತಿಸಿದೆ. ಆದರೂ ಗೀತೆಯು ಒಳಗೊಂಡಿರುವ ವಿರೋಧಾಭಾಸ ಮತ್ತು ಸಂಶಯಗಳ ಬಗ್ಗೆ ಉಲ್ಲೇಖಿಸಿದ್ದಾರೆ. "ಬಾಂಧವ ಹತ್ಯೆಯನ್ನು ಬೋಧಿಸುವ ಗೀತೆ ಮಹದ್‌ಗ್ರಂಥವೆನ್ನಬಹುದೆ? ಯುದ್ಧ ಕಾಳಗದ ಸಂಭ್ರಮದಲ್ಲಿ ಈ ಉಪದೇಶಕ್ಕೆ ಅವಕಾಶವಿದೆಯೆ? ಭಾರತದ ಭಾಗವಾಗಿ ಬಂದ ಇದನ್ನು ಕೃಷ್ಣ ಪರಮಾತ್ಮನೇ ಸ್ವಂತವಾಗಿ ಹೇಳಿದನೆಂದರೆ ಏನರ್ಥ? ಅವತಾರವಾದವನ್ನು ನಂಬುವುದು ಮೌಢ್ಯವಲ್ಲವೆ? ಪುರಾಣಕೃಷ್ಣನಿಂದ ಗೀತಾಕೃಷ್ಣನನ್ನು ಬೇರ್ಪಡಿಸುವುದು ಸಾಧ್ಯವೆ? ಸಾಧುವೇ? ಜನ್ಮಾಂತರಗಳನ್ನು ನಂಬುವುದು ಹೇಗೆ? ಈಶ್ವರನು ಎಲ್ಲ ಹೃದಯಗಳಲ್ಲೂ ಇದ್ದು ನಡೆಸುವುದಾದರೆ, ದೌರ್ಜನ್ಯಕ್ಕೂ ಅವನೇ ಕಾರಣನಲ್ಲವೆ? ಫಲಾಪೇಕ್ಷೆಯಿಲ್ಲದೆ ಮಾಡುವ ಕಾರ್ಯದಲ್ಲಿ ಶ್ರದ್ಧೆ ಹುಟ್ಟುವುದೆಂದು ಹೇಗೆ ನಂಬೋಣ? ಸರ್ವ ಸಮರ್ಪಣ ಭಾವದಿಂದ ಶರಣಾಗತರಾಗಿ ಬದುಕುವುದಾದರೆ ಪುರುಷಕಾರಕ್ಕೆ ಸ್ಥಾನವೇನು? ಚಾತುರ್ವರ್ಣ್ಯವು ಸಮಾಜದ ಅಧಃಪತನಕ್ಕೆ ಕಾರಣವಲ್ಲವೆ?

ಗೀತೆಯಲ್ಲಿ ಹಲವು ಸಂಗತಿಗಳು ವಿಶೃಂಖಲವಾಗಿ ಬಂದಿರುವುದೇಕೆ? ಪರಸ್ಪರ ವಿರೋಧಾಂಶಗಳಿರುವುದಕ್ಕೆ ಕಾರಣವೇನು? ಅಲ್ಲಿ ಬರುವ ಪುನರುಕ್ತಿಗಳಿಗೆಲ್ಲ ವಿಶೇಷಾರ್ಥಗಳುಂಟೆ– ಮುಂತಾದ ಸಂದೇಹ, ಸಂಶಯಗಳು ಏಳಬಹುದು. ವಿಸ್ತಾರವಾದ ಗ್ರಂಥದಲ್ಲಿ ಇವಕ್ಕೆಲ್ಲ ಸಮಂಜಸವಾದ ಉತ್ತರ ದೊರೆತಿದೆ. ಮೇಲುನೋಟದಿಂದ ನೋಡಿ ಹೀಗೆ ಸಂಶಯ ಪಡುವುದಕ್ಕಿಂತ ಸತ್ಯಶೋಧಕರಾಗಲು ಯತ್ನಿಸಿ ಶ್ರದ್ಧೆಯಿಂದ ಗೀತಾಭ್ಯಾಸದಲ್ಲಿ ತೊಡಗಿದರೆ ಇವಕ್ಕೆಲ್ಲ ಗೀತೆಯೇ ಉತ್ತರ ಕೊಡುತ್ತದೆ"[೫] ಎಂದಿದ್ದಾರೆ.

ಸಿ.ಎನ್. ರಾಮಚಂದ್ರನ್ ಅವರು 'ಮುಕ್ತಪಠ್ಯ?: ಭಗವದ್ಗೀತೆಯನ್ನು ಕುರಿತು' ಎಂಬ ಲೇಖನದಲ್ಲಿ ಗೀತೆಯನ್ನು ಕುರಿತ ಪ್ರಮುಖ ವ್ಯಾಖ್ಯಾನಗಳ ಪರಿಚಯ ಮತ್ತು ಇಂದು ಭಗವದ್ಗೀತೆಯನ್ನು ಹೇಗೆ ನೋಡಬೇಕು? ಎಂಬ ಪ್ರಶ್ನೆಗಳನ್ನು ಶೋಧಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಹೀಗೆ ಗೀತೆ ಕುರಿತು ಇಲ್ಲಿಯವರೆಗೆ ಬಂದಿರುವ ವ್ಯಾಖ್ಯಾನಗಳನ್ನು ಪರಿಚಯಾತ್ಮಕವಾಗಿ ವಿಶ್ಲೇಷಿಸುತ್ತಾರಾದರೂ 'ಭಗವದ್ಗೀತೆ'ಯನ್ನು ಇಂದು ಹೇಗೆ ಓದಬೇಕು ಎಂಬ ಪ್ರಶ್ನೆಗೆ ಉತ್ತರಿಸದೇ ದ್ವಂದ್ವಾತ್ಮಕ ನಿಲುವನ್ನು ತಾಳುತ್ತಾರೆ. ಅಂದರೆ ಭಗವದ್ಗೀತೆಯ ಸ್ವಾರಸ್ಯಗಳ ಬಗ್ಗೆ ಸಹಮತ ವ್ಯಕ್ತಪಡಿಸುವ ಇವರು "ಈ ಕೃತಿ ಸಾಹಿತ್ಯಕ ನೆಲೆಯಲ್ಲಿ ಸರಳ, ಸುಂದರ ಹಾಗೂ ಮನೋಹರ ಶ್ಲೋಕಗಳಿಂದ ಕೂಡಿದ ಅದ್ಭುತ ಕೃತಿ, ಆದರೆ ವೈಚಾರಿಕ ನೆಲೆಯಲ್ಲಿ ಸ್ವವಿರೋಧಗಳಿಂದ ಕೂಡಿದ ಮತ್ತು ಯಾರು ಹೇಗೆ ಬೇಕಾದರೂ ಅರ್ಥೈಸಬಲ್ಲ ಜನಪ್ರಿಯ ಗ್ರಂಥ"[೬] ಎನ್ನುತ್ತಾರೆ. ಗೀತೆಯನ್ನು ತುಂಬಾ ವಿಸ್ತಾರವಾಗಿ ಮತ್ತು ಕಟುವಾಗಿ ವ್ಯಾಖ್ಯಾನಿಸುವ ಅಗೇಹಾನಂದ ಭಾರತಿ ಅವರ ಅಭಿಪ್ರಾಯವನ್ನು ತಿರಸ್ಕರಿಸುತ್ತಾರೆ. ತರ್ಕಕ್ಕೆ ಆಸ್ಪದವಿಲ್ಲದ ಮೇಲೆ ಮುಕ್ತಪಠ್ಯ ಹೇಗಾದೀತು? ಎಂಬುದು ಇಲ್ಲಿ ಎದುರಾಗುವ ಪ್ರಶ್ನೆ. ಲೇಖಕರು ಈ ಲೇಖನದಲ್ಲಿ ಇತರ ಅನೇಕ ವ್ಯಾಖ್ಯಾನಗಳಿಗಿಂತ ಗಾಂಧಿ ಅವರ ವ್ಯಾಖ್ಯಾನ ಭಿನ್ನವಾಗಿದೆ ಎನ್ನುತ್ತಾರೆ. ಗೀತೆ "ರಾಜಕೀಯ ವ್ಯಾಖಾನವೂ ಅಲ್ಲ, ಆಧ್ಯಾತ್ಮಿಕ ವ್ಯಾಖ್ಯಾನವೂ ಅಲ್ಲ; ಮತ್ತು ಅದು ಪಾಂಡಿತ್ಯ ಹಾಗೂ ತರ್ಕಗಳಿಂದ ಮುಕ್ತವಾಗಿದೆ. ಗಾಂಧೀಜಿ ಅವರಿಗೆ ಗೀತೆಯು ಮುಖ್ಯವಾಗುವುದು ಒಂದು ಸುಸಂಸ್ಕೃತ ಬದುಕನ್ನು ನಡೆಸಲು ಅವಶ್ಯಕವಾದ ನೈತಿಕ ಸಂಹಿತೆಯನ್ನು ಗೀತೆ ಒದಗಿಸುತ್ತದೆ ಎನ್ನುವ ಕಾರಣಕ್ಕಾಗಿ."[೭] ಇಂಥ ಅನೇಕ ಬಗೆಯ ವ್ಯಾಖ್ಯಾನಗಳನ್ನು ಒಳಗೊಂಡ ಕೃತಿ ಮತ್ತು ಕೃತಿಕಾರರ ಬಗ್ಗೆ ಪರಿಚಯವನ್ನು ಈ ಲೇಖನದಲ್ಲಿ ಮಾಡಿಕೊಟ್ಟಿದ್ದಾರೆ.

ಹೀಗೆ ಪ್ರಶ್ನೆಗಳನ್ನು ಎತ್ತುವ ಇವರು ಕೊನೆಗೆ 'ಗೀತೆಯೇ ಉತ್ತರ ಕೊಡುತ್ತದೆ' ಎನ್ನುವ ಮಾತಿನಲ್ಲಿ ದ್ವಂದ್ವವೇ ಇದೆ ಎಂಬುದಂತೂ ಸ್ಪಷ್ಟ. ಈ ಲೇಖನದ ಅಭಿಪ್ರಾಯಗಳೇ ಹಲವು ವಿರೋಧಾಭಾಸಗಳನ್ನು ಓದುಗರಲ್ಲಿ ಉಂಟುಮಾಡುತ್ತದೆ.

ಡಿ.ವಿ. ಪ್ರಹ್ಲಾದ್ ಅವರು ಇತ್ತೀಚೆಗೆ ಸಂಪಾದಿಸಿರುವ 'ಮತ್ತೊಮ್ಮೆ ಭಗವದ್ಗೀತೆ' ಎಂಬ ಕೃತಿಯಲ್ಲಿ 'ಗೀತೆಯ ಬಗೆಗೆ ಹಲವು ಸೂಕ್ಷ್ಮ ನೋಟಗಳಿವೆ. ಈ ಸಮಕಾಲೀನ ಸಂದರ್ಭದಲ್ಲಿ

ಗೀತೆಯ ಪ್ರಸ್ತುತತೆ ಹಾಗೂ ಗೀತೆಯ ಉದ್ದೇಶ ಮತ್ತು ಗುರಿಗಳು ಯಾವುವು? ಇತ್ಯಾದಿ ವಿಚಾರಗಳನ್ನು ಈ ಕೃತಿ ಚರ್ಚೆಗೆ ಒಳಗು ಮಾಡುತ್ತದೆ. ಕನ್ನಡದಲ್ಲಿ ಗೀತೆಯ ಬಗ್ಗೆ ಈ ಹಿಂದೆ ಬಂದಿದ್ದ ಲೇಖನಗಳ ಜೊತೆಗೆ ಇತ್ತೀಚೆಗೆ ರಚನೆಯಾದ ಚಿಂತನೆಗಳು ಇಲ್ಲಿ ಸಂಕಲನಗೊಂಡಿವೆ.

ಈ ಕೃತಿಯಲ್ಲಿ 'ಗೀತೆಯ ಗೊಂದಲಗಳು', ಭಗವದ್ಗೀತೆಯ ಟೀಕೆಗಳು–ಪ್ರತಿಕ್ರಿಯೆಗಳು', ಸ್ತ್ರೀಯರು ವೈಶ್ಯರು ಶೂದ್ರರು ಪಾಪಯೋನಿಜರೇ', 'ಕುಮಾರವ್ಯಾಸ–ಭಗವದ್ಗೀತೆ', 'ಭಗವದ್ಗಿತೆಯ ರಹಸ್ಯ ಯಾವುದು?', 'ಕನ್ನಡದಲ್ಲಿ ಭಗವದ್ಗೀತಾ ಸಾಹಿತ್ಯ', 'ಗೀತೆ ಮತ್ತು ಆಹಾರ ಪದ್ಧತಿ' ಇನ್ನೂ ಮುಂತಾದ ಲೇಖನಗಳು ಸಂಕಲನಗೊಂಡಿವೆ. ಭಗವದ್ಗೀತೆಯ ಬಗೆಗೆ ಇರುವ ಕೆಲವು ಗೊಂದಲ ಮತ್ತು ಸಂದೇಹಗಳಿಗೆ ಉತ್ತರವನ್ನು ಶೋಷಿಸುವ ಪ್ರಯತ್ನವನ್ನು ಈ ಕೃತಿಯ ಹಲವು ಲೇಖನಗಳು ಮಾಡಿವೆ.

ಬಿ. ಗಂಗಾಧರ ಮೂರ್ತಿ ಅವರು ಅನುವಾದಿಸಿರುವ ವಿ.ಆರ್. ನಾರ್ಲ ಅವರ 'ಗೀತೆಯ ಒಳಗಿನ ಸತ್ಯ ಏನು?' ಎಂಬ ಕೃತಿಯಲ್ಲಿ ಕರ್ಮಸಿದ್ಧಾಂತದ ಹೆಸರಿನಲ್ಲಿ ಬೋಧಿಸುವ ಯಥಾಸ್ಥಿತಿವಾದವನ್ನು ನಿಷ್ಠುರವಾಗಿ ವಿಮರ್ಶಿಸಿದ್ದಾರೆ. ಇವರು ಮುಖ್ಯವಾಗಿ ಗೀತೆಯ ಅಂತರ್‌ಸಂಬಂಧದ ನೆಲೆಗಳಾದ ಮಹಾಭಾರತದ ಯುದ್ಧ, ಕುರುಕ್ಷೇತ್ರ ಯುದ್ಧ ನಡೆದದ್ದು ಚಾರಿತ್ರಿಕ ಸತ್ಯವೇ? ಗೀತೆಯ ಕಾಲನಿರ್ಣಯ, ಕೃಷ್ಣ ಯಾರು? ಅವನು ಮಾನವನೇ? ಅಥವಾ ದೇವರೇ? ಗೀತೆಯನ್ನು ಬರೆದವರು ಯಾರು? ಗೀತೆ ರಚನೆಯಾದ ಕಾಲ ಯಾವುದು? ಗೀತೆ ರಚನೆಯ ಹಿಂದಿನ ಉದ್ದೇಶ ಮುಂತಾದ ಅನೇಕ ಮೂಲಭೂತ ಪ್ರಶ್ನೆಗಳಿಗೆ ತಾತ್ವಿಕ ನೆಲೆಗಟ್ಟಿನಲ್ಲಿ ಸ್ಪಷ್ಟನೆ ನೀಡಿರುವ ನಾರ್ಲ ಅವರು ಕ್ರಿ.ಶ. ೮ನೇ ಶತಮಾನದಿಂದ ಪ್ರಾರಂಭಗೊಂಡ ಗೀತೆಯ ವ್ಯಾಖ್ಯಾನ ಪ್ರಕ್ರಿಯೆಗಳು ಗೀತೆಯನ್ನು ತಮಗೆ ಇಷ್ಟ ಬಂದಂತೆ ಜಗ್ಗಾಡುತ್ತಿರುವುದಕ್ಕೆ ನಿದರ್ಶನ ಎಂದಿದ್ದಾರೆ. ಹೀಗೆ ಗೀತೆಯೊಳಗಿನ ಹಲವು ಬಗೆಯ ಗೊಂದಲಗಳು, ಒಣ ವೇದಾಂತಗಳು ಹಾಗೂ ಅಸಂಬದ್ಧವಾದ ವಿಚಾರಗಳನ್ನೇ ವ್ಯಾಖ್ಯಾನ ಮತ್ತು ಭಾಷಾಂತರಗಳು ವಾಸ್ತವಿಕ ಸತ್ಯವೆಂದು ನಂಬಿಸಿವೆ ಎಂಬುದು ಇವರ ವಾದವಾಗಿದೆ.

"ಸನಾತನ ಧರ್ಮೀಯ ವಾಙ್ಮಯದಲ್ಲಿ ಕ್ರಿ.ಶ.೮–೯ನೇ ಶತಮಾನದವರೆಗೆ ಯಾವುದೇ ಪ್ರಾಮುಖ್ಯತೆ ಇದ್ದಿಲ್ಲದ ಗೀತೆಯನ್ನು 'ಭಗವದ್ಗೀತೆ'ಯಾಗಿಸಿದ ಶಂಕರಾಚಾರ್ಯರು ವೈದಿಕ ಧರ್ಮದ ನೇರ ಉತ್ಪನ್ನವಾದ ಈ ಗ್ರಂಥವನ್ನು "ಗೀತಾಶಾಸ್ತ್ರ"ವೆಂದು ಕರೆಯುತ್ತಾರೆ. ...ಗೀತೆಯು ವರ್ಣಧರ್ಮದ ಸಂಹಿತೆಯಾಗಿರುವುದರಿಂದ ಅದನ್ನು ಭಗವದ್ಗೀತೆ ಎಂದು ಕರೆಯುವುದಕ್ಕಿಂತ ಗೀತಾಶಾಸ್ತ್ರವೆಂದು ಕರೆಯುವುದು ಅತ್ಯಂತ ಸೂಕ್ತವಷ್ಟೇ ಅಲ್ಲದೆ ಅದಕ್ಕೆ ಯೋಗ್ಯಸ್ಥಾನವನ್ನು ನೀಡಿದಂತಾಗುತ್ತದೆ. ಗೀತೆಯ ರಚನೆಯಲ್ಲಿ ನಾವು ಗಮನಿಸಬೇಕಾದ ಒಂದು ಚೋದ್ಯವಿದೆ, ಒಂದು ತಂತ್ರಗಾರಿಕೆ ಇದೆ. ಗೀತೆಯ ರಚನೆಯಲ್ಲಿ ಸಾಂಸ್ಕೃತಿಕವೂ ಸಾಮಾಜಿಕವೂ ಆದ

ಆಯಾ ಕಾಲಘಟ್ಟದ ಮೌಲ್ಯಗಳು ಮತ್ತು "ಧರ್ಮ ಎಂಬುದು ಜಾತಿವ್ಯವಸ್ಥೆಯಿಂದ ಬೇರ್ಪಡಿಸಲಾಗದ ವಾಸ್ತವ ಸಂಗತಿ" ಎಂಬಂತಹ ನೀತಿ-ನಿಯಮಗಳ ಜೊತೆಯಲ್ಲಿ ಸಾರ್ವಕಾಲಿಕವೆಂದು ಪರಿಗಣಿಸಬಹುದಾದ ಕೆಲವೊಂದು ಮೌಲ್ಯಗಳನ್ನು ಕಲಸಿ ಇಡೀ ಗ್ರಂಥವು ತಾತ್ವಿಕ ಅರ್ಥದಲ್ಲಿ ಜಗತ್ತಿನಲ್ಲೇ ಅತ್ಯಂತ ಶ್ರೇಷ್ಠ ಗ್ರಂಥವೆಂದು ಬಿಂಬಿಸಲಾಗುವ ತತ್ವಚೌರ್ಯದ ತಂತ್ರಗಾರಿಕೆ ಇದು"[೮] ಎನ್ನುತ್ತಾರೆ.

ಹೀಗೆ ಇವರು ಬಹುಮುಖ್ಯವಾಗಿ ಗೀತೆಯ ಬಗೆಗೆ ವ್ಯಕ್ತವಾಗಿರುವ ಬ್ರಾಹ್ಮಣವಾದಿ ನೆಲೆ ಮತ್ತು ಅ-ಬ್ರಾಹ್ಮಣವಾದಿ ನೆಲೆಗಳ ಒಟ್ಟು ಸಾರವನ್ನು ಶೋಧಿಸಿ, ಈ ಚರ್ಚೆಗಳು ಹುಟ್ಟುಹಾಕಿರುವ ವಾಸ್ತವಿಕ ನೆಲೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ.

'ಭಗವದ್ಗೀತೆ: ಒಂದು ಪರಾಮರ್ಶೆ' ಎಂಬ ಕೃತಿಯಲ್ಲಿ ಎಂ.ಸಿ. ಡೋಂಗ್ರೆ ಅವರು ಭಗವದ್ಗೀತೆ ಮತ್ತು ಅದರ ಅಂತರ್‌ಸಂಬಂಧದ ಅಂಶಗಳನ್ನು ಕಟು ವಿಮರ್ಶೆಗೆ ಒಳಪಡಿಸಿದ್ದಾರೆ. ಜೊತೆಗೆ ಕೆಲವು ಮೂಲಭೂತ ಪ್ರಶ್ನೆಗಳನ್ನು ಎತ್ತಿದ್ದಾರೆ. ಭಗವದ್ಗೀತೆಯನ್ನು ಯಾವಾಗ ರಚಿಸಲಾಯಿತು?, ಭಗವದ್ಗೀತೆಗೆ ಶಂಕರಾಚಾರ್ಯರ ಕೊಡುಗೆ, ಭಗವದ್ಗೀತೆಯಲ್ಲಿ ಸಾಂಖ್ಯ ಸಿದ್ಧಾಂತವನ್ನು ಯಾವ ರೀತಿ ತಿರುಚಲಾಗಿದೆ? ಕೃಷ್ಣನ ವಿಶ್ವರೂಪದಲ್ಲಿ 'ಶಿವ ಅಥವಾ ಈಶ್ವರ' ಯಾಕಿಲ್ಲ? ಭಗವದ್ಗೀತೆ ಕುರಿತು ಕಮ್ಯುನಿಷ್ಟರ ವಿಚಾರಗಳು ಇತ್ಯಾದಿ ವಿಷಯಗಳ ಬಗ್ಗೆ ಚಿಂತನೆಗೆ ಒಳಗುಮಾಡುತ್ತದೆ.

"ಭಗವದ್ಗೀತೆಯ ಪ್ರಕಾರ ಯಾವುದೇ ಕರ್ಮವನ್ನು ಅದರ ಫಲಾಪೇಕ್ಷೆಯಿಲ್ಲದೆ ಮಾಡಿದಾಗ ಅದು ನಿಷ್ಕಾಮಕರ್ಮವೆನಿಸುವುದು ಹಾಗೂ ಅದರಿಂದ ಪರಮಪದ ಅಂದರೆ ಮೋಕ್ಷ ಮತ್ತೂ ಜನ್ಮಾಂತರದ ಸುಳಿಯಿಂದ ಮುಕ್ತಿಗೊಂಡು ಸಚ್ಚಿದಾನಂದ ಘನನ ಶಾಶ್ವತ ಆಶ್ರಯ ದೊರೆಯುವುದು. ಆದರೆ ಶಾಶ್ವತ ಮೋಕ್ಷ ಪಡೆಯಬೇಕೆಂಬುದು ಒಂದು ಕಾಮನೆಯಲ್ಲವೇ? ಅಂದಮೇಲೆ ನಿಷ್ಕಾಮಕರ್ಮವೆಂಬುದು ಸಾಧ್ಯವೇ?"[೯] ಇವೇ ಮೊದಲಾದ ಅಂಶಗಳು ಸೇರಿ ಗೀತೆಯನ್ನು ಗೊಂದಲದ ಗೂಡಾಗಿಸಿದೆ. ಅಷ್ಟೇ ಅಲ್ಲ, ಮೂಢನಂಬಿಕೆ, ದಾಸ್ಯ, ಅಜ್ಞಾನಗಳು ತುಂಬಿ ಯಥಾಸ್ಥಿತಿವಾದವನ್ನು ಪ್ರತಿಪಾದಿಸುತ್ತದೆ ಎಂಬುದು ಅವರ ವಾದವಾಗಿದೆ.

'ಕುಮಾರವ್ಯಾಸ ಭಾರತದಲ್ಲಿ ಭಗವದ್ಗೀತೆ-ಒಂದು ಅಧ್ಯಯನ' ಎಂಬ ಸಂಶೋಧನಾ ಪ್ರಬಂಧದಲ್ಲಿ ಎಸ್. ಸುನಂದ ಅವರು ಮಹಾಭಾರತದ ಕಥೆಯಾದ ಕುಮಾರವ್ಯಾಸನ 'ಕರ್ಣಾಟಕ ಭಾರತ ಕಥಾಮಂಜರಿ'ಯು ಗೀತೆಯಿಂದ ಪ್ರಭಾವಿತವಾಗಿರುವ ಅಂಶಗಳ ಬಗ್ಗೆ ಇಲ್ಲಿ ಓದುಗರ ಗಮನ ಸೆಳೆದಿದ್ದಾರೆ.

ಕುಮಾರವ್ಯಾಸ ತನ್ನ ಕರ್ಣಾಟಕ ಭಾರತ ಕಥಾಮಂಜರಿಯಲ್ಲಿ ತರುವ ವಿದುರ ನೀತಿ, ಗೀತೋಪದೇಶ, ನಹುಷ-ಯುಧಿಷ್ಠಿರ ಸಂವಾದ, ಸನತ್ಸುಜಾತ ನೀತಿ ಇನ್ನೂ ಮುಂತಾದ ಕಥೆಗಳಲ್ಲಿ ಗೀತೆಯ ದರ್ಶನ, ತತ್ವ ಮತ್ತು ವೇದಾಂತದ ವಿಚಾರಗಳನ್ನು ತರುತ್ತಾನೆ. ಇದಕ್ಕೆ

ಮೂಲಪ್ರೇರಣೆ ಗೀತೆಯೇ ಆಗಿದೆ. ಕನ್ನಡದ ಆದಿಕವಿ ಪಂಪ, ಕುಮಾರವ್ಯಾಸ ಇಬ್ಬರೂ ಗೀತೆಯ ವಿಚಾರ ಮತ್ತು ತತ್ವದರ್ಶನಗಳಿಂದ ಪ್ರಭಾವಿತರಾಗಿದ್ದಾರೆ ಎಂಬುದು ಸಂಶೋಧಕರಾದ ಸುನಂದ ಅವರ ಅಭಿಪ್ರಾಯವಾಗಿದೆ. ಪಂಪ ಗೀತೆಯನ್ನು ಒಂದು ಪದ್ಯದಲ್ಲಿ ಹೇಳಿದ್ದಾನೆ, ಆದರೆ ಕುಮಾರವ್ಯಾಸ ಕೃಷ್ಣಕಥೆಯನ್ನು ಹೇಳುತ್ತಿರುವುದರಿಂದ ಹಾಗೂ ಕೃಷ್ಣನನ್ನು ತನ್ನ ಕಾವ್ಯದ ನಾಯಕನಾಗಿ ಚಿತ್ರಿಸುತ್ತಿರುವುದರಿಂದ ಪಂಪನಿಗಿಂತ ಹೆಚ್ಚು ಗೀತೆಯನ್ನು ವಿಸ್ತರಿಸಿ ಹೇಳಿದ್ದಾನೆ ಎಂಬುದನ್ನು ತಿಳಿಯಬಹುದಾಗಿದೆ.

ಕೊನೆ ಟಿಪ್ಪಣಿಗಳು

೧. ಕೊಸಾಂಬಿ ಡಿ.ಡಿ.:, ಪುರಾಣ ಮತ್ತು ವಾಸ್ತವ, ಪುಟ ೭೪–೭೫.

೨. ಅರವಿಂದ ಮಾಲಗತ್ತಿ: ಭಗವದ್ಗೀತೆಗೆ ನಮಸ್ಕಾರ, ಪುಟ ೯೮–೯೯.

೩. ಹೆಗಡೆ ಆರ್.ಡಿ. ಆಲ್ಮನೆ: ಭಗವದ್ಗೀತೆ ಅಪರಾಧ ಮತ್ತು ಶಿಕ್ಷೆ, ಪುಟ ೯.

೪. ಶೇಷಗಿರಿರಾವ್ ಎಲ್.ಎಸ್.: ಸಮಗ್ರ ವಿಮರ್ಶಾ ಸಾಹಿತ್ಯ ಸಂಪುಟ–೩, ಪುಟ ೨೧೬–೨೧೭.

೫. ನರಸಿಂಹ ಶಾಸ್ತ್ರಿ ಕೆ.: ಗಾಂಧೀಜಿ ಮತ್ತು ಭಗವದ್ಗೀತೆ, ಪುಟ ೧೮೭.

೬. ರಾಮಚಂದ್ರನ್ ಸಿ.ಎನ್.: ಆಖ್ಯಾನ–ವ್ಯಾಖ್ಯಾನ, ಪುಟ ೧೮.

೭. ಅದೇ, ಪುಟ ೧೩–೧೪.

೮. ನಾರ್ಲ ವಿ.ಆರ್.: ಗೀತೆ ಒಳಗಿನ ಸತ್ಯ ಏನು?, ಪುಟ xxvii-xxviii.

೯. ಡೋಂಗ್ರೆ ಎಂ.ಸಿ.: ಭಗವದ್ಗೀತೆ ಒಂದು ವಿಮರ್ಶೆ, ಪುಟ ೫೩.

❖❖❖

ಅಧ್ಯಾಯ: ಮೂರು

ಧಾರ್ಮಿಕ ಪಠ್ಯಗಳು: ವಸಾಹತುಶಾಹಿ ಪರಿಸರ

ಅಧ್ಯಾಯ: ಮೂರು

ಧಾರ್ಮಿಕ ಪಠ್ಯಗಳು: ವಸಾಹತುಶಾಹಿ ಪರಿಸರ

೩.೧. ಧಾರ್ಮಿಕ ಪಠ್ಯಗಳು ರೂಪುಗೊಂಡ ಬಗೆ

ಜಗತ್ತಿನ ಜನಸಂಖ್ಯೆಯ ಶೇ. ೮೪ರಷ್ಟು ಜನರು ಅತ್ಯಂತ ಐದು ದೊಡ್ಡ ಧರ್ಮಗಳಲ್ಲಿ ಅಂದರೆ ಕ್ರೈಸ್ತ, ಇಸ್ಲಾಂ, ಹಿಂದೂ, ಬುದ್ಧ ಅಥವಾ ಬುಡಕಟ್ಟು ಧರ್ಮ ಇವುಗಳಲ್ಲಿ ಯಾವುದಾದರೂ ಒಂದಕ್ಕೆ ಸೇರಿದವರಾಗಿದ್ದಾರೆ. ಇಂಗ್ಲಿಷ್‌ನ Religion ಎಂಬ ಪದ ಲ್ಯಾಟೀನ್‌ನ Religionem(Religio) ಎಂಬುದರಿಂದ ಬಂದಿದೆ. ಅದರ ಅರ್ಥ 'respect for what is sacred reverence for the gods, Obligation, the bond between man and gods'.

ಪ್ರಾಚೀನ ಮತ್ತು ಮಧ್ಯಕಾಲೀನ ಜಗತ್ತಿನಲ್ಲಿ ಲ್ಯಾಟೀನ್ ಮೂಲ ಪದವಾದ Religio ಎಂಬ ಪದವನ್ನು Individual virtue of worship ಎಂಬುದಾಗಿ ಅರ್ಥೈಸಿಕೊಳ್ಳಲಾಗಿತ್ತೇ ವಿನಾ ಸಿದ್ಧಾಂತ, ಆಚರಣೆ ಅಥವಾ ಜ್ಞಾನದ ವಾಸ್ತವಿಕ ಮೂಲ ಎಂಬುದಾಗಿ ಅಲ್ಲ. ನಂಬಿಕೆಗಳು ಅಥವಾ ಸಿದ್ಧಾಂತಗಳ ಮೊತ್ತ ಎನ್ನುವ ಅರ್ಥವನ್ನು ಒಳಗೊಳ್ಳುವ Religion ಎಂಬ ಆಧುನಿಕ ಪರಿಕಲ್ಪನೆಯು ಇಂಗ್ಲಿಷ್ ಭಾಷೆಗೆ ಸೇರಿದ್ದು ೧೭ನೇ ಶತಮಾನದಲ್ಲಿ. ಪ್ರೊಟೆಸ್ಟೆಂಟ್ ಸುಧಾರಣಾವಾದ ಕಾಲದಲ್ಲಿ ಕ್ರಿಶ್ಚಿಯನ್ ಸಾರ್ವಭೌಮತ್ವವು ವಿಘಟನೆಯಾದುದ ರಿಂದಾಗಿಯಲ್ಲದೆ, ಹೊಸ ಭೂಶೋಧಗಳಿಂದ ಆರಂಭವಾದ ವಸಾಹತೀಕರಣ ಮತ್ತು ಜಾಗತೀಕರಣದಿಂದ ಹಲವಾರು ವಿದೇಶಿ ಮತ್ತು ದೇಶಿ ಸಂಸ್ಕೃತಿಗಳು ಹಾಗೂ ಯೂರೋಪೇತರ ಭಾಷೆಗಳೊಂದಿಗೆ ವ್ಯವಹರಿಸಬೇಕಾದ್ದರಿಂದ ಇಂಗ್ಲಿಷ್‌ನಲ್ಲಿ ಈ ಬೆಳವಣಿಗೆಯಾಯಿತೆನ್ನಬಹುದು.

ಒಟ್ಟಿನಲ್ಲಿ Religion ಪರಿಕಲ್ಪನೆಯು ೧೭ನೇ ಶತಮಾನದಲ್ಲಿ ತನ್ನ ಆಧುನಿಕ ಅರ್ಥವನ್ನು ಪಡೆದುಕೊಂಡಿತು. ವಾಸ್ತವದಲ್ಲಿ ಪ್ರಾಚೀನ ಪಠ್ಯಗಳು ಎಂದರೆ ಬೈಬಲ್, ಕುರಾನ್ ಮತ್ತಿತರ ಪವಿತ್ರಪಠ್ಯಗಳು ಅವುಗಳ ಮೂಲ ಭಾಷೆಗಳಲ್ಲಿಯೂ 'ಧರ್ಮ' ಎಂಬ ಪರಿಕಲ್ಪನೆಯನ್ನು ಹೊಂದಿರಲಿಲ್ಲ ಹಾಗೂ ಈ ಪವಿತ್ರ ಪಠ್ಯಗಳನ್ನು ಬರೆಯಲಾಗಿದ್ದ ಸಂಸ್ಕೃತಿಗಳು ಅಥವಾ ಜನರೂ ಸಹ ಈ ಆಧುನಿಕ ಅರ್ಥದಲ್ಲಿ ಬಳಸಿರಲಿಲ್ಲ.

ಉದಾಹರಣೆಗೆ, ಹೊಸ ಒಡಂಬಡಿಕೆಯಂತಹ ಪತ್ರಗಳಲ್ಲಿ ಕಾಣಸಿಗುವ ಹೆರೊಡಟಸ್, ಜೋಸೆಫಸ್ ಮುಂತಾದ ಗ್ರೀಕ್ ಬರಹಗಾರರು ಬಳಸಿರುವಂತಹ ಗ್ರೀಕ್ ಪದ 'Threskeia' ಪದವನ್ನು ಈಗ Religion ಎಂಬುದಾಗಿ ಅನುವಾದಿಸಲಾಗಿದೆ. ಈ ಪದವನ್ನು ಮಧ್ಯಕಾಲೀನ ಯುಗದಲ್ಲಿ ಆಚರಣೆ(worship) ಎಂಬುದಾಗಿ ಬಳಸಲಾಗುತ್ತಿತ್ತು.

ಕುರಾನ್ ಅಲ್ಲಿ ಅರೇಬಿಕ್ ಪದ Din ಎಂಬುದನ್ನು ಆಧುನಿಕ ಭಾಷಾಂತರಗಳಲ್ಲಿ Religion ಎಂಬರ್ಥದಲ್ಲಿ ಅನುವಾದಿಸಲಾಗುತ್ತಿದೆ. ಆದರೆ ಕ್ರಿ.ಶ.೧೬೦೦ರವರೆಗೂ ಭಾಷಾಂತರಕಾರರು Law ಎಂಬುದಾಗಿಯೇ ಬಳಸುತ್ತಿದ್ದರು. ಬುದ್ಧಿಸಂ, ಹಿಂದೂಯಿಸಂ, ತಾವೋಯಿಸಂ, ಕನ್‌ಫೂಸಿಯನಿಸಂ ಎಂಬ ಪರಿಭಾಷೆಗಳು ಹುಟ್ಟಿದುದೇ ೧೯ನೇ ಶತಮಾನದಲ್ಲಿ. ಜಪಾನ್‌ನ ಒಟ್ಟೂ ಇತಿಹಾಸದಲ್ಲಿ Religion ಎಂಬ ಪರಿಕಲ್ಪನೆಯೇ ಇರಲಿಲ್ಲ. ಏಕೆಂದರೆ ಅವರೆಗೆ ಅದಕ್ಕೆ ಸಂವಾದಿಯಾಗಿರುವ, ಆ ಅರ್ಥಕ್ಕೆ ಹತ್ತಿರವಾಗಿರುವ ಯಾವ ಪದವೂ ಇರಲಿಲ್ಲ. ಕ್ರಿ.ಶ. ೧೮೫೩ರಲ್ಲಿ ಜಪಾನ್‌ನ ತೀರಪ್ರದೇಶಕ್ಕೆ ಅಮೆರಿಕ ಯುದ್ಧ ಹಡಗುಗಳು ಪ್ರವೇಶಿಸಿ ಧಾರ್ಮಿಕ ಸ್ವಾತಂತ್ರ್ಯ ಹಾಗೂ ಇನ್ನಿತರ ವಿಷಯಗಳಿಗಾಗಿ ಅಲ್ಲಿನ ಸರ್ಕಾರವನ್ನು ಒತ್ತಾಯಿಸಿದಾಗ ಜಪಾನ್ ಈ ಪಾಶ್ಚಾತ್ಯ ವಿಚಾರಕ್ಕೆ ಒಪ್ಪಿಗೆ ನೀಡಬೇಕಾದಾಗ Religion ಎಂಬುದನ್ನು ಒಪ್ಪಿಕೊಳ್ಳಬೇಕಾಯಿತು.

೧೯ನೇ ಶತಮಾನದ ಮ್ಯಾಕ್ಸ್‌ಮುಲ್ಲರ್ ಪ್ರಕಾರ ಲ್ಯಾಟೀನ್ ಮೂಲ Religio'ದ ಇಂಗ್ಲಿಷ್ ಪದವಾದ Religion ಎಂಬುದರ ಮೂಲ ಅರ್ಥವು "Reverence for god or the god's, carefull pondering of devine things, piety" ಇದಾಗಿತ್ತು. ಇವರ ಪ್ರಕಾರ ಈಜಿಪ್ಟ್, ಪರ್ಷಿಯಾ, ಭಾರತವೂ ಸೇರಿದಂತೆ ಜಗತ್ತಿನ ಇತರ ಹಲವಾರು ಸಂಸ್ಕೃತಿಗಳಲ್ಲಿಯೂ ಈಗ ನಾವು ಬಳಸುತ್ತಿರುವ 'ಪ್ರಾಚೀನ ಧರ್ಮ' ಎಂಬುದು ಬಹುಮಟ್ಟಿಗೆ Law(ಕಾನೂನು) ಎಂಬುದಾಗಿಯೇ ಬಳಸಲ್ಪಡುತ್ತಿತ್ತು.[೧]

ಭಾರತೀಯ ಸಂದರ್ಭದಲ್ಲಿ 'ಧರ್ಮ' ಎನ್ನುವ ಪದದ ಮೂಲಧಾತು 'ಧೃ' ಆಗಿದೆ. ಸಂಸ್ಕೃತ ಭಾಷೆಯಲ್ಲಿ "ಧೃ' ಎಂದರೆ **ಬೆಂಬಲಿಸು** ಅಥವಾ **ಎತ್ತಿಹಿಡಿ** ಎನ್ನುವ ಅರ್ಥಗಳಿವೆ. 'ಧರ್ಮ' ಎನ್ನುವ ಪದಕ್ಕೆ **ಧಾರಣ ಮಾಡಿದುದು, ನೀತಿ, ನ್ಯಾಯ, ಕರ್ತವ್ಯ, ನಡವಳಿಕೆ, ಸದ್ಗುಣ, ಪುಣ್ಯ, ಅಹಿಂಸೆ, ಸ್ವಭಾವ, ಆಚರಣೆ, ಹಕ್ಕು, ಸ್ವರೂಪ, ದಯೆ, ಕರುಣೆ** ಮುಂತಾದ ಅನೇಕ ಅರ್ಥಗಳಿವೆ. ಮಹಾಭಾರತದ ಕರ್ಣಪರ್ವದಲ್ಲಿ "ಧಾರಣಾತ್ ಧರ್ಮ ಇತ್ಯಾಹುಃ, ಧರ್ಮೋ ಧಾರಯತಿ ಪ್ರಜಾಃ" ಎನ್ನುವ ಮಾತು ಇದೆ. ಯಾವುದು ಇನ್ನೊಂದನ್ನು ಎತ್ತಿ ಹಿಡಿಯುವುದೋ ಅಥವಾ ಇನ್ನೊಂದಕ್ಕೆ ಆಧಾರವಾಗಿ ಅದನ್ನು ರಕ್ಷಿಸುವುದೋ, ಅದು 'ಧರ್ಮ' ಎನಿಸಿಕೊಳ್ಳುತ್ತದೆ.

ಮೂಲ ದ್ರಾವಿಡರನ್ನು ಅತಿಕ್ರಮಿಸಿ ಬಂದ ಆರ್ಯರು ಭಾರತದಲ್ಲಿದ್ದ ತಮ್ಮ ಜನಾಂಗದ ನಂಬಿಕೆಗಳನ್ನು ಮತ್ತು ತಮ್ಮ ಆಚರಣೆಗಳನ್ನು ಸೇರಿಸಿ ವೈದಿಕ ಧರ್ಮವನ್ನಾಗಿಸಿದರು. 'ವೇದಾಂತ'ವು

ಈ ಧಾರ್ಮಿಕ ಸಮುದಾಯದ ಸಂಕೀರ್ಣ ಧರ್ಮಗ್ರಂಥವಾಗಿ ರೂಪುಗೊಂಡಿತು. ವೇದ ಎಂದರೆ 'ಧರ್ಮಜ್ಞಾನ'. ಈ ಕಾಲದಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದ ಎಂಬ ನಾಲ್ಕು ವೇದಗಳು ರೂಪುಗೊಂಡು ಅತ್ಯಂತ ಹಳೆಯವೂ ಹಾಗೂ ಅಧಿಕೃತವೂ ಆದ ಧಾರ್ಮಿಕ ಕೃತಿಗಳಾದವು. ಇವುಗಳನ್ನು ಶ್ರುತಿಗಳೆಂದು ಕರೆಯಲಾಗುತ್ತದೆ. ಇವು ದ್ರಾವಿಡರು ಮತ್ತು ಆರ್ಯರ ದೇವತೆಗಳ ಬಗ್ಗೆ ವಿವರವನ್ನು ನೀಡುತ್ತವೆ. ನಂತರ ಈ ವೇದಗಳಲ್ಲಿನ ತಪ್ಪುಗಳನ್ನು ತಿದ್ದಲು ಸ್ಮೃತಿಗ್ರಂಥವಾದ 'ಬ್ರಾಹ್ಮಣಗಳು' ರಚನೆಗೊಂಡವು. ಬ್ರಾಹ್ಮಣಗಳು ವೇದಗಳಲ್ಲಿನ ಶ್ಲೋಕ ಮತ್ತು ಪ್ರಾರ್ಥನೆಗಳನ್ನು ಪಠಿಸುವ ಸಂಸ್ಕಾರವನ್ನು ಕಲಿಸುತ್ತವೆ. ಬ್ರಾಹ್ಮಣಗಳಿಗೆ ಪೂರಕವಾಗಿ ಋಷಿ–ಮುನಿಗಳ ಕೃತಿಗಳು ಸಹಾಯ ಮಾಡಿದವು. ಋಷಿ–ಮುನಿಗಳು ಕಾಡಿನಲ್ಲಿ ಮಾಡಿದ ತಪಸ್ಸಿನ ಫಲವಾಗಿ ಶ್ಲೋಕಗಳು ಮತ್ತು ಪ್ರಾರ್ಥನೆಗಳು ಹುಟ್ಟಲು ಕಾರಣವಾದವು. ಈ ಋಷಿ–ಮುನಿಗಳ ಕೃತಿಗಳಿಗೆ ಪೂರಕವಾಗಿ ತತ್ವಜ್ಞಾನದ ಚರ್ಚೆಗಳಾದ 'ಉಪನಿಷತ್ತು'ಗಳು ಹುಟ್ಟಿಕೊಂಡವು. ಇವುಗಳ ಜೊತೆಜೊತೆಯಲ್ಲೇ ಶ್ರುತಿ ಮತ್ತು ಸ್ಮೃತಿ ಗ್ರಂಥಗಳು(ಧಾರ್ಮಿಕ ಗ್ರಂಥಗಳು) ಬಹಳ ಕಾಲ ಬೆಳೆಯುತ್ತಲೇ ಹೋದವು. ಹೀಗೆ ಭಾರತದಲ್ಲಿ ಧಾರ್ಮಿಕ ಪಠ್ಯಗಳು ರೂಪುಪಡೆಯುತ್ತಾ ಬಂದವು.

೩.೨. ಧಾರ್ಮಿಕ ಪಠ್ಯಗಳ ಭಾಷಾಂತರ ರಾಜಕಾರಣ

ಭಾರತಕ್ಕೆ ಶಿಕ್ಷಣ ನೀಡಲು ಆಗಮಿಸಿದ್ದ ಮಿಶನರಿಗಳು ಮತ್ತು ಹಲವು ವಿದ್ವಾಂಸರು ಭಾರತೀಯ ಧಾರ್ಮಿಕ ಪಠ್ಯಗಳ ಅನುವಾದ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಭಾರತೀಯ ಮನಸ್ಸುಗಳ, ನಂಬಿಕೆಗಳ ಸಡಿಲಿಕೆ ಮಾಡಿ ಅವರ ಧಾರ್ಮಿಕ ನಂಬಿಕೆಗಳ ಅಸ್ತಿತ್ವವನ್ನು ಕಳೆದು ಭಾರತದ ಬಗ್ಗೆ, ಹಿಂದೂ ಧರ್ಮದ ಬಗ್ಗೆ, ಹಿಂದೂ ಧರ್ಮಗ್ರಂಥಗಳ ಬಗ್ಗೆ ಸಂಕಥನಗಳನ್ನು ಸೃಷ್ಟಿಸಿದರು.

ಪವಿತ್ರಗ್ರಂಥಗಳನ್ನು ಬೇರೆ ಬೇರೆ ಭಾಷೆಗಳಿಗೆ ಅನುವಾದಿಸುವುದು ಶತಮಾನಗಳಿಂದಲೂ ನಡೆದುಬಂದಿದೆ. ಇದರಿಂದ ಭಾಷಾಂತರ ಕುರಿತ ಪ್ರಾಚೀನ ಜ್ಞಾನ ಲಭ್ಯವಾಗುವುದರ ಜೊತೆಗೆ ಇತ್ತೀಚಿನ ವಿವಿಧ ಶಿಸ್ತುಗಳಾದಂತಹ ಭಾಷಾಂತರ ಅಧ್ಯಯನ, ಸಾಹಿತ್ಯಿಕ ಅಧ್ಯಯನ, ಧಾರ್ಮಿಕ ಅಧ್ಯಯನ ಇವುಗಳ ಮೇಲೆ ಭಿನ್ನ ದೃಷ್ಟಿಕೋನ ಬೆಳೆಸಿಕೊಳ್ಳಲು ನೆರವಾಗಿದೆ.

ದಕ್ಷಿಣ ಏಷ್ಯಾದಲ್ಲಿನ ಪವಿತ್ರಗ್ರಂಥಗಳ ಭಾಷಾಂತರ ಕಾರ್ಯವು ಯೂರೋಪಿಯನ್ ವಸಾಹತುಶಾಹಿ ಘಟ್ಟದಿಂದ ಅಂದರೆ ೧೬ನೇ ಶತಮಾನದಿಂದ ಪ್ರಾರಂಭವಾಯಿತೆನ್ನಬಹುದು. ಆದಾಗ್ಯೂ ವಸಾಹತುಘಟ್ಟದ ಭಿನ್ನ ಧರ್ಮ ಮತ್ತು ಭಿನ್ನ ಜನಾಂಗಗಳ ಜನರ ನಡುವೆ ಪರಸ್ಪರ ಏಣಿ–ಶ್ರೇಣಿ ಸಂಬಂಧಗಳಲ್ಲಿ ಪವಿತ್ರಗ್ರಂಥಗಳ ಭಾಷಾಂತರಕಾರ್ಯವು ತೀವ್ರ ಚಲನಶೀಲ ವಾಗಿರುತ್ತಿತ್ತು.

ಎಡ್ವರ್ಡ್ ಸೈದ್‌ರ 'ಓರಿಯಂಟಲಿಸಂ'(೧೯೭೮) ಪ್ರಕಟವಾದಂದಿನಿಂದ ವಸಾಹತುಗೊಳಪಟ್ಟ ಸಂಸ್ಕೃತಿಗಳ ಆಲೋಚನೆಗಳನ್ನು ಗಣನೆಗೆ ತೆಗೆದುಕೊಳ್ಳದೆ ವಸಾಹತು ಇತಿಹಾಸವನ್ನು

[illegible]

[illegible] [The Open Door to Hitherto Concealed Heathenism, 1651] [illegible] 'Genealogy of the Malabarian Gods from Native Writings and Letters' [illegible].

[illegible] 'On the Gods of Greece, Italy and India' [illegible] 'A View of the History, Literature and the Mythology of the Hindus' [illegible].

[illegible]

ಮತ್ತೊಂದೆಡೆ ಮ್ಯಾಕ್ಸ್‌ಮುಲ್ಲರ್‌ರಂತಹ ಓರಿಯಂಟಲಿಸ್ಟ್ ವಿದ್ವಾಂಸರು ಕಳೆದುಹೋದ ಬೃಹತ್ ನಾಗರಿಕತೆಯ ಕುರುಹಾಗಿ ಹಿಂದೂವಾದವನ್ನು ಗ್ರಹಿಸುವುದಕ್ಕೆ ಅಗತ್ಯವೆಂದು ಭಾವಿಸಿದ ಪಠ್ಯ(Sacred Books of East ೧೮೭೯-೧೯೧೦)ಗಳನ್ನು ಅಧ್ಯಯನ ಮಾಡಲು ಮತ್ತು ಭಾಷಾಂತರಿಸಲು ತೊಡಗಿದರು. ಮುಂದೆ ಈಸ್ಟ್ ಇಂಡಿಯಾ ಮತ್ತು ೧೮೫೭ರ ನಂತರದ ಬ್ರಿಟಿಷ್ ವಸಾಹತು ಸರ್ಕಾರದ ಆಡಳಿತಗಾರರ ಪ್ರಧಾನ ಆಸಕ್ತಿಯಂತು ಸೂಕ್ತ ವಸಾಹತು ಕಾನೂನನ್ನು ಅಭಿವೃದ್ಧಿಪಡಿಸುವುದಕ್ಕೆ ಆಧಾರವಾಗಿ ಪ್ರಸಕ್ತ ಕಾನೂನು ಪರಂಪರೆಗಳನ್ನು ಅರ್ಥೈಸಿಕೊಳ್ಳುವುದಾಗಿತ್ತು. ಇವರ ಗುರಿಯು "ಹಿಂದೂ ಕಾನೂನಿ"ಗೆ ಪ್ರವೇಶಿಕೆ ಹೊಂದುವ ಸಲುವಾಗಿ ಸಂಸ್ಕೃತ ಪಠ್ಯಮೂಲಗಳನ್ನು ಅನುವಾದಿಸುವುದಾಗಿತ್ತು. ಇದರ ಭಾಗವಾಗಿ ವಾರನ್ ಹೇಸ್ಟಿಂಗ್ಸ್ ಮನುಸ್ಮೃತಿಯ ಅಧ್ಯಯನದಲ್ಲಿ ಮತ್ತು ಭಾಷಾಂತರದಲ್ಲಿ ಆಸಕ್ತಿಯನ್ನು ಹೊಂದಿದ್ದನು. ೧೮ನೆಯ ಶತಮಾನದ ಭಾರತದ ಬ್ರಿಟಿಷ್ ಓರಿಯಂಟಲಿಸ್ಟ್, ವಿದ್ವಾಂಸ, ಆಡಳಿತಗಾರರಾಗಿದ್ದ ವಿಲಿಯಂ ಜೋನ್ಸ್‌ನು ಇದನ್ನು ತನ್ನ ಕೃತಿ "A Digest of Hindu Law on Contracts and successions"ಯಲ್ಲಿ ಮುಂದುವರೆಸಿದನು.

ಹೀಗೆ ಕ್ರಿಶ್ಚಿಯನ್ ಮಿಶನರಿಗಳು ಮತ್ತು ಓರಿಯಂಟಲಿಸ್ಟ್ ವಿದ್ವಾಂಸರು ಯೂರೋಪಿಯನ್ ಪ್ರವಾಸಿಗರು, ವ್ಯಾಪಾರಿಗಳು ವಸಾಹತುಶಾಹಿ ಆಡಳಿತಗಾರರು, ವಿವಿಧ ಉದ್ದೇಶಗಳಿಗಾಗಿ ವಿವಿಧ ಬಗೆಯ ಪವಿತ್ರಗ್ರಂಥಗಳನ್ನು ಅನುವಾದಿಸಿದರು. ಇವರ ವಿವಿಧ ಬಗೆಯ ಆಸಕ್ತಿಗಳಿಗೆ ಭಾಷಾಂತರವು ಒಂದು ಬಗೆಯ ವ್ಯಾಖ್ಯಾನವಾಯಿತು. ಭಾಷಾಂತರಿಸುವ ಉದ್ದೇಶದಿಂದ ಪಠ್ಯವ್ಯಾಖ್ಯಾನಗಳು ಮತ್ತು ವಿವರಣೆಗಳ ಮೌಲ್ಯಮಾಪನ ಸಾಧನಗಳಾಗಿ ಬಳಸತೊಡಗಿದರು. ಇದರ ಫಲವಾಗಿ "ಭಾಷಾಂತರಿತ ಜ್ಞಾನ"ದ ಸಂಗ್ರಹವು ವಸಾಹತುಘಟ್ಟದ "ಹಿಂದೂ ಮನಸ್ಸ"ನ್ನು ರೂಪಿಸಿತು.

ಸ್ಥಳೀಯ ಪಂಡಿತ ಅಥವಾ ಶಿಕ್ಷಿತ ವಿದ್ವಾಂಸರು ಎಲ್ಲ ಪ್ರಮುಖ ಭಾಷಿಕ ಜ್ಞಾನವನ್ನು ಹಾಗೆಯೇ ಭಾಷಾಂತರದಲ್ಲಿನ ಪಠ್ಯಗಳ ಕುರಿತ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಸಂದರ್ಭಗಳನ್ನು ಒದಗಿಸುವಂತಹ ಸಹಕಾರ ನೀಡದಿದ್ದಲ್ಲಿ ಈ ಬಗೆಯ ಯೋಜನೆಗಳು ಯಶಸ್ವಿಯಾಗುತ್ತಿರಲಿಲ್ಲ. ಈ ವಿದ್ವಾಂಸರು ಬಹಳಷ್ಟು ಬಾರಿ ಉನ್ನತ ಜಾತಿಯ ಹಿಂದೂಗಳಾಗುತ್ತಿದ್ದರು. ಅವರನ್ನು ಪವಿತ್ರಗ್ರಂಥಗಳ ರಕ್ಷಕರೆಂದು ಹಿಂದಿನಿಂದಲೂ ಕಾಣಲಾಗುತ್ತಿತ್ತು. ಈ ವಿದ್ವಾಂಸ ಭಾಷಾಂತರಕಾರರನ್ನು ಬಹಳಷ್ಟು ಓರಿಯಂಟಲಿಸ್ಟ್ ಸಂಕಥನಗಳಲ್ಲಿ "ಕುತಂತ್ರ ಬ್ರಾಹ್ಮಣರು" ಎಂಬುದಾಗಿಯೂ ಹಾಗೂ ಅಸ್ಪಷ್ಟ ಪಠ್ಯವ್ಯಾಖ್ಯಾನಗಳನ್ನು ಮಾಡುವವರೂ ತಪ್ಪುದಾರಿಗೆ ಎಳೆಯುವವರೂ ಎಂಬುದಾಗಿ ಅನುಮಾನಿಸಲಾಯಿತು. ಶಾರದ ಸುಗೀತ್ರರಾಜ ಅವರು ವಾದಿಸುವಂತೆ ವಿಲಿಯಂ ಜೋನ್ಸ್ ಹಿಂದೂ ಕಾನೂನು ಪಠ್ಯಗಳನ್ನು ಇಂಗ್ಲಿಷ್‌ಗೆ ಅನುವಾದಿಸುವಾಗ ಈ ಬಗೆಯ ಪಂಡಿತರ ಪಠ್ಯವ್ಯಾಖ್ಯಾನಗಳನ್ನು ಅನುಮಾನಿಸುತ್ತಿದ್ದ ಮತ್ತು ಅವರು ಇಬ್ಬಗೆಯ ದ್ವಂದ್ವಕಾರಿ ಮತ್ತು ತಪ್ಪುದಾರಿಗೆ ಎಳೆಯುವ ವ್ಯಾಖ್ಯಾನಗಳನ್ನು ಮಾಡುತ್ತಾರೆಂದು ಆಪಾದಿಸಿದ.[೨] ಆದಾಗ್ಯೂ

ಭಾಷಾಂತರಗಳಲ್ಲಿ ಈ ಪಂಡಿತರು ತೊಡಗಿದ್ದುದು ಅವರನ್ನು ಪವಿತ್ರ ಮತ್ತು ಸಾಹಿತ್ಯಿಕ ಪಠ್ಯಗಳ ತಮ್ಮದೇ ವಿಮರ್ಶಾ ಸಂಪುಟಗಳನ್ನು ತರುವುದಕ್ಕೆ ಪ್ರೋತ್ಸಾಹಿಸಿತು.

ಈ ಸಂಪುಟಗಳು ಅಧಿಕೃತ ಪಠ್ಯಗಳೆಂಬುದಾಗಿ ಅಸ್ತಿತ್ವಕ್ಕೆ ಬಂದವು. ವಿವಿಧ ಹಸ್ತಪ್ರತಿಗಳ ವಿತರಣೆ ಮೊದಲಾಯಿತು. ಈ ಭಾಷಾಂತರ ಯೋಜನೆಗಳು ಭಾರತೀಯ ಭಾಷೆಗಳು ಮತ್ತು ಭಾಷಾಶಾಸ್ತ್ರದ ಓರಿಯಂಟಲಿಸ್ಟ್ ಆಸಕ್ತಿಯೊಂದಿಗೆ ಜೊತೆಜೊತೆಗೆ ನಡೆದವು.

ವೀರ್ ಅವರು ವಾದಿಸುವಂತೆ ಭಾಷಾಶಾಸ್ತ್ರವು ಹಿಂದೂ ಸುಧಾರಣೆಯಲ್ಲಿ ಪ್ರಮುಖಪಾತ್ರ ವಹಿಸಿತು ಮತ್ತು ರಾಷ್ಟ್ರೀಯವಾದಿ ಉದ್ದೇಶವನ್ನು ಪೂರೈಸಿತು. ಯೂರೋಪಿಯನ್ನರು ಹಾಗೆಯೇ ಭಾರತೀಯರು ಕೈಗೊಂಡ ಭಾಷಾಂತರ ಯೋಜನೆಗಳು ಭಾಷಾಶಾಸ್ತ್ರ ಮತ್ತು ಚರಿತ್ರೆಯ ಬಗ್ಗೆ ಆಸಕ್ತರಾಗಿದ್ದ ವಿದ್ವಾಂಸರಿಗೆ ಅಧ್ಯಯನದ ನೆಲೆಗಳಾದವು. ಅಲ್ಲದೆ ಧಾರ್ಮಿಕ ಸುಧಾರಣೆ ಹಾಗೂ ರಾಷ್ಟ್ರೀಯವಾದಗಳಂತಹ ಸಾಂಸ್ಕೃತಿಕ ಮತ್ತು ರಾಜಕೀಯ ಆಸಕ್ತಿಗಳಿಗೆ ಕಾರಣವಾದವು. ಈ ಪವಿತ್ರಗ್ರಂಥಗಳ ಯಾವುದೇ ಭಾಷಾಂತರವನ್ನು ನೋಡಿದರೂ ವಿವಿಧ ಮನೋಲಯದ ಜನರಿಗೆ ಭಿನ್ನಭಿನ್ನವಾಗಿ ವ್ಯಾಖ್ಯಾನಿಸುವುದಕ್ಕೆ ಈ ಪಠ್ಯಗಳು ವೇದಿಕೆ ಒದಗಿಸಿದುದು ಸ್ಪಷ್ಟವಾಗುತ್ತದೆ.

ಈ ಭಾಷಾಂತರಕಾರರು ಭಾಷಾಂತರ ಪಠ್ಯಗಳನ್ನು ಚಿತ್ರಿಸಿದ ರೀತಿ ಹಾಗೂ ವಿವಿಧ ಸಂಸ್ಥೆಗಳು ಅವನ್ನು ಬೆಂಬಲಿಸಿದ ಸಂದರ್ಭಗಳಿಂದಾಗಿ ಈ ಪವಿತ್ರ ಪಠ್ಯಗಳು ಹೊಸ ಹೊಸ ಸನ್ನಿವೇಶಗಳಿಗೆ ತಕ್ಕಂತೆ ಪ್ರಸರಣಗೊಳ್ಳುವುದಕ್ಕೆ ಎಡೆ ಮಾಡಿಕೊಟ್ಟವು. ಇಲ್ಲಿನ ಕೃತಿಗಳು, ಪರಿಶುದ್ಧ ಪಠ್ಯಗಳು, ಸೂತ್ರಗಳು, ಮತ್ತು ಇತರ ಭಕ್ತಿಸಾಹಿತ್ಯವು ವಸಾಹತುಗೊಂಡವರನ್ನು ಮತಾಂತರಿಸುವ ಸಲುವಾಗಿ ಇಲ್ಲವೇ ವಸಾಹತುಗೊಂಡವರನ್ನು ವಸಾಹತುಶಾಹಿಗಳು "ಸರಿಯಾಗಿ ಅರ್ಥ ಮಾಡಿಕೊಳ್ಳುವುದಕ್ಕೆ" ನೆರವಾಗುವ ಸಲುವಾಗಿ ಭಾಷಾಂತರಗೊಂಡವು ಹಾಗೂ ಹೆಚ್ಚು ಪರಿಣಾಮಕಾರಿಯಾಗಿ ವಸಾಹತುಶಾಹಿಗೆ ಒಳಪಡಿಸುವ ಉದ್ದೇಶದಿಂದ ಭಾಷಾಂತರಗೊಂಡವು. ಈ ಬಗೆಯ ದ್ವಿಮುಖಿ ಭಾಷಾಂತರಗಳು ಸಿದ್ಧಾಂತಗಳನ್ನು ಪರಿಭಾವಿಸಿದ ರೀತಿ ಮತ್ತು ಆಚರಣೆಗೆ ತಂದ ರೀತಿಯಿಂದ 'ಪವಿತ್ರ' ಮತ್ತು 'ಧರ್ಮ'ದ ಕುರಿತ ಆಲೋಚನೆಗಳ ಮೇಲೆ ತೀವ್ರ ಮತ್ತು ಮೂಲಭೂತ ಪರಿಣಾಮಗಳನ್ನು ಉಂಟುಮಾಡಿದವು. ಮಿಶನರಿ ಮತ್ತು ಸಾಮ್ರಾಜ್ಯಶಾಹಿ ಆಡಳಿತಗಾರರ ಆಸಕ್ತಿಗಳು ಕೆಲವೊಮ್ಮೆ ಬೇರೆಬೇರೆಯಾಗಿದ್ದರೂ ಭಾಷಾಂತರ ಚಟುವಟಿಕೆಯಿಂದಾಗಿ ಭಾರತೀಯ 'ಸಂಸ್ಕೃತಿ'ಯ ಪ್ರಮುಖ ಅಂಶಗಳಿಗೆ ಸಂಬಂಧಿಸಿದಂತೆ ಇವರಿಬ್ಬರೂ ತಮ್ಮ ತಮ್ಮ ಉದ್ದೇಶಗಳಿಗೆ ಅನುಸಾರವಾಗಿ ಬಳಸಿಕೊಳ್ಳುವುದಕ್ಕೆ ದಾರಿಯಾಯಿತು. ಅಂದರೆ ವ್ಯಾಖ್ಯಾನಗಳ ವಿಧಾನಗಳು, ಭಾಷೆಗಳು ಮತ್ತು ಅವುಗಳ ಅಂತರ್‌ಸಂಬಂಧಗಳ ಕುರಿತ ಧೋರಣೆಗಳು ಹಾಗೂ ಭಾಷಾಂತರ ತಂತ್ರಗಳು, ಇವುಗಳಲ್ಲಿನ ಸಮಾನ ನೋಟಕ್ರಮಗಳು ಯೂರೋಪೇತರರರನ್ನು ಸಮಾನವಾಗಿ ಅರ್ಥೈಸಲು ಸಾಧ್ಯವಾಯಿತು.

ವಸಾಹತುಗೊಳಪಟ್ಟವರು ವಸಾಹತುಶಾಹಿಗಳ ತಾತ್ವಿಕ ನಡೆಯನ್ನು ಸ್ವೀಕರಿಸುವ, ಹೊಂದಿಸಿಕೊಳ್ಳುವ ಅಥವಾ ಪ್ರತಿರೋಧಿಸುವ ಪ್ರತಿಕ್ರಿಯೆಗಳಲ್ಲಿ ತೊಡಗಿದ್ದುದು ಸುಸ್ಪಷ್ಟ. ಇದಕ್ಕೆ ಭಾಷಾಂತರ ಪ್ರಕ್ರಿಯೆಯೂ ಹೊರತಾಗಿರಲಿಲ್ಲ. ಆಗಿನ ಭಾಷಾಂತರ ಕಾರ್ಯತಂತ್ರಗಳನ್ನು ಎದುರಿಸುವ ಅಥವಾ ಭಾಷಾಂತರ ಪ್ರತಿಕಾರ್ಯತಂತ್ರಗಳನ್ನು ನಿರ್ಮಿಸುವ ಪ್ರವೃತ್ತಿ ಆ ಕಾಲದುದ್ದಕ್ಕೂ ಕಾಣುವಂಥದ್ದೇ. ತಮ್ಮನ್ನು ತಾವು 'ಹಿಂದೂಗಳು' ಅಥವಾ 'ಹಿಂದೂಗಳಲ್ಲದವರು' ಎಂದು ಪರಿಗಣಿಸಿಕೊಂಡಿದ್ದ ಈ ವಸಾಹತುಗೊಳಪಟ್ಟ ಭಾಷಾಂತರಕಾರರು(ಅಥವಾ ಲೇಖಕರು) 'ಹಿಂದೂ' ಪಠ್ಯಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸುವುದರ ಜೊತೆಜೊತೆಯಲ್ಲಿಯೇ ಪವಿತ್ರ ಗ್ರಂಥಗಳನ್ನು ಕುರಿತ ವಸಾಹತು ಸಂಕಥನವನ್ನು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸುವ, ಒಪ್ಪುವ ಅಥವಾ ಪ್ರತಿರೋಧಿಸುವ ಕೆಲಸದಲ್ಲೂ ನಿರತರಾದರು. ಇದನ್ನು ಅವರ ಸ್ವಂತ ಭಾಷಾಂತರಗಳಲ್ಲಿಯೂ ಮತ್ತು ಇತರರ ಭಾಷಾಂತರಗಳಿಗೆ ಅವರು ತೋರಿದ ಪ್ರತಿಕ್ರಿಯೆಗಳಲ್ಲಿಯೂ ಕಾಣಬಹುದು. ಪ್ರಜ್ಞಾಪೂರ್ವಕವಾಗಿ 'ವಸಾಹತೋತ್ತರ' ಚಿಂತನಾಕ್ರಮವು ಪ್ರಾರಂಭವಾಗುವ ಬಹಳಷ್ಟು ಮುಂಚೆಯೇ ಈ ಬಗೆಯ ಚಿಂತನೆ ಇವರಲ್ಲಿ ವ್ಯಕ್ತವಾದುದು ಗಮನಾರ್ಹ ಅಂಶ.

ಭಾರತದ ಧರ್ಮಗಳನ್ನು ಮತ್ತು ಪಾಠ್ಯಿಕ ದ್ವಂದ್ವಗಳನ್ನು ಕುರಿತು ತೀವ್ರವಾಗಿ ಚರ್ಚಿಸಲಾಯಿತು ಮತ್ತು ಈ ಚರ್ಚೆಗಳಲ್ಲಿ ಭಾಷಾಂತರದ ಚರ್ಚೆಯೂ ಅವಿಭಾಜ್ಯ ಭಾಗವಾಯಿತು. ಈ ಚರ್ಚೆಗಳಿಗೆ ಉತ್ತರ ನೀಡಬಲ್ಲಂಥ ಮತ್ತು ಎಲ್ಲ ಹಿಂದೂಗಳು ಒಪ್ಪುವಂಥ ಒಂದು 'ಹಿಂದೂ' ಪಠ್ಯವಿರಲಿಲ್ಲ. ಹಿಂದೂಗಳು ಭಿನ್ನ ಭಿನ್ನ ಸಂದರ್ಭಗಳಲ್ಲಿ ಭಿನ್ನ ಭಿನ್ನ ಪಠ್ಯವನ್ನು ಪ್ರಮುಖವಾಗಿ ಕಾಣುತ್ತಿದ್ದರು. ಇದು ಓರಿಯಂಟಲಿಸ್ಟರು, ಮಿಷನರಿಗಳು ಮತ್ತು ವಸಾಹತುಶಾಹಿ ವಿದ್ವಾಂಸರ ಅವಜ್ಞೆಗೆ ಕಾರಣವಾಯಿತು. ಇವರು 'ಹಿಂದುತ್ವ'ಕ್ಕೆ ಒಂದು ನಿರ್ದಿಷ್ಟ ಕೇಂದ್ರ, ಪವಿತ್ರ ಗ್ರಂಥವಿಲ್ಲವಾಗಿ ಅದು ಒಂದು ಧರ್ಮವೇ ಅಲ್ಲ, ಹಲವು ಮೌಢ್ಯಗಳ ಆಗರವಾಗಿದೆ ಎಂದು ಭಾವಿಸಿದರು. ಇಂಥ ಪರಸ್ಪರ ವಾಗ್ವಾದಗಳ ಸಂದರ್ಭಗಳಲ್ಲಿ ಹಲವು ಪವಿತ್ರ ಗ್ರಂಥಗಳ ಭಾಷಾಂತರ ಪ್ರಕ್ರಿಯೆ ಮೊದಲಾಯಿತು. ಆ ಮೂಲಕ ಅವುಗಳಿಗೆ ಅಧ್ಯಯನಾತ್ಮಕ ಅಧಿಕೃತತೆ ಪ್ರಾರಂಭವಾಯಿತು. ಓರಿಯಂಟಲಿಸ್ಟ್ ವಿದ್ವಾಂಸರು ಈ ಭಾಷಾಂತರಗಳನ್ನು ಪಾವಿತ್ರ್ಯತೆಯ ಮಹತ್ವವುಳ್ಳ ಪಠ್ಯಗಳೆಂದು ಕಾಣದೆ ಮಾನವ ನಾಗರಿಕತೆಯ 'ಆದಿ' ಸ್ಥಿತಿಯ, ಅಪ್ರಬುದ್ಧ ಅವಸ್ಥೆಯನ್ನು ಕುರಿತ ಚಾರಿತ್ರಿಕ ಒಳನೋಟ ಕೊಡುವ ಕೃತಿಗಳೆಂಬುದಾಗಿ ಪರಿಗಣಿಸಿದರು.

ಮಿಷನರಿ ಭಾಷಾಂತರಕಾರರು, ಈ ಬಗೆಯ ಭಾಷಾಂತರ ಪ್ರಯತ್ನಗಳಿಂದ ಭಾರತೀಯ ಮನಸ್ಥಿತಿಯು ಯೂರೋಪಿಯನ್ ಪಠ್ಯ ಅಧ್ಯಯನದ ವಿಧಾನಗಳತ್ತ ಆಕರ್ಷಿತವಾಗುತ್ತದೆಯೆಂದೂ ಆ ಮೂಲಕ ಹಿಂದೂ ಪಠ್ಯಗಳಲ್ಲಿನ ಅಂತರ್ಗತ ದ್ವಂದ್ವಗಳು ಮತ್ತು ಅತಾರ್ಕಿಕ ಅಂಶಗಳು ಬಯಲಾಗುತ್ತವೆಯೆಂದು ಭಾವಿಸಿದ್ದರು.

ಈ ಹಿನ್ನೆಲೆಯಲ್ಲಿ ವಿಶಾಲವಾದ 'ಹಿಂದೂ' ಪ್ರವರ್ಗದ ತಿರುಳನ್ನು ಪ್ರತಿನಿಧಿಸಿದ ಕೇಂದ್ರಪಠ್ಯವಾದ ಭಗವದ್ಗೀತೆಯ ಭಾಷಾಂತರಗಳನ್ನು ಗಮನಿಸಬಹುದು: ೧. ಬ್ರಿಟಿಷ್ ಮತ್ತು

ಜರ್ಮನ್ ಓರಿಯಂಟಲಿಸ್ಟ್ ವಿದ್ವಾಂಸರ ಭಾಷಾಂತರಗಳು. ೨. ಭಾರತೀಯ ವಿದ್ವಾಂಸರ ಭಾಷಾಂತರಗಳು.

ಫ್ರೆಡರಿಕ್ ಮಜೇರ್, ಜೊಹಾನ್ ಗಾಟ್‌ಫ್ರೈಡ್ ಹರ್ಡರ್(೧೭೯೨) ಜರ್ಮನಿಗೆ; ಆಗಸ್ಟ್ ವಿಲ್‌ಹೆಲ್ಮ್ ಶ್ಲೆಗಲ್(೧೮೨೩) ಲ್ಯಾಟಿನ್ ಭಾಷೆಗೆ ಅನುವಾದಿಸಿದರು. ಬ್ರಾಡ್ಲಿ ಎಲ್. ಹರ್ಲಿಂಗ್‌ರು The German Gita: Hermaneutics and Discipline in the German Reception of Indian thought' ಎಂಬ ಕೃತಿಯಲ್ಲಿ ಭಗವದ್ಗೀತೆಯನ್ನು ಜರ್ಮನ್ನರು ಭಾಷಾಂತರಿಸುವುದಕ್ಕೆ ಸೂಕ್ಷ್ಮವಾದ ಕಾರಣಗಳನ್ನು ನೀಡುತ್ತಾ ಹೀಗೆಂದು ಅಭಿಪ್ರಾಯಪಡುತ್ತಾರೆ:

ಜೋಹಾನ್ ಗಾಟ್‌ಫ್ರೈಡ್ ಹರ್ಡರ್‌ನು ಮೊತ್ತಮೊದಲ ಬಾರಿಗೆ ಭಾರತೀಯ ಸಂಸ್ಕೃತಿಯನ್ನು ಅರ್ಥೈಸುವುದರಲ್ಲಿ ಗಂಭೀರ ಆಸಕ್ತಿ ತೋರಿದ. ಜರ್ಮನ್ ಬೌದ್ಧಿಕ ಜೀವನದ ೧೮-೧೯ನೇ ಶತಮಾನದಲ್ಲಿ ಗೀತೆಯು ಕೇಂದ್ರ ತತ್ವಶಾಸ್ತ್ರೀಯ ಪಠ್ಯವಾಗಿ ಸ್ವೀಕೃತವಾಗಿತ್ತು. ಇದೇ ಸಮಯದಲ್ಲಿ ಜರ್ಮನ್ನರಿಗೆ ಭಾರತಶಾಸ್ತ್ರ(ಇಂಡಾಲಜಿ), ತೌಲನಿಕ ಭಾಷಾಶಾಸ್ತ್ರ ಮತ್ತು ಧರ್ಮಶಾಸ್ತ್ರಗಳಲ್ಲಿ ಆಸಕ್ತಿ ಹೆಚ್ಚಿದುದರ ಮತ್ತು ಭಗವದ್ಗೀತೆಯನ್ನು ಅನುವಾದಿಸಿದುದರ ಹಿಂದೆ ಅವರ ರಾಜಕೀಯಾತ್ಮಕ ಆಸಕ್ತಿಗಳು ಇದ್ದುವಾಗಿ ಇವರು ಗುರುತಿಸುತ್ತಾರೆ.

ಸತತ ಭಾಷಾಂತರ, ವಾಗ್ವಾದಗಳಿಂದಾಗಿ, ಸ್ವತಃ ಹಿಂದೂ ಭಾರತೀಯರು ಭಗವದ್ಗೀತೆಯನ್ನು ಬೈಬಲ್‌ನೊಂದಿಗೆ ಸಮೀಕರಿಸಿದ್ದಾಗ್ಯೂ ಅದು ವಿಶ್ವದೆಲ್ಲೆಡೆ ಬೈಬಲ್‌ಗೆ ಸಮಾನ ಸ್ಥಾನಮಾನ ಗಳಿಸತೊಡಗಿತು. ವೀರ್ ಅವರು ತಮ್ಮ ಕೃತಿಯಲ್ಲಿ ಅಭಿಪ್ರಾಯಪಡುವಂತೆ, "ಪೂರ್ವದ ಪಠ್ಯ ಪ್ರಾತಿನಿಧ್ಯತ್ವದ ಬಗ್ಗೆ ಓರಿಯಂಟಲಿಸ್ಟರು ಆಸಕ್ತರಾಗಿದ್ದಂತೆಯೇ, ಹಿಂದೂ ವಿದ್ವಾಂಸರು ಸಹ ಕ್ರಿಶ್ಚಿಯನ್ ಮತ್ತು ಇಸ್ಲಾಂ ಧರ್ಮದಂತೆ ತಮ್ಮಲ್ಲೂ ಪಠ್ಯ ಪ್ರಾತಿನಿಧ್ಯತ್ವವಿರಬೇಕೆಂಬ ಇಚ್ಛೆ ಹೊಂದಿದ್ದರು."[೩] ಇದು ಭಾರತೀಯ ವಿದ್ವಾಂಸರು ಹಿಂದೂಧಾರ್ಮಿಕ ಪಠ್ಯ ರೂಪಿಸುವ ಕಾರ್ಯದಲ್ಲಿ ಆಸಕ್ತರಾಗಿದ್ದುದನ್ನ ತೋರಿಸುತ್ತದೆ.

ಮತ್ತೊಂದು ಗಮನಾರ್ಹ ಅಂಶವೆಂದರೆ, ಬ್ರಿಟನ್ ಮತ್ತು ಜರ್ಮನಿಯಲ್ಲಿ 'ಭಾರತ ರಾಷ್ಟ್ರ' ಮತ್ತು 'ಸಂಸ್ಕೃತಿ'ಯನ್ನು ಪ್ರತಿನಿಧಿಸುವ ಮೂಲಭೂತ ಪಠ್ಯಗಳಲ್ಲಿ ಒಂದೆಂಬುದಾಗಿ ಜನಜನಿತವಾಗಿದ್ದ ಹಿಂದೂ ಮಹಾಕಾವ್ಯವಾದ ಮಹಾಭಾರತದ ಅವಿಭಾಜ್ಯ ಅಂಗವಾಗಿ ಭಗವದ್ಗೀತೆಯನ್ನು ಪರಿಗಣಿಸದೆ ಒಂದು ಸ್ವತಂತ್ರ ತತ್ವಶಾಸ್ತ್ರೀಯ ಪಠ್ಯವೆಂಬುದಾಗಿ ಕಂಡಿದುದು. ಹಿಂದೂವಾದವು ಒಂದು ನಿರ್ದಿಷ್ಟ ಪಠ್ಯವನ್ನು ಸಹ ಅಧಿಕೃತವೆಂದು ಪರಿಗಣಿಸದೆ ಹೋದಾಗ ಓರಿಯಂಟಲಿಸ್ಟ್ ವಿದ್ವಾಂಸವರ್ಗವು ಈಗಿರುವ ಪವಿತ್ರ ಗ್ರಂಥಗಳ ಪೈಕಿ ಒಂದು 'ಕೇಂದ್ರಪಠ್ಯ'ವನ್ನು ಭಾಷಾಂತರದ ಮೂಲಕ ಮರುಶೋಧಿಸುವುದರಲ್ಲಿ ತೊಡಗಿತು. ಈ ಓರಿಯಂಟಲಿಸ್ಟ್ ಭಾಷಾಂತರಕಾರರ ಶೀರ್ಷಿಕೆಗಳು, ಟಿಪ್ಪಣಿಗಳು, ಮುನ್ನುಡಿಗಳು ಮತ್ತು ಪೀಠಿಕೆಗಳು ಅವರ ಭಾಷಾಂತರದ ಉದ್ದೇಶವನ್ನು ಅರಿಯಲು ಸಹಾಯಕವಾಗಿವೆ. ಈ ಬಗೆಯ ಅನುವಾದ

ಕೃತಿಗಳು ಒಂದು ಬಗೆಯಲ್ಲಿ ಪರ್ಯಾಯ ಪಠ್ಯಗಳಾಗತೊಡಗಿದವು. ಇವನ್ನು ಆಧ್ಯಾತ್ಮಿಕ ದೃಷ್ಟಿಯಿಂದ ನೋಡದೆ, ಪಾಂಡಿತ್ಯಪೂರ್ಣ ಅಧ್ಯಯನದಂತೆ ಪರಿಗಣಿಸಿದುದರಿಂದ ಅಧ್ಯಯನಶೀಲ ಓದುಗರು ಹೆಚ್ಚತೊಡಗಿದರು. ಮುನ್ನುಡಿಗಳು, ಪೀಠಿಕೆಗಳು, ಅಡಿಟಿಪ್ಪಣಿಗಳು, ಭಾಷಿಕ ಟಿಪ್ಪಣಿಗಳು ಮತ್ತು ಅನುಬಂಧಗಳನ್ನುಳ್ಳ ಈ ಕೃತಿಗಳು ಕೇವಲ ಭಾಷಾಂತರಗಳಾಗಿರದೆ, 'ಮರುಸೃಷ್ಟಿ'ಯಾಗಿದ್ದವು. ಅಂದರೆ 'ಪೌರ್ವಾತ್ಯ ಧರ್ಮ'ಗಳನ್ನು ಪಾಶ್ಚಾತ್ಯ ತಾರ್ಕಿಕ ತನಿಖೆಯ ಮೂಲಕ ಸೃಷ್ಟಿಸುವ ಕ್ರಿಯೆಗಳಾಗಿದ್ದವು. ಉದಾಹರಣೆಗೆ ಜೆ. ಕಾಕ್‌ಬರ್ನ್ ಥಾಮ್ಸನ್‌ನು 'ಭಗವದ್ಗೀತೆ'ಯನ್ನು ತತ್ವಜ್ಞಾನದ ಪದ್ಯಗಳಾಗಿ ಕಂಡು ಅವುಗಳನ್ನು ಭಾಷಾಂತರಿಸುವ ಮೂಲಕ ತನ್ನ ಕ್ರಿಯೆಯನ್ನು 'ವಿಜ್ಞಾನ ಮತ್ತು ಅರಿವು'ನ ಚೌಕಟ್ಟಿನೊಳಗೆ ಸೇರಿಸುತ್ತಾನೆ.[೪] ಈತನ ಭಾಷಾಂತರದಲ್ಲಿ ೫೦ ಪುಟಗಳ ಮುನ್ನುಡಿ, ಸುಮಾರು ೧೦೦ ಪುಟಗಳ ಪರಿಚಯ ಮತ್ತು ತಾತ್ವಿಕ, ಚಾರಿತ್ರಿಕ ಮತ್ತು ಸಾಹಿತ್ಯಿಕ ಸಂದರ್ಭಗಳ ಸುದೀರ್ಘ ಅಡಿಟಿಪ್ಪಣಿಗಳು ಸೇರಿವೆ. ಇಂಥವುಗಳಿಂದಾಗಿ ಕೃತಿಯನ್ನು ಕೇವಲ ಓದುವುದಷ್ಟೇ ಅಲ್ಲದೆ ವಿಮರ್ಶಾತ್ಮಕವಾಗಿ ಪರೀಕ್ಷಿಸುವುದೂ ಸಾಧ್ಯವಾಯಿತು. ಕೆಲವೊಮ್ಮೆ ಗೊಂದಲಕಾರಿಯಾದ ಯಾವ ಭಾಗಗಳಿಗೆ ಭಾಷಾಂತರಕಾರರು ಸ್ಪಷ್ಟನೆ, ನಿರೂಪಣೆ ಕೊಡಲು ತಪ್ಪುತ್ತಿದ್ದರೋ ಆ ಭಾಗಗಳಿಗೆ ಮುಂದಿನ ಪ್ರಕಟಣೆಗಳಲ್ಲಿ ಪ್ರಕಾಶಕರಿಂದ ಸ್ಪಷ್ಟನೆಗಳು ದೊರೆಯುತ್ತಿದ್ದವು(ಉದಾಹರಣೆಗೆ ಚಾರ್ಲ್ಸ್ ವಿಲ್ಕಿನ್ಸ್‌ನ(೧೭೮೫) ಭಾಷಾಂತರದ ಪ್ರಕಟಣೆಗಳು). ಹೀಗೆ ಅನುವಾದಕ ಮತ್ತು ಓದುಗನ ನಡುವೆ ಅಧ್ಯಯನಶೀಲ ಸಂಬಂಧ ಸ್ಥಾಪನೆಗೊಳ್ಳುತ್ತಿತ್ತು.

ಮತ್ತೊಂದು ಮುಖ್ಯ ಅಂಶವೆಂದರೆ, ಭಾರತೀಯ ಭಾಷೆಗಳಲ್ಲಿ ಬಂದ ಬೈಬಲ್‌ನ ಅನುವಾದಗಳಲ್ಲಿ ಯಾವುದೇ ಟಿಪ್ಪಣಿಗಳು, ವ್ಯಾಖಾನಗಳಿರುತ್ತಿರಲಿಲ್ಲ. ಬೈಬಲ್ ಅನ್ನು ಮತ್ತು ಅದರ ಆಧ್ಯಾತ್ಮಿಕ, ಪವಿತ್ರ ಸತ್ಯಗಳನ್ನು ಜನರಿಗೆ ತಲುಪಿಸುವುದಷ್ಟೇ ಮುಖ್ಯವಾಗಿತ್ತು. ಹೀಗಾಗಿ ಬೈಬಲ್‌ಗೆ ಮಾನವ ಭಾಷಾಂತರಕಾರರ ಅರ್ಥೈಸುವಿಕೆಗಳಿರುತ್ತಿರಲಿಲ್ಲ. ಆದರೆ ಗೀತೆಯಲ್ಲಿ ಭಾಷಾಂತರಕಾರನ ಹಸ್ತಕ್ಷೇಪವಿರುತ್ತಿತ್ತು ಮತ್ತು ಪಾಂಡಿತ್ಯಪೂರ್ಣ ಧ್ವನಿಯಿರುತ್ತಿತ್ತು. ಇದರಿಂದ ಇದೊಂದು 'ಕ್ವಚಿತ್' ಪವಿತ್ರಗ್ರಂಥವೆಂಬಂತೆ ತೋರುತ್ತಿತ್ತು. ೧೯ನೇ ಮತ್ತು ೨೦ನೇ ಶತಮಾನದ ಪ್ರಾರಂಭದ ಬಹುತೇಕ ಅನುವಾದಗಳು ಭಗವದ್ಗೀತೆಗೆ ಕಾವ್ಯವೆಂದೋ, ಗೀತೆಯೆಂದೋ, ತತ್ವಗ್ರಂಥವೆಂದೋ ಶೀರ್ಷಿಕೆ ನೀಡಿದವೇ ವಿನಾ ಪವಿತ್ರಗ್ರಂಥವೆಂದು ಅತಿರೇಕಗೊಳಿಸಲಿಲ್ಲ. ಥಾಮ್ಸನ್ ಅವರು ತಮ್ಮ ಅನುವಾದವನ್ನು 'A Sanskrit philosophical poem'(೧೮೫೫) ಎಂದು ಕರೆದರೆ; ಎಡ್ವಿನ್ ಆರ್ನಾಲ್ಡ್‌ರು The Song Celestial' ಎಂದು ಕರೆದರು. ಗೀತೆಯು ಸಾಹಿತ್ಯಿಕ ಮತ್ತು ತತ್ವಶಾಸ್ತ್ರೀಯ ಪಠ್ಯವೆಂದೇ ಬಹುತೇಕರ ಅಭಿಪ್ರಾಯವಾಗಿತ್ತು. ಎಡ್ವಿನ್ ಆರ್ನಾಲ್ಡ್‌ನು ತನ್ನ ಮುನ್ನುಡಿಯಲ್ಲಿ ಇದನ್ನು 'ಪ್ರಸಿದ್ಧ ಮತ್ತು ಅದ್ಭುತ ಸಂಸ್ಕೃತ ಪದ್ಯ'ವೆಂಬುದಾಗಿಯೂ, 'ಸರಳ ಮತ್ತು ಗಂಭೀರ ಭಾಷೆಯಲ್ಲಿರುವ ತಾತ್ವಿಕ ವಸ್ತುವುಳ್ಳ ಪದ್ಯ'ವೆಂಬುದಾಗಿಯೂ ಹೇಳುತ್ತಾರೆ. ತಮ್ಮ ಈ ಅನುವಾದವು ಇಂಗ್ಲಿಷ್ ಮನಸ್ಥಿತಿಯಲ್ಲಿ ಈಗಾಗಲೇ ಪವಿತ್ರವೆಂದು ಪರಿಗಣಿಸಿರುವುದನ್ನು ವೃದ್ಧಿಸದೆ, ಇಂಗ್ಲಿಷ್ ಸಾಹಿತ್ಯವನ್ನು ಸಮೃದ್ಧಗೊಳಿಸುತ್ತದೆಯೆಂದು ಹೇಳುತ್ತಾರೆ.

ಹಲವು ಭಾಷಾಂತರಕಾರರ ಪೀಠಿಕೆಗಳಲ್ಲಿ 'ಹಿಂದೂವಾದ'ದ 'ಕೀಳು' ಜನಪ್ರಿಯ ಸೂಕ್ತಿಗಳು ಮತ್ತು 'ಉನ್ನತ' ತಾತ್ವಿಕ ಆಲೋಚನೆಗಳ ಸೂಕ್ತಿಗಳೆಂಬ ವಿಭಜನೆ ಕಾಣುತ್ತದೆ. ಜೆ. ಕಾಕ್‌ಬರ್ನ್ ಥಾಮ್ಸನ್(೧೮೫೫) ಮತ್ತು ಜಾನ್ ಡೇವಿಸ್(೧೮೮೨) ಇವರ ಕೃತಿಯ ಮುನ್ನುಡಿಯ ಮಾತುಗಳನ್ನು ಗಮನಿಸಿದರೆ ಅದು ತಿಳಿಯುತ್ತದೆ. ಇವರಿಬ್ಬರೂ ಭಗವದ್ಗೀತೆಯ ತಾತ್ವಿಕತೆಯು ಹಿಂದೂ ವ್ಯವಸ್ಥೆಯ 'ಹಿಂಸೆ ಮತ್ತು ಕ್ರೂರ ದೇವರು' ಹಾಗೂ 'ಮೌಢ್ಯತೆ'ಗಳಿಗಿಂತ ಎತ್ತರದಲ್ಲಿದೆ ಎನ್ನುತ್ತಾರೆ. 'ಭಗವದ್ಗೀತೆಯಲ್ಲಿನ ಉನ್ನತ ತಾತ್ವಿಕತೆಯು ಕ್ರಿಶ್ಚಿಯನ್ ತತ್ವ ಸಿದ್ಧಾಂತಗಳಿಗೆ ಸಮವಾಗಬಹುದಾದರೂ ಗೀತೆಯ ಬಗ್ಗೆ ತೀವ್ರ ಕುತೂಹಲ ಅಪಾಯಕಾರಿ'[೩] ಎಂದು ಥಾಮ್ಸನ್ ಓದುಗರನ್ನು ಎಚ್ಚರಿಸುತ್ತಾನೆ. ಜಾನ್ ಡೇವಿಸ್ ತನ್ನ ಅನುಬಂಧದಲ್ಲಿ ಹೇಳುವಂತೆ "ಭಾರತದಲ್ಲಿ ಜನರ ಮೂರ್ತಿ ಆರಾಧನೆಯು ಕಾಳಿ ಆರಾಧನೆಯವರೆಗೂ ಕುಸಿದಿದೆ. ವ್ಯವಸ್ಥಿತ ಕೊಲೆಯು ಸಹ ಈ ಧರ್ಮದ ಫಲವಾಗಿದೆ. ಆದರೆ ಭಗವದ್ಗೀತೆಯ ಲೇಖಕನು ಯಾವುದೇ ಹಿಂದೂ ಪುರಾಣದಿಂದ ಮೇಲೇರಿದ್ದಾನೆ."[೪] ಗೀತೆಯ ಬಗೆಗೆ ಇವರಿಬ್ಬರ ಅಭಿಪ್ರಾಯವನ್ನು ರಿಚಾರ್ಡ್‌ಕಿಂಗ್ ತನ್ನ 'Orientalism and Religion' ಎಂಬ ಕೃತಿಯಲ್ಲಿ ಹೀಗೆ ಅಭಿಪ್ರಾಯಪಡುತ್ತಾನೆ. ಇವರಿಬ್ಬರೂ ಗೀತೆಯನ್ನು ಅತೀಂದ್ರಿಯ ಅಥವಾ ಆನುಭಾವಿಕ ಮತ್ತು ಪಾರಮಾರ್ಥಿಕ ಎಂಬುದಾಗಿ ಕಾಣುತ್ತಾರೆಯೇ ವಿನಾ ಆಧುನಿಕ ಪಾಶ್ಚಾತ್ಯ ತಾತ್ವಿಕತೆಯು ನಿರೀಕ್ಷಿಸುವ ಶುದ್ಧ ತಾರ್ಕಿಕತೆಯ ಮೂಲಕ ಸತ್ಯವನ್ನು ಹುಡುಕುವ ಪ್ರಕ್ರಿಯೆ ಕಾಣುವುದಿಲ್ಲ[೫] ಎಂದಿದ್ದಾರೆ. ಅವರು ಮುಂದುವರಿದು ಪಾಶ್ಚಾತ್ಯ ಸಂಸ್ಕೃತಿಯೊಂದಿಗೆ ಭಾರತೀಯ ಅನುಭಾವವನ್ನು ಹೋಲಿಸಲು ಪ್ರಯತ್ನಿಸಿದಂಥ ಪೌರ್ವಾತ್ಯವಾದಿ ಭಾಷಾಂತರಕಾರರ ರಾಜಕೀಯವನ್ನು ಪ್ರಶ್ನಿಸುತ್ತಾರೆ. ಭಾರತೀಯ ಧರ್ಮಗಳಾದ ಹಿಂದೂ ಮತ್ತು ಬೌದ್ಧಧರ್ಮವು ಪ್ರಧಾನವಾಗಿ ಆನುಭಾವಿಕ ಸ್ವರೂಪದ್ದಾಗಿದ್ದು ಇದು ಪಾಶ್ಚಾತ್ಯರ ತಾರ್ಕಿಕ ಚೌಕಟ್ಟಿಗೆ ಸುಲಭವಾಗಿ ನಿಲುಕುವಂಥದ್ದಲ್ಲ ಎಂದು ಭಾವಿಸುತ್ತಾರೆ.

ಹಿಂದುತ್ವವನ್ನು ಈ ಬಗೆಯಲ್ಲಿ "ಉನ್ನತ" ಮತ್ತು "ಕೆಳ" ಎಂದು ಪ್ರತ್ಯೇಕಿಸುವುದು ಪೌರ್ವಾತ್ಯವಾದಿ ಮತ್ತು ಮಿಷನರಿ ಯೋಜನೆಗಳೆರಡಕ್ಕೂ ಅತ್ಯಗತ್ಯವಾಗಿತ್ತು. ಈ ಮೂಲಕ ಪೌರ್ವಾತ್ಯವಾದಿಗಳು–"ಭಾರತೀಯ ನಾಗರಿಕತೆ"ಯ ವೈಭವಯುತ ಇತಿಹಾಸದ ಪ್ರತೀಕವಾಗಿ ತಾತ್ವಿಕ ಅಥವಾ ಆನುಭಾವಿಕ ವಿಷಯ ಸಂಗ್ರಹವನ್ನು ಒಪ್ಪಿಕೊಳ್ಳುವುದು ಮತ್ತು ಅದರ ಕಲುಷಿತ ರೂಪಗಳಷ್ಟೇ ಈಗ ಉಳಿದಿವೆಯೆಂದು ಭಾವಿಸುವುದು; ಮಿಷನರಿಗಳು–ಹಿಂದುತ್ವವು ಆಂತರಿಕವಾಗಿ ಒಡೆದಿದೆ, ದ್ವಂದ್ವಯುತ ನಿರೂಪಣೆಯನ್ನು ಹೊಂದಿದೆ, ಆಚರಣೆಯಲ್ಲಿ "ಕೆಳ" ಮಟ್ಟದ ಅಭಿವ್ಯಕ್ತಿಗೆ ಒತ್ತು ನೀಡಿದೆ ಎಂದು ನಿರೂಪಿಸುವುದು. ಹೀಗೆ ವಾದಿಸುವುದಕ್ಕೆ ಈ ಬಗೆಯ ವಿಭಜನೆ ಅಗತ್ಯವಾಗಿದ್ದಿತು.

ಭಗವದ್ಗೀತೆಯ ಅನುವಾದವನ್ನು ಒಂದು ತತ್ವಶಾಸ್ತ್ರೀಯ ಪಠ್ಯವಾಗಿ ತೋರಿಸುವ ಮೂಲಕ ಅನುವಾದಕರು ಭಗವದ್ಗೀತೆಯು "ಪವಿತ್ರ ಪಠ್ಯ" ಅಲ್ಲವೇ ಅಲ್ಲ ಎಂಬುದರ ಸೂಚನೆ ನೀಡುತ್ತಿದ್ದರು. ಇಲ್ಲವೇ ಉಳಿದ ಪವಿತ್ರ ಗ್ರಂಥಗಳನ್ನು ಪವಿತ್ರವೆಂದು ಪರಿಗಣಿಸಿರುವ ರೀತಿಯಲ್ಲಿ

ಪವಿತ್ರವೆಂದು ಪರಿಗಣಿಸಲಾಗದ ಕೃತಿಯೆಂಬ ಸೂಚನೆ ನೀಡತೊಡಗಿದರು. ಬಹಳಷ್ಟು ಭಾರತೀಯರು ಸಹ ಇದೇ ಬಗೆಯ ಭಾಷಾಂತರ ಕಾರ್ಯಗಳಲ್ಲಿ ತೊಡಗಿದ್ದಾಗ್ಯೂ, ಭಗವದ್ಗೀತೆಯನ್ನು ಅತ್ಯುನ್ನತ ಹಿಂದೂ ತತ್ವಶಾಸ್ತ್ರೀಯ ಚಿಂತನೆಯ ಉದಾಹರಣೆಯಾಗಿ ಕಂಡರು.

ವೀರ್(೨೦೦೧, ಪುಟ ಸಂ. ೧೨೩) ಅವರು ಹಿಂದೂ ರಾಷ್ಟ್ರೀಯತಾ ಅವಧಿಯಲ್ಲಿ ಭಗವದ್ಗೀತೆಯು ಶಾಸ್ತ್ರೀಯ ಪಠ್ಯವಾಗಿ ರೂಪುಗೊಂಡ ಬಗೆಯನ್ನು ಮತ್ತು ಅದು ಭಾರತೀಯ ಅನುವಾದಕರ ಅನುವಾದಗಳಿಂದ ಸ್ಪಷ್ಟವಾಗುವ ಕ್ರಮವನ್ನು ವಿಶ್ಲೇಷಿಸಿದ್ದಾರೆ. ೧೯ನೇ ಶತಮಾನದ ಭಾರತೀಯ ಅನುವಾದಕರು ಮೊದಲಿಗೆ ಪ್ರಮುಖ ಹಿಂದೂ ಪಠ್ಯಗಳ ಮೇಲಿನ ಪ್ರಾರಂಭಿಕ ಪೌರ್ವಾತ್ಯವಾದಿ ಪಾಂಡಿತ್ಯ ಮತ್ತು ಅನುವಾದಗಳತ್ತ ದೃಷ್ಟಿ ಹರಿಸಿದರು. ಪೌರ್ವಾತ್ಯವಾದಿ ಮತ್ತು ಮಿಷನರಿ ದೃಷ್ಟಿಕೋನದಲ್ಲಿ ಪ್ರತಿಧ್ವನಿತವಾಗುತ್ತಿದ್ದ ಹಿಂದುತ್ವದ ಪರ್ಯಾಯ ಅಥವಾ ಸಮಾನಾಂತರ ಸಂಕಥನವನ್ನು ಕಟ್ಟುವ ದೃಷ್ಟಿಯಿಂದ ಹಾಗೂ ಮಿಷನರಿಗಳ ಮತಾಂತರವಾದಿತ್ವಕ್ಕೆ ಪ್ರತಿಕ್ರಿಯೆಯಾಗಿ ಭಾರತೀಯರು ಸಹ ಭಾಷಾಂತರಗಳನ್ನು ಮಾಡಿ, ಭಾಷಣ ಮತ್ತು ಪ್ರಕಟಣೆಗಳನ್ನು ತೀವ್ರಗೊಳಿಸಿದರು. ಉದಾಹರಣೆಗೆ ತಿರುವಳುಂ ಸುಬ್ಬರಾವ್‌ರ "Discourses on the Bhagavad Gita (1888)". ಈ ಕೃತಿಯಲ್ಲಿ ಸುಬ್ಬರಾವ್ ಅವರು ತಮ್ಮ ಭಾಷಣಗಳ ಉದ್ದೇಶವು "ಗೀತೆಯ ತಾತ್ವಿಕತೆಯನ್ನು ಅಭ್ಯಸಿಸುವುದರಲ್ಲಿ ವಿದ್ಯಾರ್ಥಿಗಳಿಗೆ ಸಹಾಯ ಮಾಡುವುದು" ಮತ್ತು "ಶುದ್ಧ ನಂಬಿಕೆಯೆಡೆಗೆ ಮತ್ತೆ ಕರೆದೊಯ್ಯುವುದು" ಎಂದಿದ್ದಾರೆ. ಮದ್ರಾಸಿನ ಹಿಂದೂ ಟ್ರ್ಯಾಕ್ಟ್ ಸಮಾಜದ ಅಧ್ಯಕ್ಷರಾಗಿದ್ದ ಆರ್. ಶಿವಶಂಕರ ಪಾಂಡ್ಯರು ಹಲವು ಕೇಂದ್ರೀಯ ಹಿಂದೂ "ಸಿದ್ಧಾಂತಗಳು", ಭಕ್ತಿ ಪರಿಭಾಷೆಗಳು ಮತ್ತು ಪ್ರಾರ್ಥನೆಗಳು– ಮಂತ್ರಗಳ ಪ್ರಾಮುಖ್ಯತೆಯ ಕುರಿತು ಸಾರ್ವಜನಿಕ ಉಪನ್ಯಾಸಗಳನ್ನು ನೀಡತೊಡಗಿದರು. ಈ ಪ್ರವೃತ್ತಿಯು ೨೦ನೇ ಶತಮಾನದಲ್ಲೂ ಮುಂದುವರಿಯಿತು. ಆರ್. ಶಿವಶಂಕರ ಪಾಂಡ್ಯರ "ಭಗವದ್ಗೀತ ಸಾರಬೋಧಿನಿ ಅಥವಾ The Essential teaching of The Bhagavadgita (1897)"ರ ಅನುವಾದವನ್ನು ಗಮನಿಸುವುದು ಸೂಕ್ತ. ಶಿವಶಂಕರರು ಪೂರ್ಣ ಮೂಲಪಠ್ಯವನ್ನು ಎಂದರೆ ಸಂಸ್ಕೃತ ಪದ್ಯಗಳನ್ನು ಮೊದಲು ತೆಲುಗು, ಆನಂತರ ತಮಿಳು ಲಿಪಿಗಳಲ್ಲಿ ನೀಡಿ ಕಡೆಗೆ ಇಂಗ್ಲಿಷ್ ಅನುವಾದವನ್ನು ರೋಮನ್ ಲಿಪಿಯಲ್ಲಿ ನೀಡುತ್ತಾರೆ. ಆ ಮೂಲಕ ಮೂಲಕ್ಕೆ ಪ್ರಾಶಸ್ತ್ಯ ನೀಡುವುದರ ಜೊತೆಗೆ ಸ್ಥಳೀಯ ಓದುಗರನ್ನು ತಲುಪುವ ಉದ್ದೇಶ ಇವರದು. ಇವರು ಅಂತರ್‌ಭಾಷಾ ಅನುವಾದವನ್ನು ಅಂತಃಭಾಷಾ ಅನುವಾದದೊಂದಿಗೆ ಸಂಯೋಜಿಸಿರುವುದು–ವಸಾಹತುಪೂರ್ವ ಇತಿಹಾಸದಲ್ಲಿ ಸಂಸ್ಕೃತ ಪಠ್ಯಗಳು ದಕ್ಷಿಣ ಭಾರತದ ಭಾಷೆಗಳಿಗೆ ಅನುವಾದಗೊಂಡ ಕಾಲಘಟ್ಟವನ್ನು ಮರುಕಳಿಸುವಂತೆ ಮಾಡಿತು. ಸಂಸ್ಕೃತ ಮೂಲಪಠ್ಯವನ್ನು ಯಥಾವತ್ತಾಗಿ ಉಳಿಸಿಯೂ 'ತೆಲುಗೀಕೃತ', 'ತಮಿಳೀಕೃತ'(ಎಂದರೆ ಆ ಭಾಷಾ ಲಿಪಿ ಮತ್ತು ವ್ಯಾಕರಣ ನಿಯಮಗಳಿಗೆ ಅನುಸಾರವಾಗಿ ಹೊಂದಿಸಿ)ಗೊಳಿಸುತ್ತಾರೆ. ಬಹಳಷ್ಟು ಮೇಲ್ವರ್ಗದ ಯುವಕರು ಆಧುನಿಕ

ಇಂಗ್ಲಿಷ್‌ನಲ್ಲಿ ವ್ಯವಹರಿಸಲು ಪ್ರಾರಂಭಿಸಿದುದರ ಬಗ್ಗೆ ಈ ಲೇಖಕರಿಗೆ ಅರಿವಿತ್ತು. ಅನುವಾದವನ್ನು ಈ ಬಗೆಯಲ್ಲಿ ಕೊಡುವ ಮೂಲಕ ವಿವಿಧ ಭಾಷಾ ಲಿಪಿಗಳಲ್ಲೇ ಸಂಸ್ಕೃತದ ಮೂಲಪಠ್ಯವನ್ನು ಮುಖಾಮುಖಿಯಾಗಿಸುವ ಮತ್ತು ಕಷ್ಟಕರ ಭಾಗಗಳನ್ನು ಇಂಗ್ಲಿಷ್‌ನಲ್ಲಿ ಓದಿ ಅರ್ಥೈಸಿಕೊಳ್ಳಲು ನೆರವಾಗುವ ಪ್ರಯತ್ನ ಮಾಡಿದ್ದಾರೆ. ಸಂಸ್ಕೃತ ಪಠ್ಯಗಳನ್ನು ಭಾರತೀಯ ಭಾಷೆಗಳಿಗೆ ಅನುವಾದಿಸುವಂಥ ಪಾರಂಪರಿಕ ಪ್ರವೃತ್ತಿಯನ್ನು ಜೊತೆಗೂಡಿಸಿಕೊಂಡು, ಪೌರ್ವಾತ್ಯವಾದಿ ಮತ್ತು ಮಿಷನರಿ ವಿದ್ವಾಂಸರು ಪರಿಚಯಿಸಿದ ಅನುವಾದದ ಹೊಸ ಬಗೆಗಳನ್ನು ಬಳಸಿಕೊಂಡು ಶಿವಶಂಕರರು ಭಿನ್ನ ಪ್ರಾದೇಶಿಕ ಸಮೂಹಗಳನ್ನು ತಲುಪಲು ಪ್ರಯತ್ನಿಸಿದ್ದುದು ವಿಶಿಷ್ಟ ಸಾಧನೆಯಾಗಿದೆ. ಈ ಅನುವಾದ ಕಾರ್ಯತಂತ್ರದ ಮೂಲಕ ಪವಿತ್ರ ಗ್ರಂಥಗಳ ವಿಷಯಗಳೊಂದಿಗೆ ತೊಡಗಿದ್ದ ಹಿಂದೂ ಮತ್ತು ಯೂರೋಪಿಯನ್ ಪರಂಪರೆಗಳೆರಡನ್ನೂ ನಿಲುಕುವುದು ಅಥವಾ ತಲುಪುವುದು ಸಾಧ್ಯವಾಯಿತು. ಈ ಅನುವಾದದ ಮೂಲಕ ಭಗವದ್ಗೀತೆಯನ್ನು ಪ್ರವೇಶಿಸುವುದರಿಂದ ಪವಿತ್ರಾತ್ಮಕ, ತತ್ವಶಾಸ್ತ್ರೀಯ, ಸಾಹಿತ್ಯಿಕ, ಸೌಂದರ್ಯಶಾಸ್ತ್ರ ಜ್ಞಾನಗಳನ್ನು ತಾರ್ಕಿಕವಾಗಿ ವಿವೇಚಿಸುವುದಕ್ಕೆ ನೆರವಾಗುತ್ತದೆ.

ಉಪಸಂಹಾರ

ವಸಾಹತುಕಾಲದಲ್ಲಿನ ಜ್ಞಾನದ ಉತ್ಪಾದನೆಯನ್ನು ವಿಶ್ಲೇಷಣೆಗೊಳಪಡಿಸುವುದು ಎಡ್ವರ್ಡ್ ಸೈದ್‌ನ ವಾದದ ನಂತರ ಹೆಚ್ಚು ಮಹತ್ವ ಪಡೆದಿದೆ. ಆದಾಗ್ಯೂ ಈ ಹಿಂದಿನ ಅಧ್ಯಯನಗಳು ೧. ಯೂರೋಪಿಯನ್ನರು "ಜ್ಞಾನ"ದೊಂದಿಗೆ ಪ್ರವೇಶಿಸಿ, ವಸಾಹತುಗೊಳಪಟ್ಟವರಿಗೆ ಆ ಜ್ಞಾನವನ್ನು ತಲುಪಿಸಿದರು. ೨. ಅವರು ಅತ್ಯಂತ ಸಶಕ್ತವಾಗಿ "ಜ್ಞಾನ"ವನ್ನು ಸೃಷ್ಟಿಸಿ ಪಸರಿಸಿದರು. ಅದನ್ನು ವಸಾಹತುಗೊಳಪಟ್ಟವರು ಸಹ ಸ್ವೀಕರಿಸಿದರು–ಎಂಬುದರತ್ತ ದೃಷ್ಟಿ ನೆಟ್ಟಿದ್ದವು. ಈ ಆಲೋಚನೆಗಳು Scholarship on Languages(Cohn, 1996), The English literary Curriculum in India (Vishwanathan, 1989), Religions(Sugirta Raja, 2003) ಕೃತಿಗಳಲ್ಲಿ ಸ್ಪಷ್ಟವಾಗುತ್ತವೆ. Madras School of Orientalism(Thomas Trautmann, 2009), Colonial Sanskrit Scholarship (Michael Dodson, 2007), South India(Eugine Irschick, 1994) ಈ ಕೃತಿಗಳು ವಸಾಹತುಕಾಲದ ಜ್ಞಾನ ಉತ್ಪಾದನೆಯ ಸಹಯೋಗಿ ಸ್ವರೂಪವನ್ನು ಗುರುತಿಸಿವೆ. ಭಿನ್ನ ಪ್ರವರ್ಗಗಳ 'ಸ್ಥಳೀಯ ಮಾಹಿತಿದಾರರು' ಈ ಬಗೆಯ ಅಧಿಕೃತ ಜ್ಞಾನ ಉತ್ಪಾದನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಈ ಪಟ್ಟಿಗೆ ಭಾಷಾಂತರಕಾರರು ಸಹ ಸೇರುತ್ತಾರೆ. ಸಾಮ್ರಾಜ್ಯಶಾಹಿಗಳ ಹಾಗೂ ಸ್ಥಳೀಯರ ಸಹಭಾಗಿತ್ವವು ಅತ್ಯುತ್ತಮವಾಗಿ ಕಾಣಸಿಗುವುದು ಭಾಷಾಂತರ ಸಂದರ್ಭಗಳಲ್ಲಿ. ಬಹಳಷ್ಟು ವಸಾಹತು ಸಂಕಥನಗಳು ಪವಿತ್ರ ಗ್ರಂಥಗಳ ಭಾಷಾಂತರದಲ್ಲಿ ಬೆರೆತುಹೋದವು. ಭಾಷಾಂತರಕಾರರ ಕೆಲಸವು ಸಹಭಾಗಿತ್ವದ್ದಾಗಿತ್ತು. ವಸಾಹತು ಭಾಷಾಂತರ ಯೋಜನೆಗಳ ಹಲವು ಉದಾಹರಣೆಗಳಲ್ಲಿ, ವಿವಿಧ ಭಾಷೆಗಳನ್ನು

ಪ್ರತಿನಿಧಿಸುವ ವಿದ್ವಾಂಸರು ಮತ್ತು ಪಂಡಿತರು ಭಾಷಾಂತರ ಕೃತಿಗಳನ್ನು ಸೃಷ್ಟಿಸುವುದರಲ್ಲಿ ಒಟ್ಟಾಗಿ ಕೆಲಸ ಮಾಡಿದರು. ಹೀಗಾಗಿ ಈ ಕ್ಷೇತ್ರದಲ್ಲಿ ಭಾಷಾಂತರಕಾರರ ಪಾತ್ರ ಪ್ರಮುಖವಾದುದು. ವಸಾಹತು ಕಾಲಘಟ್ಟದಲ್ಲಿ ಆದ ಪ್ರತಿಯೊಂದು ಭಾಷಾಂತರವು ಆಗಿನ ಜ್ಞಾನಕ್ಕೆ ಪೂರಕವಾಗಿತ್ತು. ಇಲ್ಲವೇ ಪ್ರಶ್ನಿಸುವಂತಿತ್ತು. ಈ ಭಾಷಾಂತರ ಇತಿಹಾಸಗಳು ಜ್ಞಾನ ಉತ್ಪಾದನೆಯ ವಿವಿಧ ವಿಧಾನಗಳತ್ತ ಮತ್ತು ನಿಯಂತ್ರಣಗಳತ್ತ ಬೆಳಕು ಚೆಲ್ಲುತ್ತವೆ. ಹೀಗೆ ಭಾಷಾಂತರಕಾರರು ಮತ್ತು ಅವರ ಭಾಷಾಂತರಗಳು ಜ್ಞಾನ ಪ್ರವಾಹದ ದಿಕ್ಕನ್ನು ಪ್ರಭಾವಿಸಿರುವುದಂತೂ ಸತ್ಯ. ಪೆಟ್ರಿಖಾ ಇಸ್ರೇಲ್ ಅವರ ಅಭಿಪ್ರಾಯ ಈ ನಿಟ್ಟಿನಲ್ಲಿ ಗಮನಿಸಬೇಕಾದುದಾಗಿದೆ: "ಯೂರೋಪಿಯನ್ ಮತ್ತು ಭಾರತೀಯ ಅನುವಾದಕರಿಬ್ಬರೂ ಭಗವದ್ಗೀತೆಯ ಅನುವಾದಕ್ಕೆ ತೊಡಗುವ ಮೂಲಕ ಭಗವದ್ಗೀತೆಯನ್ನು ಅತಿಮುಖ್ಯ ಹಿಂದೂ ಪಠ್ಯವೆಂಬುದಾಗಿ ಅದರ ಸ್ಥಾನವನ್ನು ಭದ್ರಪಡಿಸ ತೊಡಗಿದರು. ಇದರ ಅರೆ-ತತ್ವಶಾಸ್ತ್ರೀಯ ಮತ್ತು ಅರೆ-ಅನುಭಾವಿಕ ಸ್ವರೂಪದ ಕಾರಣದಿಂದಾಗಿ ಹಿಂದೂವಾದವನ್ನು 'ಜಾಗತಿಕಧರ್ಮ'ವೆಂಬುದಾಗಿ ಪರಿಗಣಿಸುವುದು ಮೊದಲಾಯಿತು. ಭಗವದ್ಗೀತೆಯು ಪೌರ್ವಾತ್ಯ ವಿದ್ವಾಂಸರಿಗೆ ಪ್ರಾಚೀನ ವೈಭವಯುತ ನಾಗರಿಕತೆಯ ಕುರುಹಾಗಿ ಕಂಡರೆ, ಮಿಷನರಿ ಅನುವಾದಕರಿಗೆ ಧಾರ್ಮಿಕ ಪಠ್ಯವಾಗಿ ಕಂಡಿತು. ಆದಾಗ್ಯೂ ಭಾರತೀಯ ಅನುವಾದಕರಿಗೆ ಇದರ ಅನುವಾದವು, ಭಗವದ್ಗೀತೆಯನ್ನು ವಿಶ್ವಧರ್ಮಗಳ ಪಂಕ್ತಿಶ್ರೇಣಿಯಲ್ಲಿ ಮುಂಚೂಣಿಗೆ ತರಲು ಇರುವ ಅವಕಾಶವೆಂಬುದಾಗಿ ಕಂಡಿತು. ಕೇವಲ ಸಂಸ್ಕೃತಕ್ಕೆ ಮಾತ್ರ ಸೀಮಿತವಾಗಿದ್ದ ಭಗವದ್ಗೀತೆಯನ್ನು ಅನುವಾದಗಳ ಮೂಲಕ ಸ್ಥಳೀಯ ಭಾಷೆಗಳಿಗಿಂತಲೂ ಮುಖ್ಯವಾಗಿ ಇಂಗ್ಲಿಷಿಗೆ ಹೆಚ್ಚು ಹೆಚ್ಚು ಅನುವಾದಿಸತೊಡಗಿದರು."[೯]

ಧಾರ್ಮಿಕ ಮತಾಂತರಗಳನ್ನು ತಪ್ಪಿಸುವ ಸಲುವಾಗಿ ಸಹ-ಭಾರತೀಯರನ್ನು ಸುಶಿಕ್ಷಿತರನ್ನಾಗಿಸುವ, ಭಾರತೀಯರಲ್ಲಿ ಹಿಂದುತ್ವದ ಸತ್ಯಗಳನ್ನು ಪಸರಿಸುವ ಉದ್ದೇಶದಿಂದ ತಾವು ಭಾಷಾಂತರ ಮಾಡುತ್ತಿರುವುದಾಗಿ ಶಿವಶಂಕರ ಸೇರಿದಂತೆ ಕೆಲವು ಭಾಷಾಂತರಕಾರರು ವಾದಿಸುತ್ತಾರಾದರೂ ತಮ್ಮ ಭಾಷಾಂತರಗಳು ಭಾರತೀಯೇತರ ಓದುಗರನ್ನೂ ಸಮಾನವಾಗಿ ತಲುಪಬೇಕೆಂಬ ತೀವ್ರತೆಯೂ ಅವರಲ್ಲಿ ಕಾಣುತ್ತದೆ. ಭಾಷಾಂತರದ ಈ ಕಾರ್ಯಾಚರಣೆಯು ಪ್ರತಿರೋಧಾತ್ಮಕ ಪರ್ಯಾಯ ವಸಾಹತು ಸಂಕಥನವನ್ನು ರೂಪಿಸುವುದರಲ್ಲಿ ಪ್ರಧಾನ ಅಂಶವಾಯಿತು ಎಂಬುದನ್ನು ಮರೆಯುವಂತಿಲ್ಲ.

ಒಟ್ಟಾರೆಯಾಗಿ ವಸಾಹತು ಸಂದರ್ಭದಲ್ಲಿನ ಕೃತಿಗಳು, ಪವಿತ್ರ ಗ್ರಂಥಗಳು ವಸಾಹತು ಆಳ್ವಿಕೆಗೆ ಒಳಗಾದವರನ್ನು ಮತಾಂತರ ಮಾಡುವುದಕ್ಕೆ ಅಥವಾ ಅವರನ್ನು ಗ್ರಹಿಸುವುದಕ್ಕೆ ಅಥವಾ ಇನ್ನೂ ಚೆನ್ನಾಗಿ 'ಅಧೀನ' ಮಾಡಿಕೊಳ್ಳುವುದಕ್ಕೆ ಅನುವಾದಗಳು ಬಳಕೆಯಾದುವು ಹಾಗೂ ಅನುವಾದಕರು ಮತ್ತು ಅನುವಾದ ಪ್ರಕ್ರಿಯೆಗಳು ಅಂದಿನ ರಾಜಕೀಯ ಸಂದರ್ಭದಲ್ಲಿ ಸಂಕಥನಗಳನ್ನು ರೂಪಿಸುವುದರಲ್ಲಿ ಕ್ರಿಯಾಶೀಲವಾಗಿದ್ದವು ಎನ್ನಬಹುದಾಗಿದೆ.

ಕೊನೆ ಟಿಪ್ಪಣಿಗಳು

1. Maxmuller: Introduction to the science of religion, page 28.
2. Sharada Sugirtharajah: Imagining Hinduism: A Postcolonial Perspective page 28-30.
3. Peter Van DerVeer: Imperial Encounters: Religion and Modernity in India and Britain, page 119.

   "This Orientalist desire was intimately connected to the desire among Hindu scholars to have scriptures, like Christianity and Islam."
4. Cockburn J. Thamson: The Bhagavad Gita or A Discourse between Krishna and Arjuna on Divine matters, page 43.
5. ಅದೇ, ಪುಟ ೫೮.
6. Jon Davis: The Bhagavad Gita or Sacred Lay, page 189.
7. King, Richard: Orientalism and Religion: Postcolonial Theory, India and The Mystic East, page 28-29.
8. Hephzibah Israel: Translating the Sacred: Colonial Constructions and Postcolonial Perspectives, page 24..

   "Both European and Indian Translators, by choosing to translate the Bhagavadgita, established it as the quintessential "Hindu" text and as representative of a highly complex quasi-philosophical and quasi-mystical text which conferred on Hinduism status as a "world religion." While for Orientalist scholars, the translated Bhagavadgita was proof of an ancient and glorious "civilization," for missionary translators, the representation of the Bhagavadgita as a philosophical text precluded its treatment as sacred "scripture." However, for the Indian translators, also mostly practising Hindus, translating the Bhagavadgita was simultaneously an appropriative gesture and an opportunity to competein the world hierarchy of "religions"; having for centuries preserved the Bhagavadgita in the exclusive Sanskrit, Indian scholar-translators were embracing the opportunity to translate the text mostly into English rather than into other Indian languages."

ಅಧ್ಯಾಯ: ನಾಲ್ಕು

ಧಾರ್ಮಿಕ ಪಠ್ಯಗಳು: ವಸಾಹತುಶಾಹಿ ಸಂಘರ್ಷ

ಅಧ್ಯಾಯ: ನಾಲ್ಕು

ಧಾರ್ಮಿಕ ಪಠ್ಯಗಳು: ವಸಾಹತುಶಾಹಿ ಸಂಘರ್ಷ

೪.೧. ಭಗವದ್ಗೀತೆಯ ಹುಟ್ಟು ಮತ್ತು ಬೆಳವಣಿಗೆ

ಭಗವದ್ಗೀತೆಯು ಮಹಾಭಾರತ ಕೃತಿಯ ಅಂಗಭಾಗವಾಗಿದೆ. ವೇದ ಮತ್ತು ಉಪನಿಷತ್ತುಗಳಂತೆ, ಮಹಾಭಾರತ ಮತ್ತು ರಾಮಾಯಣಗಳೂ ಕೂಡ ಹಿಂದೂಗಳ ಪವಿತ್ರಗ್ರಂಥಗಳೆಂದು ಭಾವಿಸಲ್ಪಟ್ಟಿವೆ. ಇಂಥ ಮಹಾಕಾವ್ಯದ ಭಾಗವಾದ ಭಗವದ್ಗೀತೆಯೂ ಕೂಡ ಸ್ವತಂತ್ರ ಕೃತಿಯಾಗಿ ನಿಲ್ಲಬಲ್ಲಂಥದ್ದಾಗಿದೆ. ಇಂಥ ಗೀತೆಯ ರಚನೆಯ ಬಗೆಗೆ ಅನೇಕ ವಾದ-ವಿವಾದ, ಚರ್ಚೆಗಳು ಬಹಳ ಹಿಂದಿನಿಂದಲೂ ನಡೆಯುತ್ತಲೇ ಬಂದಿವೆ. ಪಾಶ್ಚಾತ್ಯ ವಿದ್ವಾಂಸರ ಮೂಲಕ ಪ್ರಾರಂಭವಾದ ಈ ರೀತಿಯ ಚರ್ಚೆಗಳು ಇಂದಿಗೂ ನಡೆಯುತ್ತಲೇ ಇವೆ. ಹೀಗೆ ನಡೆದಿರುವ ಮುಖ್ಯ ಚರ್ಚೆಗಳನ್ನು ಇಲ್ಲಿ ತಿಳಿಯಬಹುದಾಗಿದೆ.

ಮೂಲ ಮಹಾಭಾರತದ ಕಥೆಯು ಈಗಿನಷ್ಟು ದೊಡ್ಡದಾಗಿರಲಿಲ್ಲ. ಮೂರು ಹಂತಗಳಲ್ಲಿ ಇದಕ್ಕೆ ಕಥೆ-ಉಪಕಥೆಗಳನ್ನು ಸೇರಿಸಿ ಈಗಿನಷ್ಟು ಬೃಹತ್ ಕಾವ್ಯವನ್ನಾಗಿಸಲಾಗಿದೆ ಎಂಬುದು ಇತಿಹಾಸತಜ್ಞರ ಅಭಿಪ್ರಾಯವಾಗಿದೆ. ಮಹಾಭಾರತದ ಮೊದಲಿನ ಹೆಸರು 'ಜಯ' ಎಂಬುದಾಗಿತ್ತು. ಇದರಲ್ಲಿ ೮೮೦೦ ಶ್ಲೋಕಗಳು ಮಾತ್ರ ಇದ್ದವು, ನಂತರದಲ್ಲಿ ೨೪೦೦೦ ಶ್ಲೋಕಗಳಿಗೆ ಹಿಗ್ಗಿಸಲ್ಪಟ್ಟ 'ವಿಜಯ ಅಥವಾ ಭಾರತ' ಎಂಬ ಹೆಸರನ್ನು ಪಡೆಯಿತು. ಅನಂತರದಲ್ಲಿ ೧,೦೦,೦೦೦ ಲಕ್ಷಗಳಿಗೆ ಹಿಗ್ಗಿಸಿದ ಈಗಿನ 'ಮಹಾಭಾರತ' ಹಂತಕ್ಕೆ ಮಾರ್ಪಾಡಾಯಿತು ಎಂದು ಗೀತೆಯ ಬಗೆಗೆ ಸುದೀರ್ಘವಾಗಿ ಅಧ್ಯಯನ ನಡೆಸಿದ ಪುಣೆಯ ಆರ್.ಜಿ. ಭಂಡಾರ್‌ಕರ್ ಸಂಶೋಧನ ಸಂಸ್ಥೆಯ ವಿ.ಎಸ್. ಸುಕ್ತಂಕರ್ ಅವರು ಅಭಿಪ್ರಾಯಪಟ್ಟಿದ್ದಾರೆ. ಹೀಗೆಯೇ ಗೀತೆಯೂ ಕೂಡ ಬೆಳವಣಿಗೆ ಹೊಂದಿದೆ ಎಂಬುದು ಹಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಗೀತೆಯ ಕಾಲದ ಬಗ್ಗೆ ಅನೇಕ ವಿದ್ವಾಂಸರು ತಮ್ಮ ಹೇಳಿಕೆಯನ್ನು ದಾಖಲಿಸಿದ್ದಾರೆ.

ಭಗವದ್ಗೀತೆಯು ರಚನೆಯಾದ ಕಾಲವನ್ನು ಕುರಿತಂತೆ ಪೂರ್ವ ಮತ್ತು ಪಾಶ್ಚಾತ್ಯ ದೇಶಗಳ ವಿದ್ವಾಂಸರುಗಳಿಂದ ವ್ಯಾಪಕವೂ ಸುದೀರ್ಘವೂ ಆದ ಚರ್ಚೆಗಳು ನಡೆದಿವೆ.

ಹಾಗೆಯೇ ವ್ಯಾಪಕ ಭಿನ್ನಾಭಿಪ್ರಾಯಗಳೂ ವ್ಯಕ್ತವಾಗಿವೆ. ಸುಮಾರು ಒಂದು ಸಾವಿರ ವರ್ಷಗಳ ಕಾಲನಿರ್ಣಯದ ವ್ಯತ್ಯಾಸವು ಈ ಚರ್ಚೆಗಳಲ್ಲಿ ಓಡಾಡುತ್ತದೆ. ಕೆಲವು ವಿದ್ವಾಂಸರು ಬುದ್ಧನ ತರುವಾಯದ ಕಾಲದಲ್ಲಿ ರಚಿತವಾಗಿರಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ಇನ್ನು ಕೆಲವರು ಕ್ರಿ.ಪೂ. ೫ನೇ ಶತಮಾನ ಅಥವಾ ಅದಕ್ಕೂ ಹಿಂದೆ ಇದು ರಚಿತವಾಗಿದೆ ಎಂಬ ನಿಲುವನ್ನು ತಾಳುತ್ತಾರೆ.

ಭಗವದ್ಗೀತೆಯ ಬಗೆಗೆ ಅಧ್ಯಯನ ನಡೆಸಿದ ರಿಚರ್ಡ್ ಗಾರ್ಬೆಯು “ಮೂಲಗೀತೆಯು ಕ್ರಿ.ಪೂ. ೨೦೦ಕ್ಕೆ ಸೇರಿದ್ದು, ಈಗಿರುವ ಸ್ವರೂಪವನ್ನು ಅದು ಕ್ರಿ.ಶ. ೨೦೦ರಲ್ಲಿ ಪಡೆದುಕೊಂಡಿದೆ.”[೧] ಎಂದರೆ, “ಗೀತೆಯ ರಚನೆಯು ನಡೆದಿರಬಹುದಾದ ಅತಿ ಸಮೀಪದ ಕಾಲವನ್ನು ಕ್ರಿ.ಪೂ. ೩ನೇ ಶತಮಾನಕ್ಕೆ ತುಸು ಮುಂಚೆಗೆ ನಿಗದಿಪಡಿಸಬಹುದೇ ಹೊರತು ಅದನ್ನು ಮತ್ತೂ ಹಿಂದಕ್ಕೆ ತಳ್ಳುವುದು ಸಾಧ್ಯವಿಲ್ಲ”[೨] ಎಂದು ಕೆ.ಟಿ. ತೆಲಾಂಗ್ ಹೇಳುತ್ತಾರೆ.

ಮೂಲದ ಗೀತೆಯನ್ನು ಕ್ರಿ.ಪೂ. ೩ನೇ ಶತಮಾನದ ಹಿಂದಕ್ಕೆ ಕೊಂಡೊಯ್ಯುವುದು ಸಾಧ್ಯವೇ ಇಲ್ಲ. ಪ್ರಕ್ಷಿಪ್ತಗಳಾಗಿರುವ ಅದರ ಪ್ರತ್ಯೇಕ ಬಿಡಿಭಾಗಗಳನ್ನು ಕಾಲಾನಂತರದಲ್ಲಿ ಸೇರಿಸಲಾಗಿದ್ದು ಈ ಪ್ರಕ್ರಿಯೆಯು ಸುದೀರ್ಘ ಅವಧಿಯಲ್ಲಿ ನಡೆದಿದೆ ಎಂಬುದಾಗಿ ರುಡಾಲ್ಫ್ ಆಟ್ಟೋ ಅಭಿಪ್ರಾಯಪಡುತ್ತಾನೆ.

ಜಾನ್ ಡೇವಿಸ್ 'ಗೀತೆಯನ್ನು ೩ನೇ ಶತಮಾನಕ್ಕಿಂತ ಮುಂಚೆ ರಚಿಸಿರುವ ಸಾಧ್ಯತೆಗಳು ಇಲ್ಲವೇ ಇಲ್ಲ' ಎನ್ನುತ್ತಾನೆ. 'ಗೀತ ರಚನಾಕಾರನಿಗೆ ಅಥವಾ ರಚನಾಕಾರರಿಗೆ ಕ್ರೈಸ್ತಧರ್ಮೀಯ ಸಿದ್ಧಾಂತಗಳ ಪರಿಚಯವಿತ್ತು ಎಂಬ ಅಭಿಪ್ರಾಯವು ಇನ್ನೂ ಇತ್ಯರ್ಥವಾಗದೆ ಉಳಿದಿರುವ ಊಹೆಯಾಗಿದೆ' ಎಂದು ಅಭಿಪ್ರಾಯ ತಾಳುವ ವೆಬರ್ ಮುಂದುವರಿದು, 'ಗೀತೆಯ ಮೇಲೆ ಕ್ರೈಸ್ತಧರ್ಮದ ಪ್ರಭಾವವಿದೆ ಎಂಬ ವಾದವು ಹೆಚ್ಚು ಕಡಿಮೆ ಸಾರ್ವತ್ರಿಕವಾಗಿ ತಿರಸ್ಕೃತವಾಗಿ ರುವಂಥದ್ದು ಹಾಗೂ ಈಗಿರುವ ಸ್ವರೂಪವನ್ನು ಗೀತೆಯು ಕ್ರಿ.ಪೂ. ೩ನೇ ಶತಮಾನದಲ್ಲಿ ಪಡೆಯಿತು ಎಂಬುದಕ್ಕೆ ಆಂತರಿಕ ಪುರಾವೆಗಳಿವೆ' ಎನ್ನುತ್ತಾನೆ.

ಗೀತೆಯ ಕಾಲವನ್ನು ಪಾಶ್ಚಾತ್ಯ ವಿದ್ವಾಂಸರು ಕ್ರಿ.ಪೂ. ೩ನೇ ಶತಮಾನ ಮತ್ತು ಈಚೆಗೆ ತಂದು ನಿಲ್ಲಿಸಿದರೆ, ಭಾರತೀಯ ವಿದ್ವಾಂಸರು ಪಾಶ್ಚಾತ್ಯರ ಸಂಕಥನಗಳ ಎದುರಿಗೆ ನಿಲ್ಲಿಸುವ ಸಲುವಾಗಿ ಗೀತೆಯನ್ನು ಉದಾತ್ತೀಕರಿಸಿ ಅದರ ಕಾಲವನ್ನು ಬುದ್ಧಪೂರ್ವ ಯುಗಕ್ಕೆ ಕೊಂಡೊಯ್ಯುತ್ತಾರೆ. ಇದಕ್ಕೆ ಉದಾಹರಣೆಯಾಗಿ ಗೀತೆಯನ್ನು ಕುರಿತು ಸುದೀರ್ಘ ಅಧ್ಯಯನ ಮಾಡಿದ ಬಾಲಗಂಗಾಧರ ತಿಲಕ್ ಅನೇಕ ಆಧಾರಗಳನ್ನು ನೀಡುತ್ತಾ 'ಭಗವದ್ಗೀತೆಯು ಮಹಾಯಾನ ಬೌದ್ಧ ಪಂಥವು ಹುಟ್ಟುವ ಪೂರ್ವದಲ್ಲಿ ಅಥವಾ ಅಶೋಕನ ಪೂರ್ವದಲ್ಲಿ ಅಂದರೆ ಕ್ರಿಸ್ತಶಕ್ಕೆ ಮುಂಚೆ ಸುಮಾರು ಮೂರು ಶತಕಗಳ ಹಿಂದೆಯಂತೂ ಅಸ್ತಿತ್ವದಲ್ಲಿ ಇತ್ತೆಂದು ಬೌದ್ಧ ಗ್ರಂಥಗಳಿಂದಲೂ ಬೌದ್ಧ ಗ್ರಂಥಕಾರರು ಬರೆದ ಬೌದ್ಧಧರ್ಮದ ಇತಿಹಾಸದ

ಮೇಲಿಂದಲೂ ಸ್ವತಂತ್ರ ರೀತಿಯಿಂದ ಪೂರ್ಣವಾಗಿ ಸಿದ್ಧವಾಗುತ್ತದೆ’[೩] ಎಂಬ ವಾದವನ್ನು ಮುಂದಿಡುತ್ತಾರೆ. ಮತ್ತೊಬ್ಬ ಭಾರತೀಯ ವಿದ್ವಾಂಸರಾದ ಡಾ. ರಾಧಾಕೃಷ್ಣನ್ ಅವರು ಕೂಡ ತಿಲಕರ ಅಭಿಪ್ರಾಯವನ್ನು ಸಮರ್ಥಿಸಿ "ಗೀತೆಯ ಪಠ್ಯವು ಕಾಲವಾಹಿನಿಯಲ್ಲಿ ಹಲವು ಮಾರ್ಪಾಡುಗಳನ್ನು ಪಡೆದಿರಬಹುದಾದರೂ ಅದರ ಕಾಲವು ಕ್ರಿ.ಪೂ. ೫ನೇ ಶತಮಾನವೆಂದು ನಿರ್ಣಯಿಸಬಹುದಾಗಿದೆ"[೪] ಎನ್ನುತ್ತಾರೆ.

ವಿವೇಕಾನಂದರೂ ಕೂಡ "ಗೀತೆ ಮತ್ತು ಮೂಲ ಆವೃತ್ತಿಯ ಮಹಾಭಾರತ ಗ್ರಂಥಗಳು ಬುದ್ಧಪೂರ್ವಯುಗದಲ್ಲಿ ರಚಿತವಾದವೆಂದು ನಿರ್ಣಯಿಸಬಹುದು. ಬುದ್ಧನ ಬಗೆಗಾಗಲೀ ಬೌದ್ಧಧರ್ಮದ ಬಗೆಗಾಗಲೀ ಇವೆರಡರಲ್ಲೂ ಪ್ರಸ್ತಾಪವಿಲ್ಲದಿರುವುದರಿಂದ ಇವೆರಡೂ ಬುದ್ಧಪೂರ್ವ ಯುಗಕ್ಕೆ ಸೇರಿದವಾಗಿವೆ" ಎನ್ನುತ್ತಾರೆ. ಕ್ರಿ.ಪೂ. ಐದನೇ ಶತಮಾನದ ಮಧ್ಯಭಾಗದವರೆಗೆ ಪಾಣಿನಿಯ ಜೀವಿತಾವಧಿಯಲ್ಲಿ 'ಪಾಂಡವರು' ಎಂಬ ಹೆಸರಿನ ಪ್ರಸ್ತಾಪ ಎಲ್ಲೂ ಕಂಡುಬರುವುದಿಲ್ಲ ಎಂದು ವಿ.ಎಸ್. ಅಗರ್‌ವಾಲ್ ಅವರು ಅಭಿಪ್ರಾಯಪಡುತ್ತಾರೆ. ಮ್ಯಾಕ್ಸ್‌ಮುಲ್ಲರ್ ಅವರು 'ಮಹಾಭಾರತದ ಪ್ರಮುಖ ಕಥಾವಸ್ತುವಾಗಿರುವ ಕೌರವರ ಪಾಂಡವರ ನಡುವಿನ ಯುದ್ಧ ವೇದಗಳ ಕಾಲಕ್ಕೆ ಗೊತ್ತೇ ಇರಲಿಲ್ಲ' ಎನ್ನುತ್ತಾರೆ.

ಈ ಮೇಲಿನ ಹೇಳಿಕೆಗಳನ್ನು ಉತ್ಪ್ರೇಕ್ಷೆಯ ಮಾತುಗಳೆಂದು ಬಗೆದು ಇತಿಹಾಸ ಮತ್ತು ಭಾಷಾದೃಷ್ಟಿಯಿಂದ ಅಧ್ಯಯನ ನಡೆಸಿದ ಡಿ.ಡಿ.ಕೊಸಾಂಬಿ ಅವರು ಕುರುಕ್ಷೇತ್ರ ಯುದ್ಧವೆಂಬುದು ಕಾಲ್ಪನಿಕವಾಗಿ ಸೃಷ್ಟಿಸಲಾದ ಯುದ್ಧವಾಗಿದೆ ಎನ್ನುತ್ತಾರೆ. "ಗೀತೆಯಲ್ಲಿ ಬಳಕೆಯಾಗಿರುವ ಸಂಸ್ಕೃತವು ಕ್ರಿ.ಪೂ. ಸುಮಾರು ೨ನೇ ಶತಮಾನಕ್ಕೆ ಸೇರಿದ್ದಾಗಿದೆ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. "ಕ್ರಿ.ಪೂ. ೩ನೇ ಶತಮಾನವು ಅಂತ್ಯಗೊಳ್ಳುವ ಮುಂಚೆ ಗೀತೆಯ ರಚನೆಯಾಗಿರುವುದು ಅಸಾಧ್ಯ ಸಂಗತಿಯಾಗಿದೆ"[೫] ಎಂಬ ದೃಢನಿಲುವನ್ನು ತಾಳುತ್ತಾರೆ. ಪ್ರತಿಯೊಬ್ಬರೂ ಗೀತೆಯನ್ನು ತಮ್ಮದೇ ಆದ ರೀತಿಗಳಲ್ಲಿ ವಿಭಿನ್ನವಾಗಿ ವ್ಯಾಖ್ಯಾನಿಸಿದ್ದಾರೆ. ಹಾಗಾಗಿ ಅದು ಮಾನಸಿಕ ಹೊಯ್ದಾಟವನ್ನು ಬಗೆಹರಿಸುವುದಕ್ಕಿಂತಲೂ ಹೆಚ್ಚಾಗಿ ವ್ಯಕ್ತಿತ್ವವನ್ನು ಒಡೆಯುವುದಕ್ಕೆ ಹಾಗೂ ಸಂಶಯಗಳನ್ನು ಹುಟ್ಟುಹಾಕುವುದಕ್ಕೆ ಹೆಚ್ಚು ಯೋಗ್ಯವಾದ ಗ್ರಂಥ ಎನಿಸುತ್ತದೆ ಎಂದಿದ್ದಾರೆ. ಅವರು ಮುಂದುವರಿದು– "ನಿಜವಾಗಿಯೂ ವರದಿಯಾಗಿರುವ ಪ್ರಮಾಣದಲ್ಲಿ ಮಹಾಭಾರತದ ಯುದ್ಧ ನಡೆದಿದ್ದೇ ಆಗಿದ್ದಲ್ಲಿ ದೆಹಲಿ ಮತ್ತು ಥಾನೇಶ್ವರದ ನಡುವೆ ೧೮ ದಿನಗಳ ಕಾಲ ನಡೆದ ಈ ಯುದ್ಧದಲ್ಲಿ ಸುಮಾರು ೫ ಮಿಲಿಯನ್ ಜನ ಮರಣ ಹೊಂದಿರಬೇಕು. ಸುಮಾರು ೧,೩೦,೦೦೦ ರಥಗಳು(ಜೊತೆಗೆ ಅವುಗಳ ಕುದುರೆಗಳು), ಅಷ್ಟೇ ಸಂಖ್ಯೆಯ ಆನೆಗಳು ಮತ್ತು ಅದರ ಮೂರರಷ್ಟು ಅಶ್ವದಳವು ಯುದ್ಧದಲ್ಲಿ ಪಾಲ್ಗೊಂಡಿರಬೇಕು ಮತ್ತು ಅಷ್ಟೇ ಸಂಖ್ಯೆಯಲ್ಲಿ ದಂಡನಾಯಕರು ಮತ್ತು ಯೋಧರು ಕೂಡ ಆ ಯುದ್ಧದಲ್ಲಿ ಪಾಲ್ಗೊಂಡಿರಬೇಕು. ಈ ಪ್ರಮಾಣದ ಸೈನ್ಯವನ್ನು ಕಲೆ ಹಾಕಬೇಕಾದರೆ ಒಟ್ಟು ಜನಸಂಖ್ಯೆ ೨೦೦ ಮಿಲಿಯನ್ ಆದರೂ ಇದ್ದಿರಬೇಕು. ಆದರೆ ಬ್ರಿಟಿಷರು ಬರುವುದಕ್ಕಿಂತ ಮುಂಚೆ

ಭಾರತದಲ್ಲಿ ಈ ಪ್ರಮಾಣದ ಜನಸಂಖ್ಯೆ ಇರಲಿಲ್ಲ. ಈ ಪ್ರಮಾಣದ ಜನಸಂಖ್ಯೆ ಸಾಧ್ಯವಾಗಬೇಕಾದರೆ, ನೇಗಿಲು ಮತ್ತು ಇತರ ಕೃಷಿ ಸಲಕರಣೆಗಳ ತಯಾರಿಕೆಗೆ ಬೇಕಾದ ಕಬ್ಬಿಣ ಮತ್ತು ಉಕ್ಕು ಅಗ್ಗದ ದರದಲ್ಲಿ ಹೇರಳವಾಗಿ ದೊರೆಯಬೇಕು. ಕ್ರಿ.ಪೂ. ೬ನೇ ಶತಮಾನಕ್ಕೆ ಮುಂಚೆ ಭಾರತದ ರೈತರಿಗೆ ಕಬ್ಬಿಣವೇ ಸಿಗುತ್ತಿರಲಿಲ್ಲ. ನಂಬಲರ್ಹವಾದ ವರದಿಯ ಪ್ರಕಾರ ಚಂದ್ರಗುಪ್ತ ಮೌರ್ಯನ ಕಾಲದ ೪ಲಕ್ಷ ಯೋಧರ ಸೈನ್ಯವೇ ಆ ಕಾಲದ ಅತಿ ದೊಡ್ಡ ಸೈನ್ಯವಾಗಿತ್ತು"[೬] ಎಂದು ಗೀತೆಯ ಸನ್ನಿವೇಶದ ವಾಸ್ತವತೆಯನ್ನು ಇತಿಹಾಸದ ದೃಷ್ಟಿಯಿಂದ ಅರಿಯಲು ಪ್ರಯತ್ನಿಸಿದ್ದಾರೆ. ಹಾಗಾಗಿ ಡಿ.ಡಿ. ಕೊಸಾಂಬಿ ಅವರು "ಗೀತೆಯ ಕಾಲವನ್ನು ಕ್ರಿ.ಶ. ೧೫೦ ಹಾಗೂ ಕ್ರಿ.ಶ. ೩೫೦ರ ನಡುವೆ ಎಂದು, ಅದರಲ್ಲೂ ಸುಮಾರಾಗಿ ಕ್ರಿ.ಶ. ೩೫೦ರ ಆಸುಪಾಸಿನಲ್ಲಿರಬೇಕು ಎಂದು ಅಂದಾಜು ಮಾಡಬಹುದು"[೭] ಎಂದಿದ್ದಾರೆ.

'ಗೀತೆಯಲ್ಲಿ ಕ್ರೈಸ್ತ ಧರ್ಮದ ಪ್ರಭಾವವನ್ನು ಗುರುತಿಸಿದ ಡಾ. ಲಾರ್ನಿಸರ್ ಗೀತೆಯ ರಚನೆಯು ಕ್ರಿ.ಶ. ೫೦೦ರಲ್ಲಿ ನಡೆದಿರಬಹುದು' ಎಂಬ ಅಭಿಪ್ರಾಯಕ್ಕೆ ಬರುತ್ತಾನೆ. ಟಾಲ್ಬಾಯ್ಸ್ ವೀಲ್ಹರ್ 'ಲಭ್ಯ ಪುರಾವೆಗಳ ಪ್ರಕಾರ ಗೀತೆಯು ಬ್ರಾಹ್ಮಣಯುಗದ ಹಾಗೂ ಅನಂತರ ಕಾಲದಲ್ಲಿ ರಚಿತವಾದ ಗ್ರಂಥವಾಗಿದೆ' ಎನ್ನುತ್ತಾನೆ. ಈ ಎಲ್ಲಾ ಹೇಳಿಕೆಗಳು ಬರೀ ವಾದ–ವಿವಾದಗಳನ್ನು ಸೃಷ್ಟಿಸಿದವೇ ಹೊರತು ಗೀತೆಯ ಕಾಲವನ್ನು ನಿರ್ದಿಷ್ಟಗೊಳಿಸುವಲ್ಲಿ ವಿಫಲವಾಗಿವೆ. ಹಾಗಾಗಿ "ಪರಸ್ಪರ ವೈರುಧ್ಯಗಳಿಂದ ತುಂಬಿರುವ ಬಗೆಬಗೆಯ ಹೇಳಿಕೆಗಳು ಗೀತೆಯ ಕಾಲನಿರ್ಣಯದ ಸಮಸ್ಯೆಯನ್ನು ಬಗೆಹರಿಸುವಲ್ಲಿ ಸಹಕಾರಿಯಾಗುವ ಬದಲು ಸಮಸ್ಯೆಯನ್ನು ಮತ್ತಷ್ಟು ಕಗ್ಗಂಟುಗೊಳಿಸಿವೆ. ಅಗಾಧ ಪ್ರಮಾಣದ ಈ ವೈರುಧ್ಯಗಳ ಕಾಡಿನ ನಡುವೆ ನಮಗೆ ಸ್ಪಷ್ಟವಾದ ಯಾವ ಉತ್ತರವೂ ದೊರೆಯುವುದು ಸಾಧ್ಯವಿಲ್ಲ"[೮] ಎಂಬ ಉಪಾಧ್ಯಾಯರ ಅಭಿಪ್ರಾಯವು ಸಮಂಜಸವಾದುದಾಗಿದೆ.

ಒಟ್ಟಾರೆ ಭಗವದ್ಗೀತೆಯ ಕಾಲ ಮತ್ತು ಕರ್ತೃ ವಿಚಾರ ವಿವಾದಾಸ್ಪದವಾಗಿದ್ದು, ಕ್ರಿ.ಪೂ. ೫ನೇ ಶತಮಾನದಿಂದ ಕ್ರಿ.ಪೂ. ೨ನೇ ಶತಮಾನದ ಮಧ್ಯಕಾಲದಲ್ಲಿ ರಚಿತವಾಗಿದೆ ಎಂದು ಬಹುಮಂದಿ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇಂಥ ಊಹಾತ್ಮಕ ಅಭಿಪ್ರಾಯಗಳನ್ನು ನಂಬಿ "ಭಗವದ್ಗೀತೆಯ ಅಧ್ಯಯನಾಕಾಂಕ್ಷಿಯು ಅದರ ಕರ್ತೃ, ರಚನೆಯ ಕಾಲ ಹಾಗೂ ಸಾಹಿತ್ಯಕ್ಷೇತ್ರದಲ್ಲಿ ಅದರ ಸ್ಥಾನದ ಬಗ್ಗೆ ವಿಶ್ವಾಸಾರ್ಹ ಚಾರಿತ್ರಿಕ ಮಾಹಿತಿಗಳಿಲ್ಲದೆ ಅಧ್ಯಯನ ಮಾಡಬೇಕಾಗಿದೆ"[೯] ಎಂಬ ತೆಲಾಂಗ್ ಅವರ ಮಾತುಗಳು ಇಂದಿಗೂ ಪ್ರಸ್ತುತವಾಗಿದೆ.

ಗೀತೆಯು ಕಾಲಕಾಲಕ್ಕೆ ಪರಿಷ್ಕರಣೆಗೊಳ್ಳುತ್ತಾ ಬಂದಿದೆ. ಮೊದಲು ಗುಪ್ತರ ಯುಗದಲ್ಲಿ ಹಿಂದೂ ಕೃತಿಗಳು ಪರಿಷ್ಕರಣೆಗೆ ಒಳಪಟ್ಟವು. ಆ ಸಂದರ್ಭದಲ್ಲಿ ಗೀತೆಯೂ ಕೂಡ ಪರಿಷ್ಕರಣೆಗೆ ಒಳಪಟ್ಟಿತು. ಗುಪ್ತಯುಗದ ಮೊದಲ ಭಾಗದಲ್ಲಿ ಗ್ರಾಮೀಣವ್ಯವಸ್ಥೆ ಅಭಿವೃದ್ಧಿ ಹೊಂದುತ್ತಿತ್ತು. ಅಲ್ಲಿಂದ ಬಲಿಷ್ಠವಾಗಿದ್ದ ಕೇಂದ್ರಸರ್ಕಾರಕ್ಕೆ ಸಂಪತ್ತು ಹರಿದುಬರುತ್ತಿದ್ದ ಕಾಲಘಟ್ಟದಲ್ಲಿ ಗೀತೆ

ರಚನೆಯಾದದ್ದು ತೀರಾ ತಾರ್ಕಿಕವಾಗಿದೆ. ಯುದ್ಧವನ್ನು ದಾಖಲಿಸುವ ಮಹಾಭಾರತವು ಹದಿನೆಂಟು ಸರ್ಗಗಳ ಮಹಾಕಾವ್ಯ. ಗೀತೆಯಲ್ಲಿರುವುದು ಕೂಡ ಹದಿನೆಂಟು ಅಧ್ಯಾಯಗಳು. ಈ ವಿನ್ಯಾಸ ಆಕಸ್ಮಿಕವಾಗಿ ಮೂಡಿಬಂದಿದ್ದಲ್ಲ. ಮಹಾಭಾರತವನ್ನು ಲೆಕ್ಕವಿಲ್ಲದಷ್ಟು ಕೈಗಳು ಪರಿಷ್ಕರಿಸಿವೆ. ಇದರಲ್ಲಿ ಮೂಢನಂಬಿಕೆಗಳನ್ನು ಬಿತ್ತುವ ಸಂಖ್ಯಾಜ್ಯೋತಿಷಿಗಳ ಉದ್ದೇಶಪೂರ್ವಕ ಕೈವಾಡವೂ ಇದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ರಾಜಾರಾಮ್ ಮೋಹನರಾಯ್ ಅವರು, ವ್ಯಾಸನು ತನ್ನ "ಮಹಾಕಾವ್ಯವು ಕಲ್ಪನೆಯಾಗಿ ಅರಳಿದೆ" ಎಂದು ಮಹಾಭಾರತದ ಆದಿಭಾಗ ದಲ್ಲಿಯೇ ಹೇಳಿರುವ ಶ್ಲೋಕವೊಂದರ ಬಗ್ಗೆ ಎಲ್ಲರ ಗಮನವನ್ನು ಸೆಳೆದಿದ್ದರು.

ಇದನ್ನು ಡಿ.ಡಿ. ಕೊಸಾಂಬಿ ಅವರು ಹೀಗೆ ಸಮರ್ಥಿಸುತ್ತಾರೆ– "ಮಹಾಭಾರತದುದ್ದಕ್ಕೂ ಕಾಣುವ ಅಷ್ಟೊಂದು ಕ್ರಮಬದ್ಧವಲ್ಲದ ತ್ರಿಷ್ಟುಭ್ ಛಂದಸ್ಸಿನ ಬಳಕೆಯನ್ನು ಗೀತೆಯಲ್ಲಿ ಅಲ್ಲಲ್ಲಿ ಕಾಣಬಹುದಾದರೂ ಅದರಲ್ಲಿ ಬಳಸಿರುವ ಪ್ರೌಢವಾದ ಅಭಿಜಾತ ಸಂಸ್ಕೃತಭಾಷೆಯ ಬಳಕೆ ಗುಪ್ತರ ಕಾಲಕ್ಕೆ ಮೊದಲು ಖಂಡಿತವಾಗಿಯೂ ಸಾಧ್ಯವಿರಲಿಲ್ಲ. ಭಗವದ್ಗೀತೆಯ ಸ್ವಲ್ಪ ನಂತರದ ಕಾಲವೆಂದರೆ ಗುಪ್ತಯುಗದ ಉಚ್ಛ್ರಾಯ ಕಾಲದಲ್ಲಿ ಸಂಸ್ಕೃತದ ಕಾವ್ಯರಚನೆಯಲ್ಲಿ ಛಂದಸ್ಸಿನ ಬಗ್ಗೆ ಇನ್ನೂ ಹೆಚ್ಚಿನ ನಿಗಾ ವಹಿಸಿರುವುದು ಕಂಡುಬರುತ್ತದೆ"[೧೦] ಎಂದಿದ್ದಾರೆ. ಈ ಕಾಲದಲ್ಲಿ ಗೀತೆಯಲ್ಲಿದ್ದ ಅನೇಕ ಕಠಿಣ ತತ್ವಗಳನ್ನು ತಿದ್ದಿ ಬಹಳ ಮೃದು ಮತ್ತು ಆಕರ್ಷಕ ಭಾಷೆಯಲ್ಲಿ ಹಳೆಯ ಚಿಂತನೆಗಳನ್ನು ಹೊಸರೂಪಕ್ಕೆ ತರಲು ಪ್ರಯತ್ನಿಸಲಾಯಿತು. ಮೂಲ ಗೀತೆಯ ಗಾತ್ರ ಚಿಕ್ಕದಾಗಿತ್ತು ಕಡಿಮೆ ಶ್ಲೋಕಗಳನ್ನು ಹೊಂದಿದ್ದು ಆನಂತರದಲ್ಲಿ ಇಂದಿನ ೭೦೦ ಶ್ಲೋಕಗಳ ಹಂತಕ್ಕೆ ತಲುಪಿದೆ ಎಂಬುದು ಅನೇಕ ವಿದ್ವಾಂಸರ ಅಭಿಪ್ರಾಯವಾಗಿದೆ. "ಗೀತೆಯಲ್ಲಿ, ಹಿಂದಿನ ಎಲ್ಲಾ ತತ್ವಗಳನ್ನು ತುಂಬಾ ಅನುಕಂಪೆಯಿಂದ ಮಂಡಿಸಲಾಗಿದೆ. ಆದರೆ ಅವುಗಳನ್ನು ಹೆಸರಿಸುವ ಅಥವಾ ಸವಿಸ್ತಾರವಾಗಿ ವಿಮರ್ಶಿಸುವ ಗೋಜಿಗೇ ಅದು ಹೋಗುವುದಿಲ್ಲ. ಜೊತೆಗೆ 'ಈಗ ಹೇಳುತ್ತಿರುವ ತತ್ವಕ್ಕೆ ವಿರುದ್ಧವಾದ ಹಾಗೂ ಹೇಸಿಗೆ ಹುಟ್ಟಿಸುವಂಥ ಕೆಲಸವನ್ನು ಮಾಡು ಎಂದೇಕೆ ಹೇಳುತ್ತಿದ್ದೀಯೆ?' ಎಂದು ಅರ್ಜುನ ಪ್ರಶ್ನಿಸಿದಾಗಲೂ ಕೃಷ್ಣ ಅದಕ್ಕೆ ಉತ್ತರಿಸುವ ಗೋಜಿಗೇ ಹೋಗದೆ ತೀರಾ ನಿಪುಣತೆಯಿಂದ, ನವುರಾಗಿ ಮುಂದಿನ ದರ್ಶನಕ್ಕೆ ಜಾರಿಕೊಳ್ಳುತ್ತಾನೆ. ಪರಸ್ಪರ ಸಂಗತವಲ್ಲದ ಹಲವಾರು ದರ್ಶನಗಳನ್ನು ಸ್ಥೂಲವಾಗಿ ಸಮೀಕ್ಷೆ ಮಾಡುವ ಮತ್ತು ಸಮನ್ವಯಗೊಳಿಸುವ ಅದ್ಭುತ ಪ್ರಯತ್ನವನ್ನು ಗೀತೆಯಲ್ಲಿ ಕಾಣಬಹುದು. ಅವುಗಳ ನಡುವಿನ ಅಸಂಗತತೆ ಎಲ್ಲೂ ವ್ಯಕ್ತವಾಗುವುದೇ ಇಲ್ಲ."[೧೧]

ಗೀತೆಯು ಅನೇಕ ಪ್ರಕ್ಷಿಪ್ತಗಳ ಗೂಡು ಎಂಬುದನ್ನು ಮೊದಲಿಗೆ ಗುರುತಿಸಿ ಹೇಳಿದವನು ಬಹುಶಃ ವೆಬರ್ ಎಂದು ತೋರುತ್ತದೆ. ಇದನ್ನು ಅವನು ಹೇಳಿದ್ದು ೧೮೬೭ರಲ್ಲಿ. "ಭಗವದ್ಗೀತೆಯು ವಿಭಿನ್ನ ಲಕ್ಷಣದ ತುಣುಕುಗಳಿಂದ ತೇಪೆ ಹಾಕಿರುವ ಗ್ರಂಥವೆಂದು ಮಾತ್ರವೇ ಪರಿಗಣಿಸಲು ಸಾಧ್ಯ"[೧೨] ಎಂದಿದ್ದಾನೆ. ಗೀತೆಯು ಮಹಾಭಾರತದೊಳಕ್ಕೆ 'ಕೊರೆದು ಕೂರಿಸಿದ' 'ಮುತ್ತಿನ

ಮಣಿ'ಯಂತಿದೆ ಎಂದು ಮೊನಿಯರ್ ವಿಲಿಯಮ್ಸ್ ೧೮೬೨ರಲ್ಲಿ ಬರೆದ ಲೇಖನದಲ್ಲಿ ಹೊಗಳಿದನಾದರೂ ಬಳಿಕ ಅದೊಂದು ಪ್ರಕ್ಷಿಪ್ತವೆಂಬ ವೆಬರ್‌ನ ಅಭಿಪ್ರಾಯದೊಂದಿಗೆ ಸಹಮತ ವ್ಯಕ್ತಪಡಿಸಿದ್ದಾನೆ.

ಹಾಪ್ಕಿನ್ಸ್ ೧೮೯೫ರಲ್ಲಿ "ಭಗವದ್ ಗೀತೆಯಾಗಿ ಅದು ಈಗಿರುವ ಸ್ಥಿತಿಯಲ್ಲಿ ಕೆಲವೆಡೆ ಸತ್ವಪೂರ್ಣವಾದ ಮತ್ತು ಅನುಭಾವದ ಮೆರುಗನ್ನು ಹೊಂದಿರುವುದು ನಿಜವಾದರೂ ಒಟ್ಟಾರೆ ಅದನ್ನು ಕಾವ್ಯವೆಂದು ಕರೆಯಲಾಗುವುದಿಲ್ಲ. ಪುನರಾವರ್ತನೆಗಳು ಹೇರಳವಾಗಿವೆ. ಪದವಿನ್ಯಾಸ ಹಾಗೂ ಅರ್ಥದ ವೈರುಧ್ಯಗಳು ಪುನರಾವರ್ತನೆಗಳಷ್ಟೇ ಹೇರಳವಾಗಿವೆ. 'ರೋಮಾಂಚನಗೊಳಿಸುವ ಅದ್ಭುತ ಕಾವ್ಯ' ಎಂದು ಇದನ್ನು ಪ್ರಶಂಸಿರುವುದು ಆಶ್ಚರ್ಯವೆನಿಸುತ್ತದೆ. ಒಂದೇ ಪದಕ್ಕೆ ವಿವಿಧ ಅರ್ಥಗಳ ಜಾಲವನ್ನು ಸೃಷ್ಟಿಸಿರುವುದು ಹಾಗೂ ಅದರ ಪರಿಣಾಮವಾಗಿ ಯಾವ ದೃಢತೆಯೂ ಇಲ್ಲದ ಡೋಲಾಯಮಾನ ತಾತ್ವಿಕತೆ– ಇವು ಅದರ ತೇಪೆಗಾರಿಕೆಗೆ ನಿದರ್ಶನವಾಗಿವೆ."[೧೩]

ಸೀತಾನಾಥ ತತ್ವಭೂಷಣರು ಹೇಳುವಂತೆ "ಹದಿನೆಂಟು ಸರ್ಗಗಳಲ್ಲಿ ರಚಿಸಲಾಗಿರುವ ಉಪದೇಶವನ್ನು ಕೃಷ್ಣನು ಯುದ್ಧಭೂಮಿಯಲ್ಲಿ ಬೋಧಿಸಿದ ಎಂಬುದು ಧರ್ಮಾಂಧರು ನಂಬುವಂತಹದ್ದೇ ಹೊರತು ಬೇರಾರೂ ನಂಬುವಂತಹದ್ದಲ್ಲ. ಭಗವದ್ಗೀತೆ ಎಂಬುದು ಮೂಲ ಗ್ರಂಥದೊಳಕ್ಕೆ ಸೂಕ್ಷ್ಮಜ್ಞತೆಯ ಅರಿವು ಕೂಡ ಇಲ್ಲದೆ ತೂರಿಸಲಾದ ಪ್ರಕ್ಷಿಪ್ತವಾಗಿದೆ. ಮಹಾಭಾರತ ಬೃಹತ್ ಕಥಾನಕದ ಮುಖ್ಯವಾಹಿನಿಯ ಯಾವ ಆಯಕಟ್ಟಿನ ಸ್ಥಳದಲ್ಲಿ ಇದನ್ನು ಹೇಗೆ ಹೆಣೆಯಲಾಗಿದೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿದವರಿಗೆ ಇದು ಸ್ಪಷ್ಟವಾಗಿ ತಿಳಿಯುತ್ತದೆ"[೧೪] ಎಂದಿದ್ದಾರೆ.

ರಿಚರ್ಡ್ ಗಾರ್ಬೆ ಗೀತೆಯಲ್ಲಿ ಹಲವು ಅಕ್ರಮ ತಿದ್ದುಪಡಿಗಳಾಗಿದ್ದು ಅದರಿಂದಾಗಿಯೇ ದೃಢವಾದ ತಾತ್ವಿಕ ನಿಲುವುಗಳು ಅದರಲ್ಲಿ ಕಾಣುವುದಿಲ್ಲ ಎನ್ನುತ್ತಾನೆ. "ಗಾರ್ಬೆಯ ಪ್ರಕಾರ ಗೀತೆಯು ಒಂದು ಮಿಶ್ರ ಗ್ರಂಥ. ಮೂಲದಲ್ಲಿ ಸಾಂಖ್ಯ ಸಿದ್ಧಾಂತವು ಇದರ ತಿರುಳಾಗಿದ್ದು ಅನಂತರ ಕಾಲದಲ್ಲಿ ವೇದಾಂತ ತತ್ವಜ್ಞರಾದ ಯಾರೋ ಇದನ್ನು ತಿದ್ದಿ ವಿಸ್ತರಿಸಿ ಬರೆದಿದ್ದಾರೆ. ಹೀಗೆ ಕಾಲಾನಂತರದಲ್ಲಿ ಸೇರ್ಪಡೆಯಾದ ಈ ವೈದಿಕ ಸಿದ್ಧಾಂತದ ಎಳೆಗಳನ್ನು ಗುರುತಿಸಿ ತೆಗೆದು ಹಾಕಲು ಗಾರ್ಬೆಯು ಆಲೋಚಿಸಿಯೂ ಇದ್ದ. ಹಾಗೆ ಗುರುತಿಸಿದ ಭಾಗಗಳು ಅವನು ಅನುವಾದಿಸಿದ ಭಗವದ್ಗೀತೆಯಲ್ಲಿ ಸಣ್ಣಗಾತ್ರದ ಮೊಳೆಗಳಲ್ಲಿ ಮುದ್ರಿತವಾಗಿವೆ. ಗೀತೆಯ ಮೂಲಪ್ರತಿಯಲ್ಲಿ ಕೇವಲ ೫೨೮ ಶ್ಲೋಕಗಳು ಮಾತ್ರ ಇವೆ ಎಂದು ಅವನು ಹೇಳುತ್ತಾನೆ."[೧೫]

ಗಾರ್ಬೆಯ ಶಿಷ್ಯನಾದ ರುಡಾಲ್ಫ್ ೧೯೩೩, ೧೯೩೪ ಮತ್ತು ೧೯೩೫ರಲ್ಲಿ ಕ್ರಮವಾಗಿ ಮೂರು ಪ್ರಬಂಧಗಳನ್ನು ಪ್ರಕಟಿಸಿದ. ಇವುಗಳ ಇಂಗ್ಲಿಷ್ ಆವೃತ್ತಿಯು 'ಗೀತೆಯ ಮೂಲಪ್ರತಿ' ಎಂಬ ಹೆಸರಿನಲ್ಲಿ ೧೯೩೯ರಲ್ಲಿ ಪ್ರಕಟವಾಯಿತು. ಅದರಲ್ಲಿ ಅವನು ೨೦೦ ಶ್ಲೋಕಗಳಿರುವ

ಈಗಿನ ಗೀತೆಯು ಮೂಲದಲ್ಲಿ ಕೇವಲ ೧೨೮ ಶ್ಲೋಕಗಳ ಗ್ರಂಥವಾಗಿದ್ದು ಕಾಲಾನಂತರದಲ್ಲಿ ವಿವಿಧ ಸಿದ್ಧಾಂತಗಳನ್ನು ಜೋಡಿಸಿ ಇದನ್ನು ತಿದ್ದಿಬರೆಯುವ ಸುದೀರ್ಘ ಪ್ರಕ್ರಿಯೆಯಾಗಿ ಮುಂದುವರಿಯಿತು ಎನ್ನುವ ತೀರ್ಮಾನಕ್ಕೆ ಬರುತ್ತಾನೆ. ಇವನು "ಗೀತೆಯು ಮೂಲದಲ್ಲಿ ಧರ್ಮೀಯ ಗ್ರಂಥವಾಗಲೀ ಸೈದ್ಧಾಂತಿಕ ಸಾಹಿತ್ಯವಾಗಲೀ ಆಗಿರಲಿಲ್ಲ. ಮಹಾಕಾವ್ಯ ರಚಿಸಬಲ್ಲ ಸಾಮರ್ಥ್ಯವಿದ್ದ ಅದ್ಭುತ ಪ್ರತಿಭೆಯ ಯಾವನೋ ಕವಿ ಅದರ ಕರ್ತೃವಾಗಿರಬೇಕು. ಕೃಷ್ಣನಂತಹ ಅಭೂತಪೂರ್ವ ಪಾತ್ರವನ್ನು ಚಿತ್ರಿಸಿದ, ಅದರಲ್ಲೂ ಹನ್ನೊಂದನೇ ಅಧ್ಯಾಯದಲ್ಲಿನ ಅದ್ಭುತವಾದ ವಿಶ್ವರೂಪ ದರ್ಶನವನ್ನು ಪರಿಕಲ್ಪಿಸಿದ ಅವನು ಮಹಾಕವಿಯಾಗಿರಬೇಕು"[೧೬] ಎನ್ನುತ್ತಾನೆ.

ಎಸ್.ಸಿ. ರಾಯ್ ತಮ್ಮ 'ಭಗವದ್ಗೀತೆ ಮತ್ತು ಆಧುನಿಕ ಪಾಂಡಿತ್ಯ' ಎಂಬ ಗ್ರಂಥದಲ್ಲಿ, "ಗೀತೆಯು ಮಹಾಭಾರತಕ್ಕಿಂತ ಸಾಕಷ್ಟು ಮುಂಚೆ ರಚಿಸಲ್ಪಟ್ಟಿತ್ತು. ಅನಂತರ ಮಹಾಭಾರತಕ್ಕೆ ಸಂಬಂಧಿಸಿದ ೮೦ ಶ್ಲೋಕಗಳನ್ನೂ ಕುರುಕ್ಷೇತ್ರ ಯುದ್ಧಕ್ಕೆ ಸಂಬಂಧಿಸಿದ ಹಲವು ಹೆಸರುಗಳನ್ನೂ ಸೇರಿಸಿ ಆ ಗ್ರಂಥದೊಳಕ್ಕೆ ಪ್ರಕ್ಷಿಪ್ತಗೊಳಿಸಲಾಯಿತು. ಹಾಗೆಯೇ ಮೂಲಗೀತೆಯು ನಿಸ್ಸಂಶಯವಾಗಿ ಬುದ್ಧಪೂರ್ವಯುಗಕ್ಕೆ ಸೇರಿದ್ದು"[೧೭] ಎಂಬುದಾಗಿ ಹೇಳುತ್ತಾರೆ.

ಗೀತೆಯನ್ನು ಕುರಿತು ಅಧ್ಯಯನ ನಡೆಸಿದವರಲ್ಲಿ ಫ್ರಾಂಕ್ಲಿನ್ ಎಡ್ಗರ್‌ಟನ್ ತೀರಾ ಇತ್ತೀಚಿನವನು. "ನಾನು ವಾಚ್ಯವಾಗಿ ಹೇಳದಿದ್ದರೂ ಗೀತೆಯಲ್ಲಿ ಒಂದು ಅಖಂಡತೆಯಿದೆ ಎಂಬುದನ್ನು ನನ್ನ ವ್ಯಾಖ್ಯಾನವು ಸೂಚಿಸುತ್ತದೆ: ಆದರೂ ಅದು ಮೂಲ ಮಹಾಭಾರತ ಗ್ರಂಥದ ಒಂದು ಭಾಗವಾಗಿದ್ದಿರಬಹುದಾದ ಸಾಧ್ಯತೆಯು ನನಗೆ ಕಾಣದು... ಅದನ್ನು ರಚಿಸಿ ಅನಂತರ ಈಗ ಅದಿರುವ ಜಾಗಕ್ಕೆ ಕಾಲಾನಂತರದಲ್ಲಿ ಪ್ರಕ್ಷಿಪ್ತವಾಗಿ ಕೂರಿಸಿರುವ ಸಾಧ್ಯತೆ ಕಂಡುಬರುತ್ತದೆ"[೧೮] ಎಂದಿದ್ದಾನೆ.

ಜಿ.ಎಸ್. ಖೈರ್ ತಮ್ಮ 'ದ ಕ್ವೆಸ್ಟ್ ಫಾರ್ ದ ಒರಿಜಿನಲ್ ಗೀತಾ' ಎಂಬ ಗ್ರಂಥದಲ್ಲಿ ಕೃಷ್ಣ ಮತ್ತು ಅರ್ಜುನರ ನಡುವೆ ಯುದ್ಧಭೂಮಿಯಲ್ಲಿ ನಡೆದ ಸಂವಾದವು ಮೊದಲಿಗೆ ಗದ್ಯರೂಪದಲ್ಲಿದ್ದು ಅನಂತರದ ಕಾಲದಲ್ಲಿ ಗೀತೆಯ ಮೂಲಕರ್ತೃವು ಅದನ್ನು ಶ್ಲೋಕಗಳ ರೂಪದಲ್ಲಿ ಬರೆದನು. ನಂತರದ ಕಾಲದಲ್ಲಿ ಬಂದ ಇಬ್ಬರು ಕರ್ತೃಗಳು ತಮ್ಮವೇ ಧಾರ್ಮಿಕ, ನೈತಿಕ ಮತ್ತು ತಾತ್ವಿಕ ಸಿದ್ಧಾಂತಗಳನ್ನು ಅದರಲ್ಲಿ ಪ್ರಕ್ಷಿಪ್ತಗಳಾಗಿ ಸೇರಿಸಿದರು ಎಂದು ಬರೆಯುತ್ತಾರೆ. ಖೈರ್ ತಮ್ಮ ವಾದದ ಸಾರಾಂಶವನ್ನು ಹೀಗೆ ನೀಡುತ್ತಾರೆ. "ಈಗ ನಮಗೆ ಲಭ್ಯವಿರುವ ಗೀತೆಯ ಮೊದಲ ಆರು ಅಧ್ಯಾಯಗಳ ಕೆಲವು ಭಾಗಗಳನ್ನು ಮೊದಲ ಕರ್ತೃವು ಸಂಯೋಜಿಸಿದ್ದಾನೆ. ಎರಡನೆಯವನು ಅವಕ್ಕೆ ಸ್ವಂತ ರಚನೆಯ ಆರು ಅಧ್ಯಾಯಗಳನ್ನು ಸೇರಿಸಿದ್ದಾನೆ... ಮೂರನೆಯವನು... ಭಕ್ತಿ ಪಂಥದ ಆಧಾರದ ಮೇಲೆ ವಾಸುದೇವ ಕೃಷ್ಣ ಸಮರ್ಪಣಾ ಮೂಲದ ದೈವಾರಾಧನೆಯ ಧರ್ಮಸಂಹಿತೆಯನ್ನು ಕರ್ಮ-ಯೋಗ ಸಿದ್ಧಾಂತದೊಂದಿಗೆ ಸಮೀಕರಿಸುವ ಮೂಲಕ ಅದನ್ನು ಸಾಮಾನ್ಯರ ಗ್ರಹಿಕೆಗೆ ತರಲು

ಪ್ರಯತ್ನಿಸುತ್ತಾನೆ. ಆರಾಧನೆಯ ವಿವಿಧ ರೂಪಗಳನ್ನು ಧರ್ಮೀಯ ಆಚರಣೆಗಳನ್ನು ಸಮೀಕರಿಸಲು ಕೂಡ ಪ್ರಯಿತ್ನಿಸುತ್ತಾನೆ. ಇದೇ ಭಾಗವತ ಧರ್ಮದ ಉಗಮದ ಮೂಲ."[೧೯]

ಹೀಗೆ ವ್ಯಾಪಕವಾಗಿ ಹರಡುತ್ತಿದ್ದ ಬೌದ್ಧ, ಜೈನ ಹಾಗೂ ಲೋಕಾಯತಗಳಂತಹ ಅಬ್ರಾಹ್ಮಣ ಧರ್ಮಗಳು ವೈದಿಕ ಧರ್ಮಕ್ಕೆ(ಬ್ರಾಹ್ಮಣ ಧರ್ಮಕ್ಕೆ) ಒಡ್ಡಿದ್ದ ಗಂಭೀರ ಸ್ವರೂಪದ ಆತಂಕದ ಪರಿಸ್ಥಿತಿಯನ್ನು ನಿವಾರಿಸಿಕೊಳ್ಳಲು ಗೀತೆಯು ಪ್ರತಿಕ್ರಿಯಾತ್ಮಕವಾಗಿ ರಚಿಸಿದ ಗ್ರಂಥವಾಗಿತ್ತು.

ಕ್ರಿ.ಶ. ಎಂಟನೇ ಶತಮಾನದಲ್ಲಿ ಜೀವಿಸಿದ್ದ ಆದಿ ಶಂಕರಾಚಾರ್ಯರು ಬೌದ್ಧಧರ್ಮವನ್ನು ಬುಡಮೇಲು ಮಾಡುವ ಉದ್ದೇಶದಿಂದ ಗೀತೆಗೆ ಭಾಷ್ಯವನ್ನು ಬರೆಯುವ ಮುಂಚಿನ ಕಾಲದಲ್ಲಿ ಯಾರೂ ಅದನ್ನು ಗಂಭೀರವಾಗಿ ಪರಿಗಣಿಸಿಯೇ ಇರಲಿಲ್ಲ. ಗೀತೆಯ ರಚನೆ ಸಾಧ್ಯವಾದದ್ದು ಅದು ಅಷ್ಟೊಂದು ಅಗತ್ಯವಿರದಿದ್ದ ಕಾಲದಲ್ಲಿ. ಆದರೆ ಶಂಕರನಿಗೆ ಮತಧರ್ಮಶಾಸ್ತ್ರದ ತೀವ್ರ ವಾಗ್ವಾದಗಳಲ್ಲಿ ತೊಡಗಿಕೊಳ್ಳುವುದು ಅನಿವಾರ್ಯವಾಗಿತ್ತು. ಕ್ರಿ.ಶ. ೮-೯ನೇ ಶತಮಾನದವರೆಗೆ ಯಾವುದೇ ಪ್ರಾಮುಖ್ಯತೆ ಇದ್ದಿಲ್ಲದ ಗೀತೆಯನ್ನು 'ಭಗವದ್ಗೀತೆ'ಯಾಗಿಸಿದ ಶಂಕರಾಚಾರ್ಯರು ಈ ಗ್ರಂಥವನ್ನು "ಗೀತಾಶಾಸ್ತ್ರ"ವೆಂದು ಕರೆಯುತ್ತಾರೆ. ಭಾಷ್ಯವನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದ ಕೆಲವು ದೇಶೀಯ ಪಂಡಿತರು ಕೂಡ(ಮಹದೇವಶಾಸ್ತ್ರಿ) ಇದೇ ಹೆಸರನ್ನು ಬಳಸಿದ್ದಾರೆ.

ಗೀತೆಯ ಕರ್ತೃ ಯಾರೇ ಆಗಿರಲಿ ಭಕ್ತಿ ಅವರಿಗೆ ಒಂದು ಸಮರ್ಥನೆಯಾಗಿತ್ತು ಮತ್ತು ಎಲ್ಲಾ ದೃಷ್ಟಿಕೋನಗಳನ್ನು ಒಂದು ದೈವಿಕ ಮೂಲದಿಂದ ಪಡೆಯಬಹುದಾಗಿದ್ದ ಏಕೈಕ ಮಾರ್ಗವಾಗಿತ್ತು. ಗೀತೆಯಲ್ಲಿ ಆಂತರಿಕ ವೈರುಧ್ಯಗಳಿದ್ದರೂ ತುಂಬಾ ಜಾಣ್ಮೆ ಮತ್ತು ಕುಶಲಗಾರಿಕೆಯಿಂದ ಕಟ್ಟಿದ ಕಾವ್ಯವಾಗಿದೆ. ಇದನ್ನು ಕೊಸಾಂಬಿ ಅವರು "ವೈದಿಕ ಯಜ್ಞವನ್ನು ಬಿಟ್ಟರೆ, ಗೀತೆಯಲ್ಲಿ ಮತ್ತಾವ ಪ್ರಾಚೀನ ಸಿದ್ಧಾಂತಕ್ಕೂ ತೊಂದರೆಯಾಗಿಲ್ಲ. ಗೀತೆಯಲ್ಲಿ ಪ್ರತಿಯೊಂದು ದರ್ಶನವನ್ನೂ ಆಳವಾಗಿ ಸಹಾನುಭೂತಿಯಿಂದ ಅಧ್ಯಯನ ಮಾಡಬಲ್ಲ ಸೂಕ್ಷ್ಮ ಮನಸ್ಸೊಂದನ್ನು ಕಾಣಬಹುದು. ಪ್ರತಿಯೊಂದು ದರ್ಶನದ ಸಾರವನ್ನೂ ಹೆಕ್ಕಿಕೊಂಡು, ಅವುಗಳನ್ನೆಲ್ಲಾ ತೀರಾ ಜಾಣ್ಮೆಯಿಂದ ಹಾಗೂ ಸಾಹಿತ್ಯಿಕ ಕುಶಲತೆಯಿಂದ, ಭಕ್ತಿಯ ಪರಿಕಲ್ಪನೆಯನ್ನು ಬಳಸಿಕೊಂಡು, ಅವುಗಳ ನಡುವೆ ಯಾವುದೇ ವೈರುಧ್ಯಗಳು ಕಾಣಿಸಿಕೊಳ್ಳದಂತೆ, ತೀರಾ ಜಾಗರೂಕತೆಯಿಂದ ಒಟ್ಟಾಗಿ ಹೆಣೆಯಲಾಗಿದೆ ಎನ್ನುವುದು ಗಮನಾರ್ಹ ಅಂಶ"[೨೦] ಎಂದು ಅಭಿಪ್ರಾಯಪಡುತ್ತಾರೆ.

ಅವರು ಮುಂದುವರಿದು "ಗೀತೆಯಲ್ಲಿನ ಆಂತರಿಕ ವೈರುಧ್ಯಗಳು ಈ ಬದಲಾವಣೆಗಳನ್ನು ಒಪ್ಪಿಕೊಳ್ಳುವಂತೆ ಮೇಲ್ವರ್ಗದವರ ಮನವೊಲಿಸಲು ಕೆಲವು ಅಸಾಧಾರಣ ಸುಧಾರಕರಿಗೆ ಪ್ರೇರಣೆ ನೀಡಬಹುದೋ ಏನೋ? ಆದರೆ ಉತ್ಪಾದನಾ ಸಾಧನಗಳಲ್ಲಿ ಯಾವುದೇ ಮೂಲಭೂತ ಸುಧಾರಣೆಗಳನ್ನು ತರಲು ಪ್ರಾಯಶಃ ಗೀತೆಗೆ ಸಾಧ್ಯವಾಗಿರಲಿಲ್ಲ. ಮೂಲಭೂತವಾಗಿ ಗೀತೆಗೆ ವಾಸ್ತವದೊಡನೆ ಯಾವ ಸಂಪರ್ಕವೂ ಇರಲಿಲ್ಲ ಹಾಗೂ ಅದಕ್ಕೆ ತಾರ್ಕಿಕ ಸುಸಂಬದ್ಧತೆಯ

ಬಗ್ಗೆ ಆಳವಾದ ಅಸಡ್ಡೆಯಿತ್ತು. ಹಾಗಾಗಿ ಗೀತೆಗೆ ಭಾರತೀಯ ಸಮಾಜದ ಮೂಲಭೂತ ಸಮಸ್ಯೆಗಳಿಗೆ ಒಂದು ವೈಚಾರಿಕ ಮಾರ್ಗವನ್ನು ರೂಪಿಸುವುದಕ್ಕೆ ಸಾಧ್ಯವಾಗಲಿಲ್ಲ"[೨೫] ಎಂದು ಕೊಸಾಂಬಿ ಅವರು ಅಭಿಪ್ರಾಯಪಡುತ್ತಾರೆ. ಮೂಢನಂಬಿಕೆಗಳ ನಡುವೆ ಅಪ್ಪಚ್ಚಿಯಾಗಿರುವ ನೈತಿಕ ವ್ಯವಸ್ಥೆಗಾಗಿ, ಗೀತೆಯನ್ನಾಗಲೀ ಅಥವಾ ಬೈಬಲ್ಲನ್ನಾಗಲೀ ಕೆದಕಬೇಕಾಗಿಲ್ಲ. ಈ ಗ್ರಂಥಗಳ ಕಲಾತ್ಮಕತೆಯನ್ನು ಇಂದಿಗೂ ಸವಿಯಬಹುದು. ಅದಕ್ಕಿಂತ ಹೆಚ್ಚಿನದೇನೋ ಅದರಲ್ಲಿ ಇದೆ ಎನ್ನುವವರು ಸಾಮಾನ್ಯವಾಗಿ ಉಳಿದವರ ಮನಸ್ಸಿಗೆ ಸಂಕೋಲೆ ತೊಡಿಸುತ್ತಾರೆ ಮತ್ತು ಮಹತ್ತರವಾದ ಏನನ್ನೋ ಸಾಧಿಸುವ ನೆಪದಲ್ಲಿ ಮನುಷ್ಯನ ಪ್ರಗತಿಗೇ ಅಡ್ಡಿಯಾಗುತ್ತಾರೆ. (ಅದೇ ಪುಟ ೭೪).

ಗೀತೆಯಲ್ಲಿ ಸಾಮಾಜಿಕ ಬಿಕ್ಕಟ್ಟಿನಿಂದ ಹೊರಬರಲು ಬೇಕಾದ ವಿಶ್ಲೇಷಣಾತ್ಮಕ ದಾರಿ ಸಿಗುವುದಿಲ್ಲ. ಗೀತೆ ಮತ್ತು ಅಹಿಂಸೆಯ ಪ್ರಮುಖ ಆಧುನಿಕ ಪ್ರತಿಪಾದಕರಾಗಿದ್ದ ರಾಜಾಜಿ ಅವರು ಅಧಿಕಾರವನ್ನು ಪಡೆಯಲು ಅಹಿಂಸೆಯು ಒಳ್ಳೆಯ ಮಾರ್ಗ ಆದರೆ ಅಧಿಕಾರ ದೊರಕಿದ ಕೂಡಲೇ ಅಹಿಂಸಾಮಾರ್ಗವನ್ನು ಬಿಟ್ಟುಬಿಡಬೇಕು ಎಂದು ಬಹಿರಂಗವಾಗಿ ಹೇಳುವಾಗ, ಬಹುಶಃ ಅವರ ಆಶಯವು ಅದೇ ಆಗಿರಬೇಕು. ಜ್ಞಾನೇಶ್ವರ ಭಗವದ್ಗೀತೆಯನ್ನು ಅಕ್ಷರಶಃ ಅನುವಾದಿಸಿಲ್ಲ. ಅದರರ್ಥವನ್ನು ಮರಾಠಿ ರೈತನಿಗೂ ಅರ್ಥವಾಗುವಂಥ ಭಾಷೆಯಲ್ಲಿ ವಿವರಿಸಿದ್ದಾನೆ.

ಜರ್ಮನಿಯ ಆದರ್ಶವಾದಿ ತತ್ವಜ್ಞಾನಿ ಹೆಗೆಲ್ ಕೂಡ ಗೀತೆಯು ನಿರೂಪಿಸುವ ತಾತ್ವಿಕತೆ ಮತ್ತು ಮೋಕ್ಷದ ಪರಿಕಲ್ಪನೆಯನ್ನು ಕುರಿತು, 'ಅವು ಅಸಂಬದ್ಧ ಹಾಗೂ ಅಮೂರ್ತವಾಗಿದ್ದು ಮೋಕ್ಷ ಎಂಬುದು ನೇತ್ಯಾತ್ಮಕ ವಿಮೋಚನೆಯಾಗಿದೆ' ಎನ್ನುತ್ತಾನೆ. ಪ್ರೇಮನಾಥ ಬಜಾಜ್ ಅವರು ಗುರುತಿಸಿರುವಂತೆ ಗೀತೆಯನ್ನು ವಿಶ್ಲೇಷಿಸಿರುವ ಅಥವಾ ಭಾಷ್ಯ ರಚಿಸಿದ ಸಂಪ್ರದಾಯಸ್ಥರೆಲ್ಲರೂ ಹೊಗಳುಭಟ್ಟರಂತೆ ಪರಾಕು ಹಾಕಿದವರೇ. ಫುಲೆ, ಅಯೋತಿದಾಸ್, ಪೆರಿಯಾರ್, ಅಂಬೇಡ್ಕರ್, ಕೊಸಾಂಬಿ, ನಾರ್ಲ ಅವರು ಮಾಡಿದ ವಿಶ್ಲೇಷಣೆಗಳು ಅಬ್ರಾಹ್ಮಣವಾದಿ ತಾತ್ವಿಕನೆಲೆಯ ಮಾರ್ಗದರ್ಶಕ ಸ್ವರೂಪದವು ಎಂದು ಹೇಳಬಹುದು.

೪.೨. ಗೀತೆ: ಧಾರ್ಮಿಕ ವಸಾಹತೀಕರಣದ ಸಂಘರ್ಷ

ಧಾರ್ಮಿಕ ವಸಾಹತೀಕರಣ

ಭಾರತಕ್ಕೆ ವ್ಯಾಪಾರಕ್ಕೆಂದು ಬಂದ ಬ್ರಿಟಿಷರು ಇಲ್ಲಿನ ಸಾಮಾಜಿಕ ದೌರ್ಬಲ್ಯದ ಉಪಯೋಗವನ್ನು ಪಡೆದುಕೊಂಡು ಭಾರತದ ಮೇಲೆ ಹೊಸ ಸಾಮ್ರಾಜ್ಯಶಾಹಿಯ ಶಕ್ತಿಯನ್ನು ಸ್ಥಾಪಿಸಿದರು. ಮುಖ್ಯವಾಗಿ ವಸಾಹತುಶಾಹಿ ಆಳ್ವಿಕೆಯು ಯಶಸ್ವಿಯಾಗಲು ಮೂಲ ಪ್ರೇರಣೆ ಹಾಗು ತಳಹದಿಯನ್ನು ಒದಗಿಸಿದ್ದು ಧರ್ಮ. ಭಿನ್ನ ಜಾತಿ, ಧರ್ಮ, ಮತಗಳಿಂದ ಕೂಡಿದ ಭಾರತದಂತಹ ದೇಶದ ಸಂಸ್ಕೃತಿಯನ್ನು ಅರ್ಥೈಸಿಕೊಳ್ಳಲು ಬ್ರಿಟಿಷರಿಗೆ ಇಲ್ಲಿನ ಬಹುಜನರ

ಧಾರ್ಮಿಕ ಮನೋಭಾವವನ್ನು ಆಳವಾಗಿ ತಿಳಿಯುವುದು ಅವಶ್ಯಕವಾಗಿತ್ತು. ಭಾರತದ ವಿಭಿನ್ನ ಜನರ ವಿವಿಧ ಆಚರಣೆಗಳು, ದೈನಂದಿನ ಜೀವನದ ವಿಷಯಗಳು, ಇಲ್ಲಿನ ಕಟ್ಟುಪಾಡುಗಳು, ಕಾನೂನು–ನ್ಯಾಯಪದ್ಧತಿ ಹಾಗೂ ಇಲ್ಲಿನ ಮತ ಸಾಂಪ್ರದಾಯಿಕ ಮತ್ತು ಜನಾಂಗೀಯ ವ್ಯತ್ಯಾಸಗಳನ್ನು ಅರಿಯಲು ಪ್ರಯತ್ನಿಸಿದರು. ಇಲ್ಲಿನ ಸಮಾಜದಲ್ಲಿ ಮನೆ ಮಾಡಿದ್ದ ಮೂಢನಂಬಿಕೆಗಳಂತಹ ಅಂಧಃಶ್ರದ್ಧೆಗಳನ್ನು ಹಾಗೂ ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಇದ್ದ ಹಲವಾರು ವೈಷಮ್ಯಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿದರು. ಇವುಗಳ ಸಮಗ್ರ ಅಧ್ಯಯನದ ಫಲವಾಗಿ ಭಾರತದ ನೆಲದಲ್ಲಿ ಬ್ರಿಟಿಷರ ವಸಾಹತುಶಾಹಿ ಆಳ್ವಿಕೆ ಭದ್ರವಾಗಿ ನೆಲೆಯೂರಿತು. ಈ ವಸಾಹತುಶಾಹಿಯು ತನ್ನ ಆಧಿಪತ್ಯದ ಮೂಲಕ ಭಾರತದ ಸಾಮಾಜಿಕ, ರಾಜಕೀಯ, ಭಾಷಿಕ, ಧಾರ್ಮಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಹಸ್ತಕ್ಷೇಪವನ್ನು ಮಾಡಿ ಮೊದಲಿದ್ದ ಸಾಮಾಜಿಕ ಸಂರಚನೆಯನ್ನೇ ಬದಲಾಯಿಸಿತು. ಈ ವಸಾಹತುಶಾಹಿಯ ಸುದೀರ್ಘ ಆಳ್ವಿಕೆಗೆ ಪ್ರಬಲ ಶಕ್ತಿಯನ್ನು ನೀಡಿದ್ದು ಕ್ರೈಸ್ತ ಮಿಶನರಿಗಳು ನಡೆಸಿದ ಧಾರ್ಮಿಕ ವಸಾಹತೀಕರಣದ ಪ್ರಕ್ರಿಯೆಯಾಗಿದೆ.

ಧಾರ್ಮಿಕ ವಸಾಹತೀಕರಣದ ಸ್ವರೂಪ

ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯು ಬಲಗೊಳ್ಳಲು ಕ್ರೈಸ್ತ ಮಿಶನರಿಗಳ ಪಾತ್ರ ಬಹಳ ಮುಖ್ಯವಾಗಿದೆ. ಭಾರತಕ್ಕೆ ಬಂದ ಕ್ರೈಸ್ತ ಮಿಶನರಿಗಳು ಇಲ್ಲಿನ ಜನರ ಧಾರ್ಮಿಕ ಮಿಡಿತಗಳನ್ನು ಅರಿತುಕೊಂಡು ತಮ್ಮ ಧರ್ಮವನ್ನು ಪ್ರಸಾರ ಮಾಡಲು ಮುಂದಾದವು. ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿನ ಒಳವೈರತ್ವಗಳನ್ನು ಭುಗಿಲೆಬ್ಬಿಸಿ ತಾನು ಯುದ್ಧಗಳಲ್ಲಿ ಭಾಗವಹಿಸಿ ರಾಜಕೀಯವಾಗಿ ಇಲ್ಲಿನ ಭೂಭಾಗಗಳನ್ನು ವಶಪಡಿಸಿಕೊಂಡು ಆಡಳಿತದಲ್ಲಿ ಹಿಡಿತವನ್ನು ಸಾಧಿಸಿದರೆ, ಧರ್ಮಪ್ರಸಾರಕ್ಕೆಂದು ಬಂದ ಕ್ರೈಸ್ತ ಮಿಶನರಿಗಳು ಶಿಕ್ಷಣ, ಆರೋಗ್ಯ ಮುಂತಾದ ಸೇವೆಗಳ ಮೂಲಕ ಭಾರತೀಯರ ಧಾರ್ಮಿಕ ಶ್ರದ್ಧೆಯ ಹಾಗೂ ಅವರ ನಂಬಿಕೆಯ ಎಲ್ಲಾ ಮೌಲ್ಯಗಳನ್ನು ನಾಶ ಮಾಡಲು ಪ್ರಯತ್ನಿಸಿದವು. ಮಿಶನರಿಗಳ ಈ ಕಾರ್ಯವು ಭಾರತವನ್ನು ಧಾರ್ಮಿಕ ವಸಾಹತೀಕರಣ ಪ್ರಕ್ರಿಯೆಗೆ ಒಳಗಾಗಿಸಿತು. ಮಿಶನರಿಗಳು ತಮ್ಮ ಕಾರ್ಯಕ್ಕೆ ಭಾಷಾಂತರ ಪ್ರಕ್ರಿಯೆಯನ್ನು ಬಳಸಿಕೊಂಡು ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸಿದವು, ಕ್ರೈಸ್ತ ಪಾದ್ರಿಗಳು ಬೈಬಲ್‌ನ ಭಾಷಾಂತರ ಕಾರ್ಯವನ್ನು ಮಾಡಿ ಅವುಗಳನ್ನು ಮುದ್ರಣ ಯಂತ್ರದಲ್ಲಿ ಮುದ್ರಿಸಿ ಸಾವಿರಾರು ಪ್ರತಿಗಳನ್ನು ಭಾರತೀಯರಿಗೆ ಪುಕ್ಕಟೆಯಾಗಿ ಹಂಚಿ ತಮ್ಮ ಧರ್ಮದ ಕಡೆಗೆ ಒಲವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದರು. ಬೈಬಲನ್ನು ಸತ್ಯವೇದವೆಂದೂ, ಚಾತುರ್ವೇದಗಳನ್ನು ಅಸತ್ಯವೇದಗಳೆಂದೂ ಕರೆದು ಹಿಂದೂಧರ್ಮವನ್ನು ಮನಸಾರೆ ತೆಗಳಿದರು. ಇಂತಹ ಪ್ರಯತ್ನಗಳಲ್ಲಿ ತೊಡಗಿದ್ದ ಪಾದ್ರಿ ಜೀವರತ್ನಯ್ಯನ ಚಿತ್ರಣವನ್ನು ಕುವೆಂಪು ಅವರು ತಮ್ಮ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

"ಭಾರತ ಸಂಸ್ಕೃತಿಯ ಸರ್ವೋತ್ತಮ ಪ್ರತಿನಿಧಿಯೊಬ್ಬನು ವೇದಾಂತ ದರ್ಶನದ ಮೇಲೆ ನಿಂತಿರುವ ಸನಾತನ ಹಿಂದೂಧರ್ಮದ ಸರ್ವೋತ್ಕೃಷ್ಟತೆಯನ್ನು ಅಧಿಕಾರ ವಾಣಿಯಿಂದ ಪ್ರಸಾರ ಮಾಡುತ್ತಿದ್ದಾಗಲೆ, ಅದನ್ನೆಲ್ಲ ಸದ್ದುಗದ್ದಲವಿಲ್ಲದೆ ಮೂದಲಿಸುವಂತೆ, ಯಃಕಶ್ಚಿತ ಪಾದ್ರಿಯೊಬ್ಬನು–ಅದರಲ್ಲೂ ನೇಟಿವ್‌ಪಾದ್ರಿ–ಘೋರಾರಣ್ಯಮಯವಾದ ಸಹ್ಯಾದ್ರಿ ಶ್ರೇಣಿಯ ಮಲೆನಾಡಿನ ಕೊಂಪೆಯ ಅಜ್ಞ ಬೇಸಾಯಗಾರನೊಬ್ಬನಿಗೆ ಹಿಂದೂ ಧರ್ಮದ ಅನಾಚಾರ, ಅವಿವೇಕ, ಸಂಕುಚಿತ ಮನೋಭಾವ, ಜಾತಿಮತ ಪಕ್ಷಪಾತ, ಬ್ರಾಹ್ಮಣರ ತಿರಸ್ಕಾರ, ಶೂದ್ರರ ದೈನ್ಯ, ಅಧೋಗತಿ, ಕಲ್ಲು ಮಣ್ಣು, ಮರ ದೆವ್ವಗಳ ಪೂಜೆ, ಇತ್ಯಾದಿಗಳನ್ನೂ–ಯೇಸುಕ್ರಿಸ್ತನ ಮತ್ತು ಕ್ರೈಸ್ತ ಮತದ ಪರೋಪಕಾರ, ಪರಾನುಕಂಪನ ನೀತಿ, ತ್ಯಾಗ, ಭಕ್ತಿ, ಉದ್ಧಾರಕ ಸಾಮರ್ಥ್ಯ ಇತ್ಯಾದಿಗಳನ್ನೂ ಕುರಿತು ಮನಮುಟ್ಟುವಂತೆ ಉಪದೇಶ ಮಾಡುತ್ತಿದ್ದನು. ಗೌಡನ ಮನೆಯ ಚಾವಡಿಯಲ್ಲಿಯೆ ಕುಳಿತು, ಅವನ ಗದ್ದೆ, ತೋಟ, ಅಂಗಳದ ತೊಳಸಿಕಟ್ಟೆಯ ದೇವರು ಮತ್ತು ಎದುರಿಗೇ ಕಾಣುತ್ತಿದ್ದ ಭೂತದ ಬನ–ಇವುಗಳ ಇದಿರಿನಲ್ಲಿಯೆ!"[೨೨]

ಹೀಗೆ ಕ್ರೈಸ್ತ ಮಿಶನರಿಗಳು ಭಾರತೀಯರಲ್ಲಿ ಕೀಳರಿಮೆಯನ್ನು ಉಂಟುಮಾಡುತ್ತಾ, ಹಿಂದೂಗಳ ಆತ್ಮಗೌರವ ಮತ್ತು ಹೆಮ್ಮೆಯನ್ನು ಕುಂದಿಸುವ ಕೆಲಸದಲ್ಲಿ ನಿರತವಾಗಿದ್ದುವು.

ಕ್ರೈಸ್ತ ಮಿಶನರಿಗಳ ಪಾದ್ರಿಗಳು ಅನ್ಯಮತದವರನ್ನು ಕ್ರೈಸ್ತೀಕರಣಗೊಳಿಸಲು ಸದಾ ಯತ್ನಿಸುತ್ತಿದ್ದರು: ಹಿಂದೂ ಜನಗಳಿಗೆ ಇಲ್ಲದ ಸೌಲಭ್ಯಗಳನ್ನು ತಮ್ಮ ಮತಕ್ಕೆ ಮತಾಂತರ ಗೊಂಡವರಿಗೆ ನೀಡುತ್ತಿದ್ದರು. ಶಿಕ್ಷಣ, ಆರೋಗ್ಯಸೇವೆ, ಭೂಮಿ, ತೆರಿಗೆ ವಿನಾಯಿತಿಯನ್ನು ದೊರಕಿಸಿಕೊಡುವುದು ಹೀಗೆ ಹಲವು ಸೌಲಭ್ಯಗಳನ್ನು ನೀಡುತ್ತಿದ್ದರು. ಅಷ್ಟೇ ಅಲ್ಲದೆ ಹಿಂದೂ ಧರ್ಮೀಯರಲ್ಲಿ ಶೂದ್ರರನ್ನು ಮತಾಂತರ ಪ್ರಕ್ರಿಯೆಗೆ ಒಳಗಾಗಿಸುವ ಸಲುವಾಗಿ ಅವರಿಗೆ ಅನೇಕ ಆಸೆ–ಆಮಿಷಗಳನ್ನು ನೀಡುತ್ತಿದ್ದರು. ಬೈಸಿಕಲ್, ಗೋಡೆ ಗಡಿಯಾರ ಮುಂತಾದ ವಸ್ತುಗಳನ್ನು ಉಡುಗೊರೆಯಾಗಿ ನೀಡುತ್ತಿದ್ದರು. ಅವರು ಬಳಸುತ್ತಿದ್ದ ಆಕರ್ಷಕ ವಸ್ತುಗಳಿಗೆ ಜನರು ಮಾರುಹೋಗುತ್ತಿದ್ದರು.

"ರುಮಾಲು ಕೋಟುಗಳನ್ನು ತೆಗೆದಿಟ್ಟು, ಬೈಸಿಕಲ್ ಕಚ್ಚೆ ಬಿಗಿದು, ಬೂಟೀಸನ್ನು ತೆಗೆಯದೆಯೆ ಜೀವರತ್ನಯ್ಯ, ಹಕ್ಕಲಿನ ಒರಟೊರಟು ನೆಲದಲ್ಲಿಯೆ ಒಂದೆರಡು ಸುತ್ತು ತಿರುಗಿ ಬೈಸಿಕಲ್ಲಿನಿಂದ ಇಳಿದನು. ಹಕ್ಕಲಿನ ಅಂಚಿನಲ್ಲಿ ಸುತ್ತಿದ್ದ ಅಡವಿಗೆ ಒತ್ತಿ ನಿಂತಿದ್ದ ಜನ ಸಮೂಹ, ಸುತ್ತ ನಾಲ್ಕು ದಿಕ್ಕಿನಿಂದಲೂ, ಪಾದ್ರಿ ಹಿಡಿದಿದ್ದ ಬೈಸಿಕಲ್ಲಿನ ಬಳಿಗೆ ನುಗ್ಗಿತು. ಆ ನೂಕುನುಗ್ಗಲಿನಲ್ಲಿ ಮುಟ್ಟಬಹುದಾದವರು ಮುಟ್ಟಬಾರದವರು ಎಂಬ ಭೇದಭಾವಕ್ಕೆ ರಿಯಾಯಿತಿ ಒದಗಿದಂತಾಗಿ, ಪಾದ್ರಿಯ ವೃತ್ತಿಬುದ್ಧಿ ತನಗೆ ತಾನೆ ಹೇಳಿಕೊಂಡಿತು: ಮತ ಪ್ರಚಾರಕ್ಕೆ ಬೈಬಲ್ಲು ಯೇಸುಕ್ರಿಸ್ತರಿಗಿಂತಲೂ ಬೈಸಿಕಲ್ಲೆ ಹೆಚ್ಚು ಪ್ರಭಾವಶಾಲಿ!"[೨೩]

ಹೀಗೆ ಆಕರ್ಷಕ ವಸ್ತುವೊಂದನ್ನು ಮುಗ್ಧ ಅಸ್ಪೃಶ್ಯ ಶೂದ್ರ ಜನರ ಮುಂದೆ ತಂದು ಅವರ ಸ್ಪರ್ಶ-ಅಸ್ಪರ್ಶತೆಯ ಜ್ಞಾನವನ್ನು ದಾಟಿಸಿ ಅವರ ಕುರುಡು ಆಚಾರ ಮತ್ತು ಮೂಢನಂಬಿಕೆಗಳ ಮನೋಭೂಮಿಕೆಯನ್ನು ಸಡಿಲಗೊಳಿಸಿ ತಮ್ಮ ಸಿದ್ಧಾಂತದೆಡೆಗೆ ಒಲಿಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿದ್ದರು.

ಕ್ರೈಸ್ತ ಮಿಶನರಿಗಳಿಂದ ಧಾರ್ಮಿಕ ವಸಾಹತೀಕರಣವು ಯಶಸ್ವಿಯಾಗಿ ನೆರವೇರಲು ಬ್ರಿಟಿಷ್ ವಸಾಹತುಶಾಹಿ ಆಡಳಿತವು ಪ್ರೇರಣೆಯನ್ನು ಹಾಗೂ ಅಗತ್ಯ ಸಹಕಾರವನ್ನು ಒದಗಿಸುತ್ತಿತ್ತು. ಮಿಶನರಿಗಳ ಧರ್ಮಪ್ರಸಾರ ಕಾರ್ಯಕ್ಕೆ ಅಗತ್ಯ ಭೂಮಿಯನ್ನಲ್ಲದೆ ಅಪಾರ ಪ್ರಮಾಣದ ಹಣಕಾಸಿನ ನೆರವನ್ನು ಪೂರೈಸುತ್ತಿತ್ತು. ಆಡಳಿತದ ವಿಷಯಗಳಿಂದ ಜನರಿಗೆ ಆಗುತ್ತಿದ್ದ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಕ್ರೈಸ್ತಪಾದ್ರಿಗಳ ಮಾತುಗಳಿಗೆ ಮನ್ನಣೆ ಸಿಗುತ್ತಿತ್ತು. ಕ್ರೈಸ್ತ ಪಾದ್ರಿಗಳ ಮಧ್ಯಪ್ರವೇಶಿಕೆಯಿಂದ ಜನರು ತಮಗೆ ಎದುರಾದ ಸಮಸ್ಯೆಗಳಿಂದ ಮುಕ್ತರಾಗಲು ಅಕಾಶವಿತ್ತು.

"ಪಾದ್ರಿಯಿಂದ ಅನಕ್ಷರಸ್ಥರಾದ ಗೌಡರುಗಳಿಗೆ ಒದಗುತ್ತಿದ್ದ ಸಹಾಯವೆಂದರೆ, ಹಳೆಯ ರಾಜ್ಯಗಳಿದ್ದು ಬ್ರಿಟಿಷ್ ಚಕ್ರಾಧಿಪತ್ಯ ಸುಭದ್ರವಾಗಿ ಕಾಲೂರುತ್ತಿದ್ದ ಆ ಕಾಲದಲ್ಲಿ ಹೊಸಕಾನೂನುಗಳು ಹೊಸ ಹೆಸರಿನ ಅಧಿಕಾರಿಗಳು ಹೊಸ ಹೊಸ ರೂಲೀಸುಗಳು ಜಾರಿಗೆ ಬರುತ್ತಿದ್ದರಿಂದ ತಕ್ಕಮಟ್ಟಿಗೆ ಇಂಗ್ಲಿಷ್ ತಿಳಿದಿದ್ದ ಆ ಪಾದ್ರಿ ಸರಕಾರದ ವ್ಯವಹಾರಗಳಲ್ಲಿ ಅವರಿಗೆ ನೀಡುತ್ತಿದ್ದ ನೆರವು. ಹಳ್ಳಿಯವರು ತೀರ್ಥಹಳ್ಳಿಗೆ ಹೋದಾಗ ಆಸ್ಪತ್ರೆ, ಡಾಕ್ಟರು, ಅಮಲ್ದಾರರು, ಪೋಲೀಸಿನವರು, ಪೋಸ್ಟಾಫೀಸು, ಕಾಫಿ, ಹೊಟೆಲ್, ಇಸ್ಕೂಲು ಮುಂತಾದ ತಾವು ಹಿಂದೆದೂ ಕೇಳದಿದ್ದ ಭಾಷೆಯ ಹೆಸರುಗಳಿಗೇ ದಿಗಿಲುಪಟ್ಟುಕೊಳ್ಳುತ್ತಿದ್ದಾಗ, ಪಾದ್ರಿಯಿಂದ ಅವರಿಗೆ ತುಂಬಾ ಉಪಕಾರವಾಗುತ್ತಿತ್ತು. ಆ ಅನುಕೂಲಕ್ಕಾಗಿ ಅವರು ಪಾದ್ರಿಯ ನಿಂದಾನಾತ್ಮಕವೂ ಖಂಡನಾತ್ಮಕವೂ ಆಗಿದ್ದ ಉಪದೇಶವನ್ನೆಲ್ಲಾ ನಗೆಮೊಗದಿಂದ ಲಘುವಾಗೆಣಿಸಿ ಸಹಿಸಿಕೊಂಡು ಹೋಗುತ್ತಿದ್ದರು."[೨೪]

ಪಾದ್ರಿಯಿಂದ ಒದಗಬಹುದಾದ ಅನೇಕ ಸಹಾಯಗಳಿಗೆ ಆಸೆ ಆಮಿಷಗಳಿಗೆ ಭಾರತೀಯ ಅನೇಕರು ಮತಾಂತರ ಕ್ರಿಯೆಗೆ ಒಳಗಾಗುತ್ತಿದ್ದರು. ಕ್ರೈಸ್ತ ಮಿಶನರಿಗಳ ಪಾದ್ರಿಗಳು ಮತಪ್ರಚಾರಕ್ಕಾಗಿ ದೇಶದ ಹಳ್ಳಿ ಹಳ್ಳಿಗಳಿಗೂ ಭೇಟಿ ನೀಡಿ ಅಲ್ಲಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರವನ್ನು ಅರ್ಥ ಮಾಡಿಕೊಂಡು ತಮ್ಮ ಕಾರ್ಯವನ್ನು ಈಡೇರಿಸುತ್ತಿದ್ದರು. ಧಾರ್ಮಿಕ ವಸಾಹತೀಕರಣದ ಭಾಗವಾಗಿಯೇ ದೇಶದ ಹಳ್ಳಿ ಹಳ್ಳಿಗೂ ನವನಾಗರಿಕತೆಯೊಂದು ಸದ್ದಿಲ್ಲದೆ ಪ್ರವೇಶ ಪಡೆದಿತ್ತು.

"ಕಾನೂರು ಮುತ್ತಳ್ಳಿಗಳಿಗೆ ಮಧ್ಯೆ, ರಸ್ತೆಗೆ ಸಮೀಪವಾಗಿ, ಕಾಡಿನ ನಡುವೆ ಇದ್ದ ಕಳ್ಳಂಗಡಿ ಕುಸಿದು ಬಿದ್ದು, ಒರಲೆ ಹಿಡಿದು ಪಾಳಾಗಿತ್ತು. ನಾಲ್ಕಾರು ಗ್ರಾಮಗಳಿಗೆ ಅನುಕೂಲವಾಗುವಂತೆ ಒಂದು ಆಸ್ಪತ್ರೆ, ಸ್ಕೂಲು, ಪೋಸ್ಟಾಫೀಸು, ಅಂಗಡಿಗಳು ಮೂಡಿ ವರ್ಧಿಸುತ್ತಿದ್ದುವು. ಓಂದೆ ಬೈಸಿಕಲ್ಲಿನ ಪರಿಚಯಕ್ಕೂ ಪರದೇಶಿಯಾಗಿದ್ದ ಆ ರಸ್ತೆ

ಮೋಟಾರುಕಾರು, ಬಸ್ಸುಗಳ ಕೋಟಲೆಯಿಂದ ಬೇಸರಗೊಂಡಿತ್ತು; ಸ್ವದೇಶಿ ಖಾದಿಗಳ ಪ್ರಚಾರವೂ ತಕ್ಕ ಮಟ್ಟಿಗೆ ನಡೆದಿತ್ತು. ಗಾಂಧಿ ಟೋಪಿಗಳೂ ಆಗಾಗ ಬಂದು ಉಪನ್ಯಾಸ ಕೊಡುತ್ತಿದ್ದುವು. ಅಕ್ಷರ ಬಲ್ಲವರು ಪತ್ರಿಕೆಗಳನ್ನು ಓದುವ ಅಭ್ಯಾಸ ಮಾಡಿ, ವಿಶಾಲ ಪ್ರಪಂಚದ ವಿಚಾರಗಳನ್ನು ಕುರಿತು ಮಾತನಾಡುತ್ತಿದ್ದರು. ಮಾರಿಯ ಹರಕೆ, ದೆವ್ವದ ಪೂಜೆ ಮೊದಲಾದ ಮೂಢಾಚಾರಗಳಿಗೆ ಬದಲಾಗಿ ಉತ್ಕೃಷ್ಟವಾದ ಮತವಿಧಾನಗಳು ಆಚರಣೆಗೆ ಬರುತ್ತಿದ್ದುವು. ಕಾಡಿಗೆ ನಾಗರಿಕತೆ ಕಾಲಿಟ್ಟಿತ್ತು."[೨೫]

ಕ್ರೈಸ್ತ ಮಿಶನರಿಗಳು ಭಾರತದಾದ್ಯಂತ ಚರ್ಚ್, ಸ್ಕೂಲು, ಕಾಲೇಜು, ಆಸ್ಪತ್ರೆ, ಮುಂತಾದವುಗಳನ್ನು ತೆರೆದವು. ಆ ಮೂಲಕವಾಗಿ ಹಳ್ಳಿಹಳ್ಳಿಯ ಜನರೂ ತಮ್ಮ ಜ್ಞಾನವನ್ನು ವಿಸ್ತರಿಸಿಕೊಂಡರು. ನವನಾಗರಿಕತೆಯ ಆಕರ್ಷಣೆಗಳಿಗೆ ಬಹುಬೇಗನೆ ಅವರು ಆಕರ್ಷಿತರಾದರು. ತಾವು ನಂಬಿಕೊಡು ಬಂದಿದ್ದ ಪ್ರಪಂಚವು ಮೌಢ್ಯತೆಯಿಂದ ಕೂಡಿದುದ್ದಾಗಿದೆ, ಕ್ರೈಸ್ತಮತವು ವಿಶಾಲ ಮನೋಭಾವದ ಗುಣವನ್ನು ಹೊಂದಿದೆ ಎಂಬ ನಂಬಿಕೆ ಜನರಲ್ಲಿ ಕ್ರಮೇಣವಾಗಿ ಬರತೊಡಗಿತು. ಪಾದ್ರಿಗಳು ಹಳ್ಳಿಯ ಜನರಿಗೆ ತಮ್ಮ ಉಪದೇಶಗಳಿಂದ ಒಂದು ಹೊಸ ಜ್ಞಾನ ಪ್ರಪಂಚವನ್ನೇ ತೆರೆದಿಟ್ಟರು. ಹಿಂದೂಧರ್ಮದಲ್ಲಿದ್ದ ಜಾತಿವಾದ, ಅಸ್ಪೃಶ್ಯತೆ, ದೇವದಾಸಿ ಪದ್ಧತಿ, ಬಾಲ್ಯವಿವಾಹ, ಪರದಾಪದ್ಧತಿ ಮುಂತಾದ ಆಚರಣೆಗಳಿಂದ ನೊಂದಿದ್ದ ಜನರಲ್ಲಿ ಹಲವರು ಕ್ರೈಸ್ತಧರ್ಮದ ಉದಾರತೆ, ಏಕದೇವೋಪಾಸನೆ, ಶಾಂತಿ, ಮಾನವಪ್ರೇಮ, ಮುಂತಾದ ತತ್ವಬೋಧನೆಗಳಿಗೆ ಮೆಚ್ಚಿ ಕ್ರೈಸ್ತಮತಕ್ಕೆ ಪರಿವರ್ತನೆ ಹೊಂದಿದರು. ಮೊದಲ ಹಂತದಲ್ಲಿ ಕ್ರೈಸ್ತ ಮಿಶನರಿಗಳು ಭಾರತದಲ್ಲಿ ಕೈಗೊಂಡ ಮತಾಂತರ ಕ್ರಿಯೆ ಕಷ್ಟ ಸಾಧ್ಯವಾಗಿತ್ತು. ಆ ನಂತರ ಈ ಧರ್ಮಸಂಸ್ಥೆಗಳು ಮಾಡಿದ ಶಿಕ್ಷಣಪ್ರಸಾರ, ವೈದ್ಯಕೀಯ ನೆರವು ಮುಂತಾದ ಜನೋಪಕಾರಿ ಕಾರ್ಯಗಳಿಂದ ಜನರು ಕ್ರೈಸ್ತ ಧರ್ಮದ ಕಡೆಗೆ ಒಲವನ್ನು ತೋರಿದರು. ಇದನ್ನು ಬಿ.ಎಲ್. ರೈಸ್ ಅವರು ಉಲ್ಲೇಖಿಸಿರುವುದನ್ನು ತಿಳಿಯಬಹುದಾಗಿದೆ.

"ಆಗ, ಹಿಂದೂಗಳು ತಮ್ಮ ಮಕ್ಕಳನ್ನು ಕ್ರಿಶ್ಚಿಯನ್ ಶಾಲೆಗಳಿಗೆ ಕಳುಹಿಸುವಂತೆ ಅವರ ಮನವೊಲಿಸುವುದು ಬಹಳ ಕಷ್ಟಕರವಾಗಿದ್ದಿತು. ಈಗ, ಅವರ ಮಕ್ಕಳು ಸಾವಿರಾರು ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಅಂದು ಉಚಿತವಾಗಿ ಕೊಟ್ಟರೂ ಕ್ರಿಶ್ಚಿಯನ್ ಪುಸ್ತಕಗಳನ್ನು ಪಡೆಯಲು ಜನ ಹಿಂದೆ ಮುಂದೆ ನೋಡುತ್ತಿದ್ದರು. ಈಗ ಅವು ಅಸಂಖ್ಯವಾಗಿ ಮಾರಾಟವಾಗುತ್ತಿವೆ. ಸ್ತ್ರೀಯರಿಗೆ ಶಿಕ್ಷಣ ಕೊಡುವ ವಿಚಾರವೇ ಆಗ ಹೀನಾಯವೆನಿಸಿದ್ದಿತು. ನಾಲ್ವತ್ತು ವರ್ಷಗಳ ಹಿಂದೆ ಗಂಡು ಮಕ್ಕಳ ಶಿಕ್ಷಣಕ್ಕೆ ಇದ್ದ ಮಹತ್ವಕ್ಕೆ ಮಿಗಿಲಾಗಿ ಇಂದು ಸ್ತ್ರೀಯರ ವಿದ್ಯಾರ್ಜನೆಗೆ ಪ್ರಾಶಸ್ತ್ಯ ಬಂದಿದೆ."[೨೬]

ಈ ಹೇಳಿಕೆಯನ್ನು ಗಮನದಲ್ಲಿಟ್ಟುಕೊಂಡು ಭಾರತದಲ್ಲಿ ಕ್ರೈಸ್ತ ಜನಸಂಖ್ಯೆಯನ್ನು ತಿಳಿಯುವುದಾದರೆ, ೧೯೨೧ರ ಜನಗಣತಿಯ ಪ್ರಕಾರ ಕ್ರೈಸ್ತ ಮತೀಯರ ಸಂಖ್ಯೆ ಭಾರತದಲ್ಲಿ

೪೭,೫೪,೦೬೪ ಆಗಿದ್ದು, ೧೯೩೧ರ ಜನಗಣತಿಯಲ್ಲಿ ಅವರ ಸಂಖ್ಯೆ ೬೨,೯೬,೭೬೩ಕ್ಕೆ ಏರಿತ್ತು. ಅಂದರೆ ಶೇ. ೩೨.೫ರ ಬೆಳವಣಿಗೆಯ ದರದಲ್ಲಿ ವೃದ್ಧಿಯಾಗಿರುವುದನ್ನು ಈ ಅಂಕಿ ಅಂಶಗಳಿಂದ ತಿಳಿಯಬಹುದಾಗಿದೆ. ವಸಾಹತು ಸಂದರ್ಭದಲ್ಲಿ ಮಿಶನರಿಗಳು ಕ್ರೈಸ್ತೀಕರಣಕ್ಕಾಗಿ ಶ್ರಮಿಸಿರುವುದನ್ನು ಹಾಗೂ ಭಾರತೀಯರು ಮತಾಂತರ ಕ್ರಿಯೆಗೆ ಒಳಗಾಗಿರುವುದನ್ನು ಈ ಅಂಕಿ ಅಂಶಗಳಿಂದ ತಿಳಿಯಬಹುದಾಗಿದೆ.

ಗೀತೆ: ಧಾರ್ಮಿಕ ವಸಾಹತೀಕರಣಕ್ಕೆ ಭಾರತೀಯರ ಪ್ರತಿಕ್ರಿಯೆ

ಕ್ರೈಸ್ತ ಪಾದ್ರಿಗಳ ಕಲ್ಯಾಣ ಕಾರ್ಯಕ್ರಮಗಳು ಮತ್ತು ಮತಾಂತರ ಕಾರ್ಯಗಳಿಂದ ಹಿಂದೂ ಜನರು ತಮ್ಮ ಸ್ವಧರ್ಮದ ಬಗೆಗಿದ್ದ ಒಲವನ್ನು ಕ್ರಮೇಣವಾಗಿ ಕಡಿಮೆಗೊಳಿಸುತ್ತಾ ಪಾಶ್ಚಾತ್ಯ ಧರ್ಮ, ಸಂಸ್ಕೃತಿಗೆ ಹೆಚ್ಚು ಆಕರ್ಷಿತರಾಗತೊಡಗಿದ್ದರು. ಈ ಕಾಲದಲ್ಲಿ ಯುರೋಪಿಯನ್ ವಿದ್ವಾಂಸರು ಭಾರತೀಯರ ಪಠ್ಯಗಳನ್ನು ಭಾಷಾಂತರಿಸಲು ಆರಂಭಿಸಿದ್ದು ಧಾರ್ಮಿಕ ವಸಾಹತೀಕರಣಕ್ಕೆ ಹೆಚ್ಚು ಅನುಕೂಲವನ್ನು ಒದಗಿಸಿಕೊಟ್ಟಿತು. ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಯಲು ಈ ಭಾಷಾಂತರ ಕಾರ್ಯಕ್ಕೆ ತೊಡಗಿಕೊಂಡರು. ಇದರಿಂದ ವಸಾಹತುಶಾಹಿಯು ತನ್ನ ಬೇರುಗಳನ್ನು ಆಳವಾಗಿಸಲು ಸಹಕಾರಿಯಾಯಿತು. ವೇದ-ಉಪನಿಷತ್ತುಗಳು, ಪುರಾಣಗಳು, ಧಾರ್ಮಿಕ ಗ್ರಂಥಗಳು ಹೀಗೆ ಹಿಂದೂ ಗ್ರಂಥಗಳು ಇಂಗ್ಲಿಷ್ ಭಾಷೆಗೆ ಭಾಷಾಂತರಗೊಂಡವು. ಇವುಗಳ ಮೂಲಕ ಹಿಂದೂಧರ್ಮದಲ್ಲಿ ಮನೆ ಮಾಡಿದ್ದ ಅನೇಕ ಮೌಢ್ಯಗಳನ್ನು ಎತ್ತಿ ತೋರಿಸಲು ಮುಂದಾದರು. ಮಿಶನರಿಗಳು ಮತ್ತು ವಸಾಹತುಶಾಹಿಗಳು ಭಾರತೀಯ ಧರ್ಮ ಮತ್ತು ಸಂಸ್ಕೃತಿಯನ್ನು ತುಂಬಾ ಕಟುವಾದ ಟೀಕೆಗೆ ಒಳಪಡಿಸಿದ್ದರಿಂದ ಅದಕ್ಕೆ ಪ್ರತಿಯಾಗಿ ದೇಶಿ ವಿದ್ವಾಂಸರು ಕೂಡ ಭಾಷಾಂತರ ಪ್ರಕ್ರಿಯೆಯಲ್ಲಿ ತೊಡಗಿಕೊಂಡರು. ಪ್ರಾದೇಶಿಕ ಭಾಷೆಗಳಲ್ಲಿ ರಚನೆಗೊಂಡಿದ್ದ ವಿವಿಧ ಮೌಲ್ಯಯುತ ಪಠ್ಯಗಳನ್ನು ಇನ್ನೊಂದು ದೇಶಿ ಭಾಷೆಗೆ ಅನುವಾದಿಸುವುದರ ಮೂಲಕ ವಸಾಹತುಶಾಹಿಯ ವಿರುದ್ಧ ಸಾಂಸ್ಕೃತಿಕ ಶಕ್ತಿಯನ್ನು ತೋರಿಸಲು ಮುಂದಾದರು. ಈ ಕಾರಣದಿಂದಾಗಿಯೇ ಮೊದಲು ಬಂಗಾಳದ ಕೃತಿಗಳು ದೇಶದ ವಿವಿಧ ಭಾಷೆಗಳಿಗೆ ಅನುವಾದಗೊಂಡವು. ಆ ಕೃತಿಗಳ ಜೊತೆಯಲ್ಲಿಯೇ ಭಾರತೀಯ ಧರ್ಮವನ್ನು, ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಪಠ್ಯಗಳೂ ಅನುವಾದಗೊಂಡವು. ಪುರಾಣಗಳು, ವೇದ-ಉಪನಿಷತ್ತುಗಳು ಮುಂತಾದವುಗಳೆಲ್ಲವೂ ಹೆಚ್ಚು ಹೆಚ್ಚು ಅನುವಾದಗೊಂಡು ಜನಪ್ರಿಯಗೊಳ್ಳಲು ಪ್ರಾರಂಭವಾದವು. ಈ ಕಾಲಘಟ್ಟದಲ್ಲಿ ಹಿಂದೂ ಪರಂಪರೆಯನ್ನು, ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಧಾರ್ಮಿಕ ಸುಧಾರಣಾ ಚಳುವಳಿಗಾರರಾದ ರಾಜಾರಾಮ ಮೋಹನರಾಯ್, ಜ್ಯೋತಿಬಾ ಫುಲೆ, ಆತ್ಮರಾಮ ಪಾಂಡುರಂಗ, ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸ, ಅನಿಬೆಸೆಂಟ್, ವಿವೇಕಾನಂದ ಹೀಗೆ ಅನೇಕರು ಹಿಂದೂಧರ್ಮದಲ್ಲಿದ್ದ ಕೆಟ್ಟ ಆಚರಣೆಗಳು ಮತ್ತು ಮೌಢ್ಯಗಳ ಬಗ್ಗೆ ಜನರಿಗೆ ತಿಳಿಸಿ ಅದರಿಂದ ಹೊರಬರುವಂತೆ ಕರೆ ಕೊಟ್ಟರು.

ರಾಜಾರಾಮ ಮೋಹನರಾಯ್ ಅವರು ಮತಾಂತರಕ್ಕೆ ಸ್ವಮತದ ಮೌಢ್ಯಾಚರಣೆಗಳೇ ಕಾರಣವೆಂದು ತಿಳಿದು ಹಿಂದೂ ಸಮಾಜದೊಳಗಡೆ ಇರುವ ಸತೀಪದ್ಧತಿ, ಬಾಲ್ಯವಿವಾಹ, ಮೂರ್ತಿಪೂಜೆ ಮುಂತಾದ ಅನಿಷ್ಟ ಆಚರಣೆಗಳನ್ನು ವಿರೋಧಿಸಿದರು. ಸ್ತ್ರೀ ಸ್ವಾತಂತ್ರ್ಯ ಮತ್ತು ಶಿಕ್ಷಣದ ಸುಧಾರಣೆಗೆ ಪ್ರಯತ್ನಿಸಿದರು. ಹಿಂದೂ ಪರಂಪರೆಯೊಳಗೆ ಇರುವ ಕೆಲವು ಸಾಮಾಜಿಕ ಮೌಢ್ಯಗಳನ್ನು ಶಿಕ್ಷಣದ ಮೂಲಕ ಹೋಗಲಾಡಿಸಿ ಹಿಂದೂ ಪರಂಪರೆಯನ್ನು ಶುದ್ಧ ಧರ್ಮವಾಗಿ ರೂಪಿಸಬೇಕೆಂಬ ಮನೋಭಾವ ಹೊಂದಿದ್ದರು. ಅದಕ್ಕಾಗಿ ಸಮಾಜ ಸೇವೆಯ ಪ್ರಬಲ ಕೇಂದ್ರವಾದ ಬ್ರಹ್ಮಸಮಾಜವನ್ನು ಸ್ಥಾಪಿಸಿದರು. ಆ ಮೂಲಕ ಹಿಂದೂ-ಕ್ರೈಸ್ತ ಗ್ರಂಥಗಳ ಮುಖ್ಯವಿಚಾರಗಳನ್ನು ಮಾನ್ಯ ಮಾಡಿ ಜಾತಿ, ಜನಾಂಗಗಳ ಭೇದವೆಣಿಸದೆ ಧರ್ಮ ಪ್ರಚಾರ ಮಾಡಹೊರಟರು. ಭಾರತದಲ್ಲಿದ್ದ ಉಪನಿಷತ್ತುಗಳ ಮತ್ತು ಇತರ ಪವಿತ್ರ ಗ್ರಂಥಗಳ ಶಾಶ್ವತ ಮೌಲ್ಯಗಳನ್ನು ನೆಲೆಗೊಳಿಸಲು ಪ್ರಯತ್ನ ನಡೆಸಿದರು. ಇವರ ಈ ಕಾರ್ಯದಿಂದ ಇಂಗ್ಲಿಷ್ ವಿದ್ಯಾಭ್ಯಾಸ ಹೊಂದಿದ ಯುವ ಜನರು ಹಿಂದೂಧರ್ಮವನ್ನು ತ್ಯಜಿಸಿ ಕ್ರೈಸ್ತ ಧರ್ಮವನ್ನು ಅವಲಂಬಿಸುವುದು ಹೆಚ್ಚಿನ ಪ್ರಮಾಣದಲ್ಲಿ ತಪ್ಪಿತು. ಇವರು ಹೊರತಂದ ವೃತ್ತಪತ್ರಿಕೆಗಳಿಂದ ಜ್ಞಾನ ಪ್ರಸಾರ ಹಾಗೂ ಸಮಾಜ ಸೇವೆಯಿಂದ ಮಧ್ಯಮವರ್ಗದ ಜನರಲ್ಲಿ ಆತ್ಮವಿಶ್ವಾಸ, ಆಶಾಭಾವನೆಯನ್ನು ತಂದು ಭಾರತೀಯರಲ್ಲಿ ರಾಷ್ಟ್ರೀಯವಾದವನ್ನು ಹುಟ್ಟಿಸುವಲ್ಲಿ ಯಶಸ್ವಿಯಾದರು.

ನಂತರದಲ್ಲಿ ಬೊಂಬಾಯಿ ಪ್ರಾಂತ್ಯದಲ್ಲಿ ಎಂ.ಜಿ. ರಾನಡೆ, ಆತ್ಮರಾಮ ಪಾಂಡುರಂಗ, ಶಾಂತಾರಾಂ ಬೋನ್ಸ್ಲೇ, ಮೊರೋಬ ಸಂಘ್ರಿ ಮುಂತಾದವರೆಲ್ಲರೂ ಸೇರಿ ೧೮೬೭ರಲ್ಲಿ ಪ್ರಾರ್ಥನಾ ಸಮಾಜವನ್ನು ಸ್ಥಾಪಿಸಿದರು. ಈ ಸಮಾಜವೂ ಕೂಡ ಹಿಂದೂಗಳಲ್ಲಿದ್ದ ಜಾತೀಯತೆಯ ದ್ವೇಷವನ್ನು ಖಂಡಿಸಿತು. ವಿಧವಾವಿವಾಹ, ಮಹಿಳೆಯರ ವಿದ್ಯಾಭ್ಯಾಸ, ಬಾಲ್ಯವಿವಾಹ ಪದ್ಧತಿಯ ರದ್ಧತಿ ಮುಂತಾದ ಸಮಾಜಸೇವಾ ಕಾರ್ಯಗಳಲ್ಲಿ ತೊಡಗಿಕೊಂಡಿತು. ಬಂಗಾಳದಲ್ಲಿ ಬ್ರಹ್ಮಸಮಾಜವು ಮಾಡಿದ ಕಾರ್ಯಗಳನ್ನೇ ಬೊಂಬಾಯಿ ಪ್ರಾಂತ್ಯದಲ್ಲಿ ಪ್ರಾರ್ಥನಾ ಸಮಾಜವು ಮಾಡಿತು. ಅನಂತರದಲ್ಲಿ ಪಂಜಾಬ್ ಮತ್ತು ಉತ್ತರ ಭಾರತದಲ್ಲಿ ತುಂಬ ವ್ಯಾಪಕವಾದ ಪ್ರಭಾವವನ್ನು ಬೀರಿದ್ದು ದಯಾನಂದ ಸರಸ್ವತಿಯವರು ಸ್ಥಾಪಿಸಿದ ಆರ್ಯ ಸಮಾಜ. ದಯಾನಂದ ಸರಸ್ವತಿಯವರು ಕ್ರೈಸ್ತ, ಮಹಮದೀಯ ಮತ ಪ್ರಚಾರಕರಿಂದ ಮತ್ತು ಅವರ ಸಂಸ್ಕೃತಿಯ ಪ್ರಭಾವದಿಂದ ಹಿಂದೂ ಸಮಾಜದ ಮೇಲೆ ಆದ ತೊಂದರೆಗಳನ್ನು ಹೋಗಲಾಡಿಸಲು ಪ್ರಯತ್ನಿಸಿದರು. ಇವರು ಮುಖ್ಯವಾಗಿ ಇತರ ಮತಗಳಿಗೆ ಹಿಂದೂಧರ್ಮದಿಂದ ಮತಾಂತರಗೊಂಡು ಹೋದವರನ್ನು ಪುನಃ ಹಿಂದೂಧರ್ಮಕ್ಕೆ ಸೇರಿಸಿಕೊಳ್ಳುವ ಸಲುವಾಗಿ ಶುದ್ಧೀಕರಣ ಚಳುವಳಿಯನ್ನು ಪ್ರಾರಂಭಿಸಿದರು. ಪುನಃ ಮತಾಂತರಗೊಳಿಸುವಿಕೆ ಹಾಗೂ ಹಿಂದೂಗಳ ಸಂಘಟನಾ ಕಾರ್ಯಗಳನ್ನು ಸಹ ಆರಂಭಿಸಿ ನಿರ್ಬಲವಾಗುತ್ತಿದ್ದ ಹಿಂದೂ ಸಮಾಜವನ್ನು ಉದ್ಧರಿಸಿದರು. ವೇದಗಳು ಮಾತ್ರವೇ ಹಿಂದೂಧರ್ಮಕ್ಕೆ ಆಧಾರ. ಆದ್ದರಿಂದ ವೇದಗಳಿಗೆ ಹಿಂದಿರುಗಿ ಎಂದು ಕರೆ ಕೊಟ್ಟರು. ಉತ್ತರ ಭಾರತದಲ್ಲಿ ಅನೇಕ ವೇದ

ಧರ್ಮಶಾಲೆ-ಗುರುಕುಲ ಪೀಠಗಳನ್ನು ಸ್ಥಾಪಿಸಿ ಹಿಂದೂ ಸಮಾಜದಲ್ಲಿ ಧಾರ್ಮಿಕವಾದ, ವೇದೋಕ್ತವಾದ ಪ್ರಜ್ಞೆಯನ್ನು ಬಲಪಡಿಸಲು ಯತ್ನಿಸಿದರು.

ಧಾರ್ಮಿಕ ವಸಾಹತೀಕರಣಕ್ಕೆ ಹಾಗೂ ಬ್ರಿಟಿಷರ ರಾಜಕೀಯ ವಸಾಹತೀಕರಣಕ್ಕೆ ಪ್ರಬಲವಾದ ಮತ್ತು ಶಕ್ತಿಯುತವಾದ ಪ್ರತಿಕ್ರಿಯೆಯನ್ನು ತೋರಿದ ಸಂಘಟನೆ ಎಂದರೆ ಥಿಯಾಸೊಫಿಕಲ್ ಸೊಸೈಟಿ. ೧೮೭೫ರಲ್ಲಿ ರಷ್ಯಾದ ಮೇಡಂ ಎಚ್.ಪಿ.ಬ್ಲಾವಟ್‌ಸ್ಕಿ, ಇಂಗ್ಲೆಂಡಿನ ಕರ್ನಲ್ ಎಚ್.ಎಸ್. ಆಲ್ಕಾಟ್ ಮತ್ತು ಡಬ್ಲ್ಯೂ.ಕ್ಯೂ.ಜಡ್ಜ್‌ರಿಂದ ನ್ಯೂಯಾರ್ಕ್‌ನಲ್ಲಿ ಈ ಸೊಸೈಟಿಯು ಆರಂಭಗೊಂಡಿತು. ದಕ್ಷಿಣ ಭಾರತದ ಮದ್ರಾಸಿನ ಆಡ್ಯಾರ್ ಎಂಬಲ್ಲಿ ತನ್ನ ಶಾಖೆಯನ್ನು ಪ್ರಾರಂಭಿಸಿತು. ೧೮೮೨ರಲ್ಲಿ ಈ ಶಾಖೆಯನ್ನೇ ತನ್ನ ಮುಖ್ಯ ಕೇಂದ್ರವನ್ನಾಗಿಸಿಕೊಂಡಿತು. ೧೮೮೮ರಲ್ಲಿ ಈ ಸೊಸೈಟಿಗೆ ಸೇರಿದ ಅನಿಬೆಸೆಂಟ್ ಅವರು ೧೮೯೩ರಲ್ಲಿ ಭಾರತಕ್ಕೆ ಬಂದು ತಮ್ಮ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿದರು. ಈ ಸೊಸೈಟಿಯ ಮೂಲಕ ಅವರು ಹಿಂದೂಧರ್ಮ ಮತ್ತು ಬೌದ್ಧಧರ್ಮದ ಹಿರಿಮೆಗೆ ವಿಶೇಷ ಮಹತ್ವ ನೀಡಿದರು. ಈ ಎರಡೂ ಧರ್ಮಗಳ ಶ್ರೇಷ್ಠತೆಯನ್ನು ಸಾರುವುದರೊಂದಿಗೆ, ಕ್ರೈಸ್ತಮತ ಪ್ರಚಾರಕ್ಕೆ ತಡೆಯೊಡ್ಡಿದರು. ಮತಪ್ರಚಾರ ಮಾಡುತ್ತಿದ್ದ ಮತಪ್ರಚಾರಕರನ್ನು ಪ್ರತಿರೋಧಿಸಿದರು. ಹಿಂದೂಧರ್ಮದ ಗ್ರಂಥಗಳನ್ನು ಪ್ರಕಟಗೊಳಿಸಿ ಸಾಕಷ್ಟು ಪ್ರಭಾವಯುತವಾಗಿ ಅದನ್ನು ದೇಶದಲ್ಲೆಲ್ಲಾ ಪ್ರಚಾರ ಮಾಡಿ ಹಿಂದೂ ಸಮಾಜದಲ್ಲಿ ಹೊಸ ಜಾಗೃತಿಯನ್ನುಂಟುಮಾಡಿದರು. ಹಿಂದೂ ಸಮಾಜದವರಿಗೆ ತಮ್ಮ ಧರ್ಮ ಮತ್ತು ಸಂಸ್ಕೃತಿಯ ಹಿರಿಮೆಯನ್ನು ಪರಿಚಯ ಮಾಡಿಕೊಡುವುದಕ್ಕೆ ಪ್ರಯತ್ನಿಸಿದರು. ದಕ್ಷಿಣ ಭಾರತದಲ್ಲಿ ಧಾರ್ಮಿಕ ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸಲು ಅನಿಬೆಸೆಂಟ್ ಅವರು ಭಗವದ್ಗೀತೆಯನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿದರು. ಇವರ ಗೀತಾರ್ಥ ವಿಚಾರಗಳು ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡು ಜನಪ್ರಿಯತೆಯನ್ನು ಪಡೆಯುವುದರೊಂದಿಗೆ ರಾಷ್ಟ್ರೀಯತೆಯು ತೀವ್ರಗೊಳ್ಳಲು ಸಹಕಾರಿಯಾಯಿತು.

ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳಿಗೆ ರಾಮಕೃಷ್ಣ ಪರಮಹಂಸರು ಮತ್ತು ವಿವೇಕಾನಂದರು ಶ್ರಮಿಸಿದ್ದಾರೆ. ವಿವೇಕಾನಂದರು ಜಾತಿರಹಿತವಾದ ರಾಮಕೃಷ್ಣ ಆಶ್ರಮವನ್ನು ಸ್ಥಾಪಿಸಿ ರಾಮಕೃಷ್ಣ ಪರಮಹಂಸರ ಬೋಧನೆಗಳನ್ನು ಜನಪ್ರಿಯಗೊಳಿಸಿದರು. ಇವರು ಸನಾತನ ಧರ್ಮ ಹಾಗೂ ಭಾರತೀಯ ಸಂಸ್ಕೃತಿಯ ಮೇಲೆ ಅಪಾರವಾದ ಅಭಿಮಾನವನ್ನು ಇರಿಸಿದ್ದರು. ಸನಾತನ ಮತ್ತು ಆಧುನಿಕ ದೃಷ್ಟಿಗಳ ಸಮನ್ವಯಕಾರರಾಗಿ ಕೆಲಸ ನಿರ್ವಹಿಸಿದರು. ಹಿಂದೂ ವೇದಾಂತ ದರ್ಶನದ ಏಕತ್ವವಾದದ ಜೊತೆಗೆ ಭಗವದ್ಗೀತೆಯ ಸಾರವನ್ನು ಭಾರತದಾದ್ಯಂತ ಹಾಗೂ ವಿದೇಶಗಳಲ್ಲೂ ಹೆಚ್ಚು ಪ್ರಚುರಪಡಿಸಿದರು. ಇವರು ಜನರಿಗೆ ಧೈರ್ಯ, ಸ್ವಾತಂತ್ರ್ಯ, ಪರಿಶುದ್ಧ ಪ್ರೀತಿ ಮತ್ತು ವೇದಾಂತದಲ್ಲಿ ದೃಢನಂಬಿಕೆಯನ್ನು ಬೋಧಿಸಿದರು. ಇದು ಭಾರತದ ಜನರ ಮೇಲೆ ಹಿಂದೂ ಧಾರ್ಮಿಕ ಸಂಸ್ಕೃತಿ ಮತ್ತು ಭಾವನೆಯನ್ನು ಉಳಿಸಿಕೊಳ್ಳುವಲ್ಲಿ ಹೆಚ್ಚು ಪ್ರಭಾವವನ್ನು ಬೀರಿತು.

ಈ ಎಲ್ಲಾ ಸುಧಾರಣಾವಾದಿಗಳ ಕಾರ್ಯಗಳಿಂದ ಕ್ರೈಸ್ತರ ಧಾರ್ಮಿಕ ವಸಾಹತೀಕರಣಕ್ಕೆ ತಡೆಯುಂಟಾಯಿತು. ಹಿಂದೂ ಧಾರ್ಮಿಕ ಸುಧಾರಣಾಕಾರರ ಕಾರ್ಯಗಳಿಂದ ವೇದ–ಉಪನಿಷತ್ತುಗಳು, ಪುರಾಣಗಳು, ಭಗವದ್ಗೀತೆ ಮುಂತಾದ ಹಿಂದೂ ಧಾರ್ಮಿಕ ಪಠ್ಯಗಳು ಜನಪ್ರಿಯತೆಯನ್ನು ಪಡೆದುಕೊಳ್ಳುವುದರೊಂದಿಗೆ ಭಾರತೀಯರಲ್ಲಿ ವಸಾಹತುಶಾಹಿಯ ವಿರುದ್ಧ ರಾಷ್ಟ್ರೀಯ ಏಕತೆಯನ್ನು ಉಂಟುಮಾಡುವಲ್ಲಿ ಬೀಜರೂಪಿಯಾದ ತಳಹದಿಯನ್ನು ನಿರ್ಮಿಸಿಕೊಳ್ಳಲು ಸಹಕಾರಿಯಾಯಿತು. ಇದು ಮುಂದೆ ಭಾರತೀಯ ರಾಷ್ಟ್ರೀಯ ನಾಯಕರಲ್ಲಿ ಈ ಪ್ರಜ್ಞೆಯು ಚಿಗುರೊಡೆದು ಹೆಮ್ಮರವಾಗಿ ಬೆಳೆಯಿತು. ಭಾರತದ ರಾಷ್ಟ್ರೀಯ ನಾಯಕರಾದ ಬಾಲಗಂಗಾಧರ ತಿಲಕ್, ಅನಿಬೆಸೆಂಟ್, ಗಾಂಧಿ, ವಿನೋಬಾಭಾವೆ, ಅರವಿಂದ ಮೊದಲಾದವರು ಭಗವದ್ಗೀತೆಯ ಏಕತೆಯನ್ನು ಉಂಟುಮಾಡುವ ಸಾಧನವಾಗಿ ಬಳಕೆಯಾಗುವುದನ್ನು ಕಂಡುಕೊಂಡರು. ಆ ಸಲುವಾಗಿ ಅವರು ಭಗವದ್ಗೀತೆಯ ಅನುವಾದ ಮತ್ತು ವ್ಯಾಖ್ಯಾನ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇದರಿಂದ ವಸಾಹತುಶಾಹಿಯ ವಿರುದ್ಧ ದೇಶದಾದ್ಯಂತ ಚಳುವಳಿಗಳು ಹೆಚ್ಚು ಕ್ರಿಯಾಶೀಲಗೊಳ್ಳಲು ಸಹಕಾರಿಯಾಯಿತು.

೪.೩. ಗೀತೆ: ವಿದೇಶಿ ಚಿಂತಕರ ನೋಟಕ್ರಮ

ಚಾರ್ಲ್ಸ್ ವಿಲ್ಕಿನ್ಸ್: ೧೭೮೫ರಲ್ಲಿ ಮೊಟ್ಟಮೊದಲ ಬಾರಿಗೆ ಇಂಗ್ಲಿಷ್ ಭಾಷೆಗೆ ಭಗವದ್ಗೀತೆಯನ್ನು ಅನುವಾದಿಸಿದ. ಇದು ಸಂಸ್ಕೃತ ಭಾಷೆಯಿಂದ ಯೂರೋಪಿನ ಭಾಷೆಗೆ ನೇರವಾಗಿ ಭಾಷಾಂತರಗೊಂಡ ಮೊದಲ ಕೃತಿಯಾಗಿದೆ. ವೇದಗಳಲ್ಲಿದ್ದ ಬಹುದೇವತಾರಾಧನೆಯಿಂದ ಹಿಂದೂಗಳನ್ನು ಹೊರತರುವುದು ಮತ್ತು ಕ್ರೈಸ್ತಧರ್ಮದಲ್ಲಿದ್ದ ಹಾಗೆ ಏಕದೇವತಾರಾಧನೆಯನ್ನು ಪ್ರೋತ್ಸಾಹಿಸುವುದು ತಮ್ಮ ಭಾಷಾಂತರದ ಉದ್ದೇಶವೆಂದು ವಿಲ್ಕಿನ್ಸ್ ಹೇಳಿಕೊಂಡಿದ್ದಾನೆ. ಇವನ ಭಾಷಾಂತರವನ್ನು ಕುರಿತು ವಾರನ್ ಹೇಸ್ಟಿಂಗ್ಸ್ ತಮ್ಮ ಮುನ್ನುಡಿಯಲ್ಲಿ ಗೀತೆಯ ಬೋಧನೆಗಳನ್ನು ಅಭ್ಯಸಿಸುವುದು ಮತ್ತು ಪ್ರಾಮಾಣಿಕವಾಗಿ ಅನುಸರಿಸುವುದು ಮನುಕುಲವನ್ನು ಶಾಂತಿಯೆಡೆಗೆ ಕರೆದೊಯ್ಯುತ್ತದೆ ಎಂದಿದ್ದಾರೆ. ಭಾರತದಲ್ಲಿ ಬ್ರಿಟಿಷ್ ಆಧಿಪತ್ಯವು ಮುಂದುವರಿದಾಗ್ಯೂ ಗೀತೆಯು ಸದಾಕಾಲ ಜೀವಂತವಾಗಿರುತ್ತದೆ ಎಂಬ ವಿಶ್ವಾಸವನ್ನು ಹೊಂದಿದ್ದರು. ಸಾಮಾನ್ಯ ಓದುಗರ ಜೊತೆಗೆ ಕ್ರಿಶ್ಚಿಯನ್ ಮಿಶನರಿಗಳೂ ಸಹ ಈ ಅನುವಾದದೆಡೆಗೆ ಆಕರ್ಷಿತರಾದರು. ಇವರು ಹಿಂದೂವಾದಗಳಿಗೆ ಪ್ರತಿವಾದ ಮಾಡಲು ಇದನ್ನು ಬಳಸಿಕೊಳ್ಳುತ್ತಿದ್ದರು. ೧೮೮೨ರಲ್ಲಿ **ಜಾನ್‌ಡೇವೀಸ್**ನು 'Hindu Phylosophy, The BhagavadGita'(ಹಿಂದು ಫಿಲಾಸಫಿ, ದ ಭಗವದ್ಗೀತ' ಅಥವಾ 'ದ ಸೇಕ್ರೆಡ್ ಲೇ, ಎ ಸ್ಯಾಂಸ್ಕ್ರಿಟ್ ಫಿಲಾಸಫಿಕಲ್ ಪೊಯಂ') ಎಂಬ ಹೆಸರಿನಲ್ಲಿ ಭಾಷಾಂತರಿಸುತ್ತಾನೆ. ಎಡ್ವಿನ್ ಆರ್ನಾಲ್ಡ್ ಸಹ ಈ ಭಾಷಾಂತರವನ್ನು ಮೆಚ್ಚಿಕೊಂಡಿದ್ದನು.

೧೮೮೫ರಲ್ಲಿ **ಜೆ.ಕಾಕ್‌ಬರ್ನ್ ಥಾಮ್ಸನ್**ನು 'ದ ಗೀತ ಆರ್ ಎ ಡಿಸ್‌ಕೋರ್ಸ್ ಬಿಟ್ವೀನ್ ಕೃಷ್ಣ ಅಂಡ್ ಅರ್ಜುನ ಆನ್‌ಡಿವೈನ್ ಮ್ಯಾಟರ್ಸ್' ಎಂದು ಭಾಷಾಂತರಿಸುತ್ತಾನೆ. ಈತನ ಪ್ರಕಾರ ವಿಲ್ಕಿನ್ಸ್ ಭಾಷಾಂತರವು 'ಗೀತೆಯ ಆಲೋಚನೆಗಳನ್ನು ಸ್ಪಷ್ಟಪಡಿಸುವುದರಿಂದ ದೂರ ಉಳಿದಿದೆ... ಅದರ ತಾತ್ವಿಕತೆಯನ್ನು ಅತಿ ಕಡಿಮೆ ವಿವರಿಸಿದೆ.'

೧೯೦೮ರಲ್ಲಿ ನ್ಯೂಯಾರ್ಕ್‌ನ ಪಬ್ಲಿಷಿಂಗ್ ಪ್ರಕಾಶನದ ಮೂಲಕ **ಚಾರ್ಲ್ಸ್ ಜಾನ್ಸ್‌ಟನ್**ನು ತನ್ನ ಭಾಷಾಂತರ ಕೃತಿ 'Bhagavad Gita, The Song of the Master'ಯನ್ನು ಹೊರತರುತ್ತಾನೆ. ಈ ಕೃತಿಗೆ ಬರೆದ ಸುದೀರ್ಘ ಮುನ್ನುಡಿಯಲ್ಲಿ ಗೀತೆಯ ಬಗ್ಗೆ ಹೀಗೆಂದು ಅಭಿಪ್ರಾಯ ತಾಳುತ್ತಾನೆ: "ಭಗವದ್ಗೀತೆಯು ಭಾರತದ ಉದಾತ್ತ ಧರ್ಮಗ್ರಂಥಗಳಲ್ಲೊಂದು, ಆಳವಾದ ಗಹನವಾದ ಗ್ರಂಥಗಳಲ್ಲೊಂದು... ಹಲವು ಸತ್ಯಗಳನ್ನೊಳಗೊಂಡ ಹಲವು ಅರ್ಥಸಾಧ್ಯತೆಗಳ ಧರ್ಮಗ್ರಂಥ... ಅದು ಪೌರ್ವಾತ್ಯ ಬೌದ್ಧಿಕತೆಯ ಸಜೀವ ಹೃದಯವಾಗಿದೆ."[೨೭]

೧೮೮೫ರಲ್ಲಿ ಪ್ರಕಟವಾದ **ಸರ್ ಎಡ್ವಿನ್ ಆರ್ನಾಲ್ಡ್**ನ 'ದ ಸಾಂಗ್ ಸೆಲೆಸ್ಟಿಯಲ್' ಅತ್ಯಂತ ಪ್ರಮುಖವಾದ ಮತ್ತು ಖ್ಯಾತವಾದ ಆವೃತ್ತಿಯಾಯಿತು. ಗಾಂಧಿ ಸಹ ಈ ಕೃತಿಯಿಂದ ಸ್ಫೂರ್ತಿ ಪಡೆದಿದ್ದರು.

ಅಲ್ಲಿಂದ ಮುಂದಕ್ಕೆ ಗೀತೆಯು ೭೫ಕ್ಕೂ ಹೆಚ್ಚಿನ ಭಾಷೆಗಳಿಗೆ ಭಾಷಾಂತರಗೊಂಡಿತು ಮತ್ತು ನೂರಾರು ವ್ಯಾಖ್ಯಾನಗಳು ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಭಾಷೆಗಳಲ್ಲಿ ಪ್ರಕಟವಾದವು. ಭಾರತದ ಹೊರಗೆ ಹಿಂದೂವಾದವನ್ನು ಅರ್ಥೈಸಿಕೊಳ್ಳಲು ಅವಕಾಶ ಮಾಡಿಕೊಟ್ಟ ಅತ್ಯಂತ ಪ್ರಮುಖ ಕೃತಿ ಇದಾಗಿತ್ತು.

ರಿಚರ್ಡ್ ಎಚ್. ಡೇವಿಸ್ ತನ್ನ ಕೃತಿಯಾದ The Bhagavad Gita A Biography'ಯಲ್ಲಿ ಅಭಿಪ್ರಾಯಪಡುವಂತೆ: "ಗೀತೆಯ ವಾಚನ ಮತ್ತು ಪಠಣದ ಮೂಲಕ ಶತಮಾನಗಳಿಂದಲೂ ನಿತ್ಯ ನೂತನ ಮತ್ತು ವಾಗ್ವಾದಾತ್ಮಕ ಕೃತಿಯಾಗಿ ಉಳಿದುಬಂದಿದೆ. ವಿವಿಧ ಅನುವಾದಗಳು ಮತ್ತು ವ್ಯಾಖ್ಯಾನಗಳು ಈ ಶಾಸ್ತ್ರೀಯ ಕೃತಿಯನ್ನು ಹಲವಾರು ವಾದ ವಿವಾದಗಳ ಮೂಲ ಸೆಲೆಯನ್ನಾಗಿಸಿದೆ."[೨೮]

ಹೀಗೆ, ಮಧ್ಯಕಾಲೀನ ಹಿಂದೂ ಗುರುಗಳು, ಬ್ರಿಟಿಷ್ ವಸಾಹತು ವಿದ್ವಾಂಸರು, ಜರ್ಮನ್ ವಿದ್ವಾಂಸರು, ಜಾಗತಿಕ ಆಧ್ಯಾತ್ಮಿಕ ವಾಗ್ಮಿಗಳು, ಭಾರತೀಯ ವಸಾಹತು ವಿರೋಧಿ ಸ್ವಾತಂತ್ರ್ಯ ಹೋರಾಟಗಾರರು, ಪಾಶ್ಚಾತ್ಯ ವಿದ್ಯಾರ್ಥಿಗಳು ಗೀತೆಯೊಂದಿಗೆ ತಮ್ಮ ತಮ್ಮದೇ ರೀತಿಯಲ್ಲಿ ಸಂವಾದದಲ್ಲಿ ತೊಡಗಿದರು.

ಭಾರತೀಯ ಭಾಷಾಂತರಕಾರರ ದೃಷ್ಟಿಯಲ್ಲಿ ಗೀತೆಯು ಪವಿತ್ರಗ್ರಂಥ, ಪೂಜ್ಯನೀಯ ಕೃತಿ ಮತ್ತು ಪ್ರಾಚೀನ ಧರ್ಮದ ಮೂರು ಮೂಲಭೂತ ಪಠ್ಯ(ಪ್ರಸ್ಥಾನತ್ರಯ)ಗಳಲ್ಲಿ ಒಂದು. ಗೀತೆಯನ್ನು ಭಾಷಾಂತರಿಸುವ ಮತ್ತು ಅದರ ಅಂತರಾರ್ಥ ವಿವರಿಸುವ ಪ್ರಕ್ರಿಯೆಯು ಸತ್ಯವನ್ನು

ಹರಡುವ ಕರ್ತವ್ಯ ಪ್ರಕ್ರಿಯೆಯಾಗಿದ್ದು, ಇದರಿಂದ ಸಹ ಭಾರತೀಯರನ್ನು ಸುಶಿಕ್ಷಿತರನ್ನಾಗಿಸಬಹುದು; ಅದರ ವಿಶ್ವಾತ್ಮಕ ಸಂದೇಶವನ್ನು ಎತ್ತಿಹಿಡಿಯಬಹುದು; ಹಾಗೆಯೇ ಹಲವಾರು ಸಂಕುಚಿತ ಧರ್ಮಗಳಂತಲ್ಲದೆ ಹಿಂದೂವಾದವು ಬದುಕಿನ ಬಗ್ಗೆ ಹೊಂದಿರುವ ಮುಕ್ತದೃಷ್ಟಿಯನ್ನು ಸರ್ವರಿಗೂ ತೋರಿಸಬಹುದು ಎಂಬ ನಿಲುವು ತಳೆದಿದ್ದರು.

ಗೋರಖ್‌ಪುರದ ಗೀತಾಪ್ರೆಸ್ ೨೦ನೇ ಶತಮಾನದ ಪ್ರಾರಂಭದಲ್ಲಿ ಭಗವದ್ಗೀತೆಯನ್ನು ಜನಸಾಮಾನ್ಯರ ನಡುವೆ ಪ್ರಸಾರ ಮಾಡುವ ಕಾರ್ಯದಲ್ಲಿ ಗಣನೀಯ ಸಾಧನೆ ಮಾಡಿತು. ಗೀತೆಯ ಹಿಂದಿ ಮತ್ತು ಇತರ ಭಾಷೆಗಳ ಭಾಷಾಂತರ ಪ್ರತಿಗಳನ್ನು ವಿತರಿಸತೊಡಗಿತು. ರಾಷ್ಟ್ರೀಯ ಚಳುವಳಿಯ ಸಂದರ್ಭದಲ್ಲಿ ಗೀತೆಯು ಸಹ ರಾಷ್ಟ್ರೀಯವಾದದ ಪ್ರತೀಕವಾಗಿ ಬಿಂಬಿತವಾಗಿದ್ದರಿಂದ ಗೀತೆಯ ಪ್ರತಿಗಳನ್ನು ಹೊಂದಿರುವವರನ್ನು ಬ್ರಿಟಿಷರು ಅನುಮಾನಾಸ್ಪದವಾಗಿ ಕಾಣುತ್ತಿದ್ದರು. ಈ ಸಂದರ್ಭದಲ್ಲಿಯೇ ಎಂದರೆ ೧೯೨೭ರ ಸುಮಾರಿಗೆ ಗೀತಾಪ್ರೆಸ್ ಭಗವದ್ಗೀತಾ ದಿನಚರಿಗಳನ್ನು ಉಚಿತವಾಗಿ ಇಲ್ಲವೇ ಅತ್ಯಂತ ಕಡಿಮೆದರದಲ್ಲಿ ಮಾರಾಟ ಮಾಡುತ್ತಿದ್ದುದು ದೊಡ್ಡ ಸಾಧನೆಯೆಂದೇ ಹೇಳಬೇಕು.

ಭಾರತೀಯ ಭಾಷಾಂತರಕಾರರಲ್ಲಿಯೇ ಪ್ರಮುಖವಾದ ಹೆಸರು ಕಾಶೀನಾಥ ತ್ರಯಂಬಕ ತೆಲಾಂಗ್(೧೮೫೦–೧೮೯೩). ಮ್ಯಾಕ್ಸ್‌ಮುಲ್ಲರ್ ಸಂಪಾದಿಸಿದ 'ಸೇಕ್ರೆಡ್ ಬುಕ್ಸ್ ಆಫ್ ದ ಈಸ್ಟ್' ಮಾಲಿಕೆಗೆ ಬರೆಯುವುದಕ್ಕೆ ಆಹ್ವಾನಿತರಾದ ಇಬ್ಬರೇ ಇಬ್ಬರು ಭಾರತೀಯರ ಪೈಕಿ ತೆಲಾಂಗ್ ಒಬ್ಬರು. ಮತ್ತೊಬ್ಬರು ಆರ್.ಜಿ. ಭಂಡಾರ್ಕರ್. ತೆಲಾಂಗ್‌ರ ಭಾಷಾಂತರ ಕೃತಿಯು ಭಾರತದಲ್ಲಿ ಸಂಚಲನವನ್ನುಂಟುಮಾಡಿತು. ಆದರೆ ಇದಕ್ಕೆ ಇಂಗ್ಲೆಂಡಿನವರ ಗಂಭೀರ ಪ್ರತಿಕ್ರಿಯೆ ದೊರೆಯಲಿಲ್ಲ. ಎಡ್ವಿನ್ ಆರ್ನಾಲ್ಡ್ ಸಹ ತೆಲಾಂಗ್‌ರ ಬಾಂಬೆ ಆವೃತ್ತಿಯ ಬಗ್ಗೆ ಮಾತನಾಡುತ್ತಾ 'ಇದು ವಿದ್ವತ್‌ಪೂರ್ಣವಾಗಿದ್ದರೂ ಸಹ ಮೂಲದ ಘನತೆ ಮತ್ತು ಭವ್ಯತೆಯನ್ನು ಚಿತ್ರಿಸುವುದರಲ್ಲಿ ವಿಫಲವಾಗಿದೆ' ಎನ್ನುತ್ತಾರೆ.

ಅನಿಬೆಸೆಂಟ್ ಮಹಾಭಾರತ ಯುದ್ಧ ಮತ್ತು ಸ್ವಾತಂತ್ರ್ಯ ಚಳುವಳಿಯನ್ನು ಸಮೀಕರಿಸಿದ್ದು ಬಹುಮಟ್ಟಿಗೆ ಒಪ್ಪುವಂಥದ್ದಾಗಿತ್ತು. ಬಾಲಗಂಗಾಧರ ತಿಲಕರನ್ನು ಸಹ ಬೆಸೆಂಟ್‌ರ ಗೀತಾ ಆಲೋಚನೆಗಳು ಪ್ರಭಾವಿಸಿದವು. ಬೆಸೆಂಟ್ ದೃಷ್ಟಿಯಲ್ಲಿ ಗೀತೆಯ ಬಗ್ಗೆ ಮಾತನಾಡುವುದೆಂದರೆ ಜಗತ್ತಿನ ಚರಿತ್ರೆಯ ಬಗ್ಗೆ ಮಾತನಾಡುವುದೇ ಆಗಿರುತ್ತದೆ.

೨೦ನೇ ಶತಮಾನದಲ್ಲಿ ಭಗವದ್ಗೀತೆಯನ್ನು ಪ್ರಕಟಿಸಿದ ಪ್ರಮುಖ ಪಾಶ್ಚಾತ್ಯ ವಿದ್ವಾಂಸರೆಂದರೆ ಫ್ರಾಂಕ್ಲಿನ್ ಎಡ್ಗರ್‌ಟನ್, ರಾಬರ್ಟ್ ಚಾರ್ಲ್ಸ್ ಝೂಹ್ನರ್, ಕೀಸ್ ಡಬ್ಲ್ಯು ಬೊಲ್ಲೆ, ಜೆ.ಎ.ಬಿ. ವ್ಯಾನ್ ಬ್ಯುಟೆನೆನ್ ಮತ್ತು ಡಬ್ಲ್ಯು. ಡಗ್ಲಾಸ್ ಪಿ.ಹಿಲ್. ಆದಾಗ್ಯೂ ೧೯೩೫ ಮತ್ತು ೧೯೪೪ರಲ್ಲಿ ಪ್ರಕಟವಾದ ಎರಡು ಭಾಷಾಂತರಗಳು ಪಾಶ್ಚಾತ್ಯ ಮತ್ತು ಭಾರತೀಯ ವಿದ್ವಾಂಸರ ಆಲೋಚನೆಗಳನ್ನು ಸಮನ್ವಯಗೊಳಿಸಿದವು ಮತ್ತು ಗೀತೆಯ ವಿಶ್ವಾತ್ಮಕ ಪ್ರಾಮುಖ್ಯತೆಯನ್ನು ಎತ್ತಿಹಿಡಿದವು.

ಅವುಗಳಲ್ಲಿ ಮೊದಲನೆಯದು ಶ್ರೀ ಪುರೋಹಿತ ಸ್ವಾಮಿಯವರ ಭಾಷಾಂತರ(ಫೇಬರ್ ಮತ್ತು ಫೇಬರ್, ಲಂಡನ್, ೧೯೩೫), ಎರಡನೆಯದು ಸ್ವಾಮಿ ಪ್ರಭವಾನಂದ ಮತ್ತು ಕ್ರಿಸ್ಟೋಫರ್ ಇಷರ್‌ವುಡ್ ಅವರ ಭಾಷಾಂತರ(ಎಂ. ರೋಡ್ ಕಂ., ಹಾಲಿವುಡ್, ೧೯೪೪).

ಶ್ರೀ ಪುರೋಹಿತ ಸ್ವಾಮಿಯವರ ಭಾಷಾಂತರ The Geeta; The Gospel of the Lord Shri Krishna, ಡಬ್ಲ್ಯು. ಬಿ. ಏಟ್ಸ್‌ರ ಸೂಚನೆಗಳೊಂದಿಗೆ ಪುರೋಹಿತ ಸ್ವಾಮಿಯವರು ಬ್ರಿಟಿಷ್ ಸಾಮಾನ್ಯ ಪ್ರಜೆಗೆ ಅರ್ಥವಾಗುವ ಹಾಗೆ ವ್ಯಾಖ್ಯಾನಗಳನ್ನು ಬರೆದು ಪ್ರಕಟಿಸಿದರು. ಪ್ರಾಚೀನ ಭಾರತೀಯ ಪರಿಕಲ್ಪನೆಗಳು ಮತ್ತು ಸಂಸ್ಕೃತ ಪರಿಭಾಷೆಗಳನ್ನು ಅತಿಯಾಗಿ ಬಳಸದೆಯೇ ಪಠ್ಯದ ಪ್ರತಿಯೊಂದು ಪದವೂ ಇಂಗ್ಲಿಷಿಗೆ ಭಾಷಾಂತರಿಸಿದ್ದು ಇದರ ವೈಶಿಷ್ಟ್ಯ. ಏಟ್ಸ್‌ರ ಸಹಾಯವೂ ಈ ಭಾಷಾಂತರಕ್ಕೆ ಅಪಾರವಾದುದಾಗಿತ್ತು. ಹೀಗಾಗಿಯೇ ಪುರೋಹಿತ ಸ್ವಾಮಿಯವರು ಈ ಕೃತಿಯನ್ನು ಏಟ್ಸ್‌ರಿಗೆ ಅರ್ಪಿಸುತ್ತಾರೆ.

ಸ್ವಾಮಿ ಪ್ರಭವಾನಂದ ಮತ್ತು ಕ್ರಿಸ್ಟೋಫರ್ ಇಷರ್‌ವುಡ್ ಅವರ ಭಾಷಾಂತರ The Song of God: Bhagavad-Gita. ಆಲ್ಡಸ್ ಹಕ್ಸ್‌ಲಿ ಮುನ್ನುಡಿಯಿರುವ ಈ ಭಾಷಾಂತರದ ಸಹ–ಭಾಷಾಂತರಕಾರರಾದ ಇಷರ್‌ವುಡ್ ಹಿಂದೂವಾಗಿ ಜೀವನ ನಡೆಸಿದವರು. ಟೈಮ್ಸ್ ನಿಯತಕಾಲಿಕೆ ಈ ಭಾಷಾಂತರವನ್ನು ಪರಿಶೀಲಿಸಿ 'ಅತ್ಯಂತ ಸರಳವೂ ಮುಕ್ತವೂ ಆಗಿರುವ ವಿಶಿಷ್ಟ ಸಾಹಿತ್ಯಕೃತಿ' ಎಂದು ಶ್ಲಾಘಿಸಿತು. ಆಲ್ಡಸ್ ಹಕ್ಸ್‌ಲಿ ತಮ್ಮ ಮುನ್ನುಡಿಯಲ್ಲಿ "ಭಗವದ್ಗೀತೆಯು ಮನುಕುಲಕ್ಕೆ ಬಂದ ಅಮೂಲ್ಯ ಕೊಡುಗೆ. ಇದು ಮಾನವನ ಆಧ್ಯಾತ್ಮಿಕ ಬದುಕಿನ ಉತ್ಕರ್ಷದಲ್ಲಿ ಬಂದ ಅತ್ಯಂತ ಮೌಲಿಕವಾದ ಕ್ರಮಾನುಗತವಾದ ವಿಕಾಸವನ್ನು ಕುರಿತು ಹೇಳುತ್ತದೆ. ಇಲ್ಲಿಯವರೆಗೂ ಪ್ರಕಾಶಕ್ಕೆ ಬಂದದ್ದರಲ್ಲೇ ಅತ್ಯಂತ ವಿಸ್ತಾರವಾದ ಬಹುಕಾಲ ಬಾಳುವ ವಿಚಾರ ಸಂಗ್ರಹವಿದು. ಆದ್ದರಿಂದಲೇ ಇದರ ಸದಾಕಾಲ ಉಳಿದು ಬಾಳುವ ಮೌಲ್ಯ ಕೇವಲ ಭಾರತಕ್ಕೆ ಮಾತ್ರ ಸಲ್ಲುವುದಲ್ಲ; ಇಡೀ ಮಾನವ ಕುಲಕ್ಕೇ ಸಲ್ಲುವುದಾಗಿದೆ"[೨೯] ಎಂಬ ಅಭಿಪ್ರಾಯವನ್ನು ತಳೆದಿದ್ದಾರೆ.

ಈ ಮೇಲಿನ ಮಾತುಗಳು ಎರಡನೇ ವಿಶ್ವಯುದ್ಧದ ಸಂದರ್ಭದ ಕಾರಣದಿಂದಾಗಿ ಈ ಕೃತಿಯಷ್ಟೇ ಜನಜನಿತವಾದುವು: ಗಾಂಧಿಯಂತೆಯೇ ಹಕ್ಸ್‌ಲಿ ಸಹ ಗೀತೆಯ ಸಂದೇಶವು ಅಹಿಂಸೆಯೇ ಆಗಿದ್ದು, ಹಿಂಸೆಯು ಸ್ವ–ನಾಶಕ್ಕೆ ಕಾರಣವಾಗುತ್ತದೆ ಎಂದು ಭಾವಿಸಿದ್ದರು.

ಅನಂತರದ ಮತ್ತೂ ಕೆಲವು ಗಮನಾರ್ಹ ಭಾಷಾಂತರಗಳೆಂದರೆ,

- J. A. B. Van Buitenen ಅವರ The Bhagavadgita in the Mahabharata- A Bilingual Edition (Editor: James L. Fitzgerald. The University of Chicago Press, Chicago, 1981) ಈ ಕೃತಿಯು ಗೀತೆಯ ಮೂಲಕ್ಕೆ ನಿಷ್ಠವಾಗಿದ್ದು ತದ್ವತ್ತಾಗಿ ನಿಖರ, ನೇರ ಮತ್ತು ಸ್ಪಷ್ಟ ವಿವರಣೆಗಳನ್ನು ನೀಡುತ್ತದೆ.

• ಮತ್ತೊಂದು Eknath Easwaran ಅವರ The Bhagavad Gita(Classics of Indian Spirituality) (The Blue Mountain centre of meditation, 1985) ಇದು ಯೋಗ, ಧ್ಯಾನದ ಹಿನ್ನೆಲೆಯಲ್ಲಿ ಗೀತೆಯ ಪ್ರಸ್ತುತತೆಯನ್ನು ಗಾಂಧಿಮಾರ್ಗದಲ್ಲಿ ಶೋಧಿಸುತ್ತದೆ.

Georg Feuerstein, Brenda Feuerstein ಅವರ The Bhagavad Gita (Shambhala Publications, 2011) ಕೃತಿಯು ಪಾಂಡಿತ್ಯಪೂರ್ಣವಾಗಿದ್ದು, ಶೈಕ್ಷಣಿಕ, ಅಧ್ಯಯನಾತ್ಮಕ ಉದ್ದೇಶಗಳನ್ನು ಪೂರೈಸುವ ಪದಶಃ ಭಾಷಾಂತರವಾಗಿದೆ.

೪.೪. ಗೀತೆ: ದೇಶಿ ಚಿಂತಕರ ನೋಟಕ್ರಮ

ಬಂಕಿಮಚಂದ್ರ ಚಟರ್ಜಿ: ಗೀತೆ ಮತ್ತು ರಾಷ್ಟ್ರೀಯ ಸಂಕಥನ

ಬಂಕಿಮಚಂದ್ರ ಚಟ್ಟೋಪಾಧ್ಯಾಯರ ಮೂಲಕ ವಸಾಹತುರಾಷ್ಟ್ರಕ್ಕೆ ಪರ್ಯಾಯ ನೈತಿಕ ಬುನಾದಿ ರೂಪಿಸುವುದಕ್ಕಾಗಿ ರಾಷ್ಟ್ರೀಯ ಸಂಕಥನದಲ್ಲಿ ಗೀತೆಯ ಪಠ್ಯವನ್ನು ಸೇರಿಸುವ ಪ್ರಯತ್ನ ಪ್ರಾರಂಭವಾಯಿತು. ಇವರು 'ಭಾರತ ಮಾತೆ', 'ತಾಯಿ ಭಾರತ', 'ತಾಯಿನಾಡು' ಎಂಬ ಪರಿಕಲ್ಪನೆಗಳನ್ನು ಸೃಜಿಸುವ ಮೂಲಕ ರಾಷ್ಟ್ರೀಯ ಚಳುವಳಿಗೆ ಹೆಚ್ಚು ಸ್ಫೂರ್ತಿಯನ್ನು ತುಂಬಿದರು ಮತ್ತು ಕೃಷ್ಣನನ್ನು ಲೌಕಿಕವಾಗಿ ವಿವೇಚನಾಶೀಲ ಮತ್ತು ಅಂತರಂಗದಲ್ಲಿ ಪರಿಪೂರ್ಣ ಆಧ್ಯಾತ್ಮಿಕ ಸ್ವಭಾವದಂತಹ ದೈವೀ ಸ್ವಭಾವದ ಆದರ್ಶವ್ಯಕ್ತಿಯನ್ನಾಗಿ ಕಂಡರು. ಪಾಶ್ಚಾತ್ಯರ ತಂತ್ರಗಾರಿಕೆಯ ಆಧಿಪತ್ಯಕ್ಕೆ ಗೀತೆಯನ್ನು ಉತ್ತರವಾಗಿ ನಿಲ್ಲಿಸಿದರು. ಮತ್ತು ವಸಾಹತುಶಾಹಿ ದಬ್ಬಾಳಿಕೆಯ ಎದುರು ಪಾಶ್ಚಾತ್ಯ ಪಾಂಡಿತ್ಯವನ್ನು ಮುಖಾಮುಖಿಯಾಗಿಸಿದರು. ಹಾಗಾಗಿ ರವೀಂದ್ರನಾಥ ಠಾಗೂರ್ ಅವರು ಇವರನ್ನು 'ವಿಚಾರವಾದಿ ಚಿಂತಕ'(Rationalist thinker) ಎಂದಿದ್ದಾರೆ. ಮತ್ತೊಬ್ಬ ಚಿಂತಕರಾದ ಅರಬಿಂದೋ ಅವರು ಇವರನ್ನು 'ಕವಿ ಮತ್ತು ಶೈಲಿಕಾರ, ಸಂತ ಮತ್ತು ರಾಷ್ಟ್ರೀಯ ನಿರ್ಮಾಪಕ'(poet and stylish, a seer and national builder) ಎಂದು ಕರೆದಿದ್ದಾರೆ. ರಾಷ್ಟ್ರೀಯ ಸಂಕಥನ ಕುರಿತ ವ್ಯವಸ್ಥಿತ ವ್ಯಾಖ್ಯಾನದ ಆರಂಭಕಾರರೊಲ್ಲಬ್ಬರಾದ ಪಾರ್ಥಚಟರ್ಜಿ ಅವರು 'Nationalist thought and the colonial world: A derivative Discourse' ಎಂಬ ತಮ್ಮ ಕೃತಿಯಲ್ಲಿ ಬಂಕಿಮರನ್ನು 'ಆಳಗ್ರಹಿಕೆಯ ವಿವೇಚನಾಶೀಲ ಪೌರ್ವಾತ್ಯವಾದಿ ಚಿಂತಕ'(a thorough-rooted, post-enlightened orientalist thinker) ಎಂದಿದ್ದಾರೆ.

ಬಂಕಿಮರ ಅಪೂರ್ಣ ಧಾರ್ಮಿಕ ಬರವಣಿಗೆ 'ಶ್ರೀಮದ್ಭಗವದ್ಗೀತ' ಬಂಗಾಳಿ ಭಾಷೆಯ (೧೮೮೬–೮೮) 'ಪ್ರಚಾರ ಪತ್ರಿಕೆ'ಯಲ್ಲಿ ಪ್ರಕಟವಾಯಿತು. ಕುತೂಹಲಕರ ಸಂಗತಿಯೆಂದರೆ, ಅವರ ಸುದೀರ್ಘ ಸಾಹಿತ್ಯಿಕ ಜೀವನದಲ್ಲಿ ಅವರು ಅನುವಾದಿಸಿದ ಒಂದೇ ಒಂದು ಪ್ರಾಚೀನ ಕೃತಿಯೆಂದರೆ ಭಗವದ್ಗೀತೆ. ಇವರು ಗೀತೆಯ ಕೇವಲ ನಾಲ್ಕು ಅಧ್ಯಾಯಗಳನ್ನು ಮಾತ್ರ

ವ್ಯಾಖ್ಯಾನಿಸಿದ್ದಾರೆ. ಗೀತೆಯ ಸಂದೇಶವನ್ನು ಪಾಶ್ಚಾತ್ಯ ವಿಧಾನ ಮತ್ತು ಆದರ್ಶಗಳನ್ನು ಅನ್ವಯಿಸಿ ಮರುಶೋಧಿಸುವ ಉದ್ದೇಶದಿಂದ ಈ ವ್ಯಾಖ್ಯಾನ ಬರೆಯತೊಡಗಿದುದಾಗಿ ಹೇಳಿದ್ದಾರೆ.

ಇವರು ಪಾಶ್ಚಾತ್ಯರು ಹೇಳಿರುವ ಜಾಗತಿಕ ತತ್ವಗಳೆಲ್ಲ ತಪ್ಪು, ಸ್ಥಳೀಯ ಪ್ರಾಚೀನ ಪಂಡಿತರದ್ದೆಲ್ಲ ಸರಿ ಎಂದು ಹೇಳುವವರೊಂದಿಗೆ ನನ್ನ ಸಮ್ಮತಿಯಿಲ್ಲ ಎಂಬ ಅಭಿಪ್ರಾಯವನ್ನು ತಳೆದಿದ್ದರು. ಇವರು ಇಂದಿನ ಇಂಗ್ಲಿಷ್ ಶಿಕ್ಷಿತ ಯುವ ಭಾರತೀಯರು ಯೂರೋಪ್ ಜ್ಞಾನವ್ಯವಸ್ಥೆಗೆ ಒಗ್ಗಿರುವುದರಿಂದ ಪಾಶ್ಚಾತ್ಯರ ವೈಜ್ಞಾನಿಕ ಆಶಯ ಅಥವಾ ತಾತ್ವಿಕತೆಯ ಮೂಲಕವೇ ಅವರಿಗೆ ತಿಳಿಸಿಕೊಡುವುದು ಸೂಕ್ತವಾದುದು, ಹಾಗಾಗಿ ಹಳೆಯ ಪ್ರಾಚೀನ ಭಾರತೀಯ ವ್ಯಾಖ್ಯಾನಗಳು ಈ ನಿಟ್ಟಿನಲ್ಲಿ ಪೂರಕವಾಗಲಾರವು ಎಂದು ನಂಬಿದ್ದರು. ಪಾಶ್ಚಾತ್ಯ ಶಿಕ್ಷಣದಲ್ಲಿ ಸಮಗ್ರ ವ್ಯಕ್ತಿತ್ವದ ಬೆಳವಣಿಗೆಗೆ ಅವಕಾಶವಿಲ್ಲ. ಯಾವುದೇ ಒಂದು ವಿಷಯದಲ್ಲಿ ವಿಶಿಷ್ಟತೆ ಗಳಿಸಬೇಕೆಂದು ಒತ್ತು ಹಾಕುತ್ತದೆ. ಉದಾಹರಣೆಗೆ: ಸಾಹಿತ್ಯದಲ್ಲಿ ಆಸಕ್ತನಾದವನು ಸಾಹಿತಿಯೇ ಆಗಬೇಕು. ಹೀಗಾದಾಗ ಅವನು ಅರ್ಧ ಮಾನವನಾಗುವನಷ್ಟೇ ಎಂದೂ ನಂಬಿದ್ದರು.

ಬಂಕಿಮರ ಗೀತೆಯ ವಿವರಣಾತ್ಮಕ ವಿಧಾನವು ಶಂಕರಾಚಾರ್ಯ, ರಾಮಾನುಜಾಚಾರ್ಯ, ಶ್ರೀಧರ ಸ್ವಾಮಿ ಮತ್ತು ಮಧುಸೂಧನ ಸರಸ್ವತಿಯವರ ವ್ಯಾಖ್ಯಾನವನ್ನು ಭಾಗಶಃ ಪ್ರತಿಬಿಂಬಿಸುತ್ತದೆ. ಗೀತೆಯ ಪ್ರತಿಶ್ಲೋಕದ ಸಂದೇಶವನ್ನು ವ್ಯಾಖ್ಯಾನಿಸುವುದರಲ್ಲಿ ಅವರಂಥದೇ ವಿಧಾನವನ್ನು ಅಳವಡಿಸಿಕೊಂಡಿದ್ದಾರೆ. ಇವರು ಅಲ್ಲಿ ಸಾಮಾನ್ಯ ವಿಷಯಗಳನ್ನು ಬರೆಯದೆ, ಕೆಲವೊಮ್ಮೆ ಪದಶಃ ಶ್ಲೋಕಗಳನ್ನು ಉದಾಹರಿಸುತ್ತಾರೆ. ಈ ವಿಧಾನವನ್ನು ಆನಂತರದ ರಾಷ್ಟ್ರೀಯತಾ ಬರಹಗಾರರು ಅಂಗೀಕರಿಸಿದರು. ಗೀತಾ ವ್ಯಾಖ್ಯಾನಗಳನ್ನು ಮಾಡುವಾಗ ಗಾಂಧಿ, ತಿಲಕರು ಇಂಥವೇ ಶೈಲಿ ಅನುಸರಿಸುತ್ತಾರಾದರೂ, ಅವರಿಬ್ಬರು ಶ್ಲೋಕದ ಯಥಾವತ್ತಾದ ಅನುವಾದಗಳಿಗೆ ಸ್ಥೂಲ ಪೀಠಿಕೆಗಳನ್ನು ಬರೆದು ಗೀತೆಯ ತಾತ್ವಿಕತೆಯನ್ನು ಪ್ರಾಚೀನ ಪಠ್ಯಗಳೊಂದಿಗೆ ಹೋಲಿಸುತ್ತಾರೆ.

ಬಂಕಿಮರಿಗೆ ಗೀತೆಯು ಹಿಂದುತ್ವದ ಕೇಂದ್ರಪಠ್ಯವಾಗಿತ್ತು ಮತ್ತು ಅದರ ತಿರುಳನ್ನು ಪಾಶ್ಚಾತ್ಯರ ವೈಜ್ಞಾನಿಕ ವಿಧಾನದ ಮೂಲಕ ಅರ್ಥೈಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಇದರಿಂದ ಭಗವದ್ಗೀತೆಯಲ್ಲಿನ 'ಅನರ್ಹ ಅಂಶ'ಗಳನ್ನು ತೆಗೆದುಹಾಕುವ ಮೂಲಕ ಹಿಂದೂ ನೈತಿಕ ತಾತ್ವಿಕತೆಯನ್ನು ಶುದ್ಧೀಕರಿಸುವುದು ಸಾಧ್ಯ ಮತ್ತು ಆ ಮೂಲಕ ಪ್ರಾಚೀನ ಕೃತಿಗಳ ನೈತಿಕ ಅಂಶಗಳು ಪೂರ್ಣ ವೈಜ್ಞಾನಿಕ ಮತ್ತು ತಾರ್ಕಿಕ ಎಂದು ಜಗತ್ತಿಗೆ ತೋರಿಸಬಹುದು ಎಂದು ಭಾವಿಸಿದ್ದರು. ಇವರು ಈ 'ಹಿಂದೂವಾದದ ಪುನರುಜ್ಜೀವನ'ದ ನೈತಿಕ ಬುನಾದಿ ಭಾರತಕ್ಕೆ ಅಗತ್ಯವಾಗಿರುವುದು ಎಂಬ ನಿಲುವನ್ನು ತಳೆದಿದ್ದರು. "ಹಿಂದುತ್ವದಲ್ಲಿನ 'ಆಹಾರ ಪಾನೀಯಗಳಿಗೆ ಸಂಬಂಧಿಸಿದ ಅರೆಕ್ರೂರ ಕಟ್ಟಳೆಗಳು' ಮೌಢ್ಯಗಳು, ಹಳೆ ಸವಕಲು ವೈರಾಗ್ಯದ ಜೀವನಕ್ರಮ,

ದೋಷಪೂರಿತ ಚರಿತ್ರೆ, ದೋಷಪೂರಿತ ಭೂಗೋಳ ಮತ್ತು ದೋಷಪೂರಿತ ಭೌತವಿಜ್ಞಾನದಿಂದ ಕೂಡಿದ ಸಾಹಿತ್ಯ ಹಾಗೂ ವೈವಿಧ್ಯ ಇವುಗಳನ್ನು ಅಳಿಸಿಹಾಕಬೇಕೆಂಬ ಆಶಯವನ್ನು ಹೊಂದಿದ್ದರು."[೩೦] ಇವರ ಪ್ರಕಾರ ನಂತರದ ಈ ಪ್ರಯತ್ನವನ್ನು ವಿವೇಕಾನಂದ ಮುಂದುವರಿಸಿದರು.

ಬಂಕಿಮರ ಪ್ರಕಾರ ಮಹಾಭಾರತವು ಪ್ರಶ್ನಾತೀತವಾದ ಒಂದು ಐತಿಹಾಸಿಕ ಕೃತಿಯಾಗಿದೆ. ಇದರಲ್ಲಿ ಸಾಕಷ್ಟು ಅಚಾರಿತ್ರಿಕ ಮತ್ತು ಅವೈಜ್ಞಾನಿಕ ಅಂಶಗಳು ಇದ್ದರೂ ಅದು ಉನ್ನತಮಟ್ಟದ ಪೌರಾಣಿಕ ಸಂಚಯವಾಗಿದ್ದರೂ ಮಹಾಭಾರತ ಚಾರಿತ್ರಿಕವಲ್ಲವೆಂದಲ್ಲ. ಐತಿಹಾಸಿಕ ಮತ್ತು ಅಚಾರಿತ್ರಿಕ ಕತೆಗಳು ಅಥವಾ ಸಾಂಕೇತಿಕ ವರ್ಣನೆಗಳು ಬರುವುದು ಭಾರತೀಯ ಚರಿತ್ರೆಯಲ್ಲಿ ಮಾತ್ರವೇ ಏನೂ ಅಲ್ಲ. ಉದಾಹರಣೆಗೆ ಹೆರೊಡಟಸ್‌ನ ಲೈವಿಯಲ್ಲೂ(livy) ಅತಾರ್ಕಿಕ ಕತೆಗಳು ಬಂದರೂ ಅವನ್ನು ಯುರೋಪಿನಲ್ಲಿ ಅಧಿಕೃತ ಚಾರಿತ್ರಿಕ ಪಠ್ಯವೆಂದು ಪರಿಗಣಿಸಲಾಗಿದೆ. ಹಾಗಾಗಿ ಮಹಾಭಾರತದಲ್ಲಿನ ಅಚಾರಿತ್ರಿಕ ಅಂಶಗಳ ಕಾರಣಕ್ಕಾಗಿ ಚರಿತ್ರೆಯ ಮೂಲವಾಗಿ ಅದನ್ನು ಪರಿಗಣಿಸದಿರುವುದು ಸೂಕ್ತವಲ್ಲ. ಹಾಗೆಯೇ ಮಹಾಭಾರತವು ಕಾವ್ಯಶೈಲಿಯಲ್ಲಿ ಅಥವಾ ಪದ್ಯರೂಪದಲ್ಲಿದೆಯೆಂಬ ಕಾರಣಕ್ಕೂ ಅದರ ಚಾರಿತ್ರಿಕತೆಯನ್ನು ತಿರಸ್ಕರಿಸಬಾರದು. ಏಕೆಂದರೆ ಪಾಶ್ಚಾತ್ಯರ ಹಲವು ಐತಿಹಾಸಿಕ ಕೃತಿಗಳು ಪದ್ಯರೂಪದಲ್ಲಿವೆ.

ಮೆಗಾಸ್ತನಿಸ್‌ನ ಭಾರತ ಭೇಟಿಯಲ್ಲಿ ಮಹಾಭಾರತ ಕೃತಿಯನ್ನು ಹೆಸರಿಸದ ಕಾರಣ ಅದು ಆನಂತರ ರಚನೆಯಾಗಿರಬೇಕೆಂಬ Albrecht weberನ ವಾದವನ್ನು ಪೂರ್ವಗ್ರಹ ಪೀಡಿತವೆಂದು ತಿರಸ್ಕರಿಸುತ್ತಾರೆ. ಮಹಾಭಾರತದ ಪಾತ್ರಗಳೆಲ್ಲ ಐತಿಹಾಸಿಕ ಬಿಂಬಗಳು ಅಥವಾ ಆಕೃತಿಗಳಾಗಿವೆ ಎಂಬ ನಿಲುವನ್ನು ಇವರು ತಾಳುತ್ತಾರೆ.

ಬಂಕಿಮರ ಇತಿಹಾಸ ಪ್ರಜ್ಞೆಯ ಪೂರ್ಣ ಅಭಿವ್ಯಕ್ತಿಯನ್ನು ಅವರ 'ಕೃಷ್ಣಚರಿತ್ರೆ'ಯಲ್ಲಿ ಕಾಣಬಹುದಾಗಿದೆ. ಪಠ್ಯಗಳ ನೈಜತೆ ಮತ್ತು ಯುಕ್ತತೆಯನ್ನು ಸಾಬೀತುಪಡಿಸುವುದಕ್ಕೆ ಅವುಗಳ ಇತಿಹಾಸವೂ ಅಗತ್ಯ. ಹಿಂದಿನ ಘಟನೆಗಳನ್ನು ಇತಿಹಾಸವು ನಿರೂಪಿಸುವುದರಿಂದ ವಿಮರ್ಶಾತ್ಮಕ-ತಾರ್ಕಿಕ ಮತ್ತು ವೈಜ್ಞಾನಿಕ ತನಿಖೆ ಸಾಧ್ಯ ಎಂದು ಅವರು ನಂಬಿದ್ದರು. ಬಂಕಿಮರು ತಮ್ಮ ಕೃತಿ 'ಕೃಷ್ಣಚರಿತ್ರೆ'ಯ ೧ನೆಯ ಅಧ್ಯಾಯವನ್ನು ಕುರುಕ್ಷೇತ್ರ ಸ್ಥಳ ಮತ್ತು ಯುದ್ಧ ಅವಧಿಯ ಚಾರಿತ್ರಿಕ ಜಿಜ್ಞಾಸೆಗೆ ಮೀಸಲಿಟ್ಟಿದ್ದಾರೆ. ಪುರಾಣ, ಭಾಗವತ, ಖಗೋಳ ಮತ್ತು ಸಂಸ್ಕೃತ ಆಧಾರಗಳಿಂದ ಅವು ಐತಿಹಾಸಿಕವೆಂಬುದಕ್ಕೆ ಪುರಾವೆಗಳಿವೆ ಎಂದಿದ್ದಾರೆ. ಮಹಾಭಾರತದ ಅರ್ಜುನ, ಫಲ್ಗುಣ, ಕೃಷ್ಣ, ಇಂದ್ರ, ಕುರು, ಪಾಂಚಾಲ ಮುಂತಾದವರು ಮತ್ತು ಅವರ ಹೆಸರುಗಳು ಸಾಂಕೇತಿಕ ಮತ್ತು ಕಾಲ್ಪನಿಕ ಅರ್ಥವನ್ನು ಹೊಂದಿರುವುದು ಸಾಧ್ಯವೆಂದು ಹೇಳಿದ್ದಾರೆ. ಆಶ್ಚರ್ಯವೆಂದರೆ ಶ್ರೀಮದ್ಭಗವದ್ಗೀತ ಅಥವಾ ಕೃಷ್ಣಚರಿತ್ರ ಎರಡರಲ್ಲೂ ಗೀತೆ ಚಾರಿತ್ರಿಕವೇ ಅಲ್ಲವೇ ಎಂಬುದನ್ನು ಖಚಿತಪಡಿಸುವುದೇ ಇಲ್ಲ. ಗೀತೆಯನ್ನು ಮಹಾಭಾರತದೊಂದಿಗಿಟ್ಟು ಅವರು ಮಾಡುವ ವಾದಗಳ ಮೂಲಕ ಗೀತೆಯನ್ನು ಐತಿಹಾಸಿಕ ಪಠ್ಯವೆಂದು ಪರಿಗಣಿಸಿರುವುದು ತಿಳಿಯುತ್ತದೆ.

ಮಹಾಭಾರತದ ಭೀಷ್ಮಪರ್ವದಲ್ಲಿನ 'ಶ್ರೀಮದ್ಭಗವದ್ಗೀತ'(ಭಗವದ್ಗೀತಪರ್ವಧ್ಯಾಯ)ದಲ್ಲಿ ಬರುವ ಪಾತ್ರಗಳು, ವಸ್ತು ಮತ್ತು ಸಂಬಂಧಗಳಲ್ಲಿನ ಸಾಮ್ಯತೆ ನೋಡಿದರೆ ಮಹಾಭಾರತದ ಬೇರ್ಪಡಿಸಲಾಗದ ಭಾಗ ಭಗವದ್ಗೀತೆಯಾಗಿದೆಯೆಂಬುದು ಅರಿವಿಗೆ ಬರುತ್ತದೆ. ಗೀತೆಯ ೩ನೇ ಅಧ್ಯಾಯದ ೧೯, ೨೦ನೇ ಶ್ಲೋಕಗಳು ಮತ್ತು ೩೪, ೩೫, ೩೬, ೩೭ ಅನಂತರ ಕಾಲದ ಸೇರ್ಪಡೆಗಳಾಗಿವೆ. ಏಕೆಂದರೆ ಅವು ಮೂಲದೊಂದಿಗೆ ಮತ್ತು ಕಾವ್ಯದ ಓಘದೊಂದಿಗೆ ಹೊಂದುವುದಿಲ್ಲ ಎಂದಿದ್ದಾರೆ. ಅಲ್ಲದೆ ಮಹಾಭಾರತ ಮತ್ತು ಗೀತೆಯೆರಡೂ ಪ್ರತಿಪಾದಿಸುವ ಧರ್ಮ ಒಂದೇ ಆಗಿದೆ. ಗೀತೆಯಲ್ಲಿನ ಧರ್ಮವನ್ನು ಪ್ರತಿಪಾದಿಸಿರುವುದು ಸ್ವತಃ ಕೃಷ್ಣನೇ ಎಂದಿದ್ದಾರೆ.

ಇತಿಹಾಸವೆಂಬುದು ಸತ್ಯದ ದಾಖಲೆ ಹಾಗೂ ಈ ಐತಿಹಾಸಿಕ ದಾಖಲೆಗಳಲ್ಲಿ ಬರುವ ಕಾಲ್ಪನಿಕ ಅಂಶಗಳು ಲೇಖಕರು ಆಯಾ ಕಾಲಗಳಲ್ಲಿ ಸೇರಿಸಿರುವಂಥವಾಗಿದ್ದು, ಇವನ್ನು ವೈಜ್ಞಾನಿಕ ವಿಧಾನದಿಂದ ಬೇರ್ಪಡಿಸಬಹುದಾಗಿರುತ್ತದೆ. ಈ ರಾಷ್ಟ್ರ ಮತ್ತು ಅದರ ಸಮಾಜೋ–ರಾಜಕೀಯ ಸಂಸ್ಥೆಗಳನ್ನು ನಿಜವಾದ ಇತಿಹಾಸದ ಆಧಾರದ ಮೇಲೆ ಮರುಶೋಧಿಸಬೇಕು ಮತ್ತು ಮರುವ್ಯಾಖ್ಯಾನಿಸಬೇಕು ಎಂಬ ಧೋರಣೆಯನ್ನು ಬಂಕಿಮರು ತಳೆದಿದ್ದರು. ಈ ಹಿನ್ನೆಲೆಯಲ್ಲಿ "ಬಂಕಿಮರ ಪಠ್ಯಗಳು ಮುಖ್ಯವಾಗಿ ಬಂಗಾಳಕ್ಕೆ ರೂಪಿಸಿದಂತವುಗಳಾಗಿವೆ. ಈ ಚೌಕಟ್ಟಿನೊಳಗೆ ಅಂತಾರಾಷ್ಟ್ರೀಯ ಕುರುಹುಗಳು ಸಹ ಕಾಣುತ್ತವೆ. ಆಡಳಿತಶಾಹಿ ಸಂಸ್ಕೃತಿಯಿಂದ ಪ್ರತ್ಯೇಕಿಸಿಕೊಳ್ಳುವ ಮತ್ತು ಆಂತರಿಕವಾಗಿ ಸಾಮೂಹಿಕತೆ ರೂಪಿಸುವ ಪ್ರಯತ್ನ ಅವರ ಪಠ್ಯಗಳಲ್ಲಿ ಕಾಣುತ್ತದೆ."[೩೧]

ಬಂಕಿಮರು ಕೃಷ್ಣನ ಬದುಕನ್ನು ಅವತಾರವೆಂದು ನೋಡುವತ್ತ ಅಷ್ಟೇನೂ ಆಸಕ್ತರಾಗಿರಲಿಲ್ಲ. ಆದರೆ ಆತನ ಸುತ್ತ ಹೆಣೆದ ವಿಶೇಷ ಶಕ್ತಿಗಳನ್ನು ಗಣನೆಗೆ ತೆಗೆದುಕೊಳ್ಳಬಾರದೆಂದು ಭಾವಿಸುತ್ತಾರೆ. ಕೃಷ್ಣನನ್ನು ಈ ಹಿಂದಿನ ಪಠ್ಯಗಳು ಅಲೌಕಿಕ ಮತ್ತು ಮಾಂತ್ರಿಕ ಶಕ್ತಿ ಇರುವವನೆಂಬಂತೆ ಬಿಂಬಿಸಲಾಗಿದೆ. ಕ್ರೈಸ್ತ ಮಿಷನರಿಗಳು ಅವನನ್ನು ತಂತ್ರಗಾರ ಮತ್ತು ತನ್ನ ನೈಜತನವನ್ನು ಮುಚ್ಚಿಡುವ ವ್ಯಕ್ತಿಯಾಗಿ ಬಿಂಬಿಸಿವೆ. ಆದರೆ ಈತ ಪೂರ್ಣವಾಗಿ ತಾರ್ಕಿಕ ಮತ್ತು ಚಾರಿತ್ರಿಕ ವ್ಯಕ್ತಿಯಾಗಿದ್ದಾನೆ ಎಂದು ಹೇಳಿದ್ದಾರೆ. ಅತ್ಯಂತ ದೊಡ್ಡ ಆದರ್ಶವೆಂದರೆ ಸದಾ ಮಾನವನಾಗಿರುವುದು. ಕೃಷ್ಣ ಆದರ್ಶನೀಯ ಏಕೆಂದರೆ ಆತ ಅಸಾಧ್ಯ ಶಕ್ತಿಗಳನ್ನು ಹೊಂದಿದ್ದನೆಂದಲ್ಲ. ಅವನ ಜೀವನ ಮತ್ತು ಕ್ರಿಯೆಗಳ ಮೂಲಕ ಮಾನವ ಪ್ರಕೃತಿಯನ್ನು ಪೂರ್ಣವಾಗಿ ಅಭಿವ್ಯಕ್ತಿಸಿದ್ದಾನೆ. ಕೇವಲ ಕಂಸ ಮತ್ತು ಶಿಶುಪಾಲನ ಹತ್ಯೆಗಾಗಿ ಭೂಮಿ ಮೇಲೆ ಕೃಷ್ಣ ಅವತರಿಸಿದನೆಂಬುದು ಖಂಡಿತವಾಗಿಯೂ ನಂಬಲು ಸಾಧ್ಯ. ಮನುಕುಲಕ್ಕೆ ತಿಳುವಳಿಕೆ ತುಂಬಲು ದೇವರು ಆದರ್ಶಮಾನವನಾಗಿ ಮಾನವರ ಮಧ್ಯೆ ಹುಟ್ಟುತ್ತಾನೆಯೇ ವಿನಾ ಅತಿಮಾನವನಾಗಿ ಈ ಜಗತ್ತಿನಾಚೆಯ ಶಕ್ತಿಗಳನ್ನು ಬಳಸಿಕೊಳ್ಳಲಾರ. ಇವೆಲ್ಲವೂ ಆಧಾರರಹಿತ ಪ್ರಕ್ಷೇಪಗಳು.

ಭಗವದ್ಗೀತೆಯಲ್ಲಿ ಎಲ್ಲೂ ಕೃಷ್ಣ ತನ್ನನ್ನು ದೇವರೆಂದು ಘೋಷಿಸಿ ಕೊಳ್ಳುವುದಿಲ್ಲ. ಕೃಷ್ಣನು ತನ್ನ ಕೆಲಸಗಳನ್ನು ಸಾಕಷ್ಟು ನೋವುಗಳೊಂದಿಗೆ ಸಾಧಿಸುತ್ತಾನೆ. ಇದು ಮಾನವ ಸಹಜ.

ಬಂಕಿಮರ ಪ್ರಕಾರ ಕ್ರಿಸ್ತ ಮತ್ತು ಬುದ್ಧ ಆದರ್ಶ ಮಾನವರಲ್ಲ. ಅವರು ಕೃಷ್ಣನಷ್ಟೇ ಧರ್ಮದ ಬಗ್ಗೆ ಉಪದೇಶಿಸಿದರೂ ಬಡವರು, ಪಾಪಿಗಳ ಉದ್ಧಾರಕ್ಕಾಗಿ ಒತ್ತುಹಾಕಿದರೂ ಸಹ ಅವರದು ಕೇವಲ ಮಾರ್ಗದರ್ಶನ ಕೊಡುವ ಬಗೆಯದು. ಆದರೆ ನಿಜವಾದ ಧರ್ಮ 'ಕ್ರಿಯೆ'ಯಲ್ಲಿರುತ್ತದೆ. ಅವರಿಬ್ಬರೂ ಧರ್ಮರಾಜ್ಯ ಸ್ಥಾಪನೆಗೆ ಶ್ರಮಿಸಿದವರಲ್ಲ. ಆದ್ದರಿಂದ ಅವರು ಆದರ್ಶವ್ಯಕ್ತಿಗಳಲ್ಲ, ಬದಲಿಗೆ ಉತ್ತಮ ವ್ಯಕ್ತಿಗಳು ಅಷ್ಟೇ. ಕೃಷ್ಣನು ಯೇಸು ಮತ್ತು ಚೈತನ್ಯರಂಥಲ್ಲ. ಧರ್ಮ ಬೋಧಿಸುತ್ತಾ ಕಾಲಕಳೆಯಲಿಲ್ಲ. ಈ ಜಗತ್ತಿನ ಸಂಸಾರಿ, ರಾಜಕಾರಣಿ, ವೀರ, ಶಿಕ್ಷೆ ವಿಧಿಸುವವನು, ಕೃಷ್ಣನು ನಮ್ಮ ದೇಶ ಮತ್ತು ನಾಗರಿಕರಿಗೆ ಮಾದರಿಯಾಗತಕ್ಕವನು ಎಂದು ಹೇಳಿದ್ದಾರೆ.

ಬಂಕಿಮರು ಕೃಷ್ಣ ಮತ್ತು ಹಿಂದೂಧರ್ಮದ ಬಗ್ಗೆ ಅಪಾರ ಶ್ರದ್ಧೆ ಹೊಂದಿದ್ದರು. ಇವರು ಪಾಶ್ಚಾತ್ಯ ವೈಜ್ಞಾನಿಕ ತಾರ್ಕಿಕ ವಿಧಾನದ ಮೇಲೆ ಪೂರ್ಣವಾಗಿ ವಿಶ್ವಾಸ ಹೊಂದಿದ್ದಾಗ್ಯೂ ಅಲ್ಲಿನ ರಾಜಕೀಯ ಆಲೋಚನೆಗಳು, ಪ್ರಜ್ಞೆಗಳು ಅವರ ಚಿಂತನೆಯನ್ನು ಪ್ರಭಾವಿಸಲಿಲ್ಲ.

ಆ ಕಾಲದ ಎಲ್ಲ ಸುಧಾರಕರಂತೆ ಬಂಕಿಮರೂ ಮಿಷನರಿಗಳ ಹಿಂದುತ್ವ ವಿಕಾಸದ ಚಿಂತನೆಗೆ ಪ್ರತಿಕ್ರಿಯೆ ನೀಡುತ್ತಿದ್ದರು. ಮಿಷನರಿಗಳು ಹಿಂದೂಧರ್ಮದ ಒಂದು ಕೃತಿ, ಒಬ್ಬ ಪ್ರವಾದಿ ಮತ್ತು ಅವುಗಳ ಚಾರಿತ್ರಿಕ ಬೇರುಗಳನ್ನೇ ಹುಡುಕುತ್ತಿದ್ದರು. ಮಿಷನರಿಗಳ ವಿಮರ್ಶೆಗಳಿಗೆ ಗೀತೆ ಮತ್ತು ಕೃಷ್ಣ ಮತ್ತೆ ಮತ್ತೆ ಬಳಕೆಯಾಗುತ್ತಿತ್ತು. ಬಂಕಿಮರನ್ನೊಳಗೊಂಡಂತೆ ನಮ್ಮ ರಾಷ್ಟ್ರೀಯತಾವಾದಿಗಳು ಈ ಎರಡರ ಸಮರ್ಥನೆಗೆ ತೊಡಗುತ್ತಿದ್ದರು. ಬಂಕಿಮಚಂದ್ರ ಕೃತಿಗಳು "ಪೌರಾತ್ಯ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳ ಸಮನ್ವಯವನ್ನು ಸಾಧಿಸುವಂತೆಯೇ ಬ್ರಿಟಿಷರ ಅಂಧಾನುಕರಣೆಯನ್ನು, ಹಾಗೆ ಮಾಡುವ ಅಲ್ಪಜ್ಞಾನಿಗಳನ್ನು ಕಟುವ್ಯಂಗ್ಯಕ್ಕೆ ಗುರಿಪಡಿಸುವುದನ್ನು ಕಾಣುತ್ತೇವೆ. 'ಇಂಗ್ಲೀಷ್‌ನ ಸ್ತೋತ್ರ', 'ಬಾಬು', ಗರ್ಧಭ', ರಾಮಾಯಣದ ಸಮಾಲೋಚನೆ', 'ಒಬ್ಬ ಸ್ಪೆಷಲ್‌ನ ಪತ್ರ', ಮೊದಲಾದ 'ಲೋಕರಹಸ್ಯ' ಎಂಬ ಬರಹದ ಅಡಿಯಲ್ಲಿ ಬರುವ ಈ ಮೇಲಿನ ಲಘುಬರಹಗಳನ್ನು ಪಾಶ್ಚಾತ್ಯರು ಭಾರತೀಯ ಸಂಸ್ಕೃತಿಯನ್ನು ಗ್ರಹಿಸದ ಅವಿವೇಕಿತನವನ್ನು ವಿಡಂಬಿಸಿ"[೨]ರುವುದನ್ನು ಕೆ.ಸಿ ಶಿವಾರೆಡ್ಡಿಯವರು ತಮ್ಮ ಕೃತಿಯಲ್ಲಿ ದಾಖಲಿಸಿದ್ದಾರೆ.

ಹಿಂದೂವಾದವನ್ನು ವೈಜ್ಞಾನಿಕವಾಗಿ ವ್ಯಾಖ್ಯಾನಿಸಲಿಲ್ಲವೆಂದಾದರೆ ಯೂರೋಪಿಯನ್ನರು ಮತ್ತು ಶಿಕ್ಷಿತ ಬೆಂಗಾಲಿಗಳಿಂದ ಅದು ತಿರಸ್ಕೃತಗೊಳ್ಳಬಹುದೆಂಬುದು ಅವರ ಅನಿಸಿಕೆಯಾಗಿತ್ತು. ಆ ಮೂಲಕ ಹಿಂದುತ್ವಕ್ಕೆ ತಾರ್ಕಿಕ ತಾತ್ವಿಕತೆಯನ್ನು ನಿರ್ಮಿಸುತ್ತ ಅವರ ಪಾರಮ್ಯತೆಯನ್ನು ಸ್ಥಾಪಿಸಬಹುದೆಂದು ನಂಬಿದ್ದರು. ಬಂಕಿಮರು ವಾದಿಸುವಂತೆ ಹಿಂದುತ್ವದ ಪಾರಮ್ಯವಿರುವುದು

ಆತ್ಮವನ್ನು ಪರಮಾತ್ಮನೊಂದಿಗೆ ಸಾಹಚರ್ಯವೇರ್ಪಡಿಸುವುದರಲ್ಲಿ. ಉಳಿದ ಧರ್ಮಗಳಲ್ಲಿ ಈ ಆಲೋಚನೆಯ ಕೊರತೆಯಿದೆ. ವಿಜ್ಞಾನವೂ ಸಹ ಆತ್ಮದ ಕುರಿತು ತಾರ್ಕಿಕ ತತ್ವ ರೂಪಿಸುವುದರಲ್ಲಿ ಸೋತಿದೆ. ನಶಿಸಬಹುದಾದ ದೇಹದಲ್ಲಿ ಆತ್ಮದ ಅಸ್ತಿತ್ವಕ್ಕೆ ನಾವೇ ಸಾಕ್ಷಿ. ಬಂಕಿಮರ ಪ್ರಕಾರ ವೇದಗಳು ಮತ್ತು ಗೀತೆ ಆತ್ಮದ ಸಾಕ್ಷ್ಯಗಳನ್ನು ಒದಗಿಸಿವೆ.

ಧಾರ್ಮಿಕ ಮತ್ತು ತಾತ್ವಿಕ ಸ್ವರೂಪದ ಸಂದೇಹಗಳನ್ನು ವಿಜ್ಞಾನ ಕೆಲವೊಮ್ಮೆ ಪರಿಹರಿಸಲಾರದು. ಏಕೆಂದರೆ ಈ ಎರಡರ ಪುರಾವೆ ದಾಖಲೆಗಳು ಬೇರೆಯೇ. ಹಾಗಾಗಿ ಪ್ರತಿ ವಿಷಯವೂ ತನ್ನದೇ ಯುಕ್ತ ಪುರಾವೆಗಳನ್ನು ಹೊಂದಬೇಕಿರುತ್ತದೆ. ಹಾಗಾಗಿ ಜರ್ಮನ್ ವಿದ್ವಾಂಸ ಇಮಾನ್ಯುಯಲ್ ಕ್ಯಾಂಟ್ 'ಆತ್ಮದ ಸಾಬೀತಿಗೆ ಅನುಭವಾತೀತ ಜ್ಞಾನವೇ ಒಂದು ಸಾಕ್ಷ್ಯ' ಎಂದು ಹೇಳಿದ್ದಾರೆ.

ಆತ್ಮದ ಕುರಿತ ಎಲ್ಲ ಸಿದ್ಧಾಂತಗಳಲ್ಲೂ ಕೆಲವು ಮಿತಿಗಳಿರುವುದರಿಂದ, ಬಂಕಿಮರು ಪಾಶ್ಚಾತ್ಯ ವಿಜ್ಞಾನಗಳ ಕುರಿತು ಚರ್ಚಿಸಿದ ನಂತರ ವ್ಯಕ್ತಿಯು ತನ್ನ ಹೃದಯದಲ್ಲಿ ಆತ್ಮನ ಅಸ್ತಿತ್ವವನ್ನು ನಂಬುವುದೇ ಪ್ರಮಾಣ. ಭಕ್ತನಿಗೆ ಈ ಎಲ್ಲಾ ವಾಗ್ವಾದಗಳ ಅಗತ್ಯವಿಲ್ಲ. ಯಾವುದೇ ವೈಜ್ಞಾನಿಕ ಸಿದ್ಧಾಂತವೂ ಮರುಜನ್ಮವನ್ನು ಸಮರ್ಥಿಸಲಾರವು. ಆದಾಗ್ಯೂ ಸಾವಿನ ನಂತರ ಆತ್ಮದ ಪುನರ್ಜನ್ಮದ ಸಾಧ್ಯತೆಯನ್ನು, ತಾರ್ಕಿಕ ಪುರಾವೆಯ ಕೊರತೆಯ ಕಾರಣಕ್ಕೆ ನಿರಾಕರಿಸಲಾಗದು. ಇಲ್ಲಿನ ಅಧಿಕೃತ ಪಠ್ಯಗಳು ಹಲವು ಸತ್ಯ ಸಾಕ್ಷ್ಯಗಳನ್ನು ಒದಗಿಸುತ್ತವೆ ಎಂದಿದ್ದಾರೆ.

ಬಂಕಿಮರು ವಿಜ್ಞಾನದ ಸಾರ್ವಭೌಮತ್ವವನ್ನು ನಿರಾಕರಿಸುತ್ತಾರೆ. ಪಾರಂಪರಿಕವಾದ ಎಲ್ಲವನ್ನು ವೈಜ್ಞಾನಿಕ ತನಿಖೆಯಿಂದ ಇಲ್ಲವಾಗಿಸುವ ಪ್ರಯತ್ನ ಪೂರ್ವಗ್ರಹ ಪೀಡಿತವಾದುದು ಎಂದು ನಂಬುತ್ತಾರೆ. ಪ್ರತಿಯೊಂದು ಜೀವಿಗೂ ತನ್ನದೇ ವಿಶಿಷ್ಟತೆಯಿದ್ದು ಮಾನವನಿಗೆ ಮಾನವೀಯತೆಯೇ ವಿಶಿಷ್ಟ ಲಕ್ಷಣ. ಮಗುವನ್ನು ಸೂಕ್ತ ಶಿಕ್ಷಣದ ಮೂಲಕ ನಿಜ ಮಾನವೀಯತೆಯನ್ನು ಅದು ಬೆಳೆಸಿಕೊಳ್ಳುವಂತೆ ಮಾಡಬಹುದು. ಈ ಪೋಷಣೆ ಅಥವಾ ಶಿಕ್ಷಣ ಎರಡು ಬಗೆಯದು. ಭೌತಿಕ ಅಥವಾ ಶಾರೀರಿಕ ಮತ್ತು ಮಾನಸಿಕ. ಎಲ್ಲ ಬಗೆಯಿಂದಲೂ ಅವನಲ್ಲಿ ಪ್ರಬುದ್ಧತೆ, ಮಾನವೀಯತೆ ಬೆಳೆದ ಸ್ಥಿತಿಯಲ್ಲಿ ಅವನು ನಿಜಮಾನವ. ಧರ್ಮಸ್ಥಾಪನೆಗೆ ಇಂಥ ಮಾನವರು ಅಗತ್ಯ. ಮತ್ತು ಧರ್ಮವು ಸಹ ವ್ಯಕ್ತಿಗಳಲ್ಲಿ ಯುಕ್ತ, ಸಾಮರಸ್ಯ, ಸಂವೇದನೆಗಳನ್ನು ಬೆಳೆಸಬೇಕಿರುತ್ತದೆ ಎಂದು ಹೇಳುತ್ತಾರೆ.

ಮಾನವತಾವಾದ ಎಂದರೆ ಮನುಷ್ಯನಲ್ಲಿ ಸಂಸ್ಕೃತಿ ಮೂಡಿಸುವುದು. ಧರ್ಮವೆಂದರೆ ಮಾನವತ್ವದಲ್ಲಿನ ಆನಂದ. ಮನುಷ್ಯನಲ್ಲಿ ಎಲ್ಲ ರೀತಿಯ ಪ್ರಜ್ಞೆ, ಪ್ರಬುದ್ಧತೆ, ಅರಿವು ಅಪೂರ್ಣ. ಅವನಲ್ಲಿ ಭಕ್ತಿಯುಲ್ಲವೆಂದಾದರೆ ಈ 'ಭಕ್ತಿ' ಅವಸ್ಥೆಯಲ್ಲಿ ಮನುಷ್ಯನ ಎಲ್ಲ ಶಕ್ತಿಗಳೂ ದೇವರೆಡೆಗೆ

ತಿರುಗುತ್ತವೆ. ಭಕ್ತಿಯೆಂಬುದು ಸಾಮಾಜಿಕ ಗುಣವೂ ಹೌದು. ಸಾಮಾಜಿಕತೆ ಮತ್ತು ನೈತಿಕತೆಯನ್ನು ಹೊಂದುವುದೂ ಮತ್ತು ಸಾಮಾಜಿಕ ಸೇವೆಯಲ್ಲಿ ತೊಡಗುವುದೂ ಭಕ್ತಿಯೇ.

ವಿಶೇಷವೆಂದರೆ ಬಂಕಿಮರು ಗೀತೆಯ ಕರ್ಮಯೋಗಕ್ಕಿಂತಲೂ ಭಕ್ತಿಯೋಗಕ್ಕೆ ಆದ್ಯತೆ ನೀಡುತ್ತಾರೆ. ಇವರ ಪ್ರಕಾರ ಗೀತೆಯು ಭಕ್ತಿಪಥ್ಯ. ಆದಾಗ್ಯೂ ಇಲ್ಲಿ ಭಕ್ತಿಯೆಂದರೆ ವೈರಾಗ್ಯ ಅಥವಾ ಎಲ್ಲ ಕ್ರಿಯೆಗಳನ್ನು ಪರಿತ್ಯಜಿಸುವ ಆತ್ಮಸಂಯಮವಲ್ಲ. ಕರ್ಮಯೋಗವೆಂದರೆ ಭಕ್ತಿಯೋಗದ ಆಚರಣೆಯಷ್ಟೆ. ಮನುಷ್ಯ ಪರಿಪೂರ್ಣನಾಗುವುದಕ್ಕೆ ಆತನ ಪ್ರಯತ್ನ ಅತ್ಯಾವಶ್ಯಕ. ದೇವರು ಅನಂತ ನಿರ್ಗುಣಿಯಾಗಿರುವುದರಿಂದ ಧರ್ಮ ಸಾಕ್ಷಾತ್ಕಾರಕ್ಕೆ ದೇವರು ಸಾಮಾನ್ಯ ಮಾನವನಿಗೆ ಆದರ್ಶವಾಗಲಾರ. ಹೀಗಾಗಿ ಧಾರ್ಮಿಕ ಇತಿಹಾಸದಲ್ಲಿನ ಕೃಷ್ಣನಾದ ಸದ್ಗುಣ ವ್ಯಕ್ತಿಗಳನ್ನು ಅನುಸರಿಸುವ ಮೂಲಕ ಅತ್ಯುನ್ನತ ಗುಣಗಳನ್ನು ಸಾಧಿಸಬಹುದು.

ವ್ಯಕ್ತಿ ಹೊಂದಿರುವ ಧರ್ಮವೇ ಅವನ ಸ್ವಧರ್ಮವೂ ಆಗಿರುತ್ತದೆ. ಇಲ್ಲಿ ಸ್ವಧರ್ಮವೆಂದರೆ ಗೀತೆಯಲ್ಲಿ ಹೇಳಿರುವ ಸ್ವಧರ್ಮವೇ ವಿನಾ ಮನುಸ್ಮೃತಿಯ ಸಮಾಜದ ನಾಲ್ಕು ವರ್ಣವಿಭಾಗಗಳ ಸ್ವಧರ್ಮವಲ್ಲ. ಇವು ಗೀತೆಯ ಆಶಯಕ್ಕೆ ವಿರುದ್ಧವಾಗಿವೆ. ಹೀಗಾಗಿ ಶಂಕರರೂ ಸೇರಿದಂತೆ ಆಧುನಿಕಪೂರ್ವ ಎಲ್ಲ ವ್ಯಾಖ್ಯಾನಗಳೂ ಆಕ್ಷೇಪಾರ್ಹ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕೂ ಸಾಮಾಜಿಕ ಚಟುವಟಿಕೆಗಳನ್ನು ನಿರ್ಣಯಿಸುವುದಲ್ಲ. ವ್ಯಕ್ತಿಗಳ ಭೌತಿಕ ಮತ್ತು ಮಾನಸಿಕ ಪ್ರಬುದ್ಧತೆಯಾಧಾರದ ಮೇಲೆ ಅವರೇ ಆರಿಸಿಕೊಳ್ಳುವಂಥವು. ವಂಶಪಾರಂಪರಿಕವೆಂಬುದು ತಪ್ಪು. ಉದಾಹರಣೆಗೆ ದ್ರೋಣಾಚಾರ್ಯ, ಪರಶುರಾಮ, ಕೃಪಾಚಾರ್ಯ, ಅಶ್ವತ್ಥಾಮ ಮೊದಲಾದವರು ಬ್ರಾಹ್ಮಣರಾಗಿದ್ದರೂ ಅವರ ಸಾಮರ್ಥ್ಯ ಯುದ್ಧ ಅಥವಾ ಕ್ಷತ್ರಿಯ ಚಟುವಟಿಕೆಗಳಲ್ಲಿಯೂ ತೊಡಗಿಸಿತ್ತು.

ಬಂಕಿಮರು ಹೇಳುವಂತೆ ಗೀತೆಯಲ್ಲಿ ಬರುವ ಕರ್ಮ ಪರಿಕಲ್ಪನೆಯು ವೈದಿಕ ಚಿಂತನೆಯ ಕರ್ಮಕ್ಕಿಂತಲೂ ಭಿನ್ನವಾದುದು. ಗೀತೆಯಲ್ಲಿ ಕರ್ಮವೆಂಬುದು ಜೀವನದಲ್ಲಿ ಯಾರೂ ತಪ್ಪಿಸಲಾಗದ ನಿಯಮವದು ಹಾಗೂ ಅದು ದೇಹ ಮತ್ತು ಬುದ್ಧಿ ಘಟಕಗಳನ್ನು ಬಳಸಿಕೊಂಡು ವ್ಯಕ್ತಿ ಆಚರಿಸುವ ಸ್ವಧರ್ಮವಾಗಿದೆ. ಯುದ್ಧವೂ ಸೇರಿದಂತೆ ಎಲ್ಲ ಕ್ರಿಯೆಗಳನ್ನು ಸ್ವಧರ್ಮದ ಭಾಗವಾಗಿ ನಿರ್ವ್ಯಾಮೋಹದಿಂದ ಮಾಡುವುದು ಸಾಧ್ಯವಿದೆ. ಸ್ವಾರ್ಥರಹಿತವಾಗಿರುವ ಕರ್ಮವೇ ಭಕ್ತಿ, ಭಕ್ತಿಯೇ ಕರ್ಮ.

“ತಿಲಕ್, ವಿವೇಕಾನಂದ ಮತ್ತು ಗಾಂಧಿಯಂಥ ರಾಷ್ಟ್ರೀಯವಾದಿ ಬರಹಗಾರರಂತೆ ಬಂಕಿಮರು ವ್ಯವಸ್ಥಿತ ಮತ್ತು ಬೌದ್ಧಿಕ ಸಿದ್ಧಾಂತವನ್ನು ಗೀತೆಯ ನಿಷ್ಕಾಮಕರ್ಮದ ಬಗ್ಗೆ ಮಂಡಿಸಲಿಲ್ಲ... ಆದರೆ ಇವರು ನಿಷ್ಕಾಮಕರ್ಮಿಯು ತನ್ನ ಕರ್ತವ್ಯವನ್ನು, ಸ್ವಧರ್ಮವನ್ನು ಯಾವುದೇ ಸ್ವಲಾಭಕ್ಕಾಗಿ ಮಾಡಬಾರದು ಎಂದು ಹೇಳಿದ್ದಾರೆ. ನಿಷ್ಕಾಮಕರ್ಮವು ದೇವರ ಆರಾಧನೆಯನ್ನು ಎರಡು ರೂಪದಲ್ಲಿ ಒಳಗೊಳ್ಳುತ್ತದೆ: ೧. ಪ್ರಕೃತಿದತ್ತವಾದ ದೈಹಿಕ ನಿತ್ಯ

ಕರ್ಮಗಳ ಕ್ರಿಯೆಗಳು, ೨. ಸ್ವಭಾವಕ್ಕೆ ಹೊಂದುವ ಸ್ವಧರ್ಮವನ್ನು ಆಚರಿಸುವ ಕ್ರಿಯೆಗಳು. ಇವನ್ನು ಅನುಸರಿಸುವ ಮೂಲಕ ಮತ್ತು ತಮ್ಮ ಕ್ರಿಯೆಗಳಲ್ಲಿ ದೇವರ ನಿಯಮಗಳನ್ನು ಅಳವಡಿಸಿಕೊಳ್ಳುವ ಮೂಲಕ ತರತಮವಿಲ್ಲದಿರುವುದು ಮತ್ತು ಎಲ್ಲ ಜೀವಿಗಳನ್ನೂ ಒಂದೇ ರೀತಿ ಕಾಣುವುದು ಮತ್ತು ಎಲ್ಲರ ಕಲ್ಯಾಣಕ್ಕಾಗಿ ಕರ್ಮದಲ್ಲಿ ತೊಡಗುವುದನ್ನು ರೂಢಿಸಿಕೊಳ್ಳಬೇಕು"[೩೩] ಎಂಬ ಬಂಕಿಮರ ಅಭಿಪ್ರಾಯವನ್ನು ನಾಗಪ್ಪಗೌಡ ಅವರು ತಮ್ಮ ಕೃತಿಯಲ್ಲಿ ವಿವರಿಸಿದ್ದಾರೆ.

ನಿಷ್ಕಾಮಕರ್ಮದ ತತ್ವಗಳು ಉದ್ದೇಶರಹಿತವೇನಲ್ಲ. ಲೋಕಕಲ್ಯಾಣ, ಸಮಾಜ/ದೇಶ ಕಲ್ಯಾಣದ ಕೆಲಸಗಳಿಗೆ ಉದ್ದೇಶವಿದ್ದೇ ಇರುತ್ತದೆ. ಆದರೆ ಅವು ಸ್ವಾರ್ಥರಹಿತವೆಂದೇ ತಿಳಿಯಬೇಕು. ತನ್ನ ಘನತೆ, ಗೌರವ, ಸ್ಥಾನಮಾನಕ್ಕಾಗಿ ಈ ರೀತಿಯ ಕೆಲಸಗಳಲ್ಲಿ ತೊಡಗಿದರೆ ಅದು ಸ್ವಾರ್ಥಪೂರಿತ. ಜನಕಲ್ಯಾಣಕ್ಕೆ ತಮ್ಮನ್ನು ಅರ್ಪಿಸಿಕೊಂಡರೆ ಅದು ಧರ್ಮಕಾರ್ಯವೂ ಹೌದು, ದೇವರ ಕಾರ್ಯವೂ ಹೌದು. ನಿಷ್ಕಾಮಕರ್ಮಿ ಕ್ರಿಯಾಶೀಲ ವ್ಯಕ್ತಿ ಹಾಗೇ ಮಹತ್ವಾಕಾಂಕ್ಷಿ. ಅವನು ಕೆಲಸ(ಕರ್ಮ)ಗಳನ್ನು ಪ್ರಾಮಾಣಿಕ ಬೌದ್ಧಿಕತೆ(ಜ್ಞಾನ) ಮತ್ತು ಶುದ್ಧ ಹೃದಯ(ಭಕ್ತಿ)ದೊಂದಿಗೆ ಮಾಡುತ್ತಾನೆ. ಆಧುನಿಕ ಭಾರತಕ್ಕೆ ಕೃಷ್ಣ ವ್ಯಕ್ತಿತ್ವದ ಸ್ವಧರ್ಮಿಗಳೂ ಮತ್ತು ನಿಷ್ಕಾಮಕರ್ಮಿಗಳೂ ಆದರ್ಶವಾಗಬೇಕು ಎಂಬುದು ಬಂಕಿಮರ ಅಭಿಪ್ರಾಯವಾಗಿದೆ.

ಬಂಕಿಮರು ಹಿಂಸೆ ಮತ್ತು ಅಹಿಂಸೆಗೆ ಹೊಸ ವ್ಯಾಖ್ಯಾನವೊಂದನ್ನು ನೀಡಲು ಪ್ರಯತ್ನಿಸಿದ್ದಾರೆ. ಅದನ್ನು ಗೀತೆಗೆ ಅನ್ವಯಿಸಿ ನೋಡಲು ಪ್ರಯತ್ನಿಸಿದ್ದಾರೆ. ಎಲ್ಲ ಸಂದರ್ಭಗಳಲ್ಲೂ ಅಹಿಂಸೆ ಅಸಾಧ್ಯ. ಅನಗತ್ಯವಾದಾಗ ಹಿಂಸೆಯಲ್ಲಿ ತೊಡಗಬಾರದಷ್ಟೇ. ದೇಶ, ಜನ, ಸಮಾಜ, ಮಾನವೀಯತೆಯ ಕಾರಣದಿಂದ ಮಾಡುವ ನಿಷ್ಕಾಮಪ್ರೇರಿತ ಹಿಂಸೆಗಳು ಕ್ಷಮ್ಯವೇ. ಪಾಪಿಯನ್ನು ಕೊಂದರೆ ಅದರ ಪಾಪ ಪಾಪಿಗಷ್ಟೇ. ಹಾಗೆ ಕೊಲ್ಲುವುದೂ ಧರ್ಮವೇ. "ಅರ್ಜುನ ಮಾಡಿದ್ದು ಧರ್ಮಯುದ್ಧ. ಕ್ಷತ್ರಿಯನಿಗೆ ಇದೇ ನಿಜವಾದ ಸ್ವಧರ್ಮ... ನಿಸ್ವಾರ್ಥಿಗೆ ಧರ್ಮ ಮತ್ತು ವಿಶ್ವಕಲ್ಯಾಣದ ಉದ್ದೇಶವಿದ್ದಾಗ ಹಿಂಸೆ ಒಪ್ಪುವಂಥದ್ದು"[೩೪] ಎಂದು ಗೀತೆಯಲ್ಲಿನ ಯುದ್ಧದ ಹಿಂಸೆಯನ್ನು ಸಮರ್ಥಿಸಿದ್ದಾರೆ.

ಇವರ ಪ್ರಕಾರ ಸ್ವರಕ್ಷಣೆಗೆ ಮತ್ತು ಸಮಾಜದ ರಕ್ಷಣೆಗೆ ರಾಷ್ಟ್ರವೆಂಬುದು ಬೇಕು. ರಾಷ್ಟ್ರದ ಮೂಲಕವೇ ಮಾನವೀಯತೆಯ ಸಂಸ್ಕೃತಿ ಬೆಳವಣಿಗೆಯಾಗುತ್ತದೆ. ಹೀಗಾಗಿ ರಾಷ್ಟ್ರದ ರಕ್ಷಣೆ, ಮಾತೃಭೂಮಿಯ ರಕ್ಷಣೆ ಅಗತ್ಯ. ಏಕೆಂದರೆ ಅದು ಸ್ವ ಮತ್ತು ಸಮಾಜ ಎರಡನ್ನೂ ಪಾಲಿಸುತ್ತದೆ. ಧರ್ಮ ಬೆಳೆಯಬೇಕಾದರೆ ರಾಷ್ಟ್ರವು ಸ್ವತಂತ್ರವಾಗಿರಬೇಕು. ರಾಷ್ಟ್ರೀಯತೆಯು ವಿಶ್ವಾತ್ಮಕ ಪ್ರೀತಿಯ ಭಾಗ. ನಮಗೆ ಎಲ್ಲರೂ ಸಮಾನರು. ಆದರೆ ಅನ್ಯರು ನಮ್ಮನ್ನು ಆಕ್ರಮಿಸುವುದು ಅಧರ್ಮ. ಆಗ ಅದನ್ನು ಸಹಿಸಬಾರದು. ದೇಶಾಭಿಮಾನ ಅತ್ಯಂತ ದೊಡ್ಡದು. ದೇಶದ ರಕ್ಷಣೆಯು ದೈವಪ್ರೇರಿತವಾದುದು. ಜಗತ್ತಿನ ಒಳಿತಿನ ಉದ್ದೇಶದಿಂದ ಮಾತೃಭೂಮಿ ರಕ್ಷಣೆ ಕರ್ತವ್ಯವಾಗಬೇಕು.

ಭಾರತದ ಜನರಲ್ಲಿ ಇವರು ರಾಷ್ಟ್ರೀಯತೆಯ ಬೀಜವನ್ನು ಬಿತ್ತಲು ಪ್ರಯತ್ನಿಸುತ್ತಾ, ಬ್ರಿಟಿಷರು ಭಾರತವನ್ನು ಆಕ್ರಮಿಸುವುದಕ್ಕೆ ಯಾವುದೇ ಸಮರ್ಥನೀಯ ಕಾರಣಗಳಿಲ್ಲ ಹಾಗಾಗಿ ಅವರನ್ನು ಓಡಿಸಬೇಕು ಎನ್ನುತ್ತಾರೆ. ಅವರ ಗಡಿ ವಿಸ್ತರಣೆ ಮತ್ತು ಶಕ್ತಿ ಪ್ರದರ್ಶನ ತಪ್ಪು; ಅವರ ಈ ಬಗೆಯ ಅಂಧಾಭಿಮಾನದಿಂದ ವಿಶ್ವಪ್ರೇಮಕ್ಕೆ ಅಡ್ಡಿಯಾಗಿದೆ; ಅವರ ಈ ಅಪರಾಧದಿಂದಾಗಿ ನಾಯಿಗಳಂತೆ ಗಡಿಗಳಿಗಾಗಿ ಕಚ್ಚಾಡುವಂತಾಗಿದೆ; ದುರ್ಬಲರನ್ನು ಬಳಸಿಕೊಳ್ಳಲಾಗುತ್ತಿದೆ ಎಂಬ ಎಚ್ಚರಿಕೆಯನ್ನು ತುಂಬಿದ್ದಾರೆ.

ಬಂಗಾಳದಲ್ಲಿ ಬ್ರಹ್ಮಸಮಾಜವು ಪ್ರತಿಪಾದಿಸಿದ್ದ ನವಹಿಂದೂವಾದದ ಆಶಯವಾದ ಮೂರ್ತಿಪೂಜೆ ಖಂಡನೆಯನ್ನು ಇವರು ಎತ್ತಿಹಿಡಿದು, ಹಿಂದೂಗಳಲ್ಲಿ ಮೂರ್ತಿ ಆರಾಧನೆಯೆಂಬುದು ಅನಂತನಾದ ದೇವರನ್ನು ಕಲ್ಪಿಸಿಕೊಳ್ಳುವ ಪ್ರಕ್ರಿಯೆಯಷ್ಟೇ ಎಂದರು. ದೇವರನ್ನು ಭಿನ್ನರೂಪಗಳಲ್ಲಿ ಆರಾಧಿಸುವುದು ಸಾಂಸ್ಕೃತಿಕ ಭಿನ್ನತೆಯಿಂದಾಗಿ. ಗೀತೆಯೇ ಹೇಳಿರುವಂತೆ ಯಾವುದೇ ರೂಪದಲ್ಲಿ ಪೂಜಿಸುವುದು ಉನ್ನತಿಗೇರುವ ಮೊದಲ ಹೆಜ್ಜೆ. ಕೇವಲ ತನ್ನ ಇಂದ್ರಿಯಗಳನ್ನು ಅನುಸರಿಸುತ್ತಾ ಯಾವುದೇ ಮೂರ್ತಿಯನ್ನು ಆರಾಧಿಸದಿರುವುದನ್ನು ಗೀತೆ ಒಪ್ಪುತ್ತದೆ ಎಂದಿದ್ದಾರೆ.

ಬಂಕಿಮರ ಪ್ರಕಾರ ಹಿಂದೂಧರ್ಮ ಶ್ರೇಷ್ಠವಾದುದು. ಗೀತೆಯ ೪ನೇ ಅಧ್ಯಾಯದ ೧೧ನೇ ಶ್ಲೋಕ ಹೇಳುವಂತೆ ಹಿಂದೂಧರ್ಮದಷ್ಟು ಉದಾರವಾದ ಧರ್ಮ ಮತ್ತೊಂದಿಲ್ಲ. ಮೂರ್ತಿ ಆರಾಧನೆ ಮತ್ತು ನಿರಾಕಾರತೆ, ಬಾಹುಳ್ಯತೆ ಮತ್ತು ಏಕದೇವತಾರಾಧನೆ ನಡುವೆ ಗೀತೆಯು ಸಂಬಂಧವೇರ್ಪಡಿಸುವ ಮೂಲಕ ಹಿಂದೂಧರ್ಮವನ್ನು ಜಗತ್ತಿನ ಧರ್ಮಗಳ ನಡುವೆ ವಿಶ್ವಾತ್ಮಕ ಧರ್ಮವನ್ನಾಗಿಸಿದೆ.

ಬಂಕಿಮರ ಪ್ರಕಾರ ಗೀತೆಯಲ್ಲಿ ಅರ್ಜುನ, ಫಲ್ಗುಣ, ಕೃಷ್ಣ, ಇಂದ್ರ, ಕುರು, ಪಾಂಚಾಲ ಮೊದಲಾದ ಹೆಸರುಗಳು ಸಾಂಕೇತಿಕ, ಕಾಲ್ಪನಿಕ ಅರ್ಥಗಳಲ್ಲಿ ಬಳಕೆಯಾಗಿರಬಹುದೆನ್ನುತ್ತಾರೆ. ಇಲ್ಲಿ ಕೃಷ್ಣನು ನೈತಿಕ, ಆಧ್ಯಾತ್ಮಿಕ, ರಾಜಕೀಯ ಮತ್ತು ರಾಷ್ಟ್ರೀಯ ರೂಪಕವಾಗಿದ್ದಾನೆ. "ಬಂಕಿಮರ ರಾಷ್ಟ್ರೀಯತೆಗೆ ಗೀತೆಯಲ್ಲಿನ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಬೇರುಗಳು ಆಧಾರವಾಗಿವೆ. ಗೀತೆ ಜೀವನವನ್ನು ಸಮಗ್ರವಾಗಿ ನೋಡುವ ಕ್ರಮವನ್ನು ಕಲಿಸುತ್ತದೆ. ಇವರ ಪ್ರಕಾರ ದೇಶಭಕ್ತಿಯನ್ನು ಪಾಶ್ಚಾತ್ಯರಂತೆ ಆಕ್ರಮಣಕಾರಿಯಾಗಿ ನೋಡದೇ ಮಾನವೀಯತೆಯ ಚೌಕಟ್ಟಿನಿಂದ ನೋಡಬೇಕಾಗಿದೆ."[೩೫]

ಅದರಂತೆ ಆಗಿನ ವಸಾಹತು ಭಾರತದ ಸ್ಥಿತಿಯು ಅರ್ಜುನನು ಅಸ್ತ್ರಗಳನ್ನು ತೆಗೆದು ಯುದ್ಧ ಮಾಡಲು ಅಂಜಿದ ವೈರಾಗ್ಯ ಸ್ಥಿತಿಯಲ್ಲಿತ್ತು. ಪಾಂಡವರು ಕೇಳಿದುದು ತಮಗೆ ಸಲ್ಲಬೇಕಾದ ಪ್ರದೇಶವನ್ನು ಬಿಡಿ ಎಂದುದಷ್ಟೇ. ಹಾಗಾಗಿ ಭಾರತೀಯರು ಬ್ರಿಟಿಷರ ವಿರುದ್ಧ ಅಸ್ತ್ರ ಹಿಡಿಯಬೇಕೆಂದೇನಿಲ್ಲ. ಭಾರತದ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗಳನ್ನು

ಅರಿತು ಬ್ರಿಟಿಷರನ್ನು ಎದುರಿಸುವುದಕ್ಕೆ ಅವರನ್ನು ಸಿದ್ಧರನ್ನಾಗಿಸಬೇಕಿತ್ತು. ಭಾರತದ ಆಗಿನ ಪರಿಸ್ಥಿತಿಯಲ್ಲಿ ದೇಶಾಭಿಮಾನವೇ ಪರಮ ಧರ್ಮವಾಗಿತ್ತು. ಇದು ಬಂಕಿಮರ ಮೂಲಕ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಬಂಕಿಮರು ಪ್ರತಿಯೊಬ್ಬರ, ಎಲ್ಲರ ಆತ್ಮರಕ್ಷಣೆಯ ಭಾರವೂ ಮನುಷ್ಯನಿಗಿದೆ ಎಂದಿದ್ದಾರೆ.

ಬಂಕಿಮರು ತಮ್ಮ ಆಲೋಚನೆಗಳಲ್ಲಿ ಥಾಮಸ್, ಡೆವೀಸ್, ತೆಲಾಂಗ್, ಜಾನ್ಸನ್, ರಿಸ್ ಡೇವಿಡ್ಸ್, ಲಾಸೆನ್, ಮುಯಿರ್, ಹಾಗ್‌ರಂಥ ಭಾರತ ಚರಿತ್ರಾಕಾರರನ್ನು ಉಲ್ಲೇಖಿಸುತ್ತಾರೆ. ಹಾಗೆಯೇ ಪಾಶ್ಚಾತ್ಯ ವಿಜ್ಞಾನಿಗಳಾದ ಟೈಲರ್, ಎ.ವಿ.ಶ್ಲೆಗಲ್, ಗಯಟೆ, ಕಾಂಟ್, ಜೆ.ಎಸ್. ಮಿಲ್, ಕಾಂಪ್ಟೆ ಮತ್ತು ಕಾರ್ಪೆಂಟರ್ ಹೇಳಿಕೆಗಳನ್ನು ಉದ್ಧರಿಸುತ್ತಾರೆ. ಆದರೆ ಗೀತೆಯ ಪ್ರಥಮ ಅನುವಾದಕರಾದ ಚಾರ್ಲ್ಸ್ ವಿಲ್ಕಿನ್ಸ್ ಬಗ್ಗೆ ಇವರು ಏನನ್ನೂ ಉಲ್ಲೇಖಿಸದಿರುವುದು ಅಚ್ಚರಿಯ ಅಂಶವಾಗಿದೆ.

ಬಾಲಗಂಗಾಧರ ತಿಲಕ್ ಮತ್ತು ಗೀತೆಯ ಚಿಂತನೆಗಳು

ತಿಲಕರು ಗೀತಾರಹಸ್ಯ ಕೃತಿಯನ್ನು ೧೯೧೧ರಲ್ಲಿ ಮಾಂಡಲೆ(ಬರ್ಮಾ) ಜೈಲಿನಲ್ಲಿದ್ದಾಗ ರಚಿಸಿದರು. ಈ ಕೃತಿಯ ಮೊದಲ ಆವೃತ್ತಿ ೧೯೧೫ರಲ್ಲಿ ಮರಾಠಿ ಭಾಷೆಯಲ್ಲಿ ಹೊರಬಂದಿತು. ಇದನ್ನು ಬಿ.ಎಸ್. ಸುಕ್ತಂಕರ್ ಎಂಬುವರು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಭಾರತ ಮತ್ತು ಪಾಶ್ಚಾತ್ಯ ಭಾಷೆಗಳಿಗೆ ಈ ಕೃತಿ ಭಾಷಾಂತರಗೊಂಡು ಜನಪ್ರಿಯತೆ ಪಡೆದಿದೆ. ಇದು ಗೀತೆಯ ಬಗೆಗಿನ ವಿದ್ವತ್ಪೂರ್ಣ ಕೃತಿ ಎಂದು ಹೊಗಳಿಸಿಕೊಂಡಿದೆ.

"ಗೀತೆಯ ಮೇಲಿನ ಟಿಳಕರ ಟೀಕೆಯೇ ಅವರ ಶಾಶ್ವತ ಸ್ಮಾರಕವಾಗಿದೆ. ಸ್ವರಾಜ್ಯ ಸಂಗ್ರಾಮವು ಯಶಪ್ರದವಾದ ನಂತರವೂ ಅದು ಉಳಿದು ಬಾಳುವುದು. ಆಗ ಕೂಡ ಟಿಳಕರ ನಿಷ್ಕಲಂಕ ಚಾರಿತ್ರ್ಯ ಮತ್ತು ಗೀತೆಯ ಮೇಲಿನ ಅವರ ಮಹಾನ್ ಟೀಕೆ ಇವುಗಳ ಸ್ಮೃತಿಯು ಚಿರಪ್ರೇರಕವಾಗಿ ಉಳಿಯುವುದು. ಅವರ ಜೀವಮಾನದಲ್ಲಾಗಲಿ, ಈಗಲೂ ಆಗಲಿ, ಟಿಳಕರಿಗಿಂತ ಅಧಿಕ ವ್ಯಾಪಕವಾದ, ಆಳವಾದ ಶಾಸ್ತ್ರಜ್ಞಾನವು ಯಾರಲ್ಲಿಯಾದರೂ ಕಂಡುಬರುವುದು ಕಠಿಣವಿದೆ. ಗೀತೆಯ ಮೇಲಿನ ಅವರ ಅಧಿಕಾರೀ ಟೀಕೆಗಿಂತ ಹೆಚ್ಚು ಚೆನ್ನಾಗಿರುವ ಗ್ರಂಥವು ಇಂದಿಗೂ ಆಗಿಲ್ಲ, ಇನ್ನು ಮುಂದೆಯೂ ಬಹುಕಾಲ ಆಗಲಾರದು"[೩೬] ಎಂದು ಗಾಂಧಿ ಅವರು ಗೀತಾರಹಸ್ಯ ಕೃತಿಯನ್ನು ಪ್ರಶಂಸಿದ್ದಾರೆ.

ಇಂಥ ವಿದ್ವತ್‌ಪೂರ್ಣ ಕೃತಿಯನ್ನು ರಚಿಸಿದ ತಿಲಕರ ಗೀತೆಯ ಕುರಿತ ಚಿಂತನೆಗಳನ್ನು ಸಂಗ್ರಹಿಸುವುದಾದರೆ–ಮೊದಲಿಗೆ ಅವರು ಪ್ರತಿ ಮನುಷ್ಯ ಜನಾಂಗ ಎದುರಿಸುವಂತಹ ಮೂಲಭೂತ ಸಮಸ್ಯೆಗಳಿಗೆ ಪರಿಹಾರಗಳನ್ನು ಶೋಧಿಸುವ ದೃಷ್ಟಿಯಿಂದ ಗೀತೆಯ ಮೊರೆ ಹೋದುದಾಗಿ ಹೇಳಿದ್ದಾರೆ. ಇವರ ಪ್ರಕಾರ ನಮ್ಮ ದೇಶದ ನೈತಿಕ ಬುನಾದಿಗೆ ಗೀತೆ ನೆರವಾಗುತ್ತದೆ. ಗೀತೆಯ ಮೊದಲಿನ ಮತ್ತು ಆ ನಂತರದ ಸಾಹಿತ್ಯದಲ್ಲಿ ರಾಷ್ಟ್ರನಿರ್ಮಾಣಕ್ಕೆ ಅಗತ್ಯವಿರುವ

ನೈತಿಕತತ್ವಗಳು ಸಾಕಷ್ಟು ಪ್ರಮಾಣದಲ್ಲಿ ವ್ಯಕ್ತವಾಗಿಲ್ಲ. ವೇದ, ಉಪನಿಷತ್ತು ಮೊದಲಾದ ಕೃತಿಗಳ ತತ್ವಗಳಲ್ಲಿ ನಿಖರತೆಯ ಕೊರತೆ, ಅಸ್ಪಷ್ಟತೆ ಹಾಗೂ ಆಂತರಿಕ ದ್ವಂದ್ವಗಳಿರುವ ಕಾರಣ ಅವುಗಳ ಆಧಾರದ ಮೇಲೆ ರಾಷ್ಟ್ರನಿರ್ಮಾಣ ಸಾಧ್ಯವಿಲ್ಲ ಎಂಬುದು ತಿಲಕರ ಕೇಂದ್ರವಾದ. ಆದ್ದರಿಂದ ಇವುಗಳ ಮಿತಿ ಲೋಪದೋಷಗಳನ್ನು ಮೆಟ್ಟಿನಿಲ್ಲಿಸುವಂತಹ ಹೊಸ ಸಾಂಸ್ಥಿಕ ಚೌಕಟ್ಟು ಅಗತ್ಯವಿದೆ, ಆದರೆ ಇದನ್ನು ಯೂರೋಪಿಯನ್ ದೃಷ್ಟಿಕೋನದಿಂದಲೂ ಪಡೆಯಲು ಸಾಧ್ಯವಿಲ್ಲ. ರಾಷ್ಟ್ರನಿರ್ಮಾಣವಾಗಬೇಕಾದರೆ ರಾಷ್ಟ್ರನಿರ್ಮಾಣದ ನೈತಿಕ ಅಂಶಗಳಿಗಾಗಿ ಪಾಶ್ಚಾತ್ಯರ ನಿಲುವುಗಳನ್ನು ಅವಲಂಬಿಸಬೇಕಿಲ್ಲ. ಅಂತೆಯೇ ಇಲ್ಲಿನ ಪ್ರಾಚೀನ ತಾತ್ವಿಕ ಬರವಣಿಗೆಗಳು ದ್ವಂದ್ವಗಳಿಂದ ಕೂಡಿರುವುದರಿಂದ ಅವುಗಳನ್ನು ಅವುಗಳ ಯಥಾರೂಪದಲ್ಲಿಯೂ ಬಳಸಲು ಬರುವುದಿಲ್ಲ. ಹೀಗಾಗಿ ಭಾರತಕ್ಕೆ ಈ ದ್ವಂದ್ವಗಳ ನಡುವೆ ಸಾಮರಸ್ಯ ಸಾಧಿಸುವಂತಹ ಮೌಲ್ಯಾದರ್ಶಗಳು ಅಗತ್ಯವಾಗಿದೆ. ಗೀತೆಯು ಅತ್ಯಂತ ವೈಜ್ಞಾನಿಕವಾಗಿ ಅದನ್ನು ನಿರೂಪಿಸುತ್ತದೆ ಎಂದಿದ್ದಾರೆ.

ಗೀತೆಯ ಕುರಿತ ಹಿಂದಿನ ವ್ಯಾಖ್ಯಾನಗಳು ಬೌದ್ಧಿಕ ಅಹಂನಿಂದ ಕೂಡಿವೆ ಹಾಗೂ ಪೂರ್ವಗ್ರಹಪೀಡಿತವಾಗಿವೆ. ಈ ವ್ಯಾಖ್ಯಾನದ ಮೂಲಕ ಮುಂಚಿನ ಪೂರ್ವವ್ಯಾಖ್ಯಾನಗಳನ್ನು ನಿರಾಕರಿಸುತ್ತೇನೆ. ಉಳಿದವರ ವ್ಯಾಖ್ಯಾನದಂತೆ ತನ್ನ ಓದೂ ಕೂಡ ಇನ್ನೊಂದು ಪರ್ಯಾಯ ವ್ಯಾಖ್ಯಾನವಾಗಿ ಉಳಿದುಬಿಡುವುದೆಂಬ ಅರಿವು ಅವರಿಗಿತ್ತು. ಅವರು ಗೀತೆಯು ವಿಶಿಷ್ಟಪಥ್ಯ ಹಾಗೂ ಅಧ್ಯಾತ್ಮದ ಆಳವಾದ ತಾತ್ವಿಕತೆಯನ್ನು ಒಳಗೊಂಡಿದೆ ಎಂದು ಭಾವಿಸಿದ್ದರು. ಗೀತೆಯು ಮೂಲತತ್ವಗಳಾದಂತಹ ಬ್ರಹ್ಮ, ಆತ್ಮ, ಮತ್ತು ವಿಶ್ವ, ಕರ್ಮ ಸಿದ್ದಾಂತವನ್ನು ವೇದಗಳಿಂದಲೂ; ಜ್ಞಾನವನ್ನು ವೇದಾಂತದಿಂದಲೂ ವಿಶ್ವದ ಅಳಿವು–ಉಳಿವನ್ನು ಸಾಂಖ್ಯದಿಂದಲೂ; ಭಕ್ತಿ ಪರಿಕಲ್ಪನೆಯನ್ನು ಭಾಗವತದಿಂದಲೂ ಹಾಗೂ ಇತರ ತತ್ವಗಳನ್ನು ಸ್ಮೃತಿ, ಬ್ರಹ್ಮಸೂತ್ರ, ಶಾಸ್ತ್ರ, ಮಹಾಭಾರತ, ಮತ್ತು ಪುರಾಣಗಳಿಂದಲೂ ಪಡೆದಿದೆ ಎಂಬುದನ್ನು ಒಪ್ಪುತ್ತಾರೆ. ಸಾಂಖ್ಯ ತಾತ್ವಿಕತೆಯು ದೇವರನ್ನು ಒಪ್ಪುವುದಿಲ್ಲ ಹಾಗೂ ಈ ಸಾಂಖ್ಯದಲ್ಲಿ ಇಹ ಜೀವನ ಹಾಗೂ ಆಧ್ಯಾತ್ಮಿಕ ಜ್ಞಾನದ ನಡುವೆ ದ್ವಂದ್ವ ಇದೆ. ಹಾಗಾಗಿ ತಿಲಕರು ಗೀತೆಯ ಕೇಂದ್ರ ಸಂದೇಶವಾಗಿ ಸಾಂಖ್ಯಸಿದ್ಧಾಂತದ ತಾತ್ವಿಕತೆಯನ್ನು ಒಪ್ಪುವುದಿಲ್ಲ. ಜ್ಞಾನ ಮತ್ತು ಇಹ ಚಟುವಟಿಕೆಗಳ ನಡುವೆ ಸಂಬಂಧ ಕಲ್ಪಿಸುವುದಕ್ಕೆ ಕರ್ಮಯೋಗ ಸಿದ್ಧಾಂತದ ಎಲ್ಲಾ ಪ್ರಯತ್ನಗಳಿಗೆ ಇದು ಅಡ್ಡಿಯನ್ನುಂಟುಮಾಡುತ್ತದೆ. ವೇದಾಂತ ಮತ್ತು ಸಾಂಖ್ಯದಲ್ಲಿರುವ ಹಾಗೆ ಮುಕ್ತಿಗಾಗಿ ಜಗತ್ತಿನ ಬಗ್ಗೆ ಕಾಳಜಿಯೇ ಇಲ್ಲದಂತೆ ಆತ್ಮವನ್ನು ನಿರಾಕರಿಸುವಂತದ್ದು ಆಧುನಿಕ ಭಾರತಕ್ಕೆ ಸೂಕ್ತ ಆಯ್ಕೆಯಲ್ಲ. ಪ್ರಸಕ್ತ ಭಾರತ ರಾಷ್ಟ್ರವು ಆಧ್ಯಾತ್ಮಿಕ ಶೋಧನೆಯ ಅತ್ಯಂತ ಹಳೆಯ ತಾತ್ವಿಕತೆಯನ್ನು ಬಿಟ್ಟುಕೊಡದೆಯೂ ಸಹ ಇಂದಿನ ಜಗತ್ತಿನೊಂದಿಗೆ ಸಕ್ರಿಯಯವಾಗಿ ಪಾಲ್ಗೊಳ್ಳುವುದು ಅಗತ್ಯ.

ತಿಲಕರ ರಾಷ್ಟ್ರೀಯತೆಯ ಸಂಕಥನವು ಮುಖ್ಯವಾಗಿ ಕರ್ಮಯೋಗವನ್ನು ಒಳಗೊಳ್ಳುತ್ತದೆ. ಅವರ ದೃಷ್ಟಿಯಲ್ಲಿ ಕರ್ಮಯೋಗವೇ ಗೀತೆಯ ಕೇಂದ್ರವಾಗಿದೆ. ಸ್ಥಿತಪ್ರಜ್ಞ ಎಂದರೆ ಜ್ಞಾನ

ಮತ್ತು ಭಕ್ತಿಯ ಜೊತೆಗೂಡಿದ ಕರ್ಮಯೋಗದ ಆಚರಣೆಯನ್ನು ಮೈಗೂಡಿಸಿಕೊಂಡ ಸಮಗ್ರ ವ್ಯಕ್ತಿ. ಅಂಥವನ ಹೃದಯ ಸಂಪೂರ್ಣ ಮಾನವೀಯತೆಯಿಂದ ಕೂಡಿರುತ್ತದೆ. ಅಂಥವನು ಆದರ್ಶಪ್ರಾಯನಾಗುತ್ತಾನೆ. ತಿಲಕರ ಈ ನಿಲುವುಗಳನ್ನು ಆರ್.ಡಿ. ರಾನಡೆಯವರು ತಮ್ಮ 'ದ ಭಗವದ್ಗೀತಾ ಆ್ಯಸ್ ಎ ಫಿಲಾಸಫಿ ಆಫ್ ಗಾಡ್-ರಿಯಲೈಸೇಷನ್' ಗ್ರಂಥದಲ್ಲಿ ಹೀಗೆ ಸಂಗ್ರಹಿಸಿ ಕೊಟ್ಟಿದ್ದಾರೆ:

"ಪರಮ ಜ್ಞಾನಿಯ ಸ್ಥಿತಿಯನ್ನು ತಲುಪಿದ ನಂತರವೂ ಮನುಷ್ಯನಿಗೆ ಕರ್ಮದ ಬಂಧನವಿರುತ್ತದೆ. ಮೊದಲನೆಯದಾಗಿ, ಕರ್ಮವು ದೇಹಕ್ಕೆ ಸಂಬಂಧಿಸಿದ ಕ್ರಿಯೆಯಾಗಿರುವುದರಿಂದ ದೇಹವು ನಾಶವಾಗುವವರೆಗೂ ನಾವು ಕರ್ಮಗಳ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಲಾಗಿದೆ. ಎರಡನೆಯದಾಗಿ, ನಿಷ್ಕಾಮಕರ್ಮದ ಮೂಲಕವೇ ಈ ಕರ್ಮ ಬಂಧನದಿಂದ ಮುಕ್ತಿ ನಿಷ್ಕಾಮಕರ್ಮದ ಮೂಲಕವೇ ಈ ಕರ್ಮ ಬಂಧನದಿಂದ ಮುಕ್ತಿ ಪಡೆಯಲು ಸಾಧ್ಯ ಎಂದು ಹೇಳಲಾಗಿದೆ. ಆದ್ದರಿಂದ ವೈಯಕ್ತಿಕ ಫಲಾಪೇಕ್ಷೆಯಿಲ್ಲದೆ ಮಾಡುವ ಕರ್ಮಗಳಿಗೆ ಕರ್ಮದ ಸೋಂಕಿರುವುದಿಲ್ಲ. ಕೊನೆಯದಾಗಿ, ತಪ್ಪು ಮಾರ್ಗದಲ್ಲಿರುವ ಮನುಷ್ಯರಿಗೆ ಸರಿಯಾದ ಮಾರ್ಗವನ್ನು ತೋರಿಸುವುದು ಜ್ಞಾನಿಯಾದವನ ಹೊಣೆಗಾರಿಕೆಯಾಗುತ್ತದೆ. ಹೀಗಾಗಿ ಪರಮಜ್ಞಾನಿಯಾದವನು ಕೂಡ ಕರ್ಮದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದು."[೩೭]

ಪರಮಜ್ಞಾನದ ಸ್ಥಿತಿಯನ್ನು ಪಡೆದ ಬಳಿಕವೂ ಕರ್ಮದ ಅನಿವಾರ್ಯತೆಯು ಇದ್ದೇ ಇರುತ್ತದೆ ಎಂಬ ತಮ್ಮ ನಿಲುವನ್ನು ಪ್ರತಿಪಾದಿಸಲು ತಿಲಕರು ಇಂತಹ ವಾದಗಳನ್ನು ಹೂಡುತ್ತಾರೆ.

ಗೀತೆಯ ಅಂತಿಮ ಸಂದೇಶವು ಕರ್ಮಯೋಗಿ ಸ್ಥಿತಪ್ರಜ್ಞ ವ್ಯಕ್ತಿತ್ವವನ್ನು ಬೋಧಿಸುತ್ತದೆ ಎಂದು ತಿಳಿಯುವ ತಿಲಕ್, ಭಾರತ ರಾಷ್ಟ್ರೀಯತೆಗೆ ಕರ್ಮಯೋಗವೇ ಅಗತ್ಯ ಎಂದು ಪರಿಭಾವಿಸಿದ್ದಾರೆ. ಸ್ಥಿತಪ್ರಜ್ಞ ಎನ್ನುವುದು ಒಂದು ಹೊಸಬಗೆಯ ನವಬ್ರಾಹ್ಮಣತ್ವವಾಗಿದ್ದು ಕಾನೂನಿನ ಆಳ್ವಿಕೆಗೆ ತಳಹದಿಯಾಗತಕ್ಕದ್ದು, ಅಲ್ಲದೆ ಆಧುನಿಕ ಭಾರತದ ಕೇಂದ್ರಬಿಂದುವಾಗಿ ಕರ್ಮಯೋಗಿ ಸ್ಥಿತಪ್ರಜ್ಞನನ್ನು ಒತ್ತಿ ಹೇಳಿದಾಗ್ಯೂ ಮನುಷ್ಯ ತನ್ನ ಎಲ್ಲಾ ವಿಷಯಾಸಕ್ತಿಗಳನ್ನು ಬಿಟ್ಟು ತನ್ನೊಳಗೆ ತಾನೆ ತೃಪ್ತನಾಗಿ ಹೋರಾಟದಲ್ಲಿ ಭಾಗಿಯಾಗಬೇಕೆಂಬುದು ಅವರ ಆಶಯವಾಗಿತ್ತು. ಆ ಮೂಲಕ ಭಾರತದ ರಾಷ್ಟ್ರೀಯತೆಯಲ್ಲಿ ಸಮೂಹ ತೊಡಗಬೇಕಾದ ಅಗತ್ಯವನ್ನು ಮನಗಂಡಿದ್ದರು. ಹಾಗಾಗಿ ಭಕ್ತಿಮೂಲಕ ಸ್ಥಿತಪ್ರಜ್ಞ ಹಾಗೂ ಸಮೂಹಗಳನ್ನು ಒಗ್ಗೂಡಿಸುವ ಪ್ರಯತ್ನ ಮಾಡುತ್ತಾರೆ. ಸ್ಥಿತಪ್ರಜ್ಞನಿಗೆ ಕರ್ಮ ಮತ್ತು ಜ್ಞಾನದ ಶೋಧನೆಯಾದರೆ ಕಡಿಮೆ ತರ್ಕದ ಜನಗಳಿಗೆ ಅದು ಕರ್ಮ ಮತ್ತು ಭಕ್ತಿಯ ಶೋಧನೆಯಾಗುತ್ತದೆ. ಸ್ಥಿತಪ್ರಜ್ಞ ಮತ್ತು ಸಾಮಾನ್ಯ ಜನರನ್ನು ಒಗ್ಗೂಡಿಸುವ ಪ್ರಯತ್ನವೇ ಇವರ ರಾಷ್ಟ್ರೀಯ ಬರವಣಿಗೆಯ ಸ್ವರೂಪವಾಗಿದೆ.

ತಿಲಕರು ಮತ್ತು ಗೀತೆಯ ಸಮರ್ಥನೆ: ಗೀತೆಯ ಕೇಂದ್ರಬೋಧನೆಯ ಬಗ್ಗೆ ಪೌರಾತ್ಯ ಬರವಣಿಗೆಗಳು ಏಕಾಭಿಪ್ರಾಯ ಹೊಂದಿಲ್ಲ. ಬೊಹ್ಟ್‌ಲಿಂಕ್, ಗಾರ್ಬೆ, ಹಾಪ್‌ಕಿನ್ಸ್, ಹಾಲ್ಟ್‌ಮನ್

ಮತ್ತಿತರು ಗೀತೆಯು ದ್ವಂದ್ವಗಳಿಂದ ಕೂಡಿದೆ, ನೈತಿಕ ವಾಗ್ವಾದಗಳಲ್ಲಿ ವೈರುಧ್ಯಗಳಿವೆ, ಗೊಂದಲಕಾರಿ ಹೇಳಿಕೆಗಳಿಂದ ಕೂಡಿದೆ ಎಂದು ತಿಲಕರೂ ಭಾವಿಸುತ್ತಾರೆ. ಹಿಲ್, ಆರ್ನಾಲ್ಡ್, ಫ್ರಾಂಕ್‌ಲಿನ್ ಎಡ್ಗರ್‌ಟನ್, ವಿಂಟರ್‌ನಿಟ್ಜ್, ಮ್ಯಾಕ್ಸ್‌ಮುಲ್ಲರ್ ಇವರ ಪ್ರಕಾರ ಗೀತೆಯು ನಿರ್ದಿಷ್ಟ ಸಂದೇಶವನ್ನು ಹೊಂದಿದೆ, ವೈದಿಕ ಉಪನಿಷತ್ತಿನ ಸಂರಚನೆ ಹೊಂದಿದೆ, ಸಾಂಪ್ರದಾಯಿಕ ಪರಂಪರೆಗಳ ಚೌಕಟ್ಟಿನಲ್ಲಿ ಕೆಲವೊಂದು ಬ್ರಾಹ್ಮಣೀಯ ಚಿಂತನೆಗಳನ್ನು ಮರುರೂಪಿಸಲು ಪ್ರಯತ್ನಿಸುತ್ತದೆ.

ತಿಲಕರು ಗೀತಾರಹಸ್ಯದಲ್ಲಿ ಹಲವಾರು ಪೌರಾತ್ಯ ಚಿಂತಕರನ್ನು ಉಲ್ಲೇಖಿಸುವುದರ ಜೊತೆಗೆ ಪಾಶ್ಚಾತ್ಯ ಲೇಖಕರಾದ ಆಗಸ್ಟ್ ಕಾಂಪ್ಟೆ, ಜಾನ್ ಸ್ಟುವರ್ಟ್ ಮಿಲ್, ಹರ್ಬರ್ಟ್ ಸ್ಪೆನ್ಸರ್, ಫ್ರೆಡರಿಕ್ ಹೆಗೆಲ್, ಥಾಮಸ್ ಹಾಬ್ಸ್, ಇಮ್ಯಾನುಯಲ್ ಕಾಂಟ್, ನೀಷೆ, ಮೋರ್‌ಲಿ, ಥಾಮಸ್ ಹಿಲ್‌ಗ್ರೀನ್, ಅರ್ನೆಸ್ಟ್ ಹೀಕಲ್, ಸಿಡ್ಜ್‌ವಿಕ್, ಆಲ್‌ಬ್ರೆಕ್ಟ್ ವೆಬೆರ್, ಪಾಲ್ ಡ್ಯೂಸನ್, ಡೇವಿಡ್ ಹ್ಯೂಮ್, ವಿಲಿಯಂ ಜೇಮ್ಸ್, ರಿಸ್ ಡೇವಿಡ್ಸ್, ಜೇಮ್ಸ್ ಸಲ್ಲಿ, ಶಾಪೆನ್‌ಹಾಯೆರ್, ಥಾಂಪ್ಸನ್ ಮೊದಲಾದವರನ್ನೂ ಉಲ್ಲೇಖಿಸುತ್ತಾರೆ. ಗೀತೆಯ ಮೌಲ್ಯಗಳು ಇನ್ನೂ ಹೇಗೆ ಪ್ರಸ್ತುತವೆಂದು ವಿವರಿಸಲು ಮತ್ತು ಭಾರತೀಯ ತಾತ್ವಿಕತೆಯೊಂದಿಗೆ ಪಾಶ್ಚಾತ್ಯರ ವಾಗ್ವಾದಗಳನ್ನು ಅರಿಯಲಷ್ಟೇ ಅವರನ್ನು ಉಲ್ಲೇಖಿಸಲಾಗಿದೆಯೆಂದು ಒತ್ತಿಹೇಳಿದ್ದಾರೆ. ಅಲ್ಲದೆ ಪಾಶ್ಚಾತ್ಯ ಚಿಂತನೆಗಳ ಎದುರು ಗೀತೆಯ ಪಾರಮ್ಯವನ್ನು ಎತ್ತಿಹಿಡಿಯುವುದೂ ಈ ಉಲ್ಲೇಖಗಳ ಉದ್ದೇಶವಾದಂತಿದೆ. ತಿಲಕರು ಈ ಲೇಖಕರೊಂದಿಗೆ ಹೆಚ್ಚಿನ ವಾಗ್ವಾದಗಳಲ್ಲಿ ತೊಡಗುವುದಿಲ್ಲವಾದರೂ ಕೆಲವು ಕ್ರಿಶ್ಚಿಯನ್ ಮಿಷನರಿಗಳ ವಾದಗಳನ್ನು ತಿರಸ್ಕರಿಸುತ್ತಾರೆ. ಉದಾಹರಣೆಗೆ, ಗೀತೆಯ ಕೇಂದ್ರ ವಸ್ತುವು ಕ್ರಿಶ್ಚಿಯನ್ ಧರ್ಮದಿಂದ ಬಂದಿದೆ ಹಾಗೂ ಗೀತಾಕಾರರಿಗೆ ಬೈಬಲ್ ಗೊತ್ತಿತ್ತೆಂಬ ಡಾ. ಲಾರಿನ್‌ಸರ್ ವಾದವನ್ನೂ ಗೀತೆಯಲ್ಲಿನ ಯೋಗವನ್ನು ಪತಂಜಲಿಯ ಯೋಗದೊಂದಿಗೆ ಸಮೀಕರಿಸುವ ಥಾಂಸನ್ ವಾದವನ್ನೂ ಖಂಡಿಸುತ್ತಾರೆ. ಗೀತೆಯಲ್ಲಿನ ಹಲವಾರು ಶ್ಲೋಕಗಳು ಅನಂತರದ ಪ್ರಕ್ಷೇಪಗಳಾಗಿವೆ ಎಂಬ ಗಾರ್ಬೆಯ ಅಭಿಪ್ರಾಯವನ್ನು ತಿಲಕರು ಖಂಡಿಸುತ್ತಾ ಈ ಅಭಿಪ್ರಾಯಗಳು ದೋಷಪೂರಿತವೆಂದೂ, ಇವರು ವೈದಿಕ ಧರ್ಮದ ಚಾರಿತ್ರಿಕ ಪರಂಪರೆಯನ್ನು ಅರಿಯಲು ವಿಫಲರಾಗಿದ್ದಾರೆಂದೂ ನಿರ್ಣಯಿಸುತ್ತಾರೆ.

ಇವರ ಅಭಿಪ್ರಾಯದಲ್ಲಿ ವೈದಿಕ ಕರ್ಮಕಾಂಡ ಮತ್ತು ವೈದಿಕ ಜ್ಞಾನಕಾಂಡ(ಉಪನಿಷತ್ತುಗಳು)ಗಳ ನಡುವೆ ಸಾಮರಸ್ಯದ ಉದ್ದೇಶದಿಂದ ಗೀತೆಯ ರಚನೆಯಾದದ್ದಾಗಿದೆ. ಗೀತೆಯು ಬೋಧಿಸುವ ಕರ್ಮಯೋಗ ಮತ್ತು ಆತ್ಮದ ತಾತ್ವಿಕತೆಯಲ್ಲಿ ಹೊಂದಾಣಿಕೆಯಿದೆ. ಆದರೆ ವ್ಯಾಖ್ಯಾನಕಾರರು ಭಕ್ತಿ, ಜ್ಞಾನ ಮತ್ತು ಕರ್ಮದ ಆಲೋಚನೆಗಳಲ್ಲಿ ಯಾವುದೋ ಒಂದೊಂದಕ್ಕೆ ಆದ್ಯತೆ ನೀಡಿ ತಮ್ಮ ತಮ್ಮ ಸಮುದಾಯದ ಸಿದ್ಧಾಂತಗಳನ್ನು ಸಮರ್ಥಿಸಿಕೊಳ್ಳಲು ಉಳಿದವರದನ್ನು ತಿರಸ್ಕರಿಸಲು ಇವನ್ನು ಬಳಸಿಕೊಂಡಿದ್ದಾರಷ್ಟೇ. ಉದಾಹರಣೆಗೆ ಶಂಕರ ಭಾಷ್ಯವು ಗೀತೆಯನ್ನು ಜ್ಞಾನದ ಪಥ್ಯವನ್ನಾಗಿ ಕಾಣುತ್ತದೆ, ಮಧ್ವಾಚಾರ್ಯರು ಭಕ್ತಿ ಮತ್ತು ಕರ್ಮವನ್ನು, ಜ್ಞಾನೇಶ್ವರರು ಪತಂಜಲ ಯೋಗವನ್ನು ಗೀತೆಯಲ್ಲಿ ಕಾಣುತ್ತಾರೆ.

ಈ ಬಗೆಯ ಪೂರ್ವಗ್ರಹಪೀಡಿತ ಆಲೋಚನೆಗಳಿಂದ ಗೀತೆಯನ್ನು ಸಮಗ್ರವಾಗಿ ಗ್ರಹಿಸಲಾಗದು. ಗೀತೆಯಲ್ಲಿ ಯಾವುದೇ ವೈರುಧ್ಯಗಳಿಲ್ಲ. ಇದರ ಸಂದೇಶ ವಿಶ್ವಾತ್ಮಕವೂ ನಿಖರವೂ ಆಗಿದೆ. ಇದನ್ನು ಸ್ಥಿತಪ್ರಜ್ಞನ ಜೀವನದ ಮೂಲಕ ಅರ್ಥ ಮಾಡಿಕೊಳ್ಳಬಹುದು. ಅವನ ಮನಸ್ಸು ಶುದ್ಧ ಜ್ಞಾನದಿಂದ ಕೂಡಿರಬೇಕು(ಜ್ಞಾನ). ಅವನಿಗೆ ಒದಗಿ ಬರುವ ಎಲ್ಲ ಕರ್ತವ್ಯಗಳನ್ನು ನಿರ್ವಹಿಸಬೇಕು(ಕರ್ಮ) ಮತ್ತು ತನ್ನೆಲ್ಲ ಚಟುವಟಿಕೆಗಳನ್ನು ದೈವ ಸಂತೋಷಕ್ಕೆ ಅರ್ಪಿಸಬೇಕು(ಭಕ್ತಿ). ಅಂದರೆ ಸ್ಥಿತಪ್ರಜ್ಞನು ತನ್ನೆಲ್ಲಾ ಕರ್ತವ್ಯಗಳನ್ನು ಜ್ಞಾನ ಮತ್ತು ಭಕ್ತಿಯ ಮೂಲಕ ನಿರ್ವಹಿಸಬೇಕು. ಈ ಮೂರು ವಿಶ್ವಾತ್ಮಕ ತತ್ವಕ್ಕೆ ಅಗತ್ಯವಾಗಿವೆ ಎನ್ನುತ್ತಾರೆ.

"ಕರ್ಮಯೋಗ ಅಥವಾ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಕರ್ತವ್ಯದ ತತ್ವವು, ನಿಜವಾದ ಕ್ರಿಯೆಯಲ್ಲಿ ಹಾಗೂ ಸ್ವಾರ್ಥಹೀನ ಚಿಂತನೆಯ ಜೀವನದಲ್ಲಿ, ಅಧ್ಯಾತ್ಮ ವಿಜ್ಞಾನದಲ್ಲಿನ ಎಲ್ಲಾ ಅತ್ಯುತ್ತಮ ಅಂಶಗಳ ಕೂಡಿಕೆಯಾಗಿದೆ. ಈ ವಿಶ್ವಾತ್ಮಕ ತತ್ವಕ್ಕೆ ಅನುಸಾರವಾಗಿ ನಡೆಯುವುದು, ಮಾನವನ ಅತ್ಯಂತ ಆನಂದದ ಆದರ್ಶಗಳನ್ನು ಸಾಕಾರಗೊಳಿಸಲು ಸಾಧ್ಯವಾಗಿಸುತ್ತದೆ. ಪೂರ್ತಿನಿಷ್ಠೆಯಿಂದ ಕರ್ತವ್ಯವನ್ನು ಪಾಲಿಸುವುದರ ಸಹಜ ಪರಿಣಾಮವು 'ಸ್ವರಾಜ್ಯ'ವಾಗಿದೆ. ಕರ್ಮಯೋಗವು ಸ್ವರಾಜ್ಯಕ್ಕೋಸ್ಕರ ಪ್ರಯತ್ನಿಸುತ್ತದೆ ಹಾಗೂ ಜ್ಞಾನಿಯಾದವನು, ಅಧ್ಯಾತ್ಮನಿಷ್ಠನು ಇದಕ್ಕಾಗಿ ಕಾತರಿಸುತ್ತಾನೆ"[೩೮] ಎಂದು ತಿಲಕರು ಹೇಳಿದ್ದಾರೆ. ಭಾರತ ಸ್ವಾತಂತ್ರ್ಯ ಚಳುವಳಿ ಮತ್ತು ಗೀತೆಯ ಕರ್ಮಯೋಗವನ್ನು ತಿಲಕರು ಬೆಸೆಯಲು ಪ್ರಯತ್ನಿಸಿದರು. ತಿಲಕರು 'ಸ್ವರಾಜ್ಯ' ಕಲ್ಪನೆಯನ್ನು ಗೀತೆಯ ಸ್ವಧರ್ಮ' ತತ್ವದ ಸ್ಫೂರ್ತಿಯಿಂದ ಪಡೆದಿದ್ದಾರೆ. ಭಾರತೀಯರು ಎಚ್ಚೆತ್ತು ತಮ್ಮ ತಮ್ಮ ಕರ್ತವ್ಯ(ಸ್ವಧರ್ಮ)ಗಳನ್ನು ಆಸೆಗಳಿಲ್ಲದೆ ತ್ಯಾಗಮನೋಭಾವದಿಂದ ಮಾಡಲು ಸಿದ್ಧರಾಗಬೇಕು. ಆಗ ಭಾರತವನ್ನು ದಾಸ್ಯದಿಂದ ಬಿಡುಗಡೆಗೊಳಿಸಬಹುದು ಎಂಬುದು ಅವರ ಕನಸಾಗಿತ್ತು. ಹಾಗಾಗಿ ಕರ್ಮಯೋಗ ಮತ್ತು ಸ್ವರಾಜ್ಯ ತತ್ವಗಳನ್ನು ಅರ್ಥೈಸುವ ಜನಸಮುದಾಯವನ್ನು ಎದ್ದೇಳಿಸುವುದು ನಾವು ಮಾಡಬೇಕಾದ ಕರ್ತವ್ಯವಾಗಿದೆ ಎಂದು ತಿಲಕರು ನಂಬಿದ್ದರು.

ಒಟ್ಟಿನಲ್ಲಿ ಭಾರತದಲ್ಲಿನ ವಿವಿಧ ಸಮುದಾಯಗಳ ಭಿನ್ನ ವ್ಯಾಖ್ಯಾನಗಳನ್ನು ಅನುಲಕ್ಷಿಸದೆ ತಿಲಕರು ತಮ್ಮ ರಾಷ್ಟ್ರೀಯವಾದದ ನಿರ್ಮಾಣದಲ್ಲಿ ಗೀತೆಯ ನೈತಿಕ ತತ್ವಗಳನ್ನು ಪ್ರಯೋಗಿಸುತ್ತಾರೆ. ಕೃಷ್ಣನ ಮೂಲಕ ಗೀತೆಯು ಅನಾದಿ ಭಾರತದ ಭಿನ್ನ ಪರಂಪರೆಗಳ ನಡುವೆ ಸಾಮರಸ್ಯ ಮೂಡಿಸಲು ಪ್ರಯತ್ನಿಸಿರುವುದಾಗಿ ತಿಳಿಸುತ್ತಾರೆ. ಈ ಎಲ್ಲಾ ಅಂಶಗಳನ್ನು ಒಳಗೊಂಡ ಗೀತಾರಹಸ್ಯ ಕೃತಿಯ ಬಗ್ಗೆ ಕೆ. ನಾಗಪ್ಪಗೌಡ ಅವರು ಈ ಅಭಿಪ್ರಾಯ ತಾಳುತ್ತಾರೆ– "ಗೀತಾರಹಸ್ಯವು ರಾಷ್ಟ್ರೀಯವಾದದ ಸಂಕಥನದ ಉತ್ಪನ್ನವಾಗಿದೆ. ತಿಲಕರು ತಮ್ಮ ರಾಷ್ಟ್ರೀಯವಾದಿ ಆಲೋಚನೆಗಳಿಗೆ ಭಗವದ್ಗೀತೆಯನ್ನು ಆಧಾರವಾಗಿ ಬಳಸಿಕೊಂಡಿದ್ದಾರೆ"[೩೯] ಎಂದಿದ್ದಾರೆ.

ತಿಲಕರ ಅಭಿಪ್ರಾಯದಲ್ಲಿ ಪೈಥಾಗೊರಸ್, ಸಾಕ್ರೆಟೀಸ್, ಮಿಲ್, ಕ್ಯಾಂಟ್ ಮೊದಲಾದವರ ಸಿದ್ಧಾಂತಗಳೂ ಸಹ ಗೀತೆಯಿಂದ ಸ್ಫೂರ್ತಿ ಪಡೆದಿವೆ. ಪಾಶ್ಚಾತ್ಯರು ಗೀತೆ ಮತ್ತು ಇತರ

ವೈದಿಕ ಪಠ್ಯಗಳನ್ನು ಪದಶಃ ಅನುಸರಿಸಿದ್ದಾರೆ. ಅವರು ಇಲ್ಲಿಂದಲೇ ಪಡೆದ ಮೌಲ್ಯಗಳನ್ನು ಬಳಸಿಕೊಂಡು ಭಾರತದ ಸಾಮಾಜಿಕ ಸಂರಚನೆಗಳನ್ನು ಪಾಶ್ಚಾತ್ಯೀಕರಿಸಲು ಕ್ರೈಸ್ತ ಮಿಷನರಿಗಳು ಪ್ರಯತ್ನಿಸುವುದು ಅತಾರ್ಕಿಕವಾದುದು. ಮಿಷನರಿಗಳನ್ನು ಧರ್ಮಪ್ರಸಾರದ ಉದ್ದೇಶದಿಂದ ಎಲ್ಲೆಡೆ ಕಳುಹಿಸುವಂತಹ ಆಲೋಚನೆಯೂ ಸಹ ಮೂಲತಃ ಇಲ್ಲಿಯದೇ. ಉದಾಹರಣೆಗೆ ಅಶೋಕನ ಬೌದ್ಧಧರ್ಮ ಪ್ರಸಾರ ಕಾರ್ಯಗಳು. ವಸಾಹತುಶಾಹಿ ಶಿಕ್ಷಣ ವ್ಯವಸ್ಥೆಯು ಭಾರತೀಯ ತತ್ವಚಿಂತನೆಗಳನ್ನು ಅಪಮೌಲ್ಯಗೊಳಿಸಿದ್ದರಿಂದಾಗಿ ಪಾಶ್ಚಾತ್ಯ ತಾತ್ವಿಕತೆಯು ಗೀತೆಗಿಂತಲೂ ಹೆಚ್ಚು ಖ್ಯಾತಿಗೊಳ್ಳುವುದಕ್ಕೆ ಕಾರಣವಾಯಿತು. ಆದರೆ ತಿಲಕರ ಅಭಿಪ್ರಾಯದಲ್ಲಿ ಪುರಾತನವಾದ ಭಾರತೀಯ ನೈತಿಕ ಸಂಕಥನಗಳು ಭಾರತದ ರಾಷ್ಟ್ರೀಯತಾ ಬುನಾದಿಗೆ ಸಾಕಾಗುವಷ್ಟು ಸಮರ್ಥವಾಗಿದೆ.

ತಿಲಕರು ಅಹಿಂಸೆ, ಸತ್ಯ, ಕ್ಷಮೆ ಮುಂತಾದ ನೈತಿಕ ಮೌಲ್ಯಗಳನ್ನು ಆಯಾ ಕಾಲ, ಸಂದರ್ಭಗಳ ಮೇಲೆ ನಿರ್ಣಯಿಸಬೇಕು ಎನ್ನುತ್ತಾರೆ. ಇವರು ವಾದಿಸುವಂತೆ ಶಾಂತಿ ವಿಧಾನಗಳ ಮೂಲಕ ರಾಷ್ಟ್ರೀಯತಾ ಚಳುವಳಿಯು ತನ್ನ ಗುರಿ ಸಾಧಿಸಲು ಸಾಧ್ಯವಿಲ್ಲ. ಸಮಾಜದ ಪರಿಸ್ಥಿತಿಯೇ ಲೋಪಗಳಿಂದ ಕೂಡಿರುವಾಗ ತಕ್ಕಮಟ್ಟಿಗೆ ಹಿಂಸೆ, ಅಸತ್ಯ, ಶಿಕ್ಷೆ ಸಹ ಒಪ್ಪುವಂಥದ್ದೇ. ವಿಶ್ವಾತ್ಮಕ ಕಲ್ಯಾಣದ ಉದ್ದೇಶ ಹೊಂದಿರುವವರನ್ನು ಮತ್ತು ತಾರ್ಕಿಕ ಸಾಮರ್ಥ್ಯ ಉಳ್ಳವರನ್ನು ಮಾತ್ರ ಈ ಅಹಿಂಸೆಯ ಚೌಕಟ್ಟಿನಿಂದ ಹೊರಗಿಡಬಹುದು. ನಿಸ್ವಾರ್ಥತೆ ಮತ್ತು ಲೋಕಕಲ್ಯಾಣದ ಉದ್ದೇಶದಿಂದ ಮಾಡುವ ಕೆಲಸಗಳಲ್ಲಿ ಹಿಂಸೆಯೂ ಸೇರಬಹುದು.

ಅಪರಿಪೂರ್ಣ ಸಮಾಜದಲ್ಲಿ ಯಾವುದೇ ಶಾಶ್ವತ ಮತ್ತು ವಿಶ್ವಾತ್ಮಕ ನೈತಿಕ ಮೌಲ್ಯಗಳನ್ನು ತದ್ವತ್ತಾಗಿ, ಶುದ್ಧರೂಪದಲ್ಲಿ ಅನ್ವಯಿಸಲಾಗದು. ಸ್ಥಿತಪ್ರಜ್ಞನು ಲೋಕಕಲ್ಯಾಣದ ಕಾರ್ಯಕ್ಕಾಗಿ ಮಾಡುವ ಹಿಂಸೆಯೂ ಅಹಿಂಸೆಯೇ. ಅಂಥ ಸಂದರ್ಭದಲ್ಲಿ ಹಿಂಸೆಗೊಳಗಾದವನು ನಿಜವಾಗಿಯೂ ಪಾಪಿಯಾಗಿರುವನು. ಪ್ರತಿಯೊಬ್ಬ ಮನುಷ್ಯನಿಗೂ ಭೂಮಿಯ ಮೇಲೆ ಒಂದಿಷ್ಟೂ ಹಿಂಸೆ ಮಾಡದೆ ಬದುಕುವುದು ಅಸಾಧ್ಯ. ಜೀವನದ ಭಾಗವೇ ಹಿಂಸೆ ಆಗಿರುವಾಗ ಶುದ್ಧ ಅಹಿಂಸೆ ಅಸಾಧ್ಯ. ಅಹಿಂಸೆ ಮತ್ತು ಸತ್ಯವು ಸ್ವರಕ್ಷಣೆಯ, ದೀನರ ರಕ್ಷಣೆಯ ಮತ್ತು ನ್ಯಾಯಯುತ ಯುದ್ಧದ ಸಂದರ್ಭಕ್ಕೆ ಅನ್ವಯಿಸಲಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಪ್ರಜ್ಞಾಪೂರ್ವಕ ಹಿಂಸೆಯೂ ಅಹಿಂಸೆಯೇ. ಸಮಾಜ ಮತ್ತು ಸಾಮಾಜಿಕ ಸುವ್ಯವಸ್ಥೆಯು ಸ್ಥಿತಪ್ರಜ್ಞರ ಹೊಣೆಗಾರಿಕೆಯಾಗಿರುತ್ತದೆ. ಸ್ಥಿತಪ್ರಜ್ಞನು ದುಷ್ಟರನ್ನು ಶಿಕ್ಷಿಸಲು ಒಂದಿಷ್ಟೂ ಹಿಂಜರಿಯಬೇಕಿಲ್ಲ, ಅವನಿಗೆ ಪಾಪದ ಭಯವೂ ಬೇಕಿಲ್ಲ. ಆ ಸಂದರ್ಭದಲ್ಲಿ ಏಟಿಗೆ ಏಟು, ಮುಯ್ಯಿಗೆ ಮುಯ್ಯಿ ತತ್ವವನ್ನು ಅನುಸರಿಸುವುದು ಸರಿ. ಏನೂ ಮಾಡದಿದ್ದರೆ ಆಗುವ ನಷ್ಟಗಳಿಗೆ ಅವನೇ ಹೊಣೆ ಎಂದು ಸ್ಥಿತಪ್ರಜ್ಞನ ಹಿಂಸೆಯನ್ನು ಸಮರ್ಥಿಸುತ್ತಾರೆ. ಹೀಗೆ ಹೇಳುವಾಗ ಅವರು ಗೀತೆಯ 'ಉದ್ದೇಶವು ನಿಸ್ವಾರ್ಥಪೂರ್ಣವಾಗಿದ್ದು ಪವಿತ್ರವಾಗಿದ್ದರೆ ಆ ಉದ್ದೇಶ ಸಾಧನೆಗಾಗಿ ಶತ್ರುಗಳನ್ನು ಕೊಲ್ಲುವುದೂ ಹಾಗೂ ಹಿಂಸಾಮಾರ್ಗವನ್ನು ಅನುಸರಿಸುವುದೂ

ಕೂಡ ನೈತಿಕವಾಗಿ ಸಮರ್ಥನೀಯ' ಎಂಬ ವಾಕ್ಯಗಳಿಂದ ತಮ್ಮ ಸಮಕಾಲೀನ ಉದಾರವಾದಿಗಳನ್ನು ಗಮನದಲ್ಲಿರಿಸಿಕೊಂಡು, ತೀವ್ರ ಸ್ವರೂಪದ ಹೋರಾಟಕ್ಕೆ ಅವರ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳಲು ಪ್ರೇರೇಪಿಸುತ್ತಿದ್ದರು.

ಇವರ ಪ್ರಕಾರ ಎಲ್ಲರ ಯೋಗಕ್ಷೇಮದ ಕಾಳಜಿಯುಳ್ಳ ಸಾಧುತ್ವ ಮತ್ತು ಶಕ್ತಿ, ಕಾರ್ಯಕಾರಣ ತರ್ಕ ಎಲ್ಲವೂ ರಾಷ್ಟ್ರೀಯವಾದಿ ನಿಲುವಿನಲ್ಲಿ ಸಮ್ಮಿಳನಗೊಳ್ಳಬೇಕು. ಕರ್ಮಯೋಗಿ ಸ್ಥಿತಪ್ರಜ್ಞನ ನಿಜವಾದ ಗುಣಗಳೆಂದರೆ ಬ್ರಾಹ್ಮಣನಿಗಿರುವ ಜ್ಞಾನ, ಮನಃಶಾಂತಿ, ಸ್ವ-ಅರಿವು, ಸ್ವಾರ್ಥರಹಿತ ಸಮತೆ ಮುಂತಾದವು. ಇವನಲ್ಲಿ ಜ್ಞಾನ, ಭಕ್ತಿ, ಕರ್ಮ ಬೆರೆತಿರುತ್ತದೆ. ಇವನು ಸರಿ ತಪ್ಪುಗಳನ್ನು ನಿರ್ಣಯಿಸುವುದರಲ್ಲಿ ಸಾಮಾನ್ಯ ಜನರಿಗೆ ಮಾದರಿಯಾಗುವಂಥವನು. ಹೀಗಾಗಿ ಗೀತೆಯಲ್ಲಿ ಕೃಷ್ಣನು ಅರ್ಜುನನನ್ನು ಕರ್ಮಯೋಗಿ ಸ್ಥಿತಪ್ರಜ್ಞನಾಗುವಂತೆ ಮತ್ತು ನಿರ್ವ್ಯಾಮೋಹಿ ಕರ್ಮಿಯಾಗುವಂತೆ ಬೋಧಿಸುತ್ತಾನೆ.

ತಿಲಕರ ದೃಷ್ಟಿಯಲ್ಲಿ ಸಮಾಜವನ್ನು ಅಪರಿಪೂರ್ಣತೆಯಿಂದ ಪರಿಪೂರ್ಣತೆಯೆಡೆಗೆ ಸುಧಾರಿಸಲು ಇರುವ ಅವಶ್ಯಕತೆಯನ್ನು ಗೀತೆಯು ಪೂರೈಸುತ್ತದೆ. ಶಿವಾಜಿ ಅಫ್ಜಲ್‌ಖಾನ್‌ನನ್ನು ಕೊಂದ ಘಟನೆಯನ್ನು ಹಾಗೂ ಭಾರತದ ತೀವ್ರಗಾಮಿಗಳ ಹಿಂಸೆಯನ್ನು ಈ ಹಿನ್ನೆಲೆಯಲ್ಲಿ ಸಮರ್ಥಿಸುತ್ತಾರೆ. ತೀವ್ರಗಾಮಿಗಳ ಎಲ್ಲ ಚಟುವಟಿಕೆಗಳನ್ನು ಸೈದ್ಧಾಂತಿಕವಾಗಿ ಸಮರ್ಥಿಸುವುದಕ್ಕೆ ಸ್ಥಿತಪ್ರಜ್ಞ ಮೌಲ್ಯವನ್ನು ತಿಲಕ್ ಬಳಸಿದ್ದಾರೆಂದು ಭಾವಿಸಿದರೆ ತಪ್ಪಾಗಲಾರದು.

ತಿಲಕರ ದೃಷ್ಟಿಯಲ್ಲಿ ಮನುಕುಲವು ಸಾಧಿಸಬೇಕಾದ ಅಂತಿಮ ಗುರಿ ವಿಶ್ವಕಲ್ಯಾಣವೇ ವಿನಾ ರಾಷ್ಟ್ರೀಯವಾದವಲ್ಲ. ರಾಷ್ಟ್ರೀಯತೆಯು ಮಾನವ ಜನಾಂಗಕ್ಕೆ ಅತ್ಯುನ್ನತ ಆದರ್ಶವಾಗಬೇಕಿಲ್ಲ. ವಿಶ್ವಪ್ರೇಮ ಹಂತ ತಲುಪುವುದಕ್ಕೆ ಇದು ಏಣಿಯಂತಿರಬೇಕು ಎನ್ನುತ್ತಾರೆ. ಆದರೂ ರಾಷ್ಟ್ರೀಯವಾದವನ್ನು ಇವರು ಸಮರ್ಥಿಸುತ್ತಾರೆ. ಏಕೆಂದರೆ ಭಾರತದ ಪ್ರಸಕ್ತ ಸ್ಥಿತಿ(ಸ್ವಾತಂತ್ರ್ಯ ಆಂದೋಲನದ ಸಂದರ್ಭ)ಯಲ್ಲಿ ರಾಷ್ಟ್ರೀಯತೆಯು ಅತಿ ದೊಡ್ಡ ಧರ್ಮವಾಗಬೇಕಿದೆ. ಅಪರಿಪೂರ್ಣ ಸಮಾಜವು ಪರಿಪೂರ್ಣ ಅವಸ್ಥೆಯನ್ನು ಮುಟ್ಟುವುದರಲ್ಲಿ ದೇಶಭಕ್ತಿಯು ಅತ್ಯಂತ ಸಹಜವಾದುದು. ಹಾಗಾಗಿ ತಿಲಕರು "ಕರ್ಮ ಮತ್ತು ಮುಕ್ತಿ ಈ ಎರಡು ಪರಿಕಲ್ಪನೆಗಳಿಗೆ ತಮ್ಮದೇ ಆದ ರಾಜಕೀಯ ಅರ್ಥವನ್ನು ಕೊಡುತ್ತಾರೆ. ಗೀತೆಯು ಬೋಧಿಸುವ 'ಕರ್ಮ'ವೆಂದರೆ ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಪ್ರತಿಯೊಬ್ಬ ಭಾರತೀಯನೂ ದುಡಿಯುವುದು ಮತ್ತು ಮುಕ್ತಿಯೆಂದರೆ ಪರರ ಆಳ್ವಿಕೆಯಿಂದ ಮುಕ್ತವಾಗಿ ತಾಯ್ನಾಡಿಗೆ ಲಭಿಸುವ ಸ್ವಾತಂತ್ರ್ಯ. ಈ ನೆಲೆಯಲ್ಲಿ, ಕೃತಿಯ ಪ್ರಾರಂಭದಲ್ಲಿ ಬರುವ ಕುರುಕ್ಷೇತ್ರ ಯುದ್ಧವನ್ನು ತಿಲಕರು ಸ್ವಾತಂತ್ರ್ಯ ಹೋರಾಟದ ಅನ್ಯೋಕ್ತಿಯಂತೆ ಪರಿಭಾವಿಸಿ, ಅರ್ಜುನನನ್ನು ದಾಸ್ಯದ ಅಂಧಕಾರದಲ್ಲಿ ಮುಳುಗಿದ ಭಾರತೀಯರೊಡನೆ ಮತ್ತು ವಿದೇಶದಿಂದ ಬಂದು ಭಾರತವನ್ನು ಆಕ್ರಮಿಸಿಕೊಂಡಿದ್ದ ಬ್ರಿಟಿಷರನ್ನು ಕೌರವರೊಡನೆ ಸಮೀಕರಿಸಿ, ಕೌರವ-ಪಾಂಡವ ಯುದ್ಧವನ್ನು ಬ್ರಿಟಿಷರ ವಿರುದ್ಧ ನಡೆಯುವ

'ಧರ್ಮಯುದ್ಧ'ದಂತೆ ವ್ಯಾಖ್ಯಾನಿಸುತ್ತಾರೆ. "ಕ್ಲೈಬ್ಯಂ ಮಾಸ್ಮ ಗಮ್ಯ ಪಾರ್ಥ ನೈತತ್ ತ್ವಯಿ ಉಪದ್ಯತೇ। ಕ್ಷುದ್ರಂ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ"(ಅರ್ಜುನಾ! ನಪುಂಸಕನಂತೆ ವರ್ತಿಸಬೇಡ. ಅದು ನಿನಗೆ ಶೋಭಿಸುವುದಿಲ್ಲ; ಓ ಶತ್ರುಭಂಜನನೆ ನಿನ್ನ ಹೃದಯದಲ್ಲಿರುವ ಈ ದೌರ್ಬಲ್ಯವನ್ನು ದೂರಮಾಡು; ಎದ್ದೇಳು(೨-೩) ಎಂದು ಕೃಷ್ಣನು ಅರ್ಜುನನಿಗೆ ಕೊಡುವ ಉಪದೇಶ ತಿಲಕರು ಭಾರತೀಯರೆಲ್ಲಗೂ ಕೊಡುವ ಉಪದೇಶವಾಗುತ್ತದೆ"[೪೦] ಎಂದು ಕರೆನೀಡುತ್ತಾರೆ. ಅಲ್ಲದೆ ಅನ್ಯರಾಷ್ಟ್ರಗಳಿಗೆ ಕೇಡುಂಟು ಮಾಡಲು ಬಯಸುವ ಸಾಮ್ರಾಜ್ಯಶಾಹಿ ರಾಷ್ಟ್ರವು ಸ್ಥಿತಪ್ರಜ್ಞ ಸ್ವಭಾವದ ರಾಷ್ಟ್ರಗಳಿಂದ ಕರುಣೆ, ನ್ಯಾಯ, ಅಹಿಂಸೆಯನ್ನು ನಿರೀಕ್ಷಿಸಬಾರದು ಎಂದೂ ತಿಲಕರು ವಾದಿಸುತ್ತಾರೆ.

ಬಂಕಿಮರು ಮತ್ತು ತಿಲಕರು ದೇಶಭಕ್ತಿಯ ಕುರಿತಾಗಿ ಸಮಾನ ಚಿಂತನೆಯನ್ನು ಹೊಂದಿದ್ದಂತೆ ಕಾಣುತ್ತದೆ. "ತಿಲಕರ ಪ್ರಕಾರ ಭಕ್ತಿ, ಅನುಭವ, ನಂಬಿಕೆ ಮತ್ತು ಭಾವನಾತ್ಮಕತೆಯು ವಿಜ್ಞಾನದ ತಾರ್ಕಿಕತೆಗಿಂತ ಮಿಗಿಲಾದುದಾಗಿದೆ. ಬಂಕಿಮರು ಕರ್ಮಯೋಗದ ತಾತ್ವಿಕತೆಯನ್ನು ಅರ್ಥೈಸಿ ಕೊಳ್ಳುವುದರಲ್ಲಿ ವಿಜ್ಞಾನದ ಉಚಿತತೆ ಅತ್ಯಲ್ಪವೆಂದು ಪರಿಗಣಿಸುವಂತೆಯೇ ತಿಲಕರೂ ಸಹ ಪರಿಗಣಿಸುತ್ತಾರೆ"[೪೧] ಎಂದು ನಾಗಪ್ಪಗೌಡ ಅವರು ಗುರುತಿಸುತ್ತಾರೆ.

ವೇದಗಳನ್ನು ಕೇಳುವುದಕ್ಕೂ ಕೆಲವು ವರ್ಗಗಳು ಅನರ್ಹವೆಂದು ವಾದಿಸುವ ವೈದಿಕ ಸಮಾಜವು ಅಪ್ರಬುದ್ಧತೆಯನ್ನು ಮತ್ತು ಅಶುದ್ಧತೆಯನ್ನು ಹೊಂದಿದೆ. ಗೀತೆಯು ಜ್ಞಾನಾರ್ಜನೆಗೆ ಎಲ್ಲಿಯೂ ತರತಮ ಮಾಡಿಲ್ಲ. ವ್ಯಕ್ತಿಗಳಲ್ಲಿ ಸಾತ್ವಿಕ, ರಜಸ್, ತಮಸ್ ಗುಣಗಳೆಂಬ ವ್ಯತ್ಯಾಸಗಳಷ್ಟೇ ಇದ್ದು, ಅವರವರ ಮನೋಶಕ್ತಿಗೆ ಅನುಸಾರವಾಗಿ ಮೋಕ್ಷಕ್ಕೆ ಭಿನ್ನ ಮಾರ್ಗಗಳಿವೆ. "ಯಾವನ ಬುದ್ಧಿಯು ಸಮವಾಯಿತೋ ಅವನೇ ಶ್ರೇಷ್ಠನು-ಅವನ ಹೋರೆಯು ಬಡಿಗತನವಿರಲಿ, ವ್ಯಾಪಾರವಿರಲಿ ಅಥವಾ ಅವನು ಕಟಗನಿರಲಿ; ಯಾವುದೇ ಮನುಷ್ಯನ ಯೋಗ್ಯತೆಯು ಹೋರೆಯ ಮೇಲೆ ಅಥವಾ ಜಾತಿಯ ಮೇಲೆ ಅವಲಂಬಿಸಿರದೆ ಸರ್ವಸ್ವೀ ಅವನ ಅಂತರಂಗದ ಶುದ್ಧಿಯ ಮೇಲೆ ಅವಲಂಬಿಸಿರುತ್ತದೆಂದು ಭಗವಂತನ ಹೇಳೋಣವಿರುತ್ತದೆಂಬುದು ಸ್ಪಷ್ಟವಾಗುತ್ತದೆ. ಈ ಮೇರೆಗೆ ಸಮಾಜದೊಳಗೆ ಸರ್ವರಿಗೂ ಮೋಕ್ಷದ್ವಾರವು ತೆರೆದಿರುವುದರಿಂದ ಸಮಾಜದಲ್ಲಿ ಒಂದು ಪ್ರಕಾರದ ಜಾಗ್ರತೆಯು ಉತ್ಪನ್ನವಾಗುತ್ತದೆ"[೪೨] ಜ್ಞಾನ ಅಥವಾ ಮೋಕ್ಷವು ಕೇವಲ ಮೇಲ್ವರ್ಗಗಳಿಗಷ್ಟೇ ಎಂಬುದು ಗೀತೆಯಲ್ಲಿ ಉಲ್ಲೇಖಗೊಂಡಿಲ್ಲ. ಸಾಮಾಜಿಕ ಅಥವಾ ಲಿಂಗಾಧಾರಿತ ಸಮೂಹ ವಿಭಜನೆಯೂ ಗೀತೆಯಲ್ಲಿಲ್ಲ. ಜಾತಿ ಅಥವಾ ಸಾಮಾಜಿಕ ಪ್ರವರ್ಗಕ್ಕಿಂತ ಮಿಗಿಲಾದುದು ನಂಬಿಕೆ ಮತ್ತು ನಿಸ್ವಾರ್ಥತೆ. ಮಹಾಭಾರತದಲ್ಲಿ ಶೂದ್ರರೂ ಸಹ ಭಕ್ತಿಮಾರ್ಗದ ಮೂಲಕ ಮುಕ್ತಿಪಡೆದಂತೆಯೇ ಭಕ್ತಿಯ ಮೂಲಕ ಮೋಕ್ಷ ಹೊಂದುವುದಕ್ಕೆ ಮಹಿಳೆಯರು ಮತ್ತು ಚಂಡಾಲರು ಮೇಲ್ವರ್ಗಗಳಷ್ಟೇ ಅರ್ಹರು ಎಂದು ಗೀತೆಯೂ ಪ್ರತಿಪಾದಿಸಿದೆ ಎಂದಿದ್ದಾರೆ.

ತಿಲಕರು ಹಲವು ವಿಷಯಗಳಲ್ಲಿ ದ್ವಂದ್ವಾತ್ಮಕ ನಿಲುವುಗಳನ್ನು ತಾಳುತ್ತಾರೆ. ರಾಜಕೀಯ ಮತ್ತು ಸಾಮಾಜಿಕ ಸುಧಾರಣೆಯ ವಿಷಯಗಳಲ್ಲಿ ಅವರು ಸಂಪ್ರದಾಯವಾದಿ ಅಥವಾ

ಮನುವಾದಿಯಾಗಿರುತ್ತಾರೆ. ಕೇಸರಿ ಮತ್ತು ಮರಾಠದಲ್ಲಿನ ಇವರ ಬರವಣಿಗೆಗಳು ಇದನ್ನು ಎತ್ತಿ ತೋರಿಸಿವೆ. ಧರ್ಮ ಮತ್ತು ಸಮಾಜದಲ್ಲಿನ ಬ್ರಾಹ್ಮಣರ ಆಧಿಪತ್ಯವನ್ನು ಸಮರ್ಥಿಸುತ್ತಾ, ಇತರ ವರ್ಗಗಳ ಪಾರಮ್ಯವನ್ನು ವಿರೋಧಿಸುತ್ತಾರೆ. ಮಹಿಳೆಯರ ಶಿಕ್ಷಣಕ್ಕೆ ವಿರೋಧಿಸುವುದೂ ಸಹ ಇವರ ಸಾಂಪ್ರದಾಯಿಕತೆಯನ್ನು ತೋರಿಸುತ್ತದೆ.

ಭಾರತದಲ್ಲಿ ಉದಯಿಸುತ್ತಿರುವ ರಾಷ್ಟ್ರೀಯವಾದವು ಸ್ಪಷ್ಟವಾದ ನೈತಿಕ ತತ್ವಗಳು, ಆದರ್ಶಗಳು ಮತ್ತು ಮಾದರಿಗಳ ಬುನಾದಿ ಹೊಂದಿರುವುದು ಅತ್ಯಾವಶ್ಯಕವೆಂದು ತಿಲಕರು ಪರಿಗಣಿಸಿದ್ದರು. ಪೌರಾತ್ಯ ಸಾಹಿತ್ಯವು ಈ ನೆಲೆಯಲ್ಲಿ ಸ್ಪಷ್ಟ ನಿಲುವುಗಳನ್ನು ಹೊಂದಿತ್ತು. ಬೈಬಲ್ ಮತ್ತು ಖುರಾನಿನಂತೆ ಅಧಿಕೃತ ಪಠ್ಯವೊಂದು ಭಾರತಕ್ಕೆ ಇಲ್ಲದಿದ್ದುದನ್ನು ಗುರುತಿಸಿತು. ಹಿಂದೂವಾದದ ವಿವಿಧ ವರ್ಗಗಳು ಮತ್ತು ಪರಂಪರೆಗಳು ಹಾಗೂ ಸನಾತನ ಪಠ್ಯಗಳಲ್ಲಿ ವೈರುಧ್ಯಗಳಿದ್ದುದನ್ನು ಗುರುತಿಸಿತು. ಹಾಗಾಗಿ ಗೀತೆಯು ಈ ಎಲ್ಲಾ ಕೊರತೆಗಳನ್ನು ನೀಗುವ ಪಠ್ಯವಾಗಿ ತಿಲಕರಿಗೆ ಕಾಣಿಸಿತು. ಅಲ್ಲದೆ ಗೀತೆಯು ಪಶ್ಚಿಮದ ಯಾವುದೇ ಪಠ್ಯಕ್ಕಿಂತಲೂ ದೊಡ್ಡದೆಂದು ಅವರು ಭಾವಿಸಿದ್ದರು. ತಿಲಕರು ಜಗತ್ತಿನಲ್ಲಿ ಭಾರತವು ಕ್ರಿಯಾಶೀಲವಾಗಲು ಕರ್ಮಯೋಗದಲ್ಲಿ ತೊಡಗಬೇಕು, ಜ್ಞಾನಯೋಗವು ಅದಕ್ಕೆ ಪೂರಕವಾಗಿರಬೇಕು ಎಂದು ಭಾವಿಸುತ್ತಾರೆ. ನಿಷ್ಕಾಮಕರ್ಮ ಮತ್ತು ಕರ್ಮಯೋಗದ ನಡುವೆ ಸಂಬಂಧವೇರ್ಪಡಿಸುವ ಮೂಲಕ ಜನರು ಜಗತ್ತಿನ ಕಾರ್ಯವ್ಯವಹಾರಗಳಲ್ಲಿ ತೊಡಗುವುದಕ್ಕೆ ಅವಕಾಶ ಕೊಡುವಂಥ ಕರ್ಮಮಾರ್ಗಕ್ಕೆ ಅವರು ಮಹತ್ವ ಕೊಟ್ಟಿದ್ದಾರೆ.

ವಿವೇಕಾನಂದ ಮತ್ತು ಗೀತೆ

ತಾತ್ವಿಕ ರಾಷ್ಟ್ರೀಯತಾವಾದದ ಸಿದ್ಧಾಂತಗಳನ್ನು ಕಟ್ಟಿಕೊಡುವುದರಲ್ಲಿ ೧೯ನೇ ಶತಮಾನದ ಬಹುಮುಖ್ಯ ಬಂಗಾಳಿ ಚಿಂತಕರಲ್ಲಿ ಇವರೂ ಒಬ್ಬರು. ಇವರ 'ಗೀತಾಪ್ರವಚನ'(ಥಾಟ್ಸ್ ಆನ್ ದ ಗೀತಾ) ಕೃತಿಯು ರಾಷ್ಟ್ರೀಯತಾವಾದ, ರಾಷ್ಟ್ರದ ಅಸ್ಮಿತೆ ಹಾಗೂ ಸಾಮಾಜಿಕ ವ್ಯವಸ್ಥೆಗಳ ಕುರಿತಾಗಿ ಇವರ ಆಲೋಚನೆಗಳನ್ನು ವ್ಯವಸ್ಥಿತವಾಗಿ ಬಿಂಬಿಸುತ್ತವೆ. ಇತರ ರಾಷ್ಟ್ರೀಯ ಲೇಖಕರಂತೆ ಗೀತೆಯ ಬಗ್ಗೆ ಸ್ವತಂತ್ರ ವ್ಯಾಖ್ಯಾನವನ್ನು ಇವರು ಬರೆದಿಲ್ಲ.

ಭಗವದ್ಗೀತೆ ಉಪನಿಷತ್ತಿಗೆ ಒಂದು ಭಾಷ್ಯ. ಉಪನಿಷತ್ತುಗಳು ಭಾರತ ದೇಶದ ಬೈಬಲ್ಲು. ಗೀತೆ ಉಪನಿಷತ್ತುಗಳ ಭಾವನೆಯನ್ನು ಆಧರಿಸಿದ್ದು, ಕೆಲವು ವೇಳೆ ಅದೇ ಪದಗಳನ್ನು ಬಳಸುವುದು. ಉಪನಿಷತ್ತುಗಳು ಯಾವ ಯಾವ ವಿಷಯಗಳನ್ನು ಹೇಳುವುವೋ ಅವನ್ನೆಲ್ಲಾ ಗೀತೆ ಅಚ್ಚುಕಟ್ಟಾಗಿ ಸಂಗ್ರಹವಾಗಿ, ಕ್ರಮವಾಗಿ ಬೋಧಿಸಿರುವುದು ಎಂದು ಹೇಳಿದ್ದಾರೆ.

ಭಾರತ ರಾಷ್ಟ್ರಕ್ಕೆ ಭದ್ರವಾದ ತಾತ್ವಿಕ ಬುನಾದಿ ಇರಬೇಕು ಹಾಗೂ ಈ ಬುನಾದಿಯ ಮೇಲೆ ಅದರ ಸಾಮಾಜಿಕ ರಾಜಕೀಯ ವ್ಯವಸ್ಥೆ ರೂಪುಗೊಳ್ಳಬೇಕು. ಎಲ್ಲಾ ಪುರಾತನ ಪಠ್ಯಗಳಲ್ಲಿ ಗೀತೆಯೇ ಅತ್ಯುನ್ನತ ಮಟ್ಟದ್ದು. ಕೆಲವರಿಗೆ ಮಾತ್ರ ಸೀಮಿತವಾಗಿಸುವ ವೇದಗಳ

ಧರ್ಮವನ್ನು ತಿರಸ್ಕರಿಸಿ, ಎಲ್ಲರನ್ನು ಅದರಲ್ಲೂ ಮುಖ್ಯವಾಗಿ ವೈದಿಕ ಉಪನಿಷತ್ತುಗಳಲ್ಲಿ ನಿರ್ಲಕ್ಷಿಸಲಾಗಿದ್ದವರನ್ನು ಒಳಗೊಳ್ಳುತ್ತದೆ. ಇದು ಬ್ರಾಹ್ಮಣರ ಪರಮಾಧಿಕಾರವನ್ನು ಅಲ್ಲಗಳೆದು ಎಲ್ಲ ವ್ಯಕ್ತಿಗಳನ್ನು ಸಮಾನವಾಗಿ ಕಾಣುತ್ತದೆ ಮತ್ತು ವೇದಗಳಲ್ಲಿನ ಕಟುಸಂಪ್ರದಾಯಗಳು ಆಚರಣೆಗಳನ್ನು ಪ್ರೋತ್ಸಾಹಿಸುವುದಿಲ್ಲ. ಹೀಗಾಗಿ ವಿವೇಕಾನಂದರ ರಾಷ್ಟ್ರೀಯತಾ ಸಂಕಥನವು ಗೀತೆಯನ್ನು ಭಾರತ ರಾಷ್ಟ್ರಕ್ಕೆ ನೈತಿಕ ಬುನಾದಿ ಒದಗಿಸುತ್ತದೆ ಎಂದು ಭಾವಿಸಿದ್ದರು. ಆಗಿನ ಕಾಲದಲ್ಲಿನ ಬಹುತೇಕ ಸುಶಿಕ್ಷಿತರು ಭಾವಿಸಿದಂತೆ ಇವರೂ ಸಹ ಭಾರತದ ಸಂಸ್ಕೃತಿ ನಶಿಸುತ್ತಿದೆ ಎಂದು ಭಾವಿಸಿದ್ದರು.

ಬಳಕೆ ತಪ್ಪಿರುವ ವೈದಿಕ ಸನ್ಯಾಸ ಅಥವಾ ಆತ್ಮಶುದ್ಧಿಯನ್ನು ಅನುಸರಿಸಿದರೆ ಭಾರತದ ಪುನರ್ ನಿರ್ಮಾಣವು ಅತಿ ಸಂಕುಚಿತವಾಗಿ ಬಿಡುತ್ತದೆ. ಏಕೆಂದರೆ ಇದು ಪುರೋಹಿತ ವರ್ಗದ ಬೌದ್ಧಿಕತೆಯನ್ನು ಮಾತ್ರ ಎತ್ತಿಹಿಡಿಯುತ್ತದೆ. ಭಾರತ ಹೊಸದಾಗಿ ಬೆಳೆಯುತ್ತಿದ್ದು ಪಾಶ್ಚಾತ್ಯ ಸಂಸ್ಕೃತಿ ಮತ್ತು ನಾಗರಿಕತೆ ರೂಪಿಸಿರುವ ಮಾದರಿಯನ್ನು ಯಥಾವತ್ತಾಗಿ ಅನುಸರಿಸಲಾಗದು. ವೈದಿಕ ಸಂಪ್ರದಾಯ ಹಾಗೂ ಜಾತಿಶೋಷಣೆಯಿಂದ ಜನರನ್ನು ಸ್ವತಂತ್ರವಾಗಿಸುವುದಕ್ಕೆ ನೆರವಾಗುವ ತಾತ್ವಿಕ ತಳಹದಿ ಈಗಿನ ಅಗತ್ಯವಾಗಿದೆ.

ಇವರು ರಾಷ್ಟ್ರೀಯತೆ, ರಾಷ್ಟ್ರೀಯ ಪುನರ್‌ನಿರ್ಮಾಣ ಅಥವಾ ರಾಷ್ಟ್ರೀಯ ಅಸ್ಮಿತೆಯನ್ನು ವಸಾಹತುಶಾಹಿ ವಿರೋಧದ ಪ್ರಜ್ಞೆಯಲ್ಲಿ ಪರಿಗಣಿಸಿಲ್ಲ ಎಂಬುದು ಗಮನಾರ್ಹ. ಹಾಗೆಯೇ ಬ್ರಾಹ್ಮಣವಿರೋಧಿ ಪ್ರಜ್ಞೆಯನ್ನು ಜಾಗೃತಗೊಳಿಸುವ ಅಥವಾ ಈ ಹಿಂದೆ ಬ್ರಾಹ್ಮಣರಿಂದ ದೌರ್ಜನ್ಯಕ್ಕೆ ಒಳಗಾದ ಬಡವರ ಮೇಲೆ ಕರುಣೆ ತೋರಿಸುವ ರೀತಿಯಲ್ಲೂ ಇವನ್ನು ಬಳಸಿಲ್ಲ. ಇವರಿಗೆ ರಾಷ್ಟ್ರೀಯತೆ ಎಂಬುದು ಸಮಾಜದ ಬಡವರು ಹಾಗೂ ತಳವರ್ಗಗಳನ್ನು ಮೇಲೆತ್ತುವ ಅಭಿಯಾನವಾಗಿತ್ತು. ಜನರಲ್ಲಿ ಅರಿವು ಮೂಡಿಸುವ ಮತ್ತು ಧೈರ್ಯ ಸ್ಫೂರ್ತಿ ತುಂಬುವ, ಆ ಮೂಲಕ ಧರ್ಮ ಹಾಗೂ ಮೋಕ್ಷವನ್ನು ಬ್ರಾಹ್ಮಣರಂತೆ ಜನಸಾಮಾನ್ಯರಿಗೂ ಲಭ್ಯವಾಗಿಸುವ ಚಳುವಳಿಯಾಗಿತ್ತು. ಇದಕ್ಕಾಗಿ ನರ–ನಾರಾಯಣ ಮತ್ತು ದರಿದ್ರ ನಾರಾಯಣ ಪರಿಕಲ್ಪನೆಯನ್ನು ಗೀತೆಯ ತಾತ್ವಿಕತೆಯಿಂದ ಪಡೆದು ಪ್ರಚುರಪಡಿಸುತ್ತಾರೆ. ಈ ಎರಡೂ ಇವರ ರಾಷ್ಟ್ರೀಯತಾ ಯೋಜನೆಯಲ್ಲಿ ಕೇಂದ್ರಸ್ಥಾನ ಪಡೆದಿದ್ದವು. ಇವು ಭಾರತವನ್ನು ಬಲಿಷ್ಠ ರಾಷ್ಟ್ರವನ್ನಾಗಿಸಿ ಭಾರತವನ್ನು ಜಗತ್ತಿನ ಆಧ್ಯಾತ್ಮಿಕ ಮಾರ್ಗದರ್ಶಿಯಾಗಿಸಬಲ್ಲವು.

ಭಾರತೀಯರು ಭಗವದ್ಗೀತೆಯಂಥ ಶ್ರೀಮಂತ ಕೃತಿ ಪರಂಪರೆ ಹೊಂದಿರುವ ಬಗ್ಗೆ ಹಮ್ಮೆಪಡಬೇಕು. ಏಕೆಂದರೆ ಕೃಷ್ಣನ ನಿಷ್ಕಾಮಕರ್ಮ ಸಂಕಲ್ಪನೆಯ ಮೂಲಕ ಬುದ್ಧ, ಕ್ರಿಸ್ತನಿಗೂ ಮೊದಲೇ ದೀನದುರ್ಬಲರು, ಕೆಳವರ್ಗಗಳ ಪುರುಷ–ಮಹಿಳೆಯರು ತಮ್ಮ ತಮ್ಮದೇ ಹಾದಿಯಲ್ಲಿ ಸುಲಭವಾಗಿ ಧರ್ಮ ಆಚರಿಸುವುದಕ್ಕೆ ಗೀತೆಯಲ್ಲಿ ಅವಕಾಶವಿದೆ. ವೈವಿಧ್ಯಪೂರ್ಣ ಆಚಾರ, ನಂಬಿಕೆಗಳ ಆಚರಣೆಗಳಿಗೂ ಇದು ಅವಕಾಶ ಕಲ್ಪಿಸಿದೆ. ಕರ್ಮ, ಜ್ಞಾನ, ಭಕ್ತಿ ಇಂಥ

ಯಾವುದೇ ಮಾರ್ಗವಿರಲಿ ದೈವಕ್ಕೆ ಅರ್ಪಿಸಿಕೊಂಡು ಪ್ರಾಮಾಣಿಕವಾಗಿ, ವಿನಮ್ರವಾಗಿ ತೊಡಗಿಸಿಕೊಂಡರೆ ಅದು ಮಾನ್ಯವಾಗುತ್ತದೆ. ಭಗವದ್ಗೀತೆಯಲ್ಲಿ ಬರುವ ನಿಷ್ಕಾಮ ಸಂಕಲ್ಪನೆಯು ಮೂಲತಃ ಸಮಾನತೆ ಬೋಧಿಸುತ್ತದೆ; ವೈವಿಧ್ಯತೆಯನ್ನು ಒಪ್ಪುತ್ತದೆ. ಇದು ಧಾರ್ಮಿಕ, ನೈತಿಕ ಹುಡುಕಾಟದ ವ್ಯಕ್ತಿಗಳ ನಡುವೆ ಭೇದವೆಣಿಸುವುದಿಲ್ಲ. ನಿಷ್ಕಾಮಕರ್ಮವು ಎಲ್ಲ ಮನುಷ್ಯರನ್ನು ವಿಶ್ವಮಟ್ಟದಲ್ಲಿ ಬೆಸೆಯುತ್ತದೆ. ಇದು ಜನರನ್ನು ಧರ್ಮದ ಆಧಾರದಲ್ಲಿ ವಿಭಜಿಸುವುದಿಲ್ಲ. ಆದರೆ ಪುರೋಹಿತವರ್ಗವು ಮೂಲದಲ್ಲಿ ಶುದ್ಧರೂಪದಲ್ಲಿದ್ದ ವೇದ ಉಪನಿಷತ್ತುಗಳನ್ನು ಜನರಿಗೆ ತಲುಪಲು ಬಿಡದೆ ಅಲ್ಪಸಂಖ್ಯಾತ ಬ್ರಾಹ್ಮಣರ ಸ್ವತ್ತಾಗಿಸಿತ್ತು. ಕೆಳವರ್ಗದ ಜನರ ನಡುವೆ ಅಂತರವನ್ನು ಕಾಯ್ದುಕೊಳ್ಳುವುದಕ್ಕಾಗಿ ಕಠಿಣ ಕಟ್ಟಳೆಗಳನ್ನು ಅಡಕ ಮಾಡಿತು; ಚತುರ್ವರ್ಣ ವ್ಯವಸ್ಥೆ ಸೃಷ್ಟಿಸಿತು; ಮೋಕ್ಷವನ್ನು ಮೇಲ್ವರ್ಗಗಳ ಸ್ವತ್ತಾಗಿಸಿತು. ವೈದಿಕ ಧರ್ಮವು ವಿಶ್ವಧರ್ಮವಾಗಲು ಸಮರ್ಥವಿದ್ದರೂ ಕೂಡಾ ಅದರ ಮೂಲಸ್ವರೂಪವನ್ನು ವಿರೂಪಗೊಳಿಸಿ ಮೌಢ್ಯಗಳನ್ನು ತುಂಬಿದ ಪುರೋಹಿತವರ್ಗದ ಕಾರಣಕ್ಕೆ ವೈದಿಕ ಧರ್ಮವು ಪಂಥಗಳಾಗಿ ಹರಿದು ಹಂಚಿಹೋಗುವಂತಾಗಿದೆ. ಭಗವದ್ಗೀತೆ ಈ ಬಿರುಕುಗಳನ್ನು ಮುಚ್ಚುತ್ತದೆ. ಮುಖ್ಯವಾಗಿ ನಿಷ್ಕಾಮಕರ್ಮವು ಜ್ಞಾನ, ಕರ್ಮ, ಭಕ್ತಿ ಮಾರ್ಗಗಳನ್ನು ಸಂಘಟಿಸುತ್ತದೆ. ಭಗವದ್ಗೀತೆಯು ವೇದ ಉಪನಿಷತ್ತುಗಳನ್ನಷ್ಟೇ ಅಲ್ಲ, ಜಗತ್ತಿನ ಎಲ್ಲ ಧರ್ಮಗಳೊಂದಿಗೂ(ಉದಾಹರಣೆಗೆ ಬೌದ್ಧ, ಕ್ರೈಸ್ತ) ಸಹ ಸಾಮರಸ್ಯಕ್ಕೆ ಪ್ರಯತ್ನಿಸುತ್ತದೆ. ಇದು ಧರ್ಮಗಳು ಮತ್ತು ಧಾರ್ಮಿಕ ಆಚರಣೆಗಳ ನಡುವೆ ಸೇತುವೆ ನಿರ್ಮಿಸುತ್ತದೆ ಎಂದು ವಿವೇಕಾನಂದರು ಹೇಳಿದ್ದಾರೆ.

ವಿವೇಕಾನಂದರ ದೃಷ್ಟಿಯಲ್ಲಿ ಗೀತೆಯ ಕೇಂದ್ರಮೌಲ್ಯವು 'ನಿಷ್ಕಾಮಕರ್ಮ'ವಾಗಿದೆ. ಎಂದರೆ, ನಿರಂತರವಾಗಿ ಕಾರ್ಯತತ್ಪರರಾಗಿರುವುದು; ಅದರೊಂದಿಗೆ ಯಾವುದೇ ರಾಗ ಮೋಹಗಳನ್ನು ಹೊಂದಿರದಿರುವುದು: "ಪ್ರತಿಯೊಂದು ಕಾರ್ಯವು ಒಳಿತು ಮತ್ತು ಕೆಡುಕುಗಳನ್ನು ಅಗತ್ಯವಾಗಿ ಒಳಗೊಳ್ಳುತ್ತದೆ... ಒಳಿತು ಮತ್ತು ಕೆಡುಕು ಎಂಬುದು ಆತ್ಮಕ್ಕಿರುವ ಬಂಧನಗಳು. ಕರ್ಮದ ಈ ಬಂಧನ ಸ್ವರೂಪದಿಂದ ಹೊರಬರುವುದಕ್ಕೆ ಗೀತೆಯು ನೀಡುವ ಪರಿಹಾರವೆಂದರೆ, ನಾವು ಮಾಡುವ ಕಾರ್ಯ ಅಥವಾ ಕರ್ಮದೊಂದಿಗೆ ಮೋಹ ಹೊಂದದಿರುವುದು, ಇದರಿಂದ ಆತ್ಮಕ್ಕೆ ಯಾವುದೇ ಬಂಧನದ ಬಾಧೆಯಿರದು... ಇದು ಗೀತೆಯ ಕೇಂದ್ರ ಆದರ್ಶ; ನಿರಂತರವಾಗಿ ಕರ್ಮದಲ್ಲಿ ತೊಡಗಿರಿ, ಆದರೆ ಕರ್ಮದೊಂದಿಗೆ ಮೋಹ ಹೊಂದದಿರಿ"[೪೩] ಎಂದು ಕರೆಕೊಡುತ್ತಾರೆ. ನಾಗಪ್ಪಗೌಡರು ಹೇಳುವಂತೆ ವಿವೇಕಾನಂದರಿಗೆ ನಿಷ್ಕಾಮಕರ್ಮವು ಪೂರ್ಣವಾಗಿ ಆಸಕ್ತಿರಹಿತ, ಉದ್ದೇಶರಹಿತ ಕರ್ಮವಲ್ಲ. ಆದರೆ ಇಂಥ ಕರ್ಮದಲ್ಲಿ ಸ್ವಾರ್ಥದ ಉದ್ದೇಶ ಅಥವಾ ಅಹಂ ಇರುವುದಿಲ್ಲ. ಲೋಕದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಲೇ, ಬದುಕನ್ನು ಸಂಭ್ರಮಿಸುತ್ತಲೇ ನಿಷ್ಕಾಮಕರ್ಮಿಯಾಗಿರುವುದು ಸಾಧ್ಯ. ವಿವೇಕಾನಂದರು ಆಶಾವಾದಿತ್ವದ ಜೀವನಕ್ಕೆ ಒತ್ತು ನೀಡುವುದು ಕಾಣುತ್ತದೆ. ಹಾಗೆಯೇ ವಿಶ್ವಶಾಂತಿ ನಿರ್ಮಾಣದಲ್ಲಿ ಹಿಂಸೆಯ ಅನಿವಾರ್ಯತೆಯನ್ನು ಒಪ್ಪುತ್ತಾರೆ. ಆದರೆ ಇಂಥ ಹಿಂಸೆಯಲ್ಲಿ ತೊಡಗಲು ಆದರ್ಶವುಳ್ಳ

ನೈತಿಕ ಮೌಲ್ಯಗಳುಳ್ಳ ನಿಷ್ಕಾಮಕರ್ಮಿಗೆ ಮಾತ್ರ ಅನುಮತಿಯಿದೆ. ವಿಶ್ವಕಲ್ಯಾಣದ ಉದ್ದೇಶ ಹೊಂದಿರುವ ಪ್ರತಿ ಕಾರ್ಯವು ಸಮ್ಮತವೇ, ಇಂಥ ಕಾರ್ಯದಲ್ಲಿ ಹಿಂಸೆ ಅಹಿಂಸೆಯೆಂದು ಪ್ರತ್ಯೇಕಿಸಲಾಗದು. ನಿಷ್ಕಾಮಕರ್ಮಿಯು ಹಿಂಸೆ ಮತ್ತು ಅಹಿಂಸೆಯೆಂಬ ಭೇದವೆಣಿಸದೆ ಕರ್ಮದಲ್ಲಿ ತೊಡಗುತ್ತಾನೆ. ನಿಸ್ವಾರ್ಥದಿಂದ ಕೂಡಿದ ಇಂಥ ಕರ್ಮಿಗೆ ಪಾಪಭಯವಿರುವುದಿಲ್ಲ."[೪೪]

ಈ ನಿಷ್ಕಾಮಕರ್ಮವು ಪ್ರಧಾನವಾಗಿ ಬೌದ್ಧಿಕ ಶುದ್ಧತೆ, ಹೃದಯದ ಶುದ್ಧತೆ, ರಾಗ ದೌರ್ಬಲ್ಯಗಳಿಂದ ಬಿಡುಗಡೆ, ಕ್ರಿಯೆಯ ಮೇಲೆ ಪೂರ್ಣ ಶಕ್ತಿ, ಏಕಾಗ್ರತೆ–ಈ ನಾಲ್ಕು ಅಂಶಗಳನ್ನು ಹೊಂದಿರುತ್ತದೆ. ಇವರ ಆಲೋಚನೆ ಕರ್ಮಯೋಗ ಕೇಂದ್ರಿತವಾದುದು. ಸ್ವಾರ್ಥರಹಿತರಾಗಿ ಏಕಾಗ್ರತೆಯಿಂದ ಕ್ರಿಯೆಯಲ್ಲಿ ತೊಡಗಬೇಕು. ಇಂಥ ಕರ್ಮಗಳಿಂದ ಜಗತ್ತಿಗೆ ಹಾನಿಯಾಗಲು ಸಾಧ್ಯವಿಲ್ಲ. "ಗೀತೆಯು ಕರ್ಮಯೋಗವನ್ನು ಬೋಧಿಸುತ್ತದೆ. ನಾವು ಯೋಗ(ಏಕಾಗ್ರತೆ)ದಿಂದ ಕರ್ಮದಲ್ಲಿ ತೊಡಗಬೇಕು. ಕರ್ಮದಲ್ಲಿ(ಕರ್ಮ–ಯೋಗ) ಈ ಬಗೆಯ ಏಕಾಗ್ರತೆಯ ಸ್ಥಿತಿಯಲ್ಲಿ ಕೀಳು ಅಹಂನ ಅಸ್ತಿತ್ವದ ಬಗ್ಗೆ ಜಾಗೃತವಾಗಿರುವುದಿಲ್ಲ. ವರ್ಣಚಿತ್ರ ಕಲಾವಿದನು ತನ್ನ ಅಹಮಿಕೆಯ ಬಗ್ಗೆ ಜಾಗೃತತೆಯನ್ನು ಕಳೆದುಕೊಂಡರೆ, ಪೂರ್ಣವಾಗಿ ತನ್ನ ವರ್ಣಚಿತ್ರದಲ್ಲಿ ತನ್ಮಯನಾಗುತ್ತಾನೆ, ಅವನಿಗೆ ಮೇರು ಚಿತ್ರಗಳನ್ನು ರಚಿಸುವುದು ಸಾಧ್ಯವಾಗುತ್ತದೆ. ಎಲ್ಲ ಕಾರ್ಯಗಳನ್ನು ಹೀಗೆ ಮಾಡಬೇಕೆಂದು ಬೋಧಿಸುತ್ತದೆ. ಯೋಗದ ಮೂಲಕ ದೈವದೊಂದಿಗೆ ಬೆಸೆದುಕೊಳ್ಳುವ ವ್ಯಕ್ತಿಯು ಅವನ್ನೆಲ್ಲ ಕಾರ್ಯಗಳನ್ನು ಏಕಾಗ್ರಚಿತ್ತನಾಗಿ ಕೈಗೊಳ್ಳುತ್ತಾನೆ ಮತ್ತು ಯಾವುದೇ ವೈಯಕ್ತಿಕ ಲಾಭವನ್ನು ಬಯಸುವುದಿಲ್ಲ. ಇಂಥ ಕರ್ಮದ ಆಚರಣೆಯು ಜಗತ್ತಿಗೆ ಒಳಿತನ್ನು ಮಾತ್ರವೇ ತರುತ್ತದೆ, ಕೆಡುಕುಂಟಾಗಲು ಸಾಧ್ಯವಿಲ್ಲ. ಹೀಗೆ ಕೆಲಸದಲ್ಲಿ ತೊಡಗುವ ವ್ಯಕ್ತಿಗಳು ತಮ್ಮ ಸ್ವಾರ್ಥಕ್ಕಾಗಿ ಏನನ್ನೂ ಮಾಡುವುದು ಸಾಧ್ಯವಿಲ್ಲ."[೪೫]

ಬೌದ್ಧಧರ್ಮದಲ್ಲಿ 'ತ್ಯಾಗ ಮತ್ತು ಪ್ರೇಮ'ವಿದ್ದಂತೆ ಕ್ರೈಸ್ತ ಧರ್ಮದಲ್ಲಿ 'ಸೇವೆ ಮತ್ತು ಪ್ರೇಮ'ವಿದ್ದಂತೆ, ವಿವೇಕಾನಂದರ ದೃಷ್ಟಿಯಲ್ಲಿ 'ನಿಷ್ಕಾಮಕರ್ಮ'ವು ಭಗವದ್ಗೀತೆಯ ಪ್ರಧಾನ ಬೋಧನೆಯಾಗಿದೆ.

ಲಾಲಾ ಲಜಪತರಾಯ್ ಮತ್ತು ಗೀತೆ

ಸ್ವಾತಂತ್ರ್ಯ ಆಂದೋಲನದ ಸಂದರ್ಭದಲ್ಲಿ ಭಾರತೀಯರು ಹಲವು ಎಡರು ತೊಡರುಗಳನ್ನು ಎದುರಿಸಬೇಕಾಯಿತು. ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಪಡೆಯುವ ಸವಾಲು ಒಂದೆಡೆಯಾದರೆ, ಜನರನ್ನು ಇಂಥ ಶ್ರಮದಾಯಕ ಕಾರ್ಯಕ್ಕೆ ಒಗ್ಗೂಡಿಸುವ ಸಾಹಸ ಮತ್ತೊಂದು ಕಡೆ. ಇವುಗಳ ನಡುವೆಯೇ ದುಃಖ, ದಾರಿದ್ರ್ಯ ಅಶಾಂತಿ, ಅಸಹನೆಗಳು ಆ ಕಾಲದ ಜನರನ್ನು ಬಾಧಿಸುತ್ತಿದ್ದವು. ಇಂಥ ಎಲ್ಲಾ ಸಮಸ್ಯೆ ಮತ್ತು ಸವಾಲುಗಳನ್ನು ಮೆಟ್ಟಿ ನಿಲ್ಲುವಂತೆ ರಾಷ್ಟ್ರೀಯ ಐಕ್ಯತೆಯನ್ನು ಜನರಲ್ಲಿ ಮೂಡಿಸಲು ಅನೇಕ ಸುಧಾರಣಾವಾದಿಗಳು ಕಾರ್ಯಪ್ರವೃತ್ತರಾದರು.

ಲಾಲಾ ಲಜಪಾತರಾಯರು ಗೀತೆಯನ್ನು ಹಲವು ಧರ್ಮಗಳ ಸಮನ್ವಯತೆಯ ನೆಲೆಯಲ್ಲಿ ಅರ್ಥೈಸುವ ಪ್ರಯತ್ನ ಮಾಡಿದರು. "ಜಗತ್ತಿನಲ್ಲಿ ಕಣ್ಣಿಗೆ ಕಾಣುವಂತೆ ಪರಸ್ಪರ ವಿರುದ್ಧಗಳಿದ್ದರೂ ಅವು ವಿರುದ್ಧಗಳಲ್ಲ ಎಂಬುದನ್ನು ತೋರಿಸುವುದೇ ಗೀತೆಯ ಉದ್ದೇಶ..."[೪೬] ಆದ್ದರಿಂದ "ಇಸ್ಲಾಂ, ಜೈನ, ಬೌದ್ಧ, ಕ್ರೈಸ್ತ ಮೊದಲಾದ ಭಿನ್ನ ಧರ್ಮಗಳ ವಿಚಾರಧಾರೆಯನ್ನು ಒಳಗೊಂಡ ಕೃತಿ ಎಂಬ ವಿಚಾರವನ್ನು ಸ್ಪಷ್ಟಪಡಿಸುತ್ತಾ ಸ್ವಾತಂತ್ರ್ಯ ಹೋರಾಟಕ್ಕೆ ಬೇಕಾದ ರಾಷ್ಟ್ರೀಯ ಮನಸ್ಥಿತಿಯನ್ನು ಎಚ್ಚರಗೊಳಿಸುವ"[೪೭] ಚಹರೆಗಳು ಇವರ ಮಾತುಗಳಲ್ಲಿ ಗೋಚರವಾಗುತ್ತವೆ. ೧೯೦೬ರಲ್ಲಿ ಲಾಲಾ ಲಜಪತರಾಯರು ಮಾಂಡಲೆ ಸೆರೆಮನೆಯಲ್ಲಿದ್ದಾಗ 'ಭಗವದ್ಗೀತೆಯ ಸಂದೇಶ'(The Message of the Bhagawad Gita) ಎಂಬ ಲೇಖನವನ್ನು ಬರೆದರು. ಇದರಲ್ಲಿ ಭಾರತೀಯರಲ್ಲಿ ಸ್ವಾತಂತ್ರ್ಯಾಪೇಕ್ಷೆಯ ಮನೋಭಾವವನ್ನು ಜನತೆಯಲ್ಲಿ ಭಿತ್ತಿ, ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಜನರನ್ನು ಹುರಿದುಂಬಿಸುವ ಉತ್ಸಾಹಭರಿತ ವಿಚಾರಗಳಿವೆ. ಅಷ್ಟೇ ಅಲ್ಲ, ಅವರ ಒಟ್ಟು ವಿಚಾರಗಳ ಸಾರ ಸ್ವಾತಂತ್ರ್ಯವನ್ನು ಪಡೆಯಲು ಭಾರತೀಯರಲ್ಲಿ ಹೋರಾಟದ ಶಕ್ತಿ, ಸಂಚಯವನ್ನು ಉದ್ದೀಪಿಸುವುದೇ ಆಗಿದೆ.

"ಪ್ರಕೃತದಲ್ಲಿ ನಿನ್ನ ಧರ್ಮದಲ್ಲಿ ಅನುರಕ್ತನಾಗಿ ಧರ್ಮ ಮಾಡು, ಪಾಪ ಬರುವುದೆಂದು ಹೆದರಬೇಡ. ಆ ಕರ್ತವ್ಯಗಳು ನಿನ್ನ ಧರ್ಮಗಳಾಗಿದ್ದರೆ, ರಾಗ-ದ್ವೇಷಗಳ ಅಥವಾ ಪ್ರಾಪಂಚಿಕ ಲಾಭದ ಆಸೆಯಿಂದ ಮಾಡದವುಗಳಾಗಿದ್ದರೆ ನಿನಗೆ ಯಾವ ಪಾಪವೂ ಇಲ್ಲ. ಇದೇ ಭಗವದ್ಗೀತೆಯ ತಿರುಳು."[೪೮]

ಕರ್ಮಯೋಗಿಯಾದವನು ಯಾವ ಕೆಲಸವನ್ನು ಮಾಡಿದರೂ ಪಾಪವೆಸಗಲಾಗದು ಎಂದು ಎಲ್ಲರಲ್ಲೂ ಧೈರ್ಯತುಂಬಿ ಕರ್ಮದ ಸಾರ್ಥಕತೆಯನ್ನು ತಿಳಿಹೇಳುತ್ತಾರೆ. ಅದಕ್ಕೆ ಲಾಲಾ ಲಜಪತರಾಯರು ಗೀತೆಯ ಉದಾಹರಣೆಯನ್ನು ನೀಡಿ ಮತ್ತಷ್ಟು ಸ್ಪಷ್ಟಪಡಿಸುತ್ತಾರೆ.

"ದೇಶದ ಏಳಿಗೆಗೂ ವೈಭವಕ್ಕೂ ಕೃಷ್ಣನಂತಹ ಜ್ಞಾನಿಯೂ ಅರ್ಜುನನಂತಹ ಧೀರನೂ ಬೇಕು. ಎರಡರಲ್ಲಿ ಒಂದು ಇಲ್ಲದಿದ್ದರೂ ದೇಶಕ್ಕೆ ಕುಂದಕ. ಇದೇ ಗೀತೆಯ ಬೋಧನೆಯ ಅನಿವಾರ್ಯದ ತತ್ವ, ಅನಾಸಕ್ತನಾಗಿ ಕರ್ಮ ಮಾಡಬೇಕು. ಯಾವ ಕಷ್ಟ ಬಂದರೂ ತನ್ನ ಕರ್ಮವನ್ನು ಬಿಡಬಾರದು, ಮಾಡಿಯೇ ತೀರಬೇಕು. ಕೃಷ್ಣನ ಅನುಯಾಯಿಗಳಾದ ನಮಗೆ ಈಗ ಅಧೋಗತಿ ನಿರಾಶೆ, ನಿರುತ್ಸಾಹ, ಧೈರ್ಯಹೀನತೆ ಸುಖಾಭಿಲಾಷೆ, ಹೇಗಾದರೂ ಜೀವಿಸಿದ್ದರೆ ಸಾಕು ಎಂಬ ಭಾವವೂ ಭಯವೂ ಹಿಂದೆಂದೂ ಇಲ್ಲದಿದ್ದಷ್ಟು ಪ್ರಾಪ್ತವಾಗಿದೆ. ಈ ಸಂದೇಶ ಈಗ ನಮಗೆ ಬೇಕು. ಈಗ ಆ ಸಂದೇಶವನ್ನು ನಾವು ಧ್ಯಾನಿಸೋಣ. ನಮ್ಮ ಹೇಡಿತನ ಪಲಾಯನವಾಗುವುದು. ಧೈರ್ಯ ಸಾಹಸಗಳು ನಮ್ಮ ಮೈಗೂಡುವುವು. ನಮ್ಮ ದೇಶ ಹಿಂದಲ ವೈಭವವನ್ನು ಹೊಂದುವುದು. ನಮ್ಮ ಶತ್ರುಗಳು ಎಷ್ಟೇ ಬಲಶಾಲಿಗಳಾದರೂ ಭಯವಿಲ್ಲ. ಭೀಷ್ಮ ದ್ರೋಣರಂತಹ ಅತಿರಥ ಮಹಾರಥರು ಅರ್ಜುನನನ್ನು ಎದುರಿಸಲಿಲ್ಲವೇ?"[೪೯] ಎಂದು

ಸ್ವಾತಂತ್ರ್ಯ ಹೋರಾಟವನ್ನು ಮಹಾಭಾರತದ ಯುದ್ಧವೆಂದು ಸಮೀಕರಿಸಿ, ಅದು ಕೌರವ ಮತ್ತು ಪಾಂಡವರ ನಡುವಿನ ಕದನವೆಂದು ಪರಿಭಾವಿಸಿ ಜನರಲ್ಲಿ ಭಾರತೀಯರ ಮತ್ತು ಬ್ರಿಟಿಷರ ನಡುವೆ ವೈರತ್ವವನ್ನು ಮೂಡಿಸಿದರು. ಆದುದರಿಂದ ಜನರು ಸ್ವಾತಂತ್ರ್ಯವನ್ನು ಪಡೆಯಲು ನಿಷ್ಕಾಮಕರ್ಮವನ್ನು ಮಾಡಬೇಕೆಂದೂ, ಎಷ್ಟೇ ಕಷ್ಟಬಂದರೂ ತಮ್ಮ ಕರ್ಮವನ್ನು ಬಿಡಬಾರದೆಂದೂ ಪದೇಪದೇ ಎಚ್ಚರಿಸಿದ್ದಾರೆ. ನಾವು ಧರ್ಮ ಮತ್ತು ಕರ್ಮದ ವ್ಯತ್ಯಾಸವನ್ನು ಅರಿಯದೇ ಹೋಗಿದ್ದೇವೆ. ಎಲ್ಲಕ್ಕಿಂತ ಮಿಗಿಲಾಗಿ ಅಜ್ಞಾನ, ಮೂಢನಂಬಿಕೆಗಳಿಗೆ ದಾಸರಾಗಿದ್ದೇವೆ. ಇದಕ್ಕೆ ಇರುವ ಏಕೈಕ ಮಾರ್ಗೋಪಾಯವೆಂದರೆ ಏನಾದರಾಗಲಿ ಕರ್ಮ ಮಾಡುವುದು. ಸರಿ–ತಪ್ಪು ಎಂಬುದರ ಬಗ್ಗೆ ಆಮೇಲೆ ಯೋಚಿಸಿದರಾಯಿತು. ಈ ಸತ್ಯವನ್ನು ಅರಿತು ಕರ್ಮದಲ್ಲಿ ನಿರತರಾದಾಗಲೇ ಭಾರತೀಯರಿಗೆ ನಿಜವಾಗಲೂ ಮುಕ್ತಿ ದೊರೆಯುವುದು. ಅದಕ್ಕೆ ನಮ್ಮ ಮಾರ್ಗದರ್ಶಿಯಾದ ಕೃಷ್ಣನು ಸಾರಿದ ಸಂದೇಶಗಳನ್ನು ಪಾಲಿಸಬೇಕಾಗಿದೆ. ಅವನ ಅನುಯಾಯಿಗಳಾದ ನಮಗೆ ಸಕಲ ಸಂಕಷ್ಟಗಳು ನಿವಾರಣೆಯಾಗಬೇಕಾದರೆ ಗೀತೆಯ ಸಂದೇಶವನ್ನು ಧ್ಯಾನಿಸಬೇಕು. ಆಗ ನಮ್ಮೊಳಗಿನ ಭಯ, ಆತಂಕ ಹಾಗೂ ಹೇಡಿತನಗಳು ದೂರವಾಗಿ, ಧೈರ್ಯ ಮತ್ತು ಸಾಹಸಗಳಿಂದ ನಮಗೆ ಹೊಸ ಚೈತನ್ಯ ವೃದ್ಧಿಸುವುದು. ಇದನ್ನೇ ಲಾಲಾ ಲಜಪತರಾಯರು ಹೀಗೆ ಹೇಳಿದ್ದಾರೆ: "ಜೀವನದಲ್ಲಿ ಯಾವಾಗಲೂ ಪರಸ್ಪರ ಹೊಡೆದಾಟ, ಬಡಿದಾಟ, ಪಾಪ–ದುಃಖಗಳು ಸುಖ ಸತ್ಯಗಳಿಂದ ಹೆಚ್ಚಾಗಿ ತಾಂಡವವಾಡುತ್ತವೆ. ನಿರುತ್ಸಾಹ, ಅಲ್ಪತೆ, ತುಚ್ಛತೆಗಳು ನಮ್ಮನ್ನು ಸುತ್ತುಗಟ್ಟಿವೆ. ಜಗತ್ತಿನಲ್ಲಿ ಹೃದಯ ವೈಶಾಲ್ಯ, ಸೌಹಾರ್ದಗಳು ತೋರುವುದು ಎಲ್ಲೋ ಅಪರೂಪವಾಗಿ ಆಗೊಮ್ಮೆ ಈಗೊಮ್ಮೆ ಮಾತ್ರ... ಜೀವನದಲ್ಲಿ ತೋರುವ ಈ ಪರಸ್ಪರ ವಿರುದ್ಧಗಳ ಸಮಸ್ಯೆಯನ್ನು ಎಲ್ಲರಿಗಾಗಿ ಎಂದೆಂದಿಗೂ ಪರಿಹರಿಸುವುದೇ ಗೀತೆಯ ಗುರಿ"[೫೦] ಎಂದು ಗೀತೆಯ ಹಿರಿಮೆಯನ್ನು ಹೊಗಳಿದ್ದಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೇನೆಂದರೆ ಉಗ್ರರಾಷ್ಟ್ರೀಯತೆಯ ಭರಾಟೆಯಲ್ಲಿ ಗೀತೆಯು ಅನ್ಯ ಧರ್ಮಗ್ರಂಥಗಳಿಗೆ ಎಷ್ಟು ಮಹತ್ವ ಕೊಟ್ಟಿತು ಎಂಬುದು. ಏಕೆಂದರೆ ರಾಷ್ಟ್ರೀಯ ಐಕ್ಯತೆಯನ್ನು ಉಂಟುಮಾಡುವುದಷ್ಟೇ ತಿಲಕ್‌ವಾದಿ ರಾಷ್ಟ್ರೀಯತೆಯ ಮುಖ್ಯ ಗುರಿಯಾಗಿತ್ತೆ? ಅಥವಾ ಸರ್ವಧರ್ಮಗಳನ್ನು ಬೆಸೆಯುವುದಾಗಿತ್ತೇ? ಇಂಥ ಹಲವು ಪ್ರಶ್ನೆಗಳು ಇಲ್ಲಿ ಎದುರಾಗುವುದು ಸಹಜ. ಹೀಗೆ ಬಾಲಗಂಗಾಧರ ತಿಲಕ್, ಬಂಕಿಮಚಂದ್ರ ಚಟ್ಟೋಪಾಧ್ಯಾಯ, ಅರವಿಂದ ಘೋಷ್, ಲಾಲ್ ಲಜಪತರಾಯ್ ಮೊದಲಾದವರು "ಭಾರತವನ್ನು ಒಂದು ರಾಷ್ಟ್ರವನ್ನಾಗಿಸುವ ಭರದಲ್ಲಿ, ಅಲ್ಲಿಯ ಧಾರ್ಮಿಕ–ಸಾಂಸ್ಕೃತಿಕ, ಜನಾಂಗಿಕ ಮತ್ತು ಪ್ರಾದೇಶಿಕ ವೈವಿಧ್ಯಗಳನ್ನು ಕಡೆಗಣಿಸಿ, ಅವರನ್ನು ಹೇಗಾದರೂ ಮಾಡಿ ಏಕತ್ರಗೊಳಿಸುವ ಆವೇಶ ಮತ್ತು ಆತುರಗಳನ್ನು"[೫೧] ಗೀತೆಯ ಮೂಲಕ 'ರಾಷ್ಟ್ರೀಯತೆ'ಯ ಹೆಸರಿನಲ್ಲಿ, ಜನರ ಮನಸ್ಸಿನಲ್ಲಿ ಬಿತ್ತುವ ಕೆಲಸವನ್ನು ಮಾಡಿದರು.

ಗಾಂಧಿ ಮತ್ತು ಅನಾಸಕ್ತಿ ಯೋಗ

ಗಾಂಧಿಯವರಿಗೆ ಗೀತೆ ಪರಿಚಯವಾದದ್ದು ೧೮೮೯ರಲ್ಲಿ ಎಡ್ವಿನ್ ಆರ್ನಾಲ್ಡ್‌ರ song of celestial ಕೃತಿಯನ್ನು ಓದಿದ ನಂತರ. ಅವರು ತಮ್ಮ ವೈಯಕ್ತಿಕ ಬದುಕು ಮತ್ತು ರಾಷ್ಟ್ರೀಯ ಚಳುವಳಿಗಳಿಗೆ ಗೀತೆಯಿಂದ ಪ್ರೇರಣೆ ಪಡೆದರು. ಅವರು ಗೀತೆಯನ್ನು 'ಗೀತಾಮಾತೆ', 'ಜೀವಂತ ತಾಯಿ' ಎಂದು ಪರಿಗಣಿಸಿದ್ದರು. ಅವರು ಇಂತಹ ಗೀತೆಯ ಆಳವಾದ ತತ್ವಜ್ಞಾನದ ಹಿನ್ನೆಲೆಯಿಂದ ಸತ್ಯ, ಅಹಿಂಸೆ, ಸತ್ಯಾಗ್ರಹ ಪರಿಕಲ್ಪನೆಗಳ ಮೂಲಕ ಆಧುನಿಕ ಭಾರತಕ್ಕೆ ನೈತಿಕ–ತಾತ್ವಿಕ ಭದ್ರಬುನಾದಿಯನ್ನು ಹಾಕಲು ಪ್ರಯತ್ನಿಸಿದರು.

ಗಾಂಧಿ ಅವರು ೧೯೦೮ರಲ್ಲಿ ಜೊಹಾನ್ಸ್‌ಬರ್ಗ್ ಜೈಲಿನಲ್ಲಿ ಗೀತೆಯ ಪ್ರಭಾವಕ್ಕೊಳಗಾದರು. ಇದನ್ನು ಗೈಡ್ ಆಫ್ ಕಂಡಕ್ಟ್ ಮತ್ತು ಆಧ್ಯಾತ್ಮಿಕ ನಿಘಂಟು ಎಂಬುದಾಗಿ ಭಾವಿಸಿದ್ದ ಇವರ ಈ ಕುರಿತ ಹೇಳಿಕೆ ಹೀಗಿದೆ– "ಮಾನವನ ಎಲ್ಲಾ ಯಾತನೆಗಳು, ಎಲ್ಲ ಸಮಸ್ಯೆಗಳು ಎಲ್ಲ ಪ್ರಯತ್ನಗಳನ್ನು ನಿಖರ ಪರಿಹಾರಗಳೊಂದಿಗೆ, ಅಕಾರಾದಿಯಾಗಿ ಜೋಡಿಸಲಾಗಿರುವ ಏಕೈಕ ಪರಾಮರ್ಶನ ನಿಘಂಟಾಗಿ ನನಗೆ ಕಾಣುತ್ತದೆ."[೨೨] ಮುಂದೆ ೧೯೨೬ರಲ್ಲಿ ಗಾಂಧಿ, ಅಹಮದಾಬಾದ್‌ನ ಸತ್ಯಾಗ್ರಹ ಆಶ್ರಮದಲ್ಲಿ ೨೧೮ ಉಪನ್ಯಾಸಗಳನ್ನು ಮಾಡಿದರು. ಈ ಉಪನ್ಯಾಸಗಳನ್ನು ಮಹದೇವ ದೇಸಾಯಿ, ಪುಂಜಬಾಯಿ ಅವರು ಸಂಗ್ರಹಿಸಿದ್ದಾರೆ. ನಂತರ ೧೯೩೦ರಲ್ಲಿ ಗಾಂಧಿ ಅವರು ಗೀತೆಯ ವ್ಯವಸ್ಥಿತ ಅನುವಾದವನ್ನು ಗುಜರಾತಿಯಲ್ಲಿ ಪ್ರಕಟಪಡಿಸಿದರು. ಯರವಾಡ ಜೈಲಿನಲ್ಲಿ ಈ ಕೃತಿಯ ಮುನ್ನುಡಿಯನ್ನು ಇವರೇ ಇಂಗ್ಲಿಷಿಗೆ ಅನುವಾದಿಸಿದರು. ಈ ಲೇಖನ ೧೯೩೦ರ ಯಂಗ್ ಇಂಡಿಯಾದಲ್ಲಿ ಪ್ರಕಟವಾಯಿತು. ಮಹದೇವ ದೇಸಾಯಿ ಅವರು ಇದನ್ನು "The Gospel of Selfless Action or The Gita according to Gandhi" ಎಂದು ಇಂಗ್ಲಿಷಿನಲ್ಲಿ ೧೯೪೬ರಲ್ಲಿ ಪ್ರಕಟಿಸಿದರು.

ಗಾಂಧಿಯವರು ಸ್ವರಾಜ್ಯ, ಸತ್ಯಾಗ್ರಹ, ಅಹಿಂಸೆ ಮತ್ತು ಸತ್ಯ ಪರಿಕಲ್ಪನೆಗಳ ಮೂಲಕ ಆಧುನಿಕ ಭಾರತಕ್ಕೆ ನೈತಿಕ, ತಾತ್ವಿಕ ಬುನಾದಿಯನ್ನು ಹಾಕಲು ಪ್ರಯತ್ನಿಸಿದರೆಂಬುದು ಸಾಮಾನ್ಯವಾಗಿ ತಿಳಿದಿರುವಂಥದ್ದೇ. ಆದರೆ ಈ ಪರಿಕಲ್ಪನೆಗಳನ್ನು ಗಾಂಧಿಯ ಗೀತಾವ್ಯಾಖ್ಯಾನ ದೊಂದಿಗೆ ಸಾಮಾನ್ಯವಾಗಿ ಯಾರೂ ತುಲನೆ ಮಾಡುವುದಿಲ್ಲ. ಆದರೆ ಗಾಂಧಿ ಈ ಪರಿಕಲ್ಪನೆಗಳನ್ನು ಗೀತೆಯ ತಾತ್ವಿಕ ಸಂಪ್ರದಾಯದ ಭದ್ರ ಬುನಾದಿಯೊಂದಿಗೆ ನೆಲೆಗೊಳಿಸಿದರು. ತಮ್ಮ ಜೀವನಕ್ಕೆ ಹಾಗೂ ರಾಷ್ಟ್ರೀಯ ಸಂಕಥನದ ಸಂಕೀರ್ಣ ವಿಚಾರಗಳಿಗೆ ಗಾಂಧಿ ಗೀತೆಯಿಂದ ಪ್ರೇರಣೆ ಪಡೆದರು. ಗೀತೆಯನ್ನು ಗೀತಾಮಾತೆ ಎಂಬುದಾಗಿ ಪರಿಗಣಿಸಿದ್ದರು. ಅದರ ಓದನ್ನು ಧಾರ್ಮಿಕ ಆಚರಣೆ, ಪ್ರಾರ್ಥನೆ ಮತ್ತು ಉಪವಾಸದ ಭಾಗವಾಗಿ ಪರಿಗಣಿಸಿದ್ದರು.

ಗಾಂಧಿಯವರ ಈ ಕೃತಿಯು ವಿದ್ವತ್‌ಪೂರ್ಣವಾದ ಅನುವಾದವಾಗಿದ್ದು ತಾತ್ವಿಕ ವಾಗ್ವಾದ ಗಳನ್ನು ಗೀತೆ, ಕ್ರಿಶ್ಚಿಯನ್, ಇಸ್ಲಾಂ, ಸೂಫಿ ಮತ್ತು ಬುದ್ಧ, ತಾವೋವಾದ ಉದಾಹರಣೆಗಳೊಂದಿಗೆ

ವಿವರಿಸಿದ್ದಾರೆ. ಆಶ್ರಮವಾಸಿಗಳಿಗೆ ಸುಲಭವಾಗಿ ನಿರೂಪಿಸುವ ದೃಷ್ಟಿಯಿಂದ, ಯರವಾಡ ಜೈಲಿನಿಂದ ಒಂದೊಂದು ಅಧ್ಯಾಯದ ಮೇಲೆ ಒಂದೊಂದು ಪತ್ರಮುಖೇನ ಸರಳವಾಗಿ ಆಶ್ರಮಕ್ಕೆ ಪತ್ರ ಬರೆಯಲಾರಂಭಿಸಿದರು.

೧೯೩೦ರಿಂದ ಬರೆದ ಈ ಗುಜರಾತಿ ಪತ್ರಗಳನ್ನು ವಾಲಜೀ ಗೋವಿಂದ ಜೀ ದೇಸಾಯಿ ೧೯೬೦ರಲ್ಲಿ ಇಂಗ್ಲಿಷಿಗೆ ಅನುವಾದಿಸಿದರು. Collective volume of Mahatma Gandhi ಕೃತಿಯ vol.63ರಲ್ಲಿನ 'The law of our being' ಇವರು ಲೇಖನದಲ್ಲಿ ಅಭಿಪ್ರಾಯಪಡುವಂತೆ ಗೀತೆಯ ಹಲವಾರು ಸಾಹಿತ್ಯಿಕ ವ್ಯಾಖ್ಯಾನಗಳ ಬಗ್ಗೆ ಗಾಂಧಿಗೆ ಒಪ್ಪಿಗೆಯಿರಲಿಲ್ಲ. ಏಕೆಂದರೆ ಅವು ಗೀತೆಯ ಧ್ವನಿವಿಶೇಷವನ್ನು ಗ್ರಹಿಸಿಲ್ಲ. ಉದಾಹರಣೆಗೆ ತಿಲಕರ ಗೀತಾರಹಸ್ಯ ಜನಪ್ರಿಯವಾಗಿದ್ದರೂ ಅದು ಮೂಲತಃ ಸಾಹಿತ್ಯಿಕ ಅನುವಾದ ಅಷ್ಟೇ. ಇದು ಯುರೋಪ್ ತಾತ್ವಿಕತೆಯಿಂದ ಪ್ರಭಾವಿತವಾಗಿದೆ.

ತಿಲಕರು ತಮ್ಮ ನಿರ್ಣಯಗಳನ್ನು ಸ್ವತಂತ್ರವಲ್ಲ. ನಿರ್ದಿಷ್ಟ ರಾಜಕೀಯ ತಾತ್ವಿಕತೆ ಮತ್ತು ಕಾರ್ಯಕ್ರಮಗಳನ್ನು ಸಮರ್ಥಿಸಲು ಬಳಸಿಕೊಂಡಿದ್ದಾರೆ. ಇದರಿಂದಾಗಿ ಕ್ರಾಂತಿಕಾರಿ ಭಯೋತ್ಪಾದಕರು ಹಿಂಸಾ ಮಾರ್ಗದ ಸಮರ್ಥನೆಗಾಗಿ ತಿಲಕರ ಗೀತಾವ್ಯಾಖ್ಯಾನವನ್ನು ಬಳಸಿಕೊಳ್ಳುವಂತಾಗಿದೆ. ಗಾಂಧಿ ಇಂಥ ಕ್ರಾಂತಿಕಾರಿಗಳ ತಾತ್ವಿಕತೆಯನ್ನು ತಿರಸ್ಕರಿಸುತ್ತಾರೆ ಮತ್ತು ಗೀತಾರಹಸ್ಯಕ್ಕಿಂತ ತಮ್ಮ ವ್ಯಾಖ್ಯಾನವೇ ಉತ್ತಮ ಪರ್ಯಾಯವೆಂದು ತಿಳಿಯುತ್ತಾರೆ. ಅದೇ ಸಮಯದಲ್ಲಿ ತಮ್ಮ ವ್ಯಾಖ್ಯಾನವೂ ಸರಿಯಾದುದು ಅತ್ಯುತ್ತಮವಲ್ಲದಿರಬಹುದು; ಅಂತಿಮವಾಗಿ ಗೀತೆಯನ್ನು ಆಚರಣೆಗೆ ತರುವುದಷ್ಟೇ ಸತ್ಯ ಮತ್ತು ಮುಖ್ಯವಾಗಿರುತ್ತದೆ ಎಂದು ಎಚ್ಚರಿಸುತ್ತಾರೆ.

ಗೀತೆಯ ಚಾರಿತ್ರಿಕ ಮೂಲವನ್ನು ಕುರಿತು ಅವರ ಆಲೋಚನೆಗಳನ್ನು ಹೀಗೆ ಸಂಗ್ರಹಿಸಬಹುದು–ಪಠ್ಯಗಳ ಸಂದೇಶ ಅಥವಾ ಸತ್ಯ ಅಂತಿಮವೇ ವಿನಾ ಅವುಗಳ ಇತಿಹಾಸವಲ್ಲ. ಪಠ್ಯದ ಚಾರಿತ್ರಿಕ ಸಂಶೋಧನೆಗಳು ವಿಶ್ವಾತ್ಮಕ ಸಂದೇಶ, ಸತ್ಯವನ್ನು ಬಾಧಿಸವು. ಅವುಗಳ ಮೂಲ ಉಗಮವೂ ಅನಗತ್ಯ. ಏಕೆಂದರೆ ಇತಿಹಾಸವು ಕ್ರಿಯೆಗಳನ್ನು ನಿರ್ಣಯಿಸಬಲ್ಲ ಮಾರ್ಗದರ್ಶಿಯೇನಲ್ಲ. ಗೀತೆಯ ಪಠ್ಯವನ್ನಾಗಲೀ ಅದರಲ್ಲಿನ ಸತ್ಯವನ್ನಾಗಲೀ ಗ್ರಹಿಸುವುದಕ್ಕೆ ಚಾರಿತ್ರಿಕ ದೃಷ್ಟಿ ಅನಗತ್ಯ. ಏಕೆಂದರೆ ಅದೊಂದು ಅದ್ಭುತ ಸಾಂಕೇತಿಕ ಕೃತಿಯಾಗಿದೆ ಎನ್ನುತ್ತಾರೆ. ಕುರುಕ್ಷೇತ್ರ ಯುದ್ಧವು ನಮ್ಮೊಳಗಿನ ಒಳಿತು ಕೆಡುಕುಗಳ ಸಂಘರ್ಷವೇ ಆಗಿದೆ. ಕೃಷ್ಣನೂ ಚಾರಿತ್ರಿಕ ವ್ಯಕ್ತಿಯಲ್ಲ. ಅತ್ಯದ್ಭುತ ವ್ಯಕ್ತಿತ್ವವುಳ್ಳ ಹಲವು ಕೃಷ್ಣರು ಇದ್ದಿರಬಹುದು, ಅದೂ ಮುಖ್ಯವಲ್ಲ. ಅದೊಂದು 'ಅವ್ಯೈಯಕ್ತಿಕ ಆತ್ಮದ ಸಾಂಕೇತಿಕ ಪರಿಕಲ್ಪನೆ.'

ಗಾಂಧಿ ಪ್ರಕಾರ ಕೃಷ್ಣನು ಚಾರಿತ್ರಿಕ ವ್ಯಕ್ತಿ ಅಲ್ಲ, ಬದಲಿಗೆ ಸತ್‌ಜ್ಞಾನದ ಸಾಕಾರಮೂರ್ತಿ. ಮಹಾಭಾರತ ಸಾಂಕೇತಿಕ ಮಹತ್ವವುಳ್ಳ 'ಧರ್ಮಗ್ರಂಥ'. ಮಹಾಭಾರತದ ಪಾತ್ರಗಳು ಚಾರಿತ್ರಿಕವಿದ್ದಿರಬಹುದು, ಆದರೆ ಇದು ಚಾರಿತ್ರಿಕ ಗ್ರಂಥವಲ್ಲ. ಹಾಗೆಯೇ "ಗೀತೆಯೂ ಕೂಡ

ಸೂತ್ರಗ್ರಂಥವಲ್ಲ. ಗೀತೆ ಒಂದು ಮಹಾ ಧರ್ಮಕಾವ್ಯ"[೩೩] ಎಂದಿದ್ದಾರೆ. ಗೀತೆ ಇವರಿಗೆ ಒಂದು ಆಧ್ಯಾತ್ಮಿಕ ನಿಘಂಟು ಇದ್ದಹಾಗೆ. ಆತ್ಮ ಸಂಬಂಧವಾದ ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲಿ ನಿರಂತರವಾಗಿ ಒಳಿತು–ಕೆಡುಕುಗಳ ನಡುವೆ ಸಂಘರ್ಷ ನಡೆಯುತ್ತಲೇ ಇರುತ್ತದೆ. ಈ ಯುದ್ಧ ಅದಕ್ಕೆ ಪ್ರತೀಕವಾಗಿದೆ ಎಂದು ಸಮರ್ಥಿಸುತ್ತಾರೆ.

ಅನಾಸಕ್ತಿಯೋಗ

ಅನಾಸಕ್ತಿಯ ಮೂಲಕ ಸತ್ಯಾಗ್ರಹ ಮತ್ತು ಅಸಹಕಾರ ರಾಷ್ಟ್ರೀಯ ಸಂಕಥನ ಪರಿಕಲ್ಪನೆಗಳನ್ನು ರೂಪಿಸಿಕೊಂಡ ಗಾಂಧಿ ಅವರ ದೃಷ್ಟಿಯಲ್ಲಿ ಸತ್ಯಾಗ್ರಹವೆಂದರೆ ಅಹಿಂಸೆ ಮತ್ತು ಸತ್ಯದ ಆಧಾರಿತ ಸ್ವ–ಅರಿವಿಗಾಗಿನ ಕರ್ಮಯೋಗಿಯ ತೀವ್ರಕ್ರಿಯೆ. ಅಸಹಕಾರ ಎಂದರೆ ಇತರರ ಕರ್ತವ್ಯದಲ್ಲಿ ತೊಡಗದಿರುವುದು. ಅನಾಸಕ್ತಿಯ ಸಕಾರಾತ್ಮಕ ರೂಪ ಸತ್ಯಾಗ್ರಹ, ನಕಾರಾತ್ಮಕ ರೂಪ ಅಸಹಕಾರ. "ಗೀತಾಕಾರ ಅನಾಸಕ್ತಿಯ, ಕರ್ಮಫಲತ್ಯಾಗದ ಸಿದ್ಧಾಂತವನ್ನು ರೂಪುಗೊಳಿಸಿ ಅದನ್ನು ಅತ್ಯಾಕರ್ಷಕ ಭಾಷೆಯಲ್ಲಿ ಜಗತ್ತಿನೆದುರಿಗೆ ಇಟ್ಟಿದ್ದಾನೆ."[೩೪] ಭಗವದ್ಗೀತೆಯಲ್ಲಿ ಇವರು ಗುರುತಿಸಿರುವ ದೊಡ್ಡ ಆದರ್ಶ 'ಅನಾಸಕ್ತಿ'. ಈ ಕ್ರಿಯೆಯನ್ನು ಸರಿಯಾಗಿ ಗ್ರಹಿಸಿದರೆ ನಮ್ಮೆಲ್ಲ ದೈನಂದಿನ ಸಮಸ್ಯೆಗಳಿಗೆ ಪರಿಹಾರ ಸಿಕ್ಕುತ್ತದೆ. ಸತ್ಯವನ್ನು ಅರಿಯಲು ಅಥವಾ ಶೋಧಿಸಲು ಇರುವ ಏಕೈಕ ಸನ್ಮಾರ್ಗವೆಂದರೆ ಅನಾಸಕ್ತಿ. ಇದು ಕೇವಲ ಕ್ರಿಯೆ ಅಥವಾ ಭಕ್ತಿ ಅಥವಾ ಜ್ಞಾನಕ್ಕೆ ಮಾತ್ರ ಸಂಬಂಧಿಸುವಂಥದಲ್ಲ. ಅನಾಸಕ್ತಿಯು ಕರ್ಮವನ್ನು ಎತ್ತಿಹಿಡಿಯುತ್ತದೆ. ಕರ್ಮವು ಭಕ್ತಿ ಮತ್ತು ಜ್ಞಾನ ಎರಡನ್ನೂ ಒಳಗೊಳ್ಳುತ್ತದೆ. ಈ ಮೂರೂ ಸೇರಿ ವ್ಯಕ್ತಿಯ ಹೃದಯ ಮತ್ತು ಮೆದುಳನ್ನು ಶುದ್ಧಗೊಳಿಸುತ್ತವೆ. ಈ ಅನಾಸಕ್ತಿಯನ್ನು ಒಳಗೊಂಡ ಕರ್ಮ ಸೂರ್ಯನಿದ್ದಂತೆ. ಅದರ ಸುತ್ತ ಭಕ್ತಿ, ಜ್ಞಾನ ಗ್ರಹಗಳಂತೆ ಸುತ್ತುತ್ತವೆ ಎಂದು ಗಾಂಧಿ ಅಭಿಪ್ರಾಯಪಟ್ಟಿದ್ದಾರೆ.

ನಿಷ್ಕಾಮ ಕರ್ಮ ಅಥವಾ ಅನಾಸಕ್ತಿಯು ಜ್ಞಾನ ಮತ್ತು ಭಕ್ತಿ, ಕರ್ಮದ ಸಂಗಮವಾಗಿದ್ದು ಸ್ವ–ಅರಿವಿನ ಕಡೆಗೆ ಕರೆದೊಯ್ಯುತ್ತದೆ. ಸ್ವ–ಅರಿವಿನ ಆಕಾಂಕ್ಷೆಯುಳ್ಳವನು ಪೂರ್ಣವಾಗಿ ಆಸೆಗಳಿಲ್ಲದಿರುವ ಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ಇದು ಭಾರತಕ್ಕೆ ಮಾರ್ಗದರ್ಶಿ ತತ್ವವಾಗಬಲ್ಲದು ಎಂದು ಗಾಂಧಿ ನಂಬಿದ್ದರು.

ಇವರ ಪ್ರಕಾರ ಅನಾಸಕ್ತಿ ಎಂದರೆ ದೇಹ ಮತ್ತು ಆತ್ಮವನ್ನು ಹಾಗೂ ಎಲ್ಲ ಕ್ರಿಯೆಯನ್ನು ದೇವರಿಗೆ ಅರ್ಪಿಸುವುದಾಗಿದೆ. ಭಕ್ತಿಯು ದೈವಪ್ರೀತಿಯನ್ನು ಹೃದಯ ಮತ್ತು ಮನಸ್ಸಿನಲ್ಲಿ ತುಂಬಿಸುತ್ತದೆ. ದೈವಪ್ರೀತಿಯಿಂದ ಕೂಡಿದ ಕ್ರಿಯೆಯು ಸ್ವ ಅರಿವನ್ನು ಮೂಡಿಸುತ್ತದೆ. ಭಕ್ತನು ಯಾವಾಗಲೂ ಧರ್ಮಿಯಾಗಿರುತ್ತಾನೆ. ಅಂಥವನು ಜೀವನದ ವಾಸ್ತವಿಕ ವ್ಯವಹಾರಗಳನ್ನು ಸಹಜವಾಗಿ ನಿಭಾಯಿಸಬಲ್ಲ. ಅಂಥ ಸ್ವಾರ್ಥರಹಿತ ಭಕ್ತಿಯು ನಿಸ್ವಾರ್ಥ ಸೇವೆಯಲ್ಲಿ ಮನಸ್ಸನ್ನು ತೊಡಗಿಸುತ್ತದೆ. ಕರ್ಮಯೋಗಿಗೆ ತನ್ನ ಕರ್ತವ್ಯಗಳು ಮತ್ತು ಅವುಗಳ ಪರಿಣಾಮಗಳ

ಅರಿವಿರಬೇಕು. ಆದರೆ ಯಾವುದೇ ಬಹುಮಾನ ನಿರೀಕ್ಷೆಗಳನ್ನಿಟ್ಟುಕೊಳ್ಳಬಾರದು. ಇದರಿಂದ ಕರ್ಮಯೋಗಿಗೆ ಕರ್ತವ್ಯದ ಕಡೆ ಏಕಾಗ್ರತೆ ಬೆಳೆಯಲೂ ಸಾಧ್ಯ. ಹಾಗೆಯೇ ಕರ್ಮ ಬಂಧನದಿಂದ ಬಿಡುಗಡೆಯೂ ಸಾಧ್ಯ. ಅನಾಸಕ್ತಿಯು ಸಾಂಪ್ರದಾಯಿಕತೆಯನ್ನು ಅಥವಾ ಕೇವಲ ತರ್ಕ ಪಾಂಡಿತ್ಯವನ್ನು ಸೃಷ್ಟಿಸದು. ಬದಲಿಗೆ ಕ್ರಿಯಾಶೀಲ, ವಿನಮ್ರ ಕರ್ಮಯೋಗಿ ಸತ್ಯಾಗ್ರಹಿಗಳನ್ನು ಸೃಷ್ಟಿಸುತ್ತದೆ. ಇಂತಹವರು ತಮ್ಮ ಆದರ್ಶ-ನೈತಿಕ ಆಚರಣೆಗಳ ಮೂಲಕ, ಶ್ರದ್ಧೆಯ ಮೂಲಕ ಜನಸೇವೆ ಮಾಡುತ್ತಾರೆ ಎಂಬುವುದು ಗಾಂಧಿ ಅವರ ತಿಳುವಳಿಕೆಯಾಗಿದೆ. ಈ ಅನಾಸಕ್ತಿಯು ಜುಡಾಯಿಸಂ, ಕ್ರೈಸ್ತ, ಇಸ್ಲಾಂ, ಜೈನಿಸಂ, ಬುದ್ಧಿಸಂ, ಮುಂತಾದ ಬರವಣಿಗೆಗಳಲ್ಲಿ ಕಂಡುಬರುವುದಾದರೂ ಗಾಂಧಿ ಅವರು ಇದಕ್ಕೆ 'ಅವತಾರ'ದ ಕಲ್ಪನೆ ಕೂಡಿಸುತ್ತಾರೆ. "ಅವತಾರ ಎಂದರೆ ಶರೀರಧಾರಿಯಾದ ಪುರುಷವಿಶೇಷ ಎಂದು ಅರ್ಥ. ಜೀವಿಜೀವಿಯೂ ಪರಮಾತ್ಮನ ಅವತಾರವೇ. ಆದರೂ ಲೌಕಿಕ ಭಾಷೆಯಲ್ಲಿ ಎಲ್ಲರನ್ನೂ ಅವತಾರಿಗಳೆನ್ನುವುದಿಲ್ಲ. ಯಾರು ತನ್ನ ಕಾಲದಲ್ಲಿ ಇತರರಿಗಿಂತ ಶ್ರೇಷ್ಠ ಧಾರ್ಮಿಕನೋ ಅವನನ್ನು ಮುಂದಿನ ಪೀಳಿಗೆ ಅವತಾರಪುರುಷನೆಂದು ಪೂಜಿಸುತ್ತದೆ. ಇದರಲ್ಲಿ ನನಗೆ ಯಾವ ದೋಷವೂ ಕಾಣಿಸದು"[೫೫] ಎಂದಿದ್ದಾರೆ.

ದೇವರ ಮರುಹುಟ್ಟು ಸಾಧ್ಯವಿಲ್ಲ. ವೇದ-ಪುರಾಣಗಳು ದೇವರನ್ನು ಅವತಾರ ಕಲ್ಪನೆ ಮೂಲಕ ಮನುಷ್ಯರೂಪಕ್ಕೆ ಇಳಿಸಿವೆ. ನಶಿಸುತ್ತಿರುವ ನೈತಿಕ ಸಮಾಜದ ಮೌಲ್ಯಗಳನ್ನು ಮರಳಿ ತರಲು ದೇವ ಅವತಾರವೆತ್ತುತ್ತಾನೆಂಬುದನ್ನು ಗಾಂಧಿ ಒಪ್ಪುವುದಿಲ್ಲ. ನಿಸ್ವಾರ್ಥ ಕರ್ತವ್ಯದ ಮೂಲಕ ಮನುಷ್ಯ ದೈವತ್ವಕ್ಕೇರುವುದು ನಿಜವಾದ ಅವತಾರ. ಇದು ಗೀತೆಯಲ್ಲಿ ವ್ಯಕ್ತವಾಗಿದೆ ಎನ್ನುತ್ತಾರೆ.

ಮಾನವಕುಲಕ್ಕೆ ಮಾನವ ಸಮಾಜದ ಒಳಿತಿಗೆ ಅತ್ಯುತ್ತಮ ಕಾರ್ಯ ನಿರ್ವಹಿಸುವುದೇ ಪರಿಪೂರ್ಣ ಅವತಾರ. ಇದು ಜನಿಸುವುದಲ್ಲ, ಆಗುವುದು. ಉದಾಹರಣೆಗೆ ಕೃಷ್ಣನನ್ನು ಸಮಾಜದ ಕಲ್ಯಾಣಕ್ಕಾಗಿ ದುಡಿಯುವ ಕಾರಣಕ್ಕಾಗಿ ಅವತಾರವೆನ್ನಬಹುದೇ ವಿನಾ ಮನುಷ್ಯರೂಪಕ್ಕಿಳಿದನೆಂಬುದಕ್ಕಲ್ಲ. ನಿಷ್ಕಾಮಕರ್ಮಿ ಅಥವಾ ಅನಾಸಕ್ತನನ್ನೇ ಅವತಾರವೆಂದು ಪರಿಗಣಿಸಬೇಕು. ಅವತಾರದ ಉದ್ದೇಶವೆಂದರೆ ನಶಿಸುತ್ತಿರುವ ಸಾಮಾಜಿಕ ನೈತಿಕ ಮೌಲ್ಯಗಳನ್ನು ಮರುಸ್ಥಾಪಿಸುವುದು. ಹಾಗೆಂದ ಮಾತ್ರಕ್ಕೆ ಕೆಡುಕನ್ನು ನಾಶ ಮಾಡಲು ತೊಡಗಿದ ಕ್ರಾಂತಿಕಾರಿ ಆದರ್ಶವಾದಿಗಳೆಲ್ಲ ಅವತಾರಿಗಳಲ್ಲ. ಇದನ್ನು ಅನ್ಯರಿಗೆ ಸೇವೆ ಮಾಡುವ ಮೂಲಕ ಮಾತ್ರವೇ ಸಾಧಿಸುವಂಥದ್ದು.

ಗೀತೆ ಮತ್ತು ಅಹಿಂಸೆ

ಗೀತೆಯಿಂದ ಅಹಿಂಸೆಯನ್ನು ಗ್ರಹಿಸಿರುವುದಾಗಿ ಹೇಳುತ್ತಾರಾದರೂ ಗೀತೆಯು ಅಹಿಂಸೆ ಕುರಿತ ಪಠ್ಯವಲ್ಲ. ಬದಲಿಗೆ ಅನಾಸಕ್ತಿಯನ್ನು ಕುರಿತಾದದ್ದು ಎಂದಿದ್ದಾರೆ. "ಗೀತೆಯ ಕಾಲಕ್ಕೆ ಮುಂಚಿನಿಂದಲೂ ಅಹಿಂಸೆ ಪರಮ ಧರ್ಮವೆಂದು ಪರಿಗಣಿತವಾಗಿತ್ತು. ಆದರೆ ಗೀತೆಗೆ

ಅನಾಸಕ್ತಿಯನ್ನು ಪ್ರತಿಪಾದಿಸಬೇಕಾಗಿತ್ತು."[೫೬] ಹಾಗಾಗಿ ಗೀತೆಯ ಮುಖ್ಯ ಸಂದೇಶ ಎರಡನೇ ಅಧ್ಯಾಯದಲ್ಲಿದೆ ಎನ್ನುತ್ತಾರೆ.

ಅನಾಸಕ್ತಿಯೆಂದರೆ ಕೋಪ, ದ್ವೇಷವಿರದ ಆಸೆರಹಿತತೆ. ಆಸೆರಹಿತತೆಯ ಮನೋಭಾವವನ್ನು ಬೆಳೆಸಿಕೊಂಡರೆ ಅದು ಖಂಡಿತ ಲೋಕಕಲ್ಯಾಣಕ್ಕೆಯೇ ಬಳಕೆಯಾಗುತ್ತದೆ. ಗೀತೆಯ ಪ್ರಕಾರ ಸ್ವಾರ್ಥದ ಉದ್ದೇಶ, ಪ್ರಲೋಭನೆಯಿಂದ ಮಾಡುವ ಕೆಲಸಗಳು ದೋಷಪೂರ್ಣ ಕೆಲಸಗಳು. ಆಸೆರಹಿತತೆಯು ಸ್ವಾರ್ಥರಹಿತ ಕೆಲಸಗಳನ್ನು ಲೋಕಕಲ್ಯಾಣದ ಕೆಲಸಗಳನ್ನು ಮಾಡುವುದಕ್ಕೆ ಪ್ರಚೋದಿಸುತ್ತವೆ. ಸ್ವಾರ್ಥರಹಿತ ಸೇವೆ ಮಾಡುವ ಕಾರಣಕ್ಕಾಗಿಯೂ ಹಿಂಸೆ ಸಮರ್ಥನೀಯವಲ್ಲ. ಆಸೆಯು ಹಿಂಸೆಯ ಎಡೆಗೆ ಮುನ್ನಡೆಸುತ್ತದೆ. ಅನಾಸಕ್ತಿಯ ಹುಡುಕಾಟವು ಅಹಿಂಸೆಯ ಹುಡುಕಾಟವೇ ಆಗಿರುತ್ತದೆ. ಗಾಂಧಿಯ ಪ್ರಕಾರ ಅಹಿಂಸೆಯಿಂದ ಕೂಡಿದ ಕಾರ್ಯಗಳೇ ನೈತಿಕ ಕಾರ್ಯಗಳು. ಹಿಂಸೆ ಮತ್ತು ಬಲಪ್ರಯೋಗದಿಂದ ಕೂಡಿದರೆ ಒಳ್ಳೆಯ ಕಾರ್ಯಗಳನ್ನು ಮಾಡುವುದು ಅಸಾಧ್ಯ.

ಗಾಂಧಿ: ಗೀತೆ ಮತ್ತು ವರ್ಣಾಶ್ರಮ ಧರ್ಮ

ಗೀತೆಯು ಬಾಹ್ಯಜಗತ್ತಿನ ಭಿನ್ನ ಭಿನ್ನ ಕೆಲಸಗಳೊಂದಿಗೆ ವ್ಯಕ್ತಿಗಳ ಆಂತರಿಕ ಗುಣ ಮತ್ತು ಕೌಶಲ್ಯಗಳನ್ನು ಹೊಂದಿಸುವಂತಹ ವರ್ಣಪದ್ಧತಿಗೆ ಒತ್ತು ನೀಡಿದೆ. ಸಮಾಜ ಸಮುದಾಯಕ್ಕೆ ವ್ಯಕ್ತಿಗಳು ಅತ್ಯುತ್ತಮ ಸೇವೆ ನೀಡುವಂತೆ ಮಾಡುವುದಕ್ಕಾಗಿ, ಸಾಮಾಜಿಕ ಸಂಸ್ಥೆಗೆ ವರ್ಣದ ವೃತ್ತಿ ವಿಭಜನೆಯು ಸಹಜವಾದುದು.

ಗಾಂಧಿಯವರ ವರ್ಣ ವಿಶ್ಲೇಷಣೆಯು ೨ ತಾತ್ವಿಕ ಪರಿಕಲ್ಪನೆಗಳನ್ನು ಆಧರಿಸಿದೆ. ಒಂದು ಗುಣ; ಮತ್ತೊಂದು ಕರ್ಮ. ಗುಣವೆಂದರೆ ಹುಟ್ಟಿನಿಂದ ಬಂದ ಸಹಜಗುಣಗಳು. ಉದಾಹರಣೆಗೆ- ಬ್ರಾಹ್ಮಣ: ಶಾಂತಿ, ಸ್ವಶಿಸ್ತು, ಪರಿಶುದ್ಧತೆ, ಕ್ಷಮೆ, ಪಾಂಡಿತ್ಯ; ಕ್ಷತ್ರಿಯ: ಶಕ್ತಿ, ಬಲ, ಧೀರೋದಾತ್ತತೆ; ವೈಷ್ಣವ: ಭೂ ವ್ಯವಸಾಯ, ವ್ಯಾಪಾರ ನೋಡಿಕೊಳ್ಳುವುದು; ಶೂದ್ರ: ಸೇವೆ ಮಾಡುವುದು. ಹಾಗೆಂದ ಮಾತ್ರಕ್ಕೆ ಈ ಕೆಲಸಗಳನ್ನು ಆಯಾಯಾ ಗುಂಪಿನವರಷ್ಟೇ ಮಾಡಬೇಕೆಂದೇನಿಲ್ಲ. ಉದಾಹರಣೆಗೆ ಧೈರ್ಯ ಬರೀ ಕ್ಷತ್ರಿಯನ ಗುಣವಾಗಬೇಕಿಲ್ಲ. ತನಗೆ ಸಹಜವಾದ ಕಾರ್ಯಗಳನ್ನೇ ಬಾಹ್ಯಪ್ರಪಂಚದಲ್ಲಿ ಮಾಡುವುದರಿಂದ ಆಂತರಿಕ ಬೆಳವಣಿಗೆಯೂ ಸಾಧ್ಯವಾಗುತ್ತದೆ. ಹೀಗೆ ಕರ್ಮಗಳನ್ನು ಮಾಡುವುದರಿಂದ ಅನಗತ್ಯ ಸ್ಪರ್ಧೆ, ದ್ವೇಷ ಬರುವುದಿಲ್ಲ. ಬದಲಿಗೆ ಕರ್ಮಬಂಧನದಿಂದ ಕರ್ಮಯೋಗಿಗೆ ಬಿಡುಗಡೆ ಸಿಗುತ್ತದೆ. "ಕರ್ಮವನ್ನು ಸ್ವಾರ್ಥಕ್ಕಾಗಿ ಮಾಡಬಾರದು. ಪರಹಿತಕ್ಕಾಗಿ ಮಾಡಬೇಕು. ಸ್ವಾರ್ಥಕರ್ಮ-ಬಂಧನ, ಪರಾರ್ಥಕರ್ಮ ಅದನ್ನು ಬಿಡಿಸುತ್ತದೆ."[೫೭] ತನಗೆ ವಹಿಸಿರುವ ಕರ್ತವ್ಯಗಳನ್ನು ನಿಸ್ವಾರ್ಥವಾಗಿ ಮಾಡುವುದರಲ್ಲಿ ಹುಟ್ಟುಸಹಜ ಗುಣಗಳು ಬೆರೆತರೆ ವರ್ಣನಿಯಮಗಳು ನೆರವೇರುತ್ತವೆ. ಹೀಗಾಗಿ ವರ್ಣವು ಏಣಿಶ್ರೇಣಿಯದ್ದಲ್ಲ ಮತ್ತು ಕೆಲವರಿಗೆ ವಿಶೇಷ ಆದ್ಯತೆ ಕೊಡುವುದಿಲ್ಲ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ

ಯಾರೂ ಮೇಲಲ್ಲ. ಅವರಿಗೆ ವಹಿಸಿರುವ ಸೇವೆಗಳ ಕಾರಣಕ್ಕೆ ಭಿನ್ನ ಜವಾಬ್ದಾರಿ ಹೊಂದಿದ್ದಾರಷ್ಟೇ. ಅದ್ವತೆಯಿರುವುದು ಕೆಲಸ ಮಾಡುವ ಚಿತ್ತಚೈತನ್ಯದಲ್ಲಿ. ಕರ್ತವ್ಯದ ಸ್ವರೂಪದಲ್ಲಲ್ಲ. ವರ್ಣ ನಿಯಮದಂತೆ ತನಗೆ ವಹಿಸಿರುವ ಕರ್ತವ್ಯವನ್ನು ಪೂರ್ಣ ನಿಸ್ವಾರ್ಥತೆ, ಅನಾಸಕ್ತಿಯಿಂದ ಮಾಡುವುದೇ ಗೀತೆಯ ಅತಿದೊಡ್ಡ ನೈತಿಕತೆ ಎಂದು ಗಾಂಧಿ ಅವರ ಒಟ್ಟಾರೆ ಚಿಂತನೆಯಾಗಿದೆ.

ಅರವಿಂದರು ಮತ್ತು ಗೀತೆ

ಭಾರತದ ಕ್ರಾಂತಿಕಾರಿ ರಾಷ್ಟ್ರೀಯವಾದದ ತತ್ವಗಳನ್ನು ವ್ಯವಸ್ಥಿತವಾಗಿ ಪ್ರಸಾರ ಮಾಡಿದ ಮೊದಲಿಗರಲ್ಲಿ ಅರವಿಂದರು ಪ್ರಮುಖರು. ಅರಬಿಂದೋ ಅವರ ಪ್ರಾರಂಭಿಕ ಕ್ರಾಂತಿಕಾರಕ ದಿನಗಳಲ್ಲಿ ಗೀತೆಯ 'ನಿಷ್ಕಾಮಕರ್ಮ'ವು ಅವರಿಗೆ ಅತ್ಯಂತ ದೊಡ್ಡ ಪ್ರೇರಕಶಕ್ತಿಯಾಗಿತ್ತು. ಯುದ್ಧವನ್ನು ಪಾಪವೆಂದು ಮತ್ತು ಹೋರಾಟವನ್ನು ಮಧ್ಯಮಮಟ್ಟದ ನೈತಿಕತೆ ಎಂದು ಭಾವಿಸುವವರಿಗೆ, ಅದರಲ್ಲೂ ಮಂದಗಾಮಿಗಳಿಗೆ ಗೀತೆ ಅತ್ಯುತ್ತಮ ಉತ್ತರ ನೀಡುತ್ತದೆ; ಹಾಗೂ ಅಹಿಂಸೆಯು ಎಲ್ಲ ಸಮಯದಲ್ಲೂ ಉಪಯುಕ್ತವಾಗಲಾರದೆಂಬ ನಿಲುವು ಹೊಂದಿದ್ದರು. ಭಾರತವನ್ನು ಪರಕೀಯರಿಂದ ಬಿಡುಗಡೆಗೊಳಿಸಲು ಶಕ್ಯವಿರುವ ಎಲ್ಲವನ್ನು ಮಾಡುವುದಾಗಿ ಕ್ರಾಂತಿಕಾರಿಗಳಿಂದ ಗೀತೆಯ ಮೇಲೆ ಪ್ರಮಾಣ ಮಾಡಿಸಿಕೊಳ್ಳುತ್ತಿದ್ದವರಲ್ಲಿ ಇವರು ಮುಂಚೂಣಿಯಲ್ಲಿದ್ದರು. ಸಾಕ್ಷಾತ್ ಕೃಷ್ಣನೇ ಕೃಪೆ ತೋರಿ ಗೀತೆಯನ್ನು ತನ್ನ ಕೈಲಿಟ್ಟುದುದಾಗಿ ಭಾವಿಸಿದ್ದ ಇವರು, ಕೃಷ್ಣ ಅರ್ಜುನನಿಂದ ಮಾಡಿಸಲು ಉದ್ದೇಶಿಸಿದ್ದುದನ್ನು ಎಲ್ಲರೂ ಮಾಡಬೇಕಿರುವುದಾಗಿ ಒತ್ತಾಯಿಸಿದರು. ಅರಬಿಂದೋ ಅವರ ಎಲ್ಲ ಕ್ರಿಯೆಗಳೂ ಗೀತೆಯ ಧ್ಯೇಯಗಳನ್ನು ವಿನಮ್ರವಾಗಿ ಅನುಸರಿಸುವುದಾಗಿ The Gita in Today's world ಕೃತಿಯ ಲೇಖಕ ಮೈಕೆಲ್‌ಡ್ಯಾನಿನೊ ಅಭಿಪ್ರಾಯಪಡುತ್ತಾರೆ. ಆದರೆ ಗೀತೆಯನ್ನು ವಿಶ್ಲೇಷಿಸುವುದರಲ್ಲಿ ಆಧ್ಯಾತ್ಮಿಕತೆ ತೀವ್ರವಾಗಿ ಕಾಣುತ್ತದೆ.

ಆಧ್ಯಾತ್ಮಿಕ ಮತ್ತು ವಿಶ್ವಾತ್ಮಕ ಸತ್ಯ ಪ್ರತಿಪಾದನೆಯ ಉದ್ದೇಶದಿಂದ ಗೀತೆಯು ಸಾಂಖ್ಯ, ಯೋಗ, ಭಕ್ತಿ ಸಂಬಂಧಿತ ಧರ್ಮಗ್ರಂಥಗಳಿಂದ ಮೌಲ್ಯಗಳನ್ನು ಪಡೆದುಕೊಂಡಿದೆ ಎಂದು ಅರಬಿಂದೋ ಸಮರ್ಥಿಸುತ್ತಾರೆ.

ಗೀತೆ ಕುರಿತಾಗಿ ಅರಬಿಂದೋ ಅವರು ಆಧ್ಯಾತ್ಮಿಕ ದೃಷ್ಟಿ ಹೊಂದಿರುವುದನ್ನು ಈ ಮುಂದಿನ ಉಲ್ಲೇಖ ವಿವರಿಸುತ್ತದೆ: "ಗೀತೆ ಬೋಧಿಸುವುದು ಮಾನವ ಕ್ರಿಯೆಯನ್ನಲ್ಲ, ದೈವಿಕ ಕ್ರಿಯೆಯನ್ನು; ಸಾಮಾಜಿಕ ಕರ್ತವ್ಯಗಳ ಆಚರಣೆಯನ್ನಲ್ಲ, ನಮ್ಮ ಸ್ವಭಾವದ ಮೂಲಕ ದೇವನ ಇಚ್ಛೆಗೆ ಅನುಗುಣವಾಗಿ ನಿಸ್ವಾರ್ಥದಿಂದ ಕೆಲಸ ಮಾಡುವುದಕ್ಕಾಗಿ, ಕರ್ತವ್ಯ ಮತ್ತು ನಡವಳಿಕೆಗಳ ಎಲ್ಲ ಪ್ರಮಾಣಗಳನ್ನು ತೊರೆಯುವುದು; ಸಮಾಜ ಸೇವೆಯನ್ನಲ್ಲ, ಜಗತ್ತಿನ ಸಲುವಾಗಿ ಮತ್ತು ಮನುಷ್ಯನ, ಆತನ ಸ್ವಭಾವದ ಒಂದಿರುವ ದೇವರ ಸಲುವಾಗಿ ಮತ್ತು ದೈವಿಕ ಸ್ವಭಾವದ ಅತ್ಯುತ್ತಮ ವ್ಯಕ್ತಿಗಳು ಅರ್ಪಿಸುವುದು. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಇದು ವಾಸ್ತವಿಕ ಮೌಲ್ಯಗಳನ್ನು ಕುರಿತ ಪುಸ್ತಕವಲ್ಲ, ಆಧ್ಯಾತ್ಮಿಕ ಜೀವನವನ್ನು ಕುರಿತ ಪುಸ್ತಕ."[೫೮]

ಅರಬಿಂದೋ ಅವರ ದೃಷ್ಟಿಯಲ್ಲಿ ಭಗವದ್ಗೀತೆಯು ಮನುಷ್ಯನ ಜೀವನಕ್ಕೆ ಅಗತ್ಯವಾದ ಶಕ್ತಿಯನ್ನು ನೀಡುತ್ತದೆ: "ಗೀತೆಯ ಬೋಧನೆಯು ಜೀವನಕ್ಕಾಗಿ, ಜೀವನದ ಸಿದ್ಧಾಂತಕ್ಕಾಗಿಯಲ್ಲ. ಇದು ಬೋಧಿಸುವುದೆಂದರೆ ಕರ್ಮದ ಪರಿಪೂರ್ಣತೆ. ಇದು ಮನುಷ್ಯನನ್ನು ಮೇರುವ್ಯಕ್ತಿಯನ್ನಾಗಿ ಸುತ್ತದೆ. ಇದು ಜಗತ್ತಿನಲ್ಲಿ ವ್ಯಕ್ತಿಯ ಜೀವನದ ಗುರಿಯಾದ ಪರಮಶಕ್ತಿ ಮತ್ತು ಪರಮ ಆನಂದವನ್ನು ನೀಡುತ್ತದೆ."[೫೯]

"ಆಧುನಿಕ ಮಾನವನ ನೈತಿಕ ಅಧಃಪತನವನ್ನು ತಪ್ಪಿಸಲು, ಪ್ರಾಚೀನ ಸತ್ಯ ಸಂರಕ್ಷಿಸಲು ಮಾನವೀಯತೆ ಸಾಧಿಸಲು ಗೀತೆ ಅಗತ್ಯ ಎಂದು ಅರಬಿಂದೋ ಭಾವಿಸಿದುದಾಗಿ ನಾಗಪ್ಪಗೌಡರು ಹೇಳುತ್ತಾರೆ."[೬೦]

ಅರಬಿಂದೋ ಅವರ ದೇಶಭಕ್ತಿ ಮತ್ತು ರಾಜಕೀಯವೂ ಆಧ್ಯಾತ್ಮಿಕತೆಯ ತಳಹದಿ ಹೊಂದಿದೆ. ತಿಲಕ್, ಗಾಂಧಿ, ವಿವೇಕಾನಂದರಂತೆಯೇ ಅರಬಿಂದೋ ಸಹ ಗೀತೆಯು ಕೇವಲ ಸೈದ್ಧಾಂತಿಕ ಅಧ್ಯಯನಾತ್ಮಕ ಪಠ್ಯವಲ್ಲ. ನೈತಿಕವಾಗಿ ಉದಾತ್ತರಾದ ವ್ಯಕ್ತಿಗಳಿಗೆ ಮಾತ್ರವೇ ಈ ಕೃತಿಯ ಆಧ್ಯಾತ್ಮಿಕತೆ ಕಾಣುವಂಥದ್ದು ಎಂದು ಭಾವಿಸಿದ್ದರು. ಇವರ ಪ್ರಕಾರ

ಗೀತೆಯ ಕೇಂದ್ರ ತಿರುಳು ೨ ಮೂಲ ತತ್ವಗಳನ್ನಾಧರಿಸಿದೆ.

೧. ಮನುಷ್ಯನು ವಿಶ್ವದ ವಿನ್ಯಾಸವನ್ನು ಬದಲಿಸಲಾರ. ವಿಶ್ವದ ಚಲನೆಗೆ ಅದರದೇ ಆದ ನಿಯಮವಿದೆ.

೨. ಪುರುಷೋತ್ತಮನು ಸೂತ್ರಧಾರಿ. ಮನುಷ್ಯರು ಕೇವಲ ಪಾತ್ರಧಾರಿಗಳು. ವಿಶ್ವದ ಚಲನೆಯಲ್ಲಿ ನಿಮಿತ್ತಮಾತ್ರರು. ಈ ಸತ್ಯವನ್ನು ಅರಿತು ದೇವರಿಗೆ ತಮ್ಮನ್ನು ಅರ್ಪಿಸಿಕೊಳ್ಳುವುದು ಮನುಷ್ಯನ ಕರ್ತವ್ಯ.

ಇವರ ಪ್ರಕಾರ ಗೀತೆಯ ಅಂತರಾರ್ಥ ಕರ್ಮಣ್ಯೇವಾಧಿಕಾರಸ್ತೇ... ಶ್ಲೋಕದಲ್ಲಿಲ್ಲ. ಅದು ಈ ಮುಂದಿನ ಶ್ಲೋಕದಲ್ಲಿ ಅಡಗಿದೆ:

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ (೧೮.೬೬)

(ಸರ್ವಧರ್ಮಗಳನ್ನು ಪರಿತ್ಯಜಿಸಿ ನನ್ನೊಬ್ಬನನ್ನೇ ಶರಣು ಹೊಂದು. ನಾನು ನಿನ್ನನ್ನು ಸರ್ವ ಪಾಪಗಳಿಂದ ಬಿಡಿಸುವೆನು; ಶೋಕಿಸಬೇಡ.)

ಗೀತೆಯು ಮಾನವ ಹಕ್ಕುಗಳನ್ನು ಒತ್ತಾಯಿಸುವುದಿಲ್ಲ. ಬದಲಿಗೆ ಮಾನವ ಕರ್ತವ್ಯಗಳನ್ನು ಒತ್ತಾಯಿಸುತ್ತದೆ. ಸತ್ಯಕ್ಕಾಗಿ ಹೋರಾಟ ಮಾಡಲು ಸಿದ್ಧವಾಗಿರುವುದರ ಅಗತ್ಯವನ್ನು ಅಂದರೆ ಧರ್ಮರಕ್ಷಣೆಗಾಗಿ ಬಲಪ್ರಯೋಗದ ಅಗತ್ಯತೆಯನ್ನು ಬೋಧಿಸುತ್ತದೆ ಎಂದು ಬಲವಾಗಿ ನಂಬಿದ್ದರು. ಪ್ರತಿ ತಲೆಮಾರೂ ಸಹ ಗೀತೆಯಲ್ಲಿ ತಮ್ಮ ಕಾಲಕ್ಕೆ ಅಗತ್ಯವಾದ ಸೂಕ್ತವಾದ ಸತ್ಯಗಳನ್ನು

ಕಂಡುಕೊಳ್ಳುತ್ತದೆ. ಹಿಂದಿನ ವ್ಯಾಖ್ಯಾನಕಾರರು ಮಾಡಿರುವಂತೆಯೇ ಪ್ರಸಕ್ತ ಕಾಲದ ಮಾನಸಿಕ ಮತ್ತು ಆಧ್ಯಾತ್ಮಿಕ ಅಗತ್ಯಗಳಿಗೆ ಹೊಂದುವ ಸತ್ಯಗಳಿಗಾಗಿ ಗೀತೆಯನ್ನು ಓದಬೇಕಿರುತ್ತದೆ: "ಗೀತೆಯು ವಾದ ಕಾದಾಟಗಳ ಅಸ್ತ್ರವಲ್ಲ; ಇದು ಯೋಚಿಸುವಂತೆ ಮಾಡುತ್ತದೆ. ಆದರೆ ನಮ್ಮ ಧ್ಯೇಯವನ್ನು ಸಂಕುಚಿತಗೊಳಿಸುವಂತೆ ವಿನಾಶ ಮಾಡುವುದಿಲ್ಲ ಅಥವಾ ಗೋಡೆ, ಬೇಲಿಗಳನ್ನು ನಿರ್ಮಿಸುವುದಿಲ್ಲ"[೬೯] ಎಂಬುದು ಅವರ ಆಲೋಚನೆಯಾಗಿತ್ತು.

ಅರಬಿಂದೋ ಅಹಿಂಸೆಯ ಆರಾಧಕರೇನೂ ಆಗಿರಲಿಲ್ಲ. ಹಿಂಸೆಯನ್ನು ತಕ್ಕಮಟ್ಟಿಗೆ ಅನುಮೋದಿಸಿರುವುದು ಸ್ಪಷ್ಟವಾಗುತ್ತದೆ. ಬ್ರಿಟಿಷರ ನಾಶ ಒಂದು ದೈವೇಚ್ಛೆ. ಭಾರತದ ಸಂವರ್ಧನೆಗಾಗಿ, ಆಧ್ಯಾತ್ಮಿಕ ಯುದ್ಧವು ಒಂದು ಅವಕಾಶ ಕಲ್ಪಿಸುತ್ತಿದೆ. ಇದನ್ನು ಯಾವುದೇ ಅಹಿಂಸೆ, ವೈರಾಗ್ಯದಿಂದ ಸಾಧಿಸಲಾಗದು ಎಂದು ನಂಬಿದ್ದರು. ಈ ವಿಷಯದಲ್ಲಿ ಇವರು ಗಾಂಧಿಗಿಂತ ಭಿನ್ನ. ತಿಲಕ್‌ರ ಆಲೋಚನೆಗಳಿಗೆ ಇವರ ಆಲೋಚನೆಗಳು ಹತ್ತಿರವಾಗುತ್ತವೆ. ಹಾಗಾಗಿಯೇ ಮಾನವ ನಾಗರಿಕತೆಯ ರಕ್ಷಣೆಗಾಗಿ ಹಿಟ್ಲರ್‌ನಂಥವರನ್ನು ಮಟ್ಟ ಹಾಕಬೇಕಾಗಿದೆ ಯೆಂದು ವಿವರಿಸಿ ೨ನೇ ವಿಶ್ವಯುದ್ಧವನ್ನು ಸಮರ್ಥಿಸುತ್ತಾ ಮಿತ್ರಪಕ್ಷಗಳ ಪರ ವಾಲುತ್ತಾರೆ: "ಮುಂದೊಂದು ದಿನ ಬರಬಹುದು, ಖಂಡಿತವಾಗಿಯೂ ಬರುತ್ತದೆ, ಆಗ ವಿಶ್ವಶಾಂತಿಯ ಆಳ್ವಿಕೆಗಾಗಿ ಮಾನವಕುಲವು ಆಧ್ಯಾತ್ಮಿಕವಾಗಿ, ನೈತಿಕವಾಗಿ, ಸಾಮಾಜಿಕವಾಗಿ ಸಿದ್ಧವಾಗಿರುತ್ತದೆ; ಅಲ್ಲಿಯವರೆಗೂ, ಯುದ್ಧದ ದೃಷ್ಟಿಕೋನವನ್ನು ಮತ್ತು ಹೋರಾಟಗಾರನಾಗಿ ಮನುಷ್ಯನ ಕ್ರಿಯೆಯ ಸ್ವರೂಪವನ್ನು ಯಾವುದೇ ವಾಸ್ತವಿಕ ತತ್ವಜ್ಞಾನವಾಗಲಿ, ಧರ್ಮವಾಗಲಿ ಒಪ್ಪಬೇಕಿರುತ್ತದೆ ಮತ್ತು ಬಾಧ್ಯವಾಗಿರಬೇಕಿರುತ್ತದೆ."[೭೦]

ನಾಗಪ್ಪಗೌಡ ಹೇಳುವಂತೆ ಅರಬಿಂದೋರ ರಾಷ್ಟ್ರೀಯತೆ ಬರವಣಿಗೆಯು ಆಗಿನ ಕ್ರಾಂತಿಕಾರಿಗಳು, ತೀವ್ರಗಾಮಿಗಳ ಹಿಂಸೆಯನ್ನು ಬೆಂಬಲಿಸುವ, ಸಮರ್ಥಿಸುವ ಉದ್ದೇಶ ಹೊಂದಿದೆ. (Nagappa Gowda K:The Bhagavadgita in the Nationalist Discource, p.no.154)

ನಾಗಪ್ಪಗೌಡರು ಅರಬಿಂದೋ ಅವರ ಅಹಿಂಸೆ–ಹಿಂಸೆಯನ್ನು ಕುರಿತ ಆಲೋಚನೆಯನ್ನು ತಿಲಕ್, ಗಾಂಧಿ ಮತ್ತು ಬಂಕಿಮರೊಂದಿಗೆ ಹೋಲಿಸುತ್ತಾ ಹೀಗೆ ಹೇಳುತ್ತಾರೆ: "ಅರಬಿಂದೋ ಅವರ ವಾದವು ಬಂಕಿಮ, ತಿಲಕ್ ಮತ್ತು ಗಾಂಧಿಯವರ ನೈತಿಕ ವಾದಗಳನ್ನು ಯಾವುದೇ ರೀತಿಯಲ್ಲಿಯೂ ಪುಷ್ಟೀಕರಿಸುವುದಿಲ್ಲ. ಗಾಂಧಿಯವರಿಗೆ ಗೀತೆಯು ಮೂಲತಃ ಅಹಿಂಸೆ ಕುರಿತಾದ ಪಠ್ಯ. ಬಂಕಿಮರು ಮತ್ತು ತಿಲಕರಿಗೆ, ಗೀತೆಯು ಅಹಿಂಸೆಯನ್ನು ಸಮರ್ಥಿಸಿದರೂ ಸಹ, ಅಂತಿಮವಾಗಿ, ಹಿಂಸೆಯನ್ನು ನೈತಿಕ ನೆಲೆಗಟ್ಟಿನಲ್ಲಿ ಬೆಂಬಲಿಸುತ್ತದೆ. ಅರಬಿಂದೋ ಇವರೆಲ್ಲರಿಗಿಂತ ಮುಂದಕ್ಕೆ ಹೋಗಿ, ಗೀತೆಯು ಮೂಲತಃ ಹಿಂಸೆಯನ್ನು ಕುರಿತ ಪಠ್ಯ, ಅಹಿಂಸೆಯನ್ನು ಕುರಿತಾದದ್ದಲ್ಲ ಎಂದು ವಾದಿಸುತ್ತಾರೆ. ಏಕೆಂದರೆ, ವಿಮೋಚನೆಯ ವಿಶ್ವಯೋಜನೆಯಲ್ಲಿ ಹಿಂಸೆಯು ಸ್ವಾಭಾವಿಕ ಮತ್ತು ಸಹಜ ಅಂಶವೆಂದು ಅರಬಿಂದೋ ನಂಬಿದ್ದಾರೆ."[೭೧]

ಅರಬಿಂದೋ ಸ್ವತಃ ಹೇಳುವಂತೆ, "ಹಿಂಸೆ ಮತ್ತು ಅಹಿಂಸೆಯ ಮಾರ್ಗದ ಆಯ್ಕೆ ಮನುಷ್ಯನಿಗಿಲ್ಲ. ದೈವ ಸೃಷ್ಟಿಯಲ್ಲಿ ಕೆಡುಕೂ ಸಹ ಭಾಗವಾಗಿದೆ. ಅದನ್ನು ಪೂರ್ಣ ನಿರ್ನಾಮ ಮಾಡುವುದು ಅಸಾಧ್ಯ. ಹೀಗಾಗಿ ಹಿಂಸೆಯೂ ನಿರಂತರವಾಗಿ ಅಗತ್ಯವೇ ಆಗಿದೆ. ಅದು ದೈವೇಚ್ಛೆ. ಕ್ರಿಸ್ತ, ಬುದ್ಧ ಬಂದುಹೋಗಿಯಾಗಿದೆ. ಈಗ ಜಗತ್ತು ರುದ್ರನ ಕೈಲಿದೆ. ಹಿಂಸೆ ಅನಿವಾರ್ಯ ಮತ್ತು ಅಪರಿಹಾರ್ಯ."[೨]

ಬಹಳಷ್ಟು ರಾಷ್ಟ್ರೀಯವಾದಿಗಳಂತೆಯೇ ಇವರೂ ಸಹ ಆಧುನಿಕ ಭಾರತಕ್ಕೆ ಆಧ್ಯಾತ್ಮಿಕತೆಯ ತಳಹದಿ ಅಗತ್ಯವೇ ವಿನಾ ತಾರ್ಕಿಕ ವಿಜ್ಞಾನವಲ್ಲ ಎಂದು ಭಾವಿಸಿದ್ದರು. ಆಧುನಿಕ ಯುರೋಪ್ ಭೌತಿಕತೆ, ಶಕ್ತಿ ಮತ್ತು ಪ್ರಗತಿ ಆಧಾರಿತವಾದುದು. ಆದ್ದರಿಂದ ಯೂರೋಪಿಯನ್ನರಿಗೆ ಗೀತೆಯಲ್ಲಿನ ಆಧ್ಯಾತ್ಮಿಕತೆ ಅನುಪಯುಕ್ತವಾಗಿ ಕಾಣುತ್ತದೆ. ಯೂರೋಪಿಯನ್ನರು ಗೀತೆಯನ್ನು ಸಾಮಾಜಿಕ ದೃಷ್ಟಿಕೋನದಿಂದ ವಿಶ್ಲೇಷಿಸುವುದನ್ನು ಮತ್ತು ಟೀಕಿಸುವುದನ್ನು ಅರಬಿಂದೋ ವಿರೋಧಿಸುತ್ತಾರೆ. ತಿಲಕ್, ಗಾಂಧಿಯವರಂತೆಯೇ ಅರಬಿಂದೋ ಅವರಿಗೆ ಸಹ ಭಗವದ್ಗೀತೆಯ ಚರಿತ್ರೆ ಮುಖ್ಯವಲ್ಲ; ಸತ್ಯ ಪ್ರಧಾನ. ಅದನ್ನು ಬೌದ್ಧಿಕ ಅಥವಾ ಚಾರಿತ್ರಿಕ ವಾದಗಳ ಮೂಲಕ ಕಾಣಲಾಗುವುದಿಲ್ಲ. ಆಧ್ಯಾತ್ಮಿಕ ಹುಡುಕಾಟದ ಮೂಲಕ ಬದುಕಿನ ಅನುಭವದಿಂದ ಕಂಡುಕೊಳ್ಳಬಹುದಷ್ಟೇ. ಚರಿತ್ರೆಗೆ ಧಾರ್ಮಿಕ ಮಹತ್ವವಿಲ್ಲ. ಚರಿತ್ರೆಯ ದೃಷ್ಟಿಕೋನ ಯುರೋಪ್ ಪ್ರವೃತ್ತಿ. ಗೀತೆ ಮತ್ತು ಕೃಷ್ಣನ ಸತ್ಯದರ್ಶನಕ್ಕೆ ಇದನ್ನು ಆಧಾರ ಮಾಡಿಕೊಳ್ಳುವುದು ಸೂಕ್ತವಲ್ಲ.

ನಾಗಪ್ಪಗೌಡ ಅವರು ತಿಲಕ್, ಗಾಂಧಿ ಮತ್ತು ಅರಬಿಂದೋ ಅವರ ಅವತಾರ ಪರಿಕಲ್ಪನೆಯನ್ನು ವಿಶ್ಲೇಷಿಸುತ್ತಾ ಅರಬಿಂದೋ ಅವರಿಗೆ "ಅವತಾರವು ಮನುಕುಲದ ಭವಿತವ್ಯದ ಪರಿಪೂರ್ಣತೆಗೆ ಇರುವ ಭರವಸೆಯ ಸ್ವರೂಪವೆಂದು ತೋರುತ್ತದೆ"[೩] ಎಂದಿದ್ದಾರೆ. ತಿಲಕರಿಗೆ ವ್ಯಕ್ತಿಯು ಆಂತರಿಕ ಸ್ವಭಾವದಲ್ಲಿ ಮತ್ತು ಬಾಹ್ಯ ಚಟುವಟಿಕೆಯಲ್ಲಿ ದೈವತ್ವದ/ನೈತಿಕ ಗುಣಗಳನ್ನು ಅಳವಡಿಸಿಕೊಳ್ಳುವ ಮೂಲಕ ಸ್ಥಿತಪ್ರಜ್ಞನಾಗುವುದೇ ಅವತಾರ. ಅರಬಿಂದೋ ಅವರಿಗೆ ಅತ್ಯುತ್ತಮ ವ್ಯಕ್ತಿಯೂ ಪುರುಷೋತ್ತಮನಾಗಲಾರ, ಅವತಾರ ಪುರುಷನಾಗಲಾರ. ಹೆಚ್ಚೆಂದರೆ ದೈವಿಕ ಗುಣಗಳನ್ನು ಅಳವಡಿಸಿಕೊಳ್ಳಬಲ್ಲನಷ್ಟೇ.

ಭಾರತೀಯರ ಆಧ್ಯಾತ್ಮಿಕ ಪ್ರಜ್ಞೆಯನ್ನು ಎಚ್ಚರಿಸಲೆಂದೇ ದೈವವು ರಾಷ್ಟ್ರೀಯತಾ ಅವತಾರದ ಅವಕಾಶವನ್ನು ನೀಡಿದೆ. ರಾಷ್ಟ್ರೀಯತೆಯ ನಿರ್ಮಾಣ ಕಾರ್ಯವು ಒಂದು ಬಗೆಯ ಆಧ್ಯಾತ್ಮಿಕ ಎಚ್ಚರ. ಬ್ರಿಟಿಷರ ವಸಾಹತುಕಾಲದ ಜೀವನವು ಮೌಢ್ಯ, ಸ್ವಾರ್ಥ, ಭೌತಿಕ ವ್ಯಾಮೋಹಗಳಿಂದ ಕೂಡಿದ್ದು, ಇಂಥಲ್ಲಿ ಆಧ್ಯಾತ್ಮಿಕತೆ ಬೆಳೆಯಲಾರದು. ಬ್ರಿಟಿಷ್ ಜೀವನಕ್ರಮವನ್ನು ತೊಡೆದು ಆರ್ಯಜೀವನಕ್ರಮವನ್ನು ಸ್ಥಾಪಿಸುವುದೇ ರಾಷ್ಟ್ರೀಯತೆಯ ಪ್ರಧಾನ ಅಂಶ. ಬ್ರಿಟಿಷರು ಮತ್ತು ಅವರ ಸಂಸ್ಕೃತಿಯನ್ನು ಹೊರಗಟ್ಟದೆ ಇದನ್ನು ಸಾಧಿಸಲಾಗದು. ಆದ್ದರಿಂದ ಈ ಯುಗದಲ್ಲಿ ರಾಷ್ಟ್ರೀಯತೆಯ ಅವತಾರರೂಪವು ಕಣ್ಣಮುಂದಿದೆ ಎಂದು ಅರಬಿಂದೋ ಭಾವಿಸುತ್ತಾರೆ.

ಕೇವಲ ರಾಷ್ಟ್ರದ ಭೌತಿಕ, ಸಾಮಾಜಿಕ, ರಾಜಕೀಯ ಬದಲಾವಣೆ, ಸುಧಾರಣೆ ತರುವುದಕ್ಕೆ ಅವತಾರದ ಅಗತ್ಯವಿಲ್ಲ. ಅದನ್ನು ವಿಭೂತಿಪುರುಷರೇ ಮಾಡಬಲ್ಲರು. ರಾಷ್ಟ್ರೀಯತೆಗೆ ಅದಕ್ಕಿಂತ ಮಹತ್ವದ ಅರ್ಥವಿದೆ ಎಂದು ಭಾವಿಸಿದ್ದರು.

ಅರಬಿಂದೋ ಪೌರ್ವಾತ್ಯವಾದಿ ಪರಿಕಲ್ಪನೆಗೆ ಹತ್ತಿರವಾಗುವುದನ್ನು ನಾಗಪ್ಪಗೌಡ ಅವರು ತಮ್ಮ ಕೃತಿಯಲ್ಲಿ ಹೀಗೆ ಗುರುತಿಸುತ್ತಾರೆ: "ಭಾರತವನ್ನು ಪ್ರಾಥಮಿಕವಾಗಿ ಆಧ್ಯಾತ್ಮಿಕ ಸಾಮ್ರಾಜ್ಯವನ್ನಾಗಿ ಕಾಣುವ ಪೌರ್ವಾತ್ಯ ಕಲ್ಪನೆಯನ್ನೆ ಅರಬಿಂದೋ ಅವರು ಮರು ಸೃಷ್ಟಿಸುವಂತೆನಿಸುತ್ತದೆ ಹಾಗೂ ಭಾರತ ರಾಷ್ಟ್ರದ ಎದುರಿರುವ ಸಮಾಜೋ–ರಾಜಕೀಯ ಮತ್ತು ನೈತಿಕ ಸವಾಲುಗಳತ್ತ ಅತ್ಯಲ್ಪ ಗಮನ ಹರಿಸುತ್ತಾರೆ."[೬೪]

ಆಧುನಿಕ ಯುರೋಪ್ ವೃತ್ತಿ ಹಂಚಿಕೆಯು ಮನುಷ್ಯರಲ್ಲಿ ಒತ್ತಡಕ್ಕೆ ಕಾರಣವಾಗಿದೆ. ಗೀತೆಯು ಹಿಂದೂ ಚಾತುರ್ವರ್ಣ ವ್ಯವಸ್ಥೆಯನ್ನು ಸಾಮಾಜಿಕ ವ್ಯವಸ್ಥೆ, ಆರ್ಥಿಕ ಸಂಸ್ಥೆ, ನೈತಿಕ ಸಂಸ್ಥೆಗಳೆಂದು ಭಾವಿಸದು. ಅದಕ್ಕೆ ಆಂತರಿಕ ಆಧ್ಯಾತ್ಮಿಕ ಮೌಲ್ಯವಿದೆ. ವಿಶಿಷ್ಟ ಕಾರ್ಯವನ್ನು ಸೂಕ್ತ ವಿಶಿಷ್ಟ ಸಮುದಾಯಕ್ಕೆ ಹಂಚುವ ಮೂಲಕ ಮನುಷ್ಯನ ಪರಿಪೂರ್ಣತೆಯತ್ತ ಕರೆದೊಯ್ಯುತ್ತದೆ. ಅಂದರೆ ವರ್ಣವ್ಯವಸ್ಥೆಯ ಬಾಹ್ಯ, ಸಾಮಾಜಿಕ, ಆರ್ಥಿಕ, ನೈತಿಕ ಮೌಲ್ಯಗಳಿಗೆ ಗಮನ ಕೊಡದೆ ಅದರ ಆಂತರಿಕ ಆಶಯಗಳನ್ನು ಗಮನಿಸಬೇಕೆನ್ನುತ್ತಾರೆ. ಅರಬಿಂದೋ ಅವರು ಗೀತೆಯಲ್ಲಿನ ಚಾತುರ್ವರ್ಣ ಪರಿಕಲ್ಪನೆಯನ್ನು ಹೀಗೆ ಅರ್ಥೈಸುತ್ತಾರೆ–ನಾಲ್ಕು ವರ್ಣಗಳು ನಾಲ್ಕು ವಿಶಿಷ್ಟ ಶಕ್ತಿ ಚೇತನಗಳಾಗಿವೆ: ೧. ಬ್ರಾಹ್ಮಣ–ಜ್ಞಾನ, ಚಿಂತನೆ; ೨. ಕ್ಷತ್ರಿಯ–ಶಕ್ತಿ, ಬಲ; ೩. ವೈಶ್ಯ–ಉತ್ಪಾದನೆ, ಮಾರುಕಟ್ಟೆ; ೪. ಶೂದ್ರ–ಶ್ರಮ, ಸೇವೆ.

ಮನುಷ್ಯನ ಆಧ್ಯಾತ್ಮಿಕ ಅಭಿವೃದ್ಧಿಗೆ ಸಾಮಾಜಿಕ ವ್ಯವಸ್ಥೆಯು ಸಾಧನವಷ್ಟೇ. ಇದನ್ನು ದೈವೇಚ್ಛೆಯೆಂದು ಮಾಡಬೇಕು: "ಚಿಂತನೆ ಮತ್ತು ಜ್ಞಾನ, ಯುದ್ಧ ಮತ್ತು ಸರ್ಕಾರ, ಉತ್ಪಾದನೆ ಮತ್ತು ಹಂಚಿಕೆ, ಕ್ರಮ ಮತ್ತು ಸೇವೆಯು ಎಚ್ಚರಿಕೆಯಿಂದ ಪ್ರತ್ಯೇಕಿಸಿರುವ ಸಮಾಜದ ಕ್ರಿಯೆಗಳಾಗಿದ್ದುದು, ಈ ಕ್ರಿಯೆಗಳಿಗೆ ಸ್ವಾಭಾವಿಕವಾಗಿ ಯಾರು ಸಮರ್ಥರೋ ಅಂಥವರಿಗೆ ವಹಿಸಲಾಗಿದೆ. ಅವರು ಆಧ್ಯಾತ್ಮಿಕ ಪ್ರಗತಿ ಮತ್ತು ಆತ್ಮಪರಿಪೂರ್ಣತೆಯೆಡೆಗೆ ವೈಯಕ್ತಿಕವಾಗಿ ಸಾಗಲು ಮತ್ತು ಸರಿಯಾದ ಮಾರ್ಗಗಳನ್ನು ಕಲ್ಪಿಸಿದೆ."[೬೫]

ಕೃಷ್ಣನು ವಿಶ್ವರೂಪದರ್ಶನ ನೀಡುವುದು ಧರ್ಮ ಅಧರ್ಮ, ಹಿಂಸೆ ಅಹಿಂಸೆ, ನಿರ್ಮಾಣ ವಿನಾಶ, ಈಶ್ವರರುದ್ರ–ಈ ಮುಖಗಳನ್ನು ತೋರಿಸುವುದಕ್ಕಷ್ಟೇ. ಕೃಷ್ಣನು ಅರ್ಜುನನಿಗೆ ಕೇವಲ ಸಾಮಾಜಿಕ ಕರ್ತವ್ಯಗಳನ್ನು ಬೋಧಿಸುವುದೇ ಆದಲ್ಲಿ ಅದು ಸಮಾಜವಿಜ್ಞಾನ ಬೋಧನಾಕೃತಿಯಾಗುತ್ತದೆ. ಈ ಕುರಿತ ಹೇಳಿಕೆ ಮುಂದಿನಂತಿದೆ: "ವ್ಯಕ್ತಿಯು ತನ್ನ ಕರ್ತವ್ಯವನ್ನು ಅನಾಸಕ್ತಿಯಿಂದ ಮಾಡಬೇಕೆಂದು ಒತ್ತಾಯಿಸುವುದು. ರಾಜ್ಯ ರಾಜಕಾರಣಿಗಳು, ವಕೀಲರು, ನೈತಿಕ ತರ್ಕವಾದಿಗಳು ಬೋಧಿಸುವಂಥದ್ದಾಗಿರಬಹುದು. ಅತ್ಯಂತ ಸೂಕ್ಷ್ಮವಾದ ನೈತಿಕ ಮತ್ತು

ಆಧ್ಯಾತ್ಮಿಕ ಸಮಸ್ಯೆಯ ಬಗ್ಗೆ ಗೀತೆಯು ಇದನ್ನು ಹೇಳುವುದಾದಲ್ಲಿ, ಅದನ್ನು ನಾವು ಜಗತ್ತಿನ ಧರ್ಮಗ್ರಂಥಗಳ ಪಟ್ಟಿಯಿಂದ ತೆಗೆದು, ಮತ್ತೆಲ್ಲಿಯಾದರೂ, ನಮ್ಮ ರಾಜಕೀಯ ವಿಜ್ಞಾನ ಮತ್ತು ನೀತಿ ತತ್ವಶಾಸ್ತ್ರಗಳ ಗ್ರಂಥಾಲಯಕ್ಕೆ ಸೇರಿಸಬೇಕು"[೬೬]

ಭಗವದ್ಗೀತೆಯು ಪಾಪ ಪುಣ್ಯ, ಒಳಿತು ಕೆಡುಕು, ನ್ಯಾಯ ಅನ್ಯಾಯದಂಥ ವಿಷಯಗಳನ್ನು ಕುರಿತು ಪ್ರಸ್ತಾವಿಸುವುದು ಸಾಮಾಜಿಕ ಹಿನ್ನೆಲೆಯಲ್ಲಲ್ಲ, ಬದಲಿಗೆ ಬ್ರಹ್ಮಪ್ರಜ್ಞೆಗಾಗಿ. ಗೀತೆ ಅರ್ಜುನನ ಬಾಹ್ಯಜೀವನವನ್ನು ನಿರ್ಲಕ್ಷಿಸದೆ ಆಂತರಿಕ ಹೋರಾಟವನ್ನು ಪರಿಹರಿಸಲು ಉದ್ದೇಶಿಸಿದೆ.

ಅರಬಿಂದೋ ಪ್ರಕಾರ ನಿಷ್ಕಾಮಕರ್ಮ, ತ್ಯಾಗ, ಲೋಕಸಂಗ್ರಹ ಪರಿಕಲ್ಪನೆಗಳು ಗೀತೆಯಲ್ಲಿ ಉಲ್ಲೇಖವಾಗುವುದು ಸಾಮಾಜಿಕ ನೈತಿಕಕಾರಣಕ್ಕಾಗಿ ಅಲ್ಲ, ಬದಲಿಗೆ ಪೂರ್ಣ ಆಧ್ಯಾತ್ಮಿಕ ಕಾರಣಕ್ಕಾಗಿ. ಗೀತೆಯು ಕೇವಲ ಭೌತಿಕ ಚಟುವಟಿಕೆಯ ಕರ್ಮಕ್ಕೆ ಕಾಳಜಿ ಹೊಂದಿಲ್ಲ. ಇದು ಮಾನಸಿಕ, ಆಧ್ಯಾತ್ಮಿಕ ಅಗತ್ಯತೆಯಾಗಿದೆ. ಭಕ್ತಿ ಎಂದರೆ ಕೇವಲ ದೇವರ ಪ್ರಾರ್ಥನೆ, ಪಠಣವಲ್ಲ. ಇದು ದೈವೇಚ್ಛೆಯಲ್ಲಿ ಪರಿಪೂರ್ಣ ನಂಬಿಕೆ ಮತ್ತು ಅಪಾರ ಪ್ರೇಮ ಹೊಂದಿರುವುದು. ಭಕ್ತಿಯು ಜ್ಞಾನ ಮತ್ತು ಕರ್ಮದ ನೆರವಿನಿಂದ ತ್ಯಾಗದ ರೂಪ ಪಡೆಯುತ್ತದೆ. ತಿಲಕ್ ಮತ್ತು ಗಾಂಧಿಯವರಿಗೆ ವ್ಯಕ್ತಿಯು ಸಾಮಾಜಿಕ ಹೊಣೆಗಾರಿಕೆಯ ದೃಷ್ಟಿಯಿಂದ ನಿರ್ವ್ಯಾಮೋಹವನ್ನು ಅನುಭವಿಸಬೇಕು. ಅರಬಿಂದೋ ಅವರಿಗೆ ಸೂತ್ರಧಾರಿಯಾದ ದೇವನಿಗಾಗಿ ತನ್ನ ಕ್ರಿಯೆಗಳನ್ನು ಸಾಬೀತುಪಡಿಸಬೇಕು. ಕರ್ಮ ಎಂದರೆ ಬ್ರಹ್ಮನಿಗೆ ಅರ್ಪಿಸಿಕೊಳ್ಳುವುದು. ಇದು ಸಾಮಾನ್ಯಕ್ರಿಯೆಯಲ್ಲ. ಹಾಗೆಂದ ಮಾತ್ರಕ್ಕೆ ಸಾಮಾಜಿಕ ಚಟುವಟಿಕೆಯ ನಿರ್ವ್ಯಾಮೋಹ ಪ್ರಕ್ರಿಯೆಯನ್ನು ಆಧ್ಯಾತ್ಮಿಕತೆಗೆ ವಿರೋಧವೆಂದೇನೂ ಅವರು ಭಾವಿಸುವುದಿಲ್ಲ.

ನಾಗಪ್ಪಗೌಡರು ಹೇಳುವಂತೆ ಅರಬಿಂದೋ ಗೀತೆಯ ಕರ್ಮಯೋಗ ವ್ಯಾಖ್ಯಾನವನ್ನು ವಿಮರ್ಶಿಸುತ್ತಾ ಈ ವ್ಯಾಖ್ಯಾನವು ದೈವೇಚ್ಛೆಗೆ ಅರ್ಪಿಸಿಕೊಳ್ಳುವುದನ್ನು ಒಪ್ಪದೆ ಸಾಮಾಜಿಕ ಕ್ರಿಯೆಯ ಜೀವನಕ್ಕೆ ಒತ್ತುಕೊಡುತ್ತದೆ. ಆದರೆ ಗೀತೆಯು ಕೆಲವೊಮ್ಮೆ ಎಲ್ಲ ಬಗೆಯ ಸಾಮಾಜಿಕ ಕ್ರಿಯೆಗಳನ್ನು ತಿರಸ್ಕರಿಸುವತ್ತಲೂ ಗಮನ ಹರಿಸುತ್ತದೆ. ಏಕೆಂದರೆ ಗೀತೆಯು ದೈವವಾಣಿಗೆ ಒತ್ತು ನೀಡುತ್ತದೆ. ಅಗತ್ಯಬಿದ್ದಲ್ಲಿ ಸಾಮಾಜಿಕ ಕ್ರಿಯೆಗಳನ್ನು ತಿರಸ್ಕರಿಸುವುದನ್ನು ಸಹ ಒಪ್ಪುತ್ತದೆ. ದೇವರ ವಾಣಿಗೆ ಬೆಲೆ ಕೊಡುವುದೇ ಮೂಲಭೂತವಾದುದು. ಇದನ್ನು ಕ್ರಿಯೆ ಅಥವಾ ಕ್ರಿಯಾರಹಿತವಾಗಿ ಮಾಡುತ್ತೇವೆಯೇ ಎಂಬುದು ಅಮುಖ್ಯ ಎಂದು ಭಾವಿಸುವುದಾಗಿ ಅಭಿಪ್ರಾಯಪಡುತ್ತಾರೆ. "ಕರ್ಮಯೋಗದ ಕುರಿತ ಈ ಆಲೋಚನೆಗಳು ತಿಲಕ್, ಗಾಂಧಿ ಮತ್ತು ವಿವೇಕಾನಂದರ ಓದನ್ನು ಆಧುನಿಕ ಕಾಲದ 'ಅಪ ಓದು'(ಮಾಡರ್ನ್ ಮಿಸ್‌ರೀಡಿಂಗ್) ಎಂದು ಭಾವಿಸುತ್ತಾರೆ. ಏಕೆಂದರೆ ಇವರು ನೈತಿಕ ಹಿನ್ನೆಲೆಯಿಂದಷ್ಟೇ ಗೀತೆಯನ್ನು ಪರಿಭಾವಿಸುತ್ತಾರೆ."[೬೭]

ಗೀತೆ: ಅಂಬೇಡ್ಕರ್ ವಿಚಾರಗಳು

ಅಂಬೇಡ್ಕರ್ ಅವರು ಭಗವದ್ಗೀತೆಯನ್ನು ಐತಿಹಾಸಿಕ ಪತ್ಯವೆಂದು ಗುರುತಿಸುತ್ತಾರೆ. ಭಗವದ್ಗೀತೆಯು ದೈವವಾಣಿಯಲ್ಲ; ಆದ್ದರಿಂದ ಅದು ಯಾವ ಸಂದೇಶವನ್ನೂ ಕೊಡಲಾರದು; ಅದನ್ನು ಹುಡುಕುವುದು ವ್ಯರ್ಥ. ಭಗವದ್ಗೀತೆ ಧರ್ಮಗ್ರಂಥವೂ ಅಲ್ಲ, ದರ್ಶನಗ್ರಂಥವೂ ಅಲ್ಲ ಎಂದು ಅಭಿಪ್ರಾಯಪಡುತ್ತಾರೆ.

ಇವರು ವೈದಿಕ, ಉಪನಿಷತ್ತುಗಳು ಬ್ರಾಹ್ಮಣರಿಗೆ ವಿಶೇಷ ಸ್ಥಾನಮಾನ ನೀಡುವ ಮೂಲಕ ಸಮಾಜದಲ್ಲಿ ಅಸಮಾನತೆಯನ್ನು ಶತಮಾನಗಳವರೆಗೆ ಮುಂದುವರಿಸಿದವು. ಈ ರೀತಿಯ ಅಸಮಾನತೆಗೆ ಕ್ರಾಂತಿರೂಪದಲ್ಲಿ ಪೆಟ್ಟುಬಿದ್ದದ್ದು ಬುದ್ಧ ಮತ್ತು ಅಶೋಕರ ಕಾಲದಲ್ಲಿ. ಈ ಕಾಲದಲ್ಲಿ ಬ್ರಾಹ್ಮಣರೂ ಸಾಮಾನ್ಯ ವ್ಯಕ್ತಿಗಳೆಂದು ಪರಿಗಣಿಸಲಾಯಿತು. ಅಹಿಂಸೆ ಮತ್ತು ಅಸಮಾನತೆಯ ಮೌಲ್ಯಗಳೆದುರು ಬ್ರಾಹ್ಮಣ ಮೌಲ್ಯಗಳು ನಗಣ್ಯವಾದುವು. ಬ್ರಾಹ್ಮಣರ ಪ್ರಬಲತೆಯನ್ನು ಮರುಸ್ಥಾಪಿಸುವುದಕ್ಕಾಗಿ 'ಪ್ರತಿಕ್ರಾಂತಿ'ಯ ರೂಪದಲ್ಲಿ ಪುಷ್ಯಮಿತ್ರ, ಸಾಮವೇದಿ ಬ್ರಾಹ್ಮಣನಿಂದ ಪ್ರತಿಕ್ರಿಯೆ ಮೊದಲಾಯಿತು. ಇವನು ಮೌರ್ಯರ ವಿರುದ್ಧ ದಂಗೆಯೆದ್ದ. ಬ್ರಾಹ್ಮಣರ ಆಧಿಪತ್ಯವನ್ನು ಸಂರಕ್ಷಿಸುವುದಕ್ಕಾಗಿ ಈ ಕಾಲಘಟ್ಟದಲ್ಲಿ ಜೈಮಿನಿಯ 'ಪೂರ್ವಮೀಮಾಂಸೆ' ಬರೆಯಲ್ಪಟ್ಟಿತು. ಜೈಮಿನಿಯ ಪೂರ್ವಮೀಮಾಂಸೆಯು ಬುದ್ಧವಾದದ ಪ್ರಖರತೆಯೆದುರು ನಿಲ್ಲಲಾಗದಾದಾಗ ಒಂದು ಭದ್ರ ತಾತ್ವಿಕತೆಯನ್ನು ಕಟ್ಟಿಕೊಳ್ಳುವುದಕ್ಕಾಗಿ ಭಗವದ್ಗೀತೆಯನ್ನು ರಚಿಸಿಕೊಂಡರು. 'ಬುದ್ಧಿಸಂನಿಂದ ಬ್ರಾಹ್ಮಣರನ್ನು ರಕ್ಷಿಸಲೆಂದೇ ಭಗವದ್ಗೀತೆ ಹುಟ್ಟಿತು.' ಗೀತೆ ಆಗ ಬ್ರಾಹ್ಮಣರಿಗೆ ಲಭ್ಯವಾಗದಿದ್ದರೆ ಬ್ರಾಹ್ಮಣ್ಯ ಉಳಿಯುತ್ತಲೇ ಇರಲಿಲ್ಲ. ಈಗಲೂ ಬ್ರಾಹ್ಮಣರಿಗಿರುವ ತಾತ್ವಿಕ ಭದ್ರ ತಳಹದಿ ಇದೊಂದೇ ಎಂದು ಗೀತೆಯ ಹುಟ್ಟಿನ ಬಗೆಗೆ ವಾದಿಸುತ್ತಾರೆ.

ಗೀತೆಯು ಬ್ರಾಹ್ಮಣ್ಯದ ಸಮರ್ಥನೆ ಮಾಡಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿತು. "ಬ್ರಾಹ್ಮಣಧರ್ಮಕ್ಕೆ ಧರ್ಮಕ್ಕೆ ಬೌದ್ಧಧರ್ಮದಿಂದ ಧಕ್ಕೆ ಉಂಟಾಗಿದ್ದರೂ ಗೀತೆ ಬ್ರಾಹ್ಮಣ ಧರ್ಮವನ್ನು ಎತ್ತಿ ಹಿಡಿಯಲು ಪ್ರಯತ್ನಿಸಿತು. ಬ್ರಾಹ್ಮಣ ಧರ್ಮದಲ್ಲಿ ಇದ್ದುದೆಲ್ಲ ದುರ್ಬಲಾಂಶಗಳೇ ಆದುದರಿಂದ ತೀರಾ ದುರ್ಬಲವಾದ ಅಂಶಗಳನ್ನು ಬಿಟ್ಟು ಪರ್ಯಾಯವನ್ನು ನಾನು ಒಪ್ಪುವುದಿಲ್ಲ"[೬೮] ಎನ್ನುತ್ತಾರೆ. ಇದಕ್ಕಾಗಿ ಬುದ್ಧಧರ್ಮದ ಕೆಲವು ಉತ್ತಮ ಮೌಲ್ಯಗಳನ್ನು ತನ್ನದಾಗಿ ಹೇಳತೊಡಗಿತು. ಆದರೆ ಚಾತುರ್ವರ್ಣ, ಹಿಂಸೆ ಮೊದಲಾದವನ್ನು ಸಮರ್ಥಿಸಲು ವೇದಗಳು ಮತ್ತು ಜೈಮಿನಿಯ ಪೂರ್ವಮೀಮಾಂಸೆಯನ್ನು ಆಧರಿಸಿತು. ಚಾತುರ್ವರ್ಣ ವ್ಯವಸ್ಥೆಯನ್ನು ಗೀತೆ ಬಳಸಿಕೊಂಡು ಸಾಮಾನ್ಯರ ಬದುಕನ್ನು ಇನ್ನೂ ದುರ್ಬಲಗೊಳಿಸಿತು. ಶೂದ್ರನು ಪರಮ ಭಕ್ತನೇ ಆದರೂ ಸರಿಯೇ ತನ್ನ ಶೂದ್ರ ವರ್ಣಧರ್ಮವನ್ನು ಪಾಲಿಸಲಿಲ್ಲ ವೆಂದಾದರೆ ಅರ್ಥಾತ್ ಮೇಲ್ವರ್ಗದವರ ಸೇವೆ ಮಾಡಲಿಲ್ಲವೆಂದಾದರೆ ಮೋಕ್ಷಕ್ಕೆ ಅವಕಾಶವೇ ಇಲ್ಲ ಎಂದು ಹೇಳಿದರು. ಅಲ್ಲದೆ ಸಾಂಪ್ರದಾಯಿಕ ವ್ಯವಸ್ಥೆಯನ್ನು ಗೀತೆ ಇನ್ನೂ ಬಲವಾಗಿ ಸ್ಪಷ್ಟವಾಗಿ ಪ್ರತಿಪಾದಿಸಿತು. ಹಾಗಾಗಿ ಇದು ಮನುಸ್ಮೃತಿಗಿಂತಲೂ ಭಿನ್ನವಲ್ಲ ಎಂದು ವಾದಿಸಿದರು.

ಗೀತೆಯ ಬಗೆಗಿನ ಅಂಬೇಡ್ಕರ್ ಅಭಿಪ್ರಾಯಗಳನ್ನು ವಿದ್ವಾಂಸರು ಭಿನ್ನ ಭಿನ್ನವಾಗಿ ಗ್ರಹಿಸಿದ್ದಾರೆ. ಗೀತೆಯ ಹಲವು ವಿಷಯಗಳ ಮೇಲೆ ಅಂಬೇಡ್ಕರ್ ಆಗಿಂದಾಗ್ಗೆ ಭಿನ್ನ ನಿಲುವುಗಳನ್ನು ತಳೆದಿದ್ದರಾಗಿ ಈ ಕೆಳಗಿನ ಭಿನ್ನ ಅಭಿಪ್ರಾಯಗಳು ಸ್ಪಷ್ಟಪಡಿಸುತ್ತವೆ. ಎಂ.ಎಸ್. ಗೋರೆ ಅವರು 'ಅಂಬೇಡ್ಕರ್‌ರಿಗೆ ಗೀತೆ ಗೌರವಾರ್ಹ ಪಠ್ಯವಾಗಿದೆ' ಎಂದು ಅಭಿಪ್ರಾಯಪಟ್ಟರೆ, ಕೆ.ಎಸ್. ಕದಂ ಅವರು 'ಅಂಬೇಡ್ಕರ್ ಪ್ರಕಾರ ಹಿಂದೂ ಸಾಮಾಜಿಕ ಜೀವನದ ಕಾನೂನಾಗಿರುವ ಗೀತೆಯು ಜಾತಿಪದ್ಧತಿಯ ಸಮರ್ಥನೆಯಾಗಿದೆ' ಎಂಬ ಅಭಿಪ್ರಾಯವನ್ನು ತಾಳುತ್ತಾರೆ. ಅಂಬೇಡ್ಕರ್ ಅವರ ಜೀವನಚರಿತ್ರೆಯನ್ನು ಬರೆದಿರುವ ಬರಹಗಾರರಾದ ಧನಂಜಯ್ ಕೀರ್ ಅವರು ಹೇಳುವಂತೆ, 'ಅಂಬೇಡ್ಕರ್ ಪ್ರಕಾರ ಭಗವದ್ಗೀತೆಯು ಬ್ರಾಹ್ಮಣ್ಯವನ್ನು ಪರಮಸ್ಥಾನಕ್ಕೇರಿಸಿ, ವೇದಗಳ ಸಾರವನ್ನು ಎತ್ತಿಹಿಡಿಯುವುದಾದರೂ, ಸ್ಪೃಶ್ಯ ಮತ್ತು ಅಸ್ಪೃಶ್ಯರಿಬ್ಬರಿಗೂ ಅದರ ತಾತ್ವಿಕತೆ ಅಂಗೀಕಾರಾರ್ಹವಾಗಿದೆ' ಎನ್ನುತ್ತಾರೆ. ಅಂಬೇಡ್ಕರ್ ಅವರು ಮನುಸ್ಮೃತಿಯನ್ನು ದೋಷಗಳನ್ನು ಗುರುತಿಸಿ, ಅದರಿಂದ ಮಾನವ ಜನಾಂಗದ ಏಳ್ಗೆ ಸಾಧ್ಯವಿಲ್ಲ ಎಂಬ ಅಭಿಪ್ರಾಯ ತಳೆದು, ಅದನ್ನು ಸಾರ್ವಜನಿಕವಾಗಿ ಸುಟ್ಟುಹಾಕುವ ಮೂಲಕ ತಮ್ಮ ಪ್ರತಿಭಟನೆಯನ್ನು ಮಾಡಿದರು. ಆದರೆ ಭಗವದ್ಗೀತೆಯ ಬಗೆಗೆ ದ್ವಂದ್ವ ನಿಲುವನ್ನು ತಳೆದಿದ್ದರು. ಈ ದ್ವಂದ್ವತೆಯನ್ನು ಅವರ ಈ ಮಾತುಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದಾಗಿದೆ–"ನಾನು ಭಗವದ್ಗೀತೆಯನ್ನು ಹೊರತುಪಡಿಸಿ ಮತ್ತಾವುದೇ ಪುಸ್ತಕವನ್ನು ಗೌರವಾರ್ಹ ಅಥವಾ ಅಧಿಕೃತವೆಂಬುದಾಗಿ ಒಪ್ಪುವುದಿಲ್ಲ"[೬] ದುಂಡು ಮೇಜಿನ ಸಮ್ಮೇಳನಗಳವರೆಗೂ ಹಿಂದುತ್ವ ಮತ್ತು ಹಿಂದೂ ಸಮಾಜ ಏಣಿಶ್ರೇಣಿಯನ್ನು ಭಗವದ್ಗೀತೆಯಲ್ಲಿ ಸೂಚಿಸಿರುವ ಮಾರ್ಗದ ಮೂಲಕ ಮಾತ್ರ ಸುಧಾರಿಸಲು ಸಾಧ್ಯವೆಂದು ನಂಬಿದ್ದರು. ಆಗಿನ ಸ್ಥಿತಿಯಲ್ಲಿ ಒಟ್ಟು ಭಾರತ ರಾಷ್ಟ್ರವನ್ನು ಒಗ್ಗೂಡಿಸುವಂತಹ ನೈತಿಕ ಬುನಾದಿಯನ್ನಾಗಿ ಗೀತೆಯನ್ನು ರೂಪಿಸಬಹುದಾಗಿತ್ತು.

ದುಂಡುಮೇಜಿನ ಸಮ್ಮೇಳನದ ನಂತರ ಹಿಂದೂ ವ್ಯವಸ್ಥೆಯಲ್ಲಿ ಪರ್ಯಾಯ ಹುಡುಕುವುದು ನಿಷ್ಫಲವೆಂದು ಅರಿತ ಅವರು ಬುದ್ಧತತ್ವದೆಡೆಗೆ ವಾಲುತ್ತಾ ಹೋದರು. ಈ ಘಟ್ಟದಲ್ಲಿ ಅವರು 'ಭಗವದ್ಗೀತೆ ಮೇಲೆ ಪ್ರಬಂಧಗಳು: ಪ್ರತಿಕ್ರಾಂತಿಯ ತಾತ್ವಿಕ ಸಮರ್ಥನೆ: ಕೃಷ್ಣ ಮತ್ತು ಅವನ ಗೀತೆ'(Essays on the Bhagavadgita: philosophic Defence of counter revolution) ಕೃತಿ ರಚಿಸಿದರು. ಈ ಕೃತಿಯಲ್ಲಿ ಅವರು ಗೀತೆಯು ಬುದ್ಧಧರ್ಮಕ್ಕಿಂತ ಮೊದಲು ರಚನೆಯಾಯಿತೆಂದು ಹೇಳಿರುವ ತಿಲಕರ ವಾದವನ್ನು ಬಲವಾಗಿ ಖಂಡಿಸುತ್ತಾರೆ. ಗೀತೆಯು ವ್ಯಕ್ತಿ ಪ್ರಯತ್ನ, ಸ್ವಾತಂತ್ರ್ಯ, ಸಮಾನತೆ ಮೊದಲಾದವನ್ನು ಕಡೆಗಣಿಸಿದೆ. ದೇಶಾಭಿಮಾನ ಮೂಡಿಸಲು ಗೀತೆಯನ್ನು ಬಳಸಿಕೊಳ್ಳುವುದು ತಿಲಕರ ತಂತ್ರಗಾರಿಕೆಯನ್ನು ತೋರಿಸುತ್ತದೆಯಷ್ಟೇ ಎಂದಿದ್ದಾರೆ. ರಾಷ್ಟ್ರೀಯವಾದಿಗಳು ಗೀತೆಯಿಂದ ತೆಗೆದುಕೊಂಡ ಸ್ಥಿತಪ್ರಜ್ಞತೆ, ಅನಾಸಕ್ತಿ, ಮತ್ತು ಸ್ವಧರ್ಮ ಪರಿಕಲ್ಪನೆಗಳು ಅಂಬೇಡ್ಕರ್ ದೃಷ್ಟಿಯಲ್ಲಿ ಚಾತುರ್ವರ್ಣವನ್ನೇ ಎತ್ತಿ ಹಿಡಿಯುವಂತಹುವಾಗಿವೆ. ಬುದ್ಧಧರ್ಮ ಉತ್ತುಂಗದ ಸ್ಥಿತಿಯಲ್ಲಿದ್ದ ಕಾಲದಲ್ಲಿ ಚಾರಿತ್ರಿಕ ಮತ್ತು ರಾಜಕೀಯದ

ಭಾಗವಾಗಿ ಗೀತೆ ಹುಟ್ಟಿತು. ಬೌದ್ಧಿಸಮ್ಮನ್ನು ಇಲ್ಲವಾಗಿಸುವುದು ಮತ್ತು ವೈದಿಕ ಆಚರಣೆಗಳನ್ನು ಮರುಸ್ಥಾಪಿಸುವುದು ಉದ್ದೇಶವಾಗಿತ್ತು ಎಂದು ವಿಶ್ಲೇಷಿಸುತ್ತಾರೆ.

ಈ ಕೃತಿಯಲ್ಲಿ ಭಗವದ್ಗೀತೆಯು ಬೌದ್ಧಧರ್ಮದ ಮುಖ್ಯತತ್ವಗಳನ್ನು ಸ್ವೀಕರಿಸಿದೆ ಎಂಬ ತಮ್ಮ ವಾದವನ್ನು ಮಂಡಿಸುತ್ತಾರೆ. ಗೀತೆಯ ಸಿದ್ಧಾಂತಗಳಿಗೂ ಬೌದ್ಧಧರ್ಮದ ಸಿದ್ಧಾಂತಗಳಿಗೂ ಅದ್ಭುತವಾದ ಸಾಮ್ಯಗಳಿವೆ ಎಂದು ತೋರಿಸುತ್ತಾರೆ. ಬುದ್ಧ ಸುತ್ತಗಳ ಮೇಲೆಯೇ ಭಗವದ್ಗೀತೆ ಉದ್ದೇಶಪೂರ್ವಕವಾಗಿ ರೂಪಿತವಾಗಿದೆ. ಬುದ್ಧಸುತ್ತುಗಳು ಸಂಭಾಷಣೆಗಳಾಗಿವೆ, ಭಗವದ್ಗೀತೆಯೂ ಕೂಡ ಹಾಗೆಯೇ ಇದೆ. ಬುದ್ಧನ ಧರ್ಮ ಸ್ತ್ರೀಯರಿಗೂ ಶೂದ್ರರಿಗೂ ಮೋಕ್ಷವನ್ನು ದಯಪಾಲಿಸಿತು; ಸ್ತ್ರೀಯರಿಗೆ ಮತ್ತು ಶೂದ್ರರಿಗೆ ಮೋಕ್ಷ ಕೊಡಲು ಕೃಷ್ಣ ಕೂಡ ಮುಂದೆ ಬರುತ್ತಾನೆ. ಬೌದ್ಧರು "ನಾನು ಬುದ್ಧನಿಗೆ ಶರಣು ಹೋಗುತ್ತೇನೆ; ಧಮ್ಮಕ್ಕೆ ಶರಣು ಹೋಗುತ್ತೇನೆ, ಸಂಘಕ್ಕೆ ಶರಣು ಹೋಗುತ್ತೇನೆ"[೨೦] ಎಂದು ಹೇಳುತ್ತಾರೆ; ಹಾಗೆಯೇ ಕೃಷ್ಣ ಕೂಡ ಹೇಳುತ್ತಾನೆ: ಸರ್ವಧರ್ಮಗಳನ್ನು ಪರಿತ್ಯಾಗ ಮಾಡಿ ನನ್ನೊಬ್ಬನಿಗೇ ಶರಣು ಹೋಗು" ಬೌದ್ಧಧರ್ಮ ಮತ್ತು ಗೀತೆಗೂ ಇರುವಷ್ಟು ಸಾದೃಶ್ಯ ಬೇರಾವುದಕ್ಕೂ ಇಲ್ಲ ಎಂದು ತಮ್ಮ ಅಭಿಪ್ರಾಯ ಮಂಡಿಸುತ್ತಾರೆ.

ಗೀತೆಯ ಮೇಲೆ ಹಲವು ವ್ಯಾಖ್ಯಾನಗಳು, ಚರ್ಚೆಗಳು ಬಂದಿರುವುದಕ್ಕೆ ಕಾರಣ ಅದರಲ್ಲಿ ವಿಶ್ವಾತ್ಮಕ ಸಂದೇಶವನ್ನು ಹುಡುಕಲು ಪ್ರಯತ್ನಿಸುತ್ತಿರುವುದಾಗಿದೆ. ಆಗಿನ ಬಹುತೇಕ ರಾಷ್ಟ್ರೀಯವಾದಿಗಳು ದೇಶಭಕ್ತಿ ಮೂಡಿಸಲು ಗೀತೆಯ ಮೊರೆ ಹೊಕ್ಕರೆ ಅಂಬೇಡ್ಕರ್ ಬುದ್ಧಿಸಂ ಮೊರೆ ಹೋಗುತ್ತಾರೆ.

ವಿನೋಬಾ ಬಾವೆ ಮತ್ತು ಗೀತೆ

ವಿನೋಬಾ ಅವರು ಸಾಮಾಜಿಕ ಮತ್ತು ಧಾರ್ಮಿಕ ಚಿಂತಕ. ಇವರು ಸಾಮಾಜಿಕ ಸುಧಾರಕರು ಎಂದು ಸುಪ್ರಸಿದ್ಧರು. ಇವರ ಸುಧಾರಣಾ ಚಟುವಟಿಕೆಗಳು ಮುಖ್ಯವಾಗಿ ಸಮಾಜೋ-ಆರ್ಥಿಕ ಅಸಮಾನತೆಗಳನ್ನು ಬೇರುಸಮೇತ ತೆಗೆದು ಹಾಕುವುದು ಮತ್ತು ಭಾರತದ ನೈತಿಕ ಹಾಗೂ ಆಧ್ಯಾತ್ಮಿಕ ಬುನಾದಿಗಳನ್ನು ಮರುಸ್ಥಾಪಿಸುವುದು. ಗೀತೆಯ ಆಧಾರದ ಮೇಲೆ ರಾಷ್ಟ್ರ ನಿರ್ಮಿಸುವುದರ ಬಗ್ಗೆ ವಿಭಿನ್ನ ಸಲಹೆಗಳನ್ನು ನೀಡಿದ್ದಾರೆ. ಹಾಗೆಯೇ ಇವರ ಆಲೋಚನೆಗಳು ಗೀತೆ ಕುರಿತ ಪ್ರಧಾನ ರಾಷ್ಟ್ರೀಯತಾ ಚಿಂತಕರೆಲ್ಲರ ಅಭಿಪ್ರಾಯಗಳಿಗಿಂತ ಭಿನ್ನವಾಗಿದೆ. ಇವರ ಪ್ರಕಾರ ಭಾರತ ರಾಷ್ಟ್ರವು ನೈತಿಕ ಬುನಾದಿಯ ಮೇಲೆ ಮರು ನಿರ್ಮಾಣವಾಗಬೇಕು. ರಾಷ್ಟ್ರವೆಂದರೆ ಕೇವಲ ರಾಜಕೀಯ ಸಂಸ್ಥೆಯಲ್ಲ, ಇದೊಂದು ಜನರ ನೈತಿಕ ಬೆಳವಣಿಗೆಗೆ ಕೆಲಸ ಮಾಡುವ ಸಮುದಾಯ. ವಿವೇಕಾನಂದರಂತೆ ಇವರೂ ಕೂಡ ಭಾರತದ ಸಾಂಸ್ಕೃತಿಕ ಪರಂಪರೆಯ ಬಗ್ಗೆ ಹೆಮ್ಮೆ ಮತ್ತು ವಿಶ್ವಾಸ ಹೊಂದಿದ್ದರು. ಹೀಗಾಗಿ ವೇದಗಳನ್ನು ವಿಮರ್ಶಿಸುವುದಕ್ಕೆ ಹಿಂಜರಿದರು. ಇವರ ಪ್ರಕಾರ ವರ್ಣಾಶ್ರಮ ಧರ್ಮಕ್ಕೆ

ಒತ್ತುಕೊಟ್ಟಿರುವ ವೈದಿಕ ಧರ್ಮ ಹಾಗೂ ಗೀತೆಯು ಒಳಗೊಂಡಿರುವ ಸಂಪ್ರದಾಯಗಳು ಭಾರತ ರಾಷ್ಟ್ರದ ನೈತಿಕ ಬುನಾದಿಗೆ ಆಧಾರವಾಗಬಲ್ಲವು.

ಇವರ 'ಗೀತಾ ಪ್ರವಚನಗಳು' ಭಾರತ ರಾಷ್ಟ್ರೀಯತ್ವದ ತಾತ್ವಿಕ, ನೈತಿಕ ಬುನಾದಿಗಳನ್ನು ಪುನರ್ ನಿರ್ಮಿಸುವುದಕ್ಕೆ ಮಾಡಿರುವ ಪ್ರಮುಖ ಪ್ರಯತ್ನವಾಗಿದೆ. ಈ ಗೀತಾ ಸಂಕಥನವು ವಾಸ್ತವಿಕ ತತ್ವಗಳು ಹಾಗೂ ನೈಜ ಸಾಮಾಜಿಕ ಕರ್ತವ್ಯವನ್ನು ಕುರಿತದ್ದಾಗಿದೆ. ಕರ್ಮಯೋಗಿಯು ಭಕ್ತಿಮಾರ್ಗದ ಮೂಲಕ ಪರಿಪೂರ್ಣ ಜ್ಞಾನದೆಡೆಗೆ ಚಲಿಸುವ ಪ್ರಕ್ರಿಯೆಯನ್ನು ಗೀತೆಯು ನಿರೂಪಿಸಿದೆ ಎಂಬುದು ಇವರ ಅಭಿಪ್ರಾಯವಾಗಿದೆ. ಇವರ ಪ್ರಕಾರ ಗೀತೆಯು ವಿಶ್ವಾತ್ಮಕವಾದುದೂ ಹಾಗೂ ಸಮಗ್ರವಾದುದೂ ಆಗಿದೆ. ಇವರ ದೃಷ್ಟಿಯಲ್ಲಿ ಗೀತೆಯು ಪುರಾತನ ತಾತ್ವಿಕ ಸಂಗತಿಗಳನ್ನು ಹೊಸ ಮಾದರಿಯಲ್ಲಿ ಬಳಸಿಕೊಂಡಿದೆ. ಹಾಗಾಗಿಯೇ ಅದರಲ್ಲಿನ ಪದಗಳು ವಿಶಾಲ ಅರ್ಥವ್ಯಾಪ್ತಿಯನ್ನು ಹೊಂದಿವೆ. ಅವು ನಿತ್ಯನೂತನವಾಗಿರುವುದರಿಂದಲೇ ಚಿಂತಕರು ತಮ್ಮ ಅಗತ್ಯತೆಗಳು ಮತ್ತು ಅನುಭವಗಳಿಗೆ ಅನುಗುಣವಾಗಿ ಭಿನ್ನ ಭಿನ್ನ ಅರ್ಥಗಳನ್ನು ಹುಡುಕಿಕೊಳ್ಳುತ್ತಾರೆ. ತಮ್ಮ ತಮ್ಮ ಅನುಭವಗಳ ಮೂಲಕ ತಮ್ಮವೇ ಅರ್ಥಗಳನ್ನು ಕಂಡುಕೊಂಡಿದ್ದರಿಂದಲೇ ಪ್ರಜಾಪತಿ ಆ ಎಲ್ಲಾ ಅರ್ಥಗ್ರಹಿಕೆಗಳನ್ನು ಅನುಮೋದಿಸುತ್ತಾನೆ. ಗೀತೆಯನ್ನು ನಾವು ಓದುವಾಗ ಉಪನಿಷತ್ತಿನ ಈ ಉದಾಹರಣೆಯನ್ನು ನೆನಪಿನಲ್ಲಿಡಬೇಕು ಎಂದು ಹೇಳುತ್ತಾರೆ. ವಿವೇಕಾನಂದ ಹಾಗೂ ಗಾಂಧಿ ಮೊದಲಾದ ಪೂರ್ವಿಕರಂತೆ ಇವರು ಕೂಡ ಗೀತೆಯನ್ನು ಸಾಮಾನ್ಯ ಮನುಷ್ಯನಿಗೆ ಸಂದೇಶ ನೀಡುವ ಪಠ್ಯವೆಂಬಂತೆ ಪರಿಗಣಿಸುತ್ತಾರೆ. ಗೀತೆ ಪ್ರಾಚೀನ ಪಠ್ಯಗಳ ದ್ವಂದ್ವತೆ, ಸಂಕೀರ್ಣ ತಾತ್ವಿಕತೆಗಳನ್ನು ತೊಡೆದು ಬದಲಿಗೆ ಧರ್ಮವನ್ನು ವಾಸ್ತವಿಕ ಹಾಗೂ ಎಲ್ಲರಿಗೂ ನಿಲುಕುವಂತೆ ಮಾಡುತ್ತದೆ. ಇದರಲ್ಲಿ ಬರುವ ಕರ್ಮ, ಭಕ್ತಿ, ಜ್ಞಾನ, ಸ್ಥಿತಪ್ರಜ್ಞ, ಸ್ವಧರ್ಮ ಮೊದಲಾದ ತಾತ್ವಿಕ ಪರಿಭಾಷೆಗಳು ಉನ್ನತ ಆಧ್ಯಾತ್ಮಿಕ ದೃಷ್ಟಿಯಿಂದಲ್ಲದೇ ವಿಶಾಲ ಸಮಾಜೋ–ನೈತಿಕ ದೃಷ್ಟಿಯಿಂದ ಬಳಸಲಾಗಿದೆ. ಇದರ ಬೋಧನೆಯು ಸಾಮಾನ್ಯ ಮನುಷ್ಯನಿಗೆ ಅವನ ನೆಲೆಯಿಂದಲೇ ಬೋಧಿಸುವುದು ಹಾಗೂ ಅತ್ಯಂತ ಸೌಲಭಸಾಧ್ಯವಾಗಿ ಅಂಥ ಮನುಷ್ಯನಿಗೆ ಸ್ವಾತಂತ್ರ್ಯ ನೀಡುವುದು. ಒಟ್ಟಾರೆ ವಿನೋಬಾ ಅವರು ಗೀತೆಯ ಸಂದೇಶ ಇರುವುದು ಎಲ್ಲರಿಗಾಗಿ ಎಂದಿದ್ದಾರೆ.

ವಿನೋಬಾರಿಗೆ ಗೀತೆಯು ಜೀವನ ಕಲೆಯ ಪಠ್ಯ, ಸಾಮಾನ್ಯ ಮನುಷ್ಯನಿಗೆ ಜೀವನ ಪರಿಶುದ್ಧತೆಯನ್ನು ವಿವರಿಸುವಂತದ್ದು. ಧರ್ಮವು ಕೆಲವರ ಸ್ವತ್ತಾಗಿದ್ದ ಸಂದರ್ಭದಲ್ಲಿ ಗೀತೆ ಹುಟ್ಟಿತು ಎಂಬ ವಿವೇಕಾನಂದರ ಅಭಿಪ್ರಾಯವನ್ನು ವಿನೋಬಾ ಅವರೂ ಕೂಡ ಒಪ್ಪುತ್ತಾರೆ. ಎಂದರೆ ಕೆಲವರಿಗೆ ಸೀಮಿತವಾಗಿದ್ದ ವೇದಗಳಲ್ಲಿನ ಧರ್ಮವನ್ನು ಪ್ರತಿರೋಧಿಸುವುದಕ್ಕಾಗಿ ಗೀತೆ ಹುಟ್ಟಿತು. ಗೀತೆಯ ಕೇಂದ್ರ ಸಂದೇಶ ಮೊದಲ ಎರಡು ಅಧ್ಯಾಯಗಳಲ್ಲಿದೆ ಎಂದು ಹೇಳುತ್ತಾರೆ. ಪಠ್ಯದ ಬಹಳಷ್ಟು ಭಾಗ ಒಳಗೊಳ್ಳುವುದೆಂದರೆ ತಮ್ಮ ತಮ್ಮ ಸ್ವಧರ್ಮದ ಮೂಲಕ ಉನ್ನತಮಟ್ಟಕ್ಕೆ ಏರುವುದು: ಇತರರ ಕರ್ತವ್ಯಗಳಲ್ಲಿ ಒಳಿತು ಕೆಡಕುಗಳನ್ನು

ಹುಡುಕುವುದಲ್ಲ. ಗೀತೆಯು ಭಕ್ತಿ ಮತ್ತು ಜ್ಞಾನದ ಮೂಲಕ ಸ್ವಧರ್ಮದಲ್ಲಿ ತಮ್ಮನ್ನು ತಾವು ತೊಡಗಿಕೊಳ್ಳುವಂತೆ ಹಾಗೂ ಪುರುಷೋತ್ತಮನ ಹಂತಕ್ಕೇರುವಂತೆ ಅವರಿಗೆ ತಿಳಿಸುವುದಾಗಿದೆ. ಗೀತೆಯ ಸ್ವಧರ್ಮಕ್ಕೆ ಹೆಚ್ಚಿನ ಪ್ರಾಧ್ಯಾನ್ಯತೆ ಕೊಡುತ್ತಾರೆ. ಉಳಿದ ಎಲ್ಲಾ ವಿಷಯಗಳು ಸ್ವಧರ್ಮದ ಸುತ್ತ ಎಣೆಯಲ್ಪಟ್ಟಿವೆ. 'ಗೀತೆಯ ಪ್ರಧಾನ ಉದ್ದೇಶವೆಂದರೆ ನಾವು ಮತ್ತು ನಮ್ಮ ಸ್ವಧರ್ಮದ ನಡುವೆ ಇರುವ ಭ್ರಮೆಯನ್ನು ಕಳಚುವುದಾಗಿದೆ. ...ಗೀತೆಯ ಮುಖ್ಯ ಕೆಲಸವು ಈ ಭ್ರಮೆಯನ್ನು, 'ನನ್ನದು' ಎಂಬ ವ್ಯಾಮೋಹವನ್ನು ಕಳಚುವುದು. ಹೀಗಾಗಿಯೇ ಅರ್ಜುನ ಪ್ರತಿಕ್ರಿಯಿಸುತ್ತಾನೆ. 'ಹೌದು ಪ್ರಭು, ಭ್ರಮೆ ನನ್ನನ್ನು ಕಳಚಿತು. ನನ್ನ ಸ್ವಧರ್ಮ ಈಗ ಸ್ಪಷ್ಟವಾಯಿತು' ಎನ್ನುತ್ತಾರೆ. ಸ್ವಧರ್ಮ ಎನ್ನುವುದು ಜೀವನದ ಘಟ್ಟದಲ್ಲಿ ವ್ಯಕ್ತಿಯ ಪಾಲಿಗೆ ಬರುವ ಕರ್ತವ್ಯಗಳ ಸ್ವಾಭಾವಿಕ ವ್ಯವಸ್ಥೆ. ಈ ವ್ಯವಸ್ಥೆಯು ಸಮುದಾಯಕ್ಕೆ ಒಬ್ಬ ವ್ಯಕ್ತಿಯು ತನ್ನ ಅತ್ಯುತ್ತಮ ಶಕ್ತಿಯನ್ನು ಕೊಡುವುದಕ್ಕೆ ಅನುವಾಗುವಂತೆ ರೂಪಿಸಿರುವ ಗುಣಗಳು ಮತ್ತು ಕರ್ತವ್ಯಗಳ ವಿಭಜನೆಯ ಆಧಾರಿತವಾದುದು. ವ್ಯಕ್ತಿಯ ಸಹಜ ಹಾಗೂ ಜನ್ಮತಃ ಗುಣ ಸ್ವಭಾವದ ಆಧಾರದ ಮೇಲೆ ಕರ್ತವ್ಯವನ್ನು ನಿರ್ವಹಿಸುವಲ್ಲಿ ಪೂರ್ಣ ತೊಡಗಿಕೊಳ್ಳುವುದಕ್ಕೆ ನೆರವಾಗುತ್ತದೆ ಹಾಗೂ ಇದು ಖಂಡಿತವಾಗಿಯೂ ಸತ್ಫಲಗಳನ್ನು ನೀಡುತ್ತದೆ. ವಿವಿಧ ಚಟುವಟಿಕೆಗಳಲ್ಲಿ ವ್ಯಕ್ತಿಯ ಏಕಾಗ್ರತೆ ಹಾಗೂ ಶಕ್ತಿ ಹಂಚಿಹೋದರೆ ಸಮಾಜದಲ್ಲಿ ಅರಾಜಕತೆ ಉಂಟಾಗುತ್ತದೆ. ಸ್ವಧರ್ಮವನ್ನು ಆಚರಿಸುವುದೆಂದರೆ ಕಾಯಕದ ಮೇಲೆ ಪೂರ್ಣ ಶಕ್ತಿ ಹಾಗೂ ಕೌಶಲ್ಯತೆ, ಏಕಾಗ್ರತೆಯಿಂದ ತೊಡಗಿಸಿಕೊಳ್ಳುವುದು. ಭಕ್ತಿ, ಮೋಹರಹಿತತೆ ಮತ್ತು ಅರ್ಪಣಾಭಾವದಿಂದ ಸ್ವಧರ್ಮವನ್ನು ಆಚರಿಸಿದರೆ ಅದು ಶುದ್ಧ ಹಾಗೂ ಕೀರ್ತಿದಾಯಕವಾಗುತ್ತದೆ. ಒಟ್ಟಾರೆ ಸ್ವಧರ್ಮಕ್ಕೆ ವಿಧೇಯನಾಗಿರುವ ವ್ಯಕ್ತಿಗೆ ಮೋಕ್ಷ ಸಿಗುತ್ತದೆ.

ವಿನೋಬಾ ಅವರು ಸ್ವಧರ್ಮದ ಜೊತೆಗೆ ವರ್ಣಧರ್ಮವನ್ನು ಕೂಡಿಸುತ್ತಾರೆ. ಈ ಎರಡೂ ಸಹಜವಾಗಿಯೂ ಹಾಗೂ ವಂಶಪಾರಂಪರ್ಯವಾಗಿಯೂ ಬರುವಂತಹವು. 'ಸ್ವಧರ್ಮದೊಂದಿಗೆ ನನ್ನ ತಾಯಿಯನ್ನು ಹೋಲಿಸುತ್ತೇನೆ. ಈ ಜನ್ಮದಲ್ಲಿ ನನ್ನ ತಾಯಿಯನ್ನು ಆರಿಸಿಕೊಳ್ಳುವುದು ನನ್ನಿಂದಾಗದು. ಆಕೆ ಈಗಾಗಲೇ ನನಗೆ ನಿರ್ಣಯವಾದವಳು. ಆಕೆ ಎಂಥದ್ದೇ ಸ್ವಭಾವದ ವ್ಯಕ್ತಿ ಆಗಿರಲಿ ಅವಳನ್ನು ತಳ್ಳಿ ಹಾಕಲಾಗದು.' ವಿನೋಬಾ ಅವರು ಸ್ವಧರ್ಮವು ಹೇಗೆ ಸಮಾನತೆಯನ್ನು ಸ್ಥಾಪಿಸುತ್ತದೆ ಎಂಬುದನ್ನು ವಿವರಿಸುವುದಿಲ್ಲ. ಅಲ್ಲದೆ, ವೈದಿಕ ವರ್ಣವ್ಯವಸ್ಥೆಯಲ್ಲಿರುವ ಶೋಷಣೆ, ಅಸಮಾನತೆ, ಏಣಿಶ್ರೇಣಿಯ ಕುರಿತಾಗಿ ಮೌನ ತಾಳುತ್ತಾರೆ. ವಿಶೇಷವೆಂದರೆ, ವರ್ಣವ್ಯವಸ್ಥೆಯನ್ನು ಅಗೌರವದಿಂದ ಕಡೆಗಣಿಸಿರುವುದೇ ಸಮಾಜದಲ್ಲಿನ ಸಮಸ್ಯೆಗಳಿಗೆ ಕಾರಣವೆಂದು ವಾದಿಸುತ್ತಾರೆ.

ಸ್ವಧರ್ಮವು ಸ್ವ-ಕೇಂದ್ರಿತ, ಆತ್ಮಕೇಂದ್ರವಾದರೆ ಹಾಗೂ ಪ್ರತಿಫಲ ನಿರೀಕ್ಷಿತವಾದುದಾದರೆ ಅದು ಪ್ರಾಮಾಣಿಕ ಹಾಗೂ ಸಾತ್ವಿಕ ಸ್ವಧರ್ಮವಲ್ಲ. ಭಕ್ತಿ ಅನ್ನುವುದು ತನ್ನ ಸ್ವಧರ್ಮದಲ್ಲಿ ಪೂರ್ಣ ಹಾಗೂ ಪ್ರೀತಿಯಿಂದ ತೊಡಗಿಸಿಕೊಳ್ಳುವುದಕ್ಕೆ ಇರುವ ಸಾಧನ. ಸ್ವಧರ್ಮ ಸಾಧನೆಗೆ

ಭಕ್ತಿ ಜ್ಞಾನ ಎರಡೂ ಬೇಕು. ಜ್ಞಾನದ ಮೂಲಕ ವ್ಯಕ್ತಿಯು ತನ್ನ ಆತ್ಮವನ್ನು ಅರಿಯುತ್ತಾನೆ, ಆಸೆಗಳನ್ನು ತ್ಯಜಿಸುತ್ತಾನೆ ಮತ್ತು ಸ್ವಧರ್ಮದ ಮಹತ್ವ ಅರ್ಥ ಮಾಡಿಕೊಳ್ಳುತ್ತಾನೆ. ಜ್ಞಾನ ಸ್ವಧರ್ಮಿಗೆ ಮೂರು ರೀತಿಯಲ್ಲಿ ನೆರವಾಗುತ್ತದೆ.

೧. ದೇಹವು ಸತ್ವ ರಜ ತಮಗಳಿಂದ ಮಾಡಿದ ಮಾಂಸ ರಕ್ತದ ಮುದ್ದೆ. ಆತ್ಮವು ನಿಜ ಹಾಗೂ ಶಾಶ್ವತ ಎಂಬುದನ್ನು ಅರ್ಥ ಮಾಡಿಕೊಳ್ಳುವುದುದಕ್ಕೆ ನೆರವಾಗುತ್ತದೆ.

೨. ಆತ್ಮ ಮತ್ತು ಪರಮಾತ್ಮನ ನಡುವಿನ ಸಾಮತ್ಯೆ ಬಗ್ಗೆ ಪ್ರಜ್ಞೆ ಮೂಡಿಸುತ್ತದೆ.

೩. ಭಕ್ತಿಯಿಂದ ಸ್ವಧರ್ಮದಲ್ಲಿ ತೊಡಗಿ ಅದನ್ನು ದೈವಕ್ಕೆ ಅರ್ಪಿಸಲು ನೆರವಾಗುತ್ತದೆ.

ಸ್ವಧರ್ಮವು ಕರ್ಮಕ್ಕೆ ಸಂವಾದಿ. ಕರ್ಮ ಭಕ್ತಿ ಜ್ಞಾನಗಳು ಒಂದಕ್ಕೊಂದು ಕೂಡಿವೆ. ವಿನೋಬಾ ಅವರು ಜಾತಿ ಆಧಾರಿತ ಪುರಾತನ ವೃತ್ತಿಗಳನ್ನು ತಾದಾತ್ಯದಿಂದ ಮುಂದುವರಿಸಬೇಕೆಂದು ಒತ್ತಾಯಿಸುತ್ತಾರೆ. ಸಮಾಜದ ಸುವ್ಯವಸ್ಥೆಗೆ ವರ್ಣ ಅತ್ಯಗತ್ಯವೆಂದು ಭಾವಿಸುವ ಇವರು ಅದಕ್ಕೆ ನೈತಿಕ ಆಧ್ಯಾತ್ಮಿಕ ಸ್ಪರ್ಶವನ್ನು ನೀಡುತ್ತಾರೆ. ಭಾರತದ ಪುರಾತನ ಸಂರಚನೆಯನ್ನು ಮರುಸ್ಥಾಪಿಸಲು ಹಾಗೂ ಪುನರ್‌ಸ್ಥಾಪಿಸಲು ಗೀತೆಯ ಅಧಿಕಾರವನ್ನು ಬಳಸಿಕೊಳ್ಳುತ್ತಾರೆ. ಅಂತರ್ ವರ್ಣಚಲನೆಯನ್ನು ವಿರೋಧಿಸುತ್ತಾರೆ. ಸ್ವಧರ್ಮಕ್ಕಾಗಿ ವ್ಯಕ್ತಿತರ್ಕ ಮತ್ತು ಸ್ವಾತಂತ್ರ್ಯ ಹಾಗೂ ಸಾಮರ್ಥ್ಯವನ್ನು ಕಡೆಗಣಿಸುತ್ತಾರೆ. ಇವರು ಪ್ರಾಚೀನ ಸಂಪ್ರದಾಯಗಳು, ಆಚರಣೆಗಳು ಅಗತ್ಯವೆನ್ನುವ ಇವರು ಈ ಕುರಿತ ವೈಜ್ಞಾನಿಕ, ಚಾರಿತ್ರಿಕ, ತಾರ್ಕಿಕ ಪ್ರಶ್ನೆಗಳನ್ನು ನಿರಾಕರಿಸುತ್ತಾರೆ. ಪ್ರಸ್ತುತ ಶಿಕ್ಷಣವ್ಯವಸ್ಥೆಯನ್ನು, ವೈಜ್ಞಾನಿಕ ಸಂಶೋಧನೆಗಳನ್ನು ಟೀಕಿಸುತ್ತಾರೆ. ಈಗಿನ ಸಾಮಾಜಿಕ ಕ್ರಮ ಮತ್ತು ಗುರಿಗಳನ್ನು ಅಲ್ಲಗಳೆಯುತ್ತಾರೆ. ಸ್ವಾರ್ಥರಹಿತ ಕ್ರಿಯೆಯಿಂದ ವ್ಯಕ್ತಿ ಕರ್ಮಯೋಗಿಯಾಗುತ್ತಾನೆ. ಅವನ ಕ್ರಿಯೆಯಲ್ಲಿ ಜ್ಞಾನ ಮತ್ತು ಭಕ್ತಿ ತುಂಬಿಕೊಳ್ಳುತ್ತದೆ. ಯಾವುದೇ ಅಹಂ, ಭ್ರಮೆ, ಸ್ವಾರ್ಥವಿರದವನ ಕೆಲಸವು ಸಮಾಜಸೇವೆಯೇ ಆಗುತ್ತದೆ. ತನ್ನ ನಿಷ್ಕಾಮಕರ್ಮದ ಮೂಲಕ ಸಮಾಜದಲ್ಲಿ ಒಳಿತನ್ನು ಬೆಳೆಸುತ್ತಾ ಹೋಗುತ್ತಾನೆ. ಸನ್ಯಾಸವನ್ನು ನಿರಾಕರಿಸುವ ಜೊತೆಜೊತೆಗೇ ಚಾಲ್ತಿಯಲ್ಲಿರುವ ಸಾಮಾಜಿಕ ವ್ಯವಸ್ಥೆಯನ್ನುಳಿಸಿಕೊಂಡು ಅವರವರ ವೃತ್ತಿಯಲ್ಲಿ ತೊಡಗಿಸಿಕೊಳ್ಳುವುದನ್ನು ಆಗಿನ ಬಹುತೇಕರು ಸಮರ್ಥಿಸಿದಂತೆ ಇವರೂ ಸಮರ್ಥಿಸುತ್ತಾರೆ. ಇವರ ವಾದವು ಸಾಂಪ್ರದಾಯಿಕ ರಾಷ್ಟ್ರೀಯತಾವಾದವೆನ್ನಬಹುದು.

ಇವರ ಪ್ರಕಾರ ವ್ಯಕ್ತಿ ಸಾತ್ವಿಕ ಕುಟುಂಬದಲ್ಲಿ ಜನಿಸಿದ್ದಾನೆಂದರೆ, ಅವನು ಪೂರ್ವಜನ್ಮದಲ್ಲಿ ಹೆಚ್ಚು ಪುಣ್ಯದ ಕೆಲಸ ಮಾಡಿರುವನೆಂದರ್ಥ. ಇವರ ಸ್ವಧರ್ಮ ಮತ್ತು ಪುನರ್ಜನ್ಮದ ವಿವರಣೆ ನೋಡಿದರೆ ವರ್ಣವ್ಯವಸ್ಥೆಯು ಮೇಲುಕೀಳನ್ನು ಸಮರ್ಥಿಸುವಂತೆಯೇ ಇದೆ. ಯಾವುದೇ ಸಾಮಾಜಿಕ ವ್ಯವಸ್ಥೆಯೂ ದೋಷರಹಿತವಲ್ಲ. ಹಾಗಾಗಿ ವರ್ಣದಲ್ಲಿರುವ ಕೆಲ ದೋಷಗಳನ್ನು ಒಪ್ಪಿಕೊಳ್ಳಬೇಕು.

ಭಗವದ್ಗೀತೆ: ನೆಹರು ಚಿಂತನೆಗಳು

ಜವಾಹರ್‌ಲಾಲ್ ನೆಹರು ಅವರು ಭಗವದ್ಗೀತೆಯನ್ನು ಕುರಿತು ತಮ್ಮ 'ಭಾರತ ದರ್ಶನ' ಕೃತಿಯಲ್ಲಿ ಅಭಿಪ್ರಾಯಗಳನ್ನು ಹೀಗೆ ವ್ಯಕ್ತಪಡಿಸಿದ್ದಾರೆ–

ನೆಹರು ಅವರು ತಿಲಕ್ ಮುಂತಾದ ನಾಯಕರಂತೆ ಭಗವದ್ಗೀತೆಯು ಮಹಾಭಾರತದ ಒಂದು ಅಂಗ ಭಾಗವೆಂದು ಪರಿಗಣಿಸಿದ್ದಾರೆ. ಅವರು ಮಹಾಭಾರತವೆಂಬ ಮಹಾ ನಾಟಕದಲ್ಲಿ ಗೀತೆ ಒಂದು ದೃಶ್ಯ ಎಂಬುದಾಗಿ ತಿಳಿಸಿದ್ದಾರೆ. ಗಾಂಧಿ ಅವರ ಅಹಿಂಸಾತತ್ವಕ್ಕೆ ಗೀತೆಯೇ ಆಧಾರ. ಉದ್ದೇಶ ಒಳ್ಳೆಯದಾದರೆ ಹಿಂಸೆ ಮತ್ತು ಯುದ್ಧ ಅನಿವಾರ್ಯ ಎಂಬ ಇತರರ ದೃಷ್ಟಿಗೂ ಗೀತೆಯೇ ಆಧಾರ ಎಂದಿದ್ದಾರೆ. ಅಂದರೆ ಅಹಿಂಸೆ ಮತ್ತು ಅನಿವಾರ್ಯವಾದ ಹಿಂಸೆ ಎರಡನ್ನೂ ಗೀತೆ ಸಮರ್ಥಿಸುತ್ತದೆ ಎನ್ನುವುದು ಅವರ ಅಭಿಪ್ರಾಯವಾಗಿದೆ.

"ಗೀತೆಯ ಸಂದೇಶವು ಮತೀಯವಲ್ಲ. ಯಾವ ಒಂದು ಪ್ರತ್ಯೇಕ ತತ್ವಶಾಸ್ತ್ರಜ್ಞರ ಪಂಗಡಕ್ಕೂ ಹೇಳಿದ್ದಲ್ಲ. ಬ್ರಾಹ್ಮಣನಾಗಲಿ, ಶ್ವಪಚನಾಗಲಿ, ಎಲ್ಲರಿಗೂ ವ್ಯಕ್ತಿ ಮಾರ್ಗದರ್ಶಿಯಾಗಿದೆ. 'ಎಲ್ಲಾ ದಾರಿಗಳೂ ನನ್ನ ಕಡೆ' ಎಂದು ಸಾರುತ್ತದೆ"[೮೮] ಎಂದಿದ್ದಾರೆ. ಗೀತೆಯು ಸರ್ವ ಜನಾಂಗಕ್ಕೂ ಅನ್ವಯವಾಗುವಂತಹದ್ದು, ಅದರ ಸಂದೇಶ ಎಲ್ಲ ಮತಗಳ ಜನರಿಗೂ ಒಂದೇ ಆಗಿದೆ ಎಂಬ ಗಾಂಧಿ ಅವರ ಆಶಯವನ್ನು ಇವರೂ ವ್ಯಕ್ತಪಡಿಸಿದ್ದಾರೆ.

ಗೀತೆಯ ಕರ್ಮಯೋಗವನ್ನು ಇವರು ಸಮರ್ಥಿಸುತ್ತಾ ಗೀತೆಯಲ್ಲಿ ಕ್ರಿಯಾಶೂನ್ಯತೆಗೆ ಧಿಕ್ಕಾರವಿದೆ. ಅದು ಕ್ರಿಯೆ ಮತ್ತು ಜೀವನ ಉನ್ನತ ಧರ್ಮಕ್ಕನುಗುಣವಾಗಿರಬೇಕು ಎಂದು ಹೇಳುತ್ತಾ 'ಜೀವನದ ಹೊರೆ ಮತ್ತು ಕರ್ತವ್ಯ ನಿರ್ವಹಣೆಗೆ ಕರ್ಮ ಮಾಡು, ಆದರೆ ಧಾರ್ಮಿಕ ಹಿನ್ನೆಲೆ ವಿಶ್ವದ ಉನ್ನತ ಉದ್ದೇಶ ಸದಾ ನಿನ್ನ ದೃಷ್ಟಿಯಲ್ಲಿರಲಿ ಎಂದು ಗೀತೆ ಹೇಳುತ್ತದೆ' ಎನ್ನುತ್ತಾರೆ. ಇವರು ಗೀತೆಯ ಕರ್ಮಯೋಗದೊಂದಿಗೆ ಜನರು ಧಾರ್ಮಿಕ ನಂಟನ್ನೂ ಬಿಡಬಾರದೆಂದು ಅರ್ಥೈಸುತ್ತಾರೆ.

ಗೀತೆಯಲ್ಲಿ ಜ್ಞಾನಮಾರ್ಗ, ಕರ್ಮಮಾರ್ಗ, ಭಕ್ತಿಮಾರ್ಗ ಎಂಬ ಈ ಮೂರು ಮಾರ್ಗಗಳು ಮಾನವ ಪ್ರಗತಿಗಾಗಿ ಇವೆ. ಈ ಮಾರ್ಗಗಳನ್ನು ಸಮಾಧಾನ ಮಾಡಿ, ಸಮನ್ವಯಗೊಳಿಸುವ ಪ್ರಯತ್ನ ಗೀತೆಯಲ್ಲಿ ನಡೆದಿದೆ ಎನ್ನುತ್ತಾರೆ. ಜೊತೆಗೆ ಗೀತೆಯ ವ್ಯಕ್ತಿ ಸಂವಾದವು ನಮ್ಮನ್ನು ಹೆಜ್ಜೆಯಿಂದ ಹೆಜ್ಜೆಗೆ ವೈಯಕ್ತಿಕ ಕರ್ತವ್ಯ ಮತ್ತು ಸಾಮಾಜಿಕ ನಡತೆಯ ಉನ್ನತಮಟ್ಟಕ್ಕೆ, ಹೆಚ್ಚಿನ ನಿಸ್ವಾರ್ಥ ವಾತಾವರಣಕ್ಕೆ, ಮಾರ್ಗಜೀವನವನ್ನು ನೀತಿಯ ನೆಲೆಗಟ್ಟಿನ ಮೇಲೆ ಕಟ್ಟುವುದಕ್ಕೆ, ಸರ್ವವ್ಯಾಪಕವಾದ ಒಂದು ಧಾರ್ಮಿಕ ದೃಷ್ಟಿಗೆ ಕರೆದೊಯ್ಯುತ್ತದೆ ಎಂದು ಗೀತೆಯನ್ನು ಉದಾತ್ತತೆಯಿಂದ ಕಂಡಿದ್ದಾರೆ.

ನೆಹರು ಅವರು ತಮ್ಮ ಕೃತಿಯನ್ನು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ ಕಾರಣಕ್ಕಾಗಿ ಅಹ್ಮದ್‌ನಗರದ ಸೆರೆಮನೆಯಲ್ಲಿದ್ದಾಗ ಬರೆದರು. ಆಗ ಸ್ವಾತಂತ್ರ್ಯ ಚಳುವಳಿಯ

ಕಾವು ಜೋರಾಗಿದ್ದ ಕಾಲ. ಅಂದರೆ ೧೯೪೨ರಲ್ಲಿ ಭಾರತಬಿಟ್ಟು ತೊಲಗಿ ಘೋಷಣೆ ಮೊಳಗಿಸಿ ಬ್ರಿಟಿಷರನ್ನು ದೇಶ ಬಿಟ್ಟು ಕಳುಹಿಸಲೇಬೇಕು ಎನ್ನುವ ತೀವ್ರ ಹೋರಾಟದ ಕಾಲ. ಈ ಕಾಲದಲ್ಲಿ ಬರೆಯುತ್ತಿರುವ ನೆಹರು ಅವರ ಮೇಲೆ ಸುಭಾಷ್‌ಚಂದ್ರ ಬೋಸ್ ಮುಂತಾದ ಕ್ರಾಂತಿಕಾರಿಗಳ ಮಾರ್ಗಕ್ಕಿಂತಲೂ ಗಾಂಧಿ ಅವರ ಅಹಿಂಸಾ ಮಾರ್ಗದ ಪ್ರಭಾವ ಹೆಚ್ಚಾಗಿತ್ತು. ಆದ್ದರಿಂದ ಇವರು ಗೀತೆಯನ್ನು ಗಾಂಧಿ, ವಿನೋಬಾ ಅವರಂತೆ ಉದಾತ್ತ ಸಂದೇಶವುಳ್ಳ ಮೌಲ್ಯಯುತ ಕೃತಿಯೆಂದು ಕಾಣುತ್ತಾರೆ ಎಂದು ಹೇಳಬಹುದಾಗಿದೆ. ಹಾಗಾಗಿ ಗೀತೆಯಲ್ಲಿ ಸೂಕ್ಷ್ಮವಿಚಾರ ಮತ್ತು ಸಂಶೋಧನೆ, ಚಿಂತನ ಮತ್ತು ಕ್ರಿಯೆ, ತಿಕ್ಕಾಟ ಮತ್ತು ವಿರೋಧ ಗಳೊದಗಿದರೂ ಒಂದು ಸಮತಾದೃಷ್ಟಿ ಮತ್ತು ಸಮಕಾಲೀನ ಶಕ್ತಿಯಿದೆ ಎಂದು ನೆಹರೂ ಸದಾ ನಂಬಿದ್ದರು.

ವಿ.ಆರ್. ನಾರ್ಲ ಮತ್ತು ಕೃಷ್ಣನ ಗೀತೆ

ವಿ.ಆರ್. ನಾರ್ಲ ಅವರು ಗೀತೆಯ ಕುರಿತಾಗಿ ಆಳವಾದ ಅಧ್ಯಯನದಿಂದ ಸ್ಪಷ್ಟವಾದ ನಿಷ್ಠುರ ಮಾತುಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಗೀತೆಯನ್ನು ಪವಿತ್ರಗ್ರಂಥವೆಂದು ಕರೆಯಬಹುದೇ? ಎಂಬ ಪ್ರಶ್ನೆ ನಾರ್ಲ ಅವರನ್ನು ಕಾಡಿದೆ. ಹಾಗಾಗಿ ಅವರು ವಿವಿಧ ಗ್ರಂಥಗಳನ್ನು ಅಭ್ಯಸಿಸಿ ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು ಇಲ್ಲಿ ಪ್ರಯತ್ನಿಸಿದ್ದಾರೆ. ಶಂಕರಾಚಾರ್ಯರು ಬದುಕಿದ್ದ ಕಾಲಕ್ಕೆ ಮುಂಚಿನ ಶತಮಾನಗಳಲ್ಲಿ ಗೀತೆಯನ್ನು ಧರ್ಮಗ್ರಂಥವೆಂಬ ಗಂಭೀರ ಅರ್ಥದಲ್ಲಿ ಯಾರೂ ಪರಿಗಣಿಸಿರಲಿಲ್ಲ. ಅದ್ವೈತ ಸಿದ್ಧಾಂತವನ್ನು ಮತ್ತು ತಮ್ಮ ಜಾತಿ ಹಾಗೂ ಪಂಥೀಯ ಆಸಕ್ತಿಗಳನ್ನು ಸಮರ್ಥವಾಗಿ ಪ್ರತಿನಿಧಿಸಬಲ್ಲುದು ಎಂಬ ಒಂದೇ ಕಾರಣಕ್ಕೆ ಶಂಕರರು ಗೀತೆಗೆ ಪವಿತ್ರಗ್ರಂಥದ ಸ್ಥಾನ ಕಲ್ಪಿಸಲು ಶಕ್ತಿ ಮೀರಿ ಪ್ರಯತ್ನಿಸಿದರು ಎಂದು ನಾರ್ಲ ಹೇಳುತ್ತಾರೆ. ಇದೆ ಅಭಿಪ್ರಾಯವನ್ನು ಎಸ್.ಕೆ. ಬೆಳ್ವಾಲ್ಕರ್ ಅವರು "ಗೀತೆಯು ಕಳೆದ ೧೨೦೦ ವರ್ಷಗಳಲ್ಲಿ ಅಂದರೆ ಶಂಕರಾಚಾರ್ಯರ ಮತ್ತು ಆನಂತರದ ಕಾಲದಿಂದ ಮಾತ್ರವೇ ಪವಿತ್ರ ಗ್ರಂಥವೆಂದು ಪ್ರಚುರ ಪಡೆಯಿತು"[೨] ಎಂದಿದ್ದಾರೆ.

ಗೀತೆಯನ್ನು ಪ್ರಚುರಪಡಿಸುವ ಉದ್ದೇಶವನ್ನು ಹೊಂದಿದ್ದ ಶಂಕರಾಚಾರ್ಯರ ಕಾಲದ ಇತಿಹಾಸದ ಒತ್ತಡ ಮತ್ತು ರಾಜಕಾರಣವನ್ನು ವಿಶದಪಡಿಸಿರುವ ಡಿ.ಡಿ. ಕೊಸಾಂಬಿ ಅವರು "ಶಂಕರನ ಹೆಸರಿನಲ್ಲಿ ಇಂದು ಲಭ್ಯವಿರುವ ಕೃತಿಗಳ ರಾಶಿಯನ್ನು ಹಾಗೂ ಅದರಲ್ಲಿ ಬರುವ ಬೌದ್ಧ ಸಿದ್ಧಾಂತದ ಖಂಡನೆಯನ್ನು ಗಮನಿಸಿದರೆ ಶಂಕರನಿಗೆ ಮೂಲ ಬೌದ್ಧ ಸಿದ್ಧಾಂತದ ಪರಿಚಯ ಎಳ್ಳಷ್ಟೂ ಇರಲಿಲ್ಲ ಎನ್ನುವುದು ಸ್ಪಷ್ಟ. ಶಂಕರನ ಕಾಲಕ್ಕೆ ಬೌದ್ಧಮತಗಳಲ್ಲಿ ಆಚರಣೆಯಲ್ಲಿದ್ದ ಬೌದ್ಧಧರ್ಮವು ತನ್ನ ಮೂಲತತ್ವಗಳನ್ನೆಲ್ಲಾ ಮರೆತು ಕೇವಲ ಒಂದು ಲಾಮಾಧರ್ಮವಾಗಿ ಅವನತಿ ಹೊಂದಿತ್ತು. ಈ ಅಸಂಖ್ಯಾತ ವಿಹಾರಗಳು ದೇಶದ ಖಜಾನೆಯನ್ನು ಬರಿದು ಮಾಡುತ್ತಿದ್ದವು. ಶಂಕರನ ಕ್ರಿಯೆ ಈ ವಿಹಾರಗಳ ನಿರ್ಮೂಲನೆಗೆ ಪ್ರೇರಕವಾಯಿತು. ಅದೇ

ರೀತಿಯಲ್ಲಿ ರಾಮಾನುಜರ ಚಟುವಟಿಕೆಗಳು ಶಿವನ ಆರಾಧಕರಾಗಿದ್ದ ಶ್ರೀಮಂತ ಭೂಮಾಲೀಕರನ್ನು ವಿರೋಧಿಸುವುದಕ್ಕೆ ಪ್ರೇರೇಪಿಸಿತು."[೭೩]

ಇದೇ ಅಭಿಪ್ರಾಯವನ್ನು ಡಿ.ಡಿ. ಕೊಸಾಂಬಿ ಅವರು ಇನ್ನಷ್ಟು ಸ್ಥೂಲವಾಗಿ ಹೀಗೆ ವಿವರಿಸಿದ್ದಾರೆ. "ಕ್ರಿ.ಶ. ೮೦೦ರ ಸುಮಾರಿಗೆ ಶಂಕರನ ಕೆಲವು ಕ್ರಿಯೆಗಳು, ಬೌದ್ಧಸ್ತೂಪಗಳ ನಾಶಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಕಾರಣವಾಯಿತು ಎನ್ನುವುದನ್ನು ನಮ್ಮ ಪರಂಪರೆ ದಾಖಲಿಸುತ್ತದೆ... ಮಹಾಭಾರತದಲ್ಲಿ ಬರುವ ಸುಪ್ರಸಿದ್ಧ ಆಶೀರ್ವಚನದ ಮೊದಲ ಶ್ಲೋಕ 'ನಾರಾಯಣಂ ನಮಸ್ಕೃತ್ಯ' ಎಂಬುದು ನಂತರದ ಪ್ರಕ್ಷಿಪ್ತ ಎಂದು ವಿ.ಎಸ್. ಸುಕ್ತಂಕರ್ ೧೯೩೩ರಲ್ಲಿ ಸಂಪಾದಿಸಿದ ಮಹಾಭಾರತದ ಆವೃತ್ತಿಯಲ್ಲಿ ಅದನ್ನು ಕೈಬಿಟ್ಟಿದ್ದಾರೆ. ಈ ಶ್ಲೋಕ ಉಪಲಬ್ಧವಿರುವ ಇಡೀ ಮಹಾಭಾರತವನ್ನು ಒಂದು ವೈಷ್ಣವ ಗ್ರಂಥವನ್ನಾಗಿ ಮಾಡಿಬಿಟ್ಟಿತ್ತು"[೭೪] ಎಂದಿದ್ದಾರೆ.

ಹೀಗೆ ಗೀತೆಯ ರಚನೆಯ ಹಿಂದಿನ ರಾಜಕಾರಣ ಹಾಗೂ ಅದನ್ನು ಹೇಗೆ ಬೇಕಾದರೂ ಬಳಸಬಹುದಾದ ಗ್ರಂಥವಾಗಿದೆ ಎನ್ನುವುದಕ್ಕೆ ವಿ.ಆರ್. ನಾರ್ಲ ಅವರು ಹೀಗೆ ಹೇಳುತ್ತಾರೆ: "ವೇಗಗತಿಯಲ್ಲಿ ವ್ಯಾಪಕವಾಗಿ ಹರಡುತ್ತಿದ್ದ ಬೌದ್ಧ, ಜೈನ ಹಾಗೂ ಲೋಕಾಯತಗಳಂತಹ ಅ-ಬ್ರಾಹ್ಮಣ ಧರ್ಮಗಳು ವೈಧಿಕ ಧರ್ಮಕ್ಕೆ(ಬ್ರಾಹ್ಮಣ ಧರ್ಮ)ಕ್ಕೆ ಒಡ್ಡಿದ್ದ ಗಂಭೀರ ಸ್ವರೂಪದ ಆತಂಕದ ಪರಿಸ್ಥಿತಿಯನ್ನು ನಿವಾರಿಸಿಕೊಳ್ಳಲು ಗೀತೆಯು ಪ್ರತಿಕ್ರಿಯಾತ್ಮಕವಾಗಿ ರಚಿಸಿದ ಗ್ರಂಥವಾಗಿತ್ತು."[೭೫] ಇದೇ ವಿಚಾರವನ್ನು ಡಿ.ಡಿ. ಕೊಸಾಂಬಿ ಅವರು– "ಬ್ರಾಹ್ಮಣರು ಆಳುವ ವರ್ಗದ ಕೃಪೆಯಲ್ಲಿ ಬದುಕುತ್ತಿದ್ದರು. ಇವರ ಯಾವುದಾದರೂ ಸಾಮಾಜಿಕ ಚಟುವಟಿಕೆಗಳು ಆಳುವವರ್ಗದ ಒಂದಿಷ್ಟು ಜನರಿಗೆ ಒಪ್ಪಿಗೆಯಾಗದೇ ಹೋದಂತಹ ಸಂದರ್ಭಗಳಲ್ಲಿ ಅವುಗಳನ್ನು ಸಮರ್ಥಿಸುವುದಕ್ಕೆ ಹಾಗೂ ಸ್ಫೂರ್ತಿ ಪಡೆಯುವುದಕ್ಕೆ ಬ್ರಾಹ್ಮಣರಿಗೆ ಯಾವುದಾದರೂ ಒಂದು ಪವಿತ್ರಗ್ರಂಥದ ನೆರವು ಬೇಕಾಗಿತ್ತು. ಆದರೆ ಆ ಗ್ರಂಥದಿಂದ ಚಾಲ್ತಿಯಿಂದ ಯಾವ ಬ್ರಾಹ್ಮಣ ವಿಧಿ-ವಿಧಾನಗಳಿಗೂ ಧಕ್ಕೆಯಾಗಬಾರದಿತ್ತು. ಈ ಉದ್ದೇಶಕ್ಕೆ ಸೂಕ್ತವಾದ ಗ್ರಂಥವಾಗಿತ್ತು. ಏಕೆಂದರೆ, ವರ್ಗವ್ಯವಸ್ಥೆಯ ಸಮಂಜಸತೆಗೆ ಸ್ವಲ್ಪವೂ ಕುಂದಾಗದಂತೆ ಗೀತೆಗೆ ಯಾವ ಅರ್ಥವನ್ನು ಬೇಕಾದರೂ ಆರೋಪಿಸಬಹುದಿತ್ತು. ಹಾಗಾಗಿ ಬ್ರಾಹ್ಮಣರು ಗೀತೆಯನ್ನು ತಮ್ಮ ಉದ್ದೇಶಕ್ಕೆ ಬಳಸಿಕೊಂಡರು"[೭೬] ಎಂದು ವಿಶ್ಲೇಷಿಸುತ್ತಾರೆ.

ಶಂಕರಾಚಾರ್ಯರನ್ನು ಇತರ ಬ್ರಾಹ್ಮಣಾಚಾರ್ಯರುಗಳಾದ ರಾಮಾನುಜ, ಮಧ್ವ ಮತ್ತು ವಲ್ಲಭಾಚಾರ್ಯರುಗಳು ಅನುಸರಿಸಿದರೂ ತಮ್ಮ ಮತ ಸಿದ್ಧಾಂತಗಳಿಗೆ ಪೂರಕವಾಗುವಂತೆ ಗೀತೆಯನ್ನು ವ್ಯಾಖ್ಯಾನಿಸಿ ಭಿನ್ನ ಮತಾಭಿಪ್ರಾಯಗಳನ್ನು ಹುಟ್ಟು ಹಾಕಿದರು. ವರ್ಣಾಶ್ರಮ ಧರ್ಮವು (ಹಿಂದೂಧರ್ಮವು) ಪತಂಜಲಿಯ ಕಾಲಕ್ಕೆ ಮೊದಲ ಪುನರುತ್ಥಾನವನ್ನು ಕಂಡರೆ ದಕ್ಷಿಣ ಭಾರತದ ಈ ನಾಲ್ವರು ಬ್ರಾಹ್ಮಣ ಮತಾಚಾರ್ಯರುಗಳಿಂದ ಎರಡನೇ ಪುನರುತ್ಥಾನ ಪಡೆಯಿತು ಎಂಬುದು ಕುತೂಹಲಕರ ಸಂಗತಿ. ಈ ನಾಲ್ವರು ಬ್ರಾಹ್ಮಣ ಮತಾಚಾರ್ಯರುಗಳಲ್ಲಿ ಶಂಕರರು ಗೀತೆಯನ್ನು ಅದ್ವೈತದ ಪ್ರಮಾಣಗ್ರಂಥವೆಂದೂ ರಾಮಾನುಜರು ವಿಶಿಷ್ಟಾದ್ವೈತದ ದೈವೋಕ್ತ ಗ್ರಂಥವೆಂದೂ ಮಧ್ವರು ದ್ವೈತದ ಅಧಿಕೃತ ಗ್ರಂಥವೆಂದೂ ವಲ್ಲಭರು ಶುದ್ಧಾದ್ವೈತದ ಪ್ರತ್ಯಕ್ಷ

ದೇವವಾಣಿಯೆಂದೂ ವ್ಯಾಖ್ಯಾನಿಸಿ ತಮ್ಮ ಮತಗಳ ಸಮರ್ಥನೆಗೆ ಬಳಸಿಕೊಂಡರು. ಈ ಆಚಾರ್ಯರುಗಳ ಅನುಯಾಯಿಗಳು ಗೀತೆಯ ಮೇಲೆ ಅಕ್ಷರಶಃ ನೂರಾರು ವ್ಯಾಖ್ಯೆಗಳನ್ನೂ ಮರುವ್ಯಾಖ್ಯೆಗಳನ್ನೂ ಬರೆದರು ಎಂದು ಇಲ್ಲಿ ತಿಳಿಸಿದ್ದಾರೆ.

ವಿ.ಆರ್. ನಾರ್ಲ ಅಭಿಪ್ರಾಯಪಡುವಂತೆ "ಇದನ್ನು ತತ್ವಬೋಧೆ ಎಂದು ಕರೆಯುವುದಾದರೆ ಇದು ಮುಕ್ತ ಚಿಂತನೆಯನ್ನು ಹತ್ತಿಕ್ಕಿ ಶರಣಾಗತಿಯನ್ನು ಹೇರುವ ತತ್ವಬೋಧೆಯ ಗ್ರಂಥವಾಗಿದೆ ಎನ್ನಬಹುದು. ನೀವು ನಿಮ್ಮ ಬೌದ್ಧಿಕ ಸಾಮರ್ಥ್ಯ, ಸಂಕಲ್ಪಶಕ್ತಿ, ಮತ್ತು ಸ್ವಾಯತ್ತತೆ ಇವುಗಳನ್ನು ಪೂರ್ತಿಯಾಗಿ ದೈನ್ಯತೆಯಿಂದ ಕೃಷ್ಣನ ಅಧೀನಕ್ಕೊಪ್ಪಿಸಬೇಕು. ಗೀತೆಯಲ್ಲಿ "ನ ಯೋತ್ಸ್ಯ"(ನಾನು ಯುದ್ಧ ಮಾಡುವುದಿಲ್ಲ) ಎಂದು ಪ್ರಾರಂಭವಾಗುವ ಅರ್ಜುನನ ಮಾತುಗಳು "ಕರಿಷ್ಯೇ ವಚನಂ ತವ"(ನೀನು ಹೇಳಿದ್ದನ್ನು ಮಾಡುತ್ತೇನೆ) ಎಂಬ ಅತಿ ವಿಧೇಯತೆಯಲ್ಲಿ ಮುಕ್ತಾಯ ಗೊಳ್ಳುತ್ತವೆ. ಪ್ರತಿಭಟನೆಯಿಂದ ಅತಿವಿಧೇಯತೆಗೆ, ಬಂಡಾಯದಿಂದ ಶರಣಾಗತಿಗೆ ಮತ್ತು ಸ್ವತಂತ್ರ ಆಲೋಚನೆಯಿಂದ ಪರಾಧೀನತೆಗೆ ಅದು ನಮ್ಮನ್ನು ತಳ್ಳುತ್ತದೆ. ಇದೇ ಗೀತೆಯ ಒಳಾರ್ಥವೂ ಪ್ರಮುಖ ಸಂದೇಶವೂ ಆಗಿದ್ದು ಅದರ ಅಂತಿಮ ಯಶಸ್ಸಿಗೆ ಕಾರಣವೂ ಆಗಿದೆ."[೭೭]

ಪ್ರತಿ ಮಾನವನೂ ತನಗೆ ಶರಣಾಗಬೇಕೆಂದು ಸರ್ವಜ್ಞನೂ ಸರ್ವಶಕ್ತನೂ ಆದ ಭಗವಂತನಾಗಿ ಅವನು ಆದೇಶಿಸುತ್ತಾನೆ. ಈ ಕೆಳಗಿನ ಶ್ಲೋಕಗಳು ಇದಕ್ಕೆ ಸಾಕ್ಷಿಯಾಗಿವೆ.

ಮಯಾ ತತಮಿದಂ ಸರ್ವಂ ಜಗದವ್ಯಕ್ತಮೂರ್ತಿನಾ ।
ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವ್ಯವಸ್ಥಿತಃ ॥ ೯-೪

[ಅವ್ಯಕ್ತ ಮೂರ್ತಿಯಾದ ನನ್ನಿಂದ ಈ ಜಗತ್ತೆಲ್ಲವೂ ವ್ಯಾಪಿಸಲ್ಪಟ್ಟಿದೆ. ಎಲ್ಲ ಪ್ರಾಣಿಗಳೂ ನನ್ನಲ್ಲಿರುವುವು. ನಾನು ಅವುಗಳಲ್ಲಿ ಇಲ್ಲ.]

ಮಯಾಧ್ಯಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಮ್ ।
ಹೇತುನಾನೇನ ಕೌಂತೇಯ ಜಗದ್ವಿಪರಿವರ್ತತೇ ॥ ೯-೧೦

[ಎಲೈ ಅರ್ಜುನ, ಅಧ್ಯಕ್ಷನಾದ ನನ್ನಿಂದ ಪ್ರಕೃತಿಯು ಚರಾಚರಾತ್ಮಕವಾದ ಜಗತ್ತನ್ನು ಉತ್ಪತ್ತಿ ಮಾಡುತ್ತದೆ. ಈ ಕಾರಣದಿಂದಾಗಿ ಜಗತ್ತು ಸುತ್ತುತ್ತಿರುತ್ತದೆ.]

ಪಿತಾಮಹಸ್ಯ ಜಗತೋ ಮಾತಾ ಧಾತಾ ಪಿತಾಮಹಃ ।
ವೇದ್ಯಂ ಪವಿತ್ರಮೋಂಕಾರ ಋಕ್ಸಾಮ ಯಜುರೇವ ಚ ॥ ೯-೧೭

[ಈ ಜಗತ್ತಿಗೆ ತಂದೆಯೂ ತಾಯಿಯೂ ಕರ್ಮಫಲಗಳನ್ನು ಕೊಡುವವನೂ ಪಿತಾಮಹನೂ ತಿಳಿಯಲು ಯೋಗ್ಯವಾದ ವಸ್ತುವೂ ಪವಿತ್ರವೂ

ಗತಿರ್ಭರ್ತಾ ಪ್ರಭು ಸಾಕ್ಷೀ ನಿವಾಸಃ ಶರಣಂ ಸುಹೃತ್ ।
ಪ್ರಭವಃ ಪ್ರಲಯಃ ಸ್ಥಾನಂ ನಿಧಾನಂ ಬೀಜಮವ್ಯಯ್ ॥ ೯-೧೮

[ಕರ್ಮಫಲವೂ ಪೋಷಕನೂ ಸ್ವಾಮಿಯೂ ಸರ್ವಪ್ರಾಣಿಗಳ ಸಾಕ್ಷಿಯೂ ವಾಸಸ್ಥಾನವೂ ರಕ್ಷಕನೂ ಹಿತೈಷಿಯೂ ಜಗತ್ತಿನ ಉತ್ಪತ್ತಿ ಪ್ರಳಯ ಸ್ಥಾನಗಳೂ ಆಶ್ರಯವೂ ಕಾಲಾನಂತರದಲ್ಲಿ ಪ್ರಾಣಿಗಳು ಉಪಭೋಗಿಸಲು ಬರುವ ಕರ್ಮಫಲವೂ ಜಗತ್ತಿನ ಅಕ್ಷಯಬೀಜವೂ ನಾನೇ ಆಗಿರುವೆನು.]

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಯುಕ್ತ್ವೈವಮಾತ್ಮಾನಂ ಮತ್ಪರಾಯಣಃ ॥ ೯-೩೪

[ನನ್ನಲ್ಲಿಯೇ ಮನಸ್ಸುಳ್ಳವನಾಗಿರು. ನನ್ನ ಭಕ್ತನಾಗಿರು. ನನ್ನನ್ನು ಪೂಜಿಸುವವನಾಗಿರು. ನನ್ನನ್ನು ನಮಸ್ಕರಿಸು. ಹೀಗೆ ನಾನೇ ಪರಮಗತಿಯೆಂದು ತಿಳಿದುಕೊಂಡು, ನನ್ನಲ್ಲಿ ಮನಸ್ಸನ್ನು ನಿಲ್ಲಿಸು, ನನ್ನನ್ನೇ ಹೊಂದುವೆ.]

ಅವಜಾನಂತಿ ಮಾಂ ಮೂಢಾ ಮಾಣುಷೀಂ ತನಿಮಾಶ್ರಿತಮ್ ।
ಪರಂ ಭಾವಮಜಾನಂತೋ ಮಮ ಭೂತಮಹೇಶ್ವರಮ್ ॥ ೯-೧೧

[ನಾನು ಮನುಷ್ಯರೂಪದಲ್ಲಿ ಇಳಿದು ಬಂದಾಗ ಮೂಢರು ನನ್ನನ್ನು ಅಪಹಾಸ್ಯ ಮಾಡುತ್ತಾರೆ. ಇರುವುದೆಲ್ಲದರ ಪ್ರಭು ನಾನೇ. ನನ್ನ ದಿವ್ಯಪ್ರಕೃತಿಯು ಅವರಿಗೆ ತಿಳಿಯದು]

ಗೀತೆಯಲ್ಲಿರುವ ತತ್ವಚಿಂತನೆ ಮಾತ್ರ ಸ್ವತಂತ್ರ ನೆಲೆಯ ಆಲೋಚನೆಗಳಿಗೆ ಮಾರಕವಾದ ಶರಣಾಗತಿಯನ್ನು ಬೋಧಿಸುವಂತಹದ್ದು ಎನ್ನುವುದು ನಾರ್ಲ ಅವರ ವಿಚಾರವಾಗಿದೆ.

ಶೂದ್ರರು ಪಾಪಯೋನಿಜರು(ಗೀತೆ: ೯/೩೨), ಬ್ರಾಹ್ಮಣರು ಧರ್ಮಿಷ್ಟರು(ಗೀತೆ: ೦೯/೩೩), ಬ್ರಾಹ್ಮಣರು ಪೂಜೆ ಮಾಡಬೇಕು(ಗೀತೆ: ೧೭/೧೪), ಪುರೋಹಿತರಿಗೆ ಸಂಭಾವನೆ ನೀಡಬೇಕು(ಗೀತೆ: ೧೭/೧೩), ಸ್ವಾಭಾವಿಕವಾಗಿಯೇ ಹುಟ್ಟಿನಿಂದ ಬಂದ ಗುಣಗಳಿಂದ ವರ್ಣವು ಬೇರೆಯಾಗಿರುತ್ತದೆ(ಗೀತೆ: ೧೭/೪೧), ಇತರರ ಸೇವೆಯೇ ಶೂದ್ರರಿಗೆ ಸ್ವಭಾವಜನ್ಯವಾದ ಧರ್ಮ(ಗೀತೆ: ೧೮/೪೪), ಧರ್ಮವು ವಿಧಿಸಿದ ಕರ್ತವ್ಯಗಳನ್ನು ಮಾಡಬೇಕು(ಗೀತೆ: ೧೮/೪೭) ಎಂಬುದಾಗಿ ಬ್ರಾಹ್ಮಣರ ಯಜಮಾನಿಕೆಯನ್ನು ಸಮರ್ಥಿಸುವ ಗೀತೆಯು ಈ ಕಟ್ಟಳೆಗಳನ್ನು ದೈವಾದೇಶವೆಂದೇ ಬೋಧಿಸುತ್ತದೆ ಎಂದು ನಾರ್ಲ ಅವರು ಹೇಳುತ್ತಾರೆ.

ಈ ಎಲ್ಲ ಕಾರಣಗಳಿಂದಾಗಿ ಅಂಬೇಡ್ಕರ್ 'ಅಸಮಾನತೆಯೇ ಹಿಂದೂಧರ್ಮದ ಆತ್ಮ' ಎಂದು ನಿಷ್ಠುರವಾಗಿ ಅದರ ಸ್ವಭಾವಜನ್ಯ ನಡೆಯನ್ನು ಟೀಕಿಸುತ್ತಿದ್ದರು. ಬ್ರಾಹ್ಮಣರ ಯಜಮಾನಿಕೆಯು ಹಿಂದೂಧರ್ಮದಲ್ಲಿ ತುಂಬಿಕೊಂಡಿರುವ ವಿಷ; ಇದನ್ನು ಕಿತ್ತೆಸೆಯದ ಹೊರತು ಭಾರತದ ಶೂದ್ರ ಮತ್ತು ಅತಿಶೂದ್ರ ಜಾತಿಗಳು ಸಾಂಸ್ಕೃತಿಕ ಮತ್ತು ಧಾರ್ಮಿಕ ಅಸಮಾನತೆಯಿಂದ ಹೊರಬರಲಾರವು ಎಂಬುದು ಅವರ ಖಚಿತ ನಿಲುವಾಗಿತ್ತು.

ಗೀತೆಯು ಜಾತಿ ಮತ್ತು ಮೂಢನಂಬಿಕೆಗಳಂಥ ಸಮಾಜದ ಪ್ರಗತಿ ಹಾಗೂ ದೇಶದ ಪ್ರಜಾಪ್ರಭುತ್ವಕ್ಕೆ ಮಾರಕವಾದ ಅವೈಜ್ಞಾನಿಕ, ಅವೈಚಾರಿಕ ವಿಚಾರಗಳ ಕಂತೆಯಾಗಿದೆ ಎಂದು

ಅಂಬೇಡ್ಕರ್ ಹೇಳಿದರೆ, ಗೀತೆಯು ನಮ್ಮ ದೇಶದ ಬ್ರಾಹ್ಮಣವಾದವು ಸೃಷ್ಟಿಸಿದ ಕರಾಳ ಗ್ರಂಥವಾಗಿದೆ ಎಂದು ನಾರ್ಲ ಹೇಳುತ್ತಾರೆ.

ಗೀತೆಯು ಶಾಸ್ತ್ರಗ್ರಂಥವೋ ಅಥವಾ ಧರ್ಮಗ್ರಂಥವೋ ಎಂಬ ಜಿಜ್ಞಾಸೆ ನಡೆಯುತ್ತಲೇ ಬಂದಿದೆ. ಒಂದರ್ಥದಲ್ಲಿ ಅದು ಎರಡೂ ಹೌದು. ನಮ್ಮ ಶ್ರೇಷ್ಠ ವಿದ್ವಾಂಸರಾದ ಎಂ. ಹಿರಿಯಣ್ಣನವರು ಅದನ್ನು ಮತಧಾರ್ಮಿಕ ಗ್ರಂಥವೆಂದೇ ವಿವರಿಸಿದ್ದಾರೆ. ರಾಧಾಕೃಷ್ಣನ್ ಅವರು "ಭಗವದ್ಗೀತೆಯನ್ನು ತಾತ್ವಿಕ ಗ್ರಂಥ ಎನ್ನುವುದಕ್ಕಿಂತಲೂ ಧರ್ಮೀಯ ಗ್ರಂಥವೆನ್ನುವುದು ಹೆಚ್ಚು ಸಮಂಜಸ"[೨೮] ಎನ್ನುತ್ತಾರೆ.

ಕೊನೆ ಟಿಪ್ಪಣಿಗಳು

೧. Garbe, Richard: Die Bhagavadgita, page 64.

೨. Telang K.T.: Bhagavadgita, Introduction Sacred Books of East, Vol.8, page 24 and 34.

೩. ಬಾಲಗಂಗಾಧರ ತಿಲಕ್: ಗೀತಾ ರಹಸ್ಯ, ಪುಟ ೭೧೪-೭೧೫.

೪. Radhakrishnan S.: The Bhagavadgita, Introductory Essay, page 14.

೫. Kosambi D.D.: The Culture and Civilization of Ancient India, page 93.

೬. ಕೊಸಾಂಬಿ ಡಿ.ಡಿ: ಪುರಾಣ ಮತ್ತು ವಾಸ್ತವ, ಪುಟ ೩೬.

೭. ಅದೇ, ಪುಟ ೪೩.

೮. Upadhyaya K.N.: Early Buddhism and The Bhagavad Gita, page 1.

೯. Telang K.T.: Bhagavadgita, S.B.E Vol.8, page 1.

೧೦. ಕೊಸಾಂಬಿ ಡಿ.ಡಿ.: ಪುರಾಣ ಮತ್ತು ವಾಸ್ತವ, ಪುಟ ೪೩.

೧೧. ಅದೇ, ಪುಟ ೪೨.

೧೨. Khair G.S.: Quest for the Original Gita, Max Weber's quote, page 11.

೧೩. Hopkins E.W.: The Religions of India, page 400.

೧೪. Seethanath Tatwa Bhushan: Krishna and The Gita, page 65.

೧೫. Kashinath Upadhyaya: Early Budhism and Bhagavadgita, page 3.

೧೬. Otto, Rudolf: The Original Gita, page 13-14.

೧೭. Majumdar, Bimanbehari: Krishna in History and Legend, page 45.

೧೮. ಅದೇ, Franklin Edgerton Quote, ಪುಟ ೩೬.

೧೯. Khair G.S.: Quest for the Original Gita, page XIII.

೨೦. ಕೊಸಾಂಬಿ ಡಿ.ಡಿ.: ಪುರಾಣ ಮತ್ತು ವಾಸ್ತವ, ಪುಟ ೬೧.

೨೧. ಅದೇ, ಪುಟ ೬೫.

೨೨. ಕುವೆಂಪು: ಮಲೆಗಳಲ್ಲಿ ಮದುಮಗಳು, ಪುಟ ೧೯೬–೧೯೭.

೨೩. ಅದೇ, ಪುಟ ೧೫೫–೧೫೬.

೨೪. ಅದೇ, ಪುಟ ೧೯೮–೧೯೯.

೨೫. ಕುವೆಂಪು: ಕಾನೂರು ಹೆಗ್ಗಡಿತಿ, ಪುಟ ೫೮೭.

೨೬. ರೈಸ್ ಬಿ.ಎಲ್., ಕರ್ನಾಟಕ ಪರಂಪರೆ, ಭಾಗ–೨.

೨೭. Charles Jhonston: Bhagavadgita-The Song of the Master, Introduction, page 1-21.

"The Bhagavad Gita is one of the noblest scriptures of India, one of the deepest scriptures of the world...a symbolic scripture, with many meanings, containing many truths...(that) forms the living heart of the Eastern wisdom."

೨೮. Davis H, Richard: The Bhagavad Gita a Biography, Introduction, page 6. "The work has lived a vivid and contentious existence over the centuries since, through readings and recitations; translations and commentaries that have transcribed this classic into many currents and disputes."

೨೯. Swami Prabhavananda and Christopher Isherwood: The Song of God-Bhagavad Gita, Introduction by Aldous Huxley, page 22.

"The Bhagavad-Gita is perhaps the most systematic scriptural statement of the Perennial Philosophy to a world at war a world that, lacks the intellectual and spiritual prerequisites to peace, can only hope to patch up some kind of precarious armed truce, it stands pointing, clearly and unmistakably, to the only road of escape from the self-imposed necessity of self-destruction."

೩೦. Hans Harder: Bankimachandra chattopadhyay's Srimadbhagavadgita: Translation and Analysis, page 237.

೩೧. ಅದೇ, ಪುಟ ೨೨೯.

೩೨. ಶಿವಾರೆಡ್ಡಿ ಕೆ.ಸಿ., ಕನ್ನಡದ ಹಾಡುಪಾಡು, ಪುಟ ೨೪.

೩೩. Nagappa Gowda K.: The Bhagavadgita In the Nationalist Discourse, page 32 and 34.

೩೪. Hans Harder: Bankimachandra Chattopadhyay's Srimadbhagavadgita: Translation and Analysis, page 65-77.

೩೫. Nagappa Gowda K.: The Bhagavadgita In the Nationalist Discourse, page 43 and 44.

೩೬. ಬಾಲಗಂಗಾಧರ ತಿಲಕ್: ಗೀತಾರಹಸ್ಯ, ಗಾಂಧೀಜಿ–ದಿವ್ಯ ಟೀಕಾ ಮೌಕ್ತಿಕ.

೩೭. Ranade R.D.: Bhagavadgita As A Philosophy of God- Realisation, page 133-135.

೩೮. ಮಿಖಾಯೆಲ್ ಗೊಟ್‌ಲೊಬ್: ದಕ್ಷಿಣ ಏಶಿಯಾದಲ್ಲಿ ಇತಿಹಾಸ–ಚಿಂತನೆ, ಆರ್ಯ ಆಚಾರ್ಯ(ಅನು), ತಿಲಕರ ಕರ್ಮಯೋಗ ಮತ್ತು ಸ್ವರಾಜ್ಯದಿಂದ ಉದ್ಧೃತ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೧೦, ಪುಟ ೨೨೪–೨೨೫.

೩೯. Nagappa Gowda K.: The Bhagavadgita In the Nationalist Discourse, page 58.

೪೦. ರಾಮಚಂದ್ರನ್ ಸಿ.ಎನ್. ಆಖ್ಯಾನ–ವ್ಯಾಖ್ಯಾನ, ಮುಕ್ತಪಠ್ಯ? ಭಗವದ್ಗೀತೆಯನ್ನು ಕುರಿತು, ಪುಟ ೧೨.

೪೧. Nagappa Gowda K.: The Bhagavadgita In the Nationalist Discourse, page 77.

೪೨. ಬಾಲಗಂಗಾಧರ ತಿಲಕ್: ಗೀತಾರಹಸ್ಯ,, ಪುಟ ೫೫೪.

೪೩. Complete works of Swami Vivekananda, Vol-1, page 53.

Every work must necessarily be a mixture of good and evil... good and bad are both bondages of the soul. The solution reached in the Gita in regard to this bondage-producing nature of work is that, if we do not attach ourselves to the work we do, it will not have any binding effect on our soul...This is the one central idea in the Gita; work incessantly, but be not attached to it.

೪೪. Nagappa Gowda K.: The Bhagavadgita In the Nationalist Discourse, page 113.

೪೫. Complete works of Swami Vivekananda, Vol-5, page 247-248.

Gita teaches Karma-Yoga. We should work through Yoga(concentration). In such concentration in action(Karma-Yoga), there is no consciousness of the lower ego present... If the painter, losing the consciousness of his ego, becomes completely immersed in his painting, he will be able to produce masterpieces... The Gita teaches that all works should be done thus. He who is one with the Lord through Yoga performs all his works by becoming immersed in concentration, and does not seek any personal benefit. Such a performance of work brings only good to the world, no evil can come out of it. Those who work thus never do anything for themselves.

೪೬. ಲಾಲಾ ಲಜಪತರಾಯ್: ಸ್ವಾತಂತ್ರ್ಯವೇ ಧರ್ಮ, ಪುಟ ೧೮–೧೯.

೪೭. ಶಿವಾರೆಡ್ಡಿ ಕೆ.ಸಿ., ಕನ್ನಡದ ಹಾಡು–ಪಾಡು, ಪುಟ ೩೪.

೪೮. ಲಾಲಾ ಲಜಪತರಾಯ್, ಸ್ವಾತಂತ್ರ್ಯವೇ ಧರ್ಮ, ಪುಟ ೪೦.

೪೯. ಲಾಲಾ ಲಜಪತರಾಯ್, ಸ್ವಾತಂತ್ರ್ಯವೇ ಧರ್ಮ, ಪುಟ ೪೧.

೫೦. ಲಾಲಾ ಲಜಪತರಾಸ್, ಸ್ವಾತಂತ್ರ್ಯವೇ ಧರ್ಮ, ಪುಟ ೧೯.

೫೧. ಚಂದ್ರಶೇಖರ್ ಎಸ್., ಸಾಹಿತ್ಯ ಮತ್ತು ಚರಿತ್ರೆ, ಪುಟ ೧೧.

೫೨. Letter to Gulzarilal nanda, Collected works of Mahatma Gandhi, vol.36.

"The Bhagavadgita is the only dictionary of reference, in which I find all the sorrows, all the troubles, all the trials arranged in the alphabetical order with exquisite solution."

೫೩. ಗಾಂಧೀ ಮೋ.ಕ.: ಅನಾಸಕ್ತಿಯೋಗ, ಪ್ರಸ್ತಾವನೆ, ಪುಟ ೧೩.

೫೪. ಅದೇ, ಪುಟ ೧೦.

೫೫. ಗಾಂಧೀ. ಮೋ.ಕ.: ಗೀತಾಮಾತೆ, ಪ್ರಸ್ತಾವನೆ, ಪುಟ ೬.

೫೬. ಅದೇ, ಪುಟ ೬.

೫೭. ಅದೇ, ಪುಟ ೨೬೧.

೫೮. Aurobindo, Essays on Gita, p.n. 28.

"That which the Gita teaches is not a human, but a divine action; not the performance of social duties, but the abandonment of all other standards of duty or conduct for a selfless performance of the divine will working

through our nature; not social service, but the action of the Best, the God-possessed, the Master-men done impersonally for the sake of the world and as a sacrifice to Him who stands behind man and Nature. In other words, the Gita is not a book of practical ethics, but of the spiritual life."

೫೯. Sri Aurobindo Book Complete L vol.2, pg. 430.

"The teaching of the Gita is the teaching for life, and not a teaching for the life of a closet. It is a teaching which means perfection of action. It makes man great. It gives him the utter strength, the utter bliss which is the goal of life in the world."

೬೦. Nagappa Gowda K.: The Bhagavadgita in the Nationalist Discource, p.no. 147.

೬೧. Nagappa Gowda K.: The Bhagavadgita in the Nationalist Discource, p.no. 146.

"His argument in this regard was in no way corroborated by the ethical arguments of Bankim, Tilak and Gandhi. For Gandhi, the Gita was basically a text on non-violence. For Bankim and Tilak, although, the Gita justified non-violence, in the final analysis it substantially supported violence on ethical grounds. Aurobindo went far beyond them and argued that the Gita was basically a text on violence and not non- violence, as he believed violence to be a natural and innate aspect of the universal project of emancipation." Aurobindo, Essays on Gita, p.n. 06-08.

"The Gita is not a weapon of dialectical warfare; It maps out, but it does not cut up or build walls or hedges to confine our vision."

೬೨. Aurobindo, Essays on Gita, p.n. 371-372.

"No real peace can be achieved till the heart of man deserves peace; the law of Vishnu cannot prevail till the debt to Rudra is paid.. Christ and Buddha have come and gone, but it is Rudra who still holds the world."

೬೩. Nagappa Gowda K.: The Bhagavadgita in the Nationalist Discource, p.no. 141.

64. Nagappa Gowda K.: The Bhagavadgita in the Nationalist Discource, p.no. 162.

"Aurabindo seems to reproduce the orientalist image of India as primarily a spiritual realm and is little concerned with the socio-political and ethical challenges before the Indian nation."

65. Aurobindo, Essays on Gita, p.n. 46.

Thought and knowledge, war and government, production and distribution, labour and service were carefully differentiated functions of society, each assigned to those who were naturally called to it and providing the right means by which they could individually proceed towards their spiritual development and self perfection."

66. Aurobindo, Essays on Gita, p.n. 30.

To tell him that he must do his duty disinterestedly...may be the teaching of a State, of politicians, of lawyers, of ethical casuists...if that is what the Gita has to say on a most poignant moral and spiritual problem, we must put it out of the list of the world's Scriptures and thrust it, if anywhere, then into our library of political science and ethical casuistry."

೬೭. Nagappa Gowda K.: The Bhagavadgita in the Nationalist Discource, p.no. 132.

೬೮. ಅಂಬೇಡ್ಕರ್ ಬಿ.ಆರ್., ಸಮಗ್ರ ಬರೆಹಗಳು ಮತ್ತು ಭಾಷಣಗಳು, ಸಂಪುಟ ೩, ಪುಟ ೩೮೮.

೬೯. ೧೯೩೦, ೨ ಏಪ್ರಿಲ್, ಬಾಂಬೆ ಹೈಕೋರ್ಟ್‌ನಲ್ಲಿ ವ್ಯಕ್ತಪಡಿಸಿದ ಹೇಳಿಕೆ.

೭೦. ಅಂಬೇಡ್ಕರ್ ಬಿ.ಆರ್., ಭಗವದ್ಗೀತೆ ಮೇಲಿನ ಪ್ರಬಂಧಗಳು: ಪ್ರತಿಕ್ರಾಂತಿಯ ತಾತ್ವಿಕ ಸಮರ್ಥನೆ: ಕೃಷ್ಣ ಮತ್ತು ಅವನ ಗೀತೆ, ಪುಟ ೩೯೧.

೭೧. ಭಾರತ ದರ್ಶನ, ಕಾವ್ಯಾಲಯ ಪ್ರಕಾಶನ, ಮೈಸೂರು, ೧೯೫೬, ಪುಟ ೫೮.

೭೨. The Bhagavad gita: A General review of it's History and character, In the book: The Cultural Heritage of India, vol.2, 1962, culcutta, page 138.

೭೩. ಕೊಸಾಂಬಿ ಡಿ.ಡಿ., ಪುರಾಣ ಮತ್ತು ವಾಸ್ತವ, ಪುಟ ೪೦.

೭೪. ಅದೇ, ಪುಟ ೩೮.

೭೫. ನಾರ್ಲ ವಿ.ಆರ್., ಗೀತೆ: ಒಳಗಿನ ಸತ್ಯ ಏನು?, ಪುಟ ೧೫೩.

೭೬. ಕೊಸಾಂಬಿ ಡಿ.ಡಿ., ಪುರಾಣ ಮತ್ತು ವಾಸ್ತವ, ಪುಟ ೪೧.

೭೭. ನಾರ್ಲ ವಿ.ಆರ್., ಗೀತೆ: ಒಳಗಿನ ಸತ್ಯ ಏನು?, ಪುಟ ೧೭೮.

೭೮. ರಾಧಾಕೃಷ್ಣನ್, ದ ಭಗವದ್ಗೀತ, ಲಂಡನ್, ನಾಲ್ಕನೇ ಮುದ್ರಣ, ೧೯೫೬, ಪುಟ ೧೧.

❖❖❖

ಅಧ್ಯಾಯ: ಐದು

ಗೀತೆಯ ಅನುವಾದ ಪಠ್ಯಗಳ ಪರಿಶೀಲನೆ

ಅಧ್ಯಾಯ: ಐದು

ಗೀತೆಯ ಅನುವಾದ ಪದ್ಯಗಳ ಪರಿಶೀಲನೆ

೫.೧. ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪಂಥಗಳ ಅನುವಾದಗಳ ಪರಿಶೀಲನೆ

ಕ್ರಿ.ಶ. ೮ನೇ ಶತಮಾನದಲ್ಲಿ ಗೀತೆಗೆ ಶಂಕರಾಚಾರ್ಯರು ಭಾಷ್ಯ ಬರೆದಾಗಿನಿಂದ ಪ್ರಸ್ಥಾನತ್ರಯಿಗಳಲ್ಲಿ ಒಂದಾದ ಭಗವದ್ಗೀತೆಗೆ ಸಾಂಪ್ರದಾಯಿಕ ದೃಷ್ಟಿಯಿಂದ ಭಾಷ್ಯ ಬರೆಯುವ ಪರಿಪಾಟವು ಬೆಳೆದುಬಂದಿತು. ಆಯಾ ಸಂಪ್ರದಾಯದೊಳಗಿನ ಪಂಡಿತರು ತಮ್ಮ ತಮ್ಮ ಸಂಪ್ರದಾಯದ ಭಾಷ್ಯಗಳ ಆಧಾರದಿಂದಲೇ ತಮ್ಮ ಟೀಕೆಗಳಲ್ಲಿ ಗೀತಾರ್ಥವನ್ನು ಪ್ರತಿಪಾದಿಸ ತೊಡಗಿದರು. ಹಾಗಾಗಿ ಇಲ್ಲಿಯವರೆಗೂ ವಿವಿಧ ಮತ-ಪಂಥಗಳ ಅನುಸರಣೆ ಮಾಡಿದ ಹಲವು ಜನರು ಗೀತೆಗೆ ವ್ಯಾಖ್ಯಾನ, ಟೀಕಾಗ್ರಂಥಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಶಂಕರಾಚಾರ್ಯರಿಂದ ಪ್ರತಿಪಾದಿತವಾದ ಅದ್ವೈತ ಸಿದ್ಧಾಂತ, ರಾಮಾನುಜಾಚಾರ್ಯರಿಂದ ಪ್ರತಿಪಾದಿತವಾದ ವಿಶಿಷ್ಟಾದ್ವೈತ ಸಿದ್ಧಾಂತ, ಮಧ್ವಾಚಾರ್ಯರಿಂದ ಪ್ರತಿಪಾದಿತವಾದ ದ್ವೈತ ಸಿದ್ಧಾಂತ ಮುಖ್ಯವಾದವುಗಳಾಗಿವೆ. ನಂತರವೂ ಈ ಸಿದ್ಧಾಂತ ಅಥವಾ ಮತ-ಪಂಥಗಳಿಗೆ ಸೇರಿದ ಇವರ ಶಿಷ್ಯರು ಗೀತೆಗೆ ಭಾಷ್ಯಗಳನ್ನು ಬರೆದಿದ್ದಾರೆ. ಅದ್ವೈತ ಸಿದ್ಧಾಂತ ಗ್ರಂಥಗಳಲ್ಲಿ ಶಂಕರಾಚಾರ್ಯರ ಭಾಷ್ಯ, ಆನಂದಗಿರಿಯ ಟೀಕಾ ಗ್ರಂಥ, ಮಧುಸೂಧನ ಸರಸ್ವತಿಯ ಟೀಕಾಗ್ರಂಥ, ಶ್ರೀಧರಾಚಾರ್ಯರ ಟೀಕಾಗ್ರಂಥಗಳು ಮುಖ್ಯವಾದವುಗಳಾದರೆ, ವಿಶಿಷ್ಟಾದ್ವೈತ ಸಿದ್ಧಾಂತ ಗ್ರಂಥಗಳಲ್ಲಿ ರಾಮಾನುಜಾಚಾರ್ಯರ ಭಾಷ್ಯ ಕೃತಿ ಮುಖ್ಯವಾಗಿದೆ. ಇನ್ನು ದ್ವೈತ ಮತಪಂಥದ ಕೃತಿಗಳಲ್ಲಿ ಮಧ್ವಾಚಾರ್ಯರ ಭಾಷ್ಯ ಕೃತಿ, ರಾಘವೇಂದ್ರಸ್ವಾಮಿಗಳ ಗೀತಾವಿವೃತಿ ಕೃತಿಗಳು ಮುಖ್ಯವಾಗಿವೆ.

ಹೀಗೆ ಆಚಾರ್ಯರು ಸೃಷ್ಟಿಸಿದ ಭಾಷ್ಯಗಳು, ವ್ಯಾಖ್ಯಾನಗಳು ಮತ್ತು ಸಂಬಂಧಿತ ಚರ್ಚೆಗಳು ಮುಖ್ಯವಾಗಿ ಜ್ಞಾನ, ಕರ್ಮ, ಭಕ್ತಿಗಳನ್ನು ಆಧರಿಸಿದಂತಹವು. ಈ ವ್ಯಾಖ್ಯಾನಕಾರರ ಮುಖ್ಯ ಗಮನ ಮೇಲಿನ ಮಾರ್ಗಗಳ ಕಡೆಗೆ ಇತ್ತು. ಪ್ರತಿಯೊಬ್ಬ ಆಚಾರ್ಯರೂ ಒಂದು ನಿರ್ದಿಷ್ಟ ಕೇಂದ್ರಿತ ಭಾಷ್ಯವನ್ನು ಪಠ್ಯಕ್ಕೆ ನೀಡುತ್ತಿದ್ದರು. ಉಳಿದ ಭಾಷ್ಯಗಳನ್ನು ಕಡೆಗಣಿಸುತ್ತಿದ್ದರು.

ಗೀತೆ ಮತ್ತು ಅದ್ವೈತ ಸಿದ್ಧಾಂತ

ಶಂಕರಾಚಾರ್ಯರು ಅದ್ವೈತ ಸಿದ್ಧಾಂತದ ಪ್ರತಿಪಾದಕರಾಗಿದ್ದಾರೆ. ನಾನು–ನೀನು ಅಥವಾ ಕಣ್ಣಿಗೆ ಕಾಣುವ ಜಗತ್ತು–ಅಂದರೆ ಸೃಷ್ಟಿಯಲ್ಲಿಯ ಪದಾರ್ಥಗಳೊಳಗಿನ ನಾನತ್ವವು ಸತ್ಯವಾಗಿರದೆ, ಇವುಗಳಲ್ಲಿ ಒಂದೇ ಪರಬ್ರಹ್ಮವು ತುಂಬಿದೆ. ಈ ಪರಬ್ರಹ್ಮದ ಮಾಯೆಯಿಂದ ಮನುಷ್ಯನ ಇಂದ್ರಿಯಗಳಿಗೆ ನಾನತ್ವವು ಭಾಸವಾಗುತ್ತದೆ. ಅದರಂತೆಯೇ ಮನುಷ್ಯನ ಆತ್ಮವೂ ಪರಬ್ರಹ್ಮ ರೂಪವಾಗಿಯೇ ಇರುತ್ತದೆ. ಈ ಆತ್ಮಬ್ರಹ್ಮಗಳ ಐಕ್ಯದ ಪೂರ್ಣಜ್ಞಾನವು ದೊರಕದೆ ಯಾರಿಗೂ ಮೋಕ್ಷವು ಸಿಕ್ಕಲಾರದು ಎನ್ನುವುದು ಅದ್ವೈತ ಸಿದ್ಧಾಂತದ ತಿರುಳಾಗಿದೆ. ಈ ತತ್ವದ ಆಧಾರದ ಮೇಲೆ ಇವರು ಗೀತೆಗೆ ಭಾಷ್ಯವನ್ನು ಬರೆದಿದ್ದು ಅದು ಬಹಳ ಜನಪ್ರಿಯತೆಯನ್ನು ಪಡೆದಿದೆ. ಈ ಭಾಷ್ಯದ ಪ್ರಕಾರ, ಅವಿದ್ಯೆಯಿಂದ ಉಂಟಾದ ಭೇದವನ್ನು ಹೋಗಲಾಡಿಸಿ ಅದ್ವೈತ ರೂಪವಾಗಿರುವ ಮೋಕ್ಷವನ್ನು ಬ್ರಹ್ಮಕ್ಕೆ ಕೊಡುವುದಾಕ್ಕಾಗಿಯೇ ಸಮಸ್ತ ವೇದಶಾಸ್ತ್ರಗಳು ಜನ್ಮ ತಾಳಿವೆ. ಆದುದರಿಂದ ಭಗವದ್ಗೀತೆಯೂ ದ್ವೈತದ ನಿವಾರಣೆಗಾಗಿಯೇ ಅರ್ಜುನನಿಗೆ ಉಪದೇಶಿಸಲ್ಪಟ್ಟಿತೆಂದು ಅದ್ವೈತ ಸಿದ್ಧಾಂತವು ಪ್ರತಿಪಾದಿಸುತ್ತದೆ. ಕರ್ಮವು ಜ್ಞಾನಪ್ರಾಪ್ತಿಗೆ ಒಂದು ಸಾಧನವಾಗಿದ್ದು ಅದು ಗೌಣವಾಗಿರುತ್ತದೆ ಎಂದೂ, ಕೊನೆಯಲ್ಲಿ ಸರ್ವಕರ್ಮ ಸನ್ಯಾಸಪೂರ್ವಕವಾದ ಜ್ಞಾನದಿಂದಲೇ ಮೋಕ್ಷವು ದೊರೆಯುತ್ತದೆ ಎಂದೂ ಶಂಕರರು ಪ್ರತಿಪಾದಿಸುತ್ತಾರೆ. ಇದೇ ಸಿದ್ಧಾಂತವನ್ನು ಕೃಷ್ಣ ಅರ್ಜುನನಿಗೆ ಉಪದೇಶಿಸಿದ್ದಾನೆ ಎಂದು ವಾದಿಸುತ್ತಾರೆ. ಕೃಷ್ಣ ಮತ್ತು ಅರ್ಜುನರ ನಡುವಿನ ಸಂವಾದದ ಕೇಂದ್ರ ಮತ್ತು ಏಕೈಕ ಉದ್ದೇಶವೇ ಜ್ಞಾನಮಾರ್ಗವಾಗಿದೆ. ಆ ಮೂಲಕ ಕರ್ಮಮಾರ್ಗವನ್ನು ತ್ಯಜಿಸುವುದಾಗಿದೆ ಎನ್ನುತ್ತಾರೆ.

ಶಂಕರಾಚಾರ್ಯರು ಜ್ಞಾನದ ನಿಜ ವಸ್ತುವೇ ಬ್ರಹ್ಮ ಎಂದು ಕಂಡರು. ಇವರ ಪ್ರಕಾರ ಗೀತೆಯಲ್ಲಿನ ಯಾವುದೇ ಪದ್ಯವು ಜ್ಞಾನಶೋಧನೆಯಲ್ಲಿ ತೊಡಗಿಲ್ಲವೆಂದರೆ ಅದು ಅಮುಖ್ಯ ವಾದುದು ಎಂದು ನಿರ್ಧರಿಸಬಹುದಾಗಿದೆ. ಗೀತೆಯ ಮುಖ್ಯ ಉದ್ದೇಶವೇ ಸ್ವ–ಜ್ಞಾನವಾಗಿದೆ. ಹಾಗಾಗಿ ಜ್ಞಾನಶೋಧನೆಯಲ್ಲಿ ನೇರವಾಗಿ ತೊಡಗುವಿಕೆಗೆ ಸಂಬಂಧಪಡದ ಯಾವುದೇ ಪದ್ಯಗಳು ಕೇವಲ ಪ್ರಾಸಂಗಿಕ ಸ್ವರೂಪದವೂ ಮತ್ತು ಲೌಕಿಕ ನ್ಯಾಯವಿಚಾರಗಳನ್ನು ಚರ್ಚಿಸುತ್ತವಷ್ಟೆ. ಇವರ ಮತದಲ್ಲಿ ಜ್ಞಾನದಿಂದಲೇ ಮುಕ್ತಿ. ಆ ಮುಕ್ತಿಯೆಂಬುದು ಶರೀರವು ಬಿದ್ದುಹೋದ ಬಳಿಕ ಆಗುವುದಿಲ್ಲ, ಜ್ಞಾನವಾದ ಕೂಡಲೇ ಬದುಕಿರುವಾಗಲೇ ದೊರಕತಕ್ಕದ್ದು. ಜ್ಞಾನಕ್ಕೆ ತನ್ನ ಫಲವಾದ ಮುಕ್ತಿಯನ್ನು ಕೊಡುವುದಕ್ಕೆ ಕರ್ಮದ ನೆರವೇನೂ ಬೇಕಿಲ್ಲ.

'ಎಲ್ಲಾ ಕ್ಷೇತ್ರಗಳಲ್ಲಿಯೂ ಇರುವ ಕ್ಷೇತ್ರಜ್ಞನು ಭಗವಂತನೇ'(೧೩–೨) ಎಂಬ ಗೀತೋಕ್ತಿಯು ಸಾಂಖ್ಯರ ತಟಸ್ಥವಾದಕ್ಕೂ ವೈಶೇಷಿಕರು ಹೇಳುವ ಈಶ್ವರನಿಗಿಂತ ಭಿನ್ನವಾದ ಜೀವಾತ್ಮನ ಜ್ಞಾನದ ಅನೇಕಾತ್ಮವಾದಕ್ಕೂ ಅವಕಾಶವಿಲ್ಲ ಎಂದು ಹೇಳಿ ಗೀತೆಯಲ್ಲಿ ಅದ್ವಿತೀಯ ಜ್ಞಾನವನ್ನೇ ಹೇಳಿದೆ ಎಂದು ಪ್ರತಿಪಾದಿಸುತ್ತಾರೆ.

ಶಂಕರಾಚಾರ್ಯರ ಅಭಿಪ್ರಾಯದಂತೆ ಸಕಲ ಪ್ರಾಣಿಗಳಿಗೂ ಆತ್ಮನಾಗಿರುವ ವಾಸುದೇವನೆಂಬ ಹೆಸರಿನ ಪರಮಾರ್ಥತತ್ವವನ್ನು ತಿಳಿಸುವುದೇ ಗೀತೆಯ ಗುರಿಯಾಗಿದೆ. ವಿಶ್ವಾತ್ಮನಾದ ವಾಸುದೇವನ ಜ್ಞಾನವೇ ಪರಮ ಪುರುಷಾರ್ಥಕ್ಕೆ ಸಾಧನ ಹಾಗೂ ಸ್ವಧರ್ಮವನ್ನು ಆತನ ಆರಾಧನೆಯನ್ನಾಗಿ ತಿರುಗಿಸಿಕೊಳ್ಳುವ ಕರ್ಮಯೋಗವೇ ಆತನ ಜ್ಞಾನಕ್ಕೆ ಉಪಾಯ ಎಂಬುದಾಗಿ ಶಂಕರಾಚಾರ್ಯರ ಭಾಷ್ಯವು ತಿಳಿಸುತ್ತದೆ.

ಶಂಕರಾಚಾರ್ಯರು ಭಗವದ್ಗೀತೆಯಲ್ಲಿ ಪ್ರತಿಪಾದಿತವಾಗಿರುವ ಮೋಕ್ಷಸಾಧನವಾದ ಪರಮಾತ್ಮ ಜ್ಞಾನವು ಉಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವ ಜ್ಞಾನದಂತೆಯೇ ವಸ್ತು ತಂತ್ರವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಶಂಕರಾಚಾರ್ಯರು ಹೇಳುವ ಸ್ವರೂಪದ ಜ್ಞಾನವನ್ನು ಮಿಕ್ಕ ಆಚಾರ್ಯರು ಒಪ್ಪುವುದಿಲ್ಲ. ಇದರಿಂದ ಕರ್ಮ, ಯೋಗ, ಭಕ್ತಿ, ಜ್ಞಾನ ಇವುಗಳಿಗಿರುವ ಪರಸ್ಪರ ಸಂಬಂಧದ ವಿಷಯದಲ್ಲಿಯೂ ವಿರುದ್ಧವಾದ ವ್ಯತ್ಯಾಸಗಳು, ಬೇಧಗಳು ಉಂಟಾಗಿವೆ.

ಶಂಕರಾಚಾರ್ಯರು ಮೊದಲನೇ ಅಧ್ಯಾಯದ ಮೊದಲನೇ ಶ್ಲೋಕವಾದ 'ಧರ್ಮಕ್ಷೇತ್ರೇ' ಎಂಬ ಶ್ಲೋಕದಿಂದ ಎರಡನೇ ಅಧ್ಯಾಯದ 'ಏಕಮುಕ್ತ್ವಾ ಹೃಷಿಕೇಶಂ' ಎಂಬ ಶ್ಲೋಕದವರೆಗೆ ಭಾಷ್ಯವನ್ನು ಬರೆದಿಲ್ಲ.

ಶಂಕರಾಚಾರ್ಯರು ಯುದ್ಧಕ್ಷೇತ್ರದಲ್ಲಿ ಏನೂ ತೋಚದೆ ದುಗುಡದಲ್ಲಿ ಮುಳುಗಿರುವ ಅರ್ಜುನನಿಗೆ ಆತ್ಮಜ್ಞಾನವನ್ನು ಬಿಟ್ಟರೆ ಯಾವುದರಿಂದಲೂ ಆತನು ಉದ್ಧಾರವಾಗಲಾರನು. ಆತ್ಮಜ್ಞಾನದಿಂದಲೇ ಮೋಕ್ಷವು ದೊರಕುವುದೇ ಹೊರತು, ಕರ್ಮದೊಡನೆ ಸೇರಿಕೊಂಡಿರುವ ಜ್ಞಾನದಿಂದಲ್ಲ. ಇದೇ ಗೀತೆಯಲ್ಲಿ ಅಡಕವಾಗಿರುವ ಸತ್ಯ ಎಂದು ಅಭಿಪ್ರಾಯಪಡುತ್ತಾರೆ.

ಶಂಕರಾಚಾರ್ಯರು ಗೀತಾಶಾಸ್ತ್ರವು ಶೋಕ, ಮೋಹ ಮುಂತಾದ ಸಂಸಾರ ಕಾರಣಗಳನ್ನು ಕಳೆಯುವುದಕ್ಕೆ ಹುಟ್ಟಿರುವುದೇ ಹೊರತು ಕರ್ಮದಲ್ಲಿ ತೊಡಗಿಸುವುದಕ್ಕಲ್ಲ ಎಂಬ ಹೇಳಿಕೆಯನ್ನು ನೀಡಿದ್ದಾರೆ. ಇಂತಹ ಅಭಿಪ್ರಾಯಗಳನ್ನು ತಿಲಕರು ಸಾರಾಸಗಟಾಗಿ ತಿರಸ್ಕರಿಸಿ ಗೀತೆಯ ಮುಖ್ಯ ಉದ್ದೇಶವೇ ಕರ್ಮಯೋಗದಲ್ಲಿ ತೊಡಗಿಸುವುದಾಗಿದೆ ಎಂದು ವಾದಿಸುತ್ತಾರೆ. ಅಲ್ಲದೆ ಇವರು ಮುಖ್ಯವಾಗಿ

> ಶ್ರೇಯಾನ್ ದ್ರವ್ಯಮಯಾದ್ಯಜ್ಞಾತ್ ಜ್ಞಾನ ಯಜ್ಞಃ ಪರಂತಪ ।
> ಸರ್ವಂ ಕರ್ಮಖಿಲಂ ಪಾರ್ಥಜ್ಞಾನೇ ಪರಿಸಮಾಪ್ಯತೇ॥ (೪.೩೩)

'ದ್ರವ್ಯಮಯವಾದ ಯಜ್ಞಕ್ಕಿಂತಲೂ ಜ್ಞಾನಯಜ್ಞವು ಶ್ರೇಯಸ್ಕರವಾದುದು. ಎಲೈ ಅರ್ಜುನ, ಎಲ್ಲ ಕರ್ಮವೂ ಜ್ಞಾನದಲ್ಲಿ ನಿಶ್ಶೇಷವಾಗಿ ಪರಿಸಮಾಪ್ತಿಯನ್ನು ಹೊಂದುತ್ತದೆ ಎಂಬ ಶ್ಲೋಕದಲ್ಲಿ ಬರುವ ಜ್ಞಾನಕ್ಕೆ ಹೆಚ್ಚಿನ ಮಹತ್ವ ನೀಡುತ್ತಾರೆ ಎಂಬ ಶ್ಲೋಕಕ್ಕೆ ಆದ್ಯ ಗಮನ ನೀಡುತ್ತಾರೆ. ಉಳಿದ ವ್ಯಾಖ್ಯಾನಕಾರರು ದೇವರು ಮತ್ತು ವಿಶ್ವಕ್ಕೆ ಸಂಬಂಧಪಟ್ಟ ಶಂಕರರ ದೃಷ್ಟಿಕೋನಗಳನ್ನು

ಒಪ್ಪುವುದಿಲ್ಲ. ಅವರು ಈಶ್ವರನಲ್ಲಿ ಸಂಪೂರ್ಣವಾಗಿ ಗಟ್ಟಿ ನಂಬಿಕೆ ಉಳ್ಳವರಾಗಿದ್ದರು ಮತ್ತು ಈಶ್ವರನು ಸತ್ಯ ರೂಪಿಯಾಗಿದ್ದು. ಅವನನ್ನು ಅವನಿರುವ ರೂಪದಲ್ಲಿಯೇ ಅನುಭವಕ್ಕೆ ತಂದುಕೊಳ್ಳಬಹುದು ಎಂದು ನಂಬಿದ್ದರು.

ಗೀತೆ ಮತ್ತು ದ್ವೈತ ಮತ

ಮಧ್ವಾಚಾರ್ಯರು ತಮ್ಮ ಗೀತಾಭಾಷ್ಯದಲ್ಲಿ ಗೀತೆಯು ದ್ವೈತಮತ ಪ್ರತಿಪಾದನೆಯನ್ನೇ ಮಾಡುತ್ತದೆ ಎಂದು ಪ್ರತಿಪಾದಿಸಿದ್ದಾರೆ. ಯಾವುದೇ ಒಬ್ಬ ವ್ಯಕ್ತಿ ದೇವರು ಮತ್ತು ಪ್ರಪಂಚದ ನಡುವೆ ದ್ವೈತವನ್ನು ಕಾಯ್ದುಕೊಳ್ಳಬೇಕು. ಭಕ್ತಿಮಾರ್ಗ ಮತ್ತು ಜ್ಞಾನಮಾರ್ಗಗಳೆರಡೂ ಗೀತೆಯ ಕೇಂದ್ರ ಬೋಧನೆ ಎಂದು ತಿಳಿದಿದ್ದರು. ಯಾವುದೇ ಒಂದು ಮಾರ್ಗವನ್ನು ಮತ್ತೊಂದಕ್ಕಿಂತ ಹೆಚ್ಚು ಎಂದು ಭಾವಿಸಬಾರದು ಎಂದು ಭಾವಿಸಿದ್ದರು. ನಿಷ್ಕಾಮಕರ್ಮದ ಮಹತ್ವವು ಗೀತೆಯಲ್ಲಿ ವರ್ಣಿಸಲ್ಪಟ್ಟಿದ್ದರೂ ನಿಷ್ಕಾಮಕರ್ಮವು ಸಾಧನವಾಗಿದ್ದು ಭಕ್ತಿಯೇ ಕೊನೆಯ ನಿಷ್ಠೆಯೆಂದು ಹೇಳಿದೆ. ಭಕ್ತಿಯು ಸಿದ್ಧವಾದ ಬಳಿಕ ಕರ್ಮ ಮಾಡಿದರೇನು ಬಿಟ್ಟರೇನು; ಅದರಲ್ಲಿ ವಿಶೇಷವೇನೂ ಇಲ್ಲವೆಂದು ಹೇಳಿದೆ. ಪರಮೇಶ್ವರನ ಧ್ಯಾನ ಅಂದರೆ ಭಕ್ತಿಗಿಂತಲೂ ಕರ್ಮಫಲ ತ್ಯಾಗವು ಅಂದರೆ ನಿಷ್ಕಾಮಕರ್ಮವು ಶ್ರೇಷ್ಠವಾದುದು ಎಂಬ ಅರ್ಥವುಳ್ಳ ಹಲವು ಗೀತಾ ಶ್ಲೋಕಗಳು ಈ ಸಿದ್ಧಾಂತಕ್ಕೆ ವಿರುದ್ಧವಾಗಿ ಕಂಡರೂ ಅವನ್ನು ಅಕ್ಷರಶಃ ತೆಗೆದುಕೊಳ್ಳದೆ ಅರ್ಥವಾದಾತ್ಮಕವಾಗಿ ತೆಗೆದುಕೊಳ್ಳಬೇಕೆಂದು ಇವರು ಹೇಳುತ್ತಾರೆ.

ಇವರ ಪ್ರಕಾರ ದೇವರು ಮತ್ತು ಜಗತ್ತಿನ ನಡುವಿನ ಸಂಬಂಧ ಶುದ್ಧ ವಾಸ್ತವವಲ್ಲ. ಕೇವಲ ಭ್ರಾಂತು. 'ಪ್ರಕೃತಿ–ಜೀವೇಶ್ವರರು ಪರಸ್ಪರ ಭಿನ್ನರಾಗಿಯೇ ಇರುವರು. ಪ್ರಪಂಚವೆಲ್ಲವೂ ಬ್ರಹ್ಮವಲ್ಲವೇ, ನೀನು ಅಬ್ರಹ್ಮನಾಗಿರುವೆ' ಎಂಬುದರಲ್ಲಿ ಈಶ್ವರನೇ ಸರ್ವಕ್ಕೂ ಪ್ರಧಾನಭೂತನೆಂದು, ಕರ್ಮವೇ ಇದಕ್ಕೆ ಜ್ಞಾನೋಪಾಯವು ಎಂದು ತಿಳಿಸಿದ್ದಾರೆ. ಅಲ್ಲದೆ ಇವುಗಳಿಂದ ಕೂಡಿದ ಭಕ್ತಿಯಿಂದಲೇ ಮೋಕ್ಷವು ಎಂದು ಮಧ್ವಾಚಾರ್ಯರ ಅಭಿಮತವಾಗಿದೆ. ಇವರಿಗೆ ಗೀತೆಯ ಕೇಂದ್ರ ಪದ್ಯ ೯ನೇ ಅಧ್ಯಾಯದ–೮ನೇ ಶ್ಲೋಕವಾಗಿದೆ ಎಂದು ತಿಳಿಸಿದ್ದಾರೆ.

> ಪ್ರಕೃತಿಂ ಸ್ವಾಮವಷ್ಟಭ್ಯ ವಿಸೃಜಾಮಿ ಪುನಃ ಪುನಃ ।
> ಭೂತಗ್ರಾಮಮಿಮಂ ಕೃತ್ಸ್ನಮವಶಂ ಪ್ರಕೃತೇರ್ವಶಾತ್ ॥ (೯–೮)

'ನನ್ನ ಪ್ರಕೃತಿಯನ್ನು ಅಧಿಷ್ಠಾನವಾಗಿ ಮಾಡಿಕೊಂಡು, ಪ್ರಕೃತಿಯ ವಶದಿಂದ ಅಸ್ವತಂತ್ರವಾದ ಈ ಪ್ರಾಣಿವರ್ಗವನ್ನೆಲ್ಲಾ ಪುನಃ ಪುನಃ ಸೃಷ್ಟಿಸುತ್ತಿರುವೆನು'. ನಡೆಯುವ ವ್ಯಕ್ತಿಗೆ ಹೇಗೆ ಕೋಲು ಅಗತ್ಯವೋ ಹಾಗೆ ಪ್ರಾಪಂಚಿಕ ವಾಸ್ತವದ ಭಾಗವಾಗಿ ಅರ್ಜುನನಿಗೆ ಹಿಂಸೆಯು ಅಗತ್ಯವಾಗಿತ್ತು ಎಂಬುದು ಈ ಮತದವರ ಅಭಿಪ್ರಾಯವಾಗಿತ್ತು.

ಗೀತೆ ಮತ್ತು ವಿಶಿಷ್ಟಾದ್ವೈತ ಮತ

ಶಂಕರರು ಹೇಳಿದ ಮಾಯಾಮಿಥ್ಯವಾದ ಮತ್ತು ಅದ್ವೈತವಾದವನ್ನು ಇವರು ಒಪ್ಪುವುದಿಲ್ಲ. ಜೀವ, ಜಗತ್ತು, ಮತ್ತು ಈಶ್ವರ ಈ ಮೂರು ತತ್ವಗಳು ಭಿನ್ನವಾಗಿದ್ದರೂ ಜೀವ, ಜಗತ್ತು

ಇವೆರಡೂ ಒಬ್ಬ ಈಶ್ವರನ ಶರೀರದಲ್ಲಿಯೇ ವ್ಯಕ್ತವಾಗಿವೆ ಎಂದು ಈ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರತಿಪಾದನೆಯಾಗಿದೆ. ಈ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದನೆ ಮಾಡುವುದಕ್ಕಾಗಿಯೇ ಇವರು ಗೀತೆಯ ಮೇಲೆ ಭಾಷ್ಯವನ್ನು ಬರೆದಿದ್ದಾರೆ. ಶಂಕರರ ಮಾಯಾಮಿಥ್ಯಾವಾದವೂ ಅದ್ವೈತ ಸಿದ್ಧಾಂತವೂ ನಿಜವಾಗಿರದೆ ಜೀವ, ಜಗತ್ತು ಮತ್ತು ಈಶ್ವರ, ಈ ಮೂರು ತತ್ವಗಳು ಭಿನ್ನವಾಗಿದ್ದರೂ ಜೀವ(ಚಿತ್) ಜಗತ್ತು(ಅಚಿತ್) ಇವೆರಡೂ ಒಬ್ಬ ಈಶ್ವರನ ಶರೀರವಾಗಿರುವುದ ರಿಂದ ಚಿದಚಿದ್ವಿಶಿಷ್ಟನಾದ ಈಶ್ವರನೊಬ್ಬನೇ ಇರುತ್ತಾನೆಂದೂ ಈಶ್ವರನ ಶರೀರದಲ್ಲಿಯೇ ಈ ಸೂಕ್ಷ್ಮ ಚಿದಚಿತ್ತುಗಳಿಂದ ಮುಂದೆ ಸ್ಥೂಲ ಚಿದಚಿತ್ತುಗಳು ಅಂದರೆ ಜೀವಗಳೂ ಜಗತ್ತೂ ವ್ಯಕ್ತವಾದವೆಂದೂ ಈ ಸಂಪ್ರದಾಯದ ಮತವಿರುತ್ತದೆ"[7] ಎಂದು ತಿಲಕರು ತಿಳಿಸುತ್ತಾರೆ.

ರಾಮಾನುಜಾಚಾರ್ಯರು ಮೂಲತಃ ಭಕ್ತಿಮಾರ್ಗದ ಪ್ರತಿಪಾದಕರು. ಇವರು ಅದ್ವೈತಕ್ಕೆ ಪ್ರತಿಯಾಗಿ ವಿಶಿಷ್ಟಾದ್ವೈತವನ್ನೂ ಸನ್ಯಾಸಕ್ಕೆ ಪ್ರತಿಯಾಗಿ ಭಕ್ತಿಯನ್ನೂ ಸೇರಿಸುತ್ತಾರೆ. ಗೀತೆಯಲ್ಲಿ ಜ್ಞಾನ, ಕರ್ಮ, ಭಕ್ತಿ ಈ ಮೂರೂ ಬೋಧಿಸಲ್ಪಟ್ಟಿದ್ದರೂ ತತ್ವಜ್ಞಾನ ದೃಷ್ಟಿಯಿಂದ ವಿಶಿಷ್ಟಾದ್ವೈತ ಮತ್ತು ಆಚರಣೆ ದೃಷ್ಟಿಯಿಂದ ವಾಸುದೇವ ಭಕ್ತಿ ಇವೇ ಗೀತೆಯ ಸಾರವಾಗಿದೆ ಎಂದು ತಮ್ಮ ಭಾಷ್ಯದಲ್ಲಿ ತೋರಿಸಿದ್ದಾರೆ. ಇವರ ಪ್ರಕಾರ ಜ್ಞಾನಮಾರ್ಗಕ್ಕಿಂತ ಭಕ್ತಿಮಾರ್ಗವೇ ಮುಖ್ಯ. ಇವರು ಗೀತೆಯ ೧೨ ಮತ್ತು ೧೮ನೇ ಅಧ್ಯಾಯಗಳನ್ನು ಅತಿ ಮುಖ್ಯ ಎಂದು ಭಾವಿಸಿದ್ದು, ಈ ಅಧ್ಯಾಯಗಳು ದೈವ ಮಹಾತ್ಮೆಯನ್ನು ವರ್ಣಿಸುತ್ತವೆ; ಆ ಮೂಲಕ ಭಕ್ತಿಮಾರ್ಗವನ್ನು ಬೋಧಿಸುತ್ತವೆ; ಹಾಗೂ ಗೀತೆಯ ಸಂದೇಶ ಈ ಅಧ್ಯಾಯಗಳಲ್ಲೇ ಅಡಗಿದೆ ಎಂದು ಪ್ರತಿಪಾದಿಸುತ್ತಾರೆ. ಇವರು ಕೃಷ್ಣನ ವಿಶ್ವರೂಪವು ದೇವನ ರೂಪವೇ ಆಗಿದೆ. ಕಡೇ ಅಧ್ಯಾಯಗಳು ಗೀತೆಯ ಕೇಂದ್ರ ಅರ್ಥವನ್ನು ಗ್ರಹಿಸಲು ಅತ್ಯಗತ್ಯ ಎಂದು ಭಾವಿಸುತ್ತಾರೆ.

ಗೀತೆಯ ಅಧ್ಯಾಯ ೧೮ರ-

ಅಧರ್ಮಂ ಧರ್ಮಮತಿ ಯಾ ಮನ್ಯತೇ ತಮಸಾವೃತಾ ।
ಸರ್ವಾರ್ಥಾನ್ ವಿಪರೀತಾಂಶ್ಚ ಬುದ್ಧಿಃ ಸಾ ಪಾರ್ಥ ತಾಮಸೀ ॥ (೧೮-೩೨)

'ಯಾವುದು ತಮಸ್ಸಿನಿಂದ ಆವೃತವಾಗಿ ಅಧರ್ಮವನ್ನು ಧರ್ಮವೆಂದು ತಿಳಿಯುವುದೋ, ತಿಳಿಯಲ್ಪಡತಕ್ಕ ಸಮಸ್ತ ವಸ್ತುಗಳನ್ನು ವಿಪರೀತವಾಗಿ ತಿಳಿಯುತ್ತದೆಯೋ ಆ ಬುದ್ಧಿಯು ತಾಮಸಿಕವು' ಎಂಬ ಶ್ಲೋಕವನ್ನು ಮುಖ್ಯವೆಂದು ಭಾವಿಸಿದ್ದಾರೆ. ಇವರ ಪ್ರಕಾರ ಶಂಕರಾಚಾರ್ಯರು ಎತ್ತಿಹಿಡಿದಿದ್ದ ೨.೩೭,೩೮ ಪದ್ಯಗಳಲ್ಲಿನ ಅರ್ಥ ಶಂಕರರು ಭಾವಿಸಿದಂತೆ ಕೃಷ್ಣ ಅರ್ಜುನನ ವಿಷಾದವನ್ನು ಹೋಗಲಾಡಿಸುವುದಕ್ಕೆ ಒತ್ತಾಯ ಮಾಡುವುದಲ್ಲ. ಆದರೆ ಆತ್ಮ ಎಂಬುದು ವಾಸ್ತವ ಎಂದು ಚರ್ಚಿಸುವ ರೀತಿಯದ್ದು.

ಶಂಕರಾಚಾರ್ಯರ ಮತದಂತೆಯೇ ಆತ್ಮನು ನಿತ್ಯನು, ದೇಹ ವಿನಾಶಿಯಾದುದು ಎಂದು ರಾಮಾನುಜಾಚಾರ್ಯರ ಅಭಿಮತವೂ ಆಗಿದೆ. ಆದರೆ ರಾಮಾನುಜಾಚಾರ್ಯರು ದೈಹಿಕ ಕಲ್ಪನೆಯನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಾರೆ. ಜೀವಾತ್ಮರ ದೈಹಿಕ ಕಲ್ಪನೆಯ ಆಧಾರದಲ್ಲಿ

ವ್ಯಕ್ತಿತ್ವವು ಉಳಿದಿಲ್ಲ, ಬದಲಾಗಿ ಆಧ್ಯಾತ್ಮಿಕ ಆಧಾರದ ಮೇಲೆ ವ್ಯಕ್ತಿತ್ವವು ಉಳಿದಿದೆ ಎಂದು ವಾದಿಸುತ್ತಾರೆ. ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಭಗವಂತನ ಭಕ್ತರು ಮಾತ್ರ ಅರಿತುಕೊಳ್ಳುತ್ತಾರೆ. ಇದನ್ನೇ ಗೀತೆಯಲ್ಲಿ ಹಲವು ಕಡೆಗಳಲ್ಲಿ ಹೇಳಲಾಗಿದೆ ಎಂದು ತಿಳಿಸುತ್ತಾರೆ. ಅನೇಕ ಶ್ರುತಿಸ್ಮೃತಿ ಇತಿಹಾಸಗಳಲ್ಲಿ ಜೀವಾತ್ಮ ಪರಮಾತ್ಮ ಭೇದವು ವಾಸ್ತವವೆಂಬುದಾಗಿ ವ್ಯವಸ್ಥಿತವಾಗಿರುವುದರಿಂದ ಜೀವನಿಗೆ ಯಥಾರ್ಥವಾದ ಪ್ರಕೃತಿ ಸಂಬಂಧವು, ಪರಿಶುದ್ಧವಾದ ಸ್ವರೂಪಜ್ಞಾನದಿಂದಲೂ; ಭಗವದ್ಭಕ್ತಿಯಿಂದಲೂ; ನಿರ್ವರ್ತಿಸಲ್ಪಡಬೇಕೆಂದು ಗೀತೆಯಲ್ಲಿ ಹೇಳಿದೆ. ಆದ್ದರಿಂದ ಗುಣಗಳು ನಾನಾ ವಿಧಗಳಾಗಿದ್ದರೂ ಗುಣಿಯಾದ ದ್ರವ್ಯವು ಒಂದಾಗಿರುವಂತೆ ಚೇತನಗಳೆಲ್ಲವು ಅಂತರಾತ್ಮ ನಾಗಿರುವ ಸರ್ವಾಧಾರಭೂತನಾದ ಈಶ್ವರನಿಗೆ ಗುಣಭೂತಗಳಾಗಿಯೂ ಶರೀರಭೂತಗಳಾಗಿಯೂ ಇದ್ದುಕೊಂಡು ವಿಶೇಷಣ ಮಾತ್ರಗಳಾಗಿರುವುದರಿಂದ ವಿಶಿಷ್ಟವಾದ ವಸ್ತುವಿಗೆ ಏಕತ್ವವು ನಿರಾಬಾಧವೆಂಬುದಾಗಿ ವಿಶಿಷ್ಟಾದ್ವೈತ ಸಿದ್ಧಾಂತವು ಪ್ರತಿಪಾದಿಸುತ್ತದೆ.

ರಾಮಾನುಜಾಚಾರ್ಯರ ಭಾಷ್ಯದಲ್ಲಿ ಭಕ್ತಿಯೋಗದ ಮೂಲಕ ಮೋಕ್ಷವನ್ನು ಕಂಡು ಕೊಳ್ಳಬಹುದು. ಗೀತೆಯ ಬೋಧನೆಯು ಭಕ್ತಿಯೋಗವೇ ಆಗಿದೆ. ಇಂಥ ಭಕ್ತಿಯೋಗವನ್ನು ಪ್ರಕಟಪಡಿಸಲು ನೆಪವಾಗಿ ಈ ಗೀತೆಯನ್ನು ಬಳಸಿಕೊಳ್ಳಲಾಗಿದೆ.

ಗೀತೆಯಲ್ಲಿ ಇವರ ವೈಚಾರಿಕ ನಿಲುವು ಇರುವುದು ೧೮ನೇ ಅಧ್ಯಾಯದ ೬೬ನೇ ಶ್ಲೋಕ ಎಂದು ಕಂಡುಬರುತ್ತದೆ.

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾನ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥ (೧೬-೬೬)

'ಸಕಲ ಧರ್ಮಗಳನ್ನೂ ತ್ಯಜಿಸಿ ನನಗೊಬ್ಬನಿಗೆ ಶರಣಾಗತನಾಗು, ಸಕಲ ಪಾಪಿಗಳಿಂದ ನಿನ್ನನ್ನು ಬಿಡುಗಡೆ ಮಾಡುತ್ತೇನೆ. ಶೋಕಿಸಬೇಡ ಎಂದು ಗೀತೆ ಹೇಳುತ್ತದೆ. ಈ ರೀತಿಯ "ಪ್ರಾಚೀನ ಸ್ಮೃತಿಗಳನ್ನು ಮತ್ತು ಶಂಕರರ ನಿಲುವನ್ನು ತಿರಸ್ಕರಿಸುತ್ತಾ, ಎಲ್ಲಾ ಜಾತಿ-ವರ್ಣ-ಲಿಂಗಗಳಿಗೂ ಬ್ರಹ್ಮವಿದ್ಯೆಯನ್ನು ಅರಿತುಕೊಳ್ಳುವ ಅಧಿಕಾರವಿದೆ ಎಂದು ರಾಮಾನುಜರು ಸಾರಿದರು"[೨] ಎಂದು ಸಿ.ಎನ್. ರಾಮಚಂದ್ರನ್ ಅವರು ಹೇಳುತ್ತಾರೆ. ರಾಮಾನುಜರ ಈ ಬಗೆಯ ಮಾನವೀಯತೆಯ ಪರವಾದ ವಿಚಾರಗಳು ಜನಪ್ರಿಯವಾಯಿತು.

ಗೀತೆಯ ವ್ಯಾಖ್ಯಾನಗಳ ಭಿನ್ನತೆ

ಗೀತೆಯ ವ್ಯಾಖ್ಯಾನಗಳಲ್ಲಿನ ಭಿನ್ನತೆಗಳನ್ನು ಕೆಲವು ಮುಖ್ಯ ಶ್ಲೋಕಗಳ ಹಿನ್ನೆಲೆಯಿಂದ ಹೀಗೆ ಗುರುತಿಸಬಹುದಾಗಿದೆ-

ಅಧ್ಯಾಯ ೧ರ ಅರ್ಜುನ ವಿಷಾದಯೋಗದಲ್ಲಿನ ೪೧ನೇ ಶ್ಲೋಕವಾದ

ಅಧರ್ಮಾಭಿಭವಾತ್ ಕೃಷ್ಣ ಪ್ರದುಷ್ಯಂತಿ ಕುಲಸ್ತ್ರೀಯ ।
ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ ॥ (೧-೪೧)

ಈ ಶ್ಲೋಕಕ್ಕೆ ಶಂಕರಾಚಾರ್ಯರು 'ಸ್ವಾಮಿ ಯಾದವಪ್ರಭೂ! ಅನಾಚಾರವು ಕುಲವನ್ನು ಕೆಡಿಸಿದರೆ ಕುಲದ ಸ್ತ್ರೀಯರು ಕೆಡುವರು. ಸ್ತ್ರೀಯರು ಕೆಡುತ್ತಲೇ ಜಾತಿಯು ಕೆಡುವುದು' ಎಂದು ವ್ಯಾಖ್ಯಾನಿಸಿದ್ದಾರೆ. ಇದಕ್ಕೆ ಅಧರ್ಮವು ಹೆಚ್ಚಾಗುವುದರಿಂದ ಕುಲಸ್ತ್ರೀಯರು ಕೆಟ್ಟುಹೋಗುವರು, ಸ್ತ್ರೀಯರು ದುಷ್ಟರಾದರೆ ವರ್ಣಗಳ ಸಾಂಕರ್ಯವು ಉಂಟಾಗುತ್ತದೆ ಎಂಬ ಅರ್ಥವಿದೆ. ಇಲ್ಲಿ ಅರ್ಜುನನು ಯುದ್ಧದಿಂದ ಆಗುವ ಕುಲನಾಶ, ಹಾನಿಗಳ ಕುರಿತು ಕೃಷ್ಣನಿಗೆ ಹೇಳುವಾಗ ಅಧರ್ಮವು ಕುಲಸ್ತ್ರೀಯರನ್ನು ಕೆಟ್ಟುಹೋಗುವಂತೆ ಮಾಡಿ ಆ ಮೂಲಕ ವರ್ಣಸಂಕರಕ್ಕೆ ಕಾರಣವಾಗುತ್ತದೆ ಎಂದು ಹೇಳುವ ಅರ್ಜುನನ ಧೋರಣೆಯಲ್ಲಿ ಸ್ತ್ರೀಯರ ನೈತಿಕ ಸಾಮರ್ಥ್ಯವನ್ನು ಕಡೆಗಣಿಸುವುದರ ಜೊತೆಗೆ ವರ್ಣಸಂಕರದ ಬಗ್ಗೆ ನೇತ್ಯಾತ್ಮಕತೆ ಕಾಣುತ್ತದೆ.

ಈ ಮೇಲಿನ ಶ್ಲೋಕಕ್ಕೆ ಶಂಕರಾಚಾರ್ಯರು 'ವರ್ಣಸಂಕರವಾಗುತ್ತದೆ' ಎನ್ನುವುದಕ್ಕೆ ನೇರವಾಗಿ 'ಜಾತಿ ಕೆಡುತ್ತದೆ' ಎಂದು ಅರ್ಥವನ್ನು ಬರೆದಿದ್ದಾರೆ. ಇದೇ ಶ್ಲೋಕಕ್ಕೆ ತಿಲಕ್ ಮತ್ತು ಗಾಂಧಿ ಅವರು 'ವರ್ಣಸಂಕರ'ವೆಂದೇ ಅನುವಾದಿಸಿರುವುದನ್ನು ಕಾಣಬಹುದಾಗಿದೆ. ರಾಮಾನುಜಾಚಾರ್ಯರು ಮತ್ತು ಮಧ್ವಾಚಾರ್ಯರು ಈ ಶ್ಲೋಕಗಳಿಗೆ ವ್ಯಾಖ್ಯಾನಗಳನ್ನು ಬರೆದಿಲ್ಲ.

ಗೀತೆಯ ಮುಂದಿನ ಶ್ಲೋಕಗಳು ಈ ವರ್ಣಸಂಕರಕ್ಕೇ ಸಂಬಂಧಿಸಿದವುಗಳಾಗಿವೆ. ಅದೇ ಅಧ್ಯಾಯದ ೪೨ನೇ ಶ್ಲೋಕವನ್ನು ನೋಡುವುದಾದರೆ–

> ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ ।
> ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ ॥ (೧-೪೨)

ಶಂಕರಾಚಾರ್ಯರು ಈ ಶ್ಲೋಕಕ್ಕೆ ಜಾತಿ ಕೆಡುವುದು ಕುಲನಾಶಕರ, ಕುಲಕ್ಕೆ ನರಕವಾಗುವುದಕ್ಕೆಯೆ ಸರಿ. ಇವರ ಹಿರಿಯರು ಅನ್ನ ನೀರು ದೊರೆಯದೆ ಕೆಳಕ್ಕೆ ಬೀಳುವರು ಎಂದು ಅರ್ಥೈಸಿದ್ದಾರೆ. ಇಲ್ಲಿ ಶಂಕರರು ಲೋಕಗಳ ಕಲ್ಪನೆಯನ್ನು ನಂಬುತ್ತಾರೆ. ಅದರಂತೆ ದೇಹ ನಾಶವಾದ ಬಳಿಕವೂ ಆತ್ಮವು ಬೇರೊಂದು ಲೋಕವನ್ನು ಪ್ರವೇಶಿಸುತ್ತದೆ. ಅದು ನರಕವೋ ಸ್ವರ್ಗವೋ ಆಗಿರಬಹುದು. ಅಲ್ಲಿ ಅದು ನೆಲೆಯನ್ನು ಕಂಡುಕೊಂಡಿರುತ್ತದೆ ಎಂಬ ನಂಬಿಕೆಯನ್ನು ಇಟ್ಟಿದ್ದಾರೆ ಎನಿಸುತ್ತದೆ. ಭೂಲೋಕದಲ್ಲಿ ಕಿರಿಯರು ಮಾಡುವ ಕುಲಘಾತುಕ ಕೆಲಸಗಳಿಂದ ಹಿರಿಯರು ಮೋಕ್ಷವನ್ನು ಹೊಂದದೆ, ಬೇರೊಂದು ಲೋಕದಿಂದ ಮತ್ತೆ ಭೂಲೋಕಕ್ಕೆ ಹಿಂದಿರುಗುತ್ತಾರೆ ಎಂಬ ನಂಬಿಕೆಯನ್ನು ಜನರಲ್ಲಿ ಬಿತ್ತುತ್ತಿದ್ದಾರೆ ಎನಿಸುತ್ತದೆ. ಆ ಮೂಲಕ ಕಿರಿಯರು ಸಾಂಪ್ರದಾಯಿಕವಾಗಿ ಬಂದಿರುವ ಕರ್ಮಗಳನ್ನು ವಿಧೇಯತೆಯಿಂದ ಮಾಡುತ್ತಾ ಸದಾ ಪಿತೃಗಳನ್ನು ಸಮಾಧಾನಪಡಿಸುತ್ತಿರಬೇಕು ಎಂಬ ಸಂದೇಶವನ್ನು ನೀಡುತ್ತಿದ್ದಾರೆ. ಇದೇ ವಾದವು ಮುಂದಿನ ೪೩, ೪೪, ೪೫ ಶ್ಲೋಕಗಳಲ್ಲಿಯೂ ಮುಂದುವರಿಯುವುದು. ತಿಲಕ್ ಮತ್ತು ಗಾಂಧಿ ಅವರ

ವ್ಯಾಖ್ಯಾನಗಳಲ್ಲಿಯೂ ಈ ಕಲ್ಪನೆ ಇದ್ದು, ಅವರು ಪಿಂಡೋದಕ ಕ್ರಿಯೆಗಳ ಲೋಪಕ್ಕಾಗಿ ಅಧೋಗತಿಯನ್ನು ಪಡೆಯುತ್ತಾರೆ ಎಂದು ವ್ಯಾಖ್ಯಾನಿಸಿದ್ದಾರೆ. ಮುಂದಿನ ಶ್ಲೋಕ–

ಅಶೋಚ್ಯಾನ ನ್ವಶೋಚಸ್ತ್ವಂ ಪ್ರಜ್ಞಾವಾದಾಂಶ್ಚ ಭಾಷಸೇ ।
ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ ॥ (೨–೧೧)

ಈ ಶ್ಲೋಕಕ್ಕೆ ಶಂಕರಾಚಾರ್ಯರು 'ಯಾರಿಗಾಗಿ ಮರುಗಬಾರದೋ ಅವರಿಗಾಗಿ ಮರುಗಿದೆ. ಜಾಣರ ಮಾತನ್ನಾಡುತ್ತಿರುವೆ. ನಿಜವಾದ ಜಾಣರು ಸಾಯುವವರೆಗೂ, ಬಾಳುವವರೆಗೂ ಯಾರಿಗೂ ಮರುಗುವುದಿಲ್ಲ. ಪರಾಮಾರ್ಥದಿಂದ ಆತ್ಮತ್ವೇನ ನಿತ್ಯರಾದ್ದರಿಂದಲೂ ಲೋಕಚರ್ಯೆಯಿಂದ ಕೃತಕೃತ್ಯತ್ವೇನ ಶ್ಲಾಘ್ಯರಾದುದರಿಂದಲೂ ಭೀಷ್ಮಾದಿಗಳು ಶೋಚ್ಯರಲ್ಲ'[೩] ಎಂದು ವ್ಯಾಖ್ಯಾನಿಸಿದ್ದಾರೆ. ಶ್ರೀಕೃಷ್ಣನು ತಾನು ತನ್ನ ಬಂಧುಬಾಂಧವರೊಡನೆ ಯುದ್ಧ ಮಾಡುವುದಿಲ್ಲವೆಂದು ಹೇಳಿ ಸುಮ್ಮನಾದಾಗ ಕೃಷ್ಣನು ಜ್ಞಾನಿಗಳಿಗೆ ಈ ಲೌಕಿಕ ಜಂಜಡಗಳಿಗೆ ಮರುಗುವುದಿಲ್ಲವೆಂದು ಉಪದೇಶಿಸುವ ಸಂದರ್ಭವಿದು.

ಇದೇ ಶ್ಲೋಕಕ್ಕೆ ರಾಮಾನುಜಾಚಾರ್ಯರೂ ಮಧ್ವಾಚಾರ್ಯರೂ ವ್ಯಾಖ್ಯಾನವನ್ನು ಬರೆದಿದ್ದಾರೆ. ರಾಮಾನುಜಾಚಾರ್ಯರ ವ್ಯಾಖ್ಯಾನವನ್ನು ನೋಡುವುದಾದರೆ– 'ನೆಂಟರಲ್ಲಿ ಸ್ನೇಹ, ಗುರುಜನರಲ್ಲಿ ಕರುಣೆ ಇವುಗಳಿಂದ ವ್ಯಾಕುಲ ಚಿತ್ತನಾಗಿ ಕ್ಷತ್ರಿಯ ಸಹಜ ಧರ್ಮವಾದ ಕಾಳಗವನ್ನು ಅಧರ್ಮವಾಗಿ ಎಣಿಸುತ, ಧರ್ಮವನ್ನೆಯೆ ತಿಳಿಯಲಿಚ್ಛೆಯಿಂದ ಶರಣುಹೊಕ್ಕ ಅರ್ಜುನನಿಗೆ ಆತ್ಮತತ್ವಜ್ಞಾನವನ್ನು ಫಲೋದ್ದೇಶವಿಲ್ಲದೆ ಯುದ್ಧಕರ್ಮವು ಕ್ಷತ್ರಿಯನಾದ ಅರ್ಜುನನಿಗೆ ಆತ್ಮ ಪ್ರಾಪ್ತಿಸಾಧನವೆಂಬ ಜ್ಞಾನವುಂಟಾಗದೆ ಆತ್ಮಜ್ಞಾನವು ಅಡಗಲಾರದೆಂದೆಣಿಸಿ ಭಗವಂತನು ಅಧ್ಯಾತ್ಮಶಾಸ್ತ್ರಾರಂಭ ಮಾಡುವನು' ಎಂದು ವ್ಯಾಖ್ಯಾನಿಸಿದ್ದಾರೆ. ಮಧ್ವಾಚಾರ್ಯರು 'ಲೋಕದಲ್ಲಿ ಧರ್ಮಜ್ಞಾನಗಳು ನಶಿಸಿರುವಿಕೆಯಂತೆ ಬ್ರಹ್ಮರುದ್ರಾದಿಗಳು ಜ್ಞಾನವನ್ನು ಹರಡಲು ಭಗವಂತನನ್ನು ಪಾರ್ಥಿಸಲು ಭಗವಂತನು ವ್ಯಾಸಾವತಾರ ಎತ್ತಿದನು.' ವೇದಾರ್ಥ ಜ್ಞಾನವಿಲ್ಲದೆ ಸಂಸಾರಕ್ಲೇಶವನ್ನು ಅನುಭವಿಸುವ ಸ್ತ್ರೀ ಶೂದ್ರಾದಿಗಳಿಗೆ ಕಂಡ ಧರ್ಮ ಜ್ಞಾನದ್ವಾರ ಮೋಕ್ಷಪ್ರಾಪ್ತಿಯಾಗಬೇಕೆಂದು ವ್ಯಾಸಮಹರ್ಷಿಯು ಮಹಾಭಾರತವನ್ನು ರಚಿಸಿ ಈ ಕಲ್ಪವೃಕ್ಷಕ್ಕೆ ಮಕರಂದದಂತಹ ಕೃಷ್ಣಾರ್ಜುನ ಸಂವಾದ ರೂಪವಾದ ಭಗವದ್ಗೀತೆಯನ್ನು ಶ್ರೀಮದ್ಭಾರತಾರ್ಥಸಾರ ಸಂಗ್ರಹವಾಗಿಸಿದರು. ಸೇನೆ ಎರಡರ ನಡುವೆ ತನ್ನವರೆಂಬ ಮೋಹದ ಬಲೆಗೆ ಸಿಕ್ಕುಬಿದ್ದು ವಿಷಾದಿಸುತ್ತಿದ್ದ ಅರ್ಜುನನಿಗೆ ಈ ಅಧ್ಯಾತ್ಮ ವಿದ್ಯೆಯನ್ನು ಉಪದೇಶಿಸಿದರು ಎಂದು ಮಧ್ವಾಚಾರ್ಯರು ಅರ್ಥೈಸಿದ್ದಾರೆ.

ಈ ಮೇಲಿನ ಮೂರು ವ್ಯಾಖ್ಯಾನಗಳನ್ನು ವಿಶ್ಲೇಷಿಸುವುದಾದರೆ ಶಂಕರಾಚಾರ್ಯರು ಜ್ಞಾನ ಮತ್ತು ಜ್ಞಾನಿಗಳ ವಿಚಾರವನ್ನು ಮಾತನಾಡಿ ಜ್ಞಾನಯೋಗವೇ ಮುಖ್ಯವೆಂಬ ರೀತಿಯಲ್ಲಿ ವ್ಯಾಖ್ಯಾನಿಸಿದರೆ, ರಾಮಾನುಜಾಚಾರ್ಯರು ಫಲಾಪೇಕ್ಷೆ ಇಲ್ಲದೆ ಕರ್ಮದ ಮೂಲಕ ಜ್ಞಾನ ಯೋಗವನ್ನು ಪಡೆಯುವ ಸಾಧನವಾಗಿ ವ್ಯಾಖ್ಯಾನಿಸುತ್ತಾರೆ. ಮಧ್ವರು ಭಗವಂತನನ್ನು ಪ್ರಾರ್ಥಿಸುವ

ಮೂಲಕ ಭಕ್ತಿಯಿಂದ ಜ್ಞಾನಯೋಗವನ್ನು ಪಡೆಯುವ ಮಾರ್ಗವನ್ನು ಈ ಶ್ಲೋಕದಲ್ಲಿ ಹೇಳಿದ್ದಾರೆ. ಅಲ್ಲದೆ ಮಧ್ವರು, ವೇದಗಳ ಜ್ಞಾನವಿಲ್ಲದ ಸ್ತ್ರೀ–ಶೂದ್ರರಿಗೆ ಭಕ್ತಿಮಾರ್ಗದಿಂದ ಮೋಕ್ಷವನ್ನು ಕೊಡಿಸುವ ಸಲುವಾಗಿ ವ್ಯಾಸರು ಮಹಾಭಾರತವನ್ನು ರಚಿಸಿ ಅದರಲ್ಲಿ ಈ ಗೀತೆಯನ್ನು ಸೇರಿಸಿದ್ದಾರೆ ಎಂಬ ಟಿಪ್ಪಣಿಯನ್ನೂ ತಮ್ಮ ವ್ಯಾಖ್ಯಾನದಲ್ಲಿ ಸೇರಿಸಿದ್ದಾರೆ.

ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ ।
ತಸ್ಮಾದಪರಿಹಾರ್ಯೇರ್ಥೇ ನ ತ್ವಂ ಶೋಚಿತುಮರ್ಹಸಿ ॥(೨–೨೭)

ಹುಟ್ಟಿದವನಿಗೆ ಸಾವೂ ಸತ್ತವನಿಗೆ ಹುಟ್ಟೂ ಅನಿವಾರ್ಯ. ಹೀಗಾಗಿ ಈ ಸಂಬಂಧ ಶೋಕಿಸಬಾರದು ಎಂದು ಶಂಕರಾಚಾರ್ಯರಾದಿಯಾಗಿ ಯಥಾವತ್ತಾಗಿ ಅನುವಾದಿಸುತ್ತಾರೆ. ರಾಮಾನುಜಾಚಾರ್ಯರು ಈ ಹುಟ್ಟು–ಸಾವುಗಳು ಇಲ್ಲಿಯೇ ಇರುವಂತಹ ಪದಾರ್ಥದ ಅವಸ್ಥೆಗಳು. ಇಲ್ಲಿ ಎಲ್ಲವೂ ಇದೆ. ಇಲ್ಲಿ ಇಲ್ಲದ ಪದಾರ್ಥದಿಂದ ಹೊಸದೊಂದು ಪದಾರ್ಥವು ಹುಟ್ಟುವುದಿಲ್ಲ ಎಂದು ಹೇಳುತ್ತಾ ದೃಷ್ಟಾಂತವೊಂದನ್ನು ನೀಡುತ್ತಾರೆ. ಅರಳೆಯನ್ನು ಹೊಸೆಯುವುದರಿಂದ ನೂಲಾಗುವುದು, ನೂಲು ನೇಯ್ಗೆಯಿಂದ ಬಟ್ಟೆಯಾಗುವುದು. ಆ ಬಟ್ಟೆಗೆ ಜೀರ್ಣಸ್ಥಿತಿಯು ಉಂಟಾದಾಗ ಅರಳೆಯಾದರೂ ಆಗಿ ಕೊನೆಗೆ ಕಣ್ಣಿಗೆ ಕಾಣದಂತಹ ಅರಳೆಯ ಅವಯವ ರೇಣುವಾಗುವುದಲ್ಲದೆ ಶುದ್ಧವಾದುದಾಗಲಿಲ್ಲ. ಆದುದರಿಂದ ನಶಿಸಿದ ಪದಾರ್ಥವೆಲ್ಲವೂ ಮತ್ತೊಂದು ಪದಾರ್ಥವಾಗಿ ಮಾರ್ಪಡುತ್ತದೆ. ಹಾಗಾಗಿ ಅರ್ಜುನ ನೀನು ಶೋಕಿಸಬಾರದು ಎಂದು ವ್ಯಾಖ್ಯಾನಿಸುತ್ತಾರೆ. ಹೀಗೆ ದೃಷ್ಟಾಂತಗಳ ಮೂಲಕ ಜನರ ಮನಸ್ಸಲ್ಲಿ–ಯಾವುದೂ ಶಾಶ್ವತವಲ್ಲ, ಎಲ್ಲವೂ ಈ ಲೋಕದ್ದೇ, ಎಲ್ಲವೂ ಇಲ್ಲೇ ಹೊಸ ರೂಪ ಪಡೆಯುತ್ತಿರುತ್ತದೆ ಎಂಬ ಭಾವನೆಯನ್ನು ಬೆಳೆಸಿ, ಸರಳವಾಗಿ ವ್ಯಾಖ್ಯಾನಿಸಿ ಅವರನ್ನು ತಮ್ಮತ್ತ ಆಕರ್ಷಿಸುವುದು ರಾಮಾನುಜರ ತಂತ್ರವಾಗಿದೆ. ಈ ಮೂರು ಜನರ ವ್ಯಾಖ್ಯಾನಗಳನ್ನು ಗಮನಿಸಿದರೆ, ತಮ್ಮ ಮತತ್ರಯಗಳಿಗೆ ಅನುಗುಣವಾಗಿ ಭಗವದ್ಗೀತೆಗೆ ತಮ್ಮ ತಮ್ಮ ಸಿದ್ಧಾಂತಾನುಸಾರ ಭಾಷ್ಯಗಳನ್ನು ರಚಿಸಿರುವುದು ಗಮನಕ್ಕೆ ಬರುತ್ತದೆ.

೫.೨. ತಿಲಕ್–ಗಾಂಧಿ ಅನುವಾದದ ಮಾದರಿಗಳು

ಅನಾಸಕ್ತಿಯೋಗ ಮತ್ತು 'ಶ್ರೀಮದ್ಭಗವದ್ಗೀತಾರಹಸ್ಯ' ಕೃತಿಗಳನ್ನು ಜೊತೆಯಲ್ಲಿಟ್ಟು ಹೀಗೆ ಅಭ್ಯಸಿಸಬಹುದಾದರೆ–

ಗೀತೆಯ ಮೊದಲನೇ ಶ್ಲೋಕವು ಧೃತರಾಷ್ಟ್ರ ಸಂಜಯನಿಗೆ ಹೇಳಿದ ವಾಕ್ಯದಿಂದ ಪ್ರಾರಂಭವಾಗುತ್ತದೆ.

ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ।
ಮಾಮಕಃ ಪಾಂಡವಶ್ಚೈವ ಕಿಮಕುರ್ವತ ಸಂಜಯ ॥ (೧–೧)

ಈ ಶ್ಲೋಕಕ್ಕೆ ಗಾಂಧೀಜಿ ಅವರ ಗೀತಾ ಕೃತಿಯನ್ನು ಅನುವಾದಿಸಿರುವ ಸಿದ್ದವನಹಳ್ಳಿ ಕೃಷ್ಣಶರ್ಮ ಅವರ ಅನುವಾದವನ್ನು ಗಮನಿಸುವುದಾದರೆ, 'ಸಂಜಯ, ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಯುದ್ಧ ಮಾಡಲೆಂದು ಪಾಂಡು ಪುತ್ರರೂ ನನ್ನ ಮಕ್ಕಳೂ ಒಂದೆಡೆ ಸೇರಿ ಏನು ಮಾಡಿದರು? ಹೇಳು' ಎಂದು ವ್ಯಾಖ್ಯಾನಿಸಿದ್ದಾರೆ.

ಗಾಂಧೀಜಿಯವರು ತಾವು ವ್ಯಾಖ್ಯಾನಿಸಿದ ಗೀತೆಯ ಅರ್ಥಕ್ಕೇ ಸೀಮಿತವಾಗಿ ಉಳಿಯದೆ, ಮುಂದುವರಿದು ಆ ಶ್ಲೋಕಕ್ಕೇ ಹೊಸ ಅರ್ಥವೊಂದನ್ನು ಟಿಪ್ಪಣಿಯ ರೂಪದಲ್ಲಿ ನೀಡಿದ್ದಾರೆ.

ಟಿಪ್ಪಣಿ– 'ಶರೀರವೇ ಧರ್ಮಕ್ಷೇತ್ರ; ಏಕೆಂದರೆ ಇದು ಮೋಕ್ಷಕ್ಕೆ ದ್ವಾರವಾಗಬಲ್ಲದು. ಪಾಪದಿಂದ ಇದರ ಉತ್ಪತ್ತಿ, ಇದು ಪಾಪಭಾಜನ. ಆದುದರಿಂದ ಇದು ಕುರುಕ್ಷೇತ್ರ. ಕೌರವರು ಎಂದರೆ ಅಸುರೀ ವೃತ್ತಿಗಳು. ಪಾಂಡುಪುತ್ರರು ದೈವೀವೃತ್ತಿಗಳು. ಪ್ರತಿಯೊಂದು ಶರೀರದಲ್ಲಿಯೂ ಒಳ್ಳೆಯ ವೃತ್ತಿ, ಕೆಟ್ಟವೃತ್ತಿಗಳಿಗೆ ಕಲಹ ನಡೆಯುತ್ತಿರುವುದನ್ನು ಅನುಭವಿಸದವರು ಯಾರು?'

ಹೀಗೆ ಗಾಂಧೀಜಿಯವರು ಕೌರವರು, ಪಾಂಡವರು, ಕುರುಕ್ಷೇತ್ರ ಮುಂತಾದವುಗಳನ್ನು ಮನುಷ್ಯನ ಮೂಲಗುಣ ಸ್ವಭಾವಗಳಾಗಿ ಅರ್ಥೈಸಿಕೊಂಡಿದ್ದಾರೆ. ಇಲ್ಲಿ ಅವರು ಗೀತೆಯನ್ನು ಪರಿಭಾವಿಸುತ್ತಿರುವ ಕ್ರಮವನ್ನು ತಿಳಿಯಬಹುದಾಗಿದೆ. ಅವರು ಗೀತೆಗೆ ಇರುವ ವ್ಯಾಖ್ಯಾನದ ಅರ್ಥವನ್ನು ನೀಡಿರುವವರಾದರೂ ಟಿಪ್ಪಣಿಗಳ ರೂಪದಲ್ಲಿ ನೀಡಿರುವ ಮಾತುಗಳು ಬಹಳ ಮುಖ್ಯವಾಗಿ ಅವರ ಭಿನ್ನ ಆಲೋಚನಾಕ್ರಮವನ್ನು ನಿರೂಪಿಸುತ್ತವೆ. ಮಾನವನ ದೇಹ ಮತ್ತು ಮನಸ್ಸೇ ಒಂದು ನಿಜವಾದ ಧರ್ಮಕ್ಷೇತ್ರ. ಅಲ್ಲಿ ಹುಟ್ಟುವ ಪಾಪವನ್ನು, ಕೆಟ್ಟ ಆಲೋಚನೆಗಳನ್ನು ಅಳಿಸುವ ಕಾರ್ಯವನ್ನು ಮಾಡಬೇಕಾಗಿದೆ. ಹಾಗಾಗಿ ಮಾನವನ ಮನಸ್ಸಿನಲ್ಲಿ ನಡೆಯುವ ಕೆಟ್ಟ ಮತ್ತು ಒಳ್ಳೆಯ ಗುಣ ಸ್ವಭಾವಗಳ ಸಂಘರ್ಷವೇ ನಿಜವಾದ ಕುರುಕ್ಷೇತ್ರ ಯುದ್ಧವೆಂದು ಅವರು ಭಾವಿಸಿದ್ದಾರೆ. ಆದ್ದರಿಂದ ಗೀತೆ ಅವರ ದೃಷ್ಟಿಯಲ್ಲಿ ಒಂದು ಐತಿಹಾಸಿಕ ಗ್ರಂಥವಾಗಿರದೆ ಮನುಷ್ಯನಿಗೆ ಸನ್ಮಾರ್ಗವನ್ನು ತೋರುವ ಅಥವಾ ಧರ್ಮದ ದರ್ಶನವನ್ನು ಮಾಡಿಸುವ ಕೃತಿಯಾಗಿ ಕಾಣಿಸುತ್ತದೆ.

ಇಲ್ಲಿ ತಿಲಕರ 'ಶ್ರೀಮದ್ಭಗವದ್ಗೀತಾರಹಸ್ಯ' ಕೃತಿಯನ್ನು ಅನುವಾದಿಸಿರುವ ಆಲೂರು ವೆಂಕಟರಾವ್ ಅವರ ವ್ಯಾಖ್ಯಾನವನ್ನು ಗಮನಿಸುವುದಾದರೆ,

'ಸಂಜಯನೆ, ಕುರುಕ್ಷೇತ್ರದ ಪುಣ್ಯಭೂಮಿಯಲ್ಲಿ ಯುದ್ಧ ಮಾಡಲಿಚ್ಛೆಯುಳ್ಳವರಾಗಿ ನೆರೆದವರಾದ ನನ್ನ ಮಕ್ಕಳೂ ಪಾಂಡವರೂ ಏನು ಮಾಡಿದರು?' ಎಂದು ವ್ಯಾಖ್ಯಾನಿಸಿದ್ದಾರೆ.

ಆಲೂರರ ಅನುವಾದ ಕೃತಿಯಲ್ಲಿಯೂ ತಿಲಕರು ಕೊಟ್ಟಿರುವ ಟಿಪ್ಪಣಿಯನ್ನು ನೀಡಿದ್ದಾರೆ. ಗೀತಾರಹಸ್ಯವನ್ನು ಅರ್ಥೈಸಿಕೊಳ್ಳಲು ಈ ಟಿಪ್ಪಣಿ ರೂಪದಲ್ಲಿ ಇರುವ ವಾಕ್ಯಗಳು ಸಹಕಾರಿಯಾಗಿವೆ.

ವಿವರಣೆ– [ಕುರುಕ್ಷೇತ್ರವೆಂದರೆ ಹಸ್ತಿನಾಪುರದ ಸುತ್ತಲಿರುವ ವಿಸ್ತೀರ್ಣವಾದ ಬಯಲೇ ಅಹುದು. ಈಗಿನ ದಿಲ್ಲೀ ಪಟ್ಟಣವು ಆ ಬಯಲಿನಲ್ಲಿಯೇ ಕಟ್ಟಿದೆ. ಕುರುಪಾಂಡವರ

ಪೂರ್ವಜನಾದ ಕುರುರಾಜನೆಂಬುವನು ಬಯಲಿನಲ್ಲಿ ನೇಗಿಲನ್ನು ಹೂಡಿ ಒಳ್ಳೆ ಪ್ರಯಾಸದಿಂದ ಅದನ್ನು ಹೊಡೆಯುತ್ತಿದ್ದನು. ಆದ್ದರಿಂದ ಆ ಬಯಲಿಗೆ ಕ್ಷೇತ್ರ(ಹೊಲ)ವೆಂಬ ಹೆಸರು ಬಂದಿತು. ಆ ಕ್ಷೇತ್ರದಲ್ಲಿ ಯಾರಾದರೂ ತಪಸ್ಸು ಮಾಡಿಯಾಗಲೀ ಯುದ್ಧ ಮಾಡಿಯಾಗಲೀ ಮಡಿದರೆ, ಅವನಿಗೆ ನಿಶ್ಚಯವಾಗಿ ಸ್ವರ್ಗಪ್ರಾಪ್ತಿಯಾಗುವುದೆಂದು ಇಂದ್ರನು ಅಲ್ಲಿಗೆ ಬಂದು ಕುರುರಾಜನಿಗೆ ವರವನ್ನಿತ್ತ ಬಳಿಕ ಆ ರಾಜನು ನೇಗಿಲು ಹೊಡೆಯುವುದನ್ನು ಬಿಟ್ಟುಕೊಟ್ಟನೆಂದು ಮಹಾಭಾರತದಲ್ಲಿ ಆಖ್ಯಾಯಿಕೆ ಇರುವುದು(ಮಭಾ. ಶಲ್ಯ. ೫೩). ಇಂದ್ರನು ಹಾಗೆ ವರವನ್ನು ಕೊಟ್ಟಿದ್ದರಿಂದ ಆ ಕ್ಷೇತ್ರಕ್ಕೆ ಧರ್ಮಕ್ಷೇತ್ರವೆಂದೂ ಪುಣ್ಯಭೂಮಿಯೆಂದೂ ಹೆಸರು ಬಂದಿತು. ಅದೇ ರಣಾಂಗಣದಲ್ಲಿ ಪರಶುರಾಮನು ಇಪ್ಪತ್ತೊಂದಾವರ್ತಿ ಪೃಥ್ವಿಯನ್ನು ನಿಕ್ಷತ್ರಿಯವಾಗಿ ಮಾಡಿ ಪಿತೃತರ್ಪಣವನ್ನು ಮಾಡಿದನೆಂಬ ಕಥೆಯಿರುವುದಲ್ಲದೆ ಆ ರಣಭೂಮಿಯಲ್ಲಿಯೇ ಅರ್ವಾಚೀನ ಕಾಲದಲ್ಲಿ ಪ್ರಚಂಡವಾದ ಅನೇಕ ಸಂಗ್ರಾಮಗಳಾಗಿ ಹೋಗಿವೆ.]

ಈ ಮೇಲಿನ ಅನುವಾದಗೊಂಡ ವ್ಯಾಖ್ಯಾನವನ್ನು ಗಮನಿಸಿದರೆ, ತಿಲಕರ ಮನೋಧೋರಣೆ ತಿಳಿಯುತ್ತದೆ. ತಿಲಕರು ಇಲ್ಲಿ ವ್ಯಾಖ್ಯಾನಿಸುವಾಗ ಹಿಂದೂ ದೈವಿಕ ಪರಿಭಾಷೆಯನ್ನು ಬಳಸುತ್ತಾರೆ. ಅಲ್ಲದೆ ಕುರುಕ್ಷೇತ್ರ ದಿಲ್ಲಿಪಟ್ಟಣದ ಸಮೀಪ ಇದೆ, ಇಂದ್ರನು ವರವನ್ನು ಕೊಟ್ಟಿದ್ದರಿಂದ ಧರ್ಮಕ್ಷೇತ್ರವಾಯಿತು ಎಂದೆಲ್ಲ ಹೇಳುತ್ತಾರೆ. ಇದರಿಂದ ಇವರು ಗೀತೆಯನ್ನು ಒಂದು ಐತಿಹಾಸಿಕ ಮತ್ತು ಪೌರಾಣಿಕ ಆಧಾರಗಳಿಂದ ವಿವರಿಸುತ್ತಾರೆ ಎಂಬುದನ್ನು ಹಾಗೂ ಗೀತೆಯನ್ನು ಪಾವಿತ್ರ್ಯತೆಯ ನೆಲೆಯಿಂದ ಪರಿಭಾವಿಸಿದ್ದಾರೆ ಎಂಬುದನ್ನು ತಿಳಿಯಬಹುದಾಗಿದೆ. ಇದರಿಂದ ಗಾಂಧಿ ಮತ್ತು ತಿಲಕರ ಗೀತಾ ವ್ಯಾಖ್ಯಾನಗಳು ಬೇರೆ ಬೇರೆ ರೀತಿಯಲ್ಲಿ ಭಿನ್ನವಾಗಿರುವುದು ಸ್ಪಷ್ಟವಾಗುತ್ತದೆ.

ಕನ್ನಡದ ಅನಾಸಕ್ತಿಯೋಗ ಕೃತಿಯನ್ನು ಅಭ್ಯಸಿಸಿ ಹೇಳುವುದಾದರೆ, ಕೃತಿಯು ಇನ್ನೂ ಅನೇಕ ವಿಶೇಷಗಳನ್ನು ಒಳಗೊಂಡಿದೆ. ಗಾಂಧೀಜಿಯವರು ತಮ್ಮ ಅನುವಾದದಲ್ಲಿ ಎಲ್ಲಾ ಅಧ್ಯಾಯಗಳ ಮೊದಲಿಗೆ ಆಯಾ ಅಧ್ಯಾಯಗಳ ಸಾರವನ್ನು ಕೆಲವೇ ಕೆಲವು ಮಾತುಗಳಲ್ಲಿ ನಿರೂಪಿಸಿದ್ದಾರೆ. ಗೀತೆಯ ಬೇರೆ ಬೇರೆ ವ್ಯಾಖ್ಯಾನಕಾರರು ಮಂಡಿಸಿದ ಹೊಸ ಮಾದರಿಯೊಂದನ್ನು ಅಥವಾ ವಿಭಿನ್ನ ಪಥ್ಯವೊಂದನ್ನು ಗಾಂಧೀಜಿ ತಮ್ಮ ಅನುವಾದದಲ್ಲಿ ನೀಡುತ್ತಾರೆ. ಅದರಂತೆ ಮೊದಲನೇ ಅಧ್ಯಾಯ 'ಅರ್ಜುನನ ವಿಷಾದಯೋಗ'ಕ್ಕೂ ಅವರು ಕೆಲವು ಮಾತುಗಳನ್ನು ಹೀಗೆ ಹೇಳಿದ್ದಾರೆ–

ಜಿಜ್ಞಾಸೆಯಿಲ್ಲದೆ ಜ್ಞಾನವಾಗದು. ದುಃಖವಿಲ್ಲದೆ ಸುಖವಾಗದು. ಧರ್ಮಸಂಕಟ–ಹೃದಯ ಮಂಥನ ಜಿಜ್ಞಾಸುಗಳಿಗೆ ಒಂದು ಸಲ ಆಗಿಯೇ ಆಗುತ್ತದೆ.

ಅರ್ಜುನನ ಮನಸ್ಸಿನಲ್ಲಿ ಉಂಟಾದ ಜಿಜ್ಞಾಸೆ, ಸಂಕಟಕ್ಕೆ ಪ್ರತಿಯಾಗಿ ಶ್ರೀಕೃಷ್ಣ ಜ್ಞಾನದ ರೂಪದಲ್ಲಿ ಅವನಿಗೆ ಎದುರಾದ ಧರ್ಮಸಂಕಟವನ್ನು ನಿವಾರಿಸುತ್ತಾನೆ. ಅಂದರೆ ಗಾಂಧೀಜಿಯವರ

ತಿಳುವಳಿಕೆಯ ಪ್ರಕಾರ ಎಲ್ಲಾ ಮಾನವರೂ ಚಿಂತನೆಗೆ ಒಳಗಾದಾಗ ಮಾತ್ರ ಜ್ಞಾನವೆಂಬುದು ಲಭಿಸುತ್ತದೆ. ಆಗಾದಾಗ ಒಂದಲ್ಲಾ ಒಂದು ಬಾರಿ ಹೃದಯಮಂಥನ ಆಗಿಯೇ ಆಗುತ್ತದೆ. ಅದು ಅರ್ಜುನನಿಗೂ ಸಂಭವಿಸುತ್ತದೆ.

'ಅನಾಸಕ್ತಿಯೋಗ' ಕೃತಿಯ ಕನ್ನಡಾನುವಾದದ ಹಿನ್ನೆಲೆಯಿಂದ, ಕೃತಿಯಲ್ಲಿ ಬಳಸಿರುವ ಭಾಷೆಯ ಬಗೆಗೆ ಹೇಳುವುದಾದರೆ, ಅನುವಾದವು ಸರಳವೂ ಮತ್ತು ನೇರವೂ ಆಗಿದೆ. ತಿಲಕ್‌ರ ಕೃತಿ ಗೀತಾರಹಸ್ಯದ ಕನ್ನಡಾನುವಾದ ಭಾಷೆ ಮತ್ತು ತಿಲಕರ ವ್ಯಾಖ್ಯಾನದ ಭಾಷೆಯೊಂದಿಗೆ ಹೋಲಿಸಿ ನೋಡಿದಾಗ, ಗಾಂಧಿಯವರ ಭಾಷೆ ಸರಳವಾಗಿ ಕಾಣಿಸುತ್ತದೆ. ತಿಲಕ್ ಶ್ಲೋಕಗಳನ್ನು ವ್ಯಾಖ್ಯಾನಿಸುವಾಗ ಎಲೆ, ಎಲೈ ಮುಂತಾದ ಸಂಬೋಧನಾ ಪದಗಳನ್ನು ಹೆಚ್ಚು ಬಳಸಿದ್ದಾರೆ. ಆದರೆ ಗಾಂಧಿಯವರು ಶ್ಲೋಕಗಳನ್ನು ವ್ಯಾಖ್ಯಾನಿಸುವಾಗ ಈ ಸಂಬೋಧನಾ ಪದಗಳನ್ನು ಬಳಸುವುದಿಲ್ಲ. ಆದರೆ ಗಾಂಧಿಯವರು ಅತಿಯಾದ ವರ್ಣನಾಪದಗಳ ಬಳಕೆಯನ್ನು(ಎಲೈ ಕಮಲದಳ ನಯನ, ಅನಂತ ರೂಪನೆ, ಸರ್ವಾತ್ಮನೇ... ಮುಂತಾದವು) ಸಾಧ್ಯವಾದಮಟ್ಟಿಗೆ ಕಡಿತಗೊಳಿಸಿದ್ದಾರೆ ಹಾಗೂ ಸಂಬೋಧನೆಯನ್ನು ನೇರವಾಗಿ ಹೇಳಲು ಪ್ರಯತ್ನಿಸಿದ್ದಾರೆ.

ಮುಂದೆ ೨ನೇ ಅಧ್ಯಾಯವಾದ 'ಸಾಂಖ್ಯಯೋಗ'ವನ್ನು ಗಮನಿಸುವುದಾದರೆ, ಮನುಷ್ಯ ಮೋಹವಶವಾಗುವುದರಿಂದ ಅಧರ್ಮವನ್ನೇ ಧರ್ಮವೆಂದು ಭಾವಿಸುತ್ತಾನೆ. ಮೋಹವಶನಾದ್ದರಿಂದ ಅರ್ಜುನ ತನ್ನದು, ಪರರದು ಎಂಬ ಭೇದ ಮಾಡಿದ. ಈ ಭೇದ ಸುಳ್ಳು ಎಂದು ತೋರಿಸಲು ಕೃಷ್ಣ ದೇಹ, ಆತ್ಮಗಳ ಭಿನ್ನತೆಯನ್ನು ತಿಳಿಸುತ್ತಾನೆ. ದೇಹ ಅನಿತ್ಯ, ಆತ್ಮ ನಿತ್ಯ ಎಂಬುದನ್ನು ವಿವರಿಸುವ ಅಧ್ಯಾಯ ಈ ಸಾಂಖ್ಯಯೋಗವಾಗಿದೆ. ಈ ಅಧ್ಯಾಯದಲ್ಲಿ ನಿಷ್ಕಾಮಕರ್ಮ ಅಥವಾ ಅನಾಸಕ್ತಿಯ ಪ್ರತಿಪಾದನೆಯಿದೆ. ಆದ್ದರಿಂದ ಗಾಂಧೀಜಿಯವರ ಪ್ರಕಾರ ಗೀತೆಯ ಮುಖ್ಯ ತಿರುಳು ಇರುವುದು ಈ ಅಧ್ಯಾಯದಲ್ಲಿಯೇ.

> ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ ।
> ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥ (೨-೩)

ಮೇಲಿನ ಶ್ಲೋಕದ ಅರ್ಥವನ್ನು ಗೀತಾರಹಸ್ಯ ಕೃತಿಯಲ್ಲಿ 'ಪಾರ್ಥ, ಇಂಥ ಹೇಡಿತನಕ್ಕೆ ಈಡಾಗಬೇಡ. ನಿನ್ನಂಥವನಿಗೆ ಇದು ಉಚಿತವಲ್ಲ. ಎಲೋ, ನೀನು ಶತ್ರುಗಳಿಗೆ ತಾಪವನ್ನೀಯುವವನು! ಈ ಕೀಳುತನದ ಎದೆಗುಂದನ್ನು ದೂಡಿಹಾಕಿ ಚಟ್ಟನೆ ಯುದ್ಧಕ್ಕೆ ಏಳು!' ಎಂಬುದಾಗಿ ಅರ್ಥೈಸಿದ್ದಾರೆ.

ಇದೇ ಶ್ಲೋಕದ ಅರ್ಥವನ್ನು ಅನಾಸಕ್ತಿಯೋಗ ಕೃತಿಯಲ್ಲಿ 'ಪಾರ್ಥಾ, ಷಂಡನಾಗಬೇಡ ಅದು ನಿನಗೆ ಶೋಭಿಸದು. ಹೃದಯದ ಪಾಮರ ನಿರ್ಬಲತೆಯನ್ನು ತ್ಯಜಿಸಿ, ಪರಂತಪ, ಏಳು' ಎಂದು ಅರ್ಥೈಸಲಾಗಿದೆ. ಈ ಎರಡೂ ವ್ಯಾಖ್ಯಾನಗಳನ್ನು ಗಮನಿಸಿದಾಗ ಕ್ಲೈಬ್ಯ ಎಂಬ ಪದದ ಅರ್ಥಕ್ಕೆ ೨ ಭಿನ್ನ ಅರ್ಥಗಳನ್ನು ಇಲ್ಲಿ ಹೇಳಲಾಗಿದೆ. ಕ್ಲೈಬ್ಯ ಪದದ ಅರ್ಥ

'ನಪುಂಸಕತ್ವ' ಎಂಬುದಾಗಿದ್ದರೂ ಗೀತಾರಹಸ್ಯ ಕೃತಿಯಲ್ಲಿ 'ಷಂಡತನ' ಎಂಬುದಾಗಿ ಬಳಸದೆ ಹೇಡಿತನ ಎಂದು ಔಚಿತ್ಯಪೂರ್ಣವಾಗಿ ಬಳಸಿದ್ದಾರೆ ಎನಿಸುತ್ತದೆ. ಅಲ್ಲದೆ ಗೀತಾರಹಸ್ಯದಲ್ಲಿ 'ಪರಂತಪ' ಎಂಬ ಪದದ ಅರ್ಥವನ್ನು ಬಿಡಿಸಿ ಶತ್ರುಗಳಿಗೆ ತಾಪವನ್ನೀಯುವವನು ಎಂದು ಅನುವಾದಿಸಿದ್ದಾರೆ. ಆದರೆ ಅನಾಸಕ್ತಿಯೋಗದಲ್ಲಿ ಅದನ್ನು ಬಿಡಿಸಿ ಹೇಳದೆ, ಮೂಲವನ್ನೇ ಅಂದರೆ ಪರಂತಪ ಎಂಬ ಶಬ್ದವನ್ನೇ ಯಥಾವತ್ತಾಗಿ ಬಳಸಿದ್ದಾರೆ. ಗೀತೆಯ ಅನೇಕ ಸ್ಥಳಗಳಲ್ಲಿ ಈ ರೀತಿಯ ವಿಶೇಷಣರೂಪವಾದ ಸಂಬೋಧನೆಗಳು ಕೃಷ್ಣಾರ್ಜುನರ ಹೆಸರುಗಳಿಗೆ ಅನ್ವರ್ಥಕವಾಗಿ ಬಳಕೆಯಾಗಿರುವುದನ್ನು ಗಮನಿಸಬಹುದಾಗಿದೆ. ಹೀಗೆ ಅನ್ವರ್ಥಕವಾಗಿ ಬಳಸುವ ಸಂಬೋಧನೆಗಳನ್ನು ಅನಾಸಕ್ತಿಯೋಗ ಕೃತಿಯಲ್ಲಿ ಹೆಚ್ಚಾಗಿ ಬಳಸದೆ ಶ್ರೀಕೃಷ್ಣ–ಅರ್ಜುನ ಎಂಬ ಹೆಸರುಗಳಿಂದ ಸಾಮಾನ್ಯವಾಗಿ ಭಾಷಾಂತರಿಸಿದ್ದಾರೆ.

ಇದೇ ಅಧ್ಯಾಯದ ೧೮ನೇ ಶ್ಲೋಕ

> ಅಂತವಂತ ಇಮೇ ದೇಹಾ ನಿತ್ಯಸ್ಯೋಕ್ತಾಶ್ಯರೀರಿಣಃ ।
> ಅವಿನಾಶಿನೋ ಪ್ರಮೇಯಸ್ಯ ತಸ್ಮಾದ್ಯುದ್ಧ್ಯಸ್ವ ಭಾರತ ॥ (೨–೧೮)

ಈ ಶ್ಲೋಕಕ್ಕೆ ಗೀತಾರಹಸ್ಯ ಕೃತಿಯಲ್ಲಿ –

'ಅವಿನಾಶಿಯೂ ಅಪ್ರಮೇಯನೂ ನಿತ್ಯನೂ ಆಗಿರುವ ದೇಹಸ್ವಾಮಿಯ ಇವೆಲ್ಲ ದೇಹಗಳು ನಾಶವುಳ್ಳವುಗಳು, ಅದಕ್ಕಾಗಿ ಹೇ ಭಾರತನೆ ಯುದ್ಧ ಮಾಡು' ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ. ಇದೇ ಶ್ಲೋಕಕ್ಕೆ ಅನಾಸಕ್ತಿಯೋಗ ಕೃತಿಯಲ್ಲಿ 'ದೇಹಿನಿತ್ಯ, ಅಪರಿಮಿತ, ಅವಿನಾಶಿ, ಅವನ ಈ ದೇಹವೊ ನಾಶವಂತ, ಅನಿತ್ಯ ಎಂದು ಹೇಳಿದ್ದಾರೆ. ಆದುದರಿಂದ, ಭಾರತ, ನೀನು ಯುದ್ಧ ಮಾಡು' ಎಂದು ವ್ಯಾಖ್ಯಾನಿಸಿದ್ದಾರೆ. ಇಲ್ಲಿ 'ಶರೀರಿಣಃ'(ಆತ್ಮ) ಎಂಬುದಕ್ಕೆ ಅನಾಸಕ್ತಿಯೋಗದಲ್ಲಿ ದೇಹಿ ಎಂಬುದಾಗಿ ಹೇಳಿದರೆ, ಗೀತಾರಹಸ್ಯದಲ್ಲಿ ದೇಹಸ್ವಾಮಿ ಎಂಬ ಪದ ಪ್ರಯೋಗವನ್ನು ಮಾಡಲಾಗಿದೆ. ಆತ್ಮಕಲ್ಪನೆ ಮತ್ತು ಆತ್ಮದ ಅಮರತ್ವವನ್ನು ಪುಷ್ಟೀಕರಿಸಿ ಆತ್ಮಕ್ಕೆ ದೈವತ್ವದ ನೆಲೆಯನ್ನು ಕೊಡಲು ಪ್ರಯತ್ನಿಸುವ ಜೊತೆಗೆ ಭಕ್ತಿ ಮಾರ್ಗದ ಭಾಷೆಯನ್ನು ಇಲ್ಲಿ ಬಳಸಿದ್ದಾರೆ.

ಗೀತೆಯ ಬಹಳ ಮುಖ್ಯವಾದ ಶ್ಲೋಕಗಳಲ್ಲಿ ಇದೂ ಕೂಡ ಒಂದಾಗಿದೆ. ಏಕೆಂದರೆ ಅರ್ಜುನನು ವಿಷಾದದಿಂದ ಯುದ್ಧ ತ್ಯಜಿಸಿ ಅಹಿಂಸೆಯನ್ನು ಪ್ರತಿಪಾದಿಸುತ್ತ ಕುಳಿತಾಗ, ಕೃಷ್ಣನು ಈ ದೇಹ ಮತ್ತು ಆತ್ಮದ ಸಂಬಂಧವನ್ನು ತಿಳಿಸಿ ಆತ್ಮವು ಶ್ರೇಷ್ಠವಾದದ್ದು, ಅದು ವಿನಾಶವಾಗಲಾರದು ಎಂದು ತಿಳಿ ಹೇಳಿ ಯುದ್ಧ ಮಾಡುವಂತೆ ಹೇಳುವ ಮೊದಲನೇ ಶ್ಲೋಕವಿದು. ಅದಕ್ಕೆ ಅಂಬೇಡ್ಕರ್ ಅವರು ಗೀತೆಯು ಅಹಿಂಸೆಯ ಪ್ರತಿಪಾದನೆಯನ್ನು ಮಾಡುವುದಿಲ್ಲ, ಬದಲಾಗಿ ಹಿಂಸೆಯ ಪ್ರತಿಪಾದನೆಯನ್ನೇ ಮಾಡುತ್ತದೆ ಎಂದು ಗೀತೆಯನ್ನು ಟೀಕಿಸಿದ್ದಾರೆ.

ಈ ಅಧ್ಯಾಯದ ೨೫ನೇ ಶ್ಲೋಕ

ಅವ್ಯಕ್ತೋಽಯಮಚಿಂತ್ಯೋಽಯಮವಿಕಾರ್ಯೋಽಯಮುಚ್ಯತೇ ।
ತಸ್ಮಾದೇವಂ ವಿದಿತ್ವೈನಂ ನಾನುಶೋಚಿತುಮರ್ಹಸಿ ॥ (೨-೨೫)

ಇದಕ್ಕೆ ಗೀತಾರಹಸ್ಯ ಕೃತಿಯಲ್ಲಿ- 'ಇವನಿಗೆ ಅವ್ಯಕ್ತನೆಂದೂ, ಅಚಿಂತ್ಯನೆಂದೂ, ಅವಿಕಾರ್ಯನೆಂದೂ ಹೇಳುತ್ತಾರೆ. ಅದಕ್ಕಾಗಿ ಈ ಆತ್ಮನು ಇಂಥ ಪ್ರಕಾರದವನೆಂದು ಅರಿತು ನೀನು ಶೋಕ ಮಾಡುವುದು ತಕ್ಕದ್ದಲ್ಲ' ಎಂದು ಅನುವಾದಿಸಿದ್ದಾರೆ. ಇಲ್ಲಿ ಆತ್ಮವು ಇಂದ್ರಿಯಗಳಿಗೆ ಗೋಚರವಾದುದರಿಂದ ಅಶಕ್ತನೆಂದೂ ಮನಸ್ಸಿನಿಂದ ತಿಳಿಯಲು ಅಸಾಧ್ಯವಾದುದರಿಂದ ಅಚಿಂತ್ಯನೆಂದೂ, ಯಾವ ವಿಕಾರಗಳ ಉಪಾಧಿಗಳಿಲ್ಲದವನಾದದ್ದರಿಂದ ಅವಿಕಾರ್ಯನೆಂದೂ ಪದಪ್ರಯೋಗ ಮಾಡಲಾಗಿದೆ. ಆತ್ಮಕ್ಕೆ ಅವ್ಯಕ್ತ, ಅಚಿಂತ್ಯ, ಅವಿಕಾರ್ಯ ಎಂಬ ಉಪನಿಷತ್ತುಗಳ ವರ್ಣನೆಯನ್ನು ಇಲ್ಲಿ ನೇರವಾಗಿ ಬಳಸಿಕೊಂಡಿದ್ದಾರೆ. ಆದರೆ ಅನಾಸಕ್ತಿಯೋಗ ಕೃತಿಯಲ್ಲಿ ಅದೇ ಅರ್ಥ ಬರುವಂತೆ- 'ಆ ಆತ್ಮ ಇಂದ್ರಿಯಗಳಿಗೂ ಮನಸ್ಸಿಗೂ ತಿಳಿಯಲಾರದುದು, ವಿಕಾರರಹಿತ. ಆದುದರಿಂದ ಇದನ್ನು ತಿಳಿದೂ ನೀನು ಶೋಕಿಸುವುದು ಉಚಿತವಲ್ಲ' ಎಂದು ಸರಳವಾಗಿ ಅನುವಾದಿಸಿದ್ದಾರೆ.

ಇದೇ ಅಧ್ಯಾಯದ ೩೨ನೇ ಶ್ಲೋಕ

ಯದೃಚ್ಛಯಾ ಚೋಪಪನ್ನಂ ಸ್ವರ್ಗದ್ವಾರಮಪಾವೃತಮ್ ।
ಸುಖಿನಃ ಕ್ಷತ್ರಿಯಃ ಪಾರ್ಥ ಲಭಂತೇ ಯುದ್ಧಮೀದೃಶಮ್ ॥ (೨-೩೨)

ಈ ಮೇಲಿನ ಸಾಲುಗಳಿಗೆ ಗೀತಾರಹಸ್ಯದಲ್ಲಿ- 'ಆಯತ್ತವಾಗಿ ಎದುರಿನಲ್ಲಿ ತೆರೆದಿಟ್ಟ ಸ್ವರ್ಗದ್ವಾರದಂತಿರುವ ಇಂಥ ಯುದ್ಧವು, ಅರ್ಜುನಾ, ಭಾಗ್ಯಶಾಲಿಗಳಾದ ಕ್ಷತ್ರಿಯರಿಗೆ ಮಾತ್ರ ಪ್ರಾಪ್ತವಾಗುತ್ತದೆ' ಎಂದು ಅನುವಾದಿಸಿದ್ದರೆ, 'ಪಾರ್ಥಾ! ತಾನಾಗಿಯೇ ಒದಗಿದೆ ಈ ಯುದ್ಧ. ಸ್ವರ್ಗದ ಬಾಗಿಲನ್ನೇ ತೆರೆವ ಯುದ್ಧ ಬರುವುದು ಭಾಗ್ಯಶಾಲಿ ಕ್ಷತ್ರಿಯರ ಪಾಲಿಗೆ ಮಾತ್ರವೇ' ಎಂದು ಅನಾಸಕ್ತಿಯೋಗ ಕೃತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಗೀತಾರಹಸ್ಯದಲ್ಲಿ, ಸ್ವರ್ಗದ್ವಾರದಂತಿರುವ ಇಂಥ ಯುದ್ಧ ಎಂದು ಹೇಳಿದ್ದರೆ, ಅನಾಸಕ್ತಿಯೋಗದಲ್ಲಿ ಸ್ವರ್ಗದ ಬಾಗಿಲನ್ನೇ ತೆರೆವ ಯುದ್ಧ ಎಂದು ಹೇಳಿದ್ದಾರೆ. ಇಲ್ಲಿ 'ಸ್ವರ್ಗದ ಬಾಗಿಲನ್ನೇ ತೆರೆವ ಯುದ್ಧ' ಎನ್ನುವುದೇ ಅರ್ಥವಂತಿಕೆಯಿಂದ ಕೂಡಿದ ಮತ್ತು ಹೆಚ್ಚು ಸಮಂಜಸವಾದ ವ್ಯಾಖ್ಯಾನ ಎಂದು ತಿಳಿಯಬಹುದಾಗಿದೆ.

ಹಾಗೆಯೇ ೪೧ನೇ ಶ್ಲೋಕವನ್ನು ಗಮನಿಸುವುದಾದರೆ

ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ।
ಬಹುಶಾಖಾಹ್ಯ ನಂತಾಶ್ಚ ಬುದ್ಧಯೋ ವ್ಯವಸಾಯಿನಾಮ್ ॥(೨-೪೧)

ಈ ಶ್ಲೋಕಕ್ಕೆ 'ಕುರುನಂದನನೆ, ವ್ಯವಸಾಯಾತ್ಮಕವಾದ ಅಂದರೆ ಕಾರ್ಯಾಕಾರ್ಯಗಳ ನಿಶ್ಚಯವನ್ನು ಮಾಡುವಂಥ ಬುದ್ಧಿಯು ಈ ಮಾರ್ಗದಲ್ಲಿ ಒಂದೇ ಅಂದರೆ, ಏಕಾಗ್ರವಾಗಿರತಕ್ಕದ್ದು. ಯಾಕೆಂದರೆ ಅವ್ಯವಸಾಯಿಗಳ ಬುದ್ಧಿಗಳು ಅಂದರೆ ವಾಸನೆಗಳು ಅನಂತವಾಗಿಯೂ ಅನೇಕವಾದ ಟಿಸುಳುಗಳುಳ್ಳದ್ದಾಗಿಯೂ ಇರುತ್ತವೆ' ಎಂದು ಗೀತಾರಹಸ್ಯ ಕೃತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಇದನ್ನೇ ಅನಾಸಕ್ತಿಯೋಗದಲ್ಲಿ 'ಕುರುನಂದನ, ಯೋಗವಾದಿಗಳ ನಿಶ್ಚಯಾತ್ಮಕಬುದ್ಧಿ ಏಕರೂಪವಾಗಿರುತ್ತದೆ. ಅನಿಶ್ಚಯವಂತರ ಬುದ್ಧಿಗಳಿಗೆ ಬಹುಶಾಖೆಗಳು. ಅವಕ್ಕೆ ಕೊನೆಯಿಲ್ಲ' ಎಂಬುದಾಗಿ ವ್ಯಾಖ್ಯಾನಿಸಿದ್ದಾರೆ.

ಈ ಎರಡೂ ವ್ಯಾಖ್ಯಾನಗಳನ್ನು ಗಮನಿಸಿದಾಗ ಗೀತಾರಹಸ್ಯದ ವ್ಯಾಖ್ಯಾನವು ದೀರ್ಘವೂ ಕ್ಲಿಷ್ಟವೂ ಆಗಿರುವುದನ್ನು ಕಾಣಬಹುದಾಗಿದೆ. ಈ ಕ್ಲಿಷ್ಟತೆಯನ್ನು ನಿವಾರಿಸಲು ವ್ಯಾಖ್ಯಾನಕಾರರೇ ದೀರ್ಘವಾದ ಟಿಪ್ಪಣಿಯನ್ನು ಕೃತಿಯಲ್ಲಿ ನೀಡಿದ್ದಾರೆ. ಬುದ್ಧಿಯ ಎರಡು ಅರ್ಥಗಳು ಈ ಶ್ಲೋಕದಲ್ಲಿ ಬಳಕೆಯಾಗಿವೆ. ಬುದ್ಧಿ ಎಂಬ ಶಬ್ದಕ್ಕೆ 'ನಿಶ್ಚಯವನ್ನು ಮಾಡುವ ಇಂದ್ರಿಯಗಳು' ಮತ್ತು 'ವಾಸನೆಗಳು' ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಅಂದರೆ ನಿಶ್ಚಯವನ್ನು ಮಾಡುವಂಥ ಬುದ್ಧಿಯ ಇಂದ್ರಿಯವು ಯಾರಲ್ಲಿ ಸ್ಥಿರವಾಗಿಲ್ಲವೋ ಅಂಥವರ ಮನಸ್ಸಿನಲ್ಲಿ ಪ್ರತಿಕ್ಷಣವೂ ಹೊಸವಿಚಾರಗಳು ಹುಟ್ಟುತ್ತವೆ ಎನ್ನುವ ಅಭಿಪ್ರಾಯವನ್ನು ಈ ಶ್ಲೋಕವು ಹೊಂದಿದೆ. ಅನಾಸಕ್ತಿಯೋಗದಲ್ಲಿ ಇದನ್ನು ಬುದ್ಧಿಯು ಒಂದು ತೆರನಾಗಿರದೆ ಅನೇಕ ರೂಪ ತಾಳುತ್ತದೆ. ಹೀಗೆ ಅನೇಕ ರೂಪ ತಾಳಿದಾಗ ಅದು ಬುದ್ಧಿ ಆಗದೆ ವಾಸನೆಗಳು ಅಥವಾ ವಿಚಾರಗಳ ರೂಪ ತಳೆಯುತ್ತದೆ ಎಂದು ಸರಳವಾಗಿ ಹೇಳಿದ್ದಾರೆ.

ಇದೇ ಅಧ್ಯಾಯದ ೪೬ನೇ ಶ್ಲೋಕದಲ್ಲಿ

> ಯಾವಾನರ್ಥ ಉದಪಾನೇ ಸರ್ವತಸ್ಸಂಪ್ಲುತೋದಕೇ ।
> ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥ (೨-೪೬)

ಈ ಶ್ಲೋಕಕ್ಕೆ ಅನಾಸಕ್ತಿಯೋಗದ ಕೃತಿಕಾರರು –

'ಬಾವಿಯಿಂದಾಗುವ ಕೆಲಸವೆಲ್ಲವೂ, ಎಲ್ಲ ಬಗೆಯಲ್ಲೂ, ಸರೋವರದಿಂದಲೂ ಆಗುತ್ತದೆ; ಅದೇ ರೀತಿ ವೇದಗಳಲ್ಲಿರುವುದೆಲ್ಲ ಜ್ಞಾನಿಯಾದ ಬ್ರಹ್ಮಪಾರಾಯಣನಿಗೆ ಆತ್ಮಾನುಭವದಿಂದ ದೊರೆಯುತ್ತದೆ' ಎಂದು ವ್ಯಾಖ್ಯಾನಿಸಿದ್ದಾರೆ. ಇದನ್ನೇ ಗೀತಾರಹಸ್ಯದಲ್ಲಿ 'ಎಲ್ಲ ಕಡೆಯಲ್ಲೂ ಜಲರಾಶಿಯು ತುಂಬಿಕೊಂಡಿರಲು ಬಾವಿಯಿಂದ ಎಷ್ಟು ಪ್ರಯೋಜನವೋ, ಅಷ್ಟೇ ಸಂಪೂರ್ಣ ಜ್ಞಾನಪ್ರಾಪ್ತಿಯನ್ನು ಮಾಡಿಕೊಂಡ ಬ್ರಾಹ್ಮಣನಿಗೆ ಎಲ್ಲ ವೇದಗಳಿಂದ ಪ್ರಯೋಜನವು ಎಂದು ವ್ಯಾಖ್ಯಾನಿಸಿದ್ದಾರೆ.

ಈ ಎರಡೂ ವ್ಯಾಖ್ಯಾನಗಳನ್ನು ಗಮನಿಸಿದಾಗ ಎರಡೂ ವ್ಯಾಖ್ಯಾನಗಳಲ್ಲಿ ಭಿನ್ನತೆಯನ್ನು ಗುರುತಿಸಬಹುದಾಗಿದೆ. ಅನಾಸಕ್ತಿಯೋಗದಲ್ಲಿ 'ಬಾವಿಯಿಂದಾಗುವ ಕೆಲಸವೆಲ್ಲವೂ, ಎಲ್ಲ ಬಗೆಯಲ್ಲೂ ಸರೋವರದಿಂದಲೂ ಆಗುತ್ತದೆ' ಎಂದು ಹೇಳುತ್ತಿದ್ದರೆ, ಗೀತಾರಹಸ್ಯದಲ್ಲಿ 'ಎಲ್ಲ

ಕಡೆಯಲ್ಲೂ ಜಲರಾಶಿಯು ತುಂಬಿಕೊಂಡಿರಲು ಬಾವಿಯಿಂದ ಎಷ್ಟು ಪ್ರಯೋಜನ', ಅಂದರೆ ಸುತ್ತಲೂ ಜಲರಾಶಿ ತುಂಬಿರುವಾಗ ಬಾವಿಯಿಂದ ಯಾವ ಪ್ರಯೋಜನವೂ ಆಗುವುದಿಲ್ಲ ಎಂಬ ಅರ್ಥದಲ್ಲಿ ಹೇಳಿದ್ದಾರೆ. ಅಲ್ಲದೆ ಅನಾಸಕ್ತಿಯೋಗದಲ್ಲಿ ಬ್ರಹ್ಮಪಾರಾಯಣನಿಗೆ ಪ್ರಯೋಜನವು ದೊರೆಯುತ್ತದೆ ಎಂದು ಹೇಳಿದ್ದರೆ, ಗೀತಾರಹಸ್ಯದಲ್ಲಿ ನೇರವಾಗಿ ಬ್ರಾಹ್ಮಣನಿಗೇ ಪ್ರಯೋಜನ ದೊರೆಯುತ್ತದೆ ಎಂದು ಹೇಳಿದ್ದಾರೆ. ಇಲ್ಲಿ ಅನಾಸಕ್ತಿ ಯೋಗದ ಕೃತಿಕಾರರು ನೇರವಾಗಿ 'ಬ್ರಾಹ್ಮಣ' ಎಂದು ಅನುವಾದಿಸದೆ 'ಬ್ರಹ್ಮಪಾರಾಯಣನಿಗೆ' ಎಂದು ಮತ್ತೊಂದು ರೀತಿಯಲ್ಲಿ ಹೇಳಿದ್ದಾರೆ. ಬಹುಶಃ ಈ ಕೃತಿಕಾರರಿಗೆ ಭಾರತೀಯ ವರ್ಣಾಶ್ರಮ ವ್ಯವಸ್ಥೆಯ ಅರಿವು ಜಾಗೃತವಾಗಿದ್ದು ಅದನ್ನು ಪುಷ್ಟೀಕರಿಸುವ ವ್ಯಾಖ್ಯಾನವನ್ನು ನೇರವಾಗಿ ಮಾಡಲು ಬಯಸದೆ 'ಬ್ರಹ್ಮಪಾರಾಯಣ ಮಾಡುವವನಿಗೆ' ಎಂದು ವ್ಯಾಖ್ಯಾನಿಸಿರಬಹುದೆಂದು ಅನಿಸುತ್ತದೆ.

> ಕರ್ಮಜಂ ಬುದ್ಧಿಯುಕ್ತಾ ಹಿ ಫಲಂ ತ್ಯಕ್ತ್ವಾ ಮನೀಷಿಣಃ ।
> ಜನ್ಮ ಬಂಧವಿನಿರ್ಮುಕ್ತಾಃ ಪದಂಗಚ್ಛಂತ್ಯನಾಮಯಮ್ ॥(೨-೫೧)

ಈ ಶ್ಲೋಕಕ್ಕೆ ಗೀತಾರಹಸ್ಯದಲ್ಲಿ– 'ಸಮವಾದ ಬುದ್ಧಿಯ ಮೂಲಕ ಜ್ಞಾನಿಗಳು ಮುಕ್ತರಾದರೆ, ಕರ್ಮದ ಫಲವನ್ನು ತ್ಯಾಗ ಮಾಡಿ ಜನ್ಮದ ಬಂಧನದಿಂದ ವಿಮುಕ್ತರಾಗಿ ಪರಮೇಶ್ವರನ ದುಃಖರಹಿತವಾದ ಪದಕ್ಕೆ ಹೋಗಿ ಮುಟ್ಟುತ್ತಾರೆ' ಎಂದು ವ್ಯಾಖ್ಯಾನಿಸಿದ್ದಾರೆ. ಇದನ್ನೇ ಅನಾಸಕ್ತಿಯೋಗದಲ್ಲಿ 'ಸಮತ್ವ ಬುದ್ಧಿಯುಳ್ಳವರು ಕರ್ಮದಿಂದ ಹುಟ್ಟುವ ಫಲಗಳನ್ನು ತ್ಯಾಗ ಮಾಡಿ ಜನ್ಮಬಂಧನದಿಂದ ಮುಕ್ತರಾಗಿ, ನಿಷ್ಕಲಂಕ ಗತಿಯನ್ನು–ಮೋಕ್ಷವನ್ನು ಹೊಂದುತ್ತಾರೆ' ಎಂದು ವ್ಯಾಖ್ಯಾನಿಸಿದ್ದಾರೆ. ಗೀತಾರಹಸ್ಯದಲ್ಲಿ ಮೋಕ್ಷವನ್ನು ಹೊಂದುತ್ತಾರೆ ಎಂದು ಹೇಳಲು ಪರಮೇಶ್ವರನ ದುಃಖರಹಿತವಾದ ಪದಕ್ಕೆ ಹೋಗಿ ಮುಟ್ಟುತ್ತಾರೆ ಎಂದು ಶೈವ ಪರ ವ್ಯಾಖ್ಯಾನವನ್ನು ನೀಡಿದ್ದಾರೆ.

ಗೀತಾರಹಸ್ಯ ಕೃತಿಯಲ್ಲಿ ಪರಮೇಶ್ವರನ ಪರಮಪದವೆಂದು ಹೇಳಿ ಶೈವ ವ್ಯಾಖ್ಯಾನಗೊಳಿಸಿದರೆ, ಇಲ್ಲಿ ವಿಷ್ಣುವಿನ ಪರಮಪದವೆಂದು ಹೇಳಿ ವೈಷ್ಣವ ವ್ಯಾಖ್ಯಾನಕ್ಕೆ ಒಳಪಡಿಸಿದ್ದಾರೆ. ಇದರಿಂದ ಗೀತೆಯು ವಿವಿಧ ಮತ–ಪಂಥಗಳಿಗೆ ಅನುಸಾರವಾಗಿ ವಿವಿಧ ವ್ಯಾಖ್ಯಾನಗಳಿಗೆ ಒಳಪಟ್ಟಿದೆ ಎಂದು ತಿಳಿಯಬಹುದಾಗಿದೆ.

ಸಾಂಖ್ಯಯೋಗದ ೭೦ನೇ ಶ್ಲೋಕವನ್ನು ಗಮನಿಸುವುದಾದರೆ–

> ಆಪೂರ್ಯಮಾಣಮಚಲಪ್ರತಿಷ್ಠಂ ಸಮುದ್ರಮಾಪಃ ಪ್ರವಿಶಂತಿ ಯದ್ವತ್ ।
> ತದ್ವತ್ಕಾಮಾ ಯಂ ಪ್ರವಿಶಂತಿ ಸರ್ವೇ ಸ ಶಾಂತಿಮಾಪ್ನೋತಿ ನ ಕಾಮಕಾಮಿ ॥(೨-೭೦)

ಈ ಶ್ಲೋಕಕ್ಕೆ ಗೀತಾರಹಸ್ಯ ಕೃತಿಯಲ್ಲಿ– 'ನಿರಂತರವಾಗಿ ತುಂಬಲ್ಪಡುತ್ತಿದ್ದರೂ ಮೇರೆಯನ್ನು ಮೀರದಿರುವ ಸಮುದ್ರವನ್ನು ಜಲಸಮುಚ್ಚಯವು ಸೇರುತ್ತಿರುವಂತೆ, ಸಕಲವಾದ ವಿಷಯಗಳು ಯಾವ ಪುರುಷನಲ್ಲಿ ಸೇರುತ್ತವೆಯೋ ಅವನೇ ನಿಜವಾದ ಶಾಂತಿಯನ್ನು ಪಡೆಯುವನು.

ಹೊರತಾಗಿ ಕಾಮಗಳಲ್ಲಿ ಇಚ್ಛೆಯುಳ್ಳವನು ಶಾಂತಿಯನ್ನು ಪಡೆಯಲಾರ' ಎಂದು ವ್ಯಾಖ್ಯಾನವಿದೆ. ಇದೇ ಶ್ಲೋಕಕ್ಕೆ ಅನಾಸಕ್ತಿಯೋಗದಲ್ಲಿ– 'ನದಿಗಳು ಬಂದು ಬಿದ್ದು ತುಂಬುತ್ತಿದ್ದರೂ ಸಮುದ್ರ ಅಚಲವಾಗಿರುವಂತೆ, ಯಾವ ಮನುಷ್ಯನಲ್ಲಿ ಸಾಂಸಾರಿಕ ಭೋಗ ಶಾಂತವಾಗುತ್ತದೆಯೋ ಅವನೇ ಶಾಂತಿಯನ್ನು ಪಡೆಯುತ್ತಾನೆ, ಕಾಮಗಳಲ್ಲಿ ಇಚ್ಛೆಯುಳ್ಳವನು ಪಡೆಯಲಾರ' ಎಂದು ವ್ಯಾಖ್ಯಾನವಿದೆ.

ಗಾಂಧಿಯವರು ಗೀತೆಯ ಎರಡನೇ ಅಧ್ಯಾಯವಾದ ಸಾಂಖ್ಯಯೋಗಕ್ಕೆ ಹೆಚ್ಚು ಒತ್ತು ನೀಡಿದರೆ, ತಿಲಕರು ಗೀತೆಯ ಮೂರನೇ ಅಧ್ಯಾಯ ಕರ್ಮಯೋಗಕ್ಕೆ ಹೆಚ್ಚು ಒತ್ತು ನೀಡುತ್ತಾರೆ. "ಗೀತೆಯ ಕಡೆಯ ಅಧ್ಯಾಯದ ಕೊನೆಯವರೆಗೆ ಈ ಕರ್ಮ ಮಾರ್ಗವನ್ನೇ ಅಂದರೆ ಕರ್ಮಗಳನ್ನು ಮಾಡಲೇಬೇಕು, ಅವು ಮೋಕ್ಷಕ್ಕೆ ಅಡ್ಡಬರುವುದಿಲ್ಲ. ತಿರುಗಿ, ಅವನ್ನು ಮಾಡುವಾಗಲೇ ಮೋಕ್ಷವು ದೊರೆಯುತ್ತದೆ ಎಂಬುದನ್ನು ಬೇರೆಡೆಗೆ ಪ್ರಮಾಣಗಳನ್ನು ಕೊಟ್ಟು, ಶಂಕಾ ನಿವೃತ್ತಿಪೂರ್ವಕವಾಗಿ ಭಗವಂತನು ಸಮರ್ಥನ ಮಾಡಿರುವನು"[೪] ಎಂದು ತಿಲಕರು ತಿಳಿದಿದ್ದಾರೆ.

ಗೀತೆಯಲ್ಲಿ ಕರ್ಮಯೋಗಕ್ಕಿಂತ ಬುದ್ಧಿಯೇ ಶ್ರೇಷ್ಠ ಎಂದು ಹೇಳುವ ಮಾತೂ ಕೃಷ್ಣನ ಬಾಯಿಂದ ಬಂದರೂ ಅದಕ್ಕೆ ಪರಿಹಾರವೆಂಬಂತೆ ತಿಲಕರು ಕರ್ಮಯೋಗವೇ ಎಲ್ಲಕ್ಕಿಂತ ಮುಖ್ಯವೆಂದು ಈ ಅಧ್ಯಾಯದಲ್ಲಿ ತಿಳಿಸಲು ಪ್ರಯತ್ನಿಸಿದ್ದಾರೆ.

> ನ ಕರ್ಮಣಾಮನಾರಂಭಾನ್ನೈಷ್ಕರ್ಮ್ಯಂ ಪುರುಷೋಽಶ್ನುತೇ ।
> ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ॥ (೩.೪)

ಈ ಮೇಲಿನ ಶ್ಲೋಕದಲ್ಲಿ ಬರುವ 'ನೈಷ್ಕರ್ಮ' ಪದದ ಬಗೆಗೆ ತಿಲಕ್–ಗಾಂಧಿ ಈ ಇಬ್ಬರೂ ಚಿಂತಕರು ತಮ್ಮ ಟಿಪ್ಪಣಿಗಳಲ್ಲಿ ವಿವರವಾಗಿ ತಿಳಿಸಲು ಪ್ರಯತ್ನಿಸಿದ್ದಾರೆ.

'ನೈಷ್ಕರ್ಮ' ಪದವನ್ನು ತಿಲಕರು ಮೀಮಾಂಸಶಾಸ್ತ್ರಗಳ ಅರ್ಥಸಾಧ್ಯತೆಗಳ ವಿವರಣೆಗಳ ಹಿನ್ನೆಲೆಯಿಂದ ವಿಸ್ತೃತವಾಗಿ ವಿವರಿಸಿದ್ದಾರೆ. 'ನೈಷ್ಕರ್ಮ' ಎಂದರೆ ಕರ್ಮತ್ಯಾಗವೆಂದು ಅರ್ಥವಲ್ಲ, ಬದಲಿಗೆ ಕರ್ಮವನ್ನು ಮಾಡುವುದಕ್ಕೆ ಮುಂಚಿತವಾಗಿ ಅದರಲ್ಲಿಯ ದೋಷವನ್ನು ಇಲ್ಲದಂತೆ ಮಾಡುವ ಉಪಾಯವನ್ನು ಯೋಚಿಸುವುದು ಎಂದಿದ್ದಾರೆ. ಆ ಮೂಲಕ ವೇದಾಂತ ಶಾಸ್ತ್ರದ ಮತ್ತು ಬೇರೆ ಮತವಾದಿಗಳು ಅರ್ಥೈಸಿದ ಕರ್ಮತ್ಯಾಗವೆಂಬ ಅರ್ಥದ ಬದಲಿಗೆ ಬೇರೊಂದು ಅರ್ಥವನ್ನು ಅಂದರೆ ಜ್ಞಾನದ ಬಲದಿಂದ ಆಸಕ್ತಿಯನ್ನು ಅಳಿದು ಸದ್ವೆವ ಕರ್ಮಗಳನ್ನು ಮಾಡುತ್ತಲಿರುವುದೇ ಮಾರ್ಗವೆಂದು ತಿಳಿಸಿದ್ದಾರೆ.

ಗಾಂಧಿಯವರೂ ಕೂಡ ಇದಕ್ಕಿಂತ ಭಿನ್ನವಾಗಿ ಇದನ್ನು ಪರಿಭಾವಿಸಿರುವಂತಿದೆ. ಅವರು 'ನೈಷ್ಕರ್ಮ' ಎನ್ನುವುದಕ್ಕೆ ಮನಸ್ಸಿನಿಂದ, ವಾಕ್ಕಿನಿಂದ, ಶರೀರದಿಂದ ಕರ್ಮ ಮಾಡದಿರುವುದು

ಎಂದು ಹೇಳಿದ್ದಾರೆ. ಅಂದರೆ ಗಾಂಧಿಯವರು ನೈಷ್ಕರ್ಮವನ್ನು ಕರ್ಮದ ಕೇವಲ 'ಬಾಹ್ಯ ತ್ಯಾಗ'ದಿಂದ ಮೋಕ್ಷವನ್ನು ಹೊಂದಲಾಗುವುದಿಲ್ಲ.

ಏಕೆಂದರೆ ಬಾಹ್ಯದಲ್ಲಿ ಕರ್ಮವನ್ನು ಮಾಡುತ್ತಲೇ ಇರಬೇಕು. ಅದನ್ನು ಯಾರೂ ನಿಲ್ಲಿಸಲು ಸಾಧ್ಯವಿಲ್ಲ. ಬಾಹ್ಯದಲ್ಲಿ ಕರ್ಮವನ್ನು ಮಾಡದೇ ಇದ್ದರೆ ನೈಷ್ಕರ್ಮದ ಅನುಭವವೇ ಆಗುವುದಿಲ್ಲ. ಹಾಗಾಗಿ ನೈಷ್ಕರ್ಮವನ್ನು ಅಂತರಂಗದಲ್ಲಿ ಉದ್ಭವಿಸುವ ವಿಷಯಾಸಕ್ತಿಗಳ ವಿಷಯದಲ್ಲಿ ಅನುಸರಿಸಬೇಕು ಎಂಬ ಸಂದೇಶವನ್ನು ಅವರು ಈ ಟಿಪ್ಪಣಿಗಳ ಮೂಲಕ ಮನಗಾಣಿಸಲು ಪ್ರಯತ್ನಿಸಿದ್ದಾರೆ. ಇಲ್ಲಿ ಗಾಂಧಿಯವರು ನೈಷ್ಕರ್ಮದ ನಿಜಾರ್ಥವನ್ನು ಅಂತರಂಗ ಮಾರ್ಗದಲ್ಲಿ ತಿಳಿಯಲು ಪ್ರಯತ್ನಿಸಿದ್ದಾರೆ. ತಿಲಕರೂ ಕೂಡ ಹೀಗೆ ಪರಿಭಾವಿಸಿದ್ದಾರಾದರೂ ಕರ್ಮದಲ್ಲಿ ಫಲಾಪೇಕ್ಷೆಯನ್ನು ಇಟ್ಟುಕೊಳ್ಳದಿರುವುದನ್ನು ನೈಷ್ಕರ್ಮದ ಅರ್ಥವಾಗಿ ಹೆಚ್ಚು ಬಳಸಿದ್ದಾರೆ.

ಮುಂದಿನ ಈ ಮೂರು ಮುಖ್ಯ ಶ್ಲೋಕಗಳ ಅನುವಾದಗಳು ಗಾಂಧಿ–ತಿಲಕ್ ಅವರ ಅನುವಾದದ ಮನೋಧರ್ಮಗಳನ್ನು ಅರಿಯಲು ಸಹಾಯಕವಾಗಿವೆ. ಅವುಗಳಲ್ಲಿ ಮೊದಲಿಗೆ

> ಯಸ್ತ್ವಿಂದ್ರಿಯಾಣಿ ಮನಸಾ ನಿಯಮ್ಯಾರಭತೇಽರ್ಜುನ ।
> ಕರ್ಮೇಂದ್ರಿಯೈಃ ಕರ್ಮಯೋಗಮಸಕ್ತಸ್ಸ ವಿಶಿಷ್ಯತೇ ॥ (೩–೭)

'ಎಲೈ ಅರ್ಜುನ, ಯಾವನು ಇಂದ್ರಿಯಗಳನ್ನು ಮನಸ್ಸಿನಿಂದ ನಿಗ್ರಹಿಸಿ ಆಸಕ್ತನಾಗಿ ಕರ್ಮೇಂದ್ರಿಯಗಳ ದ್ವಾರಾ ಕರ್ಮಯೋಗವನ್ನು ಆರಂಭಿಸುತ್ತಾನೋ–ಅವನು ಮಿಥ್ಯಾಚಾರನನ್ನು ಅತಿಶಯಿಸುತ್ತಾನೆ' ಎಂಬುದು ಈ ಶ್ಲೋಕದ ಅರ್ಥವಾಗಿದೆ. ಮೂರನೇ ಅಧ್ಯಾಯದ ಏಳನೇ ಶ್ಲೋಕವಾದ ಇದನ್ನು ಗಾಂಧಿ–ತಿಲಕ್ ಇಬ್ಬರು ಗ್ರಹಿಸಿರುವ ಕ್ರಮ ವಿಭಿನ್ನವಾದುದಾಗಿದೆ. ಈ ಶ್ಲೋಕದಲ್ಲಿ ಕರ್ಮಯೋಗಕ್ಕೆ ಇಬ್ಬರೂ ಭಿನ್ನ ರೀತಿಯಲ್ಲಿ ವ್ಯಾಖ್ಯಾನವನ್ನು ನೀಡಿದ್ದಾರೆ. ತಿಲಕರು 'ನಿಷ್ಕಾಮ ಬುದ್ಧಿಯಿಂದ ಕರ್ಮ ಮಾಡುವ ಯೋಗಕ್ಕೆ ಕರ್ಮಯೋಗ'ವೆಂದು ಹೇಳಿದರೆ; ಗಾಂಧಿ ಅವರು ಇದಕ್ಕೆ ಭಿನ್ನವಾಗಿ, 'ಯಾವುದರ ಮೂಲಕ ಆತ್ಮ ಶರೀರಬಂಧನದಿಂದ ಮುಕ್ತವಾಗುವ ಯೋಗ ಸಾಧಿಸುತ್ತದೆಯೋ ಅದೇ ಕರ್ಮಯೋಗ ಎಂದಿದ್ದಾರೆ. ಇಲ್ಲಿ ಗಾಂಧಿ ಅಂತರಂಗ–ಬಹಿರಂಗಗಳ ಸಮ್ಮಿಲನವನ್ನು ಸಾಧಿಸಿದ್ದಾರೆ. ಗಾಂಧಿ ಅವರ ಗ್ರಹಿಕೆಯಲ್ಲಿ ವಿಷಯಾಸಕ್ತಿಗೆ ಒಳಗಾಗದೆ ಆತ್ಮದ ಶೋಭೆಯನ್ನು ಹೆಚ್ಚಿಸಿಕೊಳ್ಳುವುದು ನಿಜವಾದ ಕರ್ಮಮಾರ್ಗವಾಗಿದೆ.

ಮುಂದಿನ ಶ್ಲೋಕ –

> ನಿಯತಂ ಕುರು ಕರ್ಮತ್ವಂ ಧರ್ಮ ಜ್ಯಾಯೋ ಹ್ಯಾ ಕರ್ಮಣಃ
> ಶರೀರಯಾತ್ರಾಪಿ ಚ ತೇ ನ ಪ್ರಸಿಧ್ಯೇಯ ಕರ್ಮಣಃ ॥ (೩–೮)

'ನೀನು ನಿತ್ಯ ಕರ್ಮವನ್ನು ಮಾಡು; ಏಕೆಂದರೆ ಅಕರ್ಮಕ್ಕಿಂತ ಕರ್ಮವು ಉತ್ತಮವು; ಕರ್ಮವನ್ನು ಮಾಡದೇ ಇರುವುದರಿಂದ ನಿನಗೆ ಜೀವನಯಾತ್ರೆಯೂ ಕೂಡ ಸಾಧ್ಯವಾಗಲಾರದು'.

ಇದು ಗೊಂದಲಕ್ಕೊಳಗಾದ ಅರ್ಜುನನಿಗೆ ಯುದ್ಧದಿಂದ ವಿಮುಖನಾಗದೆ ತನ್ನ ಧರ್ಮವಾದ ಕ್ಷತ್ರಿಯ ಧರ್ಮವನ್ನು ಆಚರಿಸಬೇಕು ಎಂದು ಪ್ರೇರೇಪಿಸುವ ಶ್ಲೋಕವಾಗಿದೆ. ಈ ಶ್ಲೋಕದಲ್ಲಿ ಬರುವ 'ನಿಯತ' ಎಂಬ ಶಬ್ದಾರ್ಥದ ವಿವೇಚನೆಯನ್ನು ತಿಲಕ್ ಅವರು ಬಹಳ ಗಂಭೀರವಾಗಿ ಪರಿಗಣಿಸಿರುವುದನ್ನು ಕಾಣಬಹುದಾಗಿದೆ. ನಿಯಮಿತವಾದ ಕರ್ಮವೆಂದರೆ ಯಜ್ಞ-ಯಾಗಾದಿ ಕರ್ಮವೆಂದೂ, ಯಜ್ಞವೆಂದರೆ "ಸೃಷ್ಟಿಯ ನಿರ್ಮಾಣವನ್ನು ಮಾಡಿ ಅದರ ಕ್ರಮವು ಸುಯಂತ್ರಿತವಾಗಿ ನಡೆಯಬೇಕಾಗಿ ಲೋಕಸಂಗ್ರಹಾರ್ಥವಾಗಿ ಪ್ರಜೆಗಳಿಗೆಲ್ಲ ಚಾತುವರ್ಣ್ಯವಿಹಿತವಾದ ಕರ್ಮಗಳನ್ನು ಬ್ರಹ್ಮನು ವಿಧಿಸಿದರು. ಅಂಥ ಕರ್ಮಗಳೆಲ್ಲ ಯಜ್ಞವೆಂದೆಣಿಸುತ್ತವೆ"[೫] ಎಂದಿದ್ದಾರೆ.

ಇಲ್ಲಿ ತಿಲಕ್ ಅವರಿಗೆ ಕರ್ಮವೆಂದರೆ ಚಾತುವರ್ಣ್ಯದ ಮೂಲಕ ಅನುಸರಿಸಲಾಗುವ ಕರ್ಮಸಿದ್ಧಾಂತ ಪದ್ಧತಿಯೇ ಆಗಿದೆ.

ಆದರೆ ಗಾಂಧಿಯವರು ಇದನ್ನು ಚಾತುರ್ವರ್ಣ್ಯ ಕರ್ಮಸಿದ್ಧಾಂತಕ್ಕಿಂತ ಬೇರೆ ರೀತಿಯಲ್ಲಿ ತಿಳಿಯಲು ಪ್ರಯತ್ನಿಸಿದ್ದಾರೆ. ಅವರು ಅಧ್ಯಾತ್ಮದ ಭಾಗವಾಗಿ ಕರ್ಮಸಿದ್ಧಾಂತವನ್ನು ಆ ಮೂಲಕ ಇಡೀ ಗೀತೆಯನ್ನು ಗ್ರಹಿಸಿದ್ದಾರೆ. ಈ ಮೇಲಿನ ಶ್ಲೋಕಕ್ಕೆ ಅವರು ಟಿಪ್ಪಣಿ ಬರೆಯುತ್ತಾ, ಮನಸ್ಸಿನಿಂದ ಇಂದ್ರಿಯಗಳನ್ನು ಸಂಯಮದಲ್ಲಿಟ್ಟು ಅನಾಸಕ್ತನಾಗಿ ನಿಯತಕರ್ಮಗಳನ್ನು ಅಥವಾ ಇಂದ್ರಿಯಗಳನ್ನು ಸ್ವಾಧೀನದಲ್ಲಿಟ್ಟುಕೊಂಡು ಮಾಡುವ ಕೆಲಸಗಳನ್ನು ಈ ಶ್ಲೋಕದಲ್ಲಿ ಹೇಳಿದೆ ಎಂದಿದ್ದಾರೆ. ಇದು ಗಾಂಧಿ ಅವರ ಪ್ರಕಾರ ಅಂತರಂಗದಲ್ಲಿ ನಡೆಯುವ ಮನೋವ್ಯಾಪಾರವೇ ಆಗಿದೆ.

ಯಜ್ಞಾರ್ಥಾತ್ ಕರ್ಮಣೋನ್ಯತ್ರ ಲೋಕೋಯಂ ಕರ್ಮ ಬಂಧನಃ ।
ತದರ್ಥಂ ಕರ್ಮ ಕೌಂತೇಯ ಮುಕ್ತ ಸಂಗಸ್ಸಮಂಚರ ॥ (೩-೯)

'ಯಜ್ಞಕ್ಕಾಗಿ ಮಾಡಿದ ಕರ್ಮವನ್ನು ಬಿಟ್ಟರೆ ಬೇರೆ ಕಡೆಯಲ್ಲಿ ಈ ಜನರು ಕರ್ಮದಿಂದ ಬಂಧಿಸಲ್ಪಡುತ್ತಾರೆ. ಆದುದರಿಂದ ಎಲೈ ಅರ್ಜುನ, ಅದಕ್ಕೋಸ್ಕರ ಆಸಕ್ತಿಯಿಂದ ಮುಕ್ತನಾಗಿ ಕರ್ಮವನ್ನು ಸರಿಯಾಗಿ ಮಾಡು.'

ಈ ಮೇಲಿನ ಶ್ಲೋಕಕ್ಕೆ ತಿಲಕರು ಮೀಮಾಂಸಕರ ಸಿದ್ಧಾಂತದ ದೋಷವನ್ನು ನಿವಾರಿಸುವ ಸಲುವಾಗಿ ಸುದೀರ್ಘ ವಿವರಣೆಯನ್ನು ನೀಡಿದ್ದಾರೆ. ಯಜ್ಞಾರ್ಥವಾಗಿ ಮಾಡುವ ಕರ್ಮಗಳನ್ನು ಫಲಾಪೇಕ್ಷೆಯಿಲ್ಲದೆ ಮಾಡಬೇಕು, ಯಜ್ಞ ಚಕ್ರವನ್ನು ಬಿಟ್ಟರೆ ಜಗತ್ತಿನ ವ್ಯವಹಾರಗಳು ನಡೆಯಲಾರವು... ಜಗತ್ತಿನ ಧಾರಣಪೋಷಣಕ್ಕಾಗಿ ಈ ಚಕ್ರವನ್ನು ಎಲ್ಲಕ್ಕೂ ಮೊದಲೇ ಬ್ರಹ್ಮದೇವರು ಕಟ್ಟಿಬಿಟ್ಟನು ಎಂಬಿತ್ಯಾದಿ ವಿವರಣೆಯನ್ನು ನೀಡಿದ್ದಾರೆ. ಆದರೆ ಗಾಂಧಿ ಅವರು ಯಜ್ಞವೆಂದರೆ ಪರೋಪಕಾರಾರ್ಥ, ಈಶ್ವರಾರ್ಥ ಮಾಡಿದ ಕರ್ಮ ಎಂದಷ್ಟೇ ಸರಳವಾಗಿ ವಿವರಿಸಿದ್ದಾರೆ. ಫಲಾಪೇಕ್ಷೆಯಿಲ್ಲದೆ ಮಾಡುವ ಕಾರ್ಯ ಪರೋಪಕಾರವಾಗಿರಬೇಕು ಎಂದಷ್ಟೇ ಹೇಳಿರುವ ಗಾಂಧಿಯವರ ಮಾತು ತಿಲಕರ ಸುದೀರ್ಘ ಕ್ಲಿಷ್ಟ ಅರ್ಥ ವಿವರಣೆಗಿಂತ ಬೇರೆಯಾದುದಾಗಿದೆ.

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಂ ॥ (೩-೩೫)

'ಗುಣವಿಲ್ಲದ ಸ್ವಧರ್ಮವು ಚೆನ್ನಾಗಿ ಅನುಷ್ಠಾನ ಮಾಡಿದ ಪರಧರ್ಮಕ್ಕಿಂತಲೂ ಶ್ರೇಯಸ್ಕರವಾದದ್ದು ಸ್ವಧರ್ಮದಲ್ಲಿ ಮರಣವೂ ಒಳ್ಳೆಯದು; ಪರಧರ್ಮವು ಭಯಂಕರವಾದದ್ದು.' ಈ ಶ್ಲೋಕದಲ್ಲಿ ಬರುವ 'ಸ್ವಧರ್ಮ' ಎಂಬುದನ್ನು ತಿಲಕರು ಚಾತುವರ್ಣ್ಯದ ಮೇರೆಗೆ ಪ್ರತಿಯೊಬ್ಬನಿಗೆ ಸ್ಮೃತಿಕಾರರು ಶಾಸ್ತ್ರಾನುಸಾರವಾಗಿ ವಿಧಿಸಿದ ಉದ್ಯೋಗವೆಂಬುದಾಗಿ ತಿಳಿದಿದ್ದಾರೆ. ಇದನ್ನು "ಬ್ರಾಹ್ಮಣ ಕ್ಷತ್ರಿಯಾದಿಗಳು ಜ್ಞಾನಿಗಳಾದರೂ ಅವರು ತಮತಮಗೆ ಉಚಿತವಾದ ಉದ್ಯೋಗಗಳನ್ನು ಮಾಡುವುದರಿಂದಲೇ ಸ್ವಹಿತವೂ ಸಮಾಜೋನ್ನತಿಯೂ ಆಗುತ್ತಿರುವುದರಿಂದ ಇಂಥ ವ್ಯವಸ್ಥೆಯನ್ನು ಬೇಕು ಬೇಕಾದ ಕಾಲಕ್ಕೆ ಬೇಕು ಬೇಕಾದಂತೆ ಹೆಚ್ಚು ಕಡಿಮೆ ಮಾಡುವುದು ಸರಿಯಲ್ಲವೆಂದು ಭಗವಂತನು ಹೇಳಿರುವನು"[೬] ಎಂಬ ಗೀತೆಯ ವ್ಯಾಖ್ಯಾನವನ್ನು ನೀಡಿ ಎಂತಹ ಪರಿಸ್ಥಿತಿ ಬಂದರೂ ಸ್ವಧರ್ಮ ಪರಿಪಾಲನೆಯನ್ನು ಬಿಡಬಾರದೆಂದು ಒತ್ತಿ ಹೇಳಿದ್ದಾರೆ. ಇವರ ರಾಷ್ಟ್ರೀಯವಾದದ ಮುಖ್ಯ ಅಂಶಗಳಲ್ಲಿ 'ಸ್ವಧರ್ಮ'ವೂ ಮುಖ್ಯವಾದುದಾಗಿದೆ. ಈ ಶ್ಲೋಕಕ್ಕೆ ಗಾಂಧಿ ಅವರು ತಿಲಕರಂತೆಯೇ ವ್ಯಾಖ್ಯಾನಿಸಿದ್ದು, 'ಸ್ವಧರ್ಮ'ದ ಆಚರಣೆ ಮಾಡದಿರುವುದರಿಂದ ಸಮಾಜಕ್ಕೆ ಹಾನಿಯಾಗುತ್ತದೆ ಎಂಬ ಕಾರಣವನ್ನು ತಮ್ಮ ಟಿಪ್ಪಣಿಯಲ್ಲಿ ಮುನ್ನೆಲೆಗೆ ತರಲು ಪ್ರಯತ್ನಪಟ್ಟಿದ್ದಾರೆ. ಅವರು "ಸಮಾಜದಲ್ಲಿ ಕಸವನ್ನು ಗುಡಿಸುವ ಧರ್ಮ ಒಬ್ಬನದಾಗಿರಬಹುದು; ಗುಮಾಸ್ತೆಗಿರಿಯು ಧರ್ಮ ಮತ್ತೊಬ್ಬನದು. ಗುಮಾಸ್ತೆ ಉತ್ತಮನೆನಿಸಿಕೊಳ್ಳಲೂಬಹುದು. ಆದರೂ ಕಸ ಗುಡಿಸುವವನು ತನ್ನ ಧರ್ಮವನ್ನು ಬಿಡುವುದರಿಂದ ಧರ್ಮಭ್ರಷ್ಟನಾಗುವನಲ್ಲದೆ, ಸಮಾಜಕ್ಕೂ ಹಾನಿಯಾಗುತ್ತದೆ. ಅಲ್ಲಿ ಎಲ್ಲಾ ಉದ್ಯೋಗಕ್ಕೂ ಒಂದೇ ಬೆಲೆ. ಇಬ್ಬರೂ ಈಶ್ವರಾರ್ಪಣಬುದ್ಧಿಯಿಂದ ತಮ್ಮ ತಮ್ಮ ಕರ್ತವ್ಯ ಮಾಡಿದರೆ, ಇಬ್ಬರೂ ಮೋಕ್ಷಕ್ಕೆ ಸಮಾನಾಧಿಕಾರಿಗಳೇ"[೭] ಎಂದು ಹೇಳಿದ್ದಾರೆ. ಇಲ್ಲಿ ಕಸ ಗುಡಿಸುವವನು ತನ್ನ ಚಾತುರ್ವರ್ಣ್ಯಕ್ಕನುಗುಣವಾಗಿ ಬಂದ ಸ್ವಧರ್ಮವನ್ನು ಆಚರಿಸುವುದನ್ನು ಬಿಡುವುದರಿಂದ ಧರ್ಮಭ್ರಷ್ಟನಾಗುವಲ್ಲದೆ ಸಮಾಜಕ್ಕೆ ಹಾನಿಯಾಗುತ್ತದೆ ಎಂದು ಹೇಳುವುದೂ ಕೂಡ ಗೀತೆಯನ್ನು ಆಧ್ಯಾತ್ಮಿಕ ದೃಷ್ಟಿಯ ಹಿನ್ನೆಲೆಯಿಂದ ನೋಡುವ ಗಾಂಧಿ ಚಾತುರ್ವರ್ಣ್ಯದ ಸಮರ್ಥನೆಯನ್ನು ಮಾಡುತ್ತಿದ್ದಾರೆಯೇ? ಎಂದು ಸಂದೇಹ ಮೂಡುತ್ತದೆ.

ಅನಾಸಕ್ತಿಯೋಗದ ಈ ವ್ಯಾಖ್ಯಾನವನ್ನು ಗಮನಿಸಿದರೆ ಇಲ್ಲಿ 'ಯಾವ ಮನುಷ್ಯನಲ್ಲಿ ಸಾಂಸಾರಿಕ ಭೋಗ ಶಾಂತವಾಗುತ್ತದೆಯೋ ಅವನೇ ಶಾಂತಿಯನ್ನು ಪಡೆಯುತ್ತಾನೆ' ಎಂಬ ಮಾತಿದೆ. ಈ ರೀತಿಯ ಅರ್ಥದ ವ್ಯಾಖ್ಯಾನ ಗೀತಾರಹಸ್ಯ ಕೃತಿಯಲ್ಲಿ ಇಲ್ಲ. ಶಾಂತಿಯನ್ನು ಕೆಡಿಸದೆ ಸಕಲ ವಿಷಯಗಳೂ ಯಾವ ಮನುಷ್ಯನನ್ನು ಸೇರುತ್ತವೆಯೋ ಆ ಮನುಷ್ಯಶಾಂತಿ ಪಡೆಯುತ್ತಾನೆ ಎಂಬ ಅರ್ಥವಿದೆಯಷ್ಟೆ. ಬಹುಶಃ ಇದು ಸಾಂಸಾರಿಕ ಭೋಗದಿಂದ ದೂರವಾದ ಗಾಂಧಿಯವರ ವೈಯಕ್ತಿಕ ಬದುಕಿನ ಆಚರಣೆಯ ಅಥವಾ ಅನುಭವದ ಸಾರದಿಂದ ಉದಯಿಸಿದ ಮಾತುಗಳಿರಬಹುದೇನೋ ಎಂದು ಅನಿಸುತ್ತದೆ.

೫.೩. ಮಠ-ಮಾನ್ಯಗಳ ಅನುವಾದ ಕೃತಿ ಪರಿಶೀಲನೆ

ಗೀತೆಯನ್ನು ಹಲವಾರು ವಿದ್ವಾಂಸರು ವ್ಯಾಖ್ಯಾನಿಸಿದಂತೆ, ಹಲವಾರು ಮಠಮಾನ್ಯಗಳ ಅನುವಾದ-ವ್ಯಾಖ್ಯಾನ ಕೃತಿಗಳನ್ನು ಹೊರತಂದಿದ್ದಾರೆ. ತಮ್ಮತಮ್ಮ ಮತಸಿದ್ಧಾಂತಗಳಿಗೆ ಅನುಗುಣವಾಗಿ ಸ್ವ-ಆಸಕ್ತಿಯಿಂದ ಹಿಂದೂಧರ್ಮದ ಪ್ರತಿನಿಧಿ ಗ್ರಂಥವಾಗಿ ಗೀತೆಯನ್ನು ವ್ಯಾಖ್ಯಾನಿಸಿರುವುದನ್ನು ಕಾಣಬಹುದಾಗಿದೆ. ಆ ವ್ಯಾಖ್ಯಾನಗಳಲ್ಲಿ ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘ(ISKCON), ಶ್ರೀ ರಾಮಕೃಷ್ಣ ಮಠ, ಶ್ರೀ ಶಿವಾನಂದ ಆಶ್ರಮ ಮುಂತಾದವುಗಳು ಮುಖ್ಯವಾಗಿವೆ. ಈ ಮಠಗಳು ಗೀತಾವ್ಯಾಖ್ಯಾನ ಕೃತಿಗಳನ್ನು ನಿರಂತರವಾಗಿ ಪ್ರಕಟಿಸುತ್ತಾ ಪ್ರಸಾರ ಮಾಡುತ್ತಾ ಬಂದಿವೆ.

ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘ(ISKCON) ಪ್ರಕಟಿಸಿರುವ 'ಭಗವದ್ಗೀತಾ ಯಥಾರೂಪ', ಶ್ರೀ ರಾಮಕೃಷ್ಣಮಠ ಪ್ರಕಟಿಸಿರುವ 'ಶ್ರೀಮದ್ಭಗವದ್ಗೀತಾ' ಮತ್ತು ಶಿವಾನಂದಾಶ್ರಮದವರು ಪ್ರಕಟಿಸಿರುವ 'ಗೀತಾ ತಾತ್ಪರ್ಯ ಪ್ರದೀಪ' ಕೃತಿಗಳ ವ್ಯಾಖ್ಯಾನಗಳ ಭಿನ್ನತೆಯನ್ನು ಇಲ್ಲಿ ಗಮನಿಸಬಹುದಾಗಿದೆ.

ಭಕ್ತಿವೇದಾಂತ ಸ್ವಾಮಿ ಪ್ರಭುಪಾದ ಅವರ ಅನುವಾದ ಮತ್ತು ಭಾವಾರ್ಥವನ್ನೊಳಗೊಂಡಿರುವ ಕೃತಿಯಾದ 'ಭಗವದ್ಗೀತಾ ಯಥಾರೂಪ' ಕೃತಿಯು ಜಗತ್ತಿನ ಸುಮಾರು ೨೯ ಭಾಷೆಗಳಿಗೆ ಅನುವಾದಗೊಂಡಿದೆ. ಇದನ್ನು ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘ(ISKCON)ವು ಪ್ರಕಟಿಸಿ ಮಾರಾಟ ಮಾಡುತ್ತಿದೆ.

ಈ ಕೃತಿಯಲ್ಲಿ ಕೃಷ್ಣನ್ನು ಪರಮ ದೇವೋತ್ತಮ ಪುರುಷನನ್ನಾಗಿ ಕಾಣಲಾಗಿದೆ. ಈ ಕೃತಿಯೇ ತಿಳಿಸುವಂತೆ ಸಾಮಾನ್ಯವಾಗಿ ಭಗವದ್ಗೀತೆಯನ್ನು ಇಂಗ್ಲಿಷ್‌ಗೆ ಅನುವಾದಿಸುವವರು ಕೇವಲ ತಮ್ಮ ಕಲ್ಪನಾವಿಲಾಸಕ್ಕೆ ಅಥವಾ ತಮ್ಮದೇ ಆದ ದಾರ್ಶನಿಕ ದೃಷ್ಟಿಗೆ ಅವಕಾಶ ಮಾಡಿಕೊಳ್ಳುವ ಉದ್ದೇಶದಿಂದ ಪರಮ ಪುರುಷ ಶ್ರೀಕೃಷ್ಣನನ್ನೇ ಉಪೇಕ್ಷಿಸುತ್ತಾರೆ. ಮಹಾಭಾರತದ ಇತಿಹಾಸವನ್ನು ಒಂದು ಸಾಮಾನ್ಯ ಕಟ್ಟುಕಥೆಯಂತೆ ಪರಿಗಣಿಸುತ್ತಾರೆ ಮತ್ತು ಯಾವುದೋ ಒಬ್ಬ ಅನಾಮಿಕ ಮೇಧಾವಿಯ ವಿಚಾರಾಭಿವ್ಯಕ್ತಿಗೆ ಶ್ರೀಕೃಷ್ಣನು ಒಂದು ಕಾವವ್ಯಸಾಧನ ಮಾತ್ರ ಆಗುತ್ತಾನೆ. ಹೆಚ್ಚು ಹೆಚ್ಚೆಂದರೆ ಕೃಷ್ಣನು ಒಬ್ಬ ಗೌಣ ಐತಿಹಾಸಿಕ ವ್ಯಕ್ತಿಯಾಗುತ್ತಾನೆ. ಆದರೆ ಭಗವದ್ಗೀತೆಯೇ ತಿಳಿಸುವಂತೆ ಪರಮ ಪುರುಷ ಶ್ರೀಕೃಷ್ಣನೇ ಗೀತೆಯ ಗುರಿ ಮತ್ತು ಸಾರವಸ್ತುವಾಗಿದ್ದಾನೆ. ಆದ್ದರಿಂದ ಶ್ರೀಕೃಷ್ಣನನ್ನು ವಿಜೃಂಭಿಸುವ, ಪ್ರಧಾನಪಾತ್ರವಾಗಿ ಚಿತ್ರಿಸುವ ಸಲುವಾಗಿ ಈ ಭಗವದ್ಗೀತೆಯನ್ನು ರಚಿಸಲಾಗಿದೆ. ಈ ಅನುವಾದದ ವ್ಯಾಖ್ಯಾನದ ಮುಖ್ಯ ಉದ್ದೇಶವೇ ಓದುಗನನ್ನು ಶ್ರೀಕೃಷ್ಣನಲ್ಲಿಗೆ ಕೊಂಡೊಯ್ಯುವುದೇ ಆಗಿದೆ.

'ಕೃಷ್ಣನ ಇಚ್ಛೆಯನ್ನು ಮುಂದಿಡುವುದೇ ನಮ್ಮ ಕೆಲಸವಾಗಿದೆ. ಲೌಕಿಕ ರಾಜಕಾರಣಿಗಳ, ತಾರ್ಕಿಕರ, ದಾರ್ಶನಿಕರ ಅಥವಾ ವಿಜ್ಞಾನಿಗಳ ದೃಷ್ಟಿಯಲ್ಲಿ ನಾವು ಮುಂದಿಡುವುದಿಲ್ಲ. ಅವರು

ಇತರ ವಿಷಯಗಳಲ್ಲಿ ಎಷ್ಟೇ ಜ್ಞಾನ ಹೊಂದಿದ್ದರೂ ಕೃಷ್ಣನ ಬಗ್ಗೆ ಅವರಿಗೆ ಎಷ್ಟೂ ಜ್ಞಾನವಿಲ್ಲ' ಎಂಬ ಕೃತಿಕಾರರ ಹೇಳಿಕೆಯನ್ನೇ ಗಮನಿಸಿದರೆ ಭಗವದ್ಗೀತೆಯನ್ನು ಆಧ್ಯಾತ್ಮಿಕ ಅಥವಾ ಭಕ್ತಿಯ, ಧಾರ್ಮಿಕ ಆಚರಣೆಗೆ ಒಳಪಡಿಸುವ ಉದ್ದೇಶವನ್ನು ಸ್ಪಷ್ಟವಾಗಿ ಅರಿಯಬಹುದಾಗಿದೆ.

ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘ(ISKCON) ಅವರು ಪ್ರಕಟಿಸಿರುವ 'ಭಗವದ್ಗೀತಾ ಯಥಾರೂಪ' ಹಾಗೂ ಸ್ವಾಮಿ ಆದಿದೇವಾನಂದ ಅವರ 'ಶ್ರೀಮದ್ಭವದ್ಗೀತಾ' ಕೃತಿಯ ಶ್ಲೋಕಗಳ ಅನುವಾದಗಳನ್ನು ಇಲ್ಲಿ ಗಮನಿಸಿದಾಗ ಎರಡು ಭಿನ್ನ ಅನುವಾದಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಅಷ್ಟೇ ಅಲ್ಲದೆ ಇಬ್ಬರು ಭಿನ್ನ ವ್ಯಾಖ್ಯಾನಕಾರರು ಗೀತೆಯನ್ನು ಅರ್ಥೈಸಿಕೊಂಡಿರುವ ಮತ್ತು ಜನತೆಗೆ ಅರ್ಥೈಸುತ್ತಿರುವ ಮಾದರಿಗಳನ್ನು ತಿಳಿಯಬಹುದಾಗಿದೆ. ಸ್ವಾಮಿ ಆದಿದೇವಾನಂದರ ವ್ಯಾಖ್ಯಾನದಲ್ಲಿ ಅವರು ಅತಿರಂಜಕವಾದ ವರ್ಣನಾಪದಗಳಿಂದ ಕೃಷ್ಣನನ್ನು ಸಂಬೋಧಿಸಿದ್ದಾರೆ.

ಕೊನೆ ಟಿಪ್ಪಣಿಗಳು

೧. ಬಾಲಗಂಗಾಧರ ತಿಲಕ್: ಗೀತಾರಹಸ್ಯ, ಪುಟ ೨೦.

೨. ರಾಮಚಂದ್ರನ್ ಸಿ.ಎನ್: ಆಖ್ಯಾನ-ವ್ಯಾಖ್ಯಾನ, ಪುಟ ೯.

೩. ಭಾರತಿ ಸಂಪಂಗಿರಾಮ: ಶ್ರೀಮದ್ಭಗವದ್ಗೀತಾ, ೨ನೇ ಅಧ್ಯಾಯದ ೧೧ನೇ ಶ್ಲೋಕದ ವ್ಯಾಖ್ಯಾನ, ಪುಟ ೩೪.

೪. ಬಾಲಗಂಗಾಧರ ತಿಲಕ್: ಗೀತಾರಹಸ್ಯ, ಪುಟ ೫೬೫.

೫. ಅದೇ, ೮೨೦.

೬. ಅದೇ, ೮೩೮.

೭. ಗಾಂಧಿ ಮೋ.ಕ.: ಗೀತಾಮಾತೆ, ಪುಟ ೫೭.

❖❖❖

ಅಧ್ಯಾಯ: ಆರು

ವಸಾಹತು ಸಂದರ್ಭದ ಕನ್ನಡ ಸಾಹಿತ್ಯ: ಗೀತೆಯ ಪ್ರಭಾವ, ಪ್ರೇರಣೆ, ಅನುಸಂಧಾನ

ಅಧ್ಯಾಯ: ಆರು

ವಸಾಹತು ಸಂದರ್ಭದ ಕನ್ನಡ ಸಾಹಿತ್ಯ: ಗೀತೆಯ ಪ್ರಭಾವ, ಪ್ರೇರಣೆ, ಅನುಸಂಧಾನ

೬.೧. ಗೀತೆ ಮತ್ತು ಕುವೆಂಪು

ಕುವೆಂಪು ಅವರು ನಿಸರ್ಗದೊಂದಿಗೆ ಹೆಚ್ಚು ಅನುಸಂಧಾನ ನಡೆಸಿದಂತೆ ಉಪನಿಷತ್ತು ಮತ್ತು ಗೀತೆಯೊಂದಿಗೂ ಅನುಸಂಧಾನಿಸಿದ್ದಾರೆ. ಅವರು ಗೀತೆಯ -

> ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್।
> ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥ (೩-೩೫)

ಎಂಬ ಈ ಶ್ಲೋಕದ ಅರ್ಥವನ್ನು ತಮ್ಮ ಕವಿತೆಯಲ್ಲಿ ಹೀಗೆ ಹಿಡಿದಿಟ್ಟಿದ್ದಾರೆ.

ಪರಕೀಯರ ಆಕ್ರಮಣಕ್ಕೆ ಸಿಲುಕಿ ದಿಕ್ಕು ತಪ್ಪಿರುವ ಭಾರತೀಯರ ಸ್ಥಿತಿಯನ್ನು ಗೀತೆಯಲ್ಲಿನ ಅರ್ಜುನನ ಸ್ಥಿತಿಗೆ ಹೋಲಿಸಿದಂತೆ ತಮ್ಮ ಕೃತ್ತಿಕೆ ಸಂಕಲನದ 'ದೇಶಭಕ್ತನೋರ್ವನಿಗೆ' ಕವಿತೆಯಲ್ಲಿ ಹೀಗೆ ಹೇಳಿದ್ದಾರೆ.

> ಶ್ರೀಕೃಷ್ಣನೆಂದನಂದರ್ಜುನನಗೆ "ಹೇ ಪಾರ್ಥ,
> ಕೀಳಾದೊಡಂ ತನ್ನ ಧರ್ಮದೊಳಳಿವೆ ಲೇಸು;
> ಮೇಲಾಗಿ ತೋರ್ದಡಂ ಪರಧರ್ಮವದು ಹೇಸು,
> ಭೀಕರಮಜಯಕರಂ; ತನಗನರ್ಥಂ, ವ್ಯರ್ಥ ಅನ್ಯರಿಗೆ"[೧]

ಹೀಗೆ ಕುವೆಂಪು ಅವರು ಗೀತೆಯನ್ನು ತಮ್ಮ ಕವಿತೆಯಲ್ಲಿ ಅನುಸಂಧಾನಿಸಿದ್ದಾರೆ.

ಇಷ್ಟೇ ಅಲ್ಲದೆ ಕುವೆಂಪು ತಮ್ಮ ನಾಟಕಗಳಲ್ಲಿಯೂ ಗೀತೆಯನ್ನು ಅನುಸಂಧಾನಿಸಿದ್ದಾರೆ. ತಮ್ಮ ನಾಟಕ ರಚನೆಗೆ ಗೀತೆಯನ್ನು ಪ್ರೇರಕಶಕ್ತಿಯಾಗಿಯೂ ಬಳಸಿಕೊಂಡಿದ್ದಾರೆ. ಕುವೆಂಪು ಅವರು ಗೀತೆಯನ್ನು ಮಾನವೀಯ ದೃಷ್ಟಿಯಲ್ಲಿ ನೋಡಿದವರಾಗಿದ್ದಾರೆ. ಬಹುಶಃ ಅವರಿಗೆ ವಿವೇಕಾನಂದರ ಮತ್ತು ಅವರ ತತ್ವಚಿಂತನೆಗಳ ಮೂಲಕ ಗೀತೆಯನ್ನು ಕುವೆಂಪು ಹೆಚ್ಚು ಮಾನವೀಯ ನೆಲೆಯಲ್ಲಿ ಕಾಣಲು ಪ್ರಯತ್ನಿಸಿದ್ದಾರೆ ಎಂದು ತೋರುತ್ತದೆ. ಇದಕ್ಕೆ ಸಾಕ್ಷಿ

ಎಂಬಂತೆ ಅವರು ತಮ್ಮ ನೆನಪಿನ ದೋಣಿಯಲ್ಲಿ "ತಿಲಕರ 'ಗೀತಾರಹಸ್ಯ' ಭಾಷಾಂತರದ ಹೆಪ್ಪೊತ್ತಿಗೆ ಹೇಗೋ ಮನೆಗೆ ಬಂದಿತ್ತು... ನಾನು ಓದತೊಡಗಿದೆ. ಸ್ವಾಮಿ ವಿವೇಕಾನಂದರ ಕೃತಿಗಳಲ್ಲಿ ನಾನು ಗೀತೆ ಉಪನಿಷತ್ತುಗಳ ವೇದಾಂತದ ವಿಚಾರ ತಿಳಿದಿದ್ದುದರಿಂದ 'ಗೀತಾರಹಸ್ಯ'ದಲ್ಲಿ ನಾನು ತುಂಬಾ ಆಸಕ್ತನಾಗಿದ್ದೆ. ಅದರಲ್ಲಿಯೂ ತಿಲಕರ ಕರ್ಮಯೋಗ ಸಿದ್ಧಾಂತ, ಸ್ವಾಮಿ ವಿವೇಕಾನಂದರ ಭಾಷಣಗಳಲ್ಲಿರುತ್ತಿದ್ದ ಅನೇಕ ಭಾವನೆಗಳಿಗೆ ಸಂವಾದಿಯಾಗಿದ್ದುದರಿಂದ ನನಗೆ ಅದು ಹೆಚ್ಚು ಪ್ರಿಯವಾಗಿತ್ತು"[೨] ಎಂದು ದಾಖಲಿಸಿದ್ದಾರೆ.

ಕುವೆಂಪು ಅವರ 'ಜಲಗಾರ' ನಾಟಕ ಉಪನಿಷತ್ತಿನ ಸಾರವನ್ನು ಹೀರಿಕೊಂಡು ಮರುಹುಟ್ಟು ಪಡೆದ 'ಭಗವದ್ಗೀತೆ'ಯಿಂದ ಹೆಚ್ಚು ಪ್ರಭಾವಿತವಾಗಿದೆ.

೧. ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ।
ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಸ್ತ್ವಕರ್ಮಣಿ ॥(೨-೪೭)

೨. ಯೋಗಸ್ಥಃ ಕುರು ಕರ್ಮಾಣಿ ಸಂಗಂ ತ್ಯಕ್ತ್ವಾ ಧನಂಜಯ ।
ಸಿದ್ಧ್ಯಸಿದ್ಧ್ಯೋಃ ಸಮೋ ಭೂತ್ವಾ ಸಮತ್ವಂ ಯೋಗ ಉಚ್ಯತೇ ॥(೨-೪೮)

ಕರ್ಮದಲ್ಲಿಯೇ ನಿನಗೆ ಅಧಿಕಾರವು, ಕರ್ಮಫಲದಲ್ಲಿ ಎಂದಿಗೂ ಆಸಕ್ತಿಯಾಗದಿರಲಿ. ಕರ್ಮಫಲಕ್ಕೆ ಕಾರಣನಾಗದೇ ಇರು; ಕರ್ಮವನ್ನು ಬಿಡುವುದರಲ್ಲಿ ನಿನಗೆ ಪ್ರೀತಿಯಾಗದಿರಲಿ. ಆಸಕ್ತಿಯನ್ನು ಬಿಟ್ಟು ಸಿದ್ಧಿ-ಅಸಿದ್ಧಿಗಳಲ್ಲಿ ಸಮಭಾವವುಳ್ಳವನಾಗಿ ಯೋಗದಲ್ಲಿದ್ದುಕೊಂಡು ಕರ್ಮವನ್ನು ಮಾಡು. ಸಮತ್ವವೇ ಯೋಗವೆನಿಸುವುದು ಇದು 'ಜಲಗಾರ'ದ ಮುಖ್ಯ ತತ್ವವಾಗಿ ಮೂಡಿಬಂದಿದೆ.

"ಕರ್ಮವಾರಾಧನೆಯು, ಸೇವೆಯೇ ಪೂಜೆ
ನನ್ನ ಭಾಗಕೆ ಪೊರಕೆಯಾರತಿಯು. ಗುಡಿಸುವುದೆ
ನನ್ನ ದೇವರಪೂಜೆ!"

ಕುವೆಂಪು ಜಲಗಾರನ ಮಾತಿನಲ್ಲಿ ಹೀಗೆ ಹೇಳಿಸುತ್ತಾ ಕರ್ಮದ ಮಹತ್ವವನ್ನು ತಿಳಿಸಿದ್ದಾರೆ. ಇದೇ ಆಶಯವನ್ನು ಅವರು ತಮ್ಮ 'ಕರ್ಮಯೋಗಿ' ಕವಿತೆಯಲ್ಲಿಯೂ ಹೇಳಿದ್ದಾರೆ.

'ಚವರವಿಡಿದರೆ ಮೇಲೆ? ಪೊರಕೆವಿಡಿದರೆ ಕೀಳೆ?
ಮಾಳ್ಪ ಕೆಲಸಗಳೆಲ್ಲ ನೈವೇದ್ಯವಾಗೆ!
ರಸಭೇದವಿಹುದೆ ಸುಖದುಃಖಗಳಿಗಾಟದಲಿ
ಜೀವಭಾವವೆ ಸಚ್ಚಿದಾನಂದವಾಗೆ?'

ಗೀತೆಯ 'ಶ್ರೇಯಾನ್ ಸ್ವಧರ್ಮೋ...' ಎಂಬ ಶ್ಲೋಕದ ಅರ್ಥವನ್ನು ಈ ಕವಿತೆಯ ಸಾಲುಗಳು ಹಿಡಿದಿಟ್ಟಿವೆ. 'ಸ್ವಧರ್ಮ' ಪರಿಪಾಲನೆ ಯಿಂದ ಸುಖವನ್ನು ಹೊಂದಬಹುದು. ಅದರಲ್ಲಿ ಯಾವ ಮೇಲು-ಕೀಳು ಎಂಬ ಭಾವನೆಯೇ ಬರುವುದಿಲ್ಲ. ಎಲ್ಲಾ ಕೆಲಸಗಳು ಅಂತಿಮವಾಗಿ ಆತ್ಮದ ಸುಖಾನುಭವವೇ ಆಗಿದೆ. ಹೀಗೆ ಗೀತೆಯ ತತ್ವ-ಆಶಯಗಳನ್ನು ಕುವೆಂಪು ತಮ್ಮ ಕೃತಿಗಳಲ್ಲಿ ಅನುಸಂಧಾನಿಸಿದ್ದಾರೆ.

ಕುವೆಂಪು ಅವರು ತಮ್ಮ ಕಾವ್ಯದಲ್ಲಿ ಮಾತ್ರವಲ್ಲದೇ ಅವರ ಭಾಷಣಗಳು ಮತ್ತು ವಿಚಾರ ಬರಹಗಳಲ್ಲೂ ಗೀತೆಯ ಬಗೆಗೆ ಮಾತನಾಡಿದ್ದಾರೆ.

ನಮ್ಮ ಹಳೆಯ ಕಾವ್ಯ, ಚರಿತ್ರೆ, ಪುರಾಣಗಳು ನಮ್ಮ ಬದುಕನ್ನು ನಿಯಂತ್ರಿಸುತ್ತಿರುತ್ತವೆ. ಆದ್ದರಿಂದ ಅವುಗಳನ್ನು ನಮ್ಮ ಕಾಲದ ಅಗತ್ಯಗಳಿಗೆ ತಕ್ಕಂತೆ ನಮಗೆ ಹೇಗೆ ಬೇಕೋ ಹಾಗೆ ಪುನರ್ ರೂಪಿಸಿಕೊಳ್ಳಬೇಕೆಂದು ಅವರು ಹೇಳುತ್ತಾರೆ. ಗೀತೆಯ ಬಗ್ಗೆಯೂ ಕುವೆಂಪು ಅವರು ಇದೇ ರೀತಿಯ ನಿಲುವು ತಾಳುತ್ತಾರೆ. "ಅಂದರೆ, ಆಭರಣದ ರೂಪ ಯಾವುದಾದರೂ ಇರಲಿ, ಆಭರಣದ ವಸ್ತು ಇದೆಯಲ್ಲಾ ಅದು ತುಂಬಾ ಬೆಲೆಯುಳ್ಳದ್ದು, ಅದನ್ನು ಎಸೆದರೆ ಮೂರ್ಖರಾಗುತ್ತೀರಿ. ಹಾಗೆಯೇ ರಾಮಾಯಣ ಮಹಾಭಾರತ ಇತರ ಯಾವುದೇ ಕತೆಗಳಾಗಿರಲಿ ಅವನ್ನು ಬಿಸಾಡುವುದಲ್ಲ, ಅದನ್ನು ಕರಗಿಸಿ ನಮ್ಮ ಹೊಸ ಧ್ಯೇಯ ಹೊಸ ಇಷ್ಟಗಳಿಗೆ ಅನುಸಾರವಾಗಿ ಅವುಗಳನ್ನು ನೀವು ನಿಮ್ಮ ಸಾಹಿತ್ಯದಲ್ಲಿ ಎರಕ ಹೊಯ್ಯಬೇಕು. ಏಕೆಂದರೆ ಆ ಎರಕಗಳ ಮೂಲಕ, ಆ ಕಥಾವ್ಯಕ್ತಿಗಳ ಮೂಲಕ ನೀವು ನಿಮ್ಮ ಧ್ಯೇಯಗಳನ್ನು ಪ್ರಸಾರ ಮಾಡಲು ತುಂಬಾ ಸುಲಭವಾಗುತ್ತದೆ. ಬೇಗ ಬೇಗ ಹಿಡಿಸುತ್ತದೆ ಜನಗಳಿಗೆ."[೩] ಯಾವುದೇ ವಸ್ತು-ವಿಷಯಗಳನ್ನು 'ನಮ್ಮ ಧ್ಯೇಯ'ಕ್ಕೆ ಅನುಸಾರವಾಗಿ ಪುನರ್ ರೂಪಿಸಿಕೊಳ್ಳಬೇಕೆಂಬುದು ಕುವೆಂಪು ಅವರ ಮಾತಿನ ಇಂಗಿತ. ಗೀತೆಯ ವ್ಯಾಖ್ಯಾನಗಳ ಔಚಿತ್ಯವನ್ನು ಕುರಿತು ಕುವೆಂಪು ಈ ರೀತಿ ಹೇಳುತ್ತಾರೆ: ಹಳೆಯದಕ್ಕೆ ಹೊಸ ವ್ಯಾಖ್ಯಾನಗಳನ್ನು ಏಕೆ ಮಾಡಬೇಕಾಗಿ ಬರುತ್ತದೆ ಅಂದರೆ, ಒಂದು ನಿದರ್ಶನ ತೆಗೆದುಕೊಳ್ಳಿ. ಚಾತುರ್ವರ್ಣ್ಯ: ಗೀತೆಯಲ್ಲಿ ಚಾತುರ್ವರ್ಣ್ಯದ ವಿಚಾರ ಬರುತ್ತದೆ. ಗೀತೆಯನ್ನು ಪ್ರಪಂಚದಾದ್ಯಂತ ಅತ್ಯಂತ ಮಹೋನ್ನತವಾದ ಆಧ್ಯಾತ್ಮಿಕ ಕೃತಿಯೆಂದು ಎಲ್ಲರೂ ಭಾವಿಸುತ್ತಾರೆ. ಆದರೆ ಶ್ರೀಕೃಷ್ಣ "ಚಾತುರ್ವರ್ಣ್ಯಂ ಮಯಾ ಸೃಷ್ಟಂ" 'ನಾಲ್ಕು ವರ್ಣಗಳನ್ನು ನಾನೆ ಸೃಷ್ಟಿಸಿದ್ದೇನೆ' ಅಂತ ಹೇಳಿಬಿಟ್ಟನಲ್ಲಾ ಎಂದು ಇಡೀ ಗೀತೆಯನ್ನು ಎಸೆಯುವುದಕ್ಕೆ ಹೋಗಬಾರದು. ಅದಕ್ಕೆ ಬೇರೆ ವ್ಯಾಖ್ಯಾನ ಮಾಡಬೇಕು, ಸರಿಯಾದ ಸರ್ವಸಮ್ಮತವಾದ ರೀತಿಯಲ್ಲಿ, ವಿಶ್ವಕ್ಕೆಲ್ಲ ಅನ್ವಯವಾಗುವಂತೆ."[೪] ಪುನರ್ ಸೃಷ್ಟಿಸಿಕೊಳ್ಳಬೇಕಾದ ವಿವೇಕ ಓದುಗರಿಗೆ ಇರಬೇಕೆಂಬುದು ಕುವೆಂಪು ಅವರ ಮಾತಿನ ಆಶಯ. ಕೆಲವೊಮ್ಮೆ ವ್ಯಾಖ್ಯಾನಕಾರರ ಸ್ವಹಿತಾಸಕ್ತಿಗಳು ಪಠ್ಯದಲ್ಲಿ ನುಸುಳಿಬಿಡುತ್ತವೆ. ಇಂಥ ಕಡೆ 'ಸತ್ಯ'ವನ್ನು ತಿರುಚುವ ಅಪಾಯಗಳು ಸಂಭವಿಸುತ್ತವೆ. ಇಂತಹವುಗಳ ಬಗ್ಗೆಯೂ ಓದುಗರಾದ ನಮಗೆ ಅರಿವಿರಬೇಕು. ಇಲ್ಲದಿದ್ದರೆ 'ಚಾತುರ್ವರ್ಣ್ಯಗಳನ್ನು ದೇವರು ಸೃಷ್ಟಿಸಿದ' ಎಂದು 'ತಾವೇ ಮಾಡಿದ್ದನ್ನು ದೇವರಿಗೆ ಆರೋಪಿಸುವಂತೆ' ತಪ್ಪು ಅಭಿಪ್ರಾಯಗಳನ್ನು ಪಠ್ಯಗಳ ಮೂಲಕ ಜನರಲ್ಲಿ ಬಿತ್ತುತ್ತಾರೆ. ಆದ್ದರಿಂದ ಪುರಾಣ, ಚರಿತ್ರೆ, ಕಾವ್ಯ, ಗೀತೆ ಇನ್ನು ಮುಂತಾದವು ನಮ್ಮ ಕಾಲದ ಧ್ಯೇಯಗಳಿಗೆ ಹೇಗೆ ಅನ್ವಯವಾಗುತ್ತವೆ ಎಂಬ ಪ್ರಶ್ನೆಯೊಂದಿಗೆ ನಾವು ಅವುಗಳೊಂದಿಗೆ ಅನುಸಂಧಾನಗೊಳ್ಳಬೇಕು. ಅಷ್ಟೇ ಅಲ್ಲ, 'ವಿಚಾರ ಮಾಡಿ ಸರಿಯಾದ ದಾರಿಯಲ್ಲಿ ಹೋಗಬೇಕು'. "ಯಾವಾಗಲೂ ಸೃಜನಕಾರ್ಯ, ಸೃಷ್ಟಿಕಾರ್ಯ ವಿಧ್ಯುಕ್ತವಾಗಿ ನಡೆಯಲಿ: ಬರಿಯ ನಿಷೇಧ ಅನಾವಶ್ಯಕ."[೫] ಈ ಮಾತು ಗೀತೆಗೂ ಅನ್ವಯಿಸದೇ ಇರದು.

೬.೨. ಗೀತೆ ಮತ್ತು ಬೇಂದ್ರೆ

ದ.ರಾ. ಬೇಂದ್ರೆ ಅವರು ಗೀತೆಯ ತತ್ವಗಳ ಬಗೆಗೆ ಪ್ರೇರಿತರಾಗಿ, ಅದರ ಬೋಧನೆಯಿಂದ ಪ್ರಭಾವಿತರಾಗಿ ತಮ್ಮ ಕೃತಿಗಳಲ್ಲಿ ಗೀತೆಯ ಅನುಸಂಧಾನವನ್ನು ನಡೆಸಿದ್ದಾರೆ. ಅವರು ಗೀತೆ ಒಂದು ಸಂವಾದ ಗ್ರಂಥ, ಅದು ವಾದಗ್ರಂಥವಲ್ಲ ಎಂಬ ಅಭಿಪ್ರಾಯವನ್ನು ತಳೆದಿದ್ದಾರೆ. ಅವರು ಗೀತೆಯ ೨ನೇ ಅಧ್ಯಾಯದ 'ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ' ಎಂಬ ೧೬ನೇ ಶ್ಲೋಕವನ್ನು ಗೀತೆಯ ತಳಹದಿಯೆಂದು ತಿಳಿದಿದ್ದರು. 'ದೇವಾನ್ ದೇವಯಜೋ ಯಾಂತಿ ಮದ್ಭಕ್ತಾ ಯಾಂತಿ ಮಾಮಪಿ'(ದೇವತೆಗಳನ್ನು ಆರಾಧಿಸುವವರು ದೇವತೆಗಳನ್ನು ಹೊಂದುತ್ತಾರೆ; ನನ್ನ ಭಕ್ತರು ನನ್ನನ್ನೇ ಹೊಂದುತ್ತಾರೆ. ೭-೨೩) ಮತ್ತು ೧೭ನೇ ಅಧ್ಯಾಯದ ೩ನೇ ಶ್ಲೋಕ 'ಶ್ರದ್ಧಾಮಯೋಽಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವ ಸಃ'(ಯಾವನು ಯಾವ ಶ್ರದ್ಧೆಯುಳ್ಳವನೋ ಅವನು ಆ ಶ್ರದ್ಧೆಗೆ ಅನುರೂಪನಾಗಿರುತ್ತಾನೆ- ೧೭-೩) ಈ ಶ್ಲೋಕಗಳು ಮುಖ್ಯವೆಂದು ಭಾವಿಸಿದ್ದಾರೆ. ಹಾಗಾಗಿ 'ಶ್ರದ್ಧಾಮಯ ಪುರುಷನಿಂದ ಉಂಟಾಗುವ ಕ್ಷರಾಕ್ಷರ ಉತ್ತಮಗಳ ಸಂಬಂಧವೇ ಗೀತಾಶಾಸ್ತ್ರ' ಎಂದು ಗೀತೆಯನ್ನು ವ್ಯಾಖ್ಯಾನಿಸಿದ್ದಾರೆ. ಗೀತೆಯಲ್ಲಿ 'ಮಾಂ, ಅಹಂ, ಮಮ' ಎಂಬ ಉತ್ತಮ ಪುರುಷನೇ ಗರ್ಜಿಸುತ್ತಿದ್ದಾನೆ ಎಂದು ಹೇಳುತ್ತಾರೆ.

೧೯೬೯ರಲ್ಲಿ ದ.ರಾ. ಬೇಂದ್ರೆಯವರು 'ಭಗವದ್ಗೀತೆಯ ಧರ್ಮ ಸಿದ್ಧಾಂತ'ದ ಬಗೆಗೆ ನೀಡಿದ ಉಪನ್ಯಾಸವು ಗೀತೆಯ ಬಗ್ಗೆ ಹಲವು ಸೂಕ್ಷ್ಮ ಒಳನೋಟಗಳನ್ನು ನೀಡುತ್ತದೆ. ಮುಖ್ಯವಾಗಿ ಇಲ್ಲಿ ಬೇಂದ್ರೆಯವರು ಆಧುನಿಕ ಸಂದರ್ಭದ ಮತ-ಮೌಢ್ಯಗಳಿಗೆ ಗೀತೆಯ ಚಿಂತನೆಗಳು ಹೇಗೆ ಮುಖಾಮುಖಿಯಾಗುತ್ತದೆ ಎಂಬುದನ್ನು ಇಲ್ಲಿ ಚರ್ಚಿಸಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಧರ್ಮ ಎಂದರೇನು? ಧರ್ಮದ ಉದ್ದೇಶವೇನು? ಧರ್ಮದ ರೀತಿ-ನೀತಿಗಳನ್ನು ನಾವು ಹೇಗೆ ಅರಿಯಬೇಕು? ಇತ್ಯಾದಿ ವಿಷಯಗಳ ಬಗೆಗೆ ವಿವೇಚಿಸಿದ್ದಾರೆ. ಈಗಾಗಲೇ ರೂಢಿಯಲ್ಲಿದ್ದ 'ಧರ್ಮದ ವ್ಯಾಖ್ಯಾನಕ್ಕೆ ಬದಲಾಗಿ ಬೇಂದ್ರೆ ತಮ್ಮದೇ ಆದ ಸ್ವತಂತ್ರ ವ್ಯಾಖ್ಯಾನವನ್ನು ನೀಡುತ್ತಾರೆ. ಅಷ್ಟೇ ಅಲ್ಲ, ಅವರವರ ಭಾವಕ್ಕೆ ತಕ್ಕಂತೆ ಧರ್ಮವನ್ನು ವ್ಯಾಖ್ಯಾನಿಸಬಹುದೆಂದು ಹೇಳುತ್ತಾರೆ. ಗೀತೆ ಹೇಳುವುದು ಸಹ ಇದೇ ನೆಲೆಯಲ್ಲಿ ಎಂಬುದು ಅವರ ನಿಲುವು. "ಯಾರಿಗೆ ಸ್ವಧರ್ಮ ತಿಳಿದುಕೊಳ್ಳಬೇಕು ಎಂದು ಎನ್ನಿಸುವುದೋ ಅವರು ಮೊದಲು 'ಸ್ವ'ಧರ್ಮ ತಿಳಿದುಕೊಳ್ಳಬೇಕು, ಸ್ವಧರ್ಮ ತಿಳಿಯದೆ ಧರ್ಮ ತಿಳಿಯದು... ಸ್ವತ್ವ ಇಲ್ಲದೆ ಸ್ವಧರ್ಮ ತಿಳಿಯದು. ಧರ್ಮ ತಿಳಿಯುವುದು ಸ್ವಕ್ಕೆ. 'ಸ್ವ' ಇರುವುದು ದೇಹದಲ್ಲಿ, ದೇಹ ಧರಿಸಿದ ನಮಗೆ ಸ್ವ ತಿಳಿಯದಿದ್ದರೂ ಸೊಕ್ಕು ಸಾಕಷ್ಟಿದೆ. ಸ್ವದ ಮೇಲೆ ಸಿಪ್ಪೆಯಂತೆ ಆವರಣ ಇರುತ್ತದೆ. ಈ ಸಿಪ್ಪೆಯ ಆವರಣ ಸುಲಿದು ಸ್ವ ತಿಳಿದುಕೊಳ್ಳಬೇಕು."[೭]

ಇಂಥ ವ್ಯಾಖ್ಯಾನದಾಚೆಗಿನ ಸ್ವಾರ್ಥ ಧಾರ್ಮಿಕ ಗ್ರಹಿಕೆಗಳಿಂದಾಗಿಯೇ ಗೀತೆ ಸಾಮಾಜಿಕ ಸ್ವಾಸ್ಥ್ಯಕ್ಕಿಂತ ಅಸ್ವಾಸ್ಥ್ಯದ ಕಾರಣಗಳಿಗಾಗಿ ವ್ಯಾಖ್ಯಾನಿಸಲ್ಪಡುತ್ತಿದೆ ಅನಿಸುತ್ತಿದೆ ಎಂಬ ವಿಚಾರಗಳನ್ನು ಈ ಉಪನ್ಯಾಸದಲ್ಲಿ ನೀಡಿದ್ದಾರೆ.

'ಸ್ವ'ದ ಅರಿವಿಲ್ಲದಿರುವುದೇ ಅನೇಕ ದಾರಿದ್ರ್ಯ, ಮೌಢ್ಯಗಳಿಗೆ ಮೂಲ ಕಾರಣ. ಆದ್ದರಿಂದ ಪ್ರತಿಯೊಬ್ಬರೂ ಆತ್ಮಜ್ಞಾನವನ್ನು ಪಡೆಯಬೇಕು. ಆಗ ಧರ್ಮ–ಅಧರ್ಮಗಳ ತಾತ್ವಿಕ ವ್ಯತ್ಯಾಸ ವೇದ್ಯವಾಗುತ್ತದೆ. ಬೇಂದ್ರೆ ಧರ್ಮದ ಕಾರ್ಯಗಳನ್ನು ಕುರುಡಾಗಿ ಒಪ್ಪುವುದಿಲ್ಲ. ಧರ್ಮ–ಅಧರ್ಮಗಳ ತಾತ್ವಿಕ ವ್ಯತ್ಯಾಸಗಳನ್ನು ಚಿಕಿತ್ಸಕ ದೃಷ್ಟಿಯಿಂದ ನೋಡುತ್ತಾರೆ. ಹಾಗಾದುದರಿಂದಲೇ "ಧರ್ಮವು ಯುದ್ಧದ ತಾಯಿ; ಜಗಳದ ಬೀಜ. ದೇವಾಸುರ ಸಂಗ್ರಾಮಗಳಾಗಲೀ ಯುರೋಪದ ಕ್ರೂಸೇಡ್ ಯುದ್ಧಗಳಾಗಲೀ, ಹಿಂದೂ ಮುಸಲ್ಮಾನ್ ಜಗಳಗಳಾಗಲೀ ಧರ್ಮದ ಬಾಲ ಹಿಡಿದು ಬಡಿದಾಡಿದವು. ಆದರೆ ಧರ್ಮವು ಕೇವಲ ಭಯಕ್ಕೆ ಕಾರಣವಾಗಿದ್ದರೆ ಅದು ಇದುವರೆಗೂ ಬದುಕುತ್ತಿರಲಿಲ್ಲ. ಆ ಭಯದ ಜೊತೆಗೆ ಭಕ್ತಿಯಿದೆ; ಅಂತೆಯೇ ಧರ್ಮವೆಂದರೆ ಕೆಲವರಿಗೆ ಹರ್ಷ ರೋಮಾಂಚನಗಳೇಳುವವು; ಆನಂದ ಭಾಷ್ಪಗಳುದುರುವವು; ಆದರದಿಂದ ತಲೆ ಬಾಗುವುದು..."[೮] ಎಂದು ಧರ್ಮದ ಕೇಡನ್ನು ಕುರಿತು ವಿಡಂಬನೆ ಮಾಡಲು ಸಾಧ್ಯವಾಗಿದೆ.

ಸ್ವ ಸ್ವರೂಪಜ್ಞಾನ ಇನ್ನೊಬ್ಬರನ್ನು ಕೇಳಿ ತಿಳಿದುಕೊಳ್ಳುವ ವಿಷಯವಲ್ಲ. ಅವರವರ ಬುದ್ಧಿ ಅವರವರ ಎಚ್ಚರ ಅವರವರಿಗೆ ಆಗಬೇಕು. ಸ್ವದ ವಿಷಯವಾಗಿ ಪರರದಕ್ಕೆ ಹೋಗಬಾರದು. ತನಗೆ ಕಾಣ್ತಾದೋ ಇಲ್ಲವೋ ಎಂದು ಕೇಳಿ ತಿಳಿದುಕೊಳ್ಳುವುದು ಹಾಸ್ಯಾಸ್ಪದ. ಅವರಿಗೆ ಅವರದು ಕಾಣ್ತಿರ್ತದ–ನಮ್ಮದು ನಮಗೆ ಕಾಣ್ತಿರ್ತದ; ಅವರಿಗೆ ಕಂಡದ್ದು ಅವರದ್ದು, ಅದು ನಮ್ಮದಾಗಲಾರದು ಮತ್ತು ನಮ್ಮದಾಗಬಾರದು. ಹಾಗೆ ಆದಾಗ ಮಾತ್ರ ಧಾರ್ಮಿಕ ಪಥ್ಯಗಳು ಧರ್ಮ–ಧರ್ಮಗಳ ನಡುವಿನ ಕಲಹಗಳಿಗೆ ಕಾರಣವಾಗಲಾರದೆನ್ನಬಹುದು. ತನ್ನನ್ನು ತಾನು ತಿಳಿದುಕೊಳ್ಳಬೇಕು ಎಂಬ ಆಸೆ ಭಕ್ತನಲ್ಲಿ ಭಗ ಭಗ ಭಗ ಅಂತ ಉರಿಯುತ್ತಿರಬೇಕು. ಹೀಗೆ ಭಕ್ತನ ಆಸೆ ಅಗ್ನಿಯಾಗಿ ಉರಿದೆದ್ದಾಗ, ಭಗವಂತನ ಉಕ್ತಿಯ ಅಮೃತ ಸೋಪಾನ ವರ್ಷಣವಾಗುತ್ತದೆ ಎಂಬುದು ಬೇಂದ್ರೆಯವರ ಕಾಣ್ಕೆ.

ಧರ್ಮಜಿಜ್ಞಾಸೆಯನ್ನು ಕುರಿತು ಬೇಂದ್ರೆ ಅವರು ಹೀಗೆ ಹೇಳುತ್ತಾರೆ; "ಒಳ್ಳೆಯ ಮನಸ್ಸಿನಿಂದ ಒಂದುಗೂಡಿರುವುದೆ ಧರ್ಮ, ವೈಮನಸ್ಸಿಂದ ಬೇರೆಬೇರೆಯಾಗಿರುವುದೆ ಅಧರ್ಮ. ಒಳ್ಳೆಯ ಮನಸ್ಸಿನಿಂದ ಒಂದುಗೂಡಿರುವುದೆ ಬಾಳುವವರ ಲಕ್ಷಣ."[೯] ಮನುಷ್ಯ ಪ್ರೀತಿಯಿಂದ, ಸ್ನೇಹದಿಂದ ಸಹಬಾಳ್ವೆಯ ಜೀವನ ನಡೆಸುವಂತಾಗಬೇಕು, ದ್ವೇಷ–ಅಸೂಯೆಯಿಂದ ಬದುಕುವಂತಾಗಬಾರದು. ಪ್ರೀತಿ ಜನರನ್ನು ಒಂದುಗೂಡಿಸಿದರೆ, ದ್ವೇಷ ಬೇರೆಯಾಗಿಸುತ್ತದೆ. ಪ್ರೀತಿ ಒಗ್ಗಟ್ಟಿಗೆ, ಐಕ್ಯತೆಗೆ ಸಂಕೇತವಾದರೆ, ದ್ವೇಷ ಒಗ್ಗಟ್ಟನ್ನು ಮುರಿಯುತ್ತದೆ ಎಂಬುದು ಬೇಂದ್ರೆ ಅವರ ಅಭಿಪ್ರಾಯವಾಗಿದೆ. ಸ್ವಧರ್ಮದ ಬಗೆಗೆ ಇವರ ಅಭಿಪ್ರಾಯವನ್ನು ಸಂಗ್ರಹಿಸುವುದಾದರೆ: "ಧರ್ಮ ಬದುಕೋದು

ಇರಲಿ, ನೀವು ಬದುಕೋದು ಹೇಗೆ ಎಂದು ವಿಚಾರ ಮಾಡಿರಿ. ನೀವು ಬದುಕಿ ಇದ್ದರೆ, ಬದುಕು ಹೇಗೆ ಎಂದು ತಿಳಿದುಕೊಳ್ಳಬಹುದು. ಯಾವುದು ತಿಳಿದರೆ ನೀವು ಬದುಕುತ್ತೀರೋ, ಅದು ಧರ್ಮ ಮತ್ತು ನೀವು–ಅದು ಸ್ವ. ಪ್ರತಿಯೊಬ್ಬನಿಗೆ ತನ್ನ ಸ್ವರೂಪದ ಬಗ್ಗೆ ಅಜ್ಞಾನ ಇರುತ್ತದೆ. ನಿನ್ನೊಳಗಿರುವ ಸ್ವರೂಪದ ಬಗ್ಗೆ ಮತ್ತು ಸ್ವಧರ್ಮದ ಬಗ್ಗೆ ಸ್ವಧರ್ಮದ ವಿಷಯವಾಗಿಯೇ ಭಗವದ್ಗೀತೆ ಎಚ್ಚರಿಸುತ್ತದೆ"[೧೦] ಎನ್ನುತ್ತಾರೆ.

ಇದನ್ನು ಇನ್ನಷ್ಟು ಸ್ಪಷ್ಟಪಡಿಸುವುದಾದರೆ, "ಯಾವ ಮತಕ್ಕೂ ಸೇರದೆ ಪ್ರತಿಯೊಬ್ಬನೂ ತಾನು ಕಂಡುಕೊಳ್ಳುವ ತನ್ನ ಮತಕ್ಕೆ ಮಾತ್ರ ಸೇರಬೇಕು. ಯಾರೊಬ್ಬರೂ ಇನ್ನೊಬ್ಬರ ಮತಕ್ಕೆ ಸೇರಿ ಗುಂಪುಕಟ್ಟಿ ಧಾರ್ಮಿಕ ಕಲಹಗಳಿಗೆ ಕಾರಣವಾಗಬಾರದು. ಹಾಗೆ ಕಾರಣವಾದದ್ದಾದರೆ ಅಂಥ ಕಲಹಗಳಿಂದಾಗಿಯೇ ಪ್ರಪಂಚದಲ್ಲಿ ಮನುಷ್ಯನು ತನ್ನ ರಕ್ಷಣೆಗಾಗಿ ಇಟ್ಟುಕೊಂಡಿರುವ ಆಧುನಿಕ ಯುದ್ಧದ ಶಸ್ತ್ರಾಸ್ತ್ರಗಳು ಅವಿವೇಕಿಗಳ ಕೈಗೆ ಸಿಕ್ಕಿ ಇಡೀ ವಿಶ್ವವೇ ಭಸ್ಮವಾಗುವುದರಲ್ಲಿ ಸಂದೇಹವಿಲ್ಲವೆಂಬ ಆಶಯದ ಹಿಂದೆ ಸ್ವಭಾವದ ಸ್ವ-ಎಚ್ಚರದ ವಿವೇಕವೇ ಕ್ರಿಯಾಶೀಲವಾಗಿದೆ."[೧೧] ಸ್ವದ ಅರಿವು ತನ್ನೊಳಗೆ ಸಂಭವಿಸುವಂತದ್ದು; ಅವರವರ ವಿವೇಕವೇ ತಮ್ಮೊಳಗಿನ ಸ್ವವನ್ನು ಎಚ್ಚರಿಸುತ್ತದೆ. ಗೀತೆಯ ವಿಚಾರಗಳು ನಮ್ಮ ಜಾಗೃತಿಗೆ ಕರೆ ಕೊಡುತ್ತವೆ. ಮೂಲತಃ 'ಗೀತೆ ಒಂದು ಸಂವಾದಗ್ರಂಥ, ವಾದಗ್ರಂಥವಲ್ಲ' ಎಂಬುದು ಬೇಂದ್ರೆ ಅವರ ನಿಲುವು.

ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ।
ಉಭಯೋರಪಿ ದೃಷ್ಟೋ, ಸಂತಸ್ತ್ವ ನಯೋಸ್ತತ್ತ್ವದರ್ಶಿಭಿಃ॥(೨–೧೬)

ಎಂಬುದು ಗೀತೆಯ ತಳಹದಿ ಎಂದು ಬೇಂದ್ರೆ ಹೇಳುತ್ತಾರೆ. "ಉತ್ತಮ ಪದದವನಾಗಿಯೂ ಕ್ಷಣಕ್ಷರಗಳಲ್ಲಿದ್ದು, ಲೋಕದಲ್ಲಿ ಧರ್ಮಕ್ಕಿಂತ ಅಧರ್ಮ ಮಿಗಿಲಾದಾಗ ಧರ್ಮಸ್ಥಾಪನೆಗೆ ಅವತರಿಸುವ ಕರ್ಮಯೋಗದ ಆಚಾರ್ಯನ ಭಾರತೀಪೀಠವು ಗೀತಾಭವನವು. ಶ್ರದ್ಧಮಯರಲ್ಲದವರಿಗೆ ಅದರಲ್ಲಿ ಪ್ರವೇಶ ಅಸಾಧ್ಯ. ಅದು ಶ್ರದ್ಧಾಮಾರ್ಗವೂ ಅಹುದು. ಅಧಿದೈವಿಕ ಮಾರ್ಗವೂ ಅಹುದು. ಅದು ಗೀತೆಯ ಪೌರುಷ ಮಾರ್ಗ. ಈ ಪೌರುಷವು ಅಸತ್ತಿನ, ಅಭಾವದ, ಪ್ರತಿಭಟನೆಯ ಅಸುರ ಮಾರ್ಗವಲ್ಲ, ಸನ್ಮಾರ್ಗ. ಸತ್ ಶ್ರದ್ಧೆಯೇ ಪೌರುಷದ್ರವ್ಯ. ಈ ಪುರುಷನೇ ಪುರುಷೋತ್ತಮನ ಲೀಲಾಮಾನವ ಯೋಗದ ಧರ್ಮಪ್ರತಿಷ್ಠಾಪನೆಯ ಅರ್ಥ ಮಾಡಿಕೊಳ್ಳಬಲ್ಲ. ಉಳಿದ ಅಸತ್ ಕಲ್ಪನೆಗಳಿಗೆ ಇಲ್ಲಿ ಒಂದಿಲ್ಲೊಂದು ತೊಂದರೆ ಇದಿರಾಗದೆ ಇರದು. ಆದ್ದರಿಂದ ಸಕಲಾವಸ್ಥೆಗಳಲ್ಲಿಯೂ ಸತ್‌ಚೇತನೆಯ ಸಿದ್ಧಿಯಲ್ಲಿ ಯತ್ನಶೀಲರಾಗುವುದು-ಗೀತಾಭ್ಯಾಸದ ಬ್ರಹ್ಮವಿದ್ಯೆಯ ಯೋಗಶಾಸ್ತ್ರದ ಸರಳಮಾರ್ಗ ಎಂದು ನನಗೆ ತೋರುತ್ತದೆ."[೧೨]

'ಸತ್' ಮತ್ತು 'ಅಸತ್'ಗಳ ಬಗ್ಗೆ ಬೇಂದ್ರೆ ತಮ್ಮ ಕವನಗಳಲ್ಲಿ ಪ್ರಸ್ತಾಪಿಸಿದ್ದಾರೆ. ಗೀತೆಯ ೧೭ನೆಯ ಅಧ್ಯಾಯದ ೨೩–೨೮ನೇ ಶ್ಲೋಕಗಳವರೆಗೆ ಬರುವ ಸತ್, ಅಸತ್, ತತ್, ಓಂ ಎಂಬ ಶಬ್ದಗಳು ಬೇಂದ್ರೆಯವರ ಕವನಗಳಲ್ಲಿವೆ. ಅರವಿಂದರಿಂದ ದತ್ತವಾದ ಗೀತೆಯ ತಾತ್ವಿಕ

ಜಿಜ್ಞಾಸೆ ಬೆಂದ್ರೆ ಅವರ ಚತುರ್ಮುಖ ಸೌಂದರ್ಯ, ಬೆಳಗು, ಕೃಷ್ಣಕುಮಾರಿ ಮುಂತಾದ ಕವಿತೆಗಳಲ್ಲಿ ಪ್ರಧಾನವಾಗಿ ಗೋಚರಿಸುತ್ತದೆ.

> ಇಂದ್ರಿಯಾಣಿ ಪರಾಣ್ಯಹುಃ। ಇಂದ್ರಿಯೇಭ್ಯಃ ಪರಂ ಮನಃ।
> ಮನಸಸ್ತು ಪರಾ ಬುದ್ಧಿಃಯೋ ಬುದ್ದೇಃ ಪರತಸ್ತು ಸಃ॥

ಗೀತೆಯ ಈ ಉಕ್ತಿಗಳಲ್ಲಿ ಇದು ಚತುರ್ಮುಖ ಮನಕ್ಕೆ ಪ್ರೇರಣೆ ಕೊಟ್ಟಿದೆ. ಆದ್ದರಿಂದ "ಈ ಉಕ್ತಿಗೆ ವಿಶೇಷ ಮಹತ್ತ್ವವಿದೆಯೆಂದು ಬೇಂದ್ರೆಯವರು ತಿಳಿಸಿದ್ದಾರೆ. ಇಂದ್ರಿಯಗಳು, ಮನಸ್ಸು, ಬುದ್ಧಿ ಇವುಗಳಾಚೆಗೆ ರಸ ಇದು ರಸಸಿದ್ಧಿಯ ಕ್ರಮ. 'ಬೆಳಗು' ಕವಿತೆಯ ಆಂತರಿಕ ಬೆಳವಣಿಗೆಯ ಕ್ರಮವೂ ಇದೇ ಆಗಿದೆ."[೧೩] ಹೀಗೆ ಬೇಂದ್ರೆ ಗೀತೆಯ ದರ್ಶನದಲ್ಲಿ ದ್ವೈತ–ಅದ್ವೈತ(ಅರಿವು–ಇರವು)ಗಳನ್ನು ಹುಡುಕಾಟ ಮಾಡಲೆತ್ನಿಸಿದ್ದಾರೆ. ಆದ್ದರಿಂದಲೇ 'ಗೀತೆಯೊಳಗಣ ಬಲವು ಯಾತರೊಳಗೂ ಇಲ್ಲ' ಎಂಬ ದಿವ್ಯಸಂದೇಶವನ್ನು ಸಾರಲು ಸಾಧ್ಯವಾಗಿದೆ.

ಕೆ.ಸಿ. ಶಿವಾರೆಡ್ಡಿ ಅವರು ತಮ್ಮ 'ಭಗವದ್ಗೀತೆಯು ......ಗಳ ಕೈಯಲ್ಲಿ ಸುರಕ್ಷಿತವಾಗಿದೆ' ಎಂಬ ಲೇಖನದಲ್ಲಿ ಹೀಗೆ ಹೇಳಿದ್ದಾರೆ: "ಬೇಂದ್ರೆಯವರು ಭಗವದ್ಗೀತೆ ಇರುವುದು ತನ್ನನ್ನು ತಾನು ತಿಳಿದುಕೊಳ್ಳಲು ಅದರಲ್ಲಿರುವುದು ಭಗವಂತನ ಉಕ್ತಿ. ಅದನ್ನು ತಿಳಿದುಕೊಳ್ಳಬೇಕು ಎಂಬ ಆಶೆ ಭಕ್ತ ಅಥವಾ ಧರ್ಮಿಯನಲ್ಲಿ ಭಗ ಭಗ ಭಗ ಅಂತ ಉರಿಯುತ್ತಿರಬೇಕು. ಆಗ ಭಕ್ತನ ಆಶೆ ಅಗ್ನಿಯಾಗಿ ಉರಿದೆದ್ದಾಗ ಭಗವಂತನ ಉಕ್ತಿಯ ಅಮೃತ ಸೋಮದ ವರ್ಷಣವಾಗಬೇಕೆನ್ನುತ್ತಾರೆ. ಆದರೆ ಭಗವದ್ಗೀತೆಯು ಅವಿವೇಕಿಗಳ ಕೈಯಲ್ಲಿ ಸುರಕ್ಷಿತವಾಗಿದೆ (Bhagavdgitha is safe in hands of ignorant- D.R.Bendre) ಎಂಬ ಉದ್ಗಾರ ಗೀತೆಯ ಪ್ರಸ್ತುತ ಅಪವ್ಯಾಖ್ಯೆಗಳನ್ನು ವಿಡಂಬಿಸುತ್ತದೆ"[೧೪] ಎಂದಿದ್ದಾರೆ.

ಇದಲ್ಲದೆ ಬೇಂದ್ರೆಯವರು ಗೀತೆಯಿಂದ ನೇರವಾಗಿ ಪ್ರಭಾವಿತರಾಗಿ ತಮ್ಮ ಕಾವ್ಯವನ್ನು ಕಟ್ಟಿದ್ದಾರೆ. ಗೀತೆಯ ಈ ಶ್ಲೋಕವನ್ನು ನೋಡುವುದಾದರೆ–

> ಇಂದ್ರಿಯಾಣಿ ಪರಾಣ್ಯಾಹುಃ। ಇಂದ್ರಿಯೇಭ್ಯಃ ಪರಂ ಮನಂ।
> ಮನಸಸ್ತು ಪರಾ ಬುದ್ಧಿಃ ಬುದ್ದೇಃ ಪರತಸ್ತುಸಂ॥ (೩–೪೨)

ಎಂಬ ಈ ಶ್ಲೋಕವು ತಮ್ಮ ಚತುರ್ಮುಖ ಮನಕ್ಕೆ ಪ್ರೇರಣೆ ಕೊಟ್ಟ ಉಕ್ತಿಗಳಲ್ಲಿ ಗೀತೆಯ ಮೇಲಿನ ಶ್ಲೋಕವೂ ಒಂದಾಗಿದೆ. ಈ ಉಕ್ತಿಗೆ ವಿಶೇಷ ಮಹತ್ವವಿದೆಯೆಂದು ಬೇಂದ್ರೆಯವರು ತಿಳಿಸಿದ್ದಾರೆ. 'ಇಂದ್ರಿಯಗಳು, ಮನಸ್ಸು, ಬುದ್ಧಿ ಇವುಗಳಾಚೆಗೆ ರಸ– ಇದು ರಸಸಿದ್ಧಿಯ ಕ್ರಮ. 'ಬೆಳಗು' ಕವಿತೆಯ ಆಂತರಿಕ ಬೆಳವಣಿಗೆಯ ಕ್ರಮವೂ ಇದೇ ಆಗಿದೆ' ಎಂದು ಜಿ.ಎಸ್. ಆಮೂರರು ತಮ್ಮ 'ಭುವನದ ಭಾಗ್ಯ' ಕೃತಿಯಲ್ಲಿ ಬೇಂದ್ರೆ ಅವರು ಗೀತೆಯನ್ನು ಅನುಸಂಧಾನಿಸಿರುವ ಕ್ರಮವನ್ನು ತಿಳಿಸಿದ್ದಾರೆ. ಇದಲ್ಲದೆ ಬೇಂದ್ರೆ ಅವರು ತಮ್ಮ ಕವನಗಳಲ್ಲಿ 'ಸತ್' ಮತ್ತು 'ಅಸತ್'ಗಳ ಬಗ್ಗೆ ಚಿಂತಿಸಿದ್ದಾರೆ. ಗೀತೆಯ ೧೭ನೇ ಅಧ್ಯಾಯದ ೨೩ರಿಂದ

೨೮ನೆಯ ಶ್ಲೋಕಗಳವರೆಗೆ ಬರುವ ಸತ್, ಅಸತ್, ತತ್, ಓಂ ಎಂಬ ಶಬ್ದ ಪ್ರಕಾರಗಳನ್ನು ತಮ್ಮ ಕವನಗಳಲ್ಲಿ ಹೆಚ್ಚು ಬಳಸಿದ್ದಾರೆ. ಹೀಗೆ ಬೇಂದ್ರೆಯವರು ಗೀತೆಯನ್ನು ತಮ್ಮ ಕವಿತೆಗಳಲ್ಲಿ ಅನುಸಂಧಾನಿದ್ದಾರೆ ಎನ್ನುವುದನ್ನು ತಿಳಿಯಬಹುದಾಗಿದೆ

ಕೊನೆ ಟಿಪ್ಪಣಿಗಳು

೧. ಕುವೆಂಪು: ಕೃತ್ತಿಕೆ, ಸಮಗ್ರ ಕಾವ್ಯ ೧, ಪುಟ ೫೦೫.

೨. ಕುವೆಂಪು: ನೆನಪಿನ ದೋಣಿಯಲ್ಲಿ, ಪುಟ ೧೩೯.

೩. ಕುವೆಂಪು: ವಿಚಾರಕ್ರಾಂತಿಗೆ ಆಹ್ವಾನ, ಪುಟ ೪೩.

೪. ಅದೇ, ಪುಟ ೪೬.

೫. ಅದೇ, ಪುಟ ೬೬.

೬. ಬೇಂದ್ರೆ ದ.ರಾ.: ಸಾಹಿತ್ಯದ ವಿರಾಟ್ ಸ್ವರೂಪ, ಪುಟ ೧೦೧೩.

೭. ಬೇಂದ್ರೆ ದ.ರಾ.: ಮತಧರ್ಮ ಮತ್ತು ಆಧುನಿಕ ಮಾನವ, ಪುಟ ೩೨.

೮. ಬೇಂದ್ರೆ ದ.ರಾ.: ವಿಚಾರ ಮಂಜರಿ, ಪುಟ ೪೦.

೯. ಅದೇ, ಪುಟ ೩೮.

೧೦. ಬೇಂದ್ರೆ ದ.ರಾ.: ಮತಧರ್ಮ ಮತ್ತು ಆಧುನಿಕ ಮಾನವ, ಪುಟ ೩೬.

೧೧. ಪ್ರಹ್ಲಾದ್ ಡಿ.ವಿ: ಮತ್ತೊಮ್ಮೆ ಭಗವದ್ಗೀತೆ ಹಲವು ನೋಟಗಳು, ಶಿವಾರೆಡ್ಡಿ ಕೆ.ಸಿ., ಭಗವದ್ಗೀತೆಯು....ಗಳ ಕೈಯಲ್ಲಿ ಸುರಕ್ಷಿತವಾಗಿದೆ(ಲೇಖನ), ಪುಟ ೨೫೭.

೧೨. ಬೇಂದ್ರೆ ದ.ರಾ.: ಸಾಹಿತ್ಯದ ವಿರಾಟ್ ಸ್ವರೂಪ, ಪುಟ ೧೦೧೩.

೧೩. ಆಮೂರ ಜಿ.ಎಸ್.: ಭುವನದ ಭಾಗ್ಯ, ಪುಟ ೨೬–೨೭.

೧೪. ಪ್ರಹ್ಲಾದ್ ಡಿ.ವಿ.: ಮತ್ತೊಮ್ಮೆ ಭಗವದ್ಗೀತೆ ಹಲವು ನೋಟಗಳು, ಶಿವಾರೆಡ್ಡಿ ಕೆ.ಸಿ., ಭಗವದ್ಗೀತೆಯು....ಗಳ ಕೈಯಲ್ಲಿ ಸುರಕ್ಷಿತವಾಗಿದೆ(ಲೇಖನ), ಪುಟ ೨೫೭.

❖❖❖

ಅಧ್ಯಾಯ: ಏಳು

ಗೀತೆ: ವಸಾಹತೋತ್ತರ ಸಂದರ್ಭ

ಅಧ್ಯಾಯ: ಏಳು

ಗೀತೆ: ವಸಾಹತೋತ್ತರ ಸಂದರ್ಭ

ಪೀಠಿಕೆ

ವಸಾಹತು ಶಿಕ್ಷಣದ ಚಿಂತನೆಗಳಿಂದ ಹಾಗೂ ಪಾಶ್ಚಾತ್ಯ ವಿದ್ವಾಂಸರಿಂದ ಮೂಡಿಬಂದ ಹಲವು ವೈಚಾರಿಕ ಪ್ರಜ್ಞೆಯಿಂದ, ಪ್ರಶ್ನೆಗಳಿಂದ ವಸಾಹತೋತ್ತರ ಕಾಲದಲ್ಲಿಯೂ ಗೀತೆಯು ಅನೇಕ ಚರ್ಚೆಗಳಿಗೆ ಒಳಗಾಗುತ್ತಲೇ ಇದೆ. ಪಾಶ್ಚಾತ್ಯ ವಿದ್ವಾಂಸರಾದ ಮ್ಯಾಕ್ಸ್‌ಮುಲ್ಲರ್, ಗಾರ್ಬೆ, ಜಾನ್ ಡೇವಿಸ್, ಹಾಪ್‌ಕಿನ್ಸ್, ವೆಬರ್ ಮುಂತಾದ ವಿದ್ವಾಂಸರು ಪ್ರಾರಂಭಿಸಿದ ಅನೇಕ ಚರ್ಚೆಗಳು ಗೀತೆಯನ್ನು ಧರ್ಮಕೇಂದ್ರಿತ ಪಠ್ಯವಾಗಿ ನೋಡದೆ ಅದನ್ನು ಅಧ್ಯಯನದ ಆಸಕ್ತಿಯ ವಿಷಯವಾಗಿ ನೋಡಲು ಪ್ರಾರಂಭಿಸಿದರು. ಇವರು ಗೀತೆಯ ಕುರಿತು ಹುಟ್ಟುಹಾಕಿದ ಚರ್ಚೆಗಳು ವಸಾಹತೋತ್ತರ ಕಾಲದಲ್ಲಿಯೂ ವಿಸ್ತೃತ ಮಜಲುಗಳನ್ನು ಪಡೆದು ದೇಶೀಯ ಚಿಂತಕರ ಮೂಲಕ ಅನೇಕ ಚರ್ಚೆಗಳಿಗೆ ಒಳಗಾಗುತ್ತಿದೆ. ಅವುಗಳಲ್ಲಿ ಬಹುಮುಖ್ಯವಾಗಿ ವರ್ಣವ್ಯವಸ್ಥೆ, ಜಾತಿವ್ಯವಸ್ಥೆ, ಸ್ತ್ರೀ, ಪುನರ್ಜನ್ಮ, ಅಸಮಾನತೆ, ರಾಷ್ಟ್ರೀಯ ಗ್ರಂಥ, ಶೈಕ್ಷಣಿಕ ಪಠ್ಯ ಮುಂತಾದ ಪ್ರಶ್ನೆಗಳು ಇಂದು ನಮ್ಮ ಮುಂದಿವೆ.

ಗೀತೆ ರಚನೆಯಾದಂದಿನಿಂದ ಇಲ್ಲಿಯವರೆಗೆ ಗೀತೆಯ ಪಠ್ಯವು ವಿವಿಧ ಆಲೋಚನೆ ದೃಷ್ಟಿಕೋನಗಳ ಹಿನ್ನೆಲೆಯಲ್ಲಿ ಬೇರೆ ಬೇರೆ ಆಯಾಮಗಳಲ್ಲಿ ಚರ್ಚೆಗೆ ಒಳಗಾಗುತ್ತಲೇ ಬಂದಿದೆ.

೨೦ನೆಯ ಶತಮಾನದಲ್ಲಿ ಬೆಳದುಬಂದ ಮಾರ್ಕ್ಸ್‌ವಾದ, ಸ್ತ್ರೀವಾದ, ದಲಿತವಾದಗಳಂತಹ ಸಂವೇದನೆಗಳು ಸಾಹಿತ್ಯಿಕ ಪಠ್ಯಗಳನ್ನು ಸ್ತ್ರೀವಾದಿ, ದಲಿತವಾದಿ, ಮಾರ್ಕ್ಸ್‌ವಾದಿ ಇನ್ನಿತರ ದೃಷ್ಟಿಕೋನಗಳಲ್ಲಿ ನೋಡುವ ಬಗೆಯನ್ನ ಸೃಷ್ಟಿಸಿದವು. ಹೀಗೆ ರೂಪ ತಾಳಿದ ದೃಷ್ಟಿಕೋನಗಳನ್ನು ಸಾಹಿತ್ಯದ ಎಲ್ಲ ಪಠ್ಯಗಳಿಗೂ ಅನ್ವಯಿಸಿ ಅಧ್ಯಯನ ಮಾಡಲಾಗುತ್ತಿದೆ. ಇದಕ್ಕೆ ಭಗವದ್ಗೀತೆಯೂ ಹೊರತಲ್ಲ. ಭಗವದ್ಗೀತೆಯೂ ಒಂದು ಸಾಂಸ್ಕೃತಿಕ ಪಠ್ಯವೆಂದು ಪರಿಭಾವಿಸಿ ಅಧ್ಯಯನ ನಡೆಸಬೇಕಾಗಿದೆ. ೭೦ರ ದಶಕದಿಂದೀಚೆಗೆ ಸಾಹಿತ್ಯ-ಸಂಸ್ಕೃತಿ ಚರ್ಚೆಗಳಲ್ಲಿ ಬಳಕೆಯಾಗುವ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ದೃಷ್ಟಿಕೋನಗಳು ಇಂತಹ ಅಧ್ಯಯನಗಳಿಗೆ ಮತ್ತಷ್ಟು ಪ್ರೇರಣೆಗಳನ್ನು ಒದಗಿಸಿವೆ. ಇಂತಹ ಆಲೋಚನಾ ವಿಧಾನಗಳ ಫಲವಾಗಿ ದಲಿತ,

ಸ್ತ್ರೀವಾದಿ ಮತ್ತು ಇತರ ಓದುಗಳೂ ಸಹ ಸಾಹಿತ್ಯ ಪಠ್ಯಗಳಲ್ಲಿ ಪ್ರಾತಿನಿಧ್ಯವನ್ನು ಹುಡುಕಾಟ ಮಾಡಲೆತ್ನಿಸಿವೆ. ಇಂತಹ ಬಹುಮುಖಿ ಆಲೋಚನಾ ವಿಧಾನವನ್ನು ಭಗವದ್ಗೀತೆ ಪಠ್ಯದಲ್ಲಿ ಹುಡುಕಾಟ ಮಾಡುವಾಗ ಅನೇಕ ಸೂಕ್ಷ್ಮ ಒಳವುಗಳು ನಮಗೆ ಕಾಣಸಿಗುತ್ತವೆ. ಬದಲಾದ ಸಾಮಾಜಿಕ, ಧಾರ್ಮಿಕ ಸಂದರ್ಭದಲ್ಲಿ ಅಂದರೆ ೨೧ನೆಯ ಶತಮಾನದ ಪ್ರಸ್ತುತ ಸಂದರ್ಭದಲ್ಲಿ ಧರ್ಮದ ಪ್ರಶ್ನೆ, ಧಾರ್ಮಿಕ ಗ್ರಂಥಗಳ ಪ್ರಸ್ತುತತೆ, ಕೋಮು ಸೌಹಾರ್ದತೆ, ಜಾಗತೀಕರಣದ ಫಲವಾದ ವಿಶ್ವಕುಟುಂಬಿ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಹೇಗೆ ಅಧ್ಯಯನ ಮಾಡಬೇಕೆಂಬುದು ಎದುರಾಗುವ ಮೂಲಭೂತ ಪ್ರಶ್ನೆಯಾಗಿದೆ. ಅಂದರೆ ಗೀತೆಯನ್ನು ಪ್ರಸ್ತುತ ಸಂದರ್ಭದಲ್ಲಿ ಒಂದು ಧಾರ್ಮಿಕ ಗ್ರಂಥವನ್ನಾಗಿ ನೋಡಬೇಕೋ ಅಥವಾ ಸಾಹಿತ್ಯ-ಸಂಸ್ಕೃತಿಯ ಆಕರವಾಗಿ ನೋಡಬೇಕೋ ಅಥವಾ ಈ ಎಲ್ಲವುಗಳನ್ನು ಒಳಗೊಂಡ ಸಾಮರಸ್ಯದ ಕಥನವನ್ನಾಗಿ ನೋಡಬೇಕೋ ಎಂಬ ಇತ್ಯಾದಿ ಪ್ರಶ್ನೆಗಳು ನಮ್ಮ ಎದುರಿಗೆ ಇದೆ. ಈ ಪ್ರಶ್ನೆಗಳಿಗೆ ಮುಖಾಮುಖಿಯಾಗುತ್ತ ಧಾರ್ಮಿಕ ಪಠ್ಯಗಳ ಅಗತ್ಯತೆಗಳ ಹುಡುಕಾಟವನ್ನು ಈ ಅಧ್ಯಾಯದಲ್ಲಿ ನಡೆಸಲಾಗಿದೆ.

೭.೧. ಭಗವದ್ಗೀತೆ ಮತ್ತು ಜಾತಿ

ಇಂದಿನ ಆಧುನಿಕ ಯುಗದ ತಾರ್ಕಿಕ ಪ್ರಶ್ನೆಗಳಿಂದ ಗೀತೆಯನ್ನು ಒರೆಗೆ ಹಚ್ಚಿ ನೋಡಬೇಕಾದ ಅಗತ್ಯತೆ ಇದೆ. ಈ ಪ್ರಯತ್ನವಾಗಿ ಹಲವಾರು ವಿದ್ವಾಂಸರು, ಚಿಂತಕರು ಹೀಗಾಗಲೇ ವಿವಿಧ ಆಲೋಚನೆಗಳನ್ನು, ಚರ್ಚೆಗಳನ್ನು ಬಳಸಿದ್ದಾರೆ. ಭಗವದ್ಗೀತೆಯಲ್ಲಿ ಪ್ರತಿಪಾದಿತವಾಗಿರುವ ಕರ್ಮಸಿದ್ಧಾಂತವು ಜಾತಿವ್ಯವಸ್ಥೆಯ ಮೂಲ ಎನ್ನುವವರೂ, ಗೀತೆ ಸರ್ವಸಕಲ ಜನಗಳ ಗುಣಸ್ವಭಾವವನ್ನು ಕುರಿತದ್ದಾಗಿದೆ ಎನ್ನುವವರೂ ಇದ್ದಾರೆ. ಗೀತೆಗೆ "ಭಾಷ್ಯಗಳನ್ನು ಬರೆದ ದೊಡ್ಡ ಆಚಾರ್ಯರೆಲ್ಲ ಕೆಲವು ವೇಳೆ ತಮ್ಮ ಸಿದ್ಧಾಂತಕ್ಕೆ ಸರಿಯಾದ ಅರ್ಥವನ್ನು ಸೂತ್ರದಲ್ಲಿ ಬರುವಂತೆ ಮಾಡುವಾಗ ತಿಳಿದೇ ಸುಳ್ಳನ್ನು ಹೇಳುತ್ತಿದ್ದರು"[೧] ಎನ್ನುವ ವಿವೇಕಾನಂದರು ಗೀತೆಯ ವ್ಯಾಖ್ಯಾನಗಳು ತಮಗೆ ಬೇಕಾದಂತೆ ತಮ್ಮ ತಮ್ಮ ಮತಪಂಥಗಳಿಗೆ ಅನುಗುಣವಾಗಿ ನಿರ್ವಚಿಸಿಕೊಂಡಿದ್ದಾರೆ. ಗೀತೆಯಲ್ಲಿನ ಶ್ಲೋಕಗಳು ಹಲವು ದ್ವಂದ್ವಗಳಿಗೆ ಎಡೆ ಮಾಡಿಕೊಡುವುದೇ ಅರ್ಥಸಂದಿಗ್ಧತೆಗಳಿಗೆ ಅನುವು ಮಾಡಿಕೊಡಲು ಬಹುಮುಖ್ಯ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಗೀತೆಯ ಕೆಲವು ಶ್ಲೋಕಗಳನ್ನೂ ವಿದ್ವಾಂಸರ ಚರ್ಚೆಗಳನ್ನೂ ಇಲ್ಲಿ ವಿಶ್ಲೇಷಣೆ ಮಾಡಬಹುದಾಗಿದೆ.

> ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ।
> ಶರೀರಯಾತ್ರಾಪಿ ಚ ತೇ ನ ಪ್ರಸಿದ್ಧ್ಯೇದಕರ್ಮಣಃ॥ (೩-೮)

(ನೀನು ನಿತ್ಯ ಕರ್ಮವನ್ನು ಮಾಡು; ಏಕೆಂದರೆ ಅಕರ್ಮಕ್ಕಿಂತ ಕರ್ಮವು ಉತ್ತಮವು; ಕರ್ಮವನ್ನು ಮಾಡದೇ ಇರುವುದರಿಂದ ನಿನಗೆ ಜೀವನ ಯಾತ್ರೆಯೂ ಕೂಡ ಸಾಧ್ಯವಾಗ ಲಾರದು.)

ಭಗವದ್ಗೀತೆಯ ಮೂರನೇ ಅಧ್ಯಾಯವಾದ ಕರ್ಮಯೋಗದ ಈ ಶ್ಲೋಕವನ್ನು ಗಮನಿಸುವುದಾದರೆ ನಿತ್ಯ ಜೀವನವನ್ನು ನಡೆಸಲು ಕರ್ಮವನ್ನು ಮಾಡಬೇಕು. ಇಲ್ಲಿ 'ಕರ್ಮ'ವು 'ಕೆಲಸ' ಎನ್ನುವ ಅರ್ಥದಲ್ಲಿ ಬಳಕೆಯಾಗಿದೆ. ಬಹುತೇಕ ವ್ಯಾಖ್ಯಾನಕಾರರೂ 'ಕರ್ಮ' ಎನ್ನುವುದನ್ನು 'ಕೆಲಸ' ಎನ್ನುವ ಅರ್ಥದಲ್ಲಿಯೇ ಬಳಸಿದ್ದಾರೆ. ಪ್ರತಿನಿತ್ಯವೂ ಕೆಲಸವನ್ನು ಮಾಡಬೇಕು; ಅದು ಪ್ರತಿನಿತ್ಯದ ಜೀವನಕ್ಕೆ ಸಹಕಾರಿಯಾದುದು ಎಂಬ ತತ್ವ ಕಾಯಕದ ಉತ್ತೇಜನವನ್ನು ಬೋಧಿಸುತ್ತದೆ. ಇದೇ ತತ್ವವು ವಚನ ಚಳುವಳಿಯ ಪ್ರಮುಖ ಆಶಯವಾಗಿತ್ತು. ಕಾಯಕ ತತ್ವ ಪ್ರತಿಯೊಬ್ಬನ ಕರ್ತವ್ಯವಾಗಬೇಕು ಎಂದು ಹಲವಾರು ಶರಣರು ಬೋಧಿಸಿದರು. ಆದರೆ ಗೀತೆ ಬೋಧಿಸುವ 'ಕರ್ಮ'ಕ್ಕೂ ವಚನಕಾರರು ಹೇಳಿದ ಕಾಯಕ ತತ್ವಕ್ಕೂ ಭಿನ್ನತೆಗಳಿವೆ. ಗೀತೆಯನ್ನು ಒಂದು ಪಠ್ಯವಾಗಿ ಪರಿಭಾವಿಸಿ ಹೇಳುವುದಾದರೆ ಗೀತೆಯಲ್ಲಿನ ಕೃಷ್ಣ ಅರ್ಜುನನಿಗೆ ಸ್ವಧರ್ಮ, ಅದರಲ್ಲೂ ಕ್ಷತ್ರಿಯ ಧರ್ಮದ ಆಚರಣೆ ಮಾಡುವಂತೆ ಕರ್ಮದ ಬೋಧನೆಯನ್ನು ಮಾಡುವಾಗ ಸ್ವಾರ್ಥದ ಅಥವಾ ಕೌಟುಂಬಿಕ ನೆಲೆಯಲ್ಲಿ 'ಕರ್ಮ'ವನ್ನು ಬೋಧಿಸಿದನು. ಆದರೆ ಬಸವಾದಿ ಶರಣರು ಸಾಮೂಹಿಕ ಹಿತಕ್ಕಾಗಿ ಸಮಾಜದ ಹಿತಕ್ಕಾಗಿ ಕಾಯಕತತ್ವವನ್ನು ಜತನದಿಂದ ಪಾಲಿಸಿಕೊಂಡು ಬಂದರು.

ಗೀತೆಯ ಮೊದಲನೇ ಅಧ್ಯಾಯದಲ್ಲಿಯೇ...

> ದೋಷೈರೇತೈಃ ಕುಘ್ನಾನಾಂ ವರ್ಣಸಂಕರಕಾರಕೈಃ।
> ಉತ್ಸಾದ್ಯಂತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ॥ (೧-೪೩)

(ಕುಲಘಾತಕರ ಈ ವರ್ಣಸಂಕರಕಾರಕ ದೋಷಗಳಿಂದ ಸನಾತನ ಜಾತಿಧರ್ಮಗಳೂ ಕುಲಧರ್ಮಗಳೂ ನಾಶ ಹೊಂದುತ್ತವೆ.)

ಅರ್ಜುನನಿಗೆ ತನ್ನ ಸ್ವ-ಜನರನ್ನು ಕೊಲ್ಲಬೇಕಾದ ಅನಿವಾರ್ಯತೆ ಎದುರಾದಾಗ ಹುಟ್ಟಿದ ಪ್ರಶ್ನೆ ಇದು. ಯುದ್ಧದಿಂದ ಆಗುವ ಅನಾಹುತಗಳಲ್ಲಿ ಕುಲ ಮತ್ತು ಜಾತಿ ಧರ್ಮ ನಾಶಗಳೂ ಸೇರಿವೆ. ಈ ಮೇಲಿನ ಶ್ಲೋಕವನ್ನು ಅರವಿಂದ ಮಾಲಗತ್ತಿ ಅವರು ವಿಶ್ಲೇಷಿಸುತ್ತಾ "ಈ ಶ್ಲೋಕದಲ್ಲಿ 'ಜಾತಿ ಧರ್ಮ' ಎಂಬ ಪದ ಬಳಕೆಯಾಗಿರುವುದನ್ನು ನೋಡಿದರೆ, ಜಾತಿಯು ಆ ಕಾಲದಲ್ಲಿಯೇ ಬಳಕೆಯಲ್ಲಿತ್ತು ಎಂಬುದು ಸ್ಪಷ್ಟವಾಗುತ್ತದೆ. ಹಾಗೂ ವರ್ಣಸಂಕರದಿಂದಾಗಿ ಈ ಜಾತಿ ಧರ್ಮವೂ ನಾಶವಾಗುವುದರ ಬಗ್ಗೆ ಹೇಳುವುದನ್ನು ನೋಡಿದರೆ ಜಾತಿವ್ಯವಸ್ಥೆ ಕಟ್ಟುಪಾಡುಗಳನ್ನು ಒಳಗೊಂಡಿದ್ದು ಅದನ್ನು ಕಾಯ್ದುಕೊಂಡು ಹೋಗುವುದಕ್ಕೇ ಕಟ್ಟುಪಾಡುಗಳಿದ್ದ ಬಗ್ಗೆ ಗೊತ್ತಾಗುತ್ತದೆ"[೨] ಎಂದಿದ್ದಾರೆ. ಇಲ್ಲಿ ಕುಲಧರ್ಮ, ಜಾತಿಧರ್ಮ ಎಂದರೆ ಸನಾತನ ಕುಲಧರ್ಮಗಳು ನಾಶವಾಗುತ್ತವೆ ಎಂಬ ಆತಂಕವೇ ವ್ಯಕ್ತವಾಗುತ್ತದೆ. ಇದನ್ನು ಗೀತೆಯ ೨ನೇ ಅಧ್ಯಾಯದ ೪೦ನೇ ಶ್ಲೋಕ[೩] ಸ್ಪಷ್ಟಪಡಿಸುತ್ತದೆ. ಹಾಗಾಗಿ ಗೀತೆಯಲ್ಲಿ ನಿರೂಪಿತವಾಗಿರುವ; 'ಧರ್ಮ' ಅದು ಮನು ಮುಂತಾದ ಗ್ರಂಥಗಳಲ್ಲಿ ಸೃಷ್ಟಿಸಿರುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ,

ಶೂದ್ರ ಎಂಬ ಚಾರ್ತುವರ್ಣ್ಯದ ಧರ್ಮವೇ ಆಗಿದೆ. ಈ ಮಾತನ್ನು ತಿಲಕರೂ ತಮ್ಮ ಕೃತಿಯಲ್ಲಿ ಹೀಗೆ ತಿಳಿಸಿದ್ದಾರೆ. "ಕರ್ಮಗಳನ್ನು ಹೇಳುವ ಸಮಯದಲ್ಲಿ ಧರ್ಮವೆಂಬ ಶಬ್ದವೇ ಹಲವು ಕಡೆಗೆ ಉಪಯೋಗಿಸಲ್ಪಟ್ಟದ್ದು, ಭಗವದ್ಗೀತೆಯೂ 'ಸ್ವಧರ್ಮಮಪಿಚಾವೇಕ್ಷ್ಯ"(೨-೩೧) ಅಂದರೆ ಸ್ವಧರ್ಮವಾವುದೆಂಬುದನ್ನು ನೋಡಿ ಯುದ್ಧ ಮಾಡಲು ಅರ್ಜುನನಿಗೆ ಶ್ರೀಕೃಷ್ಣನು ಹೇಳಿದಾಗ, ಹಾಗು ಮುಂದೆ 'ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ'(೩-೩೫) ಎಂಬಲ್ಲಿಯೂ 'ಧರ್ಮ'ವೆಂಬ ಶಬ್ದವು ಇಹಲೋಕಕ್ಕೆ ಸಂಬಂಧಿಸಿರುವ ಚಾತುರ್ವರ್ಣ್ಯದ ಧರ್ಮವೆಂಬ ಅರ್ಥದಲ್ಲಿಯೇ ಯೋಜಿಸಿರುತ್ತದೆ."[೪]

ಹೀಗೆ ಭಗವದ್ಗೀತೆಯಲ್ಲಿ ಹೇಳುವ 'ಸ್ವಧರ್ಮ' ಚಾತುರ್ವರ್ಣ್ಯದ ಸಮರ್ಥನೆಯಾಗಿದೆ. ಈ ಹಿನ್ನೆಲೆಯಲ್ಲಿ ಬಹು ಚರ್ಚಿತವಾಗಿರುವ ಗೀತೆಯ ಈ ಶ್ಲೋಕವನ್ನು ನೋಡಬಹುದಾಗಿದೆ.

ಚಾತುರ್ವರ್ಣ್ಯಂ ಮಯಾ ಸೃಷ್ಟಿ ಗುಣಕರ್ಮವಿಭಾಗಶಃ।
ತಸ್ಸ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್॥(೪-೧೩)

(ಐಹಿಕ ನಿಸರ್ಗದ ಗುಣತಂತ್ರಗಳಿಗೆ ಅನುಗುಣವಾಗಿ ಮತ್ತು ಅವುಗಳ ಕರ್ಮಗಳಿಗೆ ಅನುಸಾರವಾಗಿ ಮನುಷ್ಯ ಸಮಾಜದ ನಾಲ್ಕು ವರ್ಣಗಳನ್ನು ನಾನು ಸೃಷ್ಟಿಸಿದೆ. ನಾನು ಬದಲಾವಣೆಯಿಲ್ಲದವನು, ಅವ್ಯಯನು. ಆದುದರಿಂದ ನಾನು ಕರ್ತಾರನಲ್ಲ ಎಂದು ತಿಳಿ.)

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳನ್ನು ಮನುಷ್ಯನ ಗುಣ ಮತ್ತು ಕರ್ಮಗಳ ಆಧಾರದ ಮೇಲೆ ಸೃಷ್ಟಿಸಿದ್ದೇನೆ ಎಂದು ಕೃಷ್ಣನೇ ಹೇಳುತ್ತಿರುವುದರಿಂದ, ಚಾತುರ್ವರ್ಣ್ಯವು ಭಗವಂತನ ಸೃಷ್ಟಿ ಎಂದೇ ಹೇಳಲಾಗುತ್ತದೆ. ಇದನ್ನು ಅಂಬೇಡ್ಕರ್ ಅವರು 'ಚಾತುರ್ವರ್ಣ ಮತ್ತು ಜಾತಿಪದ್ಧತಿಯ ಸಮರ್ಥನೆಯೇ ಭಗವದ್ಗೀತೆಯ ಜೀವ' ಎಂದು ಹೇಳುವ ಮೂಲಕ ಭಗವದ್ಗೀತೆಯು ಚಾತುರ್ವರ್ಣ್ಯದ ಸಮರ್ಥನೆಯನ್ನು ಮಾಡುತ್ತದೆ. ಚಾತುರ್ವರ್ಣ್ಯ ದೈವಸೃಷ್ಟಿಯೆಂದೂ ಆದ್ದರಿಂದ ಪವಿತ್ರವೆಂದೂ ನಿಸ್ಸಂದೇಹವಾಗಿ ಹೇಳುತ್ತದೆ"[೫] ಎನ್ನುತ್ತಾರೆ. ಮುಂದೆ ೧೮ನೇ ಅಧ್ಯಾಯದಲ್ಲಿ ಈ ವರ್ಣವ್ಯವಸ್ಥೆಯ ವಿಭಜನೆಯನ್ನು ಕುರಿತು ಹೇಳಲಾಗಿದೆ.

ಬ್ರಾಹ್ಮಣ ಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ।
ಕರ್ಮಣಿ ಪ್ರವಿಭಕ್ತಾನಿ ಸ್ವಭಾವಪ್ರಭವೈರ್ಗುಣೈಃ ॥ (೧೮-೪೧)
ಶಮೋ ದಮಸ್ತಪಃ ಶೌಚಂ ಕ್ಷಾಂತಿರಾರ್ಜವಮೇವ ಚ ।
ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮ ಸ್ವಭಾವಜಮ್ ॥ (೧೮-೪೨)
ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇ ಚಾಪ್ಯಪಲಾಯನಮ್ ।
ದಾನಮೀಶ್ವರಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಮ್ ॥ (೧೮-೪೩)

ಕೃಷಿಗೌರಕ್ಷ್ಯವಾಣಿಜ್ಯಂ ವೈಶ್ಯಕರ್ಮ ಸ್ವಭಾವಜಮ್ ।
ಪರಿಚರ್ಯಾತ್ಮಕಂ ಕರ್ಮ ಶೂದ್ರಸ್ಯಾಪಿ ಸ್ವಭಾವಜಮ್ ॥ (೧೮–೪೪)

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರ ಕರ್ಮಗಳು ಸ್ವಭಾವದಿಂದ ಹುಟ್ಟಿದ ಗುಣಗಳಿಂದ ವಿಭಾಗಿಸಲ್ಪಟ್ಟಿವೆ(೧೮–೪೧); ಶಮ, ದಮ, ತಪ, ಶುಚಿ, ಕ್ಷಮೆ, ಅಧ್ಯಾತ್ಮಜ್ಞಾನ ಹಾಗೂ ವಿವಿಧ ಜ್ಞಾನ ಮತ್ತು ಆಸ್ತಿಕ ಭಾವ–ಇವು ಬ್ರಾಹ್ಮಣರ ಸ್ವಭಾವಜನ್ಯವಾದ ಕರ್ಮಗಳು(೧೮–೪೨); ಶೌರ್ಯ, ತೇಜಸ್ವಿತೆ, ಧೈರ್ಯ, ದಕ್ಷತೆ, ಯುದ್ಧದಿಂದ ಓಡಿ ಬಾರದಿರುವುದು, ದಾನ, ಶಾಸನ ಹಾಗೂ ಪ್ರಜಾಜನರ ಮೇಲೆ ಒಡೆತನ ಅಥವಾ ಪ್ರಭುತ್ವ–ಇವು ಕ್ಷತ್ರಿಯರ ಸ್ವಭಾವಜನ್ಯ ಕರ್ಮಗಳು(೧೮–೪೩); ಕೃಷಿ(ಒಕ್ಕಲುತನ, ಬೇಸಾಯ), ಗೋರಕ್ಷಣೆ ಮತ್ತು ವಾಣಿಜ್ಯ–ಇವು ವೈಶ್ಯನ ಸ್ವಭಾವಜನ್ಯ ಕರ್ಮಗಳು ಹಾಗೂ ಸೇವೆ ಮಾಡುವುದು ಶೂದ್ರನ ಸ್ವಭಾವಜನ್ಯವಾದ ಕರ್ಮ(೧೮–೪೪).

ಈ ಮೇಲಿನ ವಿವರಗಳನ್ನು ಪರಿಶೀಲಿಸಿದರೆ, ಕೃಷ್ಣನು ಚಾತುರ್ವರ್ಣ್ಯದ ಮೂಲಕ ಮೇಲು–ಕೀಳು ಎಂಬ ಶ್ರೇಣೀಕರಣವನ್ನು ಮತ್ತು ನಾಲ್ಕು ಜಾತಿಗಳ ವಿಭಾಗಗಳನ್ನು ಸೃಷ್ಟಿಸಿದ್ದಾನೆ. ಇಲ್ಲಿ 'ಹುಟ್ಟಿನಿಂದ ಪ್ರಕೃತಿದತ್ತವಾಗಿ ಬಂದ ಕರ್ಮ' ಎಂಬ ಮಾತುಗಳಿಂದ ಮಾನವ ಸಮಾಜದಲ್ಲಿ ಬಿರುಕನ್ನು ಉಂಟುಮಾಡುವ ಹಾಗೂ ಮೇಲ್ಮುಖ ಅವಕಾಶ ಆಗದ ಹಾಗೆ ಶ್ರೇಣೀಕರಣ ವ್ಯವಸ್ಥೆಯನ್ನು ಹುಟ್ಟುಹಾಕಿದೆ. ಆಧುನಿಕ ಯುಗದ ತಾರ್ಕಿಕ ಪ್ರಶ್ನೆಗಳಿಂದ ಈ ಶ್ಲೋಕಗಳನ್ನು ಒರೆಗೆ ಹಚ್ಚಿದರೆ, ಇದು ಅಸಮಾನತೆಯ ಸಮಾಜದ ಸೃಷ್ಟಿಗೆ ಕಾರಣವಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಧೈರ್ಯ ಎಂಬುದು ಕ್ಷತ್ರಿಯನ ಸೊತ್ತಲ್ಲ. ಅದು ಎಲ್ಲಾ ಮಾನವರಲ್ಲೂ ಇರುವಂಥದ್ದು. ಶುಚಿ, ತಪ, ಕ್ಷಮೆ ಇವು ಬ್ರಾಹ್ಮಣರಿಗಷ್ಟೇ ಸೀಮಿತವಾದುದಲ್ಲ, ಎಲ್ಲರೂ ಶುಚಿತ್ವದಿಂದ ಜಪ–ತಪಗಳನ್ನು ಮಾಡುವವರೇ; ಹಾಗೇ ಕ್ಷಮೆ, ಬ್ರಾಹ್ಮಣರ ಮೂಲ ಗುಣವಲ್ಲ, ಎಲ್ಲರಲ್ಲೂ ಕ್ಷಮಾಗುಣ ಇರುವಂಥದೇ. ಹಾಗಾಗಿ ಗೀತೆಯ ಈ ಮೇಲಿನ ವಿಭಾಗಕ್ರಮಗಳನ್ನು ಒಪ್ಪುವುದು ಕಷ್ಟವಾಗುತ್ತದೆ. ಗೀತೆಯಲ್ಲಿ 'ಸ್ವಧರ್ಮ' ಎಂದರೆ 'ಸ್ವಜಾತಿ'ಯೇ ಆಗಿದೆ. ಚಾತುರ್ವರ್ಣ್ಯದ ಮೂಲಕ ವಿಧಿತವಾಗಿರುವ ಕರ್ತವ್ಯಗಳನ್ನು ಆಯಾ ಜಾತಿಗಳವರು ಚಾಚೂ ತಪ್ಪದೆ ಪಾಲಿಸಬೇಕೆಂಬುದು ಈ ಶ್ಲೋಕದ ತಿರುಳಾಗಿದೆ.

ಚಾತುರ್ವರ್ಣ್ಯದ ಕುರಿತು ಗಾಂಧಿಯವರ ಈ ಕೆಳಗಿನ ಹೇಳಿಕೆ ಅವರ ಆಂತರಿಕ ಪ್ರಜ್ಞೆಯಲ್ಲಿ ಏನಿದೆ? ಎಂಬುದರ ಬಗ್ಗೆ ಸಂಶಯ ಬರುವಂತೆ ಮಾಡುತ್ತದೆ. "ಶಾಸ್ತ್ರಕ್ಕೆ ಅರ್ಥ ಮಾಡಲು ಸಂಸ್ಕಾರ, ಅನುಭವ ಅಗತ್ಯ. ಶೂದ್ರನಿಗೆ ವೇದಾಭ್ಯಾಸವಿಲ್ಲ ಎಂಬುದು ಸರ್ವಥಾ ತಪ್ಪೇನಲ್ಲ. ಶೂದ್ರ ಎಂದರೆ ಸಂಸ್ಕಾರಹೀನ, ಮೂರ್ಖ, ಅಜ್ಞಾನಿ. ಅವನು ವೇದಾಭ್ಯಾಸ ಮಾಡಿದರೆ ಅನರ್ಥ ಮಾಡಿಯಾನು. ವಯಸ್ಸಾದವರೂ ಕೂಡ ಬೀಜಗಣಿತದ ಕಠಿಣ ಪ್ರಶ್ನೆಗಳನ್ನು ತಮಗೆ ತಾವೇ ತಿಳಿದುಕೊಳ್ಳಲು ಅಧಿಕಾರಿಗಳಲ್ಲ. ಅವನ್ನು ತಿಳಿದುಕೊಳ್ಳಲು ಮೊದಲು ಸ್ವಲ್ಪ

ಪ್ರಾಥಮಿಕ ಶಿಕ್ಷಣ ಆಗಿರಬೇಕು. ವ್ಯಭಿಚಾರಿಯ ನಾಲಗೆಯಲ್ಲಿ 'ಅಹಂ ಬ್ರಹ್ಮಾಸ್ಮಿ' ಶೋಭಿಸಿತೇ? ಅದಕ್ಕೆ ಅವನೇನು ಅರ್ಥ(ಅಥವಾ ಅನರ್ಥ) ಮಾಡಿಯಾನು?"[೬]

ಗಾಂಧಿಯವರ ಈ ಮಾತುಗಳು ಎರಡನೇ ಅಧ್ಯಾಯದ ಹತ್ತೊಂಬತ್ತನೆಯ ಶ್ಲೋಕ "ಇದನ್ನು ಕೊಲ್ಲುತ್ತೇನೆಂದು ತಿಳಿದವನೂ ಇದು ಹತವಾಯಿತೆಂದು ತಿಳಿದವನೂ- ಇಬ್ಬರೂ ಏನನ್ನೂ ಅರಿಯದವರು. ಈ ಆತ್ಮವನ್ನು ಯಾರೂ ಸಂಹರಿಸಲಾರರು, ಇದನ್ನು ಸಂಹರಿಸಲೂ ಆಗುವುದೂ ಇಲ್ಲ"[೭] ಎಂಬ ಶ್ಲೋಕದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಆಡಿದ ಮಾತುಗಳಾದರೂ ಶೂದ್ರರ, ಅಸ್ಪೃಶ್ಯರ ಬಗ್ಗೆ ಗಾಂಧಿಯ ನಿಲುವುಗಳು ಉದಾರವಾದಿ ಮತ್ತು ಮಾನವೀಯವಾಗಿದ್ದರೂ ಸಹ ಶೂದ್ರರ ಬಗೆಗಿನ ಈ ಮಾತುಗಳು ಗಾಂಧಿ ಅವರನ್ನು ಸನಾತನವಾದಿಯೆಂದು ಬಿಂಬಿಸಲು ಅವಕಾಶ ಒದಗಿಸುತ್ತದೆ.

ಗಾಂಧೀಜಿ ಅವರು ಅನಾಸಕ್ತಿ, ನಿಷ್ಕಾಮಕರ್ಮವನ್ನು ದೇಶದ ಸುವ್ಯವಸ್ಥೆಗಾಗಿ ಆಚರಿಸಬೇಕೆಂದು ಹೇಳುತ್ತಾರೆ. ಅವರ ಮಾತುಗಳಲ್ಲೇ ಹೇಳುವುದಾದರೆ "ಕರ್ಮವನ್ನು ಸ್ವಾರ್ಥಕ್ಕಾಗಿ ಮಾಡಬಾರದು. ಪರಹಿತಕ್ಕಾಗಿ ಮಾಡಬೇಕು. ಸ್ವಾರ್ಥಕರ್ಮ ಬಂಧನ, ಪರಾರ್ಥಕರ್ಮ ಅದನ್ನು ಬಿಡಿಸುತ್ತದೆ."[೮]

ಗಾಂಧಿಯವರ ಈ ಮಾತುಗಳು ಕರ್ಮದ ಹಿನ್ನೆಲೆಯಲ್ಲಿ ದೇಶದ ಜನರನ್ನು ಒಟ್ಟಾಗಿಸಿ ಪರಹಿತಕ್ಕಾಗಿ ಅಂದರೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಬೇಕಿರುವ ಮನಸ್ಥಿತಿಯನ್ನು, ಶಕ್ತಿಯನ್ನು ಕಟ್ಟುವ ಕೆಲಸವನ್ನು ಮಾಡಲೋಸುಗ ಕರ್ಮಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ ಎನಿಸುತ್ತದೆ. ತಿಲಕರು ಸಹ ವೈಯಕ್ತಿಕ ಫಲಾಪೇಕ್ಷೆಯಿಲ್ಲದೆ ಲೋಕಕಲ್ಯಾಣಾರ್ಥವಾಗಿ ಮಾಡುವ ನಿಷ್ಕಾಮಕರ್ಮವೇ ಗೀತೆಯ ಸಂದೇಶ ಎಂದು ಅಚಲವಾಗಿ ನಂಬಿದ್ದರು.

ವಿನೋಬಾ ಅವರೂ ಕೂಡ ಸ್ವಧರ್ಮದ ಪ್ರತಿಪಾದನೆಯ ಜೊತೆಗೆ ವರ್ಣಾಶ್ರಮ ಧರ್ಮವನ್ನು ಕೂಡಿಸುತ್ತಾರೆ. ಈ ಎರಡೂ ಸಹಜವಾಗಿಯೂ ಹಾಗೂ ವಂಶಪಾರಂಪರ್ಯವಾಗಿಯೂ ಬರುವಂತಹವು. 'ಸ್ವಧರ್ಮದೊಂದಿಗೆ ನನ್ನ ತಾಯಿಯನ್ನು ಹೋಲಿಸುತ್ತೇನೆ. ಈ ಜನ್ಮದಲ್ಲಿ ನನ್ನ ತಾಯಿಯನ್ನು ಆರಿಸಿಕೊಳ್ಳುವುದು ನನ್ನಿಂದಾಗದು. ಆಕೆ ಈಗಾಗಲೇ ನನಗೆ ನಿರ್ಣಯವಾದವಳು. ಆಕೆ ಎಂಥದ್ದೇ ಸ್ವಭಾವದ ವ್ಯಕ್ತಿ ಆಗಿರಲಿ ಅವಳನ್ನು ತಳ್ಳಿ ಹಾಕಲಾಗದು.' ವಿನೋಬಾ ಅವರು ಸ್ವಧರ್ಮವು ಹೇಗೆ ಸಮಾನತೆಯನ್ನು ಸ್ಥಾಪಿಸುತ್ತದೆ ಎಂಬುದನ್ನು ವಿವರಿಸುವುದಿಲ್ಲ. ಅಲ್ಲದೆ, ವೈದಿಕ ವರ್ಣವ್ಯವಸ್ಥೆಯಲ್ಲಿರುವ ಶೋಷಣೆ, ಅಸಮಾನತೆ, ಏಣಿಶ್ರೇಣಿಯ ಕುರಿತಾಗಿ ಮೌನ ತಾಳುತ್ತಾರೆ. ವಿಶೇಷವೆಂದರೆ, ಸ್ವಧರ್ಮ ಮತ್ತು ವರ್ಣವ್ಯವಸ್ಥೆಯನ್ನು ಅಗೌರವದಿಂದ ಕಡೆಗಣಿಸಿರುವುದೇ ಸಮಾಜದಲ್ಲಿನ ಸಮಸ್ಯೆಗಳಿಗೆ ಕಾರಣವೆಂದು ವಾದಿಸುತ್ತಾರೆ.

ಗೀತೆಯಲ್ಲಿ 'ಕರ್ಮ' ಎಂಬ ಶಬ್ದವು ಅನೇಕಾರ್ಥಗಳಲ್ಲಿ ಬಳಕೆಯಾಗಿ ಅರ್ಥಸಂದಿಗ್ಧತೆಗೆ ಮತ್ತು ಗೊಂದಲಕ್ಕೆ ಎಡೆ ಮಾಡಿಕೊಟ್ಟಿದೆ. "ಭಗವದ್ಗೀತೆಯಲ್ಲಿ ಉಪಯೋಗಿಸಲ್ಪಟ್ಟ 'ಕರ್ಮ'

ಶಬ್ದವನ್ನು ಸೂಕ್ಷ್ಮವಾದ ವಿಮರ್ಶೆಗೆ ಅಥವಾ ಪರೀಕ್ಷೆಗೆ ಒಳಪಡಿಸಿ ನೋಡಿದಾಗ ಭಗವದ್ಗೀತೆಯ 'ಕರ್ಮ'ವೆಂದರೆ ಆಯಾಯಾ ಜಾತಿಗಳಿಗೆ ವಿಧಿಸಲಾಗಿದ್ದ ಕರ್ತವ್ಯಗಳ ಅನೂಚಾನ ಪಾಲನೆ ಎಂಬುದನ್ನು ಭಗವದ್ಗೀತೆಯು ಬಹಳ ನಾಜೂಕಾಗಿ, ಬಹಳವಾಗಿ ಸುತ್ತಿ ಬಳಸಿ ಹೇಳಿದೆ"[೯] ಎಂದು ಡೋಂಗ್ರೆ ಅವರು ಅಭಿಪ್ರಾಯಪಡುತ್ತಾರೆ.

ಅಂಬೇಡ್ಕರ್ ಅವರು, ಭಗವದ್ಗೀತೆ ಬಗ್ಗೆ ಬರೆದ ಬಹುಪಾಲು ಲೇಖಕರು ಕರ್ಮಯೋಗವನ್ನು 'ಕ್ರಿಯೆ' ಎಂದೂ, ಜ್ಞಾನಯೋಗವನ್ನು 'ತಿಳುವಳಿಕೆ' ಎಂದೂ ಅನುವಾದಿಸಿದ್ದಾರೆ. ಇದು ಸಂಪೂರ್ಣವಾಗಿ ತಪ್ಪು ಎಂದು ಹೇಳುತ್ತಾರೆ. "ಕರ್ಮವೆಂದರೆ ಧಾರ್ಮಿಕ ವ್ರತಗಳು ಮತ್ತು ಆಚರಣೆಗಳು ಎಂಬ ಅರ್ಥದಲ್ಲಿ ಇಲ್ಲಿ ಬಳಕೆಯಾಗಿದೆ. ಆದರೆ ಕರ್ಮ ಮತ್ತು ಜ್ಞಾನ ಶಬ್ದಗಳಿಗೆ ವಿಪರೀತಾರ್ಥವನ್ನು ತುಂಬಿ ಅವು ಅರ್ಥಗೌರವ ಶಬ್ದಗಳೆಂದು ಭಾಸವಾಗುವಂತೆ ಮಾಡಿ ಗೀತೆಗೆ ಜೀವ ತುಂಬುವ ಪ್ರಯತ್ನ ಮಾಡಲಾಗಿದೆ. ಇದು ದೇಶಭಕ್ತ ಭಾರತೀಯರ ಸೋಗಷ್ಟೇ"[೧೦] ಎಂದು ಟೀಕಿಸುತ್ತಾರೆ. ಗೀತೆಯನ್ನು ಕಾವ್ಯದ ರೂಪದಿಂದ ತತ್ವಜ್ಞಾನದ ಕೃತಿಯ ರೂಪಕ್ಕೂ, ತತ್ವಜ್ಞಾನದ ಕೃತಿಯನ್ನು ಧಾರ್ಮಿಕ ಕೃತಿಯ ರೂಪಕ್ಕೂ, ಧಾರ್ಮಿಕ ಕೃತಿಯನ್ನು ಮೀರಿ ಗಾಂಧೀಜಿ, ವಿನೋಬಾ ಅಂಥವರು ಆಧ್ಯಾತ್ಮಿಕ ರೂಪಕ್ಕೂ ತೆಗೆದುಕೊಂಡು ಹೋಗಿ ವಿಶ್ಲೇಷಣೆಗೆ ಒಳಪಡಿಸಿರುವುದರಿಂದ ಹಾಗೂ ಅನೇಕ ವ್ಯಾಖ್ಯಾನ, ಅನುವಾದಗಳಿಗೂ ಒಳಗಾಗಿರುವುದರಿಂದ ಅಂಬೇಡ್ಕರ್ ಅವರ ಈ ಮಾತನ್ನು ಒಪ್ಪಬಹುದಾಗಿದೆ.

ಈ ಮಾತಿಗೆ ಪೂರಕವಾಗಿ ಗೀತೆಯ ಈ ಶ್ಲೋಕವನ್ನು ನೋಡಬಹುದಾಗಿದೆ– ಗೀತೆ 'ಯಾವನು ಎಂದಿಗೂ ಒಂದು ಕ್ಷಣ ಮಾತ್ರವಾದರೂ ಕೆಲಸ ಮಾಡದೆ ಇರಲಾರನು, ಏಕೆಂದರೆ ಪ್ರತಿಯೊಬ್ಬನೂ ಪ್ರಕೃತಿಯಿಂದ ಹುಟ್ಟಿದ ಗುಣಗಳಿಂದ ಪರವಶನಾಗಿ ಕರ್ಮವನ್ನು ಮಾಡುತ್ತಲೇ ಇರುತ್ತಾನೆ'(೩–೫) ಎಂದು ಹೇಳುತ್ತದೆ. ಪ್ರತಿಯೊಬ್ಬರೂ ಕರ್ಮವನ್ನು ಮಾಡುತ್ತಲೇ ಇರುತ್ತಾರೆ ಎಂದ ಮೇಲೆ ಅಲ್ಲಿ ಸಾಮಾಜಿಕ ಚಲನೆ ಇದೆ ಎಂದೇ ಅರ್ಥ. ಆದರೆ ಗೀತೆಯು ಒತ್ತಿ ಒತ್ತಿ ಹೇಳುವ ಕರ್ಮದ ಆಚರಣೆ ಎಂದರೆ ಸ್ವಧರ್ಮದ ಆಚರಣೆ ಅಥವಾ ಅಂಬೇಡ್ಕರ್ ಹೇಳಿದ ಧಾರ್ಮಿಕ ವ್ರತಗಳು ಮತ್ತು ಆಚರಣೆಗಳೇ ಆಗಿವೆ ಎಂಬುದು ಗಮನಿಸಬೇಕಾದ ಅಂಶವಾಗಿದೆ.

ಕರ್ಮದ ಬಗೆಗಿನ ಗೀತೆಯ ಮತ್ತೊಂದು ಬಹುಜನಪ್ರಿಯ ಶ್ಲೋಕವನ್ನು ಗಮನಿಸುವುದಾದರೆ–

> ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।
> ಮಾ ಕರ್ಮಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ ॥(೨–೪೭)

ಕರ್ಮದಲ್ಲಿಯೇ ನಿನಗೆ ಅಧಿಕಾರವು, ಕರ್ಮಫಲದಲ್ಲಿ ಎಂದಿಗೂ ಆಸಕ್ತಿಯಾಗದಿರಲಿ. ಕರ್ಮಫಲಕ್ಕೆ ಕಾರಣನಾಗದೇ ಇರು; ಕರ್ಮವನ್ನು ಬಿಡುವುದರಲ್ಲಿ ನಿನಗೆ ಪ್ರೀತಿಯಾಗದಿರಲಿ ಎಂಬುದು ಈ ಶ್ಲೋಕದ ಅರ್ಥ. ಇಲ್ಲಿ ಕರ್ಮ ಹೇಗಿರಬೇಕೆಂದರೆ ಯಾವುದೇ ಪ್ರತಿಫಲಾಕ್ಷೆಯನ್ನು

ಬೇಡದೆ ಮಾಡುವ ಕರ್ತವ್ಯವಾಗಿರಬೇಕು. ಇಂತಹ ಕರ್ಮಕ್ಕೆ 'ನಿಷ್ಕಾಮಕರ್ಮ' ಎಂಬ ಹೆಸರಿದೆ. ಈ ನಿಷ್ಕಾಮಕರ್ಮ ತತ್ವವನ್ನೇ ಗಾಂಧಿಯು ಹೆಚ್ಚು ಆತ್ಯಂತಿಕವಾಗಿ ಪ್ರೀತಿಸುತ್ತಿದ್ದರು ಹಾಗೂ ಈ ತತ್ವವೇ ಗೀತೆಯ ಮುಖ್ಯ ತಿರುಳು ಎಂದು ನಂಬಿದ್ದರು. ಆದರೆ ಅನೇಕ ಚಿಂತಕರು ಗೀತೆಯ ಕರ್ಮಸಿದ್ಧಾಂತವನ್ನು ಟೀಕಿಸಿದ್ದಾರೆ.

"ವರ್ಣಾಶ್ರಮ ಧರ್ಮವನ್ನು ಆಧರಿಸಿದ ಜಾತಿಪದ್ಧತಿಯನ್ನು ದೇವ ನಿರ್ಮಿತವೆಂದು ನಂಬಿಸಿ ಅದರ ಮುಖಾಂತರವೇ, ಸಾವಿರಾರು ವರ್ಷಗಳಿಂದ ಕಮ್ಮಾರನ ಮಗ ಕಮ್ಮಾರನಾಗಿ, ಅಸ್ಪೃಶ್ಯರು ಅಸ್ಪೃಶ್ಯರಾಗಿಯೇ ಬಾಳುವಂತೆ ಮಾಡಿದೆ"[೧೧] ಎಂದು ಎಸ್.ಎಮ್. ಜಾಮದಾರ ಅವರು ಗೀತೆಯ ವರ್ಣಾಶ್ರಮ ಧರ್ಮವನ್ನು ಕುರಿತು ತಮ್ಮ ಅಭಿಪ್ರಾಯವನ್ನು ತಿಳಿಸಿದ್ದಾರೆ. ಗೀತೆಯಲ್ಲಿ "ಹಿತೈಷಿ, ಮಿತ್ರ, ಶತ್ರು, ನಿಷ್ಪಕ್ಷಪಾತಿ, ಇಬ್ಬರ ಹಿತವನ್ನೂ ಬಯಸುವವನು, ದ್ವೇಷಪಾತ್ರ, ಬಂಧು, ಸಾಧು, ಪಾಪಿ–ಇವರೆಲ್ಲರಲ್ಲಿ ಸಮಭಾವ ಇರುವವನು ಶ್ರೇಷ್ಠ"[೧೨] ಎಂದೂ 'ವಿದ್ಯಾವಂತ ವಿನಯವಂತ ಆದ ಬ್ರಾಹ್ಮಣನಲ್ಲಿಯೂ, ಹಸು, ಆನೆ, ನಾಯಿಗಳಲ್ಲಿಯೂ, ನಾಯಿಯನ್ನು ತಿನ್ನುವ ಚಾಂಡಾಲನಲ್ಲಿಯೂ ಜ್ಞಾನಿಗಳು ಸಮಾನ ದೃಷ್ಟಿಯುಳ್ಳವರಾಗಿರುತ್ತಾರೆ'[೧೩] ಎಂಬ ಸಮಾನತೆಯನ್ನು ಸಮನ್ವಯಗೊಳಿಸುವ ಮಾತುಗಳು ಇವೆಯಾದರೂ, 'ಕರ್ಮಣ್ಯೇ ವಾಧಿಕಾರಸ್ತೇ' ಶ್ಲೋಕ ಹೇಳುವ ಹಾಗೆ ಕೆಲಸಕ್ಕೆ ತಕ್ಕ ಪ್ರತಿಫಲವನ್ನು ಅಪೇಕ್ಷಿಸದೇ ಇರುವುದು ಈ ಸಾಮಾಜಿಕ ಬದುಕಿನಲ್ಲಿ ಕಷ್ಟಸಾಧ್ಯವಾಗುತ್ತದೆ ಎನ್ನುವುದು ಒಂದು ಪ್ರಶ್ನೆಯಾದರೆ, ಅದೇ ಸಮಯದಲ್ಲಿ ಇದು ಕಾಯಕನಿಷ್ಠೆಯನ್ನೂ ಹೇಳುವಂತಿದೆ ಎನ್ನುವುದು ಮತ್ತೊಂದು ಸಮರ್ಥನೆಯಾಗಿದೆ. ಹೀಗೆ ಗೀತೆಯನ್ನು ಆಧ್ಯಾತ್ಮಿಕ ನೆಲೆಯಲ್ಲಿ, ಸಾಮಾಜಿಕ ನೆಲೆಯಲ್ಲಿ, ತತ್ವಜ್ಞಾನದ ನೆಲೆಯಲ್ಲಿ ಹೀಗೆ ಅನೇಕ ನೆಲೆಗಳಲ್ಲಿ ಅಭ್ಯಸಿಸಬಹುದಾಗಿದೆ. ಇಲ್ಲಿ ಆಧ್ಯಾತ್ಮಿಕ ನೆಲೆಯಿಂದ ಈ ಶ್ಲೋಕಗಳ ಅರ್ಥವನ್ನು ಗ್ರಹಿಸಲು ಪ್ರಯತ್ನಿಸಿದರೆ ನಮಗೆ ಸಾಮಾಜಿಕ ನೆಲೆಯ ಪ್ರಶ್ನೆಗಳು ಉದ್ಭವಿಸುವುದಿಲ್ಲ. ಆದರೆ ಸಾಮಾಜಿಕ ನೆಲೆಯಿಂದ ಈ ಶ್ಲೋಕಗಳನ್ನು ನೋಡಿದರೆ ಸಮಾಜದಲ್ಲಿನ ಏಣಿ–ಶ್ರೇಣಿ, ಮೇಲು–ಕೀಳು ಎಂಬ ವರ್ಣವ್ಯವಸ್ಥೆಯ ಪ್ರತಿಪಾದನೆಯು ಕಾಣುತ್ತದೆ. ಆದರೂ ಗೀತೆಯಲ್ಲಿ ಮೊದಲೇ ಹೇಳಿದಂತೆ ದ್ವಂದ್ವವಿದೆ. ನಮ್ಮ ನಮ್ಮ ಸೈದ್ಧಾಂತಿಕ ಹಿನ್ನೆಲೆಗೆ ಅನುಗುಣವಾಗಿ ಗೀತೆಯ ಶ್ಲೋಕವನ್ನು ವ್ಯಾಖ್ಯಾನಿಸುವ ಅವಕಾಶ ನಮಗೆ ಗೀತೆಯೇ ನೀಡಿದೆ.

ಈ ಮೊದಲೇ ಚರ್ಚಿಸಿದಂತೆ, 'ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮ ವಿಭಾಗಶಃ' ಶ್ಲೋಕದ ವಿವರಗಳನ್ನು ಪರಿಶೀಲಿಸಿದರೆ, ಭಾರತದಲ್ಲಿ ಹಿಂದೂ ಆದವನು ಒಂದು ಜಾತಿಯಲ್ಲಿ ಹುಟ್ಟುತ್ತಾನೆ; ಅದರಲ್ಲೇ ಬದುಕುತ್ತಾನೆ ಮತ್ತು ಅದರಲ್ಲೇ ಸಾಯುತ್ತಾನೆ. ಜೊತೆಗೆ ಜೀವಿತಾವಧಿಯಲ್ಲಿ ತನ್ನ ಜಾತಿಯ ಕರ್ಮ–ಕರ್ತವ್ಯಗಳ ಬಗ್ಗೆ ತಳೆದಿದ್ದ ಆಸಕ್ತಿ ಹಾಗೂ ಅವುಗಳ ಪಾಲನೆಯ ಆಧಾರದ ಮೇಲೆ ಅವನ ಮರಣೋತ್ತರ ಸ್ಥಾನವು ನಿರ್ಧಾರವಾಗುತ್ತದೆ. ಸಾಮಾಜಿಕ ಚಲನೆಗೆ ಇಲ್ಲಿ ಅವಕಾಶವಿಲ್ಲ. ವರ್ಗಸಮಾಜದಲ್ಲಿ ಇಂತಹ ಚಲನೆಗೆ ಮುಕ್ತ ಅವಕಾಶವಿರುವುದರಿಂದಲೇ

ಒಬ್ಬ ಕಾರ್ಮಿಕನ ಮಗ ಆಧ್ಯಾತ್ಮಿಕ ಅರ್ಥದಲ್ಲೂ ಮೇಲುಸ್ತರಕ್ಕೆ ಏರುವ ಸಾಧ್ಯತೆಗಳು ಇರುತ್ತವೆ.

ಕೃಷ್ಣನು ಸೃಷ್ಟಿಸಿದ ಈ ಭಾಷಿಕ ಮತ್ತು ಸೈದ್ಧಾಂತಿಕ ಸಂದಿಗ್ಧತೆಗಳ ಹಾದಿಯನ್ನೇ ಆಯ್ಕೆ ಮಾಡಿಕೊಳ್ಳುವ ಗೀತೆಯ ವ್ಯಾಖ್ಯಾನಕಾರರೆಲ್ಲರೂ ಜಾತಿವ್ಯವಸ್ಥೆಯು ಮಾನವ ನಿರ್ಮಿತವಾಗಿರದೆ ದೈವನಿರ್ಮಿತವಾಗಿರುವುದರಿಂದ, ಪವಿತ್ರವಾದ ಅದನ್ನು ಭಂಗಗೊಳಿಸುವಂತಿಲ್ಲ; ಅದನ್ನು ವಿರೋಧಿಸುವುದೆಂದರೆ ದೈವಕ್ಕೆ ಅವಿಧೇಯತೆಯನ್ನು ತೋರಿಸಿದಂತಾಗುತ್ತದೆ ಎಂದು ಹೇಳಿದ್ದಾರೆ.

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥ (೩-೩೫)

ಅರ್ಥ: ಗುಣವಿಲ್ಲದ ಸ್ವಧರ್ಮವು ಚೆನ್ನಾಗಿ ಅನುಷ್ಠಾನ ಮಾಡಿದ ಪರಧರ್ಮಕ್ಕಿಂತಲೂ ಶ್ರೇಯಸ್ಕರವಾದದ್ದು. ಸ್ವಧರ್ಮದಲ್ಲಿ ಮರಣವೂ ಒಳ್ಳೆಯದು; ಪರಧರ್ಮವು ಭಯಂಕರವಾದುದು.

ಈ ಮೇಲಿನ ಶ್ಲೋಕವೂ ಕೂಡ ಪರಧರ್ಮವು ಭಯಂಕರವಾದುದು ಎಂದು ತಿಳಿಸಿ ಸ್ವಧರ್ಮದ ಪ್ರತಿಪಾದನೆಯನ್ನೇ ಮಾಡುತ್ತದೆ. ಅದರ ಮೂಲಕ ಸ್ವಧರ್ಮದಲ್ಲಿ ಎಷ್ಟೇ ಕಷ್ಟವಿದ್ದರೂ ಅದನ್ನು ಸಹಿಸಿಕೊಳ್ಳುವಂತೆ ಗೀತೆ ನಿರ್ದೇಶಿಸುತ್ತದೆ. ಸ್ವಧರ್ಮವನ್ನು ವ್ಯಾಖ್ಯಾನಕಾರರೆಲ್ಲೂ ತಮಗೆ ಹುಟ್ಟಿನಿಂದ ಬಂದ ಕರ್ತವ್ಯ, ಅದು ಜಾತಿಯ ಹಿನ್ನೆಲೆಯುಳ್ಳದ್ದು ಎಂದೇ ವ್ಯಾಖ್ಯಾನಿಸಿದ್ದಾರೆ. ಈ ಶ್ಲೋಕವು ಗೀತೆಯಲ್ಲಿನ ಅಸಹಿಷ್ಣುತೆಗೆ ಒಂದು ಉತ್ತಮ ಉದಾಹರಣೆಯಾಗಿದೆ.

ಸಂಕರೋ ನರಕಾಯೈವ ಕುಲಘ್ನಾನಾಂ ಕುಲಸ್ಯ ಚ ।
ಪತಂತಿ ಪಿತರೋ ಹ್ಯೇಷಾಂ ಲುಪ್ತಪಿಂಡೋದಕಕ್ರಿಯಾಃ ॥ (೧-೪೨)

ಅರ್ಥ: ವರ್ಣಸಂಕರವು ಕುಲನಾಶ ಮಾಡಿದವರಿಗೂ ಕುಲಕ್ಕೂ ನರಕ ಪ್ರಾಪ್ತಿಯನ್ನು ಉಂಟುಮಾಡುವುದು. ಇವರ ಪಿತೃಗಳು ಶ್ರಾದ್ಧತರ್ಪಣ ಕ್ರಿಯೆಗಳಿಲ್ಲದೆ ಪಿತೃಲೋಕದಿಂದ ಕೆಳಕ್ಕೆ ಬೀಳುವರು.

ಗೀತೆಯ ಮೇಲಿನ ಶ್ಲೋಕದಲ್ಲಿ ವರ್ಣಸಂಕರದ ಪ್ರಶ್ನೆಯನ್ನು ಕಾಣಬಹುದಾಗಿದೆ. ವರ್ಣಸಂಕರದಿಂದ ಕುಲವನ್ನು ನಾಶ ಮಾಡಿದರೆ ಅವರಿಗೆ ಮೋಕ್ಷವೂ ಸಿಗುವುದಿಲ್ಲ. ಹಾಗೆಯೇ ಅವರ ಪೂರ್ವಿಕರಿಗೆ, ಪಿತೃಗಳಿಗೆ ನರಕಪ್ರಾಪ್ತಿಯಾಗುತ್ತದೆ ಎಂಬ ಭಯವನ್ನು ಜನರಲ್ಲಿ ಬಿತ್ತುತ್ತಿದೆ. ಇದು ಅವರವರಿಗೆ ಹುಟ್ಟಿನಿಂದ ಬಂದ ಕರ್ಮಗಳನ್ನು ಮಾಡುತ್ತಲೇ ಇರುವಂತೆ ಅದರಲ್ಲಿಯೇ ಬದುಕನ್ನು ಕೊನೆಗೊಳಿಸುವಂತೆ ಇದು ನಿರ್ದೇಶಿಸುತ್ತದೆ.

ಹೀಗೆ ಗೀತೆ ಕರ್ಮಸಿದ್ಧಾಂತದ ಹಿನ್ನೆಲೆಯಲ್ಲಿ ಚಾತುರ್ವರ್ಣ್ಯ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಾ ಸಮಾಜದಲ್ಲಿ ಅದನ್ನು ವ್ಯವಸ್ಥಿತವಾಗಿ ಸ್ಥಿರೀಕರಿಸುತ್ತದೆ ಎಂದು ಹಲವಾರು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

೭.೨. ಭಗವದ್ಗೀತೆ ಮತ್ತು ಸ್ತ್ರೀ

ಕುರುಕ್ಷೇತ್ರದಲ್ಲಿ ಅರ್ಜುನನಿಗೆ ತನ್ನ ಬಂಧುಬಾಂಧವರನ್ನು ಯುದ್ಧದಲ್ಲಿ ಕೊಲ್ಲಬೇಕೆಂಬ ವಿಷಾದವು ಹುಟ್ಟಿದಾಗಿ ಶ್ರೀಕೃಷ್ಣನಿಗೆ ಕೇಳುವ ಪ್ರಶ್ನೆಗಳಲ್ಲಿ ಈ ಕೆಳಗಿನ ಶ್ಲೋಕವೂ ಒಂದು. ಇದು ಅರ್ಜುನನಿಗೆ ಹುಟ್ಟಿದ ವರ್ಣಸಂಕರದ ಪ್ರಶ್ನೆಯಾಗಿದೆ. ಕುಲವು ನಾಶವಾದರೆ ಕುಲಧರ್ಮವು ನಾಶವಾಗಿ ಅಧರ್ಮ ಹೆಚ್ಚುತ್ತದೆ ಎನ್ನುವ ಮಾತಿಗೆ ಪೂರಕವಾಗಿ ಅರ್ಜುನ ಮುಂದಿನ ಮಾತುಗಳನ್ನು ಆಡುತ್ತಾನೆ.

ಅಧರ್ಮಾಭಿಭವಾತ್ ಕೃಷ್ಣ ಪ್ರದುಷ್ಯಂತಿ ಕುಲಸ್ತ್ರೀಯಃ ।
ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಂಕರಃ ॥(೧-೪೧)

ಅಂದರೆ ಅಧರ್ಮವು ಹೆಚ್ಚಾಗುವುದರಿಂದ ಕುಲಸ್ತ್ರೀಯರು ಕೆಟ್ಟುಹೋಗುವರು, ಸ್ತ್ರೀಯರು ದುಷ್ಟರಾದರೆ ವರ್ಣಗಳ ಸಾಂಕರ್ಯವು ಉಂಟಾಗುವುದು ಎನ್ನುವ ಆತಂಕವನ್ನು ವ್ಯಕ್ತಪಡಿಸುತ್ತಾನೆ. ಗೀತೆಯಲ್ಲಿ ಸ್ತ್ರೀಯರಿಗೆ ಸ್ಥಾನಮಾನವಿಲ್ಲ. ಗೀತೆಯಲ್ಲಿ ಸ್ತ್ರೀಯರನ್ನು ಅಗೌರವದಿಂದ ಕಾಣಲಾಗಿದೆ ಎಂಬ ಆರೋಪಗಳು ಇವೆ. ಯುದ್ಧದಿಂದ ಆಗುವ ಪ್ರಾಣಹಾನಿಯಿಂದ ಕುಲಸ್ತ್ರೀಯರು ಕೆಟ್ಟುಹೋಗುವಂತಹ ಕಾರ್ಯಗಳನ್ನು ಮಾಡಿಕೊಳ್ಳುತ್ತಾರೆ ಎಂಬ ಆತಂಕ ಇದನ್ನು ಸ್ಪಷ್ಟಪಡಿಸುತ್ತದೆ. ಪಾವಿತ್ರ್ಯತೆ ಮತ್ತು ಸ್ವಧರ್ಮ-ಸ್ವಜಾತಿ-ಕುಲಧರ್ಮದ ಮೇಲಿನ ವ್ಯಾಮೋಹದಿಂದ ಸ್ತ್ರೀಯರನ್ನು ಅನುಮಾನದಿಂದ ನೋಡಲಾಗಿದೆ. ಅವರ ಆಸೆ ಆಕಾಂಕ್ಷೆ ಮತ್ತು ಸಾಮಾಜಿಕವಾಗಿ ಸ್ವತಂತ್ರವಾಗಿ ಬದುಕುವ ಸ್ವಾತಂತ್ರ್ಯವನ್ನು ಈ ಹಿಂದೆಯೂ ಕುಲಧರ್ಮೀಯ ಸ್ತ್ರೀಯರೂ ಹೊಂದಿರಲಿಲ್ಲ ಎಂಬುದಕ್ಕೆ ಅರ್ಜುನನ ಮಾತುಗಳು ಆಧಾರವನ್ನು ಒದಗಿಸುತ್ತವೆ. ಗೀತೆಯಲ್ಲಿ ಬರುವ, ಅರ್ಜುನನ 'ಕುಲಸ್ತ್ರೀಯರು ಕೆಟ್ಟುಹೋಗುತ್ತಾರೆ' ಎಂಬ ಮಾತು ಭಾರತೀಯ ಪುರುಷ ಪ್ರಧಾನ ಸಮಾಜದ ಆತಂಕಕ್ಕೆ ಕಾರಣವಾಗಿರುವುದನ್ನು ಭಾರತದ ಚರಿತ್ರೆಯಲ್ಲಿ ಸೂಕ್ಷ್ಮವಾಗಿ ಗಮನಿಸಬಹುದಾಗಿದೆ. ಅದರಲ್ಲೂ ಕ್ಷತ್ರಿಯ ರಾಜರಲ್ಲಿ ಸ್ತ್ರೀಯರ ಪಾವಿತ್ರ್ಯನಾಶದ ಆತಂಕ ಹೆಚ್ಚಾಗಿದ್ದು ಇದು ಸತಿ ಮತ್ತು ರಜಪೂತರಲ್ಲಿ ಜೋಹಾರ್ ಪದ್ಧತಿಗೆ ಎಡೆ ಮಾಡಿಕೊಟ್ಟಿರುವುದನ್ನು ಗುರುತಿಸಬಹುದಾಗಿದೆ. ಸತಿಪದ್ಧತಿಯ ಉಲ್ಲೇಖ ಕ್ರಿ.ಪೂ. ೪ನೇ ಶತಮಾನದ್ದೆಂದು ಹೇಳುವ ಗ್ರೀಕ್ ಬರವಣಿಗೆಗಳಿಂದ ಮತ್ತು ಮಹಾಭಾರತದಲ್ಲಿ ಬರುತ್ತದೆ. ಆದರೂ ವಾಸ್ತವವಾಗಿ ಕ್ರಿ.ಶ. ೪೦೦ಕ್ಕೆ ಮುಂಚೆ ಜನಪ್ರಿಯವಾಗಿ ಬೆಳೆಯಲು ಪ್ರಾರಂಭಿಸಿರಲಿಲ್ಲ. ಕ್ರಿ.ಶ. ೭೦೦ರಿಂದ ೧೧೦೦ರವರೆಗೆ ಭಾರತದಲ್ಲಿ ಇದು ಹೆಚ್ಚು ಹರಡಿತು. ನಂತರ ೧೯ನೇ ಶತಮಾನದ ಮೊದಲ ದಶಕದಲ್ಲಿ ಅಂದರೆ ಬ್ರಿಟಿಷರ ಆಗಮನದ ಕಾಲದಲ್ಲಿ ಬೆಳವಣಿಗೆ ಅತಿ ಹೆಚ್ಚಾಯಿತು ಎಂದು ಇತಿಹಾಸಕಾರರಾದ ಅನಂತ್ ಸದಾಶಿವ ಆಲ್ವೇಕರ್ ಅವರು ಗುರುತಿಸುತ್ತಾರೆ. ಮುಂದೆ ವಸಾಹತು ಕಾಲದಲ್ಲಿ ಬಂದ ಗೀತೆಯ ಅಸಂಖ್ಯ ಅನುವಾದಗಳು, ವ್ಯಾಖ್ಯಾನಗಳಿಂದ ಪಾವಿತ್ರ್ಯತೆಯ ಪ್ರಶ್ನೆ ಜನರಲ್ಲಿ ಗಟ್ಟಿಯಾಗಿ ನೆಲೆಯೂರಿತು ಮತ್ತು ಭಾರತದ ಸಾಮಾಜಿಕ ಬಿಡುಗಡೆಗಾಗಿ ರೂಪುಗೊಂಡ

ಸತಿಪದ್ಧತಿಯ ಅತಿವೇಗದ ಬೆಳವಣಿಗೆಗೆ ಕಾರಣವಾಗಿರಬಹುದು ಎಂಬ ಅನುಮಾನ ವ್ಯಕ್ತವಾಗುತ್ತದೆ(ಇದಕ್ಕೆ ಪ್ರತ್ಯೇಕ ಅಧ್ಯಯನದ ಅವಶ್ಯಕತೆ ಇದೆ). ಪಾಂಡುರಾಜ ಸತ್ತಾಗ ಸ್ವತಃ ಮಾದ್ರಿಯೇ ಸತಿಗೆ ಬಲಿಯಾಗಬೇಕಾಯಿತು. ಇದು ಆ ಸಮಾಜದಲ್ಲಿ ಸತಿ ಆಚರಣೆಯಲ್ಲಿತ್ತು ಎಂಬುದನ್ನು ತಿಳಿಸುತ್ತದೆ. ಆದರೆ ಅರ್ಜುನನಿಗೆ ಎದುರಾದ ಕುಲಸ್ತ್ರೀಯರು 'ಕೆಟ್ಟು ಹೋಗುವರು' ಎಂಬ ಆತಂಕ ಅಂದಿನ ಸಮಾಜದಲ್ಲಿ ಇದ್ದ ಬಹುಪತ್ನಿತ್ವದ ಆಚರಣೆಯನ್ನೂ ಸ್ಪಷ್ಟಪಡಿಸಿದೆ. ಬಹುಪತ್ನಿತ್ವದ ಆಚರಣೆಯೇ ಸ್ತ್ರೀಯರ ಮೂಲಭೂತ ಹಕ್ಕುಗಳನ್ನು ಕಸಿದುಕೊಳ್ಳುವ ಮತ್ತು ಸಮಾನತೆಯನ್ನು ನಿರಾಕರಿಸುವ ಕ್ರಮವಾಗಿದೆ. ಅರ್ಜುನ ಅಂಥ ಬಹುಪತ್ನಿತ್ವವನ್ನು ಆಚರಿಸಿದ್ದ. ದ್ರೌಪದಿ ಐದು ಜನರ ಪತ್ನಿಯಾಗಿದ್ದರೂ ಅರ್ಜುನನ ದೃಷ್ಟಿಯಲ್ಲಿ ಸ್ವಜಾತಿಯಿಂದ ಕುಲ ನಾಶವಾಗುವುದಿಲ್ಲ. ಆದರೆ ಯುದ್ಧದಲ್ಲಿ ಎದುರು ಸೈನ್ಯದ ಮುಂದೆ ನಿಂತಾಗ ತಮ್ಮ ಸ್ತ್ರೀಯರು ಕೆಟ್ಟುಹೋಗುತ್ತಾರೆ ಎಂಬ ಅವನ ಆಲೋಚನೆ ಆತಂಕಕಾರಿಯಾದುದು. ಇದು ಸ್ತ್ರೀಯರ ಮೇಲೆ ಅರ್ಜುನನಿಗಿದ್ದ ನಂಬಿಕೆದ್ರೋಹದ ಮಾತು ಎಂದೇ ತಿಳಿಯಬೇಕಾಗಿದೆ. ಸಮಾಜ ಸ್ತ್ರೀಗೆ ಪಾವಿತ್ರ್ಯತೆಯನ್ನು ಅಂಟುಹಾಕಿ ಅವರನ್ನು ಸತಿ ಆಚರಣೆಯ ನೆಪದಲ್ಲಿ ಅವರ ಬದುಕುವ ಆಸೆಯನ್ನು ಕಿತ್ತುಕೊಂಡು ಬೆಂಕಿಗೆ ದೂಡುತ್ತಿದ್ದ ಕ್ರಮ ಘೋರವಾದುದಾಗಿದೆ. ಅರ್ಜುನನ ಆತಂಕ ಅಂಥ ಅಮಾನವೀಯತೆಗೆ ಎಡೆ ಮಾಡಿಕೊಡುವ, ಅದನ್ನು ಪುಷ್ಟೀಕರಿಸುವ ಧೋರಣೆಯಾಗಿದೆ.- ಗೀತೆಯ ಈ ಮುಂದಿನ ಶ್ಲೋಕವೂ ಕೂಡ ಅಂಥ ಅಮಾನವೀಯ ಹೇಳಿಕೆಯೇ ಆಗಿದೆ ಎಂದು ಕೆಲವು ವಿದ್ವಾಂಸರ ಟೀಕೆಯಾಗಿದೆ.

> ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ।
> ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಮ್॥(೯–೩೨)

ಪಾಪಯೋನಿಜರೂ ಸ್ತ್ರೀಯರೂ ವೈಶ್ಯರೂ ಶೂದ್ರರೂ ಕೂಡ ನನ್ನನ್ನು ಆಶ್ರಯಿಸಿ ಪರಮಗತಿಯನ್ನು ಹೊಂದುತ್ತಾರೆ ಎಂದು ಅರ್ಥವಿದೆ.

ಈ ಶ್ಲೋಕದಲ್ಲಿ ಬ್ರಾಹ್ಮಣ ಮತ್ತು ಕ್ಷತ್ರಿಯರನ್ನು ಹೊರತುಪಡಿಸಿ ಸ್ತ್ರೀಯರೂ ವೈಶ್ಯರೂ ಶೂದ್ರರೂ ಹಾಗೂ ಅಂತ್ಯಜಾತಿಯಲ್ಲಿ ಹುಟ್ಟಿದ ಪಾಪಿಷ್ಠರಿಗೆ ವೇದಾಧ್ಯಯನದ ಅಧಿಕಾರವಿಲ್ಲ. ಹಾಗಾಗಿ ಅವರಿಗೆ ನನ್ನನ್ನು ಗುರುವಾಗಿ ಸ್ವೀಕರಿಸುವ ಮೂಲಕ ಭಕ್ತಿಮಾರ್ಗದಿಂದ ಮೋಕ್ಷವನ್ನು ಹೊಂದಬಹುದು ಎಂದು ಗೀತೆ ಹೇಳುತ್ತದೆ.

ಪ್ರಸ್ತುತ ಶ್ಲೋಕದಲ್ಲಿ ಎಲ್ಲ ಸ್ತ್ರೀಯರನ್ನೂ ಪಾಪಯೋನಿಜರು ಎಂದು ಕರೆದು ಶೂದ್ರ, ವೈಶ್ಯ, ಅಂತ್ಯಜರ ಜೊತೆ ಸೇರಿಸಿರುವುದು ಗೀತೆಯು ಈ ಎಲ್ಲ ತಳವರ್ಗಗಳನ್ನು ಮತ್ತು ಸ್ತ್ರೀಯರನ್ನು ತುಚ್ಛೀಕರಿಸಿರುವುದು ತೋರುತ್ತದೆ. ಮಹಾಭಾರತದಲ್ಲಿಯೂ ಕೂಡಾ ಸ್ತ್ರೀಯರನ್ನು, ಶೂದ್ರರನ್ನು ಮೂಢರೆಂದು ಕರೆದು ಅಂತಹವರ ಮೂಢತೆಯನ್ನು ನಿವಾರಿಸುವುದಕ್ಕಾಗಿ ಮತ್ತು ಅಂತಹವರ ಕಲ್ಯಾಣಕ್ಕಾಗಿ ಮಹಾಭಾರತವನ್ನು ರಚಿಸುತ್ತಿದ್ದೇನೆ ಎಂದು ವ್ಯಾಸಮುನಿಗಳೇ

ಹೇಳಿಕೊಂಡಿದ್ದಾರೆ. ಹಾಗಾಗಿ ಗೀತೆ ಸ್ತ್ರೀಯರಿಗೆ ವೈಶ್ಯ ಶೂದ್ರಾದಿಗಳಿಗೆ ಹೇಗೋ ಹಾಗೆ ಮುಕ್ತಿ ಅಥವಾ ಮೋಕ್ಷಕ್ಕೆ ತಡೆಯನ್ನು ಒಡ್ಡುತ್ತದೆ. ಆದರೆ ಬ್ರಾಹ್ಮಣರಿಗೆ ವೇದಾಧ್ಯಯನದ ಅಧಿಕಾರವಿರುವುದರಿಂದ ಅವರಿಗೆ ಯಾವುದೇ ತಡೆಯಿಲ್ಲದೆ ಮೋಕ್ಷ ಪ್ರಾಪ್ತಿಯಾಗುತ್ತದೆ ಎನ್ನುತ್ತದೆ. ತಿಲಕರು ತಮ್ಮ ವ್ಯಾಖ್ಯಾನದಲ್ಲಿ ಸ್ತ್ರೀ, ವೈಶ್ಯ, ಶೂದ್ರರು ಪಾಪಯೋನಿಗಳ ವರ್ಗದಲ್ಲಿ ಎಣಿಸಲ್ಪಟ್ಟಿಲ್ಲ ಎಂದು ಹೇಳಿ, ಹಿಂದಿನ ವ್ಯಾಖ್ಯಾನಕಾರರ ಅಭಿಪ್ರಾಯವನ್ನು ತಿರಸ್ಕರಿಸುತ್ತಾರೆ. “ಯಾವುದೇ ಮನುಷ್ಯನ ಯೋಗ್ಯತೆಯು ಜಾತಿಯ ಮೇಲೆ ಅವಲಂಬಿಸಿರದೆ ಅವನ ಅಂತಃಕರಣದ ಶುದ್ಧಿಯ ಮೇಲೆ ಅವಲಂಬಿಸಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಈ ಮೇರೆಗೆ ಸಮಾಜದೊಳಗೆ ಸರ್ವರಿಗೂ ಮೋಕ್ಷದ್ವಾರವು ತೆರೆದಿರುವುದರಿಂದ ಸಮಾಜದಲ್ಲಿ ಒಂದು ಪ್ರಕಾರದ ಜಾಗೃತಿಯುಂಟಾಗುತ್ತದೆ”[೧೪] ಎಂದಿದ್ದಾರೆ. ಇದು ಭಾರತದ ಬಹುಸಂಖ್ಯಾತರನ್ನು ಏಕತೆಯೆಡೆಗೆ ತೆಗೆದುಕೊಂಡು ಹೋಗುವ ಪ್ರಯತ್ನವಾಗಿದೆ.

೭.೩. ಭಗವದ್ಗೀತೆ: ರಾಷ್ಟ್ರೀಯ ಗ್ರಂಥದ ಚರ್ಚೆ

ಭಾರತ ಸರ್ಕಾರವು ಗೀತೆಯನ್ನು ರಾಷ್ಟ್ರೀಯ ಗ್ರಂಥವಾಗಿಸಲು ತೆಗೆದುಕೊಂಡ ನಿರ್ಧಾರದಿಂದ ದೇಶದಲ್ಲಿ ಅನೇಕ ಚರ್ಚೆಗಳು ಜರುಗಿದವು. ಅಧ್ಯಯನದ ಪ್ರಸ್ತುತತೆಗಾಗಿ ಅಂತಹ ಚರ್ಚೆಗಳನ್ನು ವಿಶ್ಲೇಷಿಸುವ ಮತ್ತು ಮುಖಾಮುಖಿಯಾಗುವ ಒಂದು ಸಣ್ಣ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಸಾಮಾನ್ಯವಾಗಿ ಒಂದು 'ರಾಷ್ಟ್ರ'ದ ಕಲ್ಪನೆ ಯಾವುದೆಂದರೆ ಒಂದು ಭೌಗೋಳಿಕ ಪ್ರದೇಶ, ಚಹರೆ, ಒಂದು ಭಾಷೆ, ಒಂದು ಧರ್ಮ, ಏಕರೂಪಿಯಾದ ನಾಣ್ಯಪದ್ಧತಿ(ಕರೆನ್ಸಿ), ಒಂದು ಸಂಸ್ಕೃತಿ, ಏಕರೂಪಿಯಾದ ಕಾನೂನು ಹೀಗೆ ಎಲ್ಲವೂ ಒಂದೆಯಾಗಿರುವುದಾಗಿದೆ. ಭಾರತ ವಾಸ್ತವದಲ್ಲಿ 'ರಾಷ್ಟ್ರ' ಅಲ್ಲವೇ ಅಲ್ಲ. ಏಕೆಂದರೆ ಭಾರತದಲ್ಲಿ ಒಂದು ಧರ್ಮ, ಒಂದು ಭಾಷೆ, ಒಂದು ಭೌಗೋಳಿಕ ಪ್ರದೇಶ, ಒಂದು ಸಂಸ್ಕೃತಿ, ಒಂದು ಕಾನೂನು ಇಲ್ಲ. ಇಲ್ಲಿ ಅನೇಕ ಭಾಷೆ, ಧರ್ಮ, ಸಂಸ್ಕೃತಿ ಹಾಗೂ ಅನೇಕ ರಾಜ್ಯಗಳ ಗಡಿಗಳನ್ನು ಒಳಗೊಂಡ ಭೌಗೋಳಿಕ ಪ್ರದೇಶದ ಚಹರೆ ಇದೆ. ಆದ್ದರಿಂದ ಭಾರತ ಹಲವು ರಾಜ್ಯಗಳ ಒಕ್ಕೂಟ ಮಾತ್ರ. ಹಾಗಾಗಿ 'ರಾಷ್ಟ್ರ'ವೆಂದು ಕರೆಯಲಾಗುವುದಿಲ್ಲ. ಆದರೆ ಭಾರತವನ್ನು ಏಕ ಭಾಷೆ, ಏಕ ಧರ್ಮ, ಏಕ ಸಂಸ್ಕೃತಿಗೆ ಒಗ್ಗಿಸಿ ರಾಷ್ಟ್ರವಾಗಿಸುವ ಪ್ರಯತ್ನ ಮಾಡಲಾಗಿದೆ, ಇಂದಿಗೂ ಮಾಡಲಾಗುತ್ತಿದೆ. ನಮ್ಮ ಸಂವಿಧಾನ 'ರಾಷ್ಟ್ರಭಾಷೆ'ಗೆ ಮಾನ್ಯತೆ ನೀಡದಿದ್ದರೂ ಹಿಂದಿ ಭಾಷೆಯನ್ನು ರಾಷ್ಟ್ರಭಾಷೆಯಾಗಿ ಹೇರಲಾಗುತ್ತಿದೆ; ಹಿಂದೂಧರ್ಮವನ್ನು ರಾಷ್ಟ್ರಧರ್ಮವೆಂದು ಬಿಂಬಿಸಲಾಗುತ್ತಿದೆ; ಹಿಂದೂ ಸಂಸ್ಕೃತಿಯನ್ನು ಅಂದರೆ ಆರ್ಯ ಸಂಸ್ಕೃತಿಯನ್ನು ಭಾರತೀಯ ಸಂಸ್ಕೃತಿ ಎಂದು ನಂಬಿಸ ಲಾಗುತ್ತಿದೆ. ವಸಾಹತುಶಾಹಿಗೆ ವಿರುದ್ಧವಾಗಿ ಚಳುವಳಿಗಳನ್ನು ರೂಪಿಸಲು ರಾಷ್ಟ್ರೀಯತೆಯನ್ನು ನಿರ್ಮಿಸಿದರು. “ತಿಲಕಪಂಥದ ತೀವ್ರಗಾಮಿ ರಾಷ್ಟ್ರೀಯತೆ ಭಾರತವನ್ನು ಅದಾಗಲೇ ಒಂದು ರಾಷ್ಟ್ರವೆಂದು ಭ್ರಮಿಸಿತ್ತು. ಅಲ್ಲಿದ್ದ ಆಂತರಿಕ, ಸಾಮಾಜಿಕ ವೈರುಧ್ಯಗಳನ್ನು ಸಾಂಸ್ಕೃತಿಕ

ವೈರುಧ್ಯತೆಗಳನ್ನು ಅಂತರಂಗೀಕರಿಸಿಕೊಳ್ಳಲು ಪ್ರಯತ್ನಿಸದೆ ಅವನ್ನು ವಿರೋಧಿಸಿತು. ಈ ಪಂಥಕ್ಕೆ ಅತಿಮುಖ್ಯವಾಗಿ ಕಂಡದ್ದು ರಾಷ್ಟ್ರದ ಏಕತೆ”[೧೫] ಹಾಗಾಗಿ ಭಾರತ ರಾಷ್ಟ್ರ ‘ರಾಷ್ಟ್ರೀಯತೆ’ ಎಂಬ ಕಲ್ಪನೆಯಲ್ಲಿ ಬೆಳೆದುಬಂದಿದೆ.

ಬಹಳ ಹಿಂದಿನಿಂದಲೂ ವೇದಗಳನ್ನು ಹಿಂದೂಗಳ ಪ್ರಮಾಣಗ್ರಂಥಗಳೆಂದು ಮಾನ್ಯ ಮಾಡಲಾಗಿತ್ತು. ನಂತರದಲ್ಲಿ ಬ್ರಾಹ್ಮಣಗಳು, ಉಪನಿಷತ್ತುಗಳು, ಸಹ ಸೇರಿಕೊಂಡವು. ತದನಂತರದಲ್ಲಿ ಮಹಾಭಾರತ, ರಾಮಾಯಣ ಮಹಾಕಾವ್ಯಗಳು, ಮನುಸ್ಮೃತಿ ಸೇರಿದಂತೆ ಇನ್ನಿತರ ಸ್ಮೃತಿ ಗ್ರಂಥಗಳು ಧರ್ಮಶಾಸ್ತ್ರಗಳಾಗಿ ರೂಪುತಳೆದವು. ಶ್ರುತಿ ಎಂದರೆ ಗ್ರಂಥಕರ್ತನಿಲ್ಲದಿರುವುದು, ಭಗವಂತನ ವಾಣಿಯಿಂದ ರಚನೆಯಾಗಿದೆ ಎಂಬ ನಂಬಿಕೆ ಇದೆ. ಸ್ಮೃತಿಗೆ ಗ್ರಂಥಕರ್ತರಿದ್ದು ನಂತರ ಅವುಗಳು ಪರಿಷ್ಕರಣೆಗೆ ಒಳಪಟ್ಟಿದವುಗಳಾಗಿವೆ. ಸ್ವತಃ ಮನು ತನ್ನ ಕೃತಿಯಲ್ಲಿ “ಶ್ರುತಿ ಎಂದರೆ ವೇದವು ಹಾಗೂ ಸ್ಮೃತಿ ಎಂದರೆ ಧರ್ಮಶಾಸ್ತ್ರವು ಎಂದು ತಿಳಿಯಬೇಕು. ಸಮಸ್ತ ವಿಚಾರಗಳಲ್ಲಿ ಈ ಶ್ರುತಿ–ಸ್ಮೃತಿಗಳೇ ಪರಮ ಪ್ರಮಾಣಗಳು(ಅವುಗಳನ್ನು ಪ್ರಶ್ನಿಸಬಾರದು) ಇವುಗಳಿಂದಲೇ ಧರ್ಮವು ರೂಪುಗೊಂಡಿದೆ”[೧೬] ಎಂದು ಹೇಳಿದ್ದಾನೆ.

ವೇದಗಳು ಮಾತ್ರವೇ ಹಿಂದೂಗಳ ಪೂಜ್ಯ ಪಠ್ಯ ಅಥವಾ ಪವಿತ್ರ ಗ್ರಂಥವಾಗಿತ್ತು. ಭಗವದ್ಗೀತೆ ಬರೀ ಸ್ಮೃತಿ ಗ್ರಂಥವಾಗಿ ಮಾತ್ರ ಇತ್ತು. “ಗೀತೆಯನ್ನು ವೇದಗಳು, ಖುರಾನ್, ಬೈಬಲ್, ಜಂಡ್ ಅವೆಸ್ತಾ ಅಥವಾ ಗ್ರಂಥ ಸಾಹಿಬ್ ಮೊದಲಾದ ಧರ್ಮಗ್ರಂಥಗಳಂತೆ ಧರ್ಮಗ್ರಂಥವೆಂದು ಪರಿಭಾವಿಸಲಾಗಿಲ್ಲ. ದೇವವಾಕ್ಯವು ಅಪ್ರಮೇಯವಾದುದು ಅಥವಾ ದೇವರ ಸಾಕ್ಷಾತ್ಕಾರ ಹಾಗೂ ಆತನ ಸೃಷ್ಟಿಯ ಸಂಕಲ್ಪ, ಆತ್ಮಜ್ಞಾನದ ಸಂದೇಶ ಎಂದೆಲ್ಲ ಪವಿತ್ರಗ್ರಂಥಗಳನ್ನು ಭಾವಿಸಲಾಗುತ್ತದೆ. ಆದರೆ ‘ಭಗವದ್ಗೀತೆ’ಯನ್ನು ವೇದಗಳಿಗೆ ಸಮಾನವೆಂದು ಪರಿಗಣಿಸುವುದಿಲ್ಲ. ಅದನ್ನು ಶ್ರುತಿಗಳ ಸಾಲಿಗೂ ಸೇರಿಸುವುದಿಲ್ಲ”[೧೭] ಎಂದು ಮೋಹನ್‌ರಾಜ್ ಅವರು ಅಭಿಪ್ರಾಯ ಪಡುತ್ತಾರೆ. ಹೀಗೆ ಸ್ಮೃತಿಯಾಗಿದ್ದ ಗೀತೆಯನ್ನು ದೇವವಾಣಿಯೆಂದು ನಂಬಿಸಿ ಶ್ರುತಿಯ ಸ್ಥಾನಕ್ಕೆ ಮೊದಲಿಗೆ ಏರಿಸಿದ ಶಂಕರಾಚಾರ್ಯರು ಬ್ರಾಹ್ಮಣಗಳು, ಉಪನಿಷತ್ತುಗಳು ಹಾಗೂ ಗೀತೆಯನ್ನು ಪ್ರಸ್ಥಾನತ್ರಯಿಗಳಾಗಿಸಿದರು ಎಂಬ ವಿದ್ವಾಂಸರ ಮಾತುಗಳನ್ನು ನೋಡಬಹುದಾಗಿದೆ. ಆದರೆ ಇವುಗಳಿಗೆ ನಿಖರವಾದ ಸಾಕ್ಷಿಗಳು ದೊರೆತಿಲ್ಲದ ಕಾರಣ, ಈ ಮಾತುಗಳನ್ನು ನೇರವಾಗಿ ಒಪ್ಪಲು ಸಾಧ್ಯವಿಲ್ಲ. ಗೀತೆ ರಚನೆಯಾದ ಕಾಲದಿಂದ ಕ್ರಿ.ಶ. ೮ನೇ ಶತಮಾನದ ಶಂಕರಾಚಾರ್ಯರ ಕಾಲದವರೆಗಿನ ಇತಿಹಾಸವನ್ನು ಗಮನಿಸಿದರೆ, ಶಂಕರಾಚಾರ್ಯರ ಭಾಷ್ಯವು ಗೀತೆಗೆ ಜನಪ್ರಿಯತೆಯನ್ನು ಮತ್ತು ಪವಿತ್ರಗ್ರಂಥದ ಸ್ಥಾನಮಾನವನ್ನು ನೀಡಿತೆಂಬುದು ತಿಳಿಯುತ್ತದೆ.

ನಂತರ ಬಂದ ರಾಮಾನುಜಾಚಾರ್ಯರು, ಮಧ್ವಾಚಾರ್ಯರೂ, ವಲ್ಲಭಾಚಾರ್ಯರು ಗೀತೆಯನ್ನು ತಮ್ಮ ತಮ್ಮ ಮತಗಳಿಗೆ ಅನುಸಾರವಾಗಿ ವ್ಯಾಖ್ಯಾನಿಸಿದ್ದರಿಂದ ಮತ್ತಷ್ಟು ಜನಪ್ರಿಯತೆ ದೊರೆಯಿತು. ಹಾಗಾಗಿ ಗೀತೆ ಪ್ರಚಲಿತದಲ್ಲಿರಲು ಸಾಧ್ಯವಾಯಿತು. ಹೀಗೆ ಗ್ರಂಥಗಳು ವಿವಿಧ ರೀತಿಯ

ವ್ಯಾಖ್ಯಾನಗಳಿಗೆ ಒಳಗಾಗುವುದರಿಂದ ಸ್ಪಷ್ಟತೆಗೆ ದಾರಿ ಮಾಡಿಕೊಡುತ್ತವೆ ಎಂಬುದು ನಿಜವಾದರೂ ಅನೇಕ ವೇಳೆ ಅರ್ಥಸಂದಿಗ್ಧಗಳಿಗೆ, ದ್ವಂದ್ವಗಳಿಗೆ ಎಡೆ ಮಾಡಿಕೊಡುತ್ತವೆ. ಆದ್ದರಿಂದ ವಿವೇಕಾನಂದರು ಇಂಥ ಗ್ರಂಥಗಳ ಕುರಿತು "ನನ್ನ ದೃಷ್ಟಿಯಲ್ಲಿ ಗ್ರಂಥಗಳು ಒಳ್ಳೆಯದಕ್ಕಿಂತ ಹೆಚ್ಚು ಕೆಡುಕನ್ನು ಉಂಟುಮಾಡಿವೆ. ಹಲವು ದೋಷಯುಕ್ತ ಸಿದ್ಧಾಂತಗಳಿಗೆ ಅವೇ ಕಾರಣ"[೧೮] ಎಂದಿದ್ದಾರೆ. ವಿವೇಕಾನಂದರ ಈ ಮಾತುಗಳನ್ನು ವ್ಯಾಖ್ಯಾನಕಾರರ, ಅನುವಾದಕರ ಅಜ್ಞಾನ ಉತ್ತಮ ಎಚ್ಚರಿಕೆಯ ಮಾತುಗಳಾಗಿವೆ.

ಇನ್ನು ರಾಷ್ಟ್ರೀಯ ಧರ್ಮಗ್ರಂಥ ಮಾಡಬೇಕೆನ್ನುವ ವಿಚಾರಕ್ಕೆ ಬರುವುದಾದರೆ ಭಗವದ್ಗೀತೆ, ಬೈಬಲ್, ಕುರಾನ್, ಗುರುಗ್ರಂಥ ಸಾಹೇಬ್ ಇತ್ಯಾದಿಗಳೆಲ್ಲ ಧಾರ್ಮಿಕ ವಿಚಾರಗಳನ್ನು ಹೇಳಿರುವ ಗ್ರಂಥಗಳೇ ಆಗಿವೆ. ಅವು ಆಯಾಯಾ ಧರ್ಮದವರಿಗೆ ಪವಿತ್ರಗ್ರಂಥಗಳಾಗಿವೆ. ಈ ಮೊದಲೇ ಹೇಳಿದಂತೆ ಭಾರತದಲ್ಲಿ ಒಂದು ಧರ್ಮ, ಒಂದು ಧಾರ್ಮಿಕ ಗ್ರಂಥವೆಂಬುದಿಲ್ಲ. "ಕ್ರೈಸ್ತಧರ್ಮ, ಇಸ್ಲಾಂ ಅಥವಾ ಬೌದ್ಧಧರ್ಮಗಳಿಗೆ ಇರುವ ಹಾಗೆ ಹಿಂದೂಧರ್ಮಕ್ಕೆ ಒಬ್ಬನೇ ಮತ ಸ್ಥಾಪಕ ಒಂದೇ ಪವಿತ್ರಗ್ರಂಥ ಎಂಬುವುದಿಲ್ಲ."[೧೯] ಅಲ್ಲದೆ ಭಾರತವು ಸರ್ವಧರ್ಮ ಸಮನ್ವಯವನ್ನು ಸಾಧಿಸಿ, ಸರ್ವಧರ್ಮ ಸಮಭಾವವನ್ನು ಸಾಧಿಸಿಕೊಂಡು ಬರುತ್ತಿರುವ ದೇಶವಾಗಿದೆ. ಇಲ್ಲಿ ಮುಕ್ತಧಾರ್ಮಿಕ ಸ್ವಾತಂತ್ರ್ಯವಿದೆ. ಅದನ್ನು ನಮ್ಮ ಸಂವಿಧಾನ ನಮಗೆ ನೀಡಿದೆ. ಅಲ್ಲದೆ ಆಯಾ ಭಾಷೆಗಳಲ್ಲಿ ಉತ್ಕೃಷ್ಟ ಸಾಹಿತ್ಯ ನಿರ್ಮಾಣ ಮಾಡಿರುವ ಬಹುತೇಕ ಎಲ್ಲಾ ಕವಿಗಳು ಧರ್ಮಸಮನ್ವಯವನ್ನು ಸಾರಿದವರೇ ಆಗಿದ್ದಾರೆ. ಕನ್ನಡದಲ್ಲೂ ಮೊದಲ ಕವಿ ಪಂಪನಿಂದ ಮೊದಲುಗೊಂಡು ಕುಮಾರವ್ಯಾಸ, ಶರಣರು, ದಾಸರು ಸಮನ್ವಯ ಮತ್ತು ಸಹಬಾಳ್ವೆಯನ್ನು ತಮ್ಮ ಕೃತಿಗಳಲ್ಲಿ ಪ್ರತಿಪಾದಿಸಿದವರೇ ಆಗಿದ್ದಾರೆ. ಹಾಗಾಗಿ ನಮ್ಮ ನಮ್ಮ ಚೇತನಗಳನ್ನು ಅನಿಕೇತನಗೊಳಿಸುವ, ಮನುಜಮತ–ವಿಶ್ವಪಥದತ್ತ ಕೊಂಡೊಯ್ಯುವ ಅಗತ್ಯತೆಯಿದೆ. "ಯಾವೊಂದು ಗ್ರಂಥವೂ ಏಕೈಕ ಪರಮಪೂಜ್ಯ ಧರ್ಮಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದವುಗಳನ್ನೆಲ್ಲ ಓದಿ ತಿಳಿದು ತನ್ನ ದರ್ಶನವನ್ನು ತಾನೇ ನಿರ್ಣಯಿಸಿ ಕಟ್ಟಿಕೊಳ್ಳಬೇಕು"[೨೦] ಎಂದು ಕುವೆಂಪು ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯು ಆರಾಧನಾ ನೆಲೆಯಿಂದ ಯಾವುದೇ ಕೃತಿಯನ್ನು ಪೂಜಿಸುವಂತಹ ಅಂಧಾಭಿಮಾನಿಯಾಗದೆ, ವಿಚಾರ ಮಾಡದೆ ಯಾವುದನ್ನೂ ಒಪ್ಪಬಾರದು; ಎಲ್ಲವನ್ನು ಪ್ರಶ್ನಿಸುತ್ತಲೇ ಒಳ್ಳೆಯ ವಿಚಾರಗಳನ್ನು, ತಮಗೆ ಬೇಕಾದ್ದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂಬುದು ಕುವೆಂಪು ಅವರ ಆಶಯವಾಗಿದೆ. ಸ್ವಾಮಿ ವಿವೇಕಾನಂದರೂ ಕೂಡ ಇದೇ ಆಶಯವನ್ನು ಹೊಂದಿ ಈ ಮಾತುಗಳನ್ನು ಆಡಿದ್ದಾರೆ. "ಸತ್ಯವಿದ್ದರೆ, ದೇವರಿದ್ದರೆ ಅದು ನಮ್ಮ ಒಳಗೆ ಇರಬೇಕು. ಇಲ್ಲದೇ ಇದ್ದರೆ ನನ್ನ ಪಾಲಿಗೆ ಧರ್ಮವಿಲ್ಲ. ನಂಜಿಕೆ, ಸಿದ್ಧಾಂತ, ಉಪದೇಶಗಳು ಧರ್ಮವಾಗಲಾರವು. ಸಾಕ್ಷಾತ್ಕಾರ, ಭಗವದ್‌ದರ್ಶನ–ಇದೊಂದೇ ಧರ್ಮ"[೨೧] ಎಂಬ ಅಭಿಪ್ರಾಯವನ್ನು

ವ್ಯಕ್ತಪಡಿಸಿದ್ದಾರೆ. ಯಾವ ಉಪದೇಶಗಳೂ ಕೂಡ ಸತ್ಯವಾಗಲಾರವು, ಆಂತರಿಕವಾಗಿ ಸಾಕ್ಷಾತ್ಕಾರ ಮಾಡಿಕೊಳ್ಳದೆ ಯಾವುದನ್ನೂ ಸತ್ಯವೆಂದು ನಂಬಬಾರದೆಂದು ಅವರು ಹೇಳಿದ್ದಾರೆ. ಮುಂದುವರಿದು ಪುಸ್ತಕಗಳು, ಬೈಬಲ್‌ಗಳು, ಶಾಸ್ತ್ರಗಳು ಇವುಗಳಿಂದ ಪ್ರಯೋಜನವಿಲ್ಲ. ತಮ್ಮ ಅಂತರ್‌ದೃಷ್ಟಿಯ ಮೂಲಕ ಸತ್ಯವನ್ನು ಕಂಡುಕೊಂಡು ಅದನ್ನು ಮತ್ತೊಬ್ಬರ ಅನುಭವಕ್ಕೆ ತರುವ ಪ್ರಯತ್ನ ಮಾಡಬೇಕು ಎಂದಿದ್ದಾರೆ. ಗೀತೆಯನ್ನು ಈ ಹಿನ್ನೆಲೆಯಿಂದ ನೋಡುವುದಾದರೆ ಗೀತೆಯಲ್ಲಿ ಇರುವ ಅಂಶಗಳನ್ನು ಪರಾಮರ್ಶಿಸಿ ಒಪ್ಪಬೇಕು, ಅವರವರ ಮನಸ್ಸಿಗೆ ಬುದ್ಧಿಗೆ ಕೆಟ್ಟ ಅಂಶಗಳಿವೆ ಎಂದು ಕಂಡರೆ ಅದನ್ನು ತಿರಸ್ಕರಿಸಬೇಕಾಗಿದೆ.

ಭಾರತದಲ್ಲಿ ಇರುವ ಎಲ್ಲ ಧರ್ಮಗಳು, ಧರ್ಮಗ್ರಂಥಗಳು ಸಾರುವ ತತ್ವ ಒಂದೇ ಆಗಿದೆ. ಆಯಾ ಜನರಿಗೆ ಆಯಾ ಧರ್ಮಗಳು ಸತ್ಯದರ್ಶನ ಮಾಡಿಸಿ ಏಕತೆಯ ದರ್ಶನವನ್ನು ಮಾಡಿಸುತ್ತಿವೆ. ಆದರೆ ಒಂದೇ ಧರ್ಮದ ಗ್ರಂಥವನ್ನು ಸಾರ್ವತ್ರಿಕವಾಗಿ ದೇಶದ ಜನರಿಗೆ ಹೇರುವುದು ಆ ಏಕತೆಗೆ ಭಂಗ ತರುವುದೇ ಆಗಿದೆ. “ಇಡಿಯ ಮಾನವ ಜನಾಂಗಕ್ಕೆ ಪ್ರೀತಿಯನ್ನು ಮತ್ತು ಅನುಕಂಪವನ್ನು ತೋರಿಸಬೇಕಾದುದೇ ನಿಜವಾದ ಧರ್ಮದ ಪ್ರಮಾಣ”[೨೨] ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಗೀತೆ ಇಂತಹ ಉದಾತ್ತಗುಣಗಳುಳ್ಳ ಗ್ರಂಥವೆಂದು ಹಲವು ವ್ಯಾಖ್ಯಾನಕಾರರು ಹೇಳಿದರೂ “ಯುದ್ಧ ಮತ್ತು ಹಿಂಸೆಯೇ ಗೀತೋಪದೇಶದ ಸಮಸ್ತ ಸಾರವಾಗಿದೆ. ಜಗತ್ತಿನಲ್ಲಿ ಕೊಲೆ, ಹಿಂಸೆಗಳನ್ನು ಅನುಮೋದಿಸುವ ಏಕೈಕ ಧಾರ್ಮಿಕ ಗ್ರಂಥ ಅದು. ಕೃಷ್ಣನ ಗೀತೋಪದೇಶವು ಒಂದು ಸಾಮಾನ್ಯವಾದ ಕೌಟುಂಬಿಕ ಕಲಹವನ್ನು ಕುರುಕ್ಷೇತ್ರದಂತಹ ಜಾಗತಿಕ ಯುದ್ಧವನ್ನಾಗಿ ಪರಿವರ್ತಿಸಿತು”[೨೩] ಎಂಬುದು ಓಶೋ ಅವರ ಅಭಿಪ್ರಾಯವಾಗಿದೆ. ಹಾಗಾಗಿ ಗೀತೆ ಎಂಬುದು ಭಾರತದ ಏಕೈಕ ಪ್ರಮಾಣಗ್ರಂಥವಾಗ ಬಾರದೆಂಬುದು ಅನೇಕ ವಿದ್ವಾಂಸರ ಅಭಿಪ್ರಾಯವಾಗಿದೆ. ಆದರೆ ಗೀತೆಯನ್ನು ಆಧ್ಯಾತ್ಮಿಕ ತಾಯಿ ಎಂದು ಕರೆದಿದ್ದ ಗಾಂಧಿ ಅವರು ಯಾವುದನ್ನು ಪ್ರಮಾಣಗ್ರಂಥವಾಗಿ ಸ್ವೀಕರಿಸಬೇಕು ಎಂಬುದನ್ನು ಕುರಿತು ಹೀಗೆ ಹೇಳುತ್ತಾರೆ–“ಇಂಥ ಭವ್ಯಗ್ರಂಥ(ಗೀತೆ)ದಲ್ಲಿ ಅಹಿಂಸೆಯಂಥ ಭವ್ಯ ಧಾರ್ಮಿಕ ಸಿದ್ಧಾಂತವೇ ಹೊರಸೂಸಬೇಕು. ಹಾಗಿಲ್ಲದಿದ್ದರೆ ಗೀತೆ ಒತ್ತಟ್ಟಿಗಿರಲಿ. ಅದನ್ನು ಗೌರವಿಸಿ ಪೂಜಿಸೋಣ, ಅದನ್ನು ಪ್ರಮಾಣಗ್ರಂಥ ಎನ್ನಲಾಗದು.”[೨೪] ಗೀತೆಯ ಸಂದೇಶ ಅಹಿಂಸೆಯೇ ಆಗಿದೆ ಎಂಬುದು ಗಾಂಧಿಯವರ ಅಭಿಪ್ರಾಯವಾಗಿದೆ. ಗೀತೆಯ ಮೊದಲನೇ ಅಧ್ಯಾಯದಲ್ಲಿಯೇ ಅರ್ಜುನನಿಗೆ ಬರುವ ವಿಷಾದವು ಅಹಿಂಸಾಪ್ರೇರಕವಾದುದು, ಹಿಂಸೆಯಿಂದ ಆಗುವ ಪಾಪಹಾನಿಯು ಅವನಿಗೆ ನಿಚ್ಚಳವಾಗಿ ಕಾಣುತ್ತಿತ್ತು ಎಂದು ಗಾಂಧಿ ಹೇಳುತ್ತಾರೆ. ಗೀತೆಯನ್ನು ಆಧ್ಯಾತ್ಮಿಕವಾಗಿ ಕಂಡ ಗಾಂಧಿ ಅವರಿಗೂ ಸಾಮಾಜಿಕ ನೆಲೆಯಿಂದ ಅರ್ಥೈಸಿ ಕೊಂಡಿರುವ ವಿದ್ವಾಂಸರಿಗೂ ಭಿನ್ನಾಭಿಪ್ರಾಯಗಳಿವೆ. ಗಾಂಧಿ ಅವರು ಗೀತೆಯನ್ನು ಎಲ್ಲರೂ ಓದುವ ಪಠ್ಯವಾಗಿ ಅರ್ಥೈಸಲು ಪ್ರಯತ್ನಿಸಿದರೆ, ಪಾಶ್ಚಾತ್ಯ ವಿದ್ವಾಂಸರಾದಿಯಾಗಿ ಅನೇಕ ದೇಶಿ ವಿದ್ವಾಂಸರು ಗೀತೆಯ ಸಾಮಾಜಿಕ ಸಂದೇಶವನ್ನು ಅರಿತು ಅದನ್ನು ಟೀಕಿಸಿದ್ದಾರೆ.

ಆದರೆ ಅಧ್ಯಾತ್ಮವಾದಿ ಓಶೋ ಅವರು “ಯುದ್ಧಕ್ಕೆಂದೇ ಮೀಸಲಾದ ಜಗತ್ತಿನ ಏಕಮೇವ ಧರ್ಮಗ್ರಂಥವದು. ಅಡಾಲ್ಫ್ ಹಿಟ್ಲರ್, ಬೆನಿಟ್ಟೊ ಮುಸೋಲಿನಿಯಂಥವರಿಗೆ ಹೇಳಿ ಮಾಡಿಸಿದ ಕೃತಿ ಅದು. ಆದರೆ ವಿಶ್ವಶಾಂತಿ ಬಯಸುವವರು, ಧರ್ಮ-ರಾಷ್ಟ್ರೀಯತೆಗಳೆಂಬ ಸರಹದ್ದುಗಳನ್ನು ನಿರ್ನಾಮ ಮಾಡಿ ಒಂದೇ ವಿಶ್ವ, ಒಂದೇ ಸಮಾಜ, ಒಂದೇ ಮಾನವತೆ ಎಂಬ ತತ್ವವನ್ನು ಸಾಕಾರಗೊಳಿಸಲು ಬಯಸುವವರು ಗೀತೆಯಂತಹ ಕೃತಿಯನ್ನು ಹತ್ತಿರಕ್ಕೂ ಸೇರಿಸಿಕೊಳ್ಳಕೂಡದು”[೨೫] ಎಂದು ಹೇಳುತ್ತಾರೆ. ಓಶೋ ಅವರು ಯಾವುದೇ ಧರ್ಮಗ್ರಂಥಗಳ ಅನುಕರಣೆಯನ್ನು ಒಪ್ಪುವುದಿಲ್ಲ. ಧರ್ಮಗ್ರಂಥಗಳಲ್ಲಿರುವ ಜನರ ಅಂಧಶ್ರದ್ಧೆ, ಭಕ್ತಿಗಳನ್ನು ಅವರು ಖಂಡಿಸುತ್ತಾರೆ.

ಹೀಗೆ ಗೀತೆಯ ವಿಭಿನ್ನ ವ್ಯಾಖ್ಯಾನಗಳಿಂದ ಗೀತೆಯ ಸಂದೇಶ ಮತ್ತು ಅದರ ಪ್ರಸ್ತುತತೆಯ ಬಗ್ಗೆ ದೊಡ್ಡ ಗೊಂದಲ ಎದುರಾಗುತ್ತದೆ. ಗೀತೆಯು ಒಂದು ಮುಕ್ತಪಠ್ಯ, ಅದನ್ನು ಧಾರ್ಮಿಕ ಕೃತಿಯಂತೆಯೋ, ಆಧ್ಯಾತ್ಮಿಕ ಕೃತಿಯಂತೆಯೋ, ಸಾಮಾಜಿಕ ಕೃತಿಯಂತೆಯೋ ಇಟ್ಟುಕೊಂಡು ಓದಿಕೊಳ್ಳಬಹುದಾಗಿದೆ. ಗೀತೆ, ಬೈಬಲ್, ಖುರಾನ್ ಮುಂತಾದ ಪಠ್ಯಗಳನ್ನು ಎಲ್ಲರೂ ಓದಿ ಅದರಲ್ಲಿನ ಶ್ರೇಷ್ಠ ವಿಚಾರಗಳನ್ನು ತಿಳಿದು ಧರ್ಮ ಸಮನ್ವಯತೆ, ಶಾಂತಿಯಿಂದ ಬದುಕಬೇಕಾಗಿದೆ. ಭಾರತದಂತಹ ವಿಭಿನ್ನ ಸಂಸ್ಕೃತಿ, ಧರ್ಮಗಳ ದೇಶದಲ್ಲಿ ಕೆಲವರ ಹಿತಾಸಕ್ತಿಗಾಗಿ ರಾಷ್ಟ್ರೀಯ ಗ್ರಂಥವಾಗಿಸುವುದು ಎಷ್ಟು ಸಮಂಜಸ ಎಂಬ ಪ್ರಶ್ನೆ ಏಳುತ್ತದೆ. ಗೀತೆ ಒಂದು ಧರ್ಮದ ಧಾರ್ಮಿಕ ಪಠ್ಯವಾಗಿರುವಾಗ ಅದನ್ನು ರಾಷ್ಟ್ರೀಯ ಪಠ್ಯವಾಗಿಸಿದರೆ ಅನೇಕ ಧರ್ಮಗಳ ತವರೂರಾದ ಭಾರತದಲ್ಲಿ ಅಶಾಂತಿ ನೆಲೆಸುತ್ತದೆ. ಮಾರ್ಕ್ಸ್ 'ಧರ್ಮ ಎನ್ನುವುದು ಜನರಿಗೆ ತಿನ್ನಿಸಿದ ಅಫೀಮು' ಎಂದು ಹೇಳಿರುವ ಹಾಗೆ ಧರ್ಮದ ವಿಚಾರದಲ್ಲಿ ಸಾಮಾನ್ಯ ಜನರು ಭಾವನಾತ್ಮಕವಾಗಿ ವರ್ತಿಸುತ್ತಾರೆ. ಧರ್ಮ, ಭಾಷೆ, ನೆಲ-ಜಲದ ಪ್ರಶ್ನೆ ಎದುರಾದಾಗ ಬಹುತೇಕ ಜನರು ವಿವೇಕಶೂನ್ಯರಾಗುತ್ತಾರೆ, ವಿಚಾರಹೀನರಾಗುತ್ತಾರೆ. ಸ್ವಾಮಿ ವಿವೇಕಾನಂದರು “ಪ್ರಪಂಚ ದಲ್ಲಿರುವ ಮತಗಳನ್ನು ನಾನು ಅಲ್ಲಗಳೆಯುವುದಿಲ್ಲ. ಭಗವಂತನ ದಯೆಯಿಂದ ಇನ್ನೂ ಇಪ್ಪತ್ತು ಲಕ್ಷ ಮತಗಳು ಬೇಕಾದರೂ ಇರಲಿ. ಹೆಚ್ಚು ಇದ್ದಷ್ಟೂ ನಮಗೆ ಆರಿಸಿಕೊಳ್ಳಲು ಹೆಚ್ಚು ಅವಕಾಶವಿರುವುದು. ಆದರೆ ನಾನು ವಿರೋಧಿಸುವುದು ಯಾವುದನ್ನೆಂದರೆ ಎಲ್ಲರಿಗೂ ಒಂದೇ ಧರ್ಮವನ್ನು ಕೊಡಲು ಯತ್ನಿಸುವುದನ್ನು. ಧರ್ಮಗಳೆಲ್ಲ ಸಾರದೃಷ್ಟಿಯಿಂದ ಒಂದೇ ಆದರೂ ಬೇರೆ ಬೇರೆ ಜನಾಂಗಗಳ ವಿವಿಧ ವಾತಾವರಣಗಳಿಗೆ ತಕ್ಕಂತೆ ಅವುಗಳಲ್ಲಿ ವೈವಿಧ್ಯತೆ ಇರಬೇಕು. ನಮ್ಮಲ್ಲಿ ಪ್ರತಿಯೊಬ್ಬರಿಗೂ ಪ್ರತ್ಯೇಕ ಧರ್ಮ ಬೇಕಾಗಿದೆ. ಬಾಹ್ಯ ದೃಷ್ಟಿಯಿಂದ ಪ್ರತ್ಯೇಕತೆ ಇರಬೇಕು”[೨೬] ಎಂದು ಹೇಳಿದ್ದಾರೆ. ವಿವೇಕಾನಂದರ ಮೇಲಿನ ಮಾತುಗಳು ಅರ್ಥಪೂರ್ಣವಾಗಿವೆ. ವಿವಿಧತೆಯಲ್ಲಿ ಏಕತೆಯಿಂದ ಬದುಕುತ್ತಿರುವ ದೇಶದ ಜನರಿಗೆ ಒಂದೇ ಧರ್ಮವನ್ನು ಕೊಡುತ್ತೇನೆ ಎಂದು ಪ್ರಯತ್ನಿಸುವುದು ವಿವೇಕಶೂನ್ಯದ ಕೆಲಸವಾಗುತ್ತದೆ. ಇದನ್ನು ಅರಿತೇ ನಮ್ಮ ಸಂವಿಧಾನ ನಿರ್ಮಾತೃ ಅಂಬೇಡ್ಕರ್ ಅವರು ಪ್ರತಿಯೊಬ್ಬರೂ ಪ್ರತ್ಯೇಕ ಧರ್ಮವನ್ನು ಆಚರಿಸಬಹುದಾದ ಮುಕ್ತ ಧಾರ್ಮಿಕ ಸ್ವಾತಂತ್ರ್ಯವನ್ನು ಭಾರತೀಯರಿಗೆ ಸಂವಿಧಾನದಲ್ಲಿ ನೀಡಿದ್ದಾರೆ. ಹಾಗಾಗಿ

ಬುದ್ಧ, ಕ್ರಿಸ್ತ, ಗಾಂಧಿ ಅವರ ಆಶಯವಾದ ಸತ್ಯ, ಶಾಂತಿ, ಅಹಿಂಸೆ, ವಿವೇಕಾನಂದರ ಸೋದರತ್ವ, ಸಮಾನತೆ, ಸಮನ್ವಯತೆ ಮುಂತಾದ ಆಶಯಗಳನ್ನು ಹೊಂದಿದ ಹಕ್ಕು ಮತ್ತು ಕಾನೂನುಗಳನ್ನು ಸಂವಿಧಾನದಲ್ಲಿ ಭಾರತೀಯ ಪ್ರಜೆಗಳ ಹಿತಕ್ಕಾಗಿ ರೂಪಿಸಿದ್ದಾರೆ. ಎಲ್ಲ ಭಾರತೀಯ ಪ್ರಜೆಗಳ ಹಿತ ಕಾಯುವ ಈ ಸರ್ವಸಮಾನತೆಯ ಪ್ರತಿಪಾದನೆಯ ಗ್ರಂಥವೇ ಇರುವಾಗ ದ್ವಂದ್ವ ಮತ್ತು ವ್ಯಾಖ್ಯಾನಿಸಿದಷ್ಟೂ ನಿಗೂಢತೆಯಿಂದಲೇ ಕೂಡಿರುವ ಒಂದು ಧರ್ಮಕ್ಕೆ ಸೀಮಿತವಾದ ಗೀತೆಯನ್ನು ರಾಷ್ಟ್ರೀಯ ಗ್ರಂಥವಾಗಿಸುವ ಪ್ರಯತ್ನ ಆಗಬಾರದು.

೭.೪. ಭಗವದ್ಗೀತೆ: ವೈರುಧ್ಯಗಳ ಕಥನ

ಈವರೆಗೆ ಗೀತೆಯನ್ನು ಕುರಿತು ಶಂಕರಾಚಾರ್ಯರಿಂದ ಹಿಡಿದು ಗಾಂಧೀಜಿವರೆಗೆ ಹಲವು ವಿವರಣೆ ಮತ್ತು ವ್ಯಾಖ್ಯಾನಗಳು ಬಂದಿವೆ. ಕುತೂಹಲ ಮತ್ತು ಆಶ್ಚರ್ಯಕರ ವಿಚಾರವೆಂದರೆ ಇಷ್ಟೊಂದು ಅನುವಾದ ಮತ್ತು ವ್ಯಾಖ್ಯಾನಗಳು ಗೀತೆಯ ಬಗೆಗೆ ರಚನೆಗೊಂಡಿದ್ದರೂ ಒಂದು ಅನಿರ್ದಿಷ್ಟ, ಅಸ್ಪಷ್ಟ ಕಥನವಾಗಿಯೇ ಇದು ಗೋಚರಿಸುತ್ತದೆ. ಕೆಲವರು ಗೀತೆಯ ಸ್ವಾರಸ್ಯವನ್ನು ಹಾಡಿ ಹೊಗಳಿದ್ದರೆ, ಕೆಲವರು ಅಷ್ಟೇ ಕಟುವಾಗಿ ವಿಶ್ಲೇಷಣೆಗೆ ಗುರಿ ಮಾಡಿದ್ದಾರೆ. ಈ ಎರಡು ತೆರನಾದ ಅಭಿಪ್ರಾಯಗಳನ್ನು ಮತೀಯ ಒರೆಗೆ ಹಚ್ಚಿ ನೋಡಿದಾಗಲೂ ಗೀತೆ 'ವೈಚಾರಿಕ ನೆಲೆಯಲ್ಲಿ ಸ್ವವಿರೋಧಗಳಿಂದ ಕೂಡಿದ ಪಠ್ಯವಾಗಿಯೇ ಕಂಡುಬರುತ್ತದೆ. ಈ ಕೃತಿಯು ನಮಗೆ ನಿಜವಾಗಲೂ ಗೊಂದಲವನ್ನುಂಟುಮಾಡುವುದು ಮುಖ್ಯವಾಗಿ ಈ ಮುಂದಿನ ಪ್ರಶ್ನೆಗಳ ಕಾರಣಗಳಿಂದ. ಅಂದರೆ 'ಗೀತೆ' ಯಾವಾಗ ರಚಿಸಲ್ಪಟ್ಟಿತು? ಇದರ ಕರ್ತೃ ಯಾರು? ಇದರಲ್ಲಿರುವ ಶ್ಲೋಕಗಳ ಒಟ್ಟು ಸಂಖ್ಯೆ ಎಷ್ಟು? ಗೀತೆಯ ಹೆಸರಿನಲ್ಲಿ ಪ್ರಕ್ಷೇಪಗಳನ್ನು ಯಾರು ಸೇರಿಸಿದರು? ಮಹಾಭಾರತದ ಯುದ್ಧ ನಿಜವಾಗಲೂ ಘಟಿಸಿದೆಯೇ? ರಣಾಂಗಣದಲ್ಲಿ ಕೃಷ್ಣ ಇಷ್ಟೊಂದು ಶ್ಲೋಕಗಳನ್ನು ಅರ್ಜುನನಿಗೆ ಬೋಧಿಸಲು ಸಮಯವಿತ್ತೇ? ಇದು ತಾತ್ವಿಕ ಪಠ್ಯವೆ ಅಥವಾ ದಾರ್ಶನಿಕ ಪಠ್ಯವೇ? ಗೀತೆಯ ಮುಖ್ಯ ಗುರಿ ಏನು? ಇಂಥ ಅನೇಕ ಪ್ರಶ್ನೆಗಳು ಗೀತೆಯನ್ನು ಓದಿದ ಯಾರಿಗಾದರೂ ಉದ್ಭವಿಸದೆ ಇರಲಾರವು. ಇಷ್ಟೆಲ್ಲ ಗೊಂದಲಗಳನ್ನು ಉಂಟುಮಾಡುವ ಈ ಕೃತಿಯನ್ನು 'ಇದಮಿತ್ಥಂ' ಎಂದು ಖಚಿತವಾಗಿ ಹೇಳುವುದು ತುಂಬಾ ಕಷ್ಟ. ಏಕೆಂದರೆ ಗೀತೆ ದೊಡ್ಡ 'ಗೊಂದಲದ ಗೂಡು'. ಈವರೆಗಿನ ವ್ಯಾಖ್ಯಾನ ಮತ್ತು ಅನುವಾದಗಳನ್ನು ಪರಿಶೀಲಿಸಿದರೆ ಈ ಮಾತು ಸ್ಪಷ್ಟವಾಗುತ್ತದೆ. ಈ ವಿರೋಧಾಭಾಸಗಳೇ ಗೀತೆಯನ್ನು ನಿರಂತರ ಓದಿಗೆ ಒಳಗುಮಾಡಿದೆ.

ಗೀತೆಯ ವೈರುಧ್ಯಗಳನ್ನು ಗುರುತಿಸಿದ ಮೊದಲಿಗರೆಂದರೆ ಕ್ರೈಸ್ತ ಮಿಶನರಿಗಳು ಮತ್ತು ಪಾಶ್ಚಾತ್ಯ ವಿದ್ವಾಂಸರು. ಇವರು ಗೀತೆಯ ವೈರುಧ್ಯಗಳನ್ನು ಗುರುತಿಸಿ, ಹಿಂದೂಧರ್ಮದಲ್ಲಿದ್ದ ಅಸಮಾನ ಅಂಶಗಳನ್ನು ತಿಳಿಯಪಡಿಸಿದರು. ಜೊತೆಗೆ ಗೀತೆ ಮತ್ತು ಹಿಂದೂಧರ್ಮದ ನಡುವಿನ ಅಂತರ್‌ಸಂಬಂಧದ ನೆಲೆಗಳನ್ನು ಶೋಧಿಸಿದರು.

ಗೀತೆಯಲ್ಲಿ ವೈರುಧ್ಯಗಳಿವೆ ಎಂದು ಹೇಳಿದ ಪ್ರಮುಖ ಭಾರತೀಯ ಚಿಂತಕರೆಂದರೆ ಅಂಬೇಡ್ಕರ್, ರಾಮಮನೋಹರ ಲೋಹಿಯಾ, ಡಿ.ಡಿ. ಕೊಸಾಂಬಿ, ಎಸ್.ಎಸ್.ಸುಕ್ತಂಕರ್, ಬಿಪಿನ್‌ಚಂದ್ರ, ಕೆ.ಎನ್.ಪಣಿಕ್ಕರ್, ರೋಮಿಲ ಥಾಪರ್, ಸರ್ದೇಸಾಯಿ ಮತ್ತು ದಿಲೀಪ್ ಬೋಸ್, ವಿ.ಆರ್. ನಾರ್ಲ, ಕುವೆಂಪು, ಜಿ. ರಾಮಕೃಷ್ಣ ಮುಂತಾದವರು. ಚಾತುರ್ವರ್ಣ ವ್ಯವಸ್ಥೆಯನ್ನು ಶ್ರೀಕೃಷ್ಣನು ಸೃಷ್ಟಿಸಿದನೆಂದು ಯಥಾಸ್ಥಿತಿವಾದವನ್ನು ಕಾಪಾಡುವ ಪುರೋಹಿತಶಾಹಿ ಮನಸ್ಥಿತಿಯ ಬಗ್ಗೆ ಹಲವು ಜನ ಚಿಂತಕರು ಪ್ರತಿರೋಧವನ್ನು ವ್ಯಕ್ತಪಡಿಸಿದ್ದಾರೆ. "ಕೃಷ್ಣಾರ್ಜುನರ ಸಂವಾದದಲ್ಲಿ ಯೋಗೀಶ್ವರನು ಕೃಷ್ಣನೇ ಅಥವಾ ಅರ್ಜುನನೇ ಎಂಬ ಗೊಂದಲ ಗೀತೆಯನ್ನು ಅಧ್ಯಯನ ಮಾಡುವವರಲ್ಲಿ ಮೂಡುತ್ತದೆ. ಅರ್ಜುನನಲ್ಲಿ ಕುಲಬಾಂಧವರನ್ನು ಹತ್ಯೆಗೈದು ದೊರಕಬಹುದಾದ ವೈಭೋಗಗಳ ಬಗೆಗೆ ನಿರಾಸಕ್ತಿ ಮತ್ತು ಯುದ್ಧದಿಂದಾಗುವ ಮಹಾವಿನಾಶದಿಂದ ಸಮಾಜದ ಮೇಲಾಗುವ ಅನಾಹುತಕಾರಿ ಪರಿಣಾಮಗಳ ಬಗೆಗೆ ಕಾಳಜಿ ಗೋಚರವಾಗುತ್ತದೆ. ಪ್ರಾಚೀನ ಯುಗದ ಸಮಾಜದಲ್ಲಿ ಸ್ವೀಕೃತವಾದ ಸಾಮಾಜಿಕ ವ್ಯವಸ್ಥೆಯಲ್ಲಿ ಯುದ್ಧವೊಂದು ತಂದೊಡ್ಡಬಹುದಾದ ಅನಾಹುತಗಳ ಬಗೆಗೆ ಅರ್ಜುನನು ವಿಷಾದಿಸುತ್ತ ತನ್ನ ಅಂತಃಪ್ರಜ್ಞೆಯ ಸೂಕ್ಷ್ಮತೆಯನ್ನು ಮೆರೆಸುತ್ತಾನೆ. ಆದರೆ ಸಾಮ, ದಾನ, ಭೇದ ಹಾಗೂ ದಂಡೋಪಾಯಗಳನ್ನೆಲ್ಲ ಬಳಸುತ್ತ ಯುದ್ಧಕ್ಕೆ ಸಿದ್ಧನಾಗಲು ಪ್ರೇರೇಪಿಸುವ ಕೃಷ್ಣನಲ್ಲಿ ತನ್ನ ಉಪಯೋಗಕ್ಕೆ ಬರುವ ಅರ್ಜುನನ ಹಿತದೃಷ್ಟಿ ಮತ್ತು ತನ್ನನ್ನು ಅವಮಾನಿಸಿದ ಕೌರವರಿಗೆ ಶಿಕ್ಷೆ ನೀಡುವ ಸ್ವಾರ್ಥಪರ ಚಿಂತನೆಯೇ ಎದ್ದು ಕಾಣುತ್ತದೆ."[೨೭]

ನಿಷ್ಕಾಮಕರ್ಮ ಅಪರಾಧವಲ್ಲ ಎಂದು ಬೋಧಿಸುವ ಭರದಲ್ಲಿ "ಒಬ್ಬ ವ್ಯಕ್ತಿಯು ಯಾವುದೇ ರೀತಿಯ 'ಕರ್ಮ'ವನ್ನು ಮಾಡಿದ್ದರೂ ಸಹ(ಅಂದರೆ ಅದು ಘೋರ ಅಪರಾಧವಾಗಿದ್ದರೂ ಪರವಾಗಿಲ್ಲ!!) ಆ ಕರ್ಮದ ಫಲವನ್ನು ತೊರೆಯುವುದರ ಮೂಲಕ ಹಾಗೂ ಇದರ ಕರ್ತೃತ್ವವನ್ನು ಭಗವಂತನಿಗೆ ಅರ್ಪಿಸುವುದರ ಮೂಲಕ ಆ ಕರ್ಮದಿಂದ ಆ ವ್ಯಕ್ತಿಯು ಎಲ್ಲ ರೀತಿಯ ಪಾಪಗಳಿಂದ ವಿಮೋಚನೆಯನ್ನು ಹೊಂದುತ್ತಾನೆ". ಆದರೆ ಕೃಷ್ಣನ ಈ ಮಾತಿನಲ್ಲಿ ಆ ವ್ಯಕ್ತಿಯ ಕರ್ಮದ ಪರಿಣಾಮವಾಗಿ ಸಮಾಜದ ಮೇಲಾಗುವ ವಿನಾಶಕಾರಿ ಪರಿಣಾಮಗಳ ಪರಿಹಾರದ ಸುಳಿವಿಲ್ಲ!! ಕೃಷ್ಣನ ಉತ್ತರ ಇಲ್ಲಿ ಪರಿಹಾರವಲ್ಲ, ಬದಲು ಪಲಾಯನವಾದ ಮಾತ್ರ!!"[೨೮] ಗೀತೆಯಲ್ಲಿರುವ ಅಸಮಾನ ತತ್ವವು ಚಾತುರ್ವರ್ಣ್ಯ ವ್ಯವಸ್ಥೆಯ ಪ್ರತಿರೂಪವಾಗಿಯೇ ಕೆಲವರಿಗೆ ಕಂಡಿದೆ. ಇಂಥ ಹಲವು ವಿರೋಧಾಭಾಸಗಳು ಗೀತೆಯ ಬಗೆಗೆ ವ್ಯಕ್ತವಾಗಿವೆ. ಅದರಲ್ಲೂ ಮುಖ್ಯವಾಗಿ ಇಷ್ಟೆಲ್ಲ ಸಂದೇಹ ಮತ್ತು ಗೊಂದಲಗಳು ಗೀತೆಯ ಬಗೆಗಿದ್ದರೂ ಜಗತ್ತಿನ ಅನೇಕ ಗಣ್ಯರಿಗೆ ಇದೊಂದು ಸ್ವಾರಸ್ಯಕರ ಕೃತಿಯಾಗಿ ಮೆಚ್ಚುಗೆಗೆ ಪಾತ್ರವಾಗಿರುವುದು ಆಶ್ಚರ್ಯವಾಗಿ ಕಾಣುತ್ತದೆ. 'ಗೀತೆ ಮೂಲತಃ ಅಹಿಂಸಾತತ್ವವನ್ನು ಬೋಧಿಸುವುದಿಲ್ಲ; ಬದಲಿಗೆ ಹಿಂಸೆಯನ್ನು ಪ್ರಚೋದಿಸುತ್ತದೆ' ಎಂಬುದು ಈ ಕೃತಿಯ ಬಗೆಗಿರುವ ಪ್ರಮುಖ ವಿರೋಧಾಭಾಸಗಳಲ್ಲಿ ಒಂದು. ಆದ್ದರಿಂದ ಇದೊಂದು ಯುದ್ಧಪ್ರಚೋದಿತ ಕಥನ. 'ರಾಷ್ಟ್ರೀಯತೆ'

ಹೆಸರಿನಲ್ಲಿ ಸ್ವಾತಂತ್ರ್ಯ ಆಂದೋಲನಕ್ಕೆ ಕೃಷ್ಣನ ಬಾಯಿಂದ ಹೊರಡಿಸುವ ಮಾತುಗಳು ಎಂಥ ಮೂಢಾತ್ಮರನ್ನೂ ಪ್ರಚೋದಿಸದೇ ಇರದು. ಅಷ್ಟೇ ಅಲ್ಲ, ಇದು ಕೇವಲ ಹಿಂದೂಗಳನ್ನಷ್ಟೇ ಒಗ್ಗೂಡಿಸಲು ಕರೆ ಕೊಡುವ ತಂತ್ರವಾಗಿ ಕಾಣಿಸುತ್ತದೆ. ಆಶ್ಚರ್ಯವೆಂದರೆ "ಅಹಿಂಸಾಮಂತ್ರ ಜಪಿಸುತ್ತಿದ್ದ ಗಾಂಧೀಜಿಯವರಿಗೆ ಯುದ್ಧಪ್ರಚೋದಕ ಗೀತೆ ಹೇಗೆ ಬೋಧನಪ್ರಾಯವಾಯಿತೋ ಗೊತ್ತಿಲ್ಲ."[೯] ಆದರೆ ಇದಕ್ಕೆ ವ್ಯತಿರಿಕ್ತವಾದ ಹೇಳಿಕೆಯನ್ನು ರಾಜಾಜಿಯವರು ವ್ಯಕ್ತಪಡಿಸಿದ್ದಾರೆ. "ಅಧಿಕಾರವನ್ನು ಪಡೆಯಲು ಅಹಿಂಸೆಯು ಒಳ್ಳೆಯ ಮಾರ್ಗ; ಆದರೆ ಅಧಿಕಾರ ದೊರಕಿದ ಕೂಡಲೇ ಅಹಿಂಸಾಮಾರ್ಗವನ್ನು ಬಿಟ್ಟುಬಿಡಬೇಕು."[೧೦]

ಗೀತೆಯ ೧೧ನೇ ಅಧ್ಯಾಯದ ೩೩ನೇ ಶ್ಲೋಕವು ಸ್ವಾರ್ಥ ಮತ್ತು ಕ್ರೌರ್ಯವನ್ನೇ ಪ್ರತಿಪಾದಿಸುತ್ತದೆ. ಆ ಶ್ಲೋಕ ಹೀಗಿದೆ:

ತಸ್ಮಾತ್ ತ್ವಮುತ್ತಿಷ್ಠ ಯಶೋ ಲಭಸ್ವ ।
ಜಿತ್ವಾ ಶತ್ರೂನ್ ಭಂಕ್ಷ್ವ ರಾಜ್ಯಂ ಸಮೃದ್ಧಮ್ ॥

'ನೀನು ಎಲ್ಲದಕ್ಕೂ ಸಿದ್ಧನಾಗಿರು, ಯಶಸ್ಸನ್ನು ಗಳಿಸು, ಶತ್ರುಗಳನ್ನು ಸಂಹರಿಸಿ ರಾಜ್ಯಸುಖವನ್ನು ಅನುಭವಿಸು' ಎಂಬ ಕೃಷ್ಣನ ಮಾತುಗಳು ಯುದ್ಧಕ್ಕೆ ಪ್ರೇರಣೆಯನ್ನು ನೀಡುತ್ತಿವೆ. ಆ ಪ್ರೇರಣೆಯಿಂದಲೇ ಅರ್ಜುನ ಒಲ್ಲದ ಮನಸ್ಸಿನಿಂದ ಯುದ್ಧಕ್ಕೆ ಸಿದ್ಧನಾಗುತ್ತಾನೆ. ಆದರೆ ಅರ್ಜುನನ ಮನಸ್ಸಿನಲ್ಲಿ ಉಂಟಾಗುವ ಕಳವಳ, ವಿಷಾದ ಈ ಯಾವ ಪ್ರಶ್ನೆಗಳೂ ಕಠೋರ ಮನಸ್ಕನಾದ ಕೃಷ್ಣನಿಗೆ ಕಾಡುವುದೇ ಇಲ್ಲ.

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ ॥ (೫–೧೮)

ಅಂದರೆ, ವಿದ್ಯಾವಿನಯಗಳಿಂದ ಕೂಡಿದ ಬ್ರಾಹ್ಮಣ, ಗೋವು, ಆನೆ, ನಾಯಿ ಮತ್ತು ನಾಯಿಯ ಮಾಂಸವನ್ನು ತಿನ್ನುವವನು– ಇವರೆಲ್ಲರಲ್ಲಿ ಜ್ಞಾನಿಗಳು ಸಮದರ್ಶಿಗಳಾಗಿರುವರು ಎನ್ನುತ್ತದೆ ಗೀತೆ. ಆದರೆ ಇನ್ನೊಂದು ಶ್ಲೋಕದಲ್ಲಿ ಈ ರೀತಿ ಹೇಳಿದೆ:

ಬ್ರಾಹ್ಮಣಕ್ಷತ್ರಿಯವಿಶಾಂ ಶೂದ್ರಾಣಾಂ ಚ ಪರಂತಪ ।
ಕರ್ಮಾಣಿ ಪ್ರವಿಭಕ್ತಾನಿ ಸ್ವಭಾವಪ್ರಭವೈರ್ಗುಣೈಃ ॥ (೧೮–೪೧)

ಅರ್ಜುನನೇ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರ ಕರ್ಮಗಳು ಹುಟ್ಟಿನಿಂದ ವಿಭಾಗಿಸಲ್ಪಟ್ಟಿವೆ. ಆದರೆ ಮುಂದಿನ ಶ್ಲೋಕದಲ್ಲಿ ಮೇಲಿನ ವಿಚಾರಗಳಿಗೆ ವ್ಯತಿರಿಕ್ತವಾದ ಅಂಶಗಳಿವೆ.

"ತದ್ಬುದ್ಧಯಸ್ತದಾತ್ಮಾ ನಸ್ತನ್ನಿಷ್ಠಾಸ್ತತ್ಪರಾಯಣಾಃ ।
ಗಚ್ಛಂತ್ಯಪುನರಾವೃತ್ತಿಂ ಜ್ಞಾನನಿರ್ಧೂತಕಲ್ಮಷಾಃ ॥ (೫–೧೭)

ಅಂದರೆ, ಯಾರು ಬ್ರಹ್ಮದಲ್ಲಿಯೇ ನಿಶ್ಚಯಬುದ್ಧಿಯುಳ್ಳವರಾಗಿರುವರೋ, ಯಾರು ಬ್ರಹ್ಮದಲ್ಲಿಯೇ ಮನಸ್ಸನ್ನಿಟ್ಟಿರುವರೋ, ಯಾರು ಬ್ರಹ್ಮನಿಷ್ಠರಾಗಿರುವರೋ, ಯಾರು ಬ್ರಹ್ಮವನ್ನೇ ಗತಿಯೆಂದು ನೆನಸಿರುವರೋ, ಯಾರು ಜ್ಞಾನದಿಂದ ಕಲ್ಮಷಗಳನ್ನು ತೊಳೆದುಕೊಂಡಿರುವರೋ, ಅವರು ಮೋಕ್ಷವನ್ನು ಹೊಂದುತ್ತಾರೆ.

ಸ್ವತಃ ಭಗವಂತನೇ 'ಗುಣ', 'ಕರ್ಮ'ದ ವಿಭಾಗವನ್ನು ಸೃಷ್ಟಿಸಿದ್ದು. ಅವು ವೈದಿಕ ಸೃಷ್ಟಿಯಲ್ಲ ಎನ್ನುವ ಗೀತೆಯ ಧೋರಣೆ ಹಲವು ಗೊಂದಲಗಳನ್ನು ಸೃಷ್ಟಿಸುತ್ತದೆ. ಅಂದರೆ ಚಾತುರ್ವರ್ಣದ ಶ್ರೇಣೀಕರಣ ವ್ಯವಸ್ಥೆಯನ್ನು ಶ್ರೀಕೃಷ್ಣ ಸೃಷ್ಟಿಸಿದನೋ ಅಥವಾ ಸ್ವಭಾತಃ ಹುಟ್ಟಿನಿಂದ ಸೃಷ್ಟಿಯಾಯಿತೋ ಎಂಬುದು ಗೀತೆಯ ಬಗೆಗೆ ಇರುವ ಮೂಲಭೂತ ಪ್ರಶ್ನೆಗಳಲ್ಲಿ ಒಂದು. ಈ ಮುಂದಿನ ಮಾತುಗಳು ಸಹ ಚಾತುರ್ವರ್ಣದ ಸಮರ್ಥನೆಯಾಗಿ ಕಾಣುತ್ತವೆ.

"ಜ್ಞಾನ ವಿಜ್ಞಾನ ಸಂಪಾದನೆ ಬ್ರಾಹ್ಮಣನ ಕರ್ಮ; ಯುದ್ಧ ಮಾಡುವುದು ಕ್ಷತ್ರಿಯನ ಕರ್ಮ; ಕೃಷಿ, ಪಶುಪಾಲನೆ ಮತ್ತು ವಾಣಿಜ್ಯಗಳು ವೈಶ್ಯರ ಕರ್ಮ; ಮೇಲಿನ ಈ ಮೂರೂ ವರ್ಣಗಳ ಪರಿಚರ್ಯೆ ಮಾಡುವುದೇ ಶೂದ್ರನಿಗೆ ನಿಗದಿಯಾದ ಕರ್ಮ. ಯಾವ ಆಕ್ಷೇಪವನ್ನು ಎತ್ತದೆಯೇ ಈ ಕರ್ಮಗಳನ್ನು ತಾಳ್ಮೆಯಿಂದ ಕಟ್ಟುನಿಟ್ಟಾಗಿ ಅನುಷ್ಠಾನ ಮಾಡಿಕೊಂಡು ಹೋಗಬೇಕಾದದ್ದು ಆಯಾ ವರ್ಣಕ್ಕೆ ಸೇರಿದ ಪ್ರತಿಯೊಬ್ಬನ ಧರ್ಮ. ಅದೇ ಅವನ ಸ್ವ-ಧರ್ಮ. ಇನ್ನೊಂದು ವರ್ಣಕ್ಕೆ ನಿಗದಿಯಾದ ಕರ್ಮ ಅವನ ಪಾಲಿಗೆ ಪರಧರ್ಮ. ತನ್ನ ಧರ್ಮವನ್ನು ಪಾಲಿಸದೇ ಅದನ್ನು ಮಾಡಲೆಳಸುವುದು ಅಧರ್ಮ."[೩೧]

ಈ ಮೇಲಿನ ಮಾತುಗಳು ಭಗವದ್ಗೀತೆಯ ೪೧ರಿಂದ ೪೪ನೆಯ ಶ್ಲೋಕಗಳ ಸಾರಾಂಶ. ಇಂಥ ಅಸಂಗತ ವಿಚಾರಗಳನ್ನು ಅಧ್ಯಾತ್ಮ ಮತ್ತು ಧಾರ್ಮಿಕತೆಯ ಲೇಪ ಹಚ್ಚಿ ಜನ ಸಾಮಾನ್ಯರಿಗೆ ಮುಟ್ಟಿಸುವ ಉದ್ದೇಶವಷ್ಟೇ ಇಲ್ಲಿನ ಮುಖ್ಯ ಗುರಿ ಎನಿಸುತ್ತದೆ. ಇದನ್ನು ಡಿ.ಡಿ. ಕೊಸಾಂಬಿ ಅವರು ತಮ್ಮ ಮಾತುಗಳಲ್ಲಿ ಹೀಗೆ ನಿರೂಪಿಸಿದ್ದಾರೆ. "...ಎಲ್ಲಾ ಅಸಂಗತ ವಿಷಯಗಳನ್ನೂ ಸಂಗತವೆನಿಸುವಂತೆ ಮಾಡುವ ಚಾತುರ್ಯವೇ ಗೀತೆಯ ಮೂಲಭೂತವಾದ ನ್ಯೂನತೆ. ಆದರೆ ಈ ವಿಚಿತ್ರ ನ್ಯೂನತೆಯಲ್ಲಿಯೇ ಅದರ ಉಪಯುಕ್ತತೆಯೂ ಇರುವುದು. ಆರನೇ ಆಧ್ಯಾಯದಲ್ಲಿ ಪರಮಾತ್ಮನು ಹಿಂಸೆಯ ಪಾರಮ್ಯವನ್ನು ಒತ್ತಿ ಒತ್ತಿ ಹೇಳುತ್ತಾನೆ. ಯುದ್ಧಕ್ಕೆ ಪ್ರೇರೇಪಿಸುವುದೇ ಭಗವದ್ಗೀತೆಯ ಉದ್ದೇಶವಾಗಿರುವುದರಿಂದ ಅದು ಕೊಲ್ಲುವುದು ಮತ್ತು ಕೊಲೆಯಾಗುವುದು ಎರಡೂ ಅಸಾಧ್ಯವೆನ್ನುತ್ತದೆ(೨.೧೯). 'ಮನುಷ್ಯನು ಹಳೇ ಬಟ್ಟೆಯನ್ನು ಬಿಸಾಡಿ ಹೊಸ ಬಟ್ಟೆಯನ್ನು ತೊಡುವಂತೆ, ಆತ್ಮವು ಜೀರ್ಣವಾದ ದೇಹವನ್ನು ಬಿಟ್ಟು ಹೊಸ ಶರೀರವನ್ನು ತೊಡುತ್ತದೆ. ಬೆಂಕಿಯಾಗಲಿ, ಗಾಳಿಯಾಗಲಿ ಅಥವಾ ನೀರಾಗಲೀ ಆತ್ಮವನ್ನು ಬಾಧಿಸುವುದಿಲ್ಲ. ಯಾವುದೇ ಆಯುಧಗಳಿಂದಲೂ ಅದನ್ನು ತುಂಡರಿಸುವುದೂ ಸಾಧ್ಯವಿಲ್ಲ'. ಗೀತೆಯ ಹನ್ನೊಂದನೇ ಅಧ್ಯಾಯದಲ್ಲಿ ದೈತ್ಯಾಕಾರದ ವಿಷ್ಣು-ಕೃಷ್ಣನ ಅಸಂಖ್ಯಾತ, ಬಕಾಸುರನಂಥ ಬಾಯಿಗಳೊಳಕ್ಕೆ ಎರಡೂ ಕಡೆಯ ಸೈನಿಕರು ಸಾಯಲು ನುಗ್ಗುತ್ತಿರುವುದನ್ನು ಅರ್ಜುನನು

ಗಾಬರಿಯಿಂದ ನೋಡುತ್ತಾನೆ. ಯುದ್ಧರಂಗದಲ್ಲಿರುವ ಎಲ್ಲಾ ಸೈನಿಕರನ್ನೂ ಕೃಷ್ಣನು ಈಗಾಗಲೇ ಕೊಂದಾಗಿದೆ. ಹಾಗಾಗಿ ಅರ್ಜುನನು ಅವರನ್ನು ಕೊಲ್ಲುವುದು ಕೇವಲ ನಿಮಿತ್ತ ಮಾತ್ರ. ಈ ನಿಮಿತ್ತ ಮಾತ್ರ ಕ್ರಿಯೆಯಿಂದ ಅವನಿಗೆ ಸಮೃದ್ಧವಾಗಿರುವ ರಾಜ್ಯ ದೊರಕುತ್ತದೆ. ಇದು ವಿಶ್ವರೂಪದಲ್ಲಿರುವ ಭಗವಂತನೇ ಸೂಚಿಸುವ ನೀತಿ(ಗೀ.೧೧.೩೩). ಅದೇ ರೀತಿಯಲ್ಲಿ ಗೀತೆಯಲ್ಲಿ ಯಜ್ಞಗಳಿಗೆ ಯಾವುದೇ ಮಹತ್ವ ನೀಡದೆ ತಿರಸ್ಕರಿಸಲಾಗಿದೆ. ಆದರೆ ಮುಂದೆ ಅದೇ ಗೀತೆಯು(೩.೧೪) ಆಹಾರ ಮತ್ತು ಜೀವಿತಕ್ಕೆ ತೀರಾ ಅಗತ್ಯವಾದ ಮಳೆಯನ್ನು ಯಜ್ಞವು ಸೃಷ್ಟಿಸುತ್ತದೆ ಎಂದು ಒಪ್ಪಿಕೊಳ್ಳುತ್ತದೆ. ಗೀತೆಯುದ್ಧಕ್ಕೂ ಈ ರೀತಿಯ ದ್ವಂದ್ವದ ಹೇಳಿಕೆಗಳನ್ನು ನೋಡಬಹುದು. ಸ್ವಾಭಾವಿಕವಾಗಿಯೇ ಇದರಿಂದ ಸ್ಫೂರ್ತಿಗೊಂಡಂತಹ ಅಸಂಖ್ಯಾತ ಗೀತಾ ಪ್ರೇಮಿಗಳಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಈ ಲೌಕಿಕ ಜಗತ್ತು ಕೇವಲ ಮಿಥ್ಯೆ ಎಂದು ಒಪ್ಪಿಕೊಂಡುಬಿಟ್ಟರೆ ಆಗ ಸ್ವಾಭಾವಿಕವಾಗಿಯೇ ಪರಸ್ಪರ ಸಂಪೂರ್ಣವಾಗಿ ವಿರುದ್ಧವಾಗಿರುವ ನಂಬಿಕೆಗಳನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗುತ್ತದೆ"[೨] ಎಂದು ಕೊಸಾಂಬಿ ಅವರು ತಮ್ಮ ಕೃತಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ತಿಲಕರು ಹೇಳುವಂತೆ ಗೀತೆ ಮಹಾಭಾರತ ಕಾವ್ಯದ ಒಂದು ಭಾಗ; ಮತ್ತು ಈ ಎರಡೂ ಕೃತಿಗಳು ಏಕಕಾಲದಲ್ಲಿಯೇ, ಒಬ್ಬನೇ ಕವಿಯಿಂದ ರಚಿಸಲ್ಪಟ್ಟವು ಎಂಬ ವಾದವನ್ನು ಡಿ.ಡಿ. ಕೊಸಾಂಬಿ ಅಲ್ಲಗಳೆಯುತ್ತಾರೆ. ಬದಲಾಗಿ ಗೀತೆ ವಿವಿಧ ವ್ಯಾಖ್ಯಾನಗಳು ಹಾಗೂ ಹಲವು ಪ್ರಕ್ಷೇಪಗಳಿಂದ ಕೂಡಿರುವ ಕೃತಿ ಎನ್ನುತ್ತಾರೆ.

ಭಗವದ್ಗೀತೆಯಲ್ಲಿರುವ ಕುರುಡು ನಂಬಿಕೆ ಮತ್ತು ಸಿದ್ಧಾಂತಗಳ ನಡುವಿನ ಭಿನ್ನತೆಯನ್ನು ವಿ.ಆರ್. ನಾರ್ಲ ಮತ್ತಷ್ಟು ಇಲ್ಲಿ ಸ್ಪಷ್ಟಪಡಿಸುತ್ತಾರೆ. "ತತ್ವಜ್ಞಾನಕ್ಕೆ ಸಂದಿಗ್ಧತೆಯು ಪ್ರೇರಣೆಯಾಗಬಹುದೇ ಹೊರತು ಕುರುಡುಸಿದ್ಧಾಂತವು ಎಂದಿಗೂ ಪ್ರೇರಣೆಯಾಗಲಾರದು. ಸಂದೇಹಗಳು ತತ್ವಜ್ಞಾನವಾಗಬಹುದೇ ಹೊರತು ದ್ವಂದ್ವಾರ್ಥಗಳು, ಅಸ್ಪಷ್ಟೋಕ್ತಿಗಳು ತತ್ವಜ್ಞಾನವಾಗಲಾರವು. ಗೀತೆಯಲ್ಲಿ ತುಂಬಿರುವುದೆಲ್ಲಾ ಕುರುಡುನಂಬಿಕೆಗಳೇ. ಇದನ್ನು 'ಕುರುಡುನಂಬಿಕೆಗಳ ಪದಕೋಶ' ಎಂದು ಕರೆಯುವುದು ಸೂಕ್ತ. ಗೀತೆ ಎನ್ನುವುದು ಅಧ್ಯಾತ್ಮ ವಿದ್ಯೆಯಿಂದ ಯೋಗಧರ್ಮದವರೆಗೂ ಮಾಯೆ ಮತ್ತು ಮಂತ್ರಗಳ ಮೂಲಕ ನಾವು ಊಹಿಸಿಕೊಳ್ಳಲು ಸಾಧ್ಯವಿರಬಹುದಾದ ಎಲ್ಲ ರೀತಿಯ ಕುರುಡುಸಿದ್ಧಾಂತಗಳನ್ನು ಪ್ರತಿಪಾದಿಸುವ ಗ್ರಂಥ. ದ್ವಂದ್ವಾರ್ಥಗಳ ಕೂಪವನ್ನು ಸೃಷ್ಟಿಸಿಕೊಳ್ಳದೆ ಬೇರಾವ ರೀತಿಯಲ್ಲೂ ಹೀಗೆ ಮಾಡುವುದು ಸಾಧ್ಯವಲ್ಲದ ಗೀತೆಯು ದ್ವಂದ್ವಾರ್ಥಗಳೇ ಮೂಲಸತ್ವವಾಗಿರುವ ಗ್ರಂಥ. ಈ ಕಾರಣದಿಂದಲೇ ಹಾಪ್‌ಕಿನ್ಸ್ ಗೀತೆಯನ್ನು 'ಕುರುಡುಸಿದ್ಧಾಂತಗಳ ಕಲಬೆರಕೆ ಗ್ರಂಥ' ಎಂದು ಸರಿಯಾಗಿಯೇ ವಿಶ್ಲೇಷಿಸುತ್ತಾನೆ"[೩] ಎಂದು ವಿ.ಆರ್. ನಾರ್ಲ ಅವರು ಅಭಿಪ್ರಾಯಪಟ್ಟಿದ್ದಾರೆ. ಹೀಗೆ ಗೀತೆಯಲ್ಲಿರುವ ಅಸ್ಪಷ್ಟತೆ ಮತ್ತು ಅಸಂಬದ್ಧತೆಗಳು ಅದರ ಕ್ರಮಬದ್ಧವಾದ ಓದು ಮತ್ತು ಅರ್ಥಗ್ರಹಿಕೆಗೆ ತೊಡಕಾಗಿವೆ. ಅನಾದಿಕಾಲದಿಂದಲೂ ಈ ರೀತಿಯ ವಿರೋಧಾಭಾಸಗಳ ನಡುವೆ ಬೌದ್ಧಿಕ ಘರ್ಷಣೆ ನಡೆಯುತ್ತಲೇ ಇದೆ.

ಗೀತೆಯಲ್ಲಿ ಬರುವ ಸ್ವಧರ್ಮ, ನಿಷ್ಕಾಮಕರ್ಮ, ಕರ್ತವ್ಯನಿಷ್ಠೆ, ಸ್ಥಿತಪ್ರಜ್ಞತೆ ಇನ್ನೂ ಮುಂತಾದ ಅಂಶಗಳು ಸ್ವಾತಂತ್ರ್ಯ ಆಂದೋಲನ ಸಂದರ್ಭದಲ್ಲಿ ರಾಷ್ಟ್ರೀಯತೆಯ ಉದ್ದೀಪನಕ್ಕೆ ಬಳಕೆಯಾದವು. ತಿಲಕ್, ಸಾವರ್ಕರ್ ಅವರಂಥ ಚಿಂತಕರಿಗೆ ಭಾರತೀಯರು ಯಾರು ಎಂಬ ಪ್ರಶ್ನೆ ಚರ್ಚೆಯ ವಿಷಯವಾಯಿತು. ಸರ್ವಧರ್ಮ ಸಮಾನತತ್ವವನ್ನು ಬೋಧಿಸುತ್ತಿದ್ದ ಸಾವರ್ಕರ್ ತಮ್ಮ 'ಹಿಂದೂತ್ವ' ಕೃತಿ ಪ್ರಕಟಣೆಗೆ ಮುಂಚಿತವಾಗಿ ಬ್ರಿಟಿಷರ ವಿರುದ್ಧ ಭಾರತೀಯರು ತಮ್ಮ ಶೌರ್ಯವನ್ನು ಹೇಗೆ ಮೆರೆದರು ಎಂದು ಹೀಗೆ ವಿವರಿಸಿದ್ದಾರೆ. "ಹಿಂದೂಗಳೂ ಮುಸ್ಲಿಮರೂ ಜಂಟಿಯಾಗಿ ಪರಸ್ಪರ ಭ್ರಾತೃತ್ವವನ್ನು ಸಾರುತ್ತಾ ಸರ್ವಾನುಮತದಿಂದ ರಾಷ್ಟ್ರದ ಸ್ವಾತಂತ್ರ್ಯವನ್ನು ದೆಹಲಿಯಲ್ಲಿ ಘೋಷಿಸಿದ್ದ ಆ ಐದು ದಿನಗಳು, ಹಿಂದೂಸ್ತಾನದ ಇತಿಹಾಸದಲ್ಲಿ ಚಿರಂತನ ನೆನಪಿನ ಭವ್ಯ ದಿನಗಳು."[೩೪] ಇದು ನಂತರ ಕೋಮುವಾದಿ ರಾಷ್ಟ್ರೀಯತೆಯ ಹೊಸ ರೂಪವನ್ನು ತಾಳಿತು. ಇದಕ್ಕೆ ಆಗಿನ ಹಲವು ಘಟನೆಗಳು ಕಾರಣವಾಗಿರುವುದನ್ನು ಕಾಣಬಹುದು. ಕ್ರಿಸ್ಟೋಫರ್ ಜಫ್ರಿಲಾಟ್ ಹೇಳುವಂತೆ 'ಹಿಂದೂ ರಾಷ್ಟ್ರೀಯತೆ'ಯು ತುಂಬ ಪ್ರಬಲವಾಗಿ ಬೆಳೆಯಲು ೧೯ನೆಯ ಶತಮಾನದ ಪೂರ್ವದ ಚಾರಿತ್ರಿಕ ಬೆಳವಣಿಗೆಗಳ ಪಾತ್ರ ಮಹತ್ವದ್ದಾಗಿತ್ತು. ಆಗ ಜರುಗಿದ ಗೋಸಂರಕ್ಷಣೆಯ ಚಳುವಳಿಗಳು, ಹಿಂದಿ ಮತ್ತು ಉರ್ದು ಭಾಷೆಯ ವಿವಾದ ಹಾಗೂ ಪಂಜಾಬ್ ಪ್ರಾಂತ್ಯದಲ್ಲಿ ಆರ್ಯ ಸಮಾಜದ ಪ್ರಾಬಲ್ಯ–ಇಂಥ ಇನ್ನಿತರ ಘಟನೆಗಳು ಕೋಮುವಾದಿ ರಾಷ್ಟ್ರೀಯತೆಯ ಅಡಿಪಾಯಕ್ಕೆ ಬುನಾದಿಯಾದವು. ಈ ಹೊತ್ತಿಗಾಗಲೇ ಸಾವರ್ಕರ್ ಅವರ ರಾಷ್ಟ್ರೀಯತೆ ಧೋರಣೆಗಳಲ್ಲಿ ಮೂಲಭೂತ ವ್ಯತ್ಯಾಸಗಳು ಎದ್ದುಕಾಣುತ್ತಿದ್ದವು. ಇವು ಗೀತೆಯಿಂದ ಪ್ರಭಾವಿತರಾದ ಸಾವರ್ಕರರಲ್ಲಿ ಸಂಭವಿಸಿದ ವಿರೋಧಾಭಾಸಗಳಾಗಿವೆ. "ಯಾರು ಭಾರತವನ್ನು ತಮ್ಮ 'ಪುಣ್ಯಭೂಮಿ' ಎಂದೂ 'ಪಿತೃಭೂಮಿ' ಎಂದೂ ತಿಳಿಯುವರೋ ಅವರು ಮಾತ್ರ ಇಲ್ಲಿಯ ಪ್ರಜೆಗಳು. ಮಹಮ್ಮದೀಯರೂ ಕ್ರಿಶ್ಚಿಯನ್ನರೂ ಹಿಂದೂಗಳೊಡನೆ ಭಾರತವನ್ನು ಪಿತೃಭೂಮಿಗಳಾಗಿ ಪಡೆದರೂ ಅದರ ಆಶ್ಚರ್ಯಕ್ಕೆ ಪಾಲುದಾರರಾದರೂ ಅದರ ಭಾಷೆ, ಸಂಸ್ಕೃತಿಗೆ ಕೊಡುಗೆ ನೀಡಿದ್ದರೂ, ಅವುಗಳ ಅವಿಭಾಜ್ಯ ಭಾಗವೇ ಆಗಿದ್ದರೂ ಇಲ್ಲಿಯ ಕಾನೂನು, ಸಂಪ್ರದಾಯ, ಆಚಾರ–ವಿಚಾರಗಳು, ಜನಪದ ಸಂಸ್ಕೃತಿ ಇವೆಲ್ಲಕ್ಕೂ ಭಾಗಿಗಳಾದರೂ ಅವರನ್ನು ಭಾರತೀಯರೆನ್ನಲಾಗುವುದಿಲ್ಲ; ಕಾರಣ ಅವರ ಪುಣ್ಯಭೂಮಿ ಅರೇಬಿಯಾದಲ್ಲೋ, ಪಾಲೆಸ್ತೇನ್‌ನಲ್ಲೋ ಇವೆ"[೩೫] ಎಂದಿದ್ದಾರೆ. ಅಂದರೆ ಸಾವರ್ಕರ್ ಅವರಿಗೆ ಪ್ರಾದೇಶಿಕತೆಗಿಂತಲೂ ಮತಧಾರ್ಮಿಕತೆ, ರಾಷ್ಟ್ರೀಯತೆ ಮುಖ್ಯವಾಗಿತ್ತು ಎಂಬುದು ಇದರಿಂದ ವೇದ್ಯವಾಗುತ್ತದೆ. ಗೀತೆ ರಾಷ್ಟ್ರೀಯತೆಯ ಹೆಸರಿನಲ್ಲಿ ಹಿಂದುತ್ವವನ್ನು ಪ್ರಚೋದಿಸಿ ಜನರ ಮನಸ್ಸಿನಲ್ಲಿ ಸಾಮಾಜಿಕ ತರತಮವನ್ನು ಬಿತ್ತಿದೆ ಎಂಬುದು ಹಲವರ ಅಭಿಪ್ರಾಯವಾಗಿದೆ.

"ಹಿಂದೂಧರ್ಮದ ಬುನಾದಿಯು, ಆರ್ಯನ್ ಸಮುದಾಯದಲ್ಲಿ ಚಾತುರ್ವರ್ಣ್ಯ ವ್ಯವಸ್ಥೆಯ ಮೂಲಕ ಮೇಲಿನ ವರ್ಣಗಳವರು, ಕೆಳವರ್ಣಗಳ ಮೇಲೆ ಅಧಿಕಾರ ಚಲಾಯಿಸುವುದರಲ್ಲಿದೆ.

ವೇದಾಂತದ ಅಭೌತಿಕ ಪರಿಕಲ್ಪನೆಗಳು ಪ್ರಚಲಿತವಾದ ಮೇಲೆ ನಿರಾಕಾರ, ನಿರಂಕುಶ, ನಿರ್ಗುಣ, ನಿರಂತರನಾದ ಬ್ರಹ್ಮನೇ ಸೃಷ್ಟಿಕರ್ತನೆಂದೂ, ಆ ಬ್ರಹ್ಮನೇ ಚಾತುರ್ವರ್ಣ್ಯ ವಿಂಗಡಣೆಯನ್ನೂ ರೂಪಿಸಿರುವನೆಂದೂ ಪ್ರಚಾರ ಮಾಡಲಾಯಿತು. ಇನ್ನೂ ಮುಂದುವರಿದು ಎಲ್ಲ ವರ್ಣಗಳೂ (ಜಾತಿಗಳೂ) ತಮ್ಮ ತಮ್ಮ ಕರ್ತವ್ಯಗಳನ್ನು ನಿಷ್ಠೆಯಿಂದ ಇಹಲೋಕದ ಬಂಧನಗಳಿಂದ ಬಿಡುಗಡೆ ಹೊಂದಿ ಮೋಕ್ಷ ಸಂಪಾದಿಸಬಹುದೆಂದೂ ಪ್ರತಿಪಾದಿಸಲಾಯಿತು. ಈ ಪ್ರತಿಪಾದನೆಯು ಮುಖ್ಯವಾಗಿ ಬ್ರಾಹ್ಮಣ ಮತ್ತು ಕ್ಷತ್ರಿಯ ವರ್ಣಗಳ ಹಿತರಕ್ಷಣೆಗೆ ತುಂಬಾ ಸಹಾಯಕವಾಯಿತು."[೩೬] ಈ ರೀತಿಯ ಭಾವನೆಗಳು ರಾಷ್ಟ್ರೀಯತೆ ಕುರಿತಂತೆ ಸೀಮಿತ ಧೋರಣೆಗಳನ್ನು ಹುಟ್ಟುಹಾಕಿದವು. ಅಷ್ಟೇ ಅಲ್ಲ, ಕೆಲವು ಬುದ್ಧಿಜೀವಿಗಳ ಸೈದ್ಧಾಂತಿಕ ನಿಲುವುಗಳಲ್ಲೂ ಬದಲಾವಣೆಗಳಾದವು ಎಂಬುದನ್ನು ಗುರುತಿಸಬಹುದು. ಎಂ.ಎಸ್. ಗೋಲ್ವಾಲ್ಕರ್ 'ಮತಧರ್ಮವೇ ಸಂಸ್ಕೃತಿ' ಎಂದು ವ್ಯಾಖ್ಯಾನಿಸಿ, ಭಾರತದ ಸಂದರ್ಭದಲ್ಲಿ ರಾಜಕೀಯ ಹಿತಾಸಕ್ತಿಗಿಂತ ಸಾಂಸ್ಕೃತಿಕ ಎಚ್ಚರ ತುಂಬಾ ಅಗತ್ಯವೆಂದು ಭಾವಿಸಿದ್ದನು. ಸರ್.ಜಾನ್. ಸ್ಟ್ರಾಚಿ ಎಂಬ ಯೂರೋಪಿಯನ್ ಚಿಂತಕ ವಸಾಹತು ಮತ್ತು ನವವಸಾಹತುಶಾಹಿ ಚಿಂತನೆಗಳಲ್ಲಿ ಭಾರತದ್ದೇ ಆದ ಒಂದು ಖಚಿತವಾದ ರಾಷ್ಟ್ರೀಯತೆಯ ಪ್ರಜ್ಞೆ ಇರಲಿಲ್ಲ ಎನ್ನುತ್ತಾನೆ.

ಗೀತೆಯ ದ್ವಂದ್ವಾತ್ಮಕ ನಿಲುವುಗಳ ಬಗ್ಗೆ ಅಂಬೇಡ್ಕರ್ ಅವರು ಮಂಡಿಸಿರುವ ವಿಚಾರಗಳು ತುಂಬ ಕುತೂಹಲವನ್ನು ಉಂಟುಮಾಡುತ್ತವೆ. 'ಭಗವದ್ಗೀತೆಯ ಮೇಲೆ ಪ್ರಬಂಧಗಳು: ಪ್ರತಿಕ್ರಾಂತಿಯ ತಾತ್ವಿಕ ಸಮರ್ಥನೆ: ಕೃಷ್ಣ ಮತ್ತು ಅವನ ಗೀತೆ' ಎಂಬ ತಮ್ಮ ಲೇಖನದಲ್ಲಿ ಗೀತೆಯ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದಾರೆ. ಮುಖ್ಯವಾಗಿ ಗೀತೆಯ ಕಾಲ, ಕರ್ತೃ, ಗೀತೆ ಮತ್ತು ಬೌದ್ಧ ಧರ್ಮದ ಸಂಬಂಧಾಂತರಗಳು, ಗೀತೆ ಹಿಂದೂಗಳ ಧರ್ಮಗ್ರಂಥವೇ? ಮೂಲತಃ ಗೀತೆ ಏನನ್ನು ಬೋಧಿಸುತ್ತದೆ? ಮುಂತಾದ ಅಂಶಗಳ ಬಗ್ಗೆ ಈ ಲೇಖನದಲ್ಲಿ ವಿವೇಚಿಸಿದ್ದಾರೆ.

ಮುಖ್ಯವಾಗಿ ಬೋಲ್ಡಿಂಗ್, ಹಾಪ್‌ಕಿನ್ಸ್, ಹೋಲ್ಟೈಜ್ ಮನ್, ಗಾರ್ಬೆ, ತೆಲಾಂಗ್, ಬಾಲಗಂಗಾಧರ್ ತಿಲಕ್ ಮುಂತಾದವರ ವಿಚಾರ ಸರಣಿಯ ಹಿನ್ನೆಲೆಯಲ್ಲಿ ರಚನೆಗೊಂಡಿರುವ ಈ ಲೇಖನದಲ್ಲಿ ತೀಕ್ಷ್ಣ ಒಳನೋಟಗಳಿವೆ. ಇವು ಓದುಗರನ್ನು ಪರ್ಯಾಯ ಚಿಂತನೆಗೆ ಒಳಗು ಮಾಡುವುದಲ್ಲದೆ, ಅವರು ಎತ್ತಿರುವ ಕೆಲವು ಮೂಲಭೂತ ಪ್ರಶ್ನೆಗಳು ಗೀತೆಯ ಗೊಂದಲ, ದ್ವಂದ್ವಾತ್ಮಕ ನಿಲುವುಗಳನ್ನು ಪ್ರಶ್ನಿಸುತ್ತಲೇ ಓದುಗರನ್ನು ಚಿಂತನೆಗೆ ಒಳಗು ಮಾಡುತ್ತವೆ.

ಅಂಬೇಡ್ಕರ್ ಹೇಳಿರುವಂತೆ ಕೃಷ್ಣನಿಗೆ ಯಾರು ಪ್ರಿಯರು? ಎಂಬ ಪ್ರಶ್ನೆ ಎದ್ದಾಗ ಕರ್ಮಯೋಗಿಯೋ, ಭಕ್ತನೋ ಅಥವಾ ಜ್ಞಾನಿಯೋ ಎಂಬ ಸಂಶಯ ಓದುಗರಲ್ಲಿ ಸಹಜವಾಗಿ ವ್ಯಕ್ತವಾಗುತ್ತದೆ. ಇಂಥ ವಿರೋಧಾಭಾಸಗಳ ನಡುವೆಯೂ ಕೃಷ್ಣ ಹೇಳುತ್ತಾನೆ– "ಅರ್ಜುನ, ನೀನು ನನಗೆ ತುಂಬಾ 'ಪ್ರಿಯ'ವಾದವನು" ಎಂದು. ಆದರೆ ಮತ್ತೆ ಅದೇ ಕೃಷ್ಣ ಹದಿನೇಳನೆಯ ಅಧ್ಯಾಯದಲ್ಲಿ ಒಂದು ಕಡೆ ನನಗೆ ಯಾರೂ 'ಅಪ್ರಿಯರಲ್ಲ ಅಥವಾ ಪ್ರಿಯರಲ್ಲ' ಎಂದು ತನ್ನ ಮಾತಿನ ವರಸೆಯನ್ನು ಬದಲಿಸುತ್ತಾನೆ. ಇಂಥ ವಿರೋಧಾಭಾಸದ ನುಡಿಗಳು ಯಾರಿಗೆ

ತಾನೆ ಗೊಂದಲವನ್ನು ಉಂಟುಮಾಡುವುದಿಲ್ಲ? ರಾಕ್ಷಸರ ಬಗ್ಗೆ ಉಲ್ಲೇಖಿಸುವಾಗ ಗೀತೆಯ ಕರ್ತೃ, ಬಳಸುವ ಭಾಷೆ ಮಾಧುರ್ಯದಿಂದ ಕೂಡಿಲ್ಲ; ಇಲ್ಲಿ ಪಕ್ಷಪಾತಿ ಧೋರಣೆ ಕಾಣಿಸುತ್ತದೆ. ಅಷ್ಟೇ ಅಲ್ಲ, ದಾನವರನ್ನು 'ಪಾಪಯೋನಿಗೆ ಎಸೆಯುತ್ತವೆ' ಎಂಬ ಕೃಷ್ಣನ ಮಾತುಗಳು ಅಂಬೇಡ್ಕರ್ ದೃಷ್ಟಿಯಲ್ಲಿ ಅಸಂಬದ್ಧವಾಗಿವೆ. ಅದಕ್ಕಾಗಿಯೇ ಗೀತೆಯನ್ನು 'ಅಸಾಂಗತ್ಯ'ಗಳ ಕಂತೆ ಎಂದು ಕರೆಯುತ್ತಾರೆ. ಇನ್ನೂ ಮುಂದುವರಿದು ಗೀತೆಯ ಮುಖ್ಯಗುರಿ 'ಕರ್ಮಯೋಗವೇ ಹೊರತು; 'ಜ್ಞಾನಯೋಗವಲ್ಲ' ಎನ್ನುತ್ತಾರೆ.

ಭಗವದ್ಗೀತೆಯ ಮೂರು ಮುಖ್ಯ ಸಂದೇಶಗಳೇನು ಎಂಬ ಪ್ರಶ್ನೆಗೆ ಅಷ್ಟೇ ಸ್ಪಷ್ಟ ಮತ್ತು ನಿಖರವಾಗಿ ಅಂಬೇಡ್ಕರ್ ಹೀಗೆ ಹೇಳುತ್ತಾರೆ. "ಭಗವದ್ಗೀತೆ ಬೋಧಿಸುವ ಸಂದೇಶ ಏನು ಎಂಬುದರ ಬಗ್ಗೆ ಇಂತಹ ವೈವಿಧ್ಯಮಯವಾದ ಅಭಿಪ್ರಾಯ ಕಾಣುವುದು ದೊಡ್ಡ ಆಶ್ಚರ್ಯದ ಸಂಗತಿಯಲ್ಲ. ವಿದ್ವಾಂಸರು ದಾರಿ ತಪ್ಪಿದ್ದಾರೆಂಬುದೇ ಇದಕ್ಕೆ ನನ್ನ ಉತ್ತರ. ಖುರಾನ್, ಬೈಬಲ್ ಅಥವಾ ಧಮ್ಮಪದದ ಹಾಗೆ ಭಗವದ್ಗೀತೆಯೂ ಕೂಡ ಒಂದು ಸಂದೇಶವನ್ನು ಕೊಡುತ್ತದೆ ಎಂಬ ಭಾವನೆಯಿಂದ ಅವರು ಹೊರಟಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಈ ಭಾವನೆ ಸಂಪೂರ್ಣವಾಗಿ ತಪ್ಪು ಭಾವನೆಯಾಗಿದೆ. ಭಗವದ್ಗೀತೆಯು ದೇವವಾಣಿಯಲ್ಲ; ಆದ್ದರಿಂದ ಅದು ಯಾವ ಸಂದೇಶವನ್ನೂ ಕೊಡಲಾರದು; ಅದನ್ನು ಹುಡುಕುವುದು ವ್ಯರ್ಥ, ಭಗವದ್ಗೀತೆ ಧರ್ಮಗ್ರಂಥವೂ ಅಲ್ಲ. ದರ್ಶನ ಗ್ರಂಥವೂ ಅಲ್ಲ ಎಂಬುದೇ ನನ್ನ ಉತ್ತರ. ತಾತ್ವಿಕ ನೆಲೆಗಟ್ಟಿನ ಮೇಲೆ ಕೆಲವು ಧಾರ್ಮಿಕ ನಂಬಿಕೆಗಳನ್ನು ಸಮರ್ಥಿಸುವುದೇ ಭಗವದ್ಗೀತೆಯ ಉದ್ದೇಶ. ಈ ಕಾರಣದಿಂದಾಗಿ ಅದನ್ನು ಯಾರಾದರೂ ಧರ್ಮಗ್ರಂಥ ಅಥವಾ ದರ್ಶನಗ್ರಂಥ ಎಂದು ಕರೆಯಲಿಚ್ಛಿಸಿದರೆ ಅವರು ಹಾಗೆಯೇ ಮಾಡಲಿ; ಆದರೆ ಅದು ಮೂಲಭೂತವಾಗಿ ಇದಾವುದೂ ಅಲ್ಲ. ಅದು ಧರ್ಮವನ್ನು ಸಮರ್ಥಿಸಲು ತತ್ವಜ್ಞಾನವನ್ನು ಬಳಸುತ್ತದೆ."[೩೭]

ಗೀತೆ ತತ್ವದರ್ಶನ ಮತ್ತು ಧರ್ಮದ ಹೆಸರಿನಲ್ಲಿ ಕೆಲವು ಅಸಂಬದ್ಧ ನಂಬಿಕೆಗಳನ್ನು ಜನರಲ್ಲಿ ಬಿತ್ತುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಇದು ಯುದ್ಧವನ್ನು ಸಮರ್ಥಿಸುತ್ತದೆ ಎಂದು ಅಂಬೇಡ್ಕರ್ ಹೇಳುತ್ತಾರೆ. ಅಂದರೆ ಯಾವ ಪಶ್ಚಾತ್ತಾಪವೂ ಇಲ್ಲದೆ ಯುದ್ಧ ಮತ್ತು ಕೊಲೆಗೆ ಕೃಷ್ಣನೇ ನೇರ ಹೊಣೆಗಾರನು, ಅವನಿಗೆ ಕಿಂಚಿತ್ತೂ ಕರುಣೆ ಎಂಬುದಿಲ್ಲ. "ಭಗವದ್ಗೀತೆ ಕೊಡುವ ಇನ್ನೊಂದು ಪ್ರಶ್ನಾತೀತ ನಂಬಿಕೆಯ ತಾತ್ವಿಕ ಸಮರ್ಥನೆಯೆಂದರೆ ಚಾತುರ್ವರ್ಣ. ಚಾತುರ್ವರ್ಣ ದೈವಸೃಷ್ಟಿಯೆಂದೂ, ಆದ್ದರಿಂದ ಪವಿತ್ರವೆಂದೂ, ಭಗವದ್ಗೀತೆ ನಿಸ್ಸಂದೇಹವಾಗಿ ಹೇಳುತ್ತದೆ."[೩೮] ಹೀಗೆ ಹೇಳುವ ಮೂಲಕ ಶ್ರೇಣೀಕರಣ ವ್ಯವಸ್ಥೆಗೆ ಶಾಶ್ವತ ಬುನಾದಿ ಹಾಕುವ ಕುತಂತ್ರ ಬುದ್ಧಿ ಇದರ ಹಿಂದಿದೆ. ಅಷ್ಟೇ ಅಲ್ಲ, ಈ ಚಾತುರ್ವರ್ಣವನ್ನು ಅನುಷ್ಠಾನಗೊಳಿಸುವ ಕ್ರಮದಲ್ಲೂ ಸಹ ಕುಟಿಲ ತಂತ್ರಗಾರಿಕೆಯನ್ನು ಕಾಣಬಹುದು.

"ಕೊಲ್ಲುವುದೇ ಕ್ಷತ್ರಿಯನ ಕರ್ತವ್ಯವೆಂದು ಹೇಳುವ ಭಗವದ್ಗೀತೆಯ ತಾತ್ವಿಕ ಸಮರ್ಥನೆ, ಅತ್ಯಂತ ಕನಿಷ್ಠವಾಗಿ ಹೇಳುವುದಾದರೆ, ಬಾಲಿಶವಾಗಿದೆ. ಕೊಂದರೆ ಕೊಲೆಯಲ್ಲ. ಏಕೆಂದರೆ

ಕೊಲೆಯಾಗುವುದು ದೇಹ, ಆತ್ಮವಲ್ಲ ಎಂದು ಹೇಳುವುದು ಎಂದೂ ಕೇಳರಿಯದಂತಹ ಕೊಲೆಯ ಸಮರ್ಥನೆಯಾಗಿದೆ. ಸಿದ್ಧಾಂತಗಳು ಜನರನ್ನು ಭೀತಿಗೊಳಿಸುತ್ತವೆ ಎಂದು ಕೆಲವರು ಹೇಳುವ ಸಿದ್ಧಾಂತಗಳಲ್ಲಿ ಇದೂ ಒಂದು. ಕೊಲೆಗಾಗಿ ವಿಚಾರಣೆಯನ್ನು ಎದುರಿಸುತ್ತಿರುವ ಕಕ್ಷಿದಾರನ ಪರವಾಗಿ ಕೃಷ್ಣ ವಕಾಲತ್ತು ವಹಿಸಿ ಭಗವದ್ಗೀತೆಯಲ್ಲಿ ಅವನೇ ಹೇಳಿರುವ ಸಮರ್ಥನೆಯನ್ನು ಮುಂದಿಟ್ಟರೆ ಅವನನ್ನು ಹುಚ್ಚಾಸ್ಪತ್ರೆಗೆ ಕಳುಹಿಸುವುದರಲ್ಲಿ ತಿಲಮಾತ್ರವೂ ಅನುಮಾನವಿಲ್ಲ. ಅದೇ ರೀತಿಯಲ್ಲಿ ಚಾತುರ್ವರ್ಣ ಸಿದ್ಧಾಂತದ ಬಗೆಗಿನ ಭಗವದ್ಗೀತೆಯ ಸಮರ್ಥನೆ ಬಾಲಿಶವಾದುದ್ದು."[೩೯] ಕೃಷ್ಣ ಚಾತುರ್ವರ್ಣ ವ್ಯವಸ್ಥೆಯನ್ನು ಪೋಷಿಸಲು ಮತ್ತು ಸಮರ್ಥಿಸುವುದಕ್ಕೆ ಕೆಲವು ನಿಯಮಗಳನ್ನು ಶೂದ್ರರಿಗೆ ವಿಧಿಸುತ್ತಾನೆ. ಅವೇನೆಂದರೆ– ಪ್ರತಿಯೊಬ್ಬರೂ ಈ ಚಾತುರ್ವರ್ಣ ವಿಧಿಸಿರುವ ಕರ್ತವ್ಯಗಳನ್ನು ತಪ್ಪದೇ ಪಾಲಿಸಬೇಕು. ಅಷ್ಟೇ ಅಲ್ಲ, ತನ್ನ ಭಕ್ತರೇ ಆಗಲಿ ತನ್ನನ್ನು ಪೂಜಿಸಿದ ಮಾತ್ರಕ್ಕೆ ಮೋಕ್ಷ ಸಿಗುವುದಿಲ್ಲ; ವೈದಿಕ ಮತ್ತು ಕ್ಷತ್ರಿಯ ವರ್ಗದ ಕರ್ತವ್ಯಗಳನ್ನು ಶ್ರದ್ಧೆ ಮತ್ತು ಭಕ್ತಿಯಿಂದ ಆಚರಿಸಿದರೆ ಮಾತ್ರ ಮುಕ್ತಿ ದೊರೆಯುತ್ತದೆ ಎಂದು ಮತ ಮೌಢ್ಯಗಳನ್ನು ಸಮರ್ಥಿಸುತ್ತಾನೆ. ಅಂದರೆ "ಶೂದ್ರನಾದವನು ಭಕ್ತನಾಗಿ ದೊಡ್ಡವನಿರ ಬಹುದು, ಆದರೆ ಶೂದ್ರವರ್ಣದ ಕರ್ತವ್ಯವನ್ನು ಉಲ್ಲಂಘಿಸಿದರೆ ಅವನಿಗೆ ಮೋಕ್ಷ ಸಿಗುವುದಿಲ್ಲ– ಅರ್ಥಾತ್ ಮೇಲಿನ ಮೂರು ವರ್ಣದವರ ಸೇವೆ ಮಾಡಿ ಅವರಿಗಾಗಿ ದುಡಿದು ಮಡಿಯು ವುದರಿಂದ ಮಾತ್ರ ಮೋಕ್ಷ ಸಿಗುತ್ತದೆ."[೪೦] ಭಗವದ್ಗೀತೆಗಿಂತ ಬೌದ್ಧಧರ್ಮದ ವಿಚಾರಗಳು ಹೇಗೆ ಭಿನ್ನ ಎಂಬುದನ್ನು ಅಂಬೇಡ್ಕರ್ ಸೂಕ್ಷ್ಮ ಮತ್ತು ಆಧಾರಸಹಿತವಾಗಿ ವಿವರಿಸುತ್ತಾರೆ. ಇಂಥ ಸೈದ್ಧಾಂತಿಕ ಆಲೋಚನೆಗಳಿಗೆ ಹಲವು ಪ್ರತಿರೋಧಗಳು ವ್ಯಕ್ತವಾದರೂ ಅಂಬೇಡ್ಕರ್ ತಾತ್ವಿಕವಾಗಿ ಮಂಡಿಸುವ ಪರಿ ವಿಶಿಷ್ಟವಾಗಿದೆ.

"ಬೌದ್ಧಧರ್ಮದ ಹಾಗೆ ಗೀತೆ ವೇದಗಳನ್ನು ಸಂಪೂರ್ಣವಾಗಿ ತಿರಸ್ಕರಿಸುವುದಿಲ್ಲ. ಆದರೆ ಅವುಗಳನ್ನು ಮೂಲೆಗಿಡುತ್ತದೆ. ಜಾತಿಯನ್ನು ಗೀತೆ ಬುಡಸಮೇತ ಕಿತ್ತು ಹಾಕುವುದಿಲ್ಲ."[೪೧] ಇಂತಹ ನ್ಯೂನತೆ ಮತ್ತು ತಟಸ್ಥನೀತಿಗಳು ಗೀತೆಯನ್ನು ಬೌದ್ಧಧರ್ಮದಿಂದ ದೂರ ಇರಿಸಿದೆ. ಅವೈಚಾರಿಕ ವಾದಗಳ ಮೂಲಕವೇ ಧರ್ಮ ಮತ್ತು ಜಾತಿಯ ಪ್ರಶ್ನೆಗಳನ್ನು ಪ್ರಚಲಿತದಲ್ಲಿಡುವ ಹುನ್ನಾರವನ್ನು ಗೀತೆಯ ವ್ಯಾಖ್ಯಾನಗಳು ಕಾಲ ಕಾಲಕ್ಕೆ ಮಾಡುತ್ತಾ ಬಂದಿವೆ.

ವೇದ ಮತ್ತು ಉಪನಿಷತ್ತುಗಳನ್ನು ಬೌದ್ಧ ಧರ್ಮದ ಹಾಗೇ ಭಗವದ್ಗೀತೆ ಸಂಪೂರ್ಣವಾಗಿ ತಿರಸ್ಕರಿಸಿಲ್ಲವಾದರೂ ಹಲವು ಬೌದ್ಧ ವಿಚಾರಗಳು ಭಗವದ್ಗೀತೆಯಲ್ಲಿ ತುಂಬಿ ಹೋಗಿವೆ. ಆದ್ದರಿಂದ ಭಗವದ್ಗೀತೆ ಬೌದ್ಧಧರ್ಮಕ್ಕೆ ಋಣಿಯಾಗಿದೆ ಅಥವಾ ಬೌದ್ಧಧರ್ಮದ ನೆರಳು ಭಗವದ್ಗೀತೆಯ ಮೇಲೆ ಹಾದುಹೋಗಿದೆ. 'ಸರ್ವಧರ್ಮಗಳನ್ನು ಪರಿತ್ಯಾಗ ಮಾಡಿ ನನ್ನೊಬ್ಬನಿಗೇ ಶರಣು ಹೋಗು' ಎಂಬ ಕೃಷ್ಣನ ಕರೆ 'ಧರ್ಮಕ್ಕೆ ಶರಣು ಹೋಗು'ವ ಬೌದ್ಧ ಚಿಂತನೆಯನ್ನೇ ಹೋಲುತ್ತದೆ. ಇಂಥ ಅನೇಕ ಸಾದೃಶ್ಯಗಳು ಬೌದ್ಧಧರ್ಮ ಮತ್ತು ಭಗವದ್ಗೀತೆಯ ನಡುವೆ ಗುರುತಿಸಲು ಸಾಧ್ಯ.

ಭಗವದ್ಗೀತೆಯ ರಚನೆಯ ಕಾಲಕ್ಕೆ ಸಂಬಂಧಪಟ್ಟಂತೆಯೇ ಅಂಬೇಡ್ಕರ್ ಅವರ ಆಲೋಚನೆಗಳು ಭಿನ್ನವಾಗಿಯೇ ಇವೆ. ಭಗವದ್ಗೀತೆ ಮತ್ತು ಮಹಾಭಾರತ ಏಕವ್ಯಕ್ತಿ ರಚನೆಗಳು; ಮೂಲ ಭಗವದ್ಗೀತೆ ಒಂದೇ ಇರುವುದು, ಭಗವದ್ಗೀತೆ ಮತ್ತು ಮಹಾಭಾರತಗಳು ಬೇರೆ ಬೇರೆ ಕಾಲದ ರಚನೆಗಳಲ್ಲ ಎಂಬ ತಿಲಕರ ವಾದವನ್ನು ಅಂಬೇಡ್ಕರ್ ನಿರಾಕರಿಸುತ್ತಾರೆ.

"ಭಗವದ್ಗೀತೆಯ ರಚನೆಯ ಕಾಲವನ್ನು ನಿಗದಿಪಡಿಸುವ ಪ್ರಯತ್ನ ಮೃಗಜಲವನ್ನು ಹುಡುಕಿದಂತೆ ವ್ಯರ್ಥ. ಇದಕ್ಕೆ ಕಾರಣ ಭಗವದ್ಗೀತೆ ಏಕಕವಿಯ ಅಖಂಡ ಕೃತಿಯಲ್ಲ. ಭಿನ್ನ ಭಿನ್ನ ಕಾಲದಲ್ಲಿ ಬೇರೆ ಬೇರೆ ಲೇಖಕರು ಬರೆದ ವಿಭಿನ್ನ ಭಾಗಗಳನ್ನು ಅದು ಒಳಗೊಂಡಿದೆ."[೪೨] ಭಗವದ್ಗೀತೆ ಅನೇಕ ಪ್ರಕ್ಷೇಪಗಳಿಂದ ಕೂಡಿದ ಕೃತಿ ಎಂಬುದು ಅಂಬೇಡ್ಕರ್ ಅವರ ದೃಢವಾದ ನಿಲುವು.ಸ ಆದ್ದರಿಂದ 'ಭಗವದ್ಗೀತೆಯ ರಚನೆಯ ಸರಿಯಾದ ಕಾಲವನ್ನು ಹುಡುಕುವುದು ಮೂರ್ಖನ ದಾರಿಯಲ್ಲಿ ಹೋದಂತೆ' ಎಂಬ ವಾದ ಅಂಬೇಡ್ಕರ್ ಅವರದ್ದು. ಹೀಗೆ ಕುಟಿಲಗಾರನೂ ಯುದ್ಧಪ್ರಿಯನೂ ಆದ ಕೃಷ್ಣ ಅರ್ಜುನನಿಂದ ಒತ್ತಾಯಪೂರ್ವಕವಾಗಿ ಯುದ್ಧ ಮಾಡಿಸಿದ. ಆದ್ದರಿಂದ ಇದೊಂದು 'ವೀರೋಚಿತ ಕಥೆ' ಎಂಬುದು ಅಂಬೇಡ್ಕರ್ ಅವರ ಗೀತೆಯ ಬಗೆಗಿನ ಒಟ್ಟಾರೆ ತಾತ್ವಿಕ ಚಿಂತನೆ.

ಇದರ ಹೊರತಾಗಿಯೂ "ಮೇಘನಾಥ ದೇಸಾಯಿ ಗೀತೆಯನ್ನು 'ವಿಷಕಾರಕ' ಎಂದು ಕರೆಯುತ್ತಾರೆ. ಅದು ಜಾತೀಯತೆಯ ಪ್ರತಿಪಾದಕ. ಸ್ತ್ರೀದ್ವೇಷಿಯಾದದ್ದು, ಜನಾಂಗ ಪಕ್ಷಪಾತಿ. ಆದಕಾರಣ ಆಧುನಿಕ ಕಾಲಕ್ಕದು ಅಪ್ರಸ್ತುತವಾದದ್ದು."[೪೩] ಆದ್ದರಿಂದ ಗೀತೆಯ ಬಗ್ಗೆ ಅನೇಕ ವಿರೋಧಾಭಾಸಗಳು ಕಂಡುಬರುತ್ತವೆ. ಈ ಬಗೆಯ ಟೀಕೆಗಳು ಭಾರತದಲ್ಲಷ್ಟೇ ಅಲ್ಲದೆ ಪಾಶ್ಚಾತ್ಯ ದೇಶಗಳಲ್ಲೂ ವ್ಯಕ್ತವಾಗಿವೆ. ಇಂಥ ಟೀಕೆಗಳಿಗೆ ಅರಬಿಂದೋ, ಗಾಂಧಿ ಇನ್ನೂ ಮುಂತಾದವರು ಉತ್ತರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಆದರೂ ಆ ಪ್ರಯತ್ನ ಅಷ್ಟಾಗಿ ಯಶಸ್ವಿಯಾಗದೆ ಕೆಲವನ್ನು ನಿರ್ಲಕ್ಷಿಸಿದ್ದಾರೆ. ಕೃಷ್ಣನ ಗೀತಾಬೋಧನೆ ಸ್ವತಃ ಶ್ರೋತೃವಾಗಿದ್ದ ಅರ್ಜುನನಿಗೇ ಗೊಂದಲವನ್ನು ಉಂಟುಮಾಡಿದೆ. ಆದ್ದರಿಂದ 'ಗೊಂದಲಗೊಳಿಸಬೇಡ, ನಿಶ್ಚಯವಾಗಿ ಹೇಳು(ಭಗವದ್ಗೀತೆ, ೩–೨) ಎನ್ನುತ್ತಾನೆ ಅರ್ಜುನ. ವಾಸ್ತವ ಸಂಗತಿ ಹೀಗಿರುವಾಗ ಗೀತೆಯ ವಿಚಾರಗಳು ಒಬ್ಬೊಬ್ಬರಿಗೂ ಒಂದೊಂದು ರೀತಿಯಲ್ಲಿ ಅರ್ಥವಾಗಿರಬಹುದು. ಕಾಲ ಮತ್ತು ಓದಿನ ನಿರಂತರ ಪ್ರಕ್ರಿಯೆಗೆ ಒಳಗಾದ ಪಠ್ಯಗಳು ಯಾವುವೂ ಇದಕ್ಕೆ ಹೊರತಲ್ಲ. ಬೈಬಲ್ ಸಹ ಅನೇಕ ಟೀಕೆ ಹಾಗೂ ವಿವಿಧ ಬಗೆಯ ವ್ಯಾಖ್ಯಾನಗಳಿಗೆ ಒಳಗಾಗಿದೆ ಎಂಬ ಮಾತು ಇಲ್ಲಿ ಗಮನೀಯ.

ಕೊನೆ ಟಿಪ್ಪಣಿಗಳು

೧. ಸ್ವಾಮಿ ವಿವೇಕಾನಂದ: ಸ್ವಾಮಿ ವಿವೇಕಾನಂದ ಕೃತಿ ಶ್ರೇಣಿ ಸಂಪುಟ–೫, ಪುಟ ೪೨೦.

೨. ಅರವಿಂದ ಮಾಲಗತ್ತಿ: ಭಗವದ್ಗೀತೆಗೆ ನಮಸ್ಕಾರ, ಪುಟ ೨೩.

೩. ಕುಲನಾಶದಿಂದ ಸನಾತನ ಕುಲಧರ್ಮಗಳು ನಾಶವಾಗುತ್ತವೆ. ಧರ್ಮ ನಾಶವಾದರೆ ಅಧರ್ಮವು ಸಕಲ ಕುಲಗಳನ್ನೂ ಮುಳುಗಿಸುತ್ತದೆ.

೪. ಬಾಲಗಂಗಾಧರ ತಿಲಕ್: ಗೀತಾರಹಸ್ಯ, ಪುಟ ೮೫.

೫. ಅಂಬೇಡ್ಕರ್ ಬಿ.ಆರ್.: ಪ್ರತಿಕ್ರಾಂತಿಯ ತಾತ್ವಿಕ ಸಮರ್ಥನೆ: ಕೃಷ್ಣ ಮತ್ತು ಅವನ ಗೀತೆ, ಅಂಬೇಡ್ಕರ್ ಸಂಪುಟ ೩, ಪುಟ ೩೮೪–೩೮೫.

೬. ಗಾಂಧಿ ಮೋ.ಕ: ಗೀತಾಮಾತೆ, ಪುಟ ೨೨೮.

೭. ಯ ಏನಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಮ್।
ಉಭೌ ತೌ ನ ವಿಜಾನೀತೋ ನಾಯಂ ಹಂತಿ ನ ಹನ್ಯತೇ ॥(೨–೧೯).

೮. ಗಾಂಧಿ ಮೋ.ಕ.: ಗೀತಾಮಾತೆ, ಪುಟ ೨೬೧.

೯. ಡೋಂಗ್ರೆ ಎಂ.ಸಿ.: ಭಗವದ್ಗೀತೆ ಒಂದು ವಿಮರ್ಶೆ, ಪುಟ ೪೦.

೧೦. ಅಂಬೇಡ್ಕರ್ ಬಿ.ಆರ್.: ಪ್ರತಿಕ್ರಾಂತಿಯ ತಾತ್ವಿಕ ಸಮರ್ಥನೆ: ಕೃಷ್ಣ ಮತ್ತು ಅವನ ಗೀತೆ, ಅಂಬೇಡ್ಕರ್ ಸಂಪುಟ ೩, ಪುಟ ೩೮೩.

೧೧. ಜಾಮದಾರ ಎಸ್.ಎಮ್.: ಭಗವದ್ಗೀತೆ ಕುರಿತ ಚರ್ಚೆ, ಪ್ರಜಾವಾಣಿ, ಡಿಸೆಂಬರ್ ೩೦, ೨೦೧೪.

೧೨. ಸುಹೃನ್ಮಿತ್ರಾರ್ಯುದಾಸೀನಮಧ್ಯಸ್ಥದ್ವೇಷ್ಯಬಂಧುಷು ।
ಸಾಧುಷ್ವಪಿ ಚ ಪಾಪೇಷು ಸಮಬುದ್ಧಿರ್ವಿಶಿಷ್ಯತೇ ॥ (೬–೯).

೧೩. ವಿದ್ಯಾವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ ।
ಶುನಿಚೈವ ಶ್ವಪಾಕೇ ಚ ಪಂಡಿತಾಸ್ಸಮದರ್ಶಿನಃ ॥ (೫–೧೮).

೧೪. ಬಾಲಗಂಗಾಧರ ತಿಲಕ್: ಗೀತಾರಹಸ್ಯ, ಪುಟ ೫೫೪.

೧೫. ಚಂದ್ರಶೇಖರ್ ಎಸ್.: ಸಾಹಿತ್ಯ ಮತ್ತು ಚರಿತ್ರೆ, ಪುಟ ೧೪.

೧೬. ಶೇಷ ನವರತ್ನ: ಮನುಸ್ಮೃತಿ, ಪುಟ ೨೮–೨೯.

೧೭. ಮೋಹನರಾಜ್ ವಿ.ಎಂ.: ರಥಿಕ–ಸಾರಥಿ ಸಂವಾದ, ಪುಟ ೪೦.

೧೮. ಸ್ವಾಮಿ ವಿವೇಕಾನಂದ: ಸ್ವಾಮಿ ವಿವೇಕಾನಂದ ಕೃತಿ ಶ್ರೇಣಿ ಸಂಪುಟ ೫, ಪುಟ ೪೨೦.

೧೯. ಸರ್ದೇಸಾಯಿ ಎಸ್.ಜಿ: ಭಾರತೀಯ ಇತಿಹಾಸದ ವೈಲಕ್ಷಣಗಳು, ಪುಟ ೮೦.

೨೦. ಕುವೆಂಪು: ಸಪ್ತಸೂತ್ರಗಳು

೨೧. ಸ್ವಾಮಿ ವಿವೇಕಾನಂದ: ಧರ್ಮ ಎಂದರೇನು? ಪುಟ ೯೮.

೨೨. ಅದೇ, ಪುಟ ೨೩.

೨೩. ಓಶೋ: ಅಧ್ಯಾತ್ಮದ ಮಧ್ಯೆ ಬಿಡುವು, ಪುಟ ೭೪.

೨೪. ಗಾಂಧಿ ಮೋ.ಕ.: ಗೀತಾಮಾತೆ, ಪುಟ ೨೨೫.

೨೫. ಓಶೋ: ಅಧ್ಯಾತ್ಮದ ಮಧ್ಯೆ ಬಿಡುವು, ಪುಟ ೭೪.

೨೬. ಸ್ವಾಮಿ ವಿವೇಕಾನಂದ: ಧರ್ಮ ಎಂದರೇನು? ಪುಟ ೨೩-೨೪.

೨೭. ಡೋಂಗ್ರೆ ಎಂ.ಸಿ.: ಭಗವದ್ಗೀತೆ: ಒಂದು ವಿಮರ್ಶೆ, ಪುಟ ೫೧.

೨೮. ಅದೇ, ಪುಟ ೫೧-೫೨.

೨೯. ಅದೇ, ಪುಟ ೫೦.

೩೦. ಕೊಸಾಂಬಿ ಡಿ.ಡಿ.: ಪುರಾಣ ಮತ್ತು ವಾಸ್ತವ, ಪುಟ ೫೦.

೩೧. ಸರ್ದೇಸಾಯಿ ಎಸ್.ಜಿ., ದಿಲೀಪ್ ಬೋಸ್: ಭಗವದ್ಗೀತೆ ಮತ್ತು ಮಾರ್ಕ್ಸ್‌ವಾದ, ಪುಟ ೮೪.

೩೨. ಕೊಸಾಂಬಿ ಡಿ.ಡಿ.: ಪುರಾಣ ಮತ್ತು ವಾಸ್ತವ, ಪುಟ ೪೬-೪೭.

೩೩. ನಾರ್ಲ ವಿ.ಆರ್.: ಗೀತೆ: ಒಳಗಿನ ಸತ್ಯ ಏನು?, ಪುಟ ೧೭೧-೧೭೨.

೩೪. ಫಣಿಕ್ಕರ್ ಕೆ.ಎನ್: ಭಾರತದ ರಾಷ್ಟ್ರೀಯತೆಯ ಪರಿಕಲ್ಪನೆ, ಪುಟ ೨೫.

೩೫. ಅದೇ,

೩೬. ಸರ್ದೇಸಾಯಿ ಎಸ್.ಜಿ.: ಭಾರತದ ಇತಿಹಾಸದ ವೈಲಕ್ಷಣ್ಯಗಳು, ಪುಟ ೮೪

೩೭. ಅಂಬೇಡ್ಕರ್ ಬಿ.ಆರ್.: ಪ್ರತಿಕ್ರಾಂತಿಯ ತಾತ್ವಿಕ ಸಮರ್ಥನೆ: ಕೃಷ್ಣ ಮತ್ತು ಅವನ ಗೀತೆ, ಅಂಬೇಡ್ಕರ್ ಸಂಪುಟ ೩, ಪುಟ ೩೮೧.

೩೮. ಅದೇ, ಪುಟ ೩೮೨.

೩೯. ಅದೇ, ಪುಟ ೩೮೪.

೪೦. ಅದೇ, ಪುಟ ೩೮೫.

೪೧. ಅದೇ, ಪುಟ ೩೮೮.

೪೨. ಅದೇ, ಪುಟ ೩೯೫.

೪೩. ನಾಡಕರ್ಣಿ ಎಂ.ವಿ.: ಭಗವದ್ಗೀತೆಯ ಟೀಕೆಗಳು-ಪ್ರತಿಕ್ರಿಯೆಗಳು, ಮತ್ತೊಮ್ಮೆ ಭಗವದ್ಗೀತೆ, ಪುಟ ೧೫೮.

❖❖❖

ಅಧ್ಯಾಯ: ಎಂಟು

ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು?

ಅಧ್ಯಯನದ ಫಲಿತಗಳು

ಅಧ್ಯಾಯ: ಎಂಟು

ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು?

೨೦ನೇ ಶತಮಾನದ ಸಾಹಿತ್ಯ-ಸಂಸ್ಕೃತಿ ಚರ್ಚೆಯಲ್ಲಿ ಧರ್ಮ ಮತ್ತು ಜಾತಿಯ ಪ್ರಶ್ನೆಗಳು ತುಂಬಾ ಮುಂಚೂಣಿಗೆ ಬಂದವು. ಈ ಕಾಲದ ಸಾಹಿತ್ಯವು ವಾಸ್ತವ ಮತ್ತು ಆದರ್ಶಗಳನ್ನು ಅನುಸಂಧಾನ ಮಾಡುತ್ತಲೇ ಮಾನವನ ಬದುಕಿನ ಅಸ್ತಿತ್ವದ ಪ್ರಶ್ನೆಗಳಿಗೆ ಮುಖಾಮುಖಿಯಾಯಿತು. ಆದ್ದರಿಂದಲೇ ದೇವರು, ಧರ್ಮ, ಚರಿತ್ರೆ ಮತ್ತು ಪುರಾಣಗಳು ಪುನರ್ ಮೌಲ್ಯೀಕರಣಕ್ಕೆ ಒಳಗಾದವು.

ಇಡೀ ಜಗತ್ತಿನಾದ್ಯಂತ ದೇಶ, ಭಾಷೆ, ಮತ-ಪಂಥ ಹಾಗೂ ಸಂಸ್ಕೃತಿಗಳ ನಡುವೆ ಸಂಘರ್ಷಗಳು ಏರ್ಪಟ್ಟಿವೆ. ದೇಶ ದೇಶಗಳ ನಡುವೆ ರಾಷ್ಟ್ರೀಯತೆ, ರಾಷ್ಟ್ರಪ್ರೇಮ, ಗಡಿ ಸಮಸ್ಯೆಗಳು ಹಿಂಸಾರೂಪ ತಾಳುತ್ತಿವೆ. ಎಲ್ಲಾ ರಾಷ್ಟ್ರಗಳೂ ಪೈಪೋಟಿಯ ಮೇಲೆ ಅಣ್ವಸ್ತ್ರದಂತಹ ಆಧುನಿಕ ಶಸ್ತ್ರಾಸ್ತ್ರಗಳನ್ನು ತಯಾರು ಮಾಡಿಕೊಂಡು ಯುದ್ಧಕ್ಕೆ ಅಣಿಯಾಗಿ ನಿಂತಿವೆ. ಭಯೋತ್ಪಾದನೆ, ಕೋಮುವಾದ ಮತ್ತು ಮತೀಯ ಸಂಘರ್ಷಗಳು ಮಾನವೀಯತೆಯನ್ನು ನಾಶಮಾಡುತ್ತಿವೆ. ಇಂಥ ಎಲ್ಲ ರೀತಿಯ ವಿಕೃತಿಗಳಿಗೆ ಪ್ರಭುತ್ವವು ಪುಷ್ಟಿನೀಡುತ್ತಿದೆ. ಮನುಷ್ಯ ಎಷ್ಟೇ ಆಧುನಿಕನಾದಂತೆಲ್ಲ ಮತಾವಲಂಬನೆಗೆ, ಮೌಢ್ಯಕ್ಕೆ ಒಳಗಾಗಿ ವಿವೇಕವನ್ನು ಕಳೆದು ಕೊಳ್ಳುತ್ತಿದ್ದಾನೆ. ಧರ್ಮ, ದೇವರು, ಮೂಢನಂಬಿಕೆ, ಆಚರಣೆ ಮತ್ತು ಆಹಾರದ ರಾಜಕಾರಣಗಳು ಮನುಷ್ಯರ ಬದುಕನ್ನು ನಿಯಂತ್ರಿಸುತ್ತಿವೆ. ಬದುಕಲ್ಲಿ ಅಶಾಂತಿ ಅಸಹನೆ ಸೃಷ್ಟಿಯಾಗುತ್ತಿವೆ. ಇಷ್ಟೆಲ್ಲ ಅಶಾಂತಿ, ಅಸಹನೆಗೆ ಮುಖ್ಯ ಕಾರಣ ಯಾವುದೇ ವಿಚಾರವನ್ನು ಮತಿಯ ಒರೆಗೆ ಹಚ್ಚಿ ವಿವೇಕದ ಬೆಳಕಲ್ಲಿ ನೋಡದಿರುವುದೇ ಬಹುದೊಡ್ಡ ಕೊರತೆಯಾಗಿದೆ.

ಮತೀಯವಾದಿ ಮನಸ್ಸುಗಳು ಊಹೆ ಮತ್ತು ವಾಸ್ತವಗಳ ನಡುವಿನ ತರತಮಗಳನ್ನು ಅರಿಯದೆ ಧಾರ್ಮಿಕ ಸಂಘರ್ಷಕ್ಕೆ ಎಡೆಮಾಡಿಕೊಡುತ್ತಿವೆ. ಬೌದ್ಧಿಕ ಚರ್ಚೆಗಳು ಆರೋಗ್ಯಕರ ಸಂವಾದದ ಮಾದರಿಗಳನ್ನು ಹುಟ್ಟುಹಾಕುವ ಬದಲು ಹಿಂಸಾರೂಪ ತಾಳುತ್ತಿವೆ. ಅಷ್ಟೇ ಅಲ್ಲ ಭಯ ಮತ್ತು ಆತಂಕಗಳನ್ನು ಸೃಷ್ಟಿಸುತ್ತಿವೆ. ಇದರಿಂದ ಮುಕ್ತ ಸಂವಾದ ಸಾಧ್ಯವಾಗದೆ ಮಾನವೀಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗುತ್ತಿದೆ. ಈ ಮೇಲಿನ ಎಲ್ಲಾ ವಿಚಾರಗಳು ಬರಹಗಾರರ ಬೌದ್ಧಿಕ ಸ್ವಾತಂತ್ರ್ಯವನ್ನು ನಿಯಂತ್ರಿಸುತ್ತಿವೆ.

ಯಾವ ಕೃತಿ ಮುಕ್ತ ಸಂವಾದಕ್ಕೆ ಅವಕಾಶ ಕಲ್ಪಿಸಿಕೊಡುವುದಿಲ್ಲವೋ ಅಂಥ ಕೃತಿ ಜಡಗೊಳ್ಳುತ್ತದೆ. ಯಾವುದೇ ಸಾಹಿತ್ಯ ಕೃತಿ ಹೊಸಕಾಲದ ಅಗತ್ಯಗಳಿಗೆ ತಕ್ಕಂತೆ ಹೊಸ ಹೊಸ ವಿಚಾರಗಳನ್ನು ಹೊಳೆಯಿಸುತ್ತಾ ಚಿಂತನ-ಮಂಥನಕ್ಕೆ ದಾರಿ ಮಾಡಿಕೊಡಬೇಕು. ಅಷ್ಟೇ ಅಲ್ಲ, ವಿಚಾರ ಕ್ರಾಂತಿಗೆ ಆಹ್ವಾನವನ್ನೀಯದ ಕೃತಿ ಅದು ಎಷ್ಟೇ ಶ್ರೇಷ್ಠವಾದರೂ ಅಪ್ರಯೋಜಕವಾಗುತ್ತದೆ. ಮುಕ್ತ ವಿಚಾರಗಳು ಮತ್ತು ಮಾನವ ಸ್ವಾತಂತ್ರ್ಯ ನಾಳಿನ ಭಾರತಕ್ಕೆ ತುಂಬಾ ಅವಶ್ಯಕವಾಗಿವೆ. ಅವು ಮಾನವನ ಕಲ್ಯಾಣಕ್ಕೆ ಇರುವ ಕೀಲಿಕೈಗಳು. ಈ ಹಿನ್ನೆಲೆಯಿಂದ ಗೀತೆಯನ್ನು ಇಂದು ವಿಶ್ಲೇಷಿಸಬೇಕಾಗಿದೆ. ಆ ಪ್ರಯತ್ನವಾಗಿ ಈ ಅಧ್ಯಯನ ಒಂದು ಹೆಜ್ಜೆಯನ್ನಿಟ್ಟಿದೆ.

ಭಾರತೀಯ ರಾಷ್ಟ್ರೀಯತೆ ಮತ್ತು ಚಳುವಳಿ ಸಂದರ್ಭವು ಸಂಕೀರ್ಣ ಆಲೋಚನೆಗಳು, ದ್ವಂದ್ವಗಳು, ಭರವಸೆಯನ್ನು ಒಳಗೊಂಡಿದುದಾಗಿತ್ತು. ರಾಷ್ಟ್ರೀಯ ಚಳುವಳಿಯ ನಾಯಕರ ಆಲೋಚನೆಗಳು ಹಾಗೆಯೇ ಆ ಕಾಲಾವಧಿಯ ಒತ್ತಡಗಳು, ಸಂದರ್ಭಗಳ ಅನುಸಾರವಾಗಿ ಆಲೋಚನೆಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಿದ್ದವು. ಭಾರತದ ಭವ್ಯ ಇತಿಹಾಸದೊಂದಿಗೆ ಹೊಸ ಆಕಾಂಕ್ಷೆಗಳು ಮತ್ತು ಭವಿತವ್ಯವನ್ನು ಹೊಸದಾಗಿ ವ್ಯಾಖ್ಯಾನಿಸಬೇಕಿತ್ತು. ಪೌರ್ವಾತ್ಯವಾದಿ ಮತ್ತು ಭಾರತಶಾಸ್ತ್ರಜ್ಞರಾಗಿದ್ದ ಸರ್ ವಿಲಿಯಂ ಜೋನ್ಸ್, ಚಾರ್ಲ್ಸ್ ವಿಲ್ಕಿನ್ಸ್, ಕೋಲ್‌ಬ್ರೂಕ್, ಎಚ್.ಎಚ್. ವಿಲ್ಸನ್, ಮ್ಯಾಕ್ಸ್‌ಮುಲ್ಲರ್ ಮತ್ತು ಇತರರು ಭಾರತದ ಧರ್ಮ, ಕಲೆ, ಸಾಹಿತ್ಯ, ತತ್ವಜ್ಞಾನ ಮುಂತಾದವುಗಳನ್ನು ಬೆಳಕಿಗೆ ತಂದರು.

ಬಂಕಿಮಚಂದ್ರ, ಬಾಲಗಂಗಾಧರ ತಿಲಕ್, ವಿವೇಕಾನಂದ, ಲಾಲಾ ಲಜಪತರಾಯ್, ಗಾಂಧಿ, ಅರಬಿಂದೋ, ವಿನೋಬಾ, ಅನಿಬೆಸೆಂಟ್ ಮುಂತಾದ ಅನೇಕ ಭಾರತೀಯ ಚಿಂತಕರು ಗೀತೆಯನ್ನು ವಸಾಹತು ಸಂದರ್ಭದಲ್ಲಿ ಮರುವ್ಯಾಖ್ಯಾನಿಸಿದರು. ಒಂದು ಕಡೆ ಕ್ರೈಸ್ತ ಮಿಶನರಿಗಳು ಹಿಂದೂ ಧರ್ಮವನ್ನು ಹೀಗಳೆದು ಕ್ರೈಸ್ತಧರ್ಮವನ್ನು ಕೊಂಡಾಡುತ್ತಾ 'ಧಾರ್ಮಿಕ ವಸಾಹತು' ನಿರ್ಮಿಸಲು ಪ್ರಯತ್ನಿಸುತ್ತಿದ್ದರು. ಮತ್ತೊಂದು ಕಡೆ ಬ್ರಿಟಿಷರು ರಾಜಕೀಯ ವಸಾಹತು ಮಾಡಿಕೊಂಡು ಭಾರತವನ್ನು ತಮ್ಮ ಸಂಕೋಲೆಗಳಿಂದ ಬಂಧಿಸಿದ್ದರು. ಬ್ರಿಟಿಷರ ಆಳ್ವಿಕೆಯು ಜನರಲ್ಲಿ ದೇಶದ ಮೇಲಿನ ಅಭಿಮಾನ ಕುಂದುವಂತೆ ಮಾಡಿತ್ತು. ಇಂತಹ ಸಂದರ್ಭದಲ್ಲಿ ನವ, ಆಧುನಿಕ ಮತ್ತು ನೈತಿಕ ಬುನಾದಿಯನ್ನು ಪರಂಪರೆಯ ಹಿನ್ನೆಲೆಯಿಂದ ಕಟ್ಟಿಕೊಳ್ಳಬೇಕಿತ್ತು. ರಾಷ್ಟ್ರೀಯತೆಯ ನಿರ್ಮಾಣಕ್ಕೆ 'ಭಾರತೀಯತೆ'ಯನ್ನು ಸೇರಿಸಬೇಕಿತ್ತು. ರಾಷ್ಟ್ರೀಯತಾವಾದಿಗಳು ಕ್ರೈಸ್ತ ಮಿಷನರಿಗಳ ಹಿಂದೂಧರ್ಮ ಕುರಿತ ಆಪಾದನೆಗಳಿಗೆ ಪ್ರತಿಕ್ರಿಯೆಯಾಗಿ ಗೀತೆಯನ್ನು ಮುಖಾಮುಖಿಯಾಗಿಸತೊಡಗಿದರು. ಪೌರ್ವಾತ್ಯವಾದಿ ವಿದ್ವಾಂಸರು ಗೀತೆಯನ್ನು ಪ್ರಧಾನ ಹಿಂದೂ ಪಠ್ಯವೆಂದು ಶೋಧಿಸಿದರು. ಭಾರತದ ರಾಷ್ಟ್ರೀಯವಾದಿಗಳು ಇದನ್ನು ಒಪ್ಪಿ, ತಮ್ಮೆಲ್ಲ ಭರವಸೆ, ನೀತಿಗಳಿಗೆ ಗೀತೆಯನ್ನು ಮುಖವಾಣಿಯಾಗಿ ಬಳಸತೊಡಗಿದರು. ಹಿಂದೂತತ್ವವನ್ನು ರಕ್ಷಿಸುವುದಕ್ಕೆ, ನೈತಿಕ ಚೌಕಟ್ಟನ್ನು ಕಟ್ಟಿಕೊಳ್ಳುವುದಕ್ಕೆ, ಸಾಮಾಜಿಕ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಮುಂತಾದ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ಗೀತೆಯನ್ನು ಮುಂದಿಟ್ಟುಕೊಳ್ಳತೊಡಗಿದರು. ಈ ಕಾರಣದಿಂದಾಗಿ

ಹಿಂದೂಧರ್ಮದ ಪ್ರತಿನಿಧಿಗ್ರಂಥವಾಗಿ ಭಾರತೀಯ ಚಿಂತಕರು ಗೀತೆಯನ್ನು ಮರುವ್ಯಾಖ್ಯಾನ ಮಾಡಿದರು.

ವಸಾಹತು ಸಂದರ್ಭದಲ್ಲಿನ ಗೀತೆಯ ಬಗೆಗಿನ ಅನುವಾದ, ವ್ಯಾಖ್ಯಾನಗಳು ಅವರವರ ವೈಯಕ್ತಿಕ ಪ್ರತಿಭೆ, ಸಾಮರ್ಥ್ಯವನ್ನು ತೋರುವುದಾದರೂ ರಾಷ್ಟ್ರನಿರ್ಮಾಣದ ಕುರಿತ ಆಗಿನ ಮನಸ್ಥಿತಿಗಳನ್ನು ಪ್ರತಿನಿಧಿಸುತ್ತವೆ. ಆಗಿನ ಹಲವು ಸಮಸ್ಯೆ, ಬಿಕ್ಕಟ್ಟುಗಳಿಗೆ ಪರಿಹಾರಗಳನ್ನು ಗೀತೆಯ ಪಠ್ಯದಲ್ಲಿ ಹುಡುಕುವುದರ ಮೂಲಕ ಪ್ರತಿಕ್ರಿಯಿಸಲಾಗುತ್ತಿತ್ತು. ತಿಲಕ್, ಗಾಂಧಿ, ಅರಬಿಂದೋ, ಲಾಲಾ ಲಜಪತರಾಯ್, ಅನಿಬೆಸೆಂಟ್ ಮುಂತಾದ ಸ್ವಾತಂತ್ರ್ಯ ಹೋರಾಟಗಾರರು ಮತ್ತು ರಾಜಕೀಯ ನಾಯಕರು ಗೀತೆಯ ಸಂದೇಶವನ್ನು ಧರ್ಮದ ಸಂದೇಶವನ್ನಾಗಿಯೂ ರೂಪಿಸಿದ್ದರಿಂದ ರಾಷ್ಟ್ರೀಯತಾ ಉದ್ದೀಪನೆಯಲ್ಲಿ ಇದು ಪರಿಣಾಮಕಾರಿಯಾಗಿತ್ತು. ಈ ಮರುವ್ಯಾಖ್ಯಾನಗಳು ಭಾರತೀಯರಲ್ಲಿ 'ರಾಷ್ಟ್ರೀಯತೆ'ಯ ಉದ್ದೀಪನೆಗೆ ಕಾರಣವಾಯಿತು. ಈ ಅಧ್ಯಯನದಲ್ಲಿ ಗೀತೆಯು ಹೀಗೆ ಮರುವ್ಯಾಖ್ಯಾನಗಳಿಗೆ ಒಳಗಾದ ಮುಖ್ಯ ಭಾರತೀಯ ಚಿಂತಕರ ಚಿಂತನೆಗಳನ್ನು ವಿವರಿಸಲಾಗಿದೆ. ಆ ಮೂಲಕ ವಸಾಹತು ಸಂದರ್ಭದ ಗೀತೆಯ ಅನುವಾದಕರ ಮತ್ತು ವ್ಯಾಖ್ಯಾನಕಾರರ ಆಲೋಚನಾ ಕ್ರಮವನ್ನು ತಿಳಿಯಲು ಪ್ರಯತ್ನಿಸಲಾಗಿದೆ.

ವಸಾಹತು ಸಂದರ್ಭದಲ್ಲಿ ರಚನೆಯಾದ ಗೀತೆಯ ಮುಖ್ಯವಾದ ಪಠ್ಯಗಳನ್ನು ಇಲ್ಲಿ ವಿವೇಚಿಸಲಾಗಿದೆ. ಕನ್ನಡದಲ್ಲಿ ಗೀತೆಯ ಹೆಚ್ಚು ಅಧ್ಯಯನಗಳು ನಡೆದಿಲ್ಲ. ಕೆಲವು ಮಾರ್ಕ್ಸ್‌ವಾದಿ ಚಿಂತಕರು ಗೀತೆಯನ್ನು ವಿಮರ್ಶಿಸಿರುವುದನ್ನು ಬಿಟ್ಟರೆ, ಕನ್ನಡದಲ್ಲಿ ವಿವಿಧ ಆಯಾಮಗಳಿಂದ ಗೀತೆಯನ್ನು ಕಂಡಿರುವುದು ಕಡಿಮೆ. ಆ ಕಾರಣಕ್ಕಾಗಿ ಪ್ರಮುಖ ಚಿಂತಕರ ಆಲೋಚನೆಗಳನ್ನು ತಾತ್ವಿಕವಾಗಿ ವಿಶ್ಲೇಷಿಸುವ ಪ್ರಯತ್ನ ಈ ಅಧ್ಯಯನದಲ್ಲಿ ಮಾಡಲಾಗಿದೆ.

ಕ್ರೈಸ್ತ ಮಿಶನರಿಗಳ ಬರಹಗಾರರು ಗೀತೆಯ ಸಂದೇಶಗಳನ್ನು 'ಅಪಪ್ರವಾದಿಯ ಬೋಧೆಗಳು' ಎಂದು ಘೋಷಿಸುತ್ತಿದ್ದಾಗ, ಬಂಕಿಮರು 'ಭಗವದ್ಗೀತೆ'ಯ ವ್ಯಾಖ್ಯಾನದ ಮೂಲಕ ಬೈಬಲ್‌ಗಿಂತ ಗೀತೆ ಹೇಗೂ ಕಡಿಮೆ ಮಟ್ಟದ್ದಲ್ಲ ಎಂದು ತೋರಿಸಲು ಪ್ರಯತ್ನಿಸಿದರು. ಇವರಿಗೆ ಮಹಾಭಾರತ ಮತ್ತು ಕುರುಕ್ಷೇತ್ರದ ಕೃಷ್ಣ ಆದರ್ಶನಾಗಿದ್ದ. ಗೀತೆಯಲ್ಲಿ ಕ್ರಿಯಾಶೀಲ ಜೀವನದ ಎಲ್ಲ ಮೌಲ್ಯಗಳೂ ಅಡಗಿದ್ದು, ಯುದ್ಧ, ಹೋರಾಟ, ನೈತಿಕತೆ, ಆಧ್ಯಾತ್ಮಿಕತೆಯಿದ್ದು ದೇಶಭಕ್ತಿಯಲ್ಲಿ ಗೀತೆ ಮುಖ್ಯವಾಗಬೇಕು ಎಂದು ಭಾವಿಸಿದ್ದರು.

ಮತ್ತೊಬ್ಬ ರಾಜಕೀಯ ಚಿಂತಕರಾದ ತಿಲಕರಿಗೆ ಗೀತೆಯ ಕರ್ಮಯೋಗವು ಅವರ ರಾಜಕೀಯ ಚಟುವಟಿಕೆಗಳಿಗೆ ಹೊಂದುವಂತಿತ್ತು. ಅವರಿಗೆ ಕ್ರೈಸ್ತಧರ್ಮ ಮತ್ತು ಬೈಬಲ್ ಹಾಗೂ ಇತರ ಪಾಶ್ಚಾತ್ಯ ಮೌಲ್ಯಗಳಿಗಿಂತ ಗೀತೆ ದೊಡ್ಡದಾಗಿ ಕಂಡಿತು. ಗೀತೆಯನ್ನು ಆಧ್ಯಾತ್ಮಿಕವಾಗಿ ಕಂಡ ವಿವೇಕಾನಂದರಿಗೆ ಕರ್ಮಯೋಗದ ಪರಮ ಪ್ರತಿಪಾದಕನಾಗಿ ಕೃಷ್ಣ ಕಂಡ. ಇವರು ಕೃಷ್ಣನನ್ನು ಚಾರಿತ್ರಿಕ ನೆಲೆಯಲ್ಲಿ ಕಾಣಲಿಲ್ಲ. ಗೀತೆಯ ಸಂದೇಶಗಳಿಂದ ನರ

ಅಥವಾ ದರಿದ್ರ ನಾರಾಯಣ ಕಲ್ಪನೆ ಮೂಲಕ ಸಾಮಾನ್ಯರನ್ನು ರಾಷ್ಟ್ರದ ಕೇಂದ್ರಕ್ಕೆ ತರಲು ಪ್ರಯತ್ನಿಸಿದರು.

ಅರಬಿಂದೋ ಅವರಿಗೆ ಗೀತೆಯು ಅದರ ಸಾಮಾಜಿಕ, ನೈತಿಕ ಸಂದೇಶಕ್ಕಿಂತಲೂ ಆಧ್ಯಾತ್ಮಿಕ ಪಠ್ಯದಂತೆ ಕಂಡಿತು. ಅರಬಿಂದೋ ಪ್ರಕಾರ ಪರಮ ಸತ್ಯ ಮತ್ತು ದೈವಿಕ ವಾಣಿಯ ಇಚ್ಛೆಗೆ ನಮ್ಮನ್ನು ಅರ್ಪಿಸಿಕೊಳ್ಳುವುದರಿಂದ ಯಾವುದೇ ಪಾಪ, ಹಿಂಸೆಯೂ ಕೂಡಾ ಕರ್ತೃಗಳನ್ನು ಬಾಧಿಸದು ಎಂದು ನಂಬಿದ್ದರು. ಗಾಂಧಿ ಅವರು ತಿಲಕ್, ಅರಬಿಂದೋ ರಂತಲ್ಲದೆ ಭಿನ್ನವಾಗಿ ಯೋಚಿಸಿದರು. ಗೀತೆಯನ್ನು ಅಹಿಂಸೆ, ಸ್ವದೇಶಿ, ಸ್ವಧರ್ಮ ಮತ್ತು ಸತ್ಯಾಗ್ರಹದ ಪ್ರತಿಪಾದನೆಯಂತೆ ಕಂಡರು. ಮಾನವ ಆತ್ಮದ ಅತ್ಯಂತ ದೊಡ್ಡ ಬಲವೆಂದರೆ ಅಹಿಂಸೆ ಮತ್ತು ಸತ್ಯಾಗ್ರಹ. ಸತ್ಯದ ಅರಿವೇ ದೇವರು ಎಂದು ತಿಳಿದಿದ್ದರು. ಈ ಎಲ್ಲಾ ಅಂಶಗಳನ್ನು ಈ ಅಧ್ಯಯನದಲ್ಲಿ ಗುರುತಿಸಲು ಪ್ರಯತ್ನಿಸಲಾಗಿದೆ.

ವಸಾಹತು ಸಂದರ್ಭದ ಗೀತಾವ್ಯಾಖ್ಯಾನಗಳಿಂದ ಕನ್ನಡದ ಸಾಹಿತ್ಯ ಗ್ರಹಿಸಿಕೊಂಡ ಅಭಿವ್ಯಕ್ತಿಯ ನೆಲೆಗಳನ್ನು ಕುವೆಂಪು, ಬೇಂದ್ರೆ ಅವರ ಕಾವ್ಯ ಮತ್ತು ಇತರ ಬರಹಗಳಿಂದ ಗುರುತಿಸಲಾಗಿದೆ. ಗೀತೆಯ ವಿಶ್ವಮಾನವ ತತ್ವವನ್ನು ಗ್ರಹಿಸಿರುವ ಕುವೆಂಪು ಅವರು ತಮ್ಮ ಬರಹಗಳಲ್ಲಿ ಅದನ್ನು ವ್ಯಕ್ತಪಡಿಸಿದ್ದಾರೆ. ಈ ಕಾಲದಲ್ಲಿ ಗೀತೆಯ ಅಗತ್ಯತೆಯನ್ನು ಅರಿಯುತ್ತಲೇ ಸರ್ವರಿಗೂ ಮಾನ್ಯವಾಗುವಂತೆ ಅರ್ಥೈಸಬೇಕೆಂಬ ಆಶಯವನ್ನು ಅವರ ಬರಹಗಳಲ್ಲಿ ಗುರುತಿಸಬಹುದಾಗಿದೆ. ಅವರು ಗೀತೆಯ ಕುಂದುಕೊರತೆಗಳನ್ನು ವಿಮರ್ಶಿಸುತ್ತಲೇ ಉದಾರವಾದಿ ನೆಲೆಯಲ್ಲಿಯೇ ಅದನ್ನು ಗ್ರಹಿಸಲು ಪ್ರಯತ್ನಿಸುತ್ತಾರೆ. ಪುರಾಣ ಮತ್ತು ಚರಿತ್ರೆಯನ್ನು ಮರುವ್ಯಾಖ್ಯಾನಕ್ಕೆ ಒಳಪಡಿಸುವ ಇವರ ಬರಹಗಳಂತೆಯೇ ಗೀತೆಯನ್ನೂ 'ಹೊಸಧ್ಯೇಯ ಮತ್ತು ಹೊಸ ಇಷ್ಟಗಳಿಗೆ' ಅನುಸಾರವಾಗಿ ಮರುವ್ಯಾಖ್ಯಾನಿಸಬೇಕೆಂಬ ಆಶಯವನ್ನು ಇವರು ಹೊಂದಿದ್ದಾರೆ. ಇದಕ್ಕೆ ಭಿನ್ನವಾದ ಆಲೋಚನಾ ನೆಲೆಯನ್ನು ಬೇಂದ್ರೆ ಅವರ ಚಿಂತನೆಯಲ್ಲಿ ಕಾಣಬಹುದಾಗಿದೆ. ಗೀತೆಯ ಅಂತಃಸತ್ವವನ್ನು 'ತನ್ನನ್ನು ತಾನು ತಿಳಿಯುವುದು' ಎಂಬ ಆಶಯದ ಹಿನ್ನೆಲೆಯಲ್ಲಿ ಗ್ರಹಿಸಿದ್ದಾರೆ. ಗೀತೆಯಿಂದ ಇವರು 'ಸ್ವ'ಎಚ್ಚರದ ಕಲ್ಪನೆಯನ್ನು ತಮ್ಮ ಬರಹಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಕುವೆಂಪು ಅವರು ಗೀತೆಯನ್ನು ಕರ್ಮ, ಕರ್ತವ್ಯದ ಭಾಗವಾಗಿ ತಮ್ಮ ಬರಹಗಳಲ್ಲಿ ಅನುಸಂಧಾನ ಮಾಡಿದರೆ, ಬೇಂದ್ರೆ 'ಸ್ವ–ಅರಿವ'ನ್ನು ತಿಳಿಯುವ ಅಧ್ಯಾತ್ಮದ ವಿಭಿನ್ನ ಬಗೆಗಳಲ್ಲಿ ಚಿಂತಿಸಿದ್ದಾರೆ. ಈ ಇಬ್ಬರೂ ಕವಿಗಳ ಗೀತೆಯ ಬಗೆಗಿನ ವಿಚಾರಧಾರೆಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಪರಿಶೀಲಿಸಲಾಗಿದೆ.

ವಸಾಹತು ಸಂದರ್ಭದ ಪಠ್ಯಗಳಲ್ಲಿ ಸೃಷ್ಟಿಯಾದ ಅನೇಕ ಸಂಕಥನಗಳಿಗೆ ಮುಖಾಮುಖಿ ಯಾಗುವ ಬಗೆಯನ್ನು ಎಡ್ವರ್ಡ್‌ಸೈದ್ ತನ್ನ 'Orientalism' ಕೃತಿಯ ಮೂಲಕ ಕಲಿಸಿದ್ದಾರೆ. ಹೀಗೆ ವಸಾಹತು ಸಂಕಥನಗಳಿಗೆ ಪ್ರತಿಕ್ರಿಯೆಯಾಗಿ ವಸಾಹತೋತ್ತರ ಸಂದರ್ಭದಲ್ಲಿ ಅವುಗಳನ್ನು

ಅರ್ಥೈಸಿಕೊಳ್ಳುವ ಮತ್ತು ಪ್ರಶ್ನಿಸುವ ಅನೇಕ ವಿಮರ್ಶೆಯ ಮಾನದಂಡಗಳನ್ನು ತಿಳಿದಿದ್ದೇವೆ. ಇಂತಹ ಆಧುನಿಕ ವಿಮರ್ಶಾ ಮಾನದಂಡಗಳು ಮತ್ತು ವಿಮರ್ಶಕರ ಚಿಂತನೆಗಳ ಹಿನ್ನೆಲೆಯಿಂದ ಗೀತೆಯನ್ನು ಇಂದು ವಿವಿಧ ಬಗೆಗಳಲ್ಲಿ ಅಧ್ಯಯನ ನಡೆಸಬೇಕಾಗಿದೆ. ದಲಿತ-ಬಂಡಾಯ, ಮಾರ್ಕ್ಸ್‌ವಾದಿ, ಸ್ತ್ರೀವಾದಿ ಚಿಂತನಾಪ್ರಸ್ಥಾನಗಳು ಹುಟ್ಟುಹಾಕಿದ ಚರ್ಚೆಗಳಿಂದ ಗೀತೆಯನ್ನು ಪ್ರಾತಿನಿಧಿಕವಾಗಿ ಜಾತಿ, ವರ್ಣ, ಸ್ತ್ರೀ ಮುಂತಾದ ತಾತ್ವಿಕ ಪ್ರಶ್ನೆಗಳ ಹಿನ್ನೆಲೆಯಿಂದ ಇಲ್ಲಿ ಚರ್ಚಿಸಲಾಗಿದೆ.

ಗೀತೆಯ ಬಗೆಗೆ ಆಧುನಿಕೋತ್ತರ ಸಂದರ್ಭದಲ್ಲಿ ಎದುರಾದ ಅನೇಕ ತಾತ್ವಿಕ ಪ್ರಶ್ನೆಗಳಿಂದ ಕನ್ನಡ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಪರಿಸರವನ್ನು ಶೋಧಿಸಿಕೊಳ್ಳುವ ಪ್ರಯತ್ನವನ್ನು ಇನ್ನಷ್ಟು ಮಾಡಲು ಅವಕಾಶವಿದೆ. ಗೀತೆಯನ್ನು ಮತೀಯ ಮತ್ತು ಪಾವಿತ್ರ್ಯತೆಯ ದೃಷ್ಟಿಕೋನದಿಂದ ಹೊರತಂದು 'ಸಾಂಸ್ಕೃತಿಕ ಪಠ್ಯ'ವೆಂದು ಭಾವಿಸಿ ವೈಚಾರಿಕ ಚಿಂತನೆಗೆ ಮತ್ತಷ್ಟು ಒಳಗು ಮಾಡಬೇಕಾಗಿದೆ. ಈ ಹಿನ್ನೆಲೆಯಿಂದ ಮುಂದಿನ ಅಧ್ಯಯನಗಳಾಗಬೇಕಾಗಿದೆ. ವ್ಯಾಪ್ತಿಯ ದೃಷ್ಟಿಯಿಂದ ಕನ್ನಡ ಸಾಹಿತ್ಯದ ಮೇಲೆ ಹೆಚ್ಚು ಗೀತೆಯ ಪ್ರಭಾವ, ಪ್ರೇರಣೆ ಮತ್ತು ಅನುಸಂಧಾನಗಳನ್ನು ಈ ಅಧ್ಯಯನದಲ್ಲಿ ಗುರುತಿಸಲು ಸಾಧ್ಯವಾಗಿಲ್ಲ. ಇದು ಈ ಅಧ್ಯಯನದ ಮಿತಿಯೂ ಆಗಿದೆ.

ಅಧ್ಯಯನದ ಫಲಿತಗಳು

ಪ್ರಸ್ತುತ ಅಧ್ಯಯನದಿಂದ ಕೆಲವು ಮುಖ್ಯ ಫಲಿತಗಳನ್ನು ಕಂಡುಕೊಳ್ಳಲಾಗಿದೆ. ಅವು ಈ ಕೆಳಗಿನಂತಿವೆ-

೧. ಭಗವದ್ಗೀತೆಯ ಕಾಲ ಹಾಗೂ ಹುಟ್ಟಿನ ಕುರಿತ ದೇಶೀ ಮತ್ತು ವಿದೇಶೀ ವಿದ್ವಾಂಸರ ಚಿಂತನೆಗಳನ್ನು ಸಂಗ್ರಹಿಸಿ ಚರ್ಚಿಸಲಾಗಿದೆ.

೨. ಇಲ್ಲಿಯವರೆಗಿನ ಭಗವದ್ಗೀತೆಯ ಹಲವು ವ್ಯಾಖ್ಯಾನ ಹಾಗೂ ಅನುವಾದ ಕೃತಿಗಳಲ್ಲಿ ಭಿನ್ನತೆಗಳಿರುವುದನ್ನು ಗುರುತಿಸಬಹುದಾಗಿದೆ. ಅಲ್ಲದೆ ಈ ಕೃತಿಗಳ ಲೇಖಕರ ಆಲೋಚನೆಗಳಲ್ಲಿ, ತತ್ವ-ಸಿದ್ಧಾಂತಗಳಲ್ಲಿ ಭಿನ್ನತೆಯಿರುವುದನ್ನು ಈ ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

೩. ವಿವಿಧ ಮತ-ಪಂಥಗಳಿಗೆ ಸೇರಿದ ವಿವಿಧ ವ್ಯಾಖ್ಯಾನಕಾರರು ಗೀತೆಯನ್ನು ತಮ್ಮತಮ್ಮ ಮತ-ಪಂಥಗಳಿಗೆ ಅನುಸಾರವಾಗಿ ವ್ಯಾಖ್ಯಾಸಿದ್ದಾರೆ ಎಂದು ತೋರಿಸಲಾಗಿದೆ. ಬಹುಮುಖ್ಯವಾಗಿ ಈ ಕೃತಿಗಳ ವ್ಯಾಖ್ಯಾನಗಳಲ್ಲಿ ಅರ್ಥ ವ್ಯತ್ಯಾಸಗಳಿರುವುದನ್ನು ಅನುವಾದಗಳ ಪರಿಶೀಲನೆ ಮಾಡಿ ಕಂಡುಕೊಳ್ಳಲಾಗಿದೆ.

೪. ಬಾಲಗಂಗಾಧರ ತಿಲಕ್ ಮತ್ತು ಗಾಂಧಿ ಅವರ ಗೀತಾ ವ್ಯಾಖ್ಯಾನ ಹಾಗೂ ಅನುವಾದ ಕೃತಿಗಳನ್ನು ವಿಶೇಷವಾಗಿ ಪರಿಶೀಲಿಸಲಾಗಿದೆ. ಈ ಪರಿಶೀಲನೆಯಿಂದ ಈ ಕೃತಿಗಳ

ಹಲವೆಡೆಗಳಲ್ಲಿ ಗೀತಾರಹಸ್ಯದ ವ್ಯಾಖ್ಯಾನ ದೀರ್ಘವೂ ಕ್ಲಿಷ್ಟವೂ ಆಗಿರುವುದನ್ನು ಹಾಗೂ ಅನಾಸಕ್ತಿಯೋಗದ ವ್ಯಾಖ್ಯಾನ ನೇರವೂ ಹಾಗೂ ಸರಳವೂ ಆಗಿರುವುದನ್ನು ಕಾಣಬಹುದಾಗಿದೆ. ಗೀತೆಯನ್ನು ಗಾಂಧಿ ಆಧ್ಯಾತ್ಮದ ಗ್ರಂಥವಾಗಿ ಪರಿಭಾವಿಸಿ ಜನರಲ್ಲಿ ರಾಷ್ಟ್ರೀಯತೆಯನ್ನು ಭಿತ್ತಲು ಪ್ರಯತ್ನಿಸಿದರೆ, ತಿಲಕ್ ಅವರು ಶುದ್ಧ ರಾಜಕೀಯ ಕೃತಿ ಮತ್ತು ಧಾರ್ಮಿಕ ಕೃತಿಯೆಂದು ಪರಿಭಾವಿಸಿ ಜನರು ಸ್ವಾತಂತ್ರ್ಯ ಮಹಾಸಂಗ್ರಾಮದಲ್ಲಿ ನೇರವಾಗಿ ಭಾಗವಹಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದನ್ನು ತಿಳಿಯಲಾಗಿದೆ.

೫. ಗೀತೆಯ 'ನಿಷ್ಕಾಮಕರ್ಮ' ಸಿದ್ಧಾಂತವನ್ನು ಭಾರತೀಯ ರಾಷ್ಟ್ರೀಯತೆಯ ಉದ್ದೀಪನೆಗೆ ಹಾಗೂ ಭಾರತೀಯರನ್ನು ಒಟ್ಟುಗೂಡಿಸುವ ಏಕತೆಯ ಕಾರ್ಯಕ್ಕೆ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಚಿಂತಕರಾದ ತಿಲಕ್, ಗಾಂಧಿ, ವಿನೋಬಾ, ಅರವಿಂದ ಹಾಗೂ ಇತರ ನಾಯಕರು ಶ್ರಮಿಸಿರುವುದನ್ನು ಕಂಡುಕೊಳ್ಳಲಾಗಿದೆ.

೬. ಗೀತೆಯನ್ನು ವ್ಯಾಖ್ಯಾನಿಸಿರುವ ಮತ–ಮಾನ್ಯಗಳು ಭಕ್ತಿಯ ಹಿನ್ನೆಲೆಯಲ್ಲಿ ಕೃಷ್ಣನನ್ನು ದೈವತ್ವಕ್ಕೆ ಏರಿಸುವ ಮೂಲಕ ಜನರನ್ನು ಧಾರ್ಮಿಕ ಆಚರಣೆಗೆ ಒಳಪಡಿಸುವ ಉದ್ದೇಶವನ್ನು ಹೊಂದಿವೆ ಎಂದು ಅನುವಾದ ಹಾಗೂ ವ್ಯಾಖ್ಯಾನಗಳ ಪರಿಶೀಲನೆಯಿಂದ ಸ್ಪಷ್ಟವಾಗಿ ಅರಿಯಲಾಗಿದೆ.

೭. ಕನ್ನಡದ ಮುಖ್ಯ ಬರಹಗಾರರಾದ ಕುವೆಂಪು, ಬೇಂದ್ರೆ ಅವರ ಕೃತಿಗಳಲ್ಲಿ ಗೀತೆಯ ಪ್ರಭಾವ, ಪ್ರೇರಣೆ, ಹಾಗೂ ಅನುಸಂಧಾನವನ್ನು ಗುರುತಿಸಲಾಗಿದೆ. ಅಲ್ಲದೆ ಗೀತೆಯ ಬಗೆಗೆ ಈ ಬರಹಗಾರರು ತಾಳಿದ್ದ ನಿಲುವುಗಳನ್ನು ವಿಶ್ಲೇಷಿಸಲಾಗಿದೆ.

೮. ಸಾಮಾಜಿಕ ನೆಲೆಯಿಂದ ಗೀತೆಯನ್ನು ಗ್ರಹಿಸಲು ಪ್ರಯತ್ನಿಸಲಾಗಿದೆ. ಗೀತೆಯಲ್ಲಿನ ದ್ವಂದ್ವ ಮತ್ತು ಅರ್ಥಸಂದಿಗ್ಧತೆಗಳ ಕಾರಣದಿಂದ ಎದುರಾಗಿರುವ ಜಾತಿ–ವರ್ಣ–ಸ್ತ್ರೀ ಮುಂತಾದ ಮುಖ್ಯವಾದ ಪ್ರಶ್ನೆಗಳಿಗೆ ಮುಖಾಮುಖಿಯಾಗುವ ಮೂಲಕ ಗೀತೆ ಸರ್ವಮಾನ್ಯ ಹಾಗೂ ಸಾರ್ವಕಾಲಿಕ ಪ್ರಮಾಣ ಗ್ರಂಥವಲ್ಲ ಎಂಬುದನ್ನು ಕಂಡುಕೊಳ್ಳಲಾಗಿದೆ.

❖❖❖

ಅನುಬಂಧಗಳು

೧. ಪರಾಮರ್ಶನ ಕೃತಿಗಳು ಮತ್ತು ಲೇಖನಗಳು
೨. ಭಗವದ್ಗೀತೆ ಕುರಿತ ಕನ್ನಡ ಕೃತಿಗಳು
೩. ಇಂಗ್ಲಿಷ್ ಭಾಷೆಯ ಭಗವದ್ಗೀತೆಗಳು
೪. ಭಗವದ್ಗೀತೆ ಕುರಿತ ಇಂಗ್ಲಿಷ್ ಕೃತಿಗಳು
೫. ಇಂಗ್ಲಿಷ್ ಭಾಷೆಯ ಸಂಶೋಧನಾ ಪ್ರಬಂಧಗಳು
೬. ಗೀತೆ ಕುರಿತು ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯಗಳು

೧. ಪರಾಮರ್ಶನ ಕೃತಿಗಳು ಮತ್ತು ಲೇಖನಗಳು

ಕನ್ನಡ ಕೃತಿಗಳು

ಅಂಬೇಡ್ಕರ್ ಬಿ.ಆರ್. : ಸಮಗ್ರ ಬರೆಹಗಳು ಮತ್ತು ಭಾಷಣಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, ೧೯೯೪, ೨೦೧೦

ಅರಬಿಂದೊ : ಪುನರುಜ್ಜೀವನದತ್ತ ಹಿಂದೂಧರ್ಮ, ಅನು: ಜಿ.ಬಿ. ಹರೀಶ್, ಶ್ರೀ ಅರಬಿಂದೊ ಕಪಾಲಿಶಾಸ್ತ್ರಿ ಇನ್ಸ್ಟಿಟ್ಯೂಟ್ ಆಫ್ ವೇದಿಕ್ ಕಲ್ಚರ್, ಬೆಂಗಳೂರು, ೨೦೦೨

ಅರವಿಂದ ಮಾಲಗತ್ತಿ : ಭಗವದ್ಗೀತೆಗೆ ನಮಸ್ಕಾರ, ವಿಸ್ಮಯ ಪ್ರಕಾಶನ, ಮೈಸೂರು, ೨೦೧೫

ಆಮೂರ ಜಿ.ಎಸ್. : ಭುವನದ ಭಾಗ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧

ಎದುರ್ಕುಳ ಕೆ. ಶಂಕರನಾರಾಯಣ ಭಟ್ : ಹಿಂದೂ ಧರ್ಮದ ಪರಿಚಯ, ಶ್ರೀರಾಮಕೃಷ್ಣ ಪ್ರಕಾಶನ, ಕೊಡಗು, ೧೯೮೨, ೨ನೇ ಮುದ್ರಣ

ಎಡತೊರೆ ಚಂದ್ರಶೇಖರಶಾಸ್ತ್ರಿ : ಭಾರತಾರ್ಯರ ಧಾರ್ಮಿಕ ಸಂಸ್ಕೃತಿ, ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಬೆಂಗಳೂರು, ೧೯೯೬

ಎಡ್ವರ್ಡ್ ನೊರೋನ : ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ, ಭಾಗ್ಯವಾನ್ ಪ್ರಕಾಶನ, ಮೈಸೂರು, ೧೯೯೬

ಕುವೆಂಪು : ಮಲೆಗಳಲ್ಲಿ ಮದುಮಗಳು, ಉದಯರವಿ ಪ್ರಕಾಶನ, ಮೈಸೂರು, ೧೯೭೪, ೨೦೧೫

ಕುವೆಂಪು : ಕಾನೂರು ಹೆಗ್ಗಡಿತಿ, ಉದಯರವಿ ಪ್ರಕಾಶನ, ಮೈಸೂರು, ಹತ್ತನೆಯ ಮುದ್ರಣ ೧೯೯೮

ಕೊಸಾಂಬಿ ಡಿ.ಡಿ. : ಪುರಾಣ ಮತ್ತು ವಾಸ್ತವ, ಟಿ.ಎಸ್. ವೇಣುಗೋಪಾಲ್ ಮತ್ತು ಶೈಲಜಾ(ಅನು), ಚಿಂತನ ಪುಸ್ತಕ, ಬೆಂಗಳೂರು, ೨೦೧೩

ಗಾಂಧೀಜಿ : ಅನಾಸಕ್ತಿಯೋಗ, ಸಿದ್ಧವನಹಳ್ಳಿ ಕೃಷ್ಣಶರ್ಮ(ಅನು), ಗಾಂಧಿ ಭವನ, ಬೆಂಗಳೂರು, ೧೯೧೯

ಗಾಂಧೀಜಿ : ಗೀತಾಮಾತೆ, ಸಿದ್ಧವನಹಳ್ಳಿ ಕೃಷ್ಣಶರ್ಮ(ಅನು), ಗಾಂಧಿ ಸ್ಮಾರಕ ನಿಧಿ, ಮೈಸೂರು, ೧೯೬೪

ಚಂದ್ರಶೇಖರ್ ಎಸ್. : ದಕ್ಷಿಣಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ, ನಾಗಣ್ಣ ಸಿ(ಅನು), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

ಜವಹರಲಾಲ್ ನೆಹರು : ಭಾರತ ದರ್ಶನ, ಕೃಷ್ಣಮೂರ್ತಿ ಎಸ್.ವಿ.(ಅನು), ಕಾವ್ಯಾಲಯ, ಮೈಸೂರು, ೧೯೪೭

ಡೋಂಗ್ರೆ ಎಂ.ಸಿ. : ಭಗವದ್ಗೀತೆ : ಒಂದು ವಿಮರ್ಶೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೬

ತಾರಾಚಂದ್ : ಭಾರತದಲ್ಲಿ ಸ್ವಾತಂತ್ರ್ಯ ಚಳುವಳಿ, ಸಂಪುಟ–೨, ಜಿ.ಎಸ್. ದೀಕ್ಷಿತ್(ಅನು), ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೬

ಥಾಂಸನ್ ಈ. ಡಬ್ಲ್ಯು : ಹಿಂದೂ ದೇಶದ ಚರಿತ್ರೆ, ದೊರೆಸ್ವಾಮಿ ಕೆ.ವಿ(ಅನು), ಕ್ರಿಶ್ಚಿಯನ್ ಲಿಟೆರೇಚರ್ ಸೊಸೈಟಿ ಫಾರ್ ಇಂಡಿಯಾ, ಮದರಾಸು, ೧೯೩೦

ಧರ್ಮಪಾಲ್ : ಚೆಲುವ ತರು, ಮಾಧವ ಪೆರಾಜೆ(ಅನು), ಪರಸ್ಪರ ಪ್ರಕಾಶನ, ಬೆಂಗಳೂರು, ೨೦೧೫

ನವರತ್ನ ಎಸ್. ರಾಜಾರಾಂ : ಇತಿಹಾಸ, ಸಂಸ್ಕೃತಿ ಮತ್ತು ರಾಷ್ಟ್ರೀಯತೆ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, ೨೦೦೦

ನಾರ್ಲ ವಿ.ಆರ್. : ಗೀತೆ: ಒಳಗಿನ ಸತ್ಯ ಏನು?, ಗಂಗಾಧರಮೂರ್ತಿ(ಅನು), ಲಡಾಯಿ ಪ್ರಕಾಶನ, ಗದಗ, ೨೦೧೬

ನಾರ್ಲ ವಿ.ಆರ್. : ಭಾರತೀಯ ಸಂಸ್ಕೃತಿಯ ಜಾತಿಲಕ್ಷಣ, ಗಂಗಾಧರಮೂರ್ತಿ (ಅನು), ಲಡಾಯಿ ಪ್ರಕಾಶನ, ಗದಗ, ೨೦೧೭

ಫಣಿಕ್ಕರ್ ಕೆ.ಎನ್. : ಭಾರತದ ರಾಷ್ಟ್ರೀಯತೆಯ ಪರಿಕಲ್ಪನೆ, ಪಾರ್ಥಸಾರಥಿ ಕೆ.ಎಸ್(ಅನು), ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೬

ಪರ್ವತೆ ಟಿ.ವಿ. : ಬಾಲಗಂಗಾಧರ ತಿಲಕ್, ಎಸ್. ಅನಂತನಾರಾಯಣ(ಅನು), ಕಾವ್ಯಾಲಯ, ಮೈಸೂರು, ೧೯೬೧.

ಪಾರ್ಥಸಾರಥಿ ಕೆ.ಎಸ್. : ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೨.

ಪಾಂಡುರಂಗ ವಾಮನ ಕಾಣೆ : ಧರ್ಮಶಾಸ್ತ್ರದ ಇತಿಹಾಸ, ಸಂ.೧, ಭಾಗ–೧, ಎಸ್.ಕೆ. ರಾಮಚಂದ್ರರಾವ್, ಕೆ.ಕೃಷ್ಣಮೂರ್ತಿ(ಅನು), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೦

ಪ್ರಧಾನ ಗುರುದತ್ತ(ಸಂ) : ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರ ಸಮಗ್ರ ಬರಹಗಳು ಮತ್ತು ಭಾಷಣಗಳು, ಸಂಪುಟ–೩, ೪, ೫, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು, ೨೦೧೦

ಪ್ರಹ್ಲಾದ್ ಡಿ.ವಿ.(ಸಂ) : ಮತ್ತೊಮ್ಮೆ ಭಗವದ್ಗೀತೆ: ಹಲವು ನೋಟಗಳು, ಸಂಚಯ, ಬೆಂಗಳೂರು, ೨೦೧೬

ಫಣಿಕ್ಕರ್ ಕೆ.ಎಂ. : ಭಾರತೀಯ ಇತಿಹಾಸ ಸಮೀಕ್ಷೆ, ನಾರಾಯಣಮೂರ್ತಿ ಜಿ.ವಿ,.(ಅನು), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೫

ಫಣಿಕ್ಕರ್ ಕೆ.ಎಂ. : ನವಭಾರತ ಬುನಾದಿ, ಜಯಪ್ಪಗೌಡ ಡಿ.ಎನ್(ಅನು), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೮೫

ಬಾಲಗಂಗಾಧರ ಟಿಳಕ : ಶ್ರೀಮದ್ಭಗವದ್ಗಿತಾರಹಸ್ಯ ಅಥವಾ ಕರ್ಮಯೋಗಶಾಸ್ತ್ರ, ವೆಂಕಟೇಶ ಭೀಮರಾವ ಆಲೂರು, ಕೆರೂರು ವಾಸುದೇವಾಚಾರ್ಯ (ಅನು), ಟಿಳಕ ಬಂಧುಗಳು, ಪುಣೆ, ೧೯೫೬,

ಬಾಲಸುಬ್ರಮಣ್ಯ ಅಯ್ಯರ್.ಕೆ. : ಹಿಂದೂ ಆದರ್ಶಗಳು, ಟಿ.ಎಸ್.ವೆಂಕಣ್ಣಯ್ಯ(ಅನು), ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು, ೨೦೧೦

ಬೇಂದ್ರೆ ದ.ರಾ. : ಮತಧರ್ಮ ಮತ್ತು ಆಧುನಿಕ ಮಾನವ, ಸಮಾಜ ಪುಸ್ತಕಾಲಯ, ಧಾರವಾಡ, ೧೯೭೯

ಭಗವತ್ ಶರಣ ಉಪಾಧ್ಯಾಯ : ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, ಅನುವಾದ :ಪ್ರಧಾನ ಗುರುದತ್ತ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೧೪.

ಭಂಡಾರಿ ಆರ್.ವಿ. : ವರ್ಣದಿಂದ ವರ್ಗದ ಕಡೆಗೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩

ಮಜುಂದಾರ್ ಆರ್.ಸಿ.(ಪ್ರ.ಸಂ) : ಬ್ರಿಟಿಷ್ ಪಾರಮ್ಯ ಮತ್ತು ಭಾರತೀಯ ಪುನರುಜ್ಜೀವನ, ಸಂ.೧-ಭಾಗ ೧, ೨, ಸಂ.೨-ಭಾಗ-೧, ೨, ನರಸಿಂಹ ಮೂರ್ತಿ ಎ.ವಿ(ಪ್ರ.ಸಂ), ಭಾರತೀಯ ವಿದ್ಯಾಭವನ, ಬೆಂಗಳೂರು, ೨೦೦೫

ಮಹಾತ್ಮಗಾಂಧಿ : ಅನಾಸಕ್ತಿಯೋಗ, ದ.ಕೃ. ಭಾರದ್ವಾಜ (ಅನು), ಶ್ರೀ ತುಳಸೀ ದಾಸ ರಾಮಾಯಣ ಕಾರ್ಯಾಲಯ, ಬೆಂಗಳೂರು, ೧೯೩೦

ಮೋಹನರಾಜ್ ವಿ.ಎಂ. : ರಥಿಕ-ಸಾರಥಿ ಸಂವಾದ, ಮಹಾಬಲೇಶ್ವರ ರಾವ್(ಅನು), ಚಿಂತನ ಪುಸ್ತಕ, ಬೆಂಗಳೂರು, ೨೦೧೨

ಮ್ಯಾಗೇರಿ ಐ.ಜೆ. : ವಸಾಹತುಶಾಹಿ ಅನುಭವ ಮತ್ತು ಕನ್ನಡ ಕಾದಂಬರಿಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮

ರಾಜಗೋಪಾಲಚಾರಿ ಸಿ. : ರಾಜಾಜಿ ಭಗವದ್ಗೀತೆ, ಕೆ.ಸಂಪದ್ಗಿರಿರಾವ್(ಅನು), ವ್ಯಾಸ ಪ್ರಕಾಶನ, ಬೆಂಗಳೂರು,

ರಾಜಾರಾಮ್ ಹೆಗಡೆ(ಸಂ) : ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೪

ರಾಮಕೃಷ್ಣ ಜಿ . : ದೇವಿಪ್ರಸಾದ್ ಮತ್ತು ಲೋಕಾಯತ ದರ್ಶನ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೪.

ರಾಮಚಂದ್ರನ್ ಸಿ.ಎನ್. : ಆಖ್ಯಾನ- ವ್ಯಾಖ್ಯಾನ, ಲೇಖನ- 'ಮುಕ್ತಪಥ್ಯ?' ಭಗವದ್ಗೀತೆ ಯನ್ನು ಕುರಿತು', ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೧೧

ವಾಸುದೇವಮೂರ್ತಿ ಟಿ.ಎನ್. : ಆಧ್ಯಾತ್ಮದ ಮಧ್ಯೆ ಬಿಡುವು, ಓಶೋರ ಸಾಮಾಜಿಕ- ರಾಜಕೀಯ ಚಿಂತನೆಗಳು, ಬೆಂಗಳೂರು

ವಿಪಿನ್‌ಚಂದ್ರ, ಅಮಲೇಶ ತ್ರಿಪಾಠಿ,
ಬರುನ್ ಡೇ : ಸ್ವಾತಂತ್ರ್ಯದ ಹೋರಾಟ, ಆರ್.ಎಲ್.ಅನಂತರಾಮಯ್ಯ (ಅನು), ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ೨೦೧೩

ವಿನೋಬಾ : ಗೀತಾಪ್ರವಚನ, ಸರ್ವಸೇವಾ ಸಂಘ ಪ್ರಕಾಶನ, ಬೆಂಗಳೂರು, ೧೯೫೭

ವಿಲ್ ಡ್ಯೂರಂಟ್ : ಮುತ್ತಜ್ಜನ ಭವ್ಯ ಭಾರತ, ಶಿವಣ್ಣ ದೊಡ್ಡ ಹನುಮಂತರೆಡ್ಡಿ (ಅನು), ಸ್ಟ್ಯಾಂಡ್ ಬುಕ್ ಸ್ಟಾಲ್, ಮುಂಬಯಿ- ಬೆಂಗಳೂರು, ೨೦೦೯

